**GNANADHARE ACADEMY**
#2 Sharada Arcade,Nagarbhavi Main Road Prashanth Nagar, Vijaynagar
North Bangalore-560079, Mob:9513804777/9513809777

GNANADHARE
EDUCATIONAL TRUST (R)

# “ಸ್ಪರ್ಧಾರ್ಥಿಗಳ ಭರವಸೆಯ ಬೆಳಕು”

## K A S MAINS

## ಪತ್ರಿಕೆ 2– ವಿಭಾಗ 1

## ಭಾರತ ಮತ್ತು ಕರ್ನಾಟಕ ಐತಿಹಾಸಿಕ ಸಾಂಸ್ಕೃತಿಕ ಪರಂಪರೆ

**“TO AQUIRE KNOWLEDGE, ONE MUST STUDY,BUT TO AQUIRE WISDOM,ONE MUST OBSERVE”.**

GNANADHARE IAS ACADEMY



ಜ್ಞಾನಧಾರೆ ಅಕಾಡೆಮಿ, #2, ಶಾರದ ಆರ್ಕೇಡ್, ನಾಗರಭಾವಿ ಮುಖ್ಯರಸ್ತೆ, ಪ್ರಶಾಂತ ನಗರ, ವಿಜಯ ನಗರ ಉತ್ತರ,
ಬೆಂಗಳೂರು – 560079, ಮೊ: 9513804777 / 9513809777

downloaded from: www.kpscvaani.com

## 1. ಪುರಾತತ್ವ ಆಧಾರಗಳು:

- ಶಾಸನಗಳು: ಶಾಸನಗಳ ಮಹತ್ವ: ಪ್ರಮುಖ ಶಾಸನಗಳು
- ನಾಣ್ಯಗಳು: ನಾಣ್ಯಗಳ ಮಹತ್ವ: ಪ್ರಮುಖ ನಾಣ್ಯಗಳು
- ಸ್ಮಾರಕಗಳು

## 2. ಸಾಹಿತ್ಯಿಕ ಆಧಾರಗಳು:

- ದೇಶೀಯ ಸಾಹಿತ್ಯ: ಸಂಸ್ಕೃತ, ಕನ್ನಡ, ತಮಿಳು ಮತ್ತು ತೆಲಗು ಭಾಷೆಗಳ ಪ್ರಮುಖ ಐತಿಹಾಸಿಕ ಗ್ರಂಥಗಳೂ
- ವಿದೇಶಿಯರ ಬರಹಗಳು
    - ಚೀನೀ ಯಾತ್ರಿಕರ ಬರಹಗಳು
    - ಅರಬ್ ವಿದ್ವಾಂಸರ ಬರಹಗಳು
    - ಯುರೋಪಿಯನ್ ಯಾತ್ರಿಕರ ಬರಹಗಳು.

## ಮೂಲಾಧಾರಗಳು :


ಇತಿಹಾಸದ ರಚನೆಗೆ ಮೂಲಾಧಾರಗಳು ಅತ್ಯವಶ್ಯವಾದವುಗಳು ಆಧಾರಗಳಿಲ್ಲದೆ ಇತಿಹಾಸವನ್ನು ಬರೆಯಲು ಸಾಧ್ಯವಿಲ್ಲ. ಇತಿಹಾಸದ ಅಧ್ಯಯನ ನಮಗೆ ಲಭ್ಯವಿರುವ ಆಧಾರಗಳಿಗೆ ಸೀಮಿತವಾಗಿರುತ್ತದೆ. ಆದ್ದರಿಂದಲೇ 'ಇತಿಹಾಸವು ಆಧಾರಗಳ ಕೃಪೆಯಲ್ಲಿದೆ' ಎಂದು ಹೇಳುತ್ತಾರೆ. ಹಾಗೆಯೇ ಕರ್ನಾಟಕ ಇತಿಹಾಸ ರಚನೆಗೆ ಸಹಾಯಕವಾಗುವ ಮೂಲಾಧಾರಗಳನ್ನು ಅವುಗಳ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

GNANADHAREIAS ACADEMY



downloaded from: www.kpscvaani.com

## ಮೂಲಾಧಾರಗಳು(Sources)




### ❖ಪುರಾತತ್ವ ಆಧಾರಗಳು :

### ➢ಶಾಸನಗಳು (Inscriptions):

ಶಾಸನಗಳು ಕಲ್ಲು ತಾಮ್ರ ಹಾಗೂ ಇತರ ಲೋಹಗಳ ಮೇಲೆ ಬರೆದ ಲಿಖಿತ ದಾಖಲೆಗಳಾಗಿವೆ. ಇಂಥ ಶಾಸನಗಳ ಅಧ್ಯಯನಕ್ಕೆ ಶಾಸನಶಾಸ್ತ್ರ (Science of Epigraphy) ಎಂದು ಹೇಳುತ್ತೇವೆ.

### ➢ ಶಾಸನಗಳ ಮಹತ್ವ :

- ಶಾಸನಗಳು ಕಲ್ಲು ಅಥವಾ ಲೋಹಗಳ ಮೇಲಿನ ದಾಖಲೆಯಾದ್ದರಿಂದ ಅದನ್ನು ತಿದ್ದಲು ಸಾಧ್ಯವಿಲ್ಲ. ಆದ್ದರಿಂದ ಇವು ಮೂಲ ಸ್ವರೂಪದಲ್ಲಿ ದೊರೆಯುತ್ತವೆ.
- ರಾಜವಂಶಗಳ ಅಥವಾ ಇತರ ಮಹತ್ವದ ಸಂಘ ಸಂಸ್ಥೆಗಳ ಸಾಧನೆಗಳ ವಿವರಗಳು ಶಾಸನಗಳಲ್ಲಿ ದೊರೆಯುತ್ತದೆ.
- ಆ ಕಾಲದ ಬರವಣಿಗೆಯಲ್ಲಿ ಶೈಲಿ ಮತ್ತು ಭಾಷೆಯ ಮಟ್ಟಗಳು ತಿಳಿಯುತ್ತದೆ.
- ಶಾಸನಗಳು ಕಾಲ ನಿರ್ಣಯಕ್ಕೆ ಸಹಾಯಕಾರಿ ಬಹುತೇಕ ಶಾನಗಳಲ್ಲಿ ಶಾಲಿವಾಹನ ಶಕೆ, ಕಲಿಯುಗ ವರ್ಷ, ಚಾಲುಕ್ಯ ವಿಕ್ರಮ ಶಕ ಮುಂತಾದವುಗಳ ಉಲ್ಲೇಖಗಳಿರುವದರಿಂದ ಘಟನೆ ನಡೆದ ವರ್ಷವನ್ನು ತಿಳಿಯಬಹುದಾಗಿದೆ.

GNANADHARE IAS ACADEMY



downloaded from: www.kpscvaani.com

- ಅಕ್ಷರಗಳ ರೂಪ ಶತಮಾನದಿಂದ ಶತಮಾನಕ್ಕೆ ಸ್ವಲ್ಪ ಮಟ್ಟಿಗೆ ಬದಲಾಗುತ್ತಿರುತ್ತದೆ. ಇದರಿಂದ ಅಕ್ಷರಗಳ ಸ್ವರೂಪದ ಮೇಲಿಂದ ಕಡಿಮೆಯೆಂದರೂ ಆ ಶಾಸನ ಯಾವ ಶತಮಾನಕ್ಕೆ ಸಂಬಂಧಿಸಿದ್ದು ಎಂಬುದು ತಿಳಿಯುತ್ತದೆ.
- ರಾಜ್ಯ-ರಾಜ್ಯಗಳ ಗಡಿ ನಿರ್ಣಯಗಳಿಗೆ ಶಾಸನಗಳು ಸಹಾಯ ಮಾಡಬಲ್ಲವು.
- ಇತರ ದಾಖಲೆಗಳಲ್ಲಿರುವ ನ್ಯೂನತೆಗಳನ್ನು ಕಂಡು ಹಿಡಿಯಬಹುದು.

ಹೀಗೆ ಶಾಸನಗಳು ಇತಿಹಾಸದ ಬರವಣಿಗೆಗೆ ತುಂಬಾ ಸಹಾಯಕಾರಿಯಾಗಿವೆ. ಕರ್ನಾಟಕದಲ್ಲಿ ಸಾವಿರಾರು ಶಿಲಾಶಾಸನಗಳು ಮತ್ತು ತಾಮ್ರ ಪತ್ರಗಳು ಸಿಕ್ಕಿವೆ. ಕರ್ನಾಟಕ ಇತಿಹಾಸ ರಚನೆಗೆ ಸಹಾಯವಾಗುವ ಪ್ರಮುಖ ಶಾಸನಗಳು ಮತ್ತು ಅವುಗಳ ಮಹತ್ವವನ್ನು ಇಲ್ಲಿ ನೋಡಬಹುದು.

# ಕರ್ನಾಟಕ ಇತಿಹಾಸ

| ರಾಜ ಸಂತತಿ | ರಾಜಧಾನಿ | ಸ್ಥಾಪಕರು |
|---|---|---|
| ಚೋಳರು | ತಂಜಾವೂರ್ | ವಿಜಯಾಲಯ |
| ವಂಗಿ ಚಾಲುಕ್ಯರು | ವೆಂಗಿ | ವಿಷ್ಣುವರ್ಧನ |
| ಬಾದಾಮಿ ಚಾಲುಕ್ಯರು | ವಾತಾಪಿ/ಬಾದಾಮಿ | 1ನೇ ಜಯಸಿಂಹ |
| ಕಲಚೂರಿಗಳು | ಫ್ರಪುರಿ | ಕೂಕಲ್ಲ |
| ಪ್ರತಿಹಾರ್ | ಉಜ್ಜೈನಿ ಕನೌಜ್ | ಹರಿಶ್ಚಂದ್ರ |
| ಪಾಲ | ಮಂಜರ್ | ಗೋಪಾಲ |
| ರಾಷ್ಟ್ರಕೂಟರು | ಮಾನ್ಯ ಖೇಟ | ದಂತಿದುರ್ಗ |
| ವಾಕಾಟಕರು | ನಂದಿವರ್ಧನ | ವಿಂದ್ಯ ಶಕ್ತಿ |
| ಪರಮಾರರು | ದಾರಾ/ಉಜ್ಜೈನಿ | ಉಪೇಂದ್ರ & ಕೃಷ್ಣರಾಜ್ |
| ಚಂದೇಲರು | ಖಜರಾಹೋ | ನನ್ನುಕ |
| ಗಹಡ್ವಾಲರು | ಕನೌಜ್ | ಚಂದ್ರದೇವ |
| ಸೊಲಂಕಿಯರು | ಅನ್ಹಿಲ್‌ವಾಡ | 1ನೇ ಮುರ್‌ರಾಬ್ |
| ಕಲ್ಯಾಣಿ ಚಾಲುಕ್ಯರು | ಕಲ್ಯಾಣಿ/ಮಾನ್ಯ ಖೇಟ | ವಿಜಯಾದಿತ್ಯ |
| ಚೌಹಾನ್ | ಅಜ್ಮೀರ್, ದೆಹಲಿ | ವಾಸುದೇವ |
| ಸೇನರು | ಲಕೌತಿ, ಕಾಶಿಪುರ | ಸಾಮಂತ್‌ಸೇನ |
| ಸಾಹಿ ಸಂತತಿ | ಉದ್‌ಮಂದ | ಕಲ್ಲರ್ |
| ಪಲ್ಲವ ಸಂತತಿ | ಕಂಚಿಪುರಂ | ಸಿಂಹ ವಿಷ್ಣು |



downloaded from: www.kpscvaani.com

## ಶಾತವಾಹನರು (ಕ್ರಿ. ಪೂ 235–225):
## (ರಾಜಧಾನಿ ಪೈಠಾಣ ಅಥವಾ ಪ್ರತಿಷ್ಠಾನ)

ಕನ್ಹೇರಿ, ಕಾರ್ಲೆ, ನಾಸಿಕ ಮುಂತಾದ ಗುಹೆಗಳಲ್ಲಿ ಶಾತವಾಹನರ ಶಾಸನಗಳಿವೆ. ಬ್ರಾಹ್ಮಿ ಲಿಪಿಯಲ್ಲಿ ಅವರ ಶಾಸನಗಳಿವೆ ನಾಸಿಕ ಶಾಸನವು ಗೌತಮಿಪುತ್ರ ಶಾತಕರ್ಣಿಯ ಸಾಧನೆಗಳನ್ನು, ವ್ಯಕ್ತಿತ್ವವನ್ನು ತಿಳಿಸುವ ಶಾಸನವಾಗಿದೆ.



- ಶಾತವಾಹನ ವಂಶವು ದಖನ್‌ನಲ್ಲಿ ಸ್ಥಾಪನೆಗೊಂಡ ಮೊದಲ ರಾಜವಂಶವಾಗಿದೆ.
- ಚಂದ್ರಗುಪ್ತಮೌರ್ಯನ ಕಾಲದಲ್ಲಿ ಗೋದಾವರಿ, ಕೃಷ್ಣಾ ನದಿಗಳ ಮಧ್ಯೆ ನೆಲೆಸಿದ್ದು, ಸಾಮಂತರಿಗೆ ಕಪ್ಪಕಾಣಿಕೆಯನ್ನು ಸಲ್ಲಿಸುತ್ತಾ ಕ್ರಿ.ಪೂ 220ರ ವೇಳೆಗೆ ಸಿಮುಖನು ಸ್ವತಂತ್ರನಾಗಿ ಶ್ರೀಕುಲಂನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು.
- "ರಾಜಧಾನಿ" ಪೈಠಾಣ ಪ್ರಸ್ತುತ ಮಹಾರಾಷ್ಟ್ರದ ಔರಂಗಾಬಾದ್ ಜಿಲ್ಲೆಯಲ್ಲಿದೆ. (ಹಿಂದೆ ಆಂಧ್ರಪ್ರದೇಶದ ಗೋಧಾವರಿ ನದಿ ತೀರದಲ್ಲಿತ್ತು).
- ಮೊಟ್ಟ ಮೊದಲ ದಕ್ಷಿಣ ಭಾರತದ ರಾಜವಂಶ ಹಾಗೂ ಕರ್ನಾಟಕವನ್ನು ಆಳಿದ ಮೊದಲ ಹಿರಿಯ ಐತಿಹಾಸಿಕ ರಾಜವಂಶವೇ ಶಾತವಾಹನ ಸಾಮ್ರಾಜ್ಯ. ಶಾತವಾಹನರನ್ನು ಏಕಬ್ರಾಹ್ಮಣರೆಂದು ಕರೆಯಲಾಗಿದೆ.
- "ಪೆರಿಪ್ಲೆಸ್ ಆಫ್ ದಿ ಎರೆತ್ರಿಯನ್ ಸಿ" – ಎಂಬ ಗ್ರೀಕ್ ಅನಾಮಧೇಯ ಗ್ರಂಥ ಶಾತವಾಹನರ ಕಾಲದ ಬಗ್ಗೆ ಉಪಯುಕ್ತ ಮಾಹಿತಿ ನೀಡುತ್ತದೆ.
- ಸ್ಥಾಪಕ – ಸಿಮುಖ (ರಾಜಧಾನಿ – ಪೈಠಾಣ) ಇವನು ಮೌರ್ಯ ದೊರೆ ಸುಶೀಮನನ್ನು ಕೊಂದು ಸ್ವತಂತ್ರ್ಯಗೊಂಡು ಕ್ರಿ.ಪೂ 235–212ರವರೆಗೆ ಅಂದರೆ 23 ವರ್ಷ ಆಳಿದನು. "ನಾನ್ ಘಾಟನ ಶಾಸನ" ಇವನನ್ನು "ರಾಜ ಸಿಮುಖ ಶಾತವಾಹನ" ಎಂದು ಕರೆಯುವರು.
- ಶಾತವಾಹನರ ಮೂಲ – ಎರಡು ಮೂಲಗಳಿವೆ.



downloaded from: www.kpscvaani.com

- ಮತ್ಸ್ಯಪುರಾಣದಂತೆ ಈ ವಂಶದ 30 ಅರಸರು ಒಟ್ಟು 460 ವರ್ಷಗಳ ಕಾಲ ಆಳಿದರು.
- ಶಾತವಾಹನರು ವೈದಿಕ ಮತಸ್ಥರಾಗಿದ್ದರು.

| ಮೂಲ | ಪ್ರತಿಪಾದಕರು | ಮೂಲನೆಲೆ | ಆಧಾರಗಳು |
|---|---|---|---|
| ಆಂಧ್ರಮೂಲ | ಪ್ರೋ. ರಾಪ್ಸನ್ ವಿ.ವಿ.ಸ್ಮಿತ್ ಆರ್.ಜಿ. ಭಂಡಾರಕರ್ | ನಾಸಿಕ್ | ನಾಣ್ಯಗಳ ಆಂಧ್ರರೆಂದು ಅಶೋಕನ ಶಾಸನ ಆಂಧ್ರಭೃತ್ಯೆ ಸ್ಕಂದ ಪುರಾಣ ಮಗಸ್ತಾನಿಸನ ಬರವಣಿಗೆ ಆಂಧ್ರ ಪ್ಲಿನಿಯವರು- ತೆಲುಗುನಾಡು |
| ಕನ್ನಡಮೂಲ | ಕೆ.ಪಿ. ಜಯಸ್ವಾಲ್ | ಶಾಂತಿನೀಹಾರ್ | ಶಾತವಾಹನರೆಂದು ರಾಜಶೇಖರನ ಕಾವ್ಯಮಿಮಾಂಸೆಯ ಕುಂತಳದ ರಾಜರನ್ನು ಶಾತವಾಹನರೆಂದು ತಿಳಿಸಿದ್ದಾನೆ |

- ಅಶೋಕನ 12ನೇ ಬಂಡೆ ಶಾಸನ ಶಾತವಾಹನರನ್ನು ಆಂಧ್ರಭೃತ್ಯರೆಂದು ತಿಳಿಸಿದೆ.
- ಪ್ರಮುಖ ಅರಸ – ಗೌತಮಿ ಪುತ್ರ ಶಾತಕರಣಿ (ಅಶೋಕನ 13ನೇ ಬಂಡೆ ಶಾಸನ).

## ಸಿಮುಖ (ಕ್ರಿ.ಪೂ 30ರಿಂದ ಆರಂಭ) :-

- ಸಿಮುಖನನ್ನು ಆಂಧ್ರಜಾತೀಯನೆಂದೂ ಅವನ ವಂಶವನ್ನು ಆಂಧ್ರಭೃತ್ಯರೆಂದೂ ಕರೆಯಲಾಗಿದ್ದು, ಇವುಗಳ ಆಧಾರದ ಮೇಲೆ ಕಾಣ್ವರ ಆಂಧ್ರ ಮೂಲದ ಸೇವಕರು ಎಂದು ಶಾತವಾಹನರ ಮೂಲದ ಕುರಿತು ಅಭಿಪ್ರಾಯ ನೀಡಲಾಗಿದೆ.
- ಧಾರವಾಡ, ಬಳ್ಳಾರಿ ಜಿಲ್ಲಾ ಪ್ರದೇಶವನ್ನು ಶಾತವಾಹನೀಹಾರ ಎಂದು ಕರೆದಿರುವುದರಿಂದ ಅದೇ ಅವರ ಮೂಲಸ್ಥಾನವೆಂದೂ ಅವರು ಮೂಲತಃ ಕರ್ನಾಟಕದವರೆಂದೂ ಡಾ// ವಿ.ಎಸ್. ಸುಖ್ತನಕರಂಥ ವಿದ್ವಾಂಸರು ಹೇಳಿದ್ದಾರೆ.
- ಯಜ್ಞ ಶ್ರೀ ಶಾತಕರ್ಣಿಯು ಈ ವಂಶದ ಕೊನೆಯ ಅರಸ. ಅವನ ಕಾಲದಲ್ಲಿ ಶಕಕ್ಷತ್ರಪರವು ನಿರಂತರ ದಾಳಿಯಿಂದಾಗಿ ಸಾಮ್ರಾಜ್ಯವು ಪತನವಾಯಿತು.



downloaded from: www.kpscvaani.com

- ಮೊದಲ ರಾಜ ಸಿಮುಖನ ನಾಣ್ಯಗಳು ಇತ್ತೀಚಿಗೆ ಕರೀಂನಗರ ಜಿಲ್ಲೆಯಲ್ಲಿ ದೊರೆತಿದ್ದು ಆಂಧ್ರದಿಂದ ಅವರ ಆಳ್ವಿಕೆ ಆರಂಭವಾಗಿರಬೇಕು.
- ನಾನಾಘಾಟ್ ಶಾಸನದಲ್ಲಿ ಅರಸನ ರಾಜಧಾನಿ ಪ್ರತಿಷ್ಠಾನವಾಗಿತ್ತು (ಈಗಿನ ಮಹಾರಾಷ್ಟ್ರದ ಪೈಠಣ).
- ಗೌತಮೀಪುತ್ರನ ನಾಸಿಕ ಶಾಸನದಲ್ಲಿ ಸಿಮುಖನನ್ನು ಏಕಬ್ರಾಹ್ಮಣ ಎಂದು ಕರೆದಿದ್ದು ಕ್ಷತ್ರಿಯರ ದರ್ಪ ಮುರಿದವನು ಎಂದೂ ಕರೆದಿದೆ.
- ಸಿಮುಖನ ನಂತರ ಅವನ ಸೋದರ ಕೃಷ್ಣ(ಕಣ್ವ)ನೂ ಅನಂತರ ಸಿಮುಖನ ಮಗ ಶಾತಕರ್ಣಿಯೂ ಆಳಿದರು.

## ಕನ್ಹ ಅಥವಾ ಕೃಷ್ಣ :–

- ಕನ್ಹ ಅಥವಾ ಕೃಷ್ಣ ಸಿಮುಖನ ತಮ್ಮ & ಅಶೋಕನ ಸಮಕಾಲೀನ.
- ಬೌದ್ಧ ಧರ್ಮದಲ್ಲಿ ಆಸಕ್ತಿ ಹೊಂದಿದ್ದ ಈತ "ನಾಸಿಕ"ದಲ್ಲಿ ಒಂದು "ಬೌದ್ದ ದೇವಾಲಯ" ನಿರ್ಮಿಸಿರುವನು.

## 1ನೇ ಶಾತಕರ್ಣಿ (ಕ್ರಿ.ಪೂ 184–123) :–

- 1ನೇ ಶಾತಕರ್ಣಿ ಸಾಮ್ರಾಜ್ಯವು ವಿಂಧ್ಯಾ ಪರ್ವದಿಂದ ಕೊಂಕಣದವರೆಗೆ ವಿಸ್ತರಿಸಿತ್ತು
- ಬಿರುದು : ದಕ್ಷಿಣ ಪಥ ಸಾರ್ವಭೌಮ & ಅಪ್ರತಿರ್ಹ
- ಈತನ ಪತ್ನಿ ನಾಗನಿಕ ಅಥವಾ ನಾಯನಿಕ ನಾನ್‌ಘಾಟ್‌ನಲ್ಲಿ ಗುಹಾಂತರ ದೇವಾಲಯದಲ್ಲಿ ಶಾಸನವನ್ನು ಬರೆಸಿದ್ದಾಳೆ.
-

## ಹಾಲ (ಕ್ರಿ.ಶ 20–24) :–

- ಹಾಲ ಶಾತವಾಹನರ 17ನೇ ದೊರೆ. ಘನ ವಿದ್ವಾಂಸನಾದ ಈತ ಪ್ರಾಕೃತದಲ್ಲಿ ಒಂದು ಶೃಂಗಾರ ಕಾವ್ಯವಾದ "ಗಾಥಾಸಪ್ತಶತಿ" (7 ಶತಕಗಳು) ಎಂಬ ಕಾವ್ಯವನ್ನು ಬರೆದಿರುವನು.

## ಪುಲಮಾವಿ :–

- ಇವನು ನಾಸಿಕದಲ್ಲಿ ಒಂದು ಗುಹಾಲಯ ನಿರ್ಮಿಸಿದನು.



downloaded from: www.kpscvaani.com

## ಗೌತಮಿ ಪುತ್ರ ಶಾತಕರಣಿ :-

- ಶಾತವಾಹನರಲ್ಲೇ ಅತ್ಯಂತ ಪ್ರಸಿದ್ಧ ದೊರೆ. ಇವನನ್ನು ಕುರಿತ ಶಾಸನಗಳು "ನಾಸಿಕ್" & "ಕಾರ್ಲೆ"ದಲ್ಲಿ ದೊರೆತಿದೆ.
- ಇವನ ತಾಯಿ "ಗೌತಮಿ ಬಾಲಶ್ರೀ" ಕೆತ್ತಿಸಿದ ಗುಹಾಂತರ ನಾಸಿಕ ಶಾಸನವು ಇವನ ದಿಗ್ವಿಜಯಗಳನ್ನು ತಿಳಿಸುತ್ತದೆ.
- ಅದರಲ್ಲಿ ಗೌತಮಿಪುತ್ರ ಸಾಮ್ರಾಜ್ಯಕ್ಕೆ ಕಂಟಕರಾಗಿದ್ದ ಶಕ, ಯವನ & ಪಹಲವರನ್ನು ಯಮಪುರಿಗೆ ಕಳುಹಿಸಿದನೆಂದು ಉಲ್ಲೇಖಿಸಲಾಗಿದೆ.
- ಇವನಿಂದ ಶಾಲಿವಾಹನ ಶಕೆ ಆರಂಭವಾಯಿತು ಎಂದು ನಂಬಲಾಗಿದೆ.
- ಕೊಂಕಣ, ಬೀರಾರ್, ಸೌರಾಷ್ಟ್ರ, ಮಾಳವಗಳಲ್ಲದೆ ಅನೇಕ ಹೊಸ ಪ್ರದೇಶಗಳನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು.

## ಬಿರುದುಗಳು :-

- "ತ್ರೈ ಸಮುದ್ರ ಪೀಯತೋವಾಹನ" ಅಂದರೆ ಮೂರು ಸಮುದ್ರಗಳ ನೀರು ಕುಡಿದ ಕುದುರೆಗಳನ್ನು ವಾಹನವಾಗಿ ಹೊಂದಿರುವ ಎಂದು ಅಥವಾ ಇವನ ರಾಜ್ಯ ಉತ್ತರದಲ್ಲಿ ವಿಂದ್ಯಾ ಪರ್ವತದವರೆಗೆ ಇನ್ನುಳಿದ 3 ಕಡೆ ಸಮುದ್ರಗಳಿಂದ ಆವೃತ್ತವಾಗಿತ್ತು ಎಂದು ತಿಳಿಸುತ್ತದೆ.
- ಅಲ್ಲದೇ ಇವನನ್ನು "ಶಾತವಾಹನ ಕುಲಶಃ ಪ್ರತಿಷ್ಠಾಪನಾಕರ", "ದಕ್ಷಿಣ ಪಥ ಸಾರ್ವಭೌಮ" & "ಚಾರಿತ್ರಿಕ ಪುರುಷ" ಎಂದೂ ಕರೆಯಲಾಗಿದೆ.

## ಆಡಳಿತ :-

- ಮೌರ್ಯರ ಆಡಳಿತ ಪದ್ಧತಿಯನ್ನು ಅನುಸರಿಸಿದ್ದರು.
- ಅರಸನೇ ರಾಜ್ಯದ ಮುಖ್ಯಸ್ಥನಾಗಿದ್ದು ಇವನನ್ನು ಕುಮಾರನ್, ರಾಜನ್, ಸ್ವಾಮಿನ್ & ರಾಜರಾಣಿ ಎಂದೂ ನಾನಾ ಹೆಸರಿನಿಂದ ಕರೆಯಲಾಗಿತ್ತು.
- ಆಹಾರ-ಜನಪದ (ಡಿವಿಜನ್) – ವಿಷಯ (ಜಿಲ್ಲೆ) – ನಿಗಮ/ಸೀಮೆ(ತಾಲ್ಲೂಕು) – ಗ್ರಾಮ ಎಂಬುದಾಗಿ ರಾಜ್ಯವನ್ನು ಆಡಳಿತದ ಅನುಕೂಲಕ್ಕಾಗಿ ಅನೇಕ ಭಾಗಗಳಾಗಿ ವಿಂಗಡಿಸಲಾಗಿತ್ತು.



downloaded from: www.kpscvaani.com

- ರಾಜನ ಆಡಳಿತದಲ್ಲಿ ನೆರವಾಗಲು ಒಂದು ಮಂತ್ರಿಮಂಡಲವಿತ್ತು ಅದರಲ್ಲಿ
  - ಅಮಾತ್ಯೆ – ಪ್ರಾಂತ್ಯಗಳ ರಾಜಪಾಲ ಹಾಗೂ ಆಹಾರಗಳ ಪ್ರಾಂತ್ಯಾಧಿಕಾರಿಯಾಗಿದ್ದನು
  - ರಾಜಾಮಾತ್ಯ – ರಾಜನ ಆಪ್ತ ಸಲಹೆಗಾರ
  - ಮಹಾಮಾತ್ರ – ಮುಖ್ಯ ಕಾರ್ಯಗಳ ನಿರ್ವಾಹಕ
  - ಬಂಡಾರಿಕ – ಸರಕು ಸರಂಜಾಮುಗಳ ಮೇಲ್ವಿಚಾರಣೆ
  - ಹೆರಣಿಕ – ಕೋಶಾಧ್ಯಕ್ಷ
  - ಮಹಾಸೇನಾಧಿಪತಿ – ಸೈನ್ಯದ ಮೇಲ್ವಿಚಾರಕ
  - ಮಹಾ ಸಂಧಿ ವಿಗ್ರಹಿ – ವಿದೇಶಾಂಗ ವ್ಯವಹಾರ (ರಾಯಭಾರಿ)
  - ಲೇಖಕ – ರಾಜನ ಆಜ್ಞೆಗಳನ್ನು ಬರೆಯುವವ
- ಶಾತವಾಹನರು ಭಾರತದ ಇತಿಹಾಸದಲ್ಲಿಯೇ ಪ್ರಥಮ ಬಾರಿಗೆ ಬ್ರಾಹ್ಮಣರಿಗೆ ಭೂದತ್ತಿಗಳನ್ನು ಕೊಡಲು ಪ್ರಾರಂಭಿಸಿದನು.
- ಶಾತವಾಹನರ ಕಾಲದಲ್ಲಿ ಸಾಮಂತರನ್ನು "ಮಹಾಭೋಜರು" & "ಮಹಾರಥಿ"ಗಳೆಂದು ಕರೆಯಲಾಗುತ್ತಿತ್ತು.

## ಸಾಮಾಜಿಕ ಜೀವನ :–

- ವರ್ಣಾಶ್ರಮ ಪದ್ದತಿ ಸಮಾಜದ ಬುನಾದಿಯಾಗಿತ್ತು.
- ಅವಿಭಕ್ತ ಕುಟುಂಬ & ಅಂತರ್‌ಜಾತಿ ವಿವಾಹ ರೂಢಿಯಲ್ಲಿತ್ತು.
- ರಾಜವಂಶ ಮಾತೃ ಪ್ರಧಾನವಾಗಿತ್ತು ಹಾಗೂ ಸ್ತ್ರೀಯರಿಗೆ ಉನ್ನತ ಸ್ಥಾನವಿತ್ತು.
- ಶಾತವಾಹನರ ಸಮಾಜವು ಮಹಾರತಿ, ಮಹಾಭೋಜಕ, ಸೇನಾಪತಿ, ಸಾಮಾನ್ಯವರ್ಗ ಎಂಬುದಾಗಿ ವಿಂಗಡಿಸಿತ್ತು.
- ಶಾತವಾಹನರು ವೈದಿಕ ಮತಸ್ಥರಾಗಿದ್ದು ಅಶ್ವಮೇಧವೇ ಮುಂತಾದ ಯಜ್ಞಯಾಗಾದಿಗಳನ್ನು ಮಾಡುತ್ತಿದ್ದರು.
- ಗೊಲ್ಲಿಕ (ಗೋವಳರು), ಕೋಲಿಕ (ನೇಕಾರರು), ಹಲಿಕ (ಉಳುವವರು), ಮಾಲಕಾರ (ಹೂವಾಡಿಗರು), ಸ್ವರ್ಣಕಾರ (ಅಕ್ಕಸಾಲಿಗರು), ಚರ್ಮಕಾರ (ಮೋಚಿಗಳು) ಮುಂತಾದ ವೃತ್ತಿಜಾತಿಗಳು ಶಾಸನಗಳಲ್ಲಿ ಉಲ್ಲೇಖವಾಗಿವೆ.



downloaded from: www.kpscvaani.com

- ಜನರು ಮಿತವಾಗಿ ಬಟ್ಟೆಯನ್ನು ತೊಡುತ್ತಿದ್ದು, ವಿಪುಲವಾಗಿ ಆಭರಣಗಳಿಂದ ಅಲಂಕೃತರಾಗಿದ್ದರು. ಕಿವಿಯುಂಗರ, ಬಳೆ, ಕೈಯುಂಗುರ, ಕಂಠಿಗಳು, ಒಡ್ಯಾಣ, ಕಡಗಗಳು, ಸ್ತ್ರೀಯರ ತೊಡವುಗಳು, ಗಂಡಸರೂ ಕಿವಿಯುಂಗುರ ಕಟ್ಟುತ್ತಿದ್ದರು. ಹೂಜಿ, ತಟ್ಟೆ, ಕುರ್ಚಿ, ಮೇಜು, ಮಂಚ, ಮುಕ್ಕಾಲಪೀಠ ಮುಂತಾದ ಗೃಹಪಯೋಗಿ ವಸ್ತುಗಳು ಶಿಲ್ಪದಲ್ಲಿ ಮೂಡಿವೆ.

## ಧಾರ್ಮಿಕ ಜೀವನ :–

- ಶಾತವಾಹನರು ವೈದಿಕ ಧರ್ಮದ ಅನುಯಾಯಿ ಆಗಿದ್ದರು, ವರ್ಣಪದ್ಧತಿ ಆಚರಣೆಯಲ್ಲಿತ್ತು.
- ಪರಧರ್ಮ ಸಹಿಷ್ಣುಗಳಾಗಿದ್ದ ಇವರು ಜೈನ & ಬೌದ್ದ ಧರ್ಮಗಳಿಗೂ ಪ್ರೋತ್ಸಾಹ ನೀಡಿದ್ದರು.
- ವೈದಿಕ ಧರ್ಮದೊಂದಿಗೆ ಶೈವ, ಜೈನ & ಬೌದ್ದ ಧರ್ಮಗಳನ್ನು ಘೋಷಿಸಿದ್ದರಿಂದ ಇವರನ್ನು ಚತುತ್ಸಮಯ ಸಮುದ್ಧರಂ ಎಂದು ಕರೆಯಲಾಗುತ್ತಿತ್ತು.
- ಕಲ್ಬುರ್ಗಿ ಜಿಲ್ಲೆಯ ಸನ್ನತಿ ಶಕ್ತಿ ಆರಾಧನೆಯ ಕೇಂದ್ರವಾಗಿತ್ತು.
- ಇಂದ್ರ, ಸೂರ್ಯ, ಬುದ್ದ, ವಿಷ್ಣು, ವಾಸುದೇವ, ಗಣೇಶನ ಆರಾಧನೆ ರೂಢಿಯಲ್ಲಿತ್ತು.

## ಆರ್ಥಿಕ ಸ್ಥಿತಿ :–

- ಕೃಷಿ ಶಾತವಾಹನರ ಮುಖ್ಯ ಕಸುಬಾಗಿತ್ತು. ಭೂಕಂದಾಯ ರಾಜ್ಯದ ಮುಖ್ಯ ಆದಾಯದ ಮೂಲವಾಗಿತ್ತು.
- ರೈತ, ವ್ಯಾಪಾರಿ, ಅಕ್ಕಸಾಲಿಗ, ಮೀನುಗಾರ, ಬಡಗಿ, ನೇಕಾರ, ಔಷಧ ತಯಾರಿಸುವವರು ಕಸುಬುದಾರರಿದ್ದರು.
- ಕಬ್ಬಿಣದ ಬಳಕೆ ಆಗ ವಿಪುಲವಾಗಿದ್ದು ಕಬ್ಬಿಣದ ಗುಳ ಬಳಸಿದ ನೇಗಿಲಿನಿಂದ ದೊಡ್ಡ ಪ್ರಮಾಣದಲ್ಲಿ ಭೂಮಿಯನ್ನು ಕೃಷಿ ಮಾಡುವುದು ಸಾಧ್ಯವಾಯಿತು.
- ವಿದೇಶಿ ವ್ಯಾಪಾರಕ್ಕೂ ಪ್ರೋತ್ಸಾಹ ನೀಡಿದ್ದರಲ್ಲದೇ, ಸೋಪಾರ, ಬರಿಗಜ, ಚಂಪಾವತಿ ನಾಸಿಕ್, ಕಲ್ಯಾಣ್, ಬ್ರೋಚ್, ಭಟ್ಕಳ್ ಮುಂತಾದ ಬಂದರುಗಳು ವ್ಯಾಪಾರ ಕೇಂದ್ರಗಳಾಗಿದ್ದವು.
- ವ್ಯಾಪಾರ ಪ್ರಗತಿಯನ್ನು ಸಾಧಿಸಿದ್ದು ದಕ್ಷಿಣ ಭಾರತ & ಯುರೋಪ್‌ಗಳ ನಡುವೆ ವ್ಯಾಪಾರ ಸಂಪರ್ಕ ಹೊಂದಿತ್ತು



downloaded from: www.kpscvaani.com

- ಗ್ರೀಕ್ ರೋಮನ್ ಚಕ್ರಾಧಿಪತ್ಯಕ್ಕೆ ದಕ್ಷಿಣ ಭಾರತದಿಂದ ಪಚ್ಚೆ(ರತ್ನ) ವಜ್ರ, ಚಿನ್ನ, ಬೆಳ್ಳಿಯ ಆಭರಣ ಮಸ್ಲಿನ್ ಬಟ್ಟೆ, ಮೆಣಸು, ಏಲಕ್ಕಿ, ಶ್ರೀಗಂಧ, ಸಾಂಬಾರು ಪದಾರ್ಥ ರಫ್ತಾಗುತ್ತಿತ್ತು.
- ಮಧ್ಯೆ ತಾಮ್ರ, ಸೀಸ, ಗಾಜು, ದ್ರಾಕ್ಷಾ ಮದ್ಯ, ಕ್ಲೋವರ್ ಎಂಬ ಕುದುರೆ ಮೇವು ಆಮದಾಗುತ್ತಿದ್ದವು.
- ಶಾತವಾಹನರ ಕಾಲದಲ್ಲಿ ವೃತ್ತಿ ಸಂಘ ರಚನೆಯಾಗಿದ್ದು ಅವುಗಳನ್ನು ಶ್ರೇಣಿ ಎಂದು ಅದರ ಮುಖ್ಯಸ್ಥನನ್ನು ಶ್ರೇಷ್ಠಿ ಎಂದೂ ಕರೆಯಲಾಗುತ್ತಿತ್ತು.
- ಶ್ರೇಣಿಗಳು ಹಣದ ಲೇವಾದೇವಿ ವ್ಯವಹಾರ ಮಾಡುತ್ತಿದ್ದರು. ವಿವಿಧ ಧಾರ್ಮಿಕ ಸಂಸ್ಥೆಗಳಿಂದ ಅವು ಠೇವಣಿ ಪಡೆದು ಆ ಸಂಸ್ಥೆಗಳಿಗೆ ಬಡ್ಡಿ ನೀಡುತ್ತಿದ್ದರು ಬಡ್ಡಿಯ ದರವು ಸಾಲಿಯಾನ 5%–7% ಇತ್ತು.
- ಆಸ್ಟ್ರೇಲಿಯಾದ ಡಾ// ರ್‍ಯಾಪ್ಟರ್ ಪತ್ತೆ ಹಚ್ಚಿರುವಂತೆ (1955) ಹಟ್ಟಿಯಲ್ಲಿ ಈ ಕಾಲದಲ್ಲಿ ಚಿನ್ನದ ಗಣಿಗಳಿದ್ದವು. ವ್ಯಾಪಾರಿಗಳು ಧಾರ್ಮಿಕ ಚಟುವಟಿಕೆಗಳಿಗೆ ದಾನ ನೀಡುತ್ತಿದ್ದ ವೈಜಯಂತಿಯ (ಬನವಾಸಿ) ಒಬ್ಬ ಶ್ರೇಷ್ಠಿ ಕಾರ್ಲೆಯ ಖ್ಯಾತ ಚೈತ್ಯವನ್ನು ಕಟ್ಟಿಸಿದ್ದಾನೆ.
- ಬಂದರುಗಳು – ಬ್ರೋಚ್, ಸೋಪಾರಾ
- ಬಟ್ಟೆ ನೇಯುವ ಕೇಂದ್ರ – ಪೈಠಾಣ
- ಶಾತವಾಹನರ ವ್ಯಾಪಾರದ ಮೇಲೆ ಬೆಳಕು ಚೆಲ್ಲಿದ ವಿದೇಶಿ ಬರಹಗಾರ – ಟಾಲೆಮಿ
- ರೋಮನ್ ಸಾಮ್ರಾಜ್ಯದ ಜೊತೆ ಭಾರೀ ವ್ಯಾಪಾರ ಸಂಬಂಧವನ್ನು ಹೊಂದಿದ್ದು ಗುಜರಾತಿನ ಬ್ರೋಚ್ ಇದಕ್ಕೆ ಮುಖ್ಯ ಬಂದರಾಗಿತ್ತು.
- ರೋಮ್ ಜೊತೆಗಿನ ವ್ಯಾಪಾರದಿಂದ ಬಂಗಾರವು ಭಾರೀ ಪ್ರಮಾಣದಲ್ಲಿ ಭಾರತಕ್ಕೆ ಬರುತ್ತಿತ್ತು.

## ನಾಣ್ಯಗಳು :–

- ಶಾತವಾಹನರು 'ದೀನಾರ್', 'ಸುವರ್ಣ' ಎಂಬ ಚಿನ್ನದ 'ಕುಷಣ' ಎಂಬ ಬೆಳ್ಳಿಯ ಹಾಗೂ 'ಕಾರ್ಷಪಣ ದ್ರಮ್ಮ' ಪಣ, ಗದ್ಯಾಣ, ಬ್ರಹ್ಮಪರಣ ಎಂಬುವ ತಾಮ್ರ, ಸತು & ಪೋಟನ್ ನಾಣ್ಯಗಳನ್ನು ಚಲಾವಣೆಗೆ ತಂದಿದ್ದರು.
- ಶಕ, ಸತ್ರಪ & ನಹಪಾಣರ ನಾಣ್ಯಗಳ ಮೇಲೆ ತಮ್ಮ ಮುದ್ರೆಯನ್ನೊತ್ತಿ ಚಲಾವಣೆಗೆ ತಂದಿದ್ದರು.
- ನಾಣ್ಯಗಳ ಮೇಲೆ ಆನೆ, ಕುದುರೆ, ಸಿಂಹ, ಬಾಣ ಮುಂತಾದ ಚಿನ್ಹೆಗಳನ್ನು ಹೊಂದಿದ್ದವು.
- ಈ ಮೊದಲು ಸೀಸದ ನಾಣ್ಯಗಳನ್ನು ಹೊರಡಿಸಿದ್ದರು.
- ಪ್ರಾಕೃತ ಇವರ ಲಿಪಿ ಹಾಗೂ ರಾಜಭಾಷೆಯಾಗಿತ್ತು.



downloaded from: www.kpscvaani.com

## ಸಾಹಿತ್ಯ :-

- ಪ್ರಾಕೃತ & ಸಂಸ್ಕೃತಿ ಭಾಷೆಗೆ ಹೆಚ್ಚು ಆದ್ಯತೆ.

| ಕವಿಗಳು | ಕೃತಿಗಳು | ಭಾಷೆ |
|---|---|---|
| ಹಾಲ (ಕವಿಪುಂಗವ) | ಗಾಥಾಸಪ್ತಶತಿ | ಪ್ರಾಕೃತ ಭಾಷೆ |
| ಗುಣಾಢ್ಯ | ವಡ್ಡಾಕಥಾ (ಬೃಹತ್ಕಥ) | ಪ್ರಾಕೃತ ಭಾಷೆ |
| ಸರ್ವವರ್ಮ | ಕಾತಂತ್ರ (ವ್ಯಾಕರಣ) | ಸಂಸ್ಕೃತ ಭಾಷೆ |
| ಕುಂದ ಕುಂದಾಚಾರ್ಯ | ಸಮಯ ಸಾರ, ಠಾಯನ ಸಾರ ಪ್ರವಚನ ಸಾರ, ಪ್ರಬೃತ ಸಾರ | ಪ್ರಾಕೃತ ಭಾಷೆ |
| ನಾಗಾರ್ಜುನ | ಶತಸಹಿಸ್ರಿಕಾ, ಮಾಧ್ಯಮಿಕ ಸೂತ್ರ, ಪ್ರಜ್ಞಾಪಾರಾಮಿತ | ಸಂಸ್ಕೃತ ಭಾಷೆ |

## ಕಲೆ ಮತ್ತು ವಾಸ್ತು ಶಿಲ್ಪ :-

- ಇವರ ಕಾಲದಲ್ಲಿ ಅಜಂತ & ಅಮರಾವತಿಯ ಚಿತ್ರಕಲೆಗಳು ರಚನೆಗೊಂಡವು.
- ಶಾತವಾಹನರ ಲಲಿತ ಕಲೆಗಳ ಆರಾಧಕರಾಗಿದ್ದರು.
- ಶಾತವಾಹನರು ಬೌದ್ಧ ವಾಸ್ತುಶಿಲ್ಪವನ್ನು ಹೆಚ್ಚು ಪೋಷಿಸಿದ್ದರು.
- ಶಾತವಾಹನರ ಕಾಲದಲ್ಲಿ ದೊಡ್ಡ ಬಂಡೆಗಳನ್ನು ಕೊರೆದು ಅನೇಕ ಚೈತ್ಯ ವಿಹಾರ & ಸ್ತೂಪಗಳೆಂಬ ಸ್ಮಾರಕಗಳನ್ನು ನಿರ್ಮಿಸಿದ್ದನು.
- ವಿದ್ವಾಂಸರ ಹಾಗೂ ಸಾಮಾನ್ಯ ಜನರ ಭಾಷೆಯಾಗಿದ್ದ ಪ್ರಾಕೃತ ಭಾಷೆಯಲ್ಲಿ ಸಾಹಿತ್ಯ ಸೃಷ್ಟಿಯಾಯಿತು.

## ಚೈತ್ಯ :-

- ಉದ್ಧವಾದ ಬೃಹತ್ ಬಂಡೆಗಳ ಮೇಲೆ ಕೊರೆದ ಬೌದ್ಧರ ಪ್ರಾರ್ಥನಾ ಮಂದಿರ
- ಈ ಕಾಲದ ಚೈತ್ಯನ್ಯಗಳನ್ನು ಅಜಂತಾ, ಬಾಜಾ, ಬೇಡ್ಸ್, ಕನ್ಹೇರಿ, ಕಾರ್ಲೆ, ಕೊಂಡಾನೆ & ನಾಸಿಕಗಳಲ್ಲಿ ಕಾಣಬಹುದು.
- ಕಾರ್ಲೆ ಚೈತ್ಯವು ಭಾರತದ ಅತಿ ಉದ್ದ & ಸುಂದರವಾದ ಚೈತ್ಯವಾಗಿದೆ. ಇದನ್ನು ಬನವಾಸಿಯ ಶ್ರೀಮಂತ ವರ್ತಕ ಭೂತಪಾಲನು ನಿರ್ಮಿಸಿದನು.



downloaded from: www.kpscvaani.com


## ವಿಹಾರ :–

- ಸಾಮಾನ್ಯವಾಗಿ ವಿಹಾರಗಳನ್ನು ಚೈತ್ಯದ ಸಮೀಪದಲ್ಲಿಯೇ ನಿರ್ಮಿಸಲಾಗಿತ್ತು. ಇವು ಬೌದ್ಧ ಸನ್ಯಾಸಿಗಳ ವಾಸಸ್ಥಳವಾಗಿದ್ದು ಇವುಗಳನ್ನು 'ಸಂಘರಾಮ'ಗಳೆಂದು ಕರೆಯುವರು.
- ಈ ಕಾಲದ ವಿಹಾರಗಳು ಕೊಂಡನೇ, ನಾಸಿಕ್, ಅಜಂತಾ, ಕಾರ್ಲೆಗಳಲ್ಲಿವೆ.

## ಸ್ತೂಪ :–

- ಇವು ಛತ್ರಿ ಗುಮಟಾಕಾರದಲ್ಲಿದೆ.
- ಈ ಕಾಲದ ಅನೇಕ ಸ್ತೂಪಗಳು ಆಂಧ್ರ ಪ್ರದೇಶದ ಕೋಲಿ, ಜಗ್ಗಯಪೇಟೆ, ಬಟ್ಟಿ ಪ್ರೋಲು, ಘಂಟಸಾಲ, ಅಮರಾವತಿ, ನಾಗಾರ್ಜುನಕೊಂಡ, ಮುಂತಾದ ಕಡೆ ಕಾಣಬಹುದು.
- ಅಮರಾವತಿ ಸ್ತೂಪವು ಅತಿ ದೊಡ್ಡ ಸ್ತೂಪವಾಗಿದೆ.

## ಕದಂಬರು (ಕ್ರಿ.ಶ. 345–580) :–




- ಕರ್ನಾಟಕದಲ್ಲಿ ಆಡಳಿತ ನಡೆಸಿದ ಕನ್ನಡದ ಮೊದಲ ಸಾಮ್ರಾಜ್ಯವೇ ಬನವಾಸಿಯ ಕದಂಬರು.



downloaded from: www.kpscvaani.com

- ಕ್ರಿ.ಶ 4ನೇ ಶತಮಾನದಲ್ಲಿ ಮಧ್ಯೆಭಾಗದಿಂದ 6ನೇ ಶತಮಾನದವರೆಗೆ ಒಟ್ಟು 250 ವರ್ಷಗಳ ಕಾಲ ಆಳ್ವಿಕೆ ನಡೆಸಿದರು.
- ಸ್ಥಾಪಕ – ಮಯೂರ ವರ್ಮ (ಕನ್ನಡ ನಾಡಿನ ಮೊದಲ ರಾಜ)
- ರಾಜಧಾನಿ – ಬನವಾಸಿ (ಇದು ಭಾರತದ ಪ್ರಾಚೀನ ಸ್ಥಳವಾಗಿದೆ) ವೈಜಯಂತೆ, ವನವಾಸಿ, ಬೈಜಾಂಟಿಯನ್ ಇದರ ಇತರೆ ಹೆಸರುಗಳು.
- ದೇವರು – ಮಧುಕೇಶ್ವರ
- ಲಾಂಛನ– ಸಿಂಹ ಲಾಂಛನ
- ಧ್ವಜ – ವಾನರ ಧ್ವಜ
- ಪ್ರಮುಖ ಅರಸರು – ಮಯೂರ ವರ್ಮ, ಶಾಂತಿವರ್ಮ, ಕಾಕುತ್ಸ್ಯ ವರ್ಮ
- ಪ್ರಮುಖ ಸಂಗತಿಗಳು – ಮಹಾಭಾರತದಲ್ಲಿ ಬನವಾಸಿಯನ್ನು "ವನವಾಸಿ" ಅಥವಾ "ವೈಜಯಂತಿ" ಎಂದು ವರ್ಣಿಸಲಾಗಿದೆ.
- ಅಶೋಕನು ಬೌದ್ಧಧರ್ಮ ಪ್ರಚಾರಕ್ಕೆ ಬನವಾಸಿಗೆ ಬಂದಿದ್ದನೆಂದು ಬೌದ್ಧ ಧರ್ಮಗಳು ಹೇಳಿವೆ.
- ಕ್ರಿ.ಶ. 2ನೇ ಶತಮಾನದಲ್ಲಿ ಬನವಾಸಿಗೆ ಭೇಟಿ ನೀಡಿದ್ದ ಗ್ರೀಕ್‌ನ ಭೂಗೋಳಶಾಸ್ತ್ರಜ್ಞ "ಟಾಲೆಮಿ" ತನ್ನ ಭೂಗೋಳ ಗ್ರಂಥದಲ್ಲಿ ವೈಜಯಂತಿಯನ್ನು ಬೈಜಾಂಟಿಯನ್ ಎಂದು ಕರೆದಿದ್ದಾನೆ.

## ಕದಂಬರ ಮೂಲ :

- ಕದಂಬ ವೃಕ್ಷವನ್ನು (ತಾಳೀಮರ) ಮನೆ ಮುಂದೆ ಬೆಳೆಯುತ್ತಿದ್ದರಿಂದ ಈ ವಂಶಕ್ಕೆ ಕದಂಬ ಎಂಬ ಹೆಸರು ಬಂದಿದೆ ಎಂದು ತಾಳಗುಂದ ಶಾಸನದಿಂದ ತಿಳಿಯುತ್ತದೆ.
- ಕದಂಬರು ಬ್ರಾಹ್ಮಣರಾಗಿದ್ದು ಮಾನಪ್ಪಿ ಅಥವಾ ಮಾನವ್ಯಸಗೋತ್ರಕ್ಕೆ ಸೇರಿದ "ಹಾರತಿ ಪುತ್ರರು" ಎಂದು ಕ್ರಿ.ಶ 450ರಲ್ಲಿ ರಚಿತವಾದ ಶಾಂತಿವರ್ಮನ 'ತಾಳಗುಂದ' ಶಾಸನವು ತಿಳಿಸುತ್ತದೆ.
- ಬೆಳಗಾವಿಯ ವಿರಕ್ತ ಮಠದಲ್ಲಿ ದೊರೆತಿರುವ ತಾಮ್ರಪಠ ಶಾಸನವು ಉಕ್ತಿಯಂತೆ ಶಿವ–ತ್ರಿಪುರಾಸುರರ ಕದನದಲ್ಲಿ ಶಿವನಹಣೆಯಿಂದ ಬೆವರ ಹನಿಯು ವೃಕ್ಷದ ಬುಡಕ್ಕೆ ಬಿದ್ದು ಜನಿಸಿದ ಕದಂಬ (ಮುಕ್ಕಣ್ಣ) ಮಗನೇ "ಮಯೂರ ವರ್ಮ" ಎಂದು ತಿಳಿಯಲಾಗಿದೆ.

## ಮಯೂರ ವರ್ಮ (ಕ್ರಿ.ಶ 345–360)



downloaded from: www.kpscvaani.com

- ತಾಳಗುಂದ ಶಾಸನದ ಪ್ರಕಾರ ಮಯೂರ ವರ್ಮ ಕದಂಬರ ಮೂಲ ಪುರುಷ, ಸ್ಥಾಪಕ & ಪ್ರಸಿದ್ಧ ಅರಸ.
- ರಾಜ್ಯ ಸ್ಥಾಪನೆ – ಶಿವಮೊಗ್ಗದ ತಾಳಗುಂದದಲ್ಲಿ ಜನಿಸಿದ ಈತ ಪಲ್ಲವರ ರಾಜಧಾನಿ ಕಂಚಿಯ ಘಟಿಕಕ್ಕೆ ವಿದ್ಯಾರ್ಜನೆಗೆಂದು ತೆರಳಿದಾಗ ಪಲ್ಲವರಾಜ ಶಿವಸ್ಕಂದವರ್ಮನಿಂದ ಅವಮಾನಿತನಾಗಿ ಸೇಡಿನ ಪಣ ತೊಟ್ಟು ಶ್ರೀಶೈಲ ಪರ್ವತದ ಅರಣ್ಯದಲ್ಲಿ ಕದಂಬ ರಾಜ್ಯ ಸ್ಥಾಪನೆಯನ್ನು ಮಾಡಿದ.
- ಇವನು ಕನ್ನಡಿಗರ ಸ್ವಾಭಿಮಾನದ ಸಂಕೇತ.
- ಮಯೂರ ವರ್ಮನಿಂದ ಪರಾಜಿತನಾದ ಪಲ್ಲವ ಅರಸ ಶಿವಸ್ಕಂದವರ್ಮ
- ಮಯೂರ ವರ್ಮ ಚಿತ್ರದುರ್ಗ ಬಳಿ ಚಂದ್ರವಳ್ಳಿಯಲ್ಲಿ ಪ್ರಥಮ ಸಂಸ್ಕೃತ ಶಾಸನವನ್ನು ಕೆತ್ತಿಸಿ, ಒಂದು ಕೆರೆಯನ್ನು ನಿರ್ಮಿಸಿದನು.
- ಕರ್ನಾಟಕದ ಪ್ರಥಮ ಚಕ್ರವರ್ತಿ ಎಂಬ ಹೆಗ್ಗಳಿಕೆಗೆ ಪಾತ್ರನಾಗಿದ್ದಾನೆ.
- "ದರ್ಭೆ ಹಿಡಿಯುವ ಕೈ ಅದನ್ನು ತ್ಯಜಿಸಿ ಉಜ್ವಲ ಖಡ್ಗವನ್ನು ತೊಟ್ಟಿತು" ಎಂದು ಮಯೂರನು ಬ್ರಾಹ್ಮವನ್ನು ಬಿಟ್ಟು ಕ್ಷಾತ್ರವನ್ನು ಸ್ವೀಕರಿಸಿದ ವಿಚಾರವನ್ನು ತಾಳಗುಂದ ಶಾಸನ ಬಣ್ಣಿಸಿದೆ.

## ಕಂಗವರ್ಮ – ಭಗೀರಥ ವರ್ಮ, ರಘುಪತಿ ವರ್ಮ :

- ಉತ್ತರ ಭಾರತವನ್ನಾಳಿದ ಗುಪ್ತರ ಸಾಮ್ರಾಟ 2ನೇ ಚಂದ್ರಗುಪ್ತ ಇವರ ಸಮಕಾಲಿನ.
- ಇವನ ಕಾಲದಲ್ಲಿ 2ನೇ ಚಂದ್ರಗುಪ್ತನ ಆಸ್ತಾನ ಕವಿ ಕಾಳಿದಾಸ ಕುಂತಳೇಶ್ವರ ಇವನ ಆಸ್ಥಾನಕ್ಕೆ ರಾಯಭಾರಿಯಾಗಿ ಬಂದಿದ್ದು ಇವನ ಗ್ರಂಥ "ಕೌಂತಳೇಶ್ವರ ದೌತ್ಯ" ಆದರೆ ಇದು ಲಭ್ಯವಿಲ್ಲ. (ಈ ಕಾಳಿದಾಸ ಲೋಕ ಪ್ರಸಿದ್ಧ ಕಾಳಿದಾಸನಲ್ಲ)

## ಕಾಕುತ್ಸ್ಯ ವರ್ಮ (ಕ್ರಿ.ಶ 425–455) :

- ಇವನು ರಘುವರ್ಮನ ಸಹೋದರ.
- ಧರ್ಮರಾಜ ಧರ್ಮಮಹಾರಾಜ (ಬಿರುದಾಂಕಿತಗಳು)
- ಇವನು ಕನ್ನಡದ ಮೊದಲ ಶಾಸನ ಹಲ್ಮಿಡಿ ಶಾಸನ & ಹಲಸಿಗೆ ಶಾಸನಗಳನ್ನು (ಕ್ರಿ.ಶ 450) ಕೆತ್ತಿಸಿದನು.
- ತಾಳಗುಂದ ಶಾಸನವು ಇವನನ್ನು 'ಅನರ್ಘ ರತ್ನವೆಂದು' ಪ್ರಖ್ಯಾತಿ ಹೊಂದಿದ ರಾಜರಲ್ಲಿ ಸೂರ್ಯನಂತೆ ಪ್ರಕಾಶಿಸುವನೆಂದು ಕದಂಬ ಕುಲಭೂಷಣನೆಂದು ಹೊಗಳಿದೆ.


downloaded from: www.kpscvaani.com

## ಕದಂಬರ ಕೊನೆಯ ದೊರೆಗಳು :

- ಕಾಕುತ್ಸ್ಯ ವರ್ಮನ ಮಗ ಶಾಂತಿವರ್ಮ ನಂತರ ಅಧಿಕಾರಕ್ಕೆ ಬಂದನು. ಇವನು ತಾಳಗುಂದ ಶಾಸನವನ್ನು ಕೆತ್ತಿಸಿದನು. (ಮೃಗೇಶವರ್ಮ –480, ರವಿವರ್ಮ 480–519)
- ಭೋಗಿವರ್ಮ ಅಥವಾ ವಿಷ್ಣುವರ್ಮ ಈ ವಂಶದ ಕೊನೆಯ ದೊರೆ.

## ಆಡಳಿತ :

- ಕದಂಬರು ಶಾತವಾಹನರ ಆಡಳಿತ ಪದ್ಧತಿಯನ್ನು ಮುಂದುವರೆಸಿದರು. ರಾಜನೇ ರಾಜ್ಯದ ಮುಖ್ಯಾಧಿಕಾರಿಯಾಗಿದ್ದು ರಾಜತ್ವ ವಂಶ ಪರ್ಯಾಂಪರವಾಗಿತ್ತು.
- ರಾಜನಿಗೆ ಆಡಳಿತದಲ್ಲಿ ಸಹಕಾರ ನೀಡಲು "ಪಂಚ ಪ್ರಧಾನ" ಎಂಬ ಮಂತ್ರಿ ಮಂಡಲವಿತ್ತು.
  1. ಪ್ರಧಾನ – ಪ್ರಧಾನಮಂತ್ರಿ
  2. ಮನೆವೇರ್ಗಡೆ – ಅರಮನೆಯ ವ್ಯವಹಾರ ಮಂತ್ರಿ (ಖಜಾಂಚಿ)
  3. ತಂತ್ರಪಾಲ – ವಿದೇಶಾಂಗ ಮಂತ್ರಿ
  4. ಕ್ರಮುಕ ಪಾಲ – ಆಸ್ಥಾನಧಿಕಾರಿ
  5. ಸಭಾಕಾರ್ಯಸಚಿವ – ಮಂತ್ರಿಮಂಡಲದ ಪ್ರಧಾನಕಾರ್ಯದರ್ಶಿ
- ರಹಸ್ಯಾಧಿಕೃತರೆಂದು ಅಧಿಕಾರಿಗಳು ಅರಸನ ಆಪ್ತಕಾರ್ಯದರ್ಶಿ
- ಪ್ರಾಂತ್ಯಗಳನ್ನು ಈ ರೀತಿ ವಿಂಗಡಿಸಿದ್ದರು
  ಕಂಪನ ⟶ ವಿಷಯ ⟶ ದಶಗ್ರಾಮ ⟶ ಗ್ರಾಮ
- ಜಿಲ್ಲೆಗಳ ಆಡಳಿತವನ್ನು ಮನ್ನೆಯರು ನೊಡಿಕೊಳ್ಳುತ್ತಿದ್ದರು.
- ಕದಂಬರು ಆಳಿದ ಪ್ರದೇಶವು ಸುಮಾರು 3 ಶತಮಾನಗಳ ಕಾಲ ರಾಜಕೀಯ ಐಕ್ಯತೆಗೆ ಒಳಗಾಗಿತ್ತು.
- ಆಡಳಿತದ ಅನುಕೂಲಕ್ಕಾಗಿ ಪ್ರಾಂತ್ಯಾಧಿಕಾರಿಗಳನ್ನು ಪ್ರಾಂತ್ಯವನ್ನು ನೋಡಿಕೊಳ್ಳುವಂತೆ ನೇಮಿಸುತ್ತಿದ್ದರು.



downloaded from: www.kpscvaani.com

## ಕಂದಾಯ :

- ಭೂಕಂದಾಯ ರಾಜ್ಯದ ಮುಖ್ಯ ಆದಾಯದ ಮೂಲವಾಗಿತ್ತು.
- ಬಡಗಿ, ಅಕ್ಕಸಾಲಿಗ, ಕಮ್ಮಾರ, ನೇಕಾರ, ಗಾಣಿಗ, ಕುಂಬಾರ ಮುಂತಾದ ಕಸುಬುಗಳು ಮುಖ್ಯವಾಗಿದ್ದವು.
- ವ್ಯವಸಾಯ, ವ್ಯಾಪಾರಗಳಿಗೆ ಹೆಚ್ಚಿನ ಪ್ರೋತ್ಸಾಹವಿದ್ದಿತ್ತು.
- ಸರ್ವನಮಸ್ಸು ತ್ರಿಭೋಗ & ತಾಲವೃತ್ತಿ ಎಂಬ 3 ವಿಧವಾದ ಕಂದಾಯ ಪದ್ಧತಿಗಳಿದ್ದವು.
  ಜೊತೆಯಲ್ಲಿ : ಪೇರ್ಜುಂಕೆ – ಹೊರೆಗಳ ಮೇಲಿನ ತೆರಿಗೆ
  ಬಲಕೊಡೆ – ವ್ಯಾಪಾರ ತೆರಿಗೆ
  ಕಿರುಕುಳ – ಸಾಗಾಣಿಕೆ & ಪಣ್ಣಾಯ ತೆರಿಗೆ
- ನ್ಯಾಯಾಡಳಿತ – ರಾಜ್ಯನೇ ನ್ಯಾಯಾಧೀಶ ಆಸ್ಥಾನವೇ ನ್ಯಾಯಾಲಯ (ಧರ್ಮಾಧ್ಯಕ್ಷ ಈ ವಿಷಯದಲ್ಲಿ ರಾಜನಿಗೆ ನೆರವಾಗಿದ್ದನು)
- ಸೇನಾಡಳಿತ – ರಾಜನೇ ಮುಖ್ಯಸ್ಥ (ಯುದ್ಧ & ಒಪ್ಪಂದಕ್ಕೆ ಸಂಬಂಧಿಸಿದ). ಸೇನಾಧಿಪತಿ ಚದುರಂಗ ಅಥವಾ ಮಹಾದಂಡನಾಯಕ ಸೈನ್ಯದ ಮೇಲ್ವಿಚಾರಕ. ಸೈನ್ಯವು ಚದುರಂಗ ಒಳಗೊಂಡಿದ್ದು (ಕಾಲ್ದಳ, ಅಶ್ವ, ರಥ & ಗಜಪಡೆ) ಗೆರಿಲ್ಲಾ ಯುದ್ಧತಂತ್ರ (ಕೂಟ ಯುದ್ಧ) ಬಳಸಲಾಗಿತ್ತು.

## ಸಾಮಾಜಿಕ ಜೀವನ :

- ಕದಂಬ ಸಮಾಜವು ವರ್ಣಾಶ್ರಮದ ಮೇಲೆ ರೂಪುಗೊಂಡಿತ್ತು.
- ಗ್ರಾಮೀಣ ಜೀವನ ಪ್ರಧಾನವಾಗಿತ್ತು.
- ಪಿತೃ ಪ್ರಧಾನ & ಅವಿಭಕ್ತ ಕುಟುಂಬ ಪದ್ದತಿ ರೂಢಿಯಲ್ಲಿತ್ತು.
- ಅಂತರ ಜಾತಿ ವಿವಾಹಕ್ಕೆ ಆಸ್ಪದವಿರಲಿಲ್ಲ.
- ಸಹಗಮನ ಪದ್ದತಿ & ಸಗೋತ್ರ ವಿವಾಹ ಆಚರಣೆಯಲ್ಲಿತ್ತು.

## ಧರ್ಮ :

- ಕದಂಬರು ವೈದಿಕ ಧರ್ಮದ ಅವಲಂಬಿಗಳು (ಬ್ರಾಹ್ಮಣ ಪಂಥದ ಹಾರತಿ ಪುತ್ರರು), ಪ್ರಾಣೇಶ್ವರ (ಕುಲದೇವರು), ಮಧುಕೇಶ್ವರ (ಮನೆದೇವರು).
- ಶೈವ, ಜೈನ & ಬೌದ್ಧ ಧರ್ಮ ಆಚರಣೆಯಲ್ಲಿದ್ದವು.



downloaded from: www.kpscvaani.com

- ಹೂಯಾನ್‌ತ್ಸಾಂಗ್ ಬನವಾಸಿಗೆ ಭೇಟಿ ನೀಡಿ ಬೌದ್ದ ಸಂಘದವರ ಸಂಘರಾಮ & ಭಿಕ್ಷುಗಳಿದ್ದ ಬಗ್ಗೆ ತಿಳಿಸಿದ್ದಾರೆ.

## ಶಿಕ್ಷಣ :

- ಗುರುಕುಲ ಶಿಕ್ಷಣ ಪದ್ದತಿ ರೂಢಿಯಲ್ಲಿತ್ತು.
- ಘಟಕಗಳು, ಅಗ್ರಹಾರ, ಬ್ರಹ್ಮಪುರಿ, ಮಠ & ದೇವಾಲಯಗಳು ಶಿಕ್ಷಣ ಕೇಂದ್ರಗಳಾಗಿದ್ದವು.
- ಅಗ್ರಹಾರಗಳು ಉಚಿತ ಊಟ – ವಸತಿ ಸೌಲಭ್ಯವಿದ್ದ ವಿದ್ಯಾಕೇಂದ್ರಗಳಾಗಿದ್ದವು.
- ಘಟಕ ಸ್ಥಾನಗಳು – ಧಾರ್ಮಿಕ ಚರ್ಚಾ ಸ್ಪರ್ಧೆ ಏರ್ಪಡಿಸಿದ್ದವು.
- ಘಟಕಗಳಲ್ಲಿ ಓದಿದ ವಿದ್ಯಾರ್ಥಿಗಳಿಗೆ ಘಟಕ ಸಾಹಸಿ ಎಂಬ ಬಿರುದು ನೀಡಲಾಗುತ್ತಿತ್ತು.
- ಕಂಚಿ ಅಂದಿನ ಪ್ರಸಿದ್ದ ವಿದ್ಯಾಕೇಂದ್ರವಾಗಿತ್ತು.

## ಸಾಹಿತ್ಯ :

- ಕದಂಬರ ಕಾಲದಲ್ಲಿ ಪ್ರಾಕೃತ ಸಂಸ್ಕೃತ & ಕನ್ನಡ ಘೋಷಣೆಗೊಳಗಾಗಿದ್ದವು.
- ಶಾಂತಿನಾಥ – ಸುಕುಮಾರ ಚರಿತ
- ನಾಗವರ್ಮ – ಚಂದ್ರ ಚೂಡಾಮಣಿ
- ಚಂದ್ರರಾಜನ– ಮಧನ ತಿಲಕ
- ಕಾಳಿದಾಸ (2) – ಕೌಂತಳೇಶ್ವರ ದೌತ್ಯಂ
- ಟಾಲೆಮಿ – ಭೂಗೋಳ

## ಶಾಸನಗಳು :

ಎಫಿಗ್ರಫಿ ಎಂದರೆ ಶಾಸನಗಳ ಅಧ್ಯಯನ.

### 1. ಹಲ್ಮಿಡಿ ಶಾಸನ (ಕ್ರಿ.ಶ. 450) :

ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನಲ್ಲಿದೆ. ಸಂಸ್ಕೃತ & ಕನ್ನಡ ಭಾಷೆಯಲ್ಲಿದೆ. ಕಾಕುಸ್ಥ ವರ್ಮ ಇದನ್ನು ರಚಿಸಿದ್ದಾರೆ. 1934ರಲ್ಲಿ ಎಂ.ಎಚ್. ಕೃಷ್ಣ ಸಂಶೋಧಿಸಿದ್ದು ಇದು ಕದಂಬರ ಆಡಳಿತದ ಬಗ್ಗೆ ತಿಳಿಸುತ್ತದೆ. ಇದು ಕನ್ನಡದ ಮೊಟ್ಟ ಮೊದಲ ಶಾಸನವಾಗಿದೆ.



downloaded from: www.kpscvaani.com

2. **ತಾಳಗುಂದ ಶಾಸನ (ಕ್ರಿ.ಶ 450) :**

ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ತಾಳಗುಂದ ಗ್ರಾಮದಲ್ಲಿದೆ. ಕಾಕುಸ್ಥವರ್ಮ ಇದನ್ನು ರಚಿಸಿದ್ದಾನೆ. ಕವಿ ಕಲ್ಜಕಬ್ಬು ಇದನ್ನು ಕೆತ್ತಿದ್ದಾನೆ. ಸಂಸ್ಕೃತದ ಭಾಷೆಯಲ್ಲಿದೆ. ಇದು ಸಂಸ್ಕೃತದ ಮೊದಲ ಶಿಲಾಶಾಸನವಾಗಿದೆ.

3. **ಚಂದ್ರವಳ್ಳಿ ಶಾಸನ (ಕ್ರಿ.ಶ 345–360) :**

ಇದು ಚಿತ್ರದುರ್ಗ ಜಿಲ್ಲೆಯಲ್ಲಿದೆ. ಮಯೂರ ವರ್ಮ ಇದನ್ನು ರಚಿಸಿದ್ದಾನೆ. ಸಂಸ್ಕೃತ ಭಾಷೆಯಲ್ಲಿದೆ. ಮಳವಳ್ಳಿ ಶಾಸನವು ಸಂಸ್ಕೃತ ಭಾಷೆಯಲ್ಲಿದೆ. ಇಲ್ಲಿ ಮಯೂರವರ್ಮನು ಪ್ರಾಣೇಶ್ವರನ ಹೆಸರಿನಲ್ಲಿ ಒಂದು ಕೆರೆಯನ್ನು ಕಟ್ಟಿಸಿದ್ದಾನೆ.

4. **ಹಲಸಿ ಶಾಸನ (ಕ್ರಿ.ಶ 450) :**

ಬೆಳಗಾಂ ಬಳಿಯಿದೆ. ಕಾಕುತ್ಸವರ್ಮ ರಚಿಸಿದನು. ಇದು ಕಾಕುತ್ಸವರ್ಮನನ್ನು ಕದಂಬ ಕುಲದ ಅತ್ಯಂತ ಭವ್ಯ ವ್ಯಕ್ತಿ ಎಂದು ವರ್ಣಿಸಿದೆ.

## ನಾಣ್ಯಗಳು :

- ಪದ್ಮ ಟಂಕ ಎಂಬುದು ಕದಂಬರು ಬಿಡುಗಡೆ ಮಾಡಿದ ನಾಣ್ಯ ಅಲ್ಲದೇ ಗದ್ಯಾಣ, ಪಣ ಎಂಬ ನಾಣ್ಯಗಳು ಜಾರಿಯಲ್ಲಿವೆ.

## ಕಲೆ & ವಾಸ್ತು ಶಿಲ್ಪ :

- ಕರ್ನಾಟಕದ ದೇವಾಲಯಗಳ ವಾಸ್ತುಶಿಲ್ಪಕ್ಕೆ ಆಸ್ಥಿಭಾರ ಹಾಕಿದವರು ಕದಂಬರು, ಇವರು ಕಲೆ, ವಾಸ್ತುಶಿಲ್ಪ ಆರಾಧಕರಾಗಿದ್ದರು.
- ಇವರು ಕದಂಬ ಶೈಲಿ ಎಂಬ ಮೊದಲ ವಾಸ್ತುಶಿಲ್ಪ ಸೃಷ್ಟಿಸಿದವರು.
- ಕ್ರಿ.ಶ. 5ನೇ ಶತಮಾನದಲ್ಲಿ ಮೃಗೇಶವರ್ಮನಿಂದ ನಿರ್ಮಿತವಾದ ಹಲಸಿಯ ಜೈನ ಬಸದಿ ಅತ್ಯಂತ ಪ್ರಾಚೀನ ಕಟ್ಟಡಗಳಲ್ಲೊಂದಾಗಿದೆ.
- ದಕ್ಷಿಣ ಭಾರತದಲ್ಲೇ ಮೊಟ್ಟ ಮೊದಲು ದೇವಾಲಯಗಳ ಕಲಾಕೃತಿಗೆ ಆಸ್ಥಿಭಾರ ಹಾಕಿದವರಾಗಿದ್ದಾರೆ.




downloaded from: www.kpscvaani.com

## ಇವರ ಕಾಲದ ಪ್ರಮುಖ ಕಟ್ಟಡಗಳು :



- ತಾಳಗಂದದ – ಶಿವದೇವಾಲಯ (ಪ್ರಾಣೇಶ್ವರ ದೇವಾಲಯ) (ತ್ರಿಕೂಟ).
- ಹಲಸಿಯ– ಕಲ್ಲೇಶ್ವರ (ತ್ರಿಕೂಟ) ಹತ್ತಿಕೇಶ್ವರ, ಸುವರ್ಣೇಶ್ವರ, ರಾಮೇಶ್ವರ & ಜೈನ ಬಸದಿಗಳು.
- ಬನವಾಸಿ – ಮಧುಕೇಶ್ವರ & ವರನರಸಿಂಹ ದೇವಾಲಯ.
- ಯಲವಟ್ಟಿಯ – ಶಿವನ ದೇವಾಲಯ.
- ಅರವತಿಮ್ (ಗೋವಾ) – ಭೈರವನ ವಿಗ್ರಹ & ಅರವೇಲಂ ಗುಹೆಗಳು.
- ಜಾಂಚೀ ಹಳ್ಳಿಯ – ದುರ್ಗಮೂರ್ತಿಗಳು.
- ದೊಡ್ಡ ಗದ್ದವಳ್ಳಿ – ಲಕ್ಷ್ಮೀ ದೇವಾಲಯ ಗುಡ್ನಾಪುರದ ಜೈನ ಬಸದಿ.
- ದೇವಾಗಾಂವಿ – ಕಮಲ ನಾರಾಯಣ ದೇವಾಲಯ.

## ತಲಕಾಡಿನ ಗಂಗರು (ಕ್ರಿ.ಶ 350–1004) :






downloaded from: www.kpscvaani.com

- ಕರ್ನಾಟಕದಲ್ಲಿ ಅತೀ ದೀರ್ಘಕಾಲ ಆಳಿದ ರಾಜವಂಶವೇ ಗಂಗರು. ಇವರು 600 ವರ್ಷಗಳ ಕಾಲ ಆಳಿದ್ದಾರೆ.
- ಆರಂಭದಲ್ಲಿ ಸ್ವತಂತ್ರರಾಗಿ ನಂತರ ಬಾದಾಮಿ ಚಾಲುಕ್ಯರ & ರಾಷ್ಟ್ರಕೂಟ ಸಾಮಂತರಿಗೆ ದೀರ್ಘಕಾಲ ಆಳಿದ್ದಾರೆ.
- ರಾಜಧಾನಿಗಳು : ಗಂಗಾ ಅರಸರು ತಮ್ಮ ಆಡಳಿತದ ಅನುಕೂಲಕ್ಕೆ ತಕ್ಕಂತೆ ತಮ್ಮ ರಾಜಧಾನಿಗಳನ್ನು ಬದಲಾಯಿಸಿಕೊಂಡಿದ್ದರು.
    - ಕೋಲಾರಾ (ಕುವಲಾಲ) – 1ನೇ ರಾಜಧಾನಿ
    - ತಲಕಾಡು (ತಲವನ ಪುರ) – 2ನೇ ರಾಜಧಾನಿ
    - ಮಾಕುಂದ (ಮನಕುಂದ) – 3ನೇ ರಾಜಧಾನಿ (ಚೆನ್ನಪಟ್ಟಣ ಬಳಿ)
    - ಮಾನ್ಯಪುರ (ಮನ್ನೆಪುರ) – 4ನೇ ರಾಜಧಾನಿ (ಬೆಂಗಳೂರು ಜಿ. ನೆಲಮಂಗಲ)
- ಮೂಲ : ಕ್ರಿ.ಶ.1122 ಕಲ್ಲೂರ ಗುಡ್ಡ ಶಿಲಾಶಾಸನದ ಪ್ರಕಾರ ಗಂಗರು ಉತ್ತರ ಅಯೋಧ್ಯೆಯನ್ನಾಳಿದ್ದ "ಇಕ್ಷ್ವಾಕು" ವಂಶದವರು.
- ಕೆ.ಪಿ. ಜಯಸ್ವಾಲರು – ಕಣ್ವ ಗೋತ್ರದವರು ಎಂದಿದ್ದಾರೆ.
- ಡಾ// ಆರೋಗ್ಯ ಸ್ವಾಮಿಯವರು ತಮ್ಮ ಕೃತಿ "ಕೊಂಗುದೇಶ ರಾಜಕ್ಕಳ ಚರಿತ"ದಲ್ಲಿ ಅವರು ತಮಿಳು ಮೂಲದವರೆಂದು ಎಂದಿದ್ದಾರೆ.
- ಅರ್.ಎಸ್. ಪಂಚಮುಖಿ, ಲೇವಿಸ ರೇಸ, ಡಾ// ಕೃಷ್ಣರಾವ್ ಅವರು ಕನ್ನಡ ಕುಲದ ಮಕ್ಕಳೆಂದು ತಿಳಿಸಿದ್ದಾರೆ.
- ಸ್ಥಾಪಕ : ದಡಿಗ & 'ಮಾದವ' (ಕೊಂಕಣಿವರ್ಮ) ಇವರಿಗೆ 'ಸಿಂಹನಂದಿ' ಎಂಬ ಜೈನ ಮುನಿ ಸಹಾಯ ಮಾಡಿದ.
- ಲಾಂಛನ : ಮದಗಜ

## ದಡಿಗ (ಕ್ರಿ.ಶ 350–380) :

1. ದಡಿಗ ಗಂಗ ವಂಶದ ಸ್ಥಾಪಕ, ಕುವಲಾಲ (ಕೋಲಾರ) ಇವರ ರಾಜಧಾನಿ.
2. ಇವನು ತನ್ನ ಜೈನಗುರು ಸಿಂಹನಂದಿಯ ಇಚ್ಛೆಯ ಮೇರೆಗೆ ಶಿವಮೊಗ್ಗ ಜಿಲ್ಲೆಯ ಮಂಡಲಿಯಲ್ಲಿ ಒಂದು ಚೈತ್ಯವನ್ನು ನಿರ್ಮಿಸಿದನು.
3. ಬೃಹತ ಬಾಣರನ್ನು ಸೋಲಿಸಿ 'ಬಾಣವಂಶವನದಾವಾನೆಲ' ಎಂಬ ಬಿರುದನ್ನು & 'ಧರ್ಮಮಹಾರಾಜ' ಎಂಬ ಬಿರುದನ್ನು ಪಡೆದಿದ್ದನು.



downloaded from: www.kpscvaani.com

## ಒಂದನೇ ಮಾಧವ (ಕ್ರಿ.ಶ 380–435) :

- ದಡಿಗನ ಮಗನದ ಈತ ಸ್ವತಃ ವಿದ್ವಾಂಸನಾಗಿದ್ದು ದತ್ತ ಸೂತ್ರ ಭಾಷ್ಯವನ್ನು ರಚಿಸಿದ್ದಾನೆ.
- ನಂತರ ಇವನ ಮಕ್ಕಳಾದ ಹರಿವರ್ಮ, 2ನೇ ಮಾಧವರು 3ನೇ ಮಾಧವ (ಕ್ರಿ.ಶ 460–540)ವರೆಗೆ ಆಳಿದರು.

## ಅವನೀತ (ಕ್ರಿ.ಶ 500–540) :

- 3ನೇ ಮಾಧವನ ಮಗನಾದ ಈತ ಸರ್ವಧರ್ಮ ಸಮನ್ವಯತೆಯನ್ನು ಸಾಧಿಸಿದ್ದನು. ಆದ್ದರಿಂದ ಶಾಸನಗಳು ಇವನನ್ನು 'ಹರ ಹರಚರಣಾರವಿಂದ ಪ್ರಣಿಪಾತ' ಎಂಬುದಾಗಿ ಉಲ್ಲೇಖಿಸಿವೆ.
- ವಿಜಯ ಕೀರ್ತಿ ಎಂಬ ಜೈನಮನಿ ಇವನ ಗುರುವಾಗಿದ್ದನು.
- ಇವನು ಪೋನ್ನಾಟ್ ಸ್ಕಂದವರ್ಮನ ಮಗಳು ಜೇಷ್ಟದೇವಿಯನ್ನು ವಿವಾಹವಾದನು.

## ದುರ್ವಿನೀತ :

- ಗಂಗ ಅರಸರಲ್ಲಿಯೇ ದುರ್ವಿನೀತನು ಅಪ್ರತಿಮ ವೀರ, ಕಲಾಭಿಜ್ಞ & ಘನ ವಿದ್ವಾಂಸನಾಗಿದ್ದನು.
- ಇವನು ಪೊನ್ನಾಟದ ಸ್ಕಂದವರ್ಮನ ಮಗಳಾದ ಜೇಷ್ಟದೇವಿಯ ಮಗನಾಗಿದ್ದು ಸ್ಕಂದವರ್ಮನ ಮರಣಾ ನಂತರ ಪೊನ್ನಾಟವು ಇವನ ಕೈ ಸೇರಿತು.
- ಇವನು ವೈಷ್ಣವ ಮತವಲಂಬಿಯಾಗಿದ್ದು ಎಲ್ಲಾ ಧರ್ಮಗಳನ್ನು ಪೋಷಿಸಿದ್ದನು.
- ಇವನು ಗುರು ಪೂಜ್ಯಪಾದ (ದೇವನಂದಿ) ಎಂಬುವವರು.
- ಇವನು ಪಲ್ಲವರನ್ನು ಸೋಲಿಸಿದ್ದನು.
- ಘನ ವಿದ್ವಾಂಸನಾದ ಈತ ಗುಣಾಢ್ಯನ ಬೃಹತ್ ಕಥಾವನ್ನು ಸಂಸ್ಕೃತಕ್ಕೆ ಭಾಷಾಂತರಿಸಿದ್ದಾನೆ.
- ಭಾರವೀಯ 'ಕಿರಾತಾರ್ಜುನೀಯ' 15ನೇ ಮಂಡಲವನ್ನು ಕುರಿತು ಭಾಷ್ಯವನ್ನು ಬರೆದಿದ್ದಾನೆ. ಪ್ರಾಕೃತ 'ವಡ್ಡಾಕತಾ'ವನ್ನು ಸಂಸ್ಕೃತಕ್ಕೆ ಭಾಷಾಂತರಿಸಿದ್ದಾನೆ.
- ದುರ್ವಿನೀತನು ಸ್ವತಃ ಹೆಬ್ಬಾಟೆ ಮಲ್ಲೊಲಹಳ್ಳಿ ಗುಮ್ಮರೆಡ್ಡಿಪುರ ಉತ್ತನೂರು ಶಾಸನಗಳನ್ನು ಹೊರಡಿಸಿದ್ದಾನೆ.



downloaded from: www.kpscvaani.com

## ಬಿರುದು :

- 'ಅವನೀತೇಶ್ವರ ಪ್ರಜ್ವಲ' 'ಅಹೀತ ಅನೀತ' 'ಕಮಲೋಧರ' & 'ಧರ್ಮಮಹಾರಾಜ' ಎಂಬ ಬಿರುದನ್ನು ಪಡೆದಿರುವನು.
- ದುರ್ವಿನೀತನ ನಂತರ ಅವನ ಮಗ ಮುಷ್ಕರ ಪೋಲವೀರ, ಶ್ರೀವಿಕ್ರಮ & ಭೂವಿಕ್ರಮ ಕ್ರಿ.ಶ 605–679ವರೆಗೆ ಆಳಿದನು.
- 1ನೇ ಶಿವಕುಮಾರನು (ಕ್ರಿ.ಶ 679–720) ವರೆಗೆ ಆಳಿದನು. ಇವನಿಗೆ 'ಅವನೀ ಮಹೇಂದ್ರ' ಎಂಬ ಬಿರುದಿತ್ತು.

## ಶ್ರೀ ಪುರುಷ (ಕ್ರಿ.ಶ. 726–788) :

- ಇವನು ಒಂದನೇ ಶಿವಕುಮಾರ ಮೊಮ್ಮಗ.
- ಶ್ರೀ ಪುರುಷನು ತನ್ನ ರಾಜಧಾನಿಯನ್ನು ಮಾಕುಂದದಿಂದ ಮನೆಗೆ ವರ್ಗಾಯಿಸಿದ.
- ಶ್ರೀ ಪುರುಷನು ಗಜಶಾಸ್ತ್ರದಲ್ಲಿ ಪ್ರವೀಣಾನಾಗಿದ್ದು 'ಗಜಶಾಸ್ತ್ರ'ವನ್ನು ಬರೆದಿರುವನು.
- ಇವನು ಜೈನ ಧರ್ಮಿಯನಾಗಿದ್ದು ಇತರೆ ಧರ್ಮಗಳನ್ನು ಪೋಷಿಸಿದ್ದನು.
- ಬಿರುದುಗಳು : ರಾಜಕೇಸರಿ, ಪೆರ್ಮಾಡಿ, ಶ್ರೀವಲ್ಲಭ, ಭೀಮಕೋಪ ಎಂಬ ಬಿರುದುಗಳಾಗಿದ್ದವು.

## 2ನೇ ಶಿವಕುಮಾರ :

- ಆಡಳಿತ ಪ್ರತಿಭೆಯಿಲ್ಲದ ಇವನು ಘನವಿದ್ವಾಂಸನಾಗಿದ್ದು ಸಾಂಸ್ಕೃತಿಕ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆಗಳನ್ನು ಮಾಡಿದ್ದಾನೆ.
- ಜೈನ ಧರ್ಮದ ಪೋಷಕನಾಗಿದ್ದು ಇವನು ಶ್ರವಣಬೆಳಗೋಳದಲ್ಲಿ ಜೈನ ಬಸದಿಯನ್ನು ನಿರ್ಮಿಸಿದ್ದಾನೆ.
- ಇವನ ಪ್ರಮುಖ ಕೃತಿಗಳೆಂದರೆ : ಗಜಾಷ್ಟಕ (ಕನ್ನಡ ಭಾಷೆ), ಸೇತುಬಂಧ, ಶಿವಕುಮಾರ ತರ್ಕ.
- ಇವನು ಸಲ್ಲೇಖನ ವ್ರತಗಳನ್ನು ಆಚರಿಸಿದ್ದನು.

## ಎರೆಯಪ್ಪ ಅಥವಾ ಎರೆಯಂಗ :

- ಇವನು ನೊಳಂಬಾಡಿಯು ಮಹೇಂದ್ರನನ್ನು ಸೋಲಿಸಿ 'ಮಹೇಂದ್ರಾಂತಕ' ಎಂಬ ಬಿರುದು ಪಡೆದ.



downloaded from: www.kpscvaani.com

- ಇವನ ಮರಣದ ಮೇಲೆ ಬೆಳಕು ಚೆಲ್ಲುವ ಶಾಸನವೊಂದು ಬೆಂಗಳೂರಿನ ಮ್ಯೂಜಿಯಂನಲ್ಲಿದೆ. ಎರೆಯಪ್ಪನ ಮರಣವಾರ್ತೆ ಕೇಳಿದ ಅವನ ನಿಷ್ಠ ಸೇವಕ ಅರಗಯ್ಯ ತಾನು 'ಕೀಳ್ಗುಂಕಿ'ಯಾಗಿ ಪ್ರಾಣತ್ಯಾಗ ಮಾಡಿರುವುದು ಈ ಶಾಸನದಲ್ಲಿದೆ.
- ಇವನು ರಾಷ್ಟ್ರಕೂಟರ ಅಮೋಘವರ್ಷನನ್ನು ಸೋಲಿಸಿದ.
- ಗಂಗ ಗಂಗೇಯ 'ನನ್ನೀಯ ಗಂಗೇಯ'ನೆಂಬುದು ಎರಡನೇ ಬೂತುಗನ ಬಿರುದಾಗಿತ್ತು.

## ಚಾವುಂಡರಾಯ :

- ಇವನು ಎರಡನೇ ಮಾರಸಿಂಹ & ನಾಲ್ಕನೇ ರಾಚಮಲ್ಲನ ಮಂತ್ರಿ & ಮಹಾದಂಡನಾಯಕನಾಗಿದ್ದನು.
- ಇವನ ಸಮರ ಪ್ರಾವೀಣ್ಯತೆಯನ್ನು ಮೆಚ್ಚಿ ರಾಚಮಲ್ಲ ಇವನಿಗೆ ಸಮರ ಪರಶುರಾಮ, ವೀರ ಮಾರ್ತಾಂಡ & ರಣರಂಗ ಸಿಂಹ ಎಂಬ ಬಿರುದನ್ನು ನೀಡಿದ್ದನು.
- ಇವನ ಪ್ರಾಮಾಣಿಕ ಸೇವೆಯನ್ನು ಮೆಚ್ಚಿದರಾಯ & ಸತ್ಯೆಯುದಿಷ್ಟ, ಭುಜವಿಕ್ರಮ, ಸಮರಧರಂಧುರ ಎಂಬ ಬಿರುದನ್ನು ಪಡೆದಿದ್ದರು.
- ಸ್ವತಃ ಕವಿಯಾದ ಈತ 24 ತೀರ್ಥಂಕರ ಚರಿತ್ರೆಯಾದ ಚಾವುಂಡರಾಯ ಪುರಾಣವನ್ನು (ಕನ್ನಡ) & ಚರಿತ್ರಾ ಸಾರವನ್ನು (ಸಂಸ್ಕೃತದಲ್ಲಿ) & ತನ್ನ ಗುರು ನೇಮಿಚಂದ್ರರಿಂದ ರಚಿತವಾದ ಗೊಮ್ಮಟಸಾರಕ್ಕೆ ಭಾಷ್ಯವನ್ನು ಬರೆದನು.
- ಕನ್ನಡದ ಪ್ರಸಿದ್ಧ ಕವಿಗಳಾದ ಗುಣವರ್ಮ & ರನ್ನರು ಈತನ ಸಮಕಾಲೀನರು.
- ಇವನ ಅದ್ಭುತ ಸಾಧನೆಯಿಂದಲೇ ಶ್ರವಣಬೆಳಗೊಳದಲ್ಲಿ ಜಗತ್ ಪ್ರಸಿದ್ಧವಾದ ಏಕಾಶಿಲಾಕೃತಿ 58 ಅಡಿ ಎತ್ತರದ ಗೊಮ್ಮಟೇಶ್ವರ ವಿಗ್ರಹದ ನಿರ್ಮಾಣವಾಯಿತು. (ಅರಿಷ್ಟಾನೇಮಿ ಇದನ್ನು ಕೆತ್ತಿದ ಶಿಲ್ಪಿ)
- ಕ್ರಿ.ಶ. 981–983ರಲ್ಲಿ ಮಹಾಮಸ್ತಾಭಿಷೇಕವನ್ನು ಮಾಡಿಸಿದರು.
- ಇವನು ಶ್ರವಣಬೆಳಗೊಳದಲ್ಲಿ ಚಾವುಂಡರಾಯ ಬಸದಿಯನ್ನು ನಿರ್ಮಿಸಿದನು.

## ಗಂಗರ ಆಡಳಿತ ಪದ್ಧತಿ :

- ಗಂಗರ ಆಡಳಿತ ಕದಂಬರ ಆಡಳಿತವನ್ನು ಆಧರಿಸಿತ್ತು.
- ರಾಜನ ನೆರವಿಗೆ ಮಂತ್ರಿಮಂಡಲವಿತ್ತು. ಪ್ರಮುಖ ಅಧಿಕಾರಿಗಳೆಂದರೆ :
  - ಸರ್ವಾಧಿಕಾರಿ – (ಪ್ರಧಾನಮಂತ್ರಿ)



downloaded from: www.kpscvaani.com

- o ಸಂಧಿವಿಗ್ರಹಿ – (ವಿದೇಶಾಂಗ ಮಂತ್ರಿ)
- o ದಂಡನಾಯಕ – (ಸೈನ್ಯದ ಮುಖ್ಯಸ್ಥ)
- o ಹಿರಿಯ ಬಂಡಾರಿ – (ಖಜಾನೆ ಅಧಿಕಾರಿ)
- o ಮಹಾಪಸಾಯಿಕಿ – (ರಾಜನ ಉಡುಪುಗಳ ಮೇಲುಸ್ತುವಾರಿ)
- o ಮನೆವರ್ಗಡೆ – (ಅರಮನೆ ಮೇಲ್ವಿಚಾರಕ)
- o ಶ್ರೀಕರಣಿಕ – (ಲೆಕ್ಕ ಪತ್ರ ವಿಭಾಗ)
- o ರಾಜ ಪುರೋಹಿತ – (ಧಾರ್ಮಿಕ ವ್ಯವಹಾರ ಮುಖಂಡ)

- ಸಾಮ್ರಾಜ್ಯವನ್ನು ಆಡಳಿತದ ಅನುಕೂಲಕ್ಕಾಗಿ ಮತ್ತೆ ವಿಂಗಡಿಸಲಾಗಿತ್ತು
  - o ಪ್ರಾಂತ್ಯ – ಪ್ರಾಂತ್ಯಾಧಿಕಾರಿ
  - o ವಿಷಯ – ವಿಷಯಪತಿ
  - o ಕಂಪನ – ಹೆಗ್ಗಡೆ (ನಾಡಗೌಡ)
  - o ನಗರ – ನಾಗರೀಕನಿಗೆ
  - o ಗ್ರಾಮಾಡಳಿತ – ಗೌಡ (ಕರಣಿಕ)
  - o ನ್ಯಾಯಾಢಳಿತ – ರಾಜನೇ ಸರ್ವೋಚ್ಚ ದಂಡನಾಧಿಕಾರಿ ಸತ್ಯಯುದಿಷ್ಟರ ಎಂಬುದು ಅವನ ಬಿರುದು.
  - o ಸೇನಾಡಳಿತ – ದಂಡನಾಯಕನು ಸೈನ್ಯದ ಮುಖ್ಯಸ್ಥನಾಗಿದ್ದನು. ಸೈನ್ಯವು ಕಾಲುಪಡೆ, ಅಶ್ವಪಡೆ, ಗಜಪಡೆ & ರಥಪಡೆಯನ್ನು ಹೊಂದಿತ್ತು.

## ಆರ್ಥಿಕ ಸ್ಥಿತಿ :

- ಭೂಕಂದಾಯ ರಾಜ್ಯದ ಮೂಲಾದಾಯವಾಗಿದ್ದು, ಭೂಮಾಪನ ಮಾಡಿ ಕಂದಾಯ ನಿಗದಿಪಡಿಸಲಾಗಿತ್ತು. (ಶೇ.1ರಷ್ಟು)
- ಯುದ್ಧ & ಗಂಡಾಂತರದ ವೇಳೆ ಕಂದಾಯವನ್ನು ಶೇ.6ಕ್ಕೆ ಹೆಚ್ಚಿಸುತ್ತಿದ್ದರು.

## ನಾಣ್ಯಗಳು :

- ಗಂಗರ ನಾಣ್ಯ ಗಜ & ಹೂ-ಬಳ್ಳಿ ಚಿತ್ರಗಳನ್ನು ಹೊಂದಿತ್ತು.
- ಪೊನ್ನ ಸುವರ್ಣ, ಗದ್ಯಾಣ, ನಿಷ್ಕ – ಚಿನ್ನದ ನಾಣ್ಯಗಳು.




downloaded from: www.kpscvaani.com

- ಪಣ, ಹಣ, ಕಾಸು – ಬೆಳ್ಳಿಯ ನಾಣ್ಯಗಳು
- ಕೊಡೆವನ, ದ್ರಮ್ಮ ಇತರ ನಾಣ್ಯಗಳು.

## ಸಾಮಾಜಿಕ ಪದ್ಧತಿ :

- ಗಂಗ ಅರಸರ ಕಾಲದಲ್ಲಿ ಚತುರ್ವರ್ಣ & ಅವಿಭಕ್ತ ಕುಟುಂಬಗಳಿಂದ ಕೂಡಿದ್ದು ಅನೇಕ ಜಾತಿ ಉಪಜಾತಿಗಳಿದ್ದವು.
- ಅಂತರಜಾತಿ ವಿವಾಹವು ರೂಢಿಯಲ್ಲಿತ್ತು.
- ಬಹುಪತ್ನಿತ್ವ, ಸತಿಸಹಗಮನ ರಾಜಮನೆತನದಲ್ಲಿ ರೂಢಿಯಲ್ಲಿದ್ದವು.
- ಗರುಡ ಪದ್ಧತಿ : ರಾಜರ ಬಗ್ಗೆ ಪ್ರದರ್ಶಿಸಲು ಸ್ವಾಮಿನಿಷ್ಠೆ ಪ್ರಾಣತ್ಯಾಗ ಮಾಡುವುದು ಆಚರಣೆಯಲ್ಲಿತ್ತು. (ಅಸಂಗಯ್ಯ ನೀತಿಮಾರ್ಗನಿಗಾಗಿ ಪ್ರಾಣತ್ಯಾಗ ಮಾಡಿದ್ದ).

## ಧರ್ಮ :

- ಜೈನ ಧರ್ಮವು ಪ್ರಸಿದ್ಧವಾಗಿತ್ತು. ಗಂಗರು ನಿಷ್ಠಾವಂತ ಜೈನರಾಗಿದ್ದರೂ ಸರ್ವಧರ್ಮ ಸಮನ್ವಯತೆಯನ್ನು ಸಾಧಿಸಿದ್ದರು.
- ಜೈನ ಕಾಶೀ ಎಂದೇ ಹೆಸರಾದ ಶ್ರವಣಬೆಳಗೊಳವು ಅಂದಿನ ಜೈನ ಯಾತ್ರಾ ಸ್ಥಳವಾಗಿತ್ತು.

## ಸಾಹಿತ್ಯ :

- ಗಂಗರ ಪೋಷಣೆಯಲ್ಲಿ ಪ್ರಾಕೃತ, ಸಂಸ್ಕೃತ & ಕನ್ನಡ ಭಾಷೆಗಳಲ್ಲಿ ವಿಪುಲವಾದ ಸಾಹಿತ್ಯ ಸೃಷ್ಟಿಯಾಗಿತ್ತು.
- 2ನೇ ಮಾದವ – ದತ್ತಕ ಸೂತ್ರವೃತ್ತಿ
- ಗುಣವರ್ಮ – ಶೂದ್ರಕ, ಹರಿವಂಶ
- 1ನೇ ನಾಗವರ್ಮ – ಛಂದೋಂಬುಧಿ
- 2ನೇ ಶಿವಕುಮಾರ – ಗಜಾಷ್ಟಕ, ಸೇತುಬಂಧ, ಶಿವಮಾರತರ್ಕ
- ವೀರನಂದಿ – ಚಂದ್ರಪ್ರಭಾ ಪುರಾಣ



downloaded from: www.kpscvaani.com

- ದುರ್ವಿನೀತ – 1. ಗುಣಾಢ್ಯನ ಬೃಹತ್ ಕಥಾವನ್ನು (ಪೈಶಾಚದಿಂದ ಸಂಸ್ಕೃತಕ್ಕೆ ಭಾಷಾಂತರ)
  2. ಭಾರವೀಯ ಕಿರಾತಾರ್ಜುನೀಯದ 15ನೇ ಮಂಡಲಿಗೆ ಭಾಷೆ ಬರೆದನು.
- ಪೂಜ್ಯಪಾದ – ಜೈನಾಭಿಷೇಕ, ಸಮಾಧಿ ಶತಕ, ಸರ್ವಾರ್ಥಸಿದ್ಧಿ, ಶಬ್ದಾವತಾರ ಜೈನೇಂದ್ರ, ವ್ಯಾಕರಣಗಳು (ದೇವನಂದಿ)
- ಶ್ರೀಪುರುಷ – ಗಜಶಾಸ್ತ್ರ
- ಹೇಮಸೇನ – ರಾಘವ ಪಾಂಡವೀಯ
- ನೇಮಚಂದ್ರ – ತ್ರಿಲೋಕಸಾರ, ದ್ರವ್ಯಾಸಾರ ಸಂಗ್ರಹ
- ಅಸಗ – ವರ್ಧಮಾನ ಪುರಾಣ
- ವಾಧಭಸಿಂಹ – ಗಧ್ಯಚಿಂತಾಮಣಿ, ಕ್ಷಾತ್ರ ಚೂಡಾಮಣಿ
- ಚಾವುಂಡರಾಯ – ಚಾವುಂಡರಾಯ ಪುರಾಣ, ಚರಿತ್ರಸಾರ

## ಕಲೆ & ವಾಸ್ತುಶಿಲ್ಪ :

- ಗಂಗರು ಕಲಾಭಿಮಾನಿಗಳು ಅವರ ವಾಸ್ತುಶಿಲ್ಪವು ಪಲ್ಲವ & ಕದಂಬರ ಮಿಶ್ರಣವಾಗಿದೆ.
- ಕಂಬಗಳ ಅಡಿಯಲ್ಲಿ ಸಿಂಹಗಳ ಕೆತ್ತನೆ, ಪಿರಾಮಿಡ್ಡಿನಾಕೃತಿಯ ಶಿಖರ & ಚಚ್ಚಕಾರದ ಕಂಬಗಳ ಕೆತ್ತನೆ ಅವರ ಶೈಲಿಯ ಮುಖ್ಯ ಲಕ್ಷಣಗಳಾಗಿದ್ದವು.
- ಮಣ್ಣೆಯಲ್ಲಿರುವ ಕಪಿಲೇಶ್ವರ ದೇವಸ್ಥಾನ, ತಲಕಾಡಿನ ಪಾತಳೇಶ್ವರ & ಮರಳೇಶ್ವರ, ಕೋಲಾರದ ಕೋಲಾರಮ್ಮ, ಬೇಗೂರಿನ ನಾಗರೇಶ್ವರ, ಶ್ರವಣಬೆಳಗೊಳದ ಗೊಮ್ಮಟೇಶ್ವರ ಮುಂತಾದವು.

## ದೇವಾಲಯಗಳು :

- ಮಾನ್ಯಪುರದ – ಕಡಲೇಶ್ವರ, ಆರ್ಕೇಶ್ವರ, ಪಾತಳೇಶ್ವರ, ಸೋಮೇಶ್ವರ.
- ವರುಣದ – ಮಹಾಲಿಂಗೇಶ್ವರ
- ಸಿಟಿ ಆಫ್ ಟೆಂಪಲ್ಸ್ – ಆರ್ಕೇಶ್ವರ, ಪಾತಾಳೇಶ್ವರ, ಮರುಳೇಶ್ವರ
- ಬೇಗೂರಿನ – ನಾಗರೇಶ್ವರ






downloaded from: www.kpscvaani.com

- ಅರಳಗುಪ್ಪೆಯ – ಕಲ್ಲೇಶ್ವರ ದೇವಾಲಯ
- ಕೋಲಾರದ –ಕೋಲಾರಮ್ಮ ದೇವಾಲಯ
- ನಂದಿಯ – ಭೋಗನಂದೀಶ್ವರ ದೇವಾಲಯ
- ನರಸಮಂಗಲದ – ಶಿವ & ವಿಷ್ಣು ದೇವಾಲಯ

## ಬಸದಿಗಳು :

- ಶ್ರವಣ ಬೆಳಗೊಳದ ಚಂದ್ರಗಿರಿ ಬೆಟ್ಟದಲ್ಲಿ 14 ಬಸದಿಗಳಿವೆ. ಅವುಗಳಲ್ಲಿ ಚಂದ್ರಪ್ರಭಾ ಬಸದಿ, ಪಾರ್ಶ್ವನಾಥ ಬಸದಿ & ಚಾವುಂಡರಾಯ ನಿರ್ಮಿಸಿದ 2 ಅಂತಸ್ತಿನ ಚಾವುಂಡರಾಯ ಬಸದಿ ಕಂಬರಹಳ್ಳಿಯಲ್ಲಿ ಪಂಚಕೂಟ ಜೈನ ಬಸದಿಗಳಿವೆ,
- ಸ್ಥಂಭಗಳು : ಗಂಗಾ ಪಿಲ್ಲರ್ಸ್ ಎಂದೇ ಪ್ರಸಿದ್ದವಾಗಿದೆ. ಶ್ರವಣಬೆಳಗೊಳದಲ್ಲಿ ಮಾನಸ್ಥಂಭ ಬ್ರಹ್ಮದೇವರ ಸ್ಥಂಭ 20 ಅಡಿ ಎತ್ತರ ಇದೆ.

## ಶಿಲ್ಪಕಲೆ :

- ಶಿಲ್ಪಕಲಾ ಕ್ಷೇತ್ರದಲ್ಲೂ ಗಂಗರು ಪ್ರಾವೀಣ್ಯತೆಯನ್ನು ಮೆರೆದಿದ್ದಾರೆ. ಶ್ರವಣಬೆಳಗೊಳದಲ್ಲಿ ಕೆತ್ತಿರುವ 58 ಅಡಿ ಎತ್ತರದ ಗೊಮ್ಮಟೇಶ್ವರ ವಿಗ್ರಹವು ಬೃಹತ್ ಏಕಾಶಿಲಾಕೃತಿಯಾಗಿದ್ದು, ಜಗತ್ಪ್ರಸಿದ್ದವಾದ ವಿಗ್ರಹವಾಗಿದೆ.
- ಗೊಮ್ಮಟೇಶ್ವರ ವಿಗ್ರಹದ ನಿರ್ಮಾತೃ – ಚಾವುಂಡರಾಯ ಕಾಲ ಕ್ರಿ.ಶ 981, ಶಿಲ್ಪಿ ಅರಿಷ್ಟನೇಮಿ.
- ಸಂಗೀತ & ನೃತ್ಯದಲ್ಲಿ – ಬಾಚಲದೇವಿ ಪ್ರಸಿದ್ದಿಯಾಗಿದ್ದು ನೃತ್ಯವಿಶಾರದ ಎಂಬ ಬಿರುದು ಪಡೆದಿದ್ದಳು.

## ಗಂಗರ ಶಾಸನಗಳು :

ಕೋಲಾರ ಜಿಲ್ಲೆಯ ಮಲ್ಲೋಹಳ್ಳಿ ಗುಮ್ಮರೆಡ್ಡಿಹಳ್ಳಿ, ಉತ್ತನೂರು ಮುಂತಾದ ಕಡೆಗಳಲ್ಲಿ ಗಂಗರ ಶಾಸನಗಳು ದೊರೆತಿವೆ. ಅವು ಸಮಕಾಲೀನ ಇತಿಹಾಸದ ಬಗ್ಗೆ ಮಾಹಿತಿಗಳನ್ನು ನೀಡುತ್ತವೆ. ಗಂಗರ ಕಾಲದ ವೀರಗಲ್ಲುಗಳು ಕೂಡ ಇತಿಹಾಸಕ್ಕೆ ಮಹತ್ವದ ಆಧಾರಗಳಾಗಿವೆ. ನಲ್ಲಲ ಶಾಸನವು ದುರ್ವಿನೀತನು ಅನೇಕ ಶಾಸ್ತ್ರಗಳಲ್ಲಿ ಪಾರಂಗತನಾಗಿದ್ದನೆಂದು ತಿಳಿಸುತ್ತದೆ.



GNANADHARE IAS ACADEMY

downloaded from: www.kpscvaani.com

## ಬಾದಾಮಿ ಚಾಲುಕ್ಯರು (ಕ್ರಿ.ಶ 500–757) :




- ರಾಜಧಾನಿ – ಬಾದಾಮಿ (ವಾತಾಪಿ ಜಿಲ್ಲೆ).
- ಕರ್ನಾಟಕದಲ್ಲಿ ತಮ್ಮ ಸಾರ್ವಭೌಮಾಧಿಕಾರವನ್ನು ಸ್ಥಾಪಿಸಿ ಸುಮಾರು 2 ಶತಮಾನಗಳ ಕಾಲ ಅಪಾರ ವೈಭವದಿಂದ ರಾಜ್ಯಭಾರ ಮಾಡಿದರು.
- ಸ್ಥಾಪಕ – ಜಯಸಿಂಹ ಕದಂಬರ ಸಾಮಾಂತನಾಗಿದ್ದನು. 1ನೇ ಪುಲಕೇಶಿ ಮೊದಲ ಸ್ವತಂತ್ರ ಬಾದಾಮಿ ಚಾಲುಕ್ಯ ಅರಸ.
- ಲಾಂಛನ – ವರಾಹ
- ನಾಣ್ಯಗಳು – ವರಹ & ಗದ್ಯಾಣ, ಇವುಗಳ ಮೇಲೆ ದೇವನಾಗರಿ & ಕನ್ನಡ ಲಿಪಿ ಇದೆ.

## 2ನೇ ತೈಲ :

- ತೈಲ ಎಂಬುದು ತ್ರೈಲೋಕ್ಯಮಲ್ಲ ಎಂಬುದರ ರೂಪ.
- ಅಹವಮಲ್ಲ ಎಂಬ ಬಿರುದೂ ಆತನಿಗೆ ಇತ್ತು
- ದಕ್ಷಿಣದ ಕೊಂಕಣದ ಶಿಲಾಹಾರನನ್ನು ತನ್ನ ಮಾಂಡಲಿಕರನ್ನಾಗಿ ತೈಲನು ಮಾಡಿಕೊಂಡನಲ್ಲದೇ ಚೋಳ ಉತ್ತಮನನ್ನು ಸೋಲಿಸಿದ.
- ಗುಜರಾತಿನಲ್ಲಿ ಆಳುತ್ತಿದ್ದ ಚಾಲುಕ್ಯ ವಂಶದ ಮಾಂಡಲಿಕನಿಗೆ ಚಾಲುಕ್ಯ ಮೂಲ ರಾಜನಿಂದ ತೊಂದರೆಯಾಗಲು, ಮೂಲ ರಾಜನನ್ನು ತೈಲನು ಸೋಲಿಸಿದ್ದರಿಂದ 'ಗೂರ್ಜರ ಭಯಜ್ವರ' ಎಂಬ ಬಿರುದು ಪಡೆದನು.
- ಇವನ ರಾಜ್ಯವನ್ನು ಚೋಳರು ರಟ್ಟಪಾಡಿ ಏಳೂಕಾಲು ಲಕ್ಷವೆಂದು ಕರೆದಿದ್ದಾರೆ.
- 24 ವರ್ಷ ಈತನು ಆಳಿದನೆಂದು ಗದಗು ಶಾಸನ ಹೇಳಿದ್ದು 997ರವರೆಗೆ ಇವನು ಆಳಿದ.



downloaded from: www.kpscvaani.com

## ಒಂದನೇ ಪುಲಕೇಶಿ (ಕ್ರಿ.ಶ 547–566) :

- ಒಂದನೇ ಪುಲಕೇಶಿಯನ್ನು ಚಾಲುಕ್ಯ ವಂಶದ ನಿಜವಾದ ಸ್ಥಾಪಕನೆಂದು ಕರೆಯಲಾಗಿದೆ.
- ಕದಂಬರನ್ನು ಸೋಲಿಸುವುದರ ಮೂಲಕ ಸ್ವತಂತ್ರ ಆಡಳಿತ ಆರಂಭಿಸಿದ.
- ಇವನನ್ನು ಮಹಾಕೂಟ ಸ್ತಂಭ ಶಾಸನದಲ್ಲಿ 'ಪ್ರಿಯತನಜ' ಎಂದು ವರ್ಣಿಸಲಾಗಿದೆ. ದುರ್ಲಭಾದೇವಿ ಇವನ ಹೆಂಡತಿ, ಕೀರ್ತಿವರ್ಮ & ಮಂಗಳೇಶ ಇವನ ಇಬ್ಬರು ಮಕ್ಕಳು.

## ಒಂದನೇ ಕೀರ್ತಿವರ್ಮ (ಕ್ರಿ.ಶ 566–596) :

- ಇವನು ಬಾದಾಮಿಯಲ್ಲಿ ವಿಷ್ಣು ಗುಹಾಲಯವನ್ನು ನಿರ್ಮಿಸಿದನು.
- ಇವನಿಗೆ ಸತ್ಯಾಶ್ರಯ, ಶ್ರೀವಲ್ಲಭ ಎಂಬ ಬಿರುದುಗಳಿದ್ದವು.
- ಇವನನ್ನು ಪ್ರಥಮ ವಾತಾಪಿಯ ನಿರ್ಮಾಪಕನೆಂದು ಕರೆಯಲಾಗಿದೆ.

## ಮಂಗಳೇಶ (ಕ್ರಿ.ಶ 519–609) :

- ಪುಲಿಕೇಶಿ ಅಪ್ರಾಪ್ತನಾದ್ದರಿಂದ ಈತನೇ ಅಧಿಕಾರಕ್ಕೆ ಬಂದನು.
- ವಿಷ್ಣು ಭಕ್ತನಾದ ಇವನಿಗೆ ಪರಮಭಾಗವತ, ಪೃಥ್ವಿವಲ್ಲಭ, ರಣವಿಕ್ರಮ ಎಂಬ ಬಿರುದುಗಳಿದ್ದವು.
- ಮಹಾಕೂಟದಲ್ಲಿ ಮಹಾಕೋಟೇಶ್ವರ ಆಲಯ & ಮಹಾಕೂಟ ಸ್ತಂಭ ಶಾಸನ ನಿರ್ಮಿಸಿದ್ದನು.
- ಇವನನ್ನು ಚಾಲುಕ್ಯ ಕಲೆಯ ಪಿತಾಮಹ ಎಂದು ಕರೆಯಲಾಗಿದೆ.
- ಮಂಗಳೇಶ ಬಾದಾಮಿಯಲ್ಲಿ ವೈಷ್ಣವ ಗುಹಾಲಯ ನಿರ್ಮಿಸಿದ.

## ಇಮ್ಮಡಿ ಪುಲಿಕೇಶಿ (ಕ್ರಿ.ಶ 609–642) :

- ಇವನೊಬ್ಬ ಚಾಲುಕ್ಯರ ಪ್ರಸಿದ್ಧ ದೊರೆ.
- ಗಂಗರು, ಕದಂಬರು & ಅಳುಪರನ್ನು ಗೆದ್ದು, ಈತನು ತನ್ನ ಚಕ್ರಾಧಿಪತ್ಯವನ್ನು ವಿಸ್ತರಿಸಿದನು.
- ಇವನ ಅಡಳಿತ & ಸಾಧನೆಗಳನ್ನು ತಿಳಿದುಕೊಳ್ಳಲು ಐಹೊಳೆ ಶಾಸನ & ಹ್ಯೂಯನ್‌ತ್ಸಾಂಗ್‌ನ ಬರವಣಿಗೆಗಳು ನೆರವಾದವು.



GNANADHARE IAS ACADEMY
downloaded from: www.kpscvaani.com

- ಇವನ ಆಸ್ಥಾನದ ಕವಿ **ರವಿಕೀರ್ತಿ**ಯು ಮೇಗುತಿಯ ದೇವಾಲಯದ ಗೋಡೆಯ ಮೇಲೆ ಸಂಸ್ಕೃತದಲ್ಲಿ **ಐಹೊಳೆ ಶಾಸನ**ವನ್ನು ಕೆತ್ತಿಸಿದನು.
- ರವಿಕೀರ್ತಿಯು ಮೇಗುತಿಯ ಜೀನಾಲಯದ ನಿರ್ಮಾತೃ.
- ಇಮ್ಮಡಿ ಪುಲಕೇಶಿಗೆ ತನ್ನ ಚಕ್ರಾಧಿಪತ್ಯವೆಲ್ಲವನ್ನೂ ಒಂದೇ ಕೇಂದ್ರದಿಂದ ಆಳಲು ಸಾಧ್ಯವಾಗಲಿಲ್ಲ. ಆದುದರಿಂದ ತನ್ನ ತಮ್ಮನಾದ ಕುಬ್ಜ ವಿಷ್ಣುವರ್ಧನ ವೆಂಗಿ & ಜಯಸಿಂಹನನ್ನು ಪ್ರಾಂತ್ಯದ ಆಧಿಕಾರಿಗಳನ್ನಾಗಿ ನೇಮಿಸಿದನು.

## ಪುಲಕೇಶಿಯ ದಿಗ್ವಿಜಯಗಳು :

- ರಾಜ್ಯದ ಸಿಂಹಾಸನಕ್ಕಾಗಿ ಮಂಗಳೇಶನೊಡನೆ ಯುದ್ಧ.
- ರಾಷ್ಟ್ರಕೂಟರ ಅಪ್ಪಾಯಿಕ & ಗೋವಿಂದನ ವಿರುದ್ಧ ಭೀಮಾನದಿ ದಂಡೆಯ ಮೇಲೆ ಹೋರಾಡಿ ಜಯ ಸಾಧಿಸಿದನು.
- ಕದಂಬರು, ಆಲೂಪರು, ಗಂಗರು, ಕೊಂಕಣದ ಮೌರ್ಯರು ಉತ್ತರದಲ್ಲಿ ಲಾಟರು, ಮಾಳವರು, ಗುರ್ಜಾರರನ್ನು ಸೋಲಿಸಿದನು.
- ಉತ್ತರ ಪಥೇಶ್ವರನಾದ ಹರ್ಷವರ್ಧನನ್ನು (ಕ್ರಿ.ಶ. 642) ನರ್ಮದಾ ನದಿಯ ತೀರದಲ್ಲಿ ಜಯಿಸಿ, **"ಪರಮೇಶ್ವರ"** ಎಂಬ ಬಿರುದನ್ನು ಪಡೆದನು.
- ಪಲ್ಲವ ಅರಸ ಮಹೇಂದ್ರ ವರ್ಮನನ್ನು ಪುಲ್ಲಲೂರು ಕದನದಲ್ಲಿ ಸೋಲಿಸಿ ಕಂಚಿಯನ್ನು ಆಕ್ರಮಿಸಿದನು.
- ಪುನಃ ಪಲ್ಲವರೊಂದಿಗೆ ನಡೆದ ಕದನದಲ್ಲಿ ಪಲ್ಲವ ಅರಸನಾದ ಒಂದನೇ ನರಸಿಂಹವರ್ಮನಿಂದ ಪುಲಿಕೇಶಿಯು ಸೋತು ಮೃತನಾದನು.
- 1ನೇ ನರಸಿಂಹವರ್ಮನು ಇದರ ಜ್ಞಾಪಕಾರ್ಥ ಒಂದು ವಿಜಯಸ್ತಂಭವನ್ನು ಸ್ಥಾಪಿಸಿ "ವಾತಾಪಿಕೊಂಡ' ಎಂಬ ಬಿರುದು ಧರಿಸಿದನು.
- ಪುಲಿಕೇಶಿಯ ಬಿರುದುಗಳು :
  - ಸತ್ಯಾಶ್ರಯ
  - ಸಾಹಸರಸಿಕ
  - ಪರಮೇಶ್ವರ
  - ಪೃಥ್ವಿವಲ್ಲಭ
  - ಪರಮಭಾಗವತ



downloaded from: www.kpscvaani.com

- o ಸಮಸ್ತ ಭೂ ಆಶ್ರಯ
- o ವಲ್ಲಭ
- o ದಕ್ಷಿಣ ಪಥೇಶ್ವರ

- 'ತಬರಿ' ಮುಸ್ಲಿಂ ಇತಿಹಾಸಕಾರನು ಬರೆದಂತೆ ಪುಲಿಕೇಶಿ ತನ್ನ ರಾಯಭಾರಿಯನ್ನು ಪರ್ಶಿಯನ್ ದೊರೆ 2ನೇ ಖುಸ್ರು ಆಸ್ಥಾನಕ್ಕೆ ಕಳುಹಿಸಿ, ಖುಸ್ರುವಿನ ರಾಯಭಾರಿಯನ್ನು ತನ್ನ ಆಸ್ಥಾನಕ್ಕೆ ಬರಮಾಡಿಕೊಂಡನು.
- ಪುಲಿಕೇಶಿಯ ಆಸ್ಥಾನಕ್ಕೆ ಭೇಟಿ ನೀಡಿದ ವಿದೇಶಿ ರಾಯಭಾರಿಗಳು :
  - o ಹುಯಾತ್ಸಾಂಗ್ ಕ್ರಿ.ಶ. 941 – ಸಿಯುಕಿ (ಚೀನಾ ಪ್ರವಾಸಿ)
  - o 2ನೇ ಖುಸ್ರು ಕ್ರಿ.ಶ 625 – ಪರ್ಶಿಯನ್ ರಾಯಭಾರಿ.
- ಹುಯಾತ್ಸಾಂಗ್ ಇಮ್ಮಡಿ ಪುಲಕೇಶಿ & ಅವನ ರಾಜ್ಯದ ಬಗ್ಗೆ ವಿವರಣೆಗಳನ್ನು ನೀಡಿದ್ದಾನೆ. ದೊರೆಯು ನ್ಯಾಯಾವಾದಿ ಹಾಗೂ ಕರುಣಾಳುವಾಗಿದ್ದನು. ಸೈನ್ಯವು ಶಿಸ್ತಿನಿಂದ ಕೂಡಿತ್ತು, ಸೈನಿಕರು ಮರಣಕ್ಕೆ ಹೆದರದೆ ಮೈಮರೆತು ಹೋರಾಡುವ ಯೋಧರಾಗಿದ್ದರು. ಪ್ರಜೆಗಳು ಸತ್ಯಪ್ರಿಯರಾಗಿದ್ದರು. ಸಂತೋಷಚಿತ್ತರು, ಸ್ವಾಭಿಮಾನಿಗಳು, ಸಂಪದ್ಭರಿತರೂ, ಗೌರವ ಪ್ರಿಯರು & ರಾಜನಿಷ್ಠರಾಗಿದ್ದರು. ರಾಜನಲ್ಲಿ ಅತ್ಯಂತ ಗೌರವ & ಪ್ರಜೆಗಳಲ್ಲಿ ಅಪಾರ ಪ್ರೀತಿ ಇದ್ದಿತು" ಎಂದು ಬರೆದಿದ್ದಾನೆ.

## ಒಂದನೇ ವಿಕ್ರಮಾದಿತ್ಯ (ಕ್ರಿ.ಶ. 655–681) :

- ಇವನು ಕಳೆದುಹೋದ ಚಾಲುಕ್ಯರ ವೈಭವವನ್ನು ಪುನರಸ್ಥಾಪಿಸಿದನು.
- ಇವನು ಪಲ್ಲವ ದೊರೆಗಳಾದ 2ನೇ ನರಸಿಂಹವರ್ಮ, 2ನೇ ಮಹೇಂದ್ರ ವರ್ಮ & 1ನೇ ಪರಮೇಶ್ವರನನ್ನು ಸೋಲಿಸಿದ.
- ಬಿರುದುಗಳು : ರಣರಸಿಕ, ಪರಮೇಶ್ವರ, ಶ್ರೀವಲ್ಲಭ & ಅನಿವಾರಿತ

## ವಿನಯಾದಿತ್ಯ (ಕ್ರಿ.ಶ 681–696) :

- ವಿಕ್ರಮಾದಿತ್ಯನ ಮಗನಾದ ಇತನು ಪರಾಕ್ರಮಿಯಾಗಿದ್ದರಿಂದ ಇವನನ್ನು 'ಯುದ್ಧಮಲ್ಲ' ಎಂದು ಕವುತೇಮದ ದತ್ತಿ ಶಾಸನವು ವರ್ಣಿಸಿದೆ.
- ಅಲ್ಲದೆ ರನ್ನನು ತನ್ನ ಗದಾಯುದ್ಧದಲ್ಲಿ ಇವನನ್ನು 'ದುರ್ಧರ ಮಲ್ಲ" ಎಂದು ಕರೆದಿದ್ದಾನೆ.
- ಇವನ ರಾಣಿ ವಿನಯಾವತಿ ಬಾದಾಮಿಯಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ಮೂರ್ತಿಗಳನ್ನು ಪ್ರತಿಷ್ಠಾಪಿಸಿದ್ದಾಳೆ.



downloaded from: www.kpscvaani.com

## 2ನೇ ವಿಕ್ರಮಾದಿತ್ಯ (ಕ್ರಿ.ಶ. 734–745) :

- ವಿಜಯಾದಿತ್ಯನ (ಕ್ರಿ.ಶ 696–743) ನಂತರ ಬಂದ ಚಾಲುಕ್ಯರ ಕೊನೆಯ ಅರಸರಲ್ಲಿ ಅತಿ ಪ್ರಬಲನಾಗಿದ್ದಾನೆ.
- ಇವನು ಗುಜರಾತಿನ ಮೇಲೆ ದಾಳಿ ಮಾಡಿ ಅರಬ್ಬರನ್ನು ಸೋಲಿಸಿದನು.
- ಇವನು ಕಲಚೂರಿ ವಂಶದ ರಾಜಕುಮಾರಿಯರಾದ ಲೋಕಮಹಾದೇವಿ & ತ್ರೈಲೋಕ್ಯ ಮಹಾದೇವಿಯನ್ನು ವರಿಸಿದನು.
- ಲೋಕಮಹಾದೇವಿ : ಇವಳು ಪಟ್ಟದ ಕಲ್ಲಿನಲ್ಲಿ 'ಲೋಕೇಶ್ವರ' ದೇವಾಲಯವನ್ನು ಅವನ ಕಂಚಿನ ವಿಜಯದ ಸ್ಮರಣಾರ್ಥ ಕಟ್ಟಿಸಿದಳು. ಇವೇ ಇಂದಿನ ಸುಪ್ರಸಿದ್ಧ ವಿರೂಪಾಕ್ಷ ದೇವಾಲಯ.
- ತ್ರೈಲೋಕ್ಯ ಮಹಾದೇವಿ : ಈಕೆ ತ್ರೈಲೋಕೇಶ್ವರ ದೇವಾಲಯ ನಿರ್ಮಿಸಿದ್ದು, ಇದನ್ನು ಕಟ್ಟಿದ ಶಿಲ್ಪಿ 'ಗುಂಡ' ಇವನಿಗೆ 'ತ್ರಿಭುವನಾಚಾರಿ', 'ಅನಿಪಾರಿತಾಚಾರಿ' ಎಂಬ ಬಿರುದುಗಳನ್ನು ನೀಡಿ ಗೌರವಿಸಿದ್ದಾಳೆ.

## 4ನೇ ವಿಕ್ರಮಾದಿತ್ಯ :

- ಈತನ ಸೊದರ ಕೀರ್ತಿವರ್ಮ 'ಗೋವೈದ್ಯ'ವನ್ನು ಕನ್ನಡದಲ್ಲಿ ಬರೆದನು.
- ಇಟಗಿಯ ಖ್ಯಾತ ಮಹಾದೇವ ಮಂದಿರವು ವಿಕ್ರಮನ ಸೇನಾನಿ ಮಹಾದೇವ ದಂಡನಾಯಕನ ರಚನೆಯಾಗಿದೆ.
- ವಿಕ್ರಮನಿಗೆ ಪೆರ್ಮಾಡಿ (ಪರಮರ್ದಿ) & ತ್ರಿಭುವನಮಲ್ಲ ಎಂಬ ಬಿರುದುಗಳಿದ್ದವು.
- ವಿಕ್ರಮನ ರಾಜ್ಯ ರಾಮರಾಜ್ಯ ಎಂದು ಬಿಲ್ಹಣ ಅವನ ಆಳ್ವಿಕೆಯಲ್ಲಿ ಬಣ್ಣಿಸಿದ್ದಾನೆ.
- ಭೂತಲದಲ್ಲಿ ಕಲ್ಯಾಣದಂತ ರಾಜಧಾನಿ ಹಿಂದಿಲ್ಲ, ಮುಂದಿರದು, ವಿಕ್ರಮಾರ್ಕನಂತ ಅರಸನನ್ನು ಕಂಡಿಲ್ಲ, ಕೇಳಿಲ್ಲ ಎಂದು ವಿಜ್ಞಾನೇಶ್ವರನು ಹೇಳಿದ್ದಾನೆ.

## ಕೊನೆಯ ಅರಸ – 2ನೇ ಕೀರ್ತಿವರ್ಮ (ಕ್ರಿ.ಶ 745–757) :

## ಆಡಳಿತ ವ್ಯವಸ್ಥೆ :

- ರಾಜನೇ ರಾಜ್ಯದ ಒಡೆಯನಾಗಿದ್ದನು. ರಾಜನನ್ನು 'ಪರಮ ಭಾಗವತ' ಎಂದು ಕರೆಯುತ್ತಿದ್ದರು.
- ಆಡಳಿತಕ್ಕಾಗಿ ಸಾಮ್ರಾಜ್ಯವನ್ನು ಪ್ರಾಂತ್ಯ, ನಾಡು, ವಿಷಯ(ಜಿಲ್ಲೆ) & ಗ್ರಾಮಗಳಾಗಿ ವಿಂಗಡಿಸಿದ್ದು, ಗ್ರಾಮವೇ ರಾಜ್ಯಾಡಳಿತದ ಕೊನೆಯ ಘಟಕವಾಗಿತ್ತು.



downloaded from: www.kpscvaani.com

- ಗ್ರಾಮದ ಎಲ್ಲಾ ಕುಟುಂಬಗಳ ಗುಂಪಿಗೆ 'ಮಹಾಬಲ' ಎನ್ನುತ್ತಿದ್ದರು.

## ಕಂದಾಯ ವ್ಯವಸ್ಥೆ :

- ಭೂ ಕಂದಾಯವು ರಾಜ್ಯದ ಆದಾಯವಾಗಿತ್ತು. ಅದನ್ನು 'ಸಿದ್ದಯ್ಯ' ಎನ್ನುತ್ತಿದ್ದರು.
- ವಡ್ಡರಾವುಲ – ಅರಸ ಕುಟುಂಬಗಳ ಮೇಲಿನ ತೆರಿಗೆ.
- ಹೆರ್ಜಂಕ – ಷೇರುಗಳ ಮೇಲೆ ಹಾಕುತ್ತಿದ್ದ ತೆರಿಗೆ.
- ಬಿರ್ರೊಡೆ – ವ್ಯಾಪಾರ ತೆರಿಗೆ.
- ಪನ್ನಯ – ವೀಳ್ಯದೆಲೆ ತೆರಿಗೆ. ಇವು ಆದಾಯ ಮೂಲಗಳಾಗಿದ್ದವು.
- ಸೇಮಾಡಳಿತ – ಚಾಲುಕ್ಯರ ಸೈನ್ಯವನ್ನು 'ಕರ್ನಾಟಕ ಬಲ' ಎನ್ನುತ್ತಿದ್ದರು.
- ಸೇನೆಗಳ ಮುಖ್ಯಸ್ಥನನ್ನು 'ದಂಡನಾಯಕ' ಎಂದು ಕರೆಯುತ್ತಿದ್ದರು.
- ನೌಕಾಪಡೆಯು ಸಹ ಇತ್ತು.

## ಸಾಮಾಜಿಕ & ಆರ್ಥಿಕ ಸ್ಥಿತಿ :

- ಚಾಲುಕ್ಯರ ಸಮಾಜವು 'ವರ್ಣಾಶ್ರಮ' ಪದ್ಧತಿಯನ್ನು ಹೊಂದಿತ್ತು.
- ಕೃಷಿ ಪ್ರಧಾನ ಕಸುಬಾಗಿತ್ತು. ಜನರು ಅನೇಕ ವೃತ್ತಿಯನ್ನು ಅವಲಂಬಿಸಿದ್ದು, ಅನೇಕ ವೃತ್ತಿ ಸಂಘಗಳನ್ನು ರಚಿಸಿಕೊಂಡಿದ್ದರು.
  ಉದಾ : ಐಹೊಳೆಯಲ್ಲಿ 'ಐಹೊಳೆ ಐನೊರವಾರ್' ಎಂಬುದು.

## ಸಾಹಿತ್ಯ :



- ವಿಜಯ ಭಟ್ಟಾರಿಕೆ ಅಥವಾ ವಿಜ್ಜಿಕೆ ಅಥವಾ ವಿಜಯಮಹಾದೇವಿ – ಕೌಮುದಿ ಮಹೋತ್ಸವ ಸಂಸ್ಕೃತ ನಾಟಕ ರಚಿಸಿದ್ದಾಳೆ. (ಇವಳು ಇಮ್ಮಡಿ ಪುಲಿಕೇಶಿಯ ಮಗ ಚಂದ್ರಾದಿತ್ಯನ ರಾಣಿ).
- ಶಿವಭಟ್ಟಾರಕನ – ಹರಪಾರ್ವತಿಯ (ನಾಟಕ).
- ಪುಲಿಕೇಶಿಯನ್ನು ಹೊಗಳಿರುವಿದು – 'ಕರ್ನಾಟಕೇಶ್ವರ



GNANADHARE IAS ACADEMY
downloaded from: www.kpscvaani.com

ಕಥಾ'ದಲ್ಲಿದೆ.

- ಕನ್ನಡ ಹಾಗೂ ಸಂಸ್ಕೃತ ಭಾಷೆಗಳು ಚೆನ್ನಾಗಿ ಬೆಳೆದವು. ಕನ್ನಡ ಅವರ ದೇಶ ಭಾಷೆಯಾಗಿತ್ತು.
- ಈ ಕಾಲದ ಕಾವ್ಯದಲ್ಲಿ ತ್ರಿಪದಿ ಶೈಲಿಯು ಬೆಳವಣಿಗೆಯಾಯಿತು.
- ಬಾದಾಮಿಯಲ್ಲಿ ಕಪ್ಪೆ ಅರಭಟ್ಟನ ಶಾಸನವು ಒಂದು ತ್ರಿಪದಿ ಶೈಲಿಯಲ್ಲಿರುವುದು ಕಂಡುಬರುತ್ತದೆ.

## ಪ್ರಮುಖ ಶಾಸನಗಳು :

1. ಮಂಗಳೇಶ – ಮಹಾಕೂಟ ಸ್ತಂಭ ಶಾಸನ
2. ಐಹೊಳೆ ಶಾಸನ – 2ನೇ ಪುಲಕೇಶಿ ಬಗ್ಗೆ – ರವಿಕೀರ್ತಿ ಬರೆಸಿದ್ದು.
3. ಕಪ್ಪೆ ಅರಬಟ್ಟನ – ಬಾದಾಮಿ ಶಾಸನ (ಇದು ಕನ್ನಡದ ಪ್ರಥಮ ತ್ರಿಪದಿ ಕವಿತೆ ಹೊಂದಿದೆ).
4. ಎರಡನೆ ಕೀರ್ತಿವರ್ಮನ ವಕ್ಕಲೇರಿ ಶಾಸನ ಮುಂತಾದವುಗಳ ಮುಖ್ಯ ಶಾಸನಗಳಾಗಿವೆ.

ಒಂದನೆ ಪುಲಕೇಶಿಯ ಬಾದಾಮಿ ಶಾಸನವು ಶಕ ವರ್ಷವನ್ನು ನಮೂದಿಸಿದೆ. (ಶಕ ವರ್ಷ 465) ಅಂದರೆ ಕ್ರಿ.ಶ 543 ಎಂದಾಗುತ್ತದೆ. ಇತಿಹಾಸದಲ್ಲಿ ಕಾಲ ನಿರ್ಧಾರ ಮಹತ್ವವಾಗಿದ್ದು, ಇಂಥ ಉಲ್ಲೇಖಗಳು ಐತಿಹಾಸಿಕ ಮಹತ್ವವನ್ನು ಪಡೆಯುತ್ತವೆ. ಶಕ ವರ್ಷದ ಉಲ್ಲೇಖದ ಅತ್ಯಂತ ಹಳೆಯ ಶಾಸನ ಇದಾಗಿದೆ.

ಮಂಗಳೇಶನ ಮಹಾಕೂಟ ಸ್ತಂಭ ಶಾಸನವು ಅವನ ಯುದ್ಧಗಳು, ವಿಜಯಗಳನ್ನು ತಿಳಿಸುತ್ತದೆ. ಎರಡನೇ ಪುಲಕೇಶಿಯ ಐಹೊಳೆ ಶಾಸನವು ಒಂದು ಮೈಲುಗಲ್ಲಾಗಿದೆ. ಈ ಶಾಸನವು.

- ಶಕ ವರ್ಷ 556 ಎಂಬ ಉಲ್ಲೇಖ ಕಾಲಗಣನೆಗೆ ಸಹಾಯಕಾರಿ.
- ಎರಡನೇ ಪುಲಕೇಶಿಯ ದಂಡಯಾತ್ರೆಗಳನ್ನು ತಿಳಿಸುತ್ತದೆ.
- ನೆರೆ ಹೊರೆಯ ರಾಜ್ಯಗಳು ಅಲ್ಲಿನ ಅರಸರು ಮುಂತಾದ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ.
- ಹರ್ಷವರ್ಧನನ ಸೈನ್ಯಬಲ ಮತ್ತು ಅವನ ಸೋಲನ್ನು ತಿಳಿಸುತ್ತದೆ.
- ರವಿ ಕೀರ್ತಿ ಬರೆದ ಈ ಶಾಸನ ಆ ಕಾಲದ ಸಂಸ್ಕೃತ ಭಾಷೆಯ ಉನ್ನತ ಮಟ್ಟವನ್ನು ತಿಳಿಸುತ್ತದೆ.
- ಎರಡನೇ ಪುಲಕೇಶಿಯ ವ್ಯಕ್ತಿತ್ವವನ್ನು ತಿಳಿಸುತ್ತದೆ.
- ಇನ್ನೂ ಅನೇಕ ಶಾಸನಗಳು ಬಾದಾಮಿ ಚಾಲುಕ್ಯರ ಬಗ್ಗೆ ತಿಳಿಸುತ್ತವೆ. ಉದಾಹರಣೆಗೆ ಬಾದಾಮಿ ಕೋಟೆಯಲ್ಲಿ ಕಲ್ಲಿನ ಮೇಲೆ ಬರೆದ ಪಲ್ಲವರ ಒಂದು ಶಾಸನವು ಎರಡನೇ ಪುಲಕೇಶಿ ಪಲ್ಲವ ನರಸಿಂಹ ವರ್ಮನೊಡನೆ ಯುದ್ದದಲ್ಲಿ ಸೋತ ಉಲ್ಲೇಖವಿದೆ.



downloaded from: www.kpscvaani.com

- ಮೊದಲನೆ ವಿಕ್ರಮಾದಿತ್ಯನ ಒಂದು ಶಾಸನವು ಪುಲಕೇಶಿಯ ಮರಣದ ನಂತರ ಮೂವರು ರಾಜರಿಂದ ಬಾದಾಮಿಗೆ ಗ್ರಹಣ ಕವಿದಿತ್ತೆಂದೂ ಮತ್ತು ಅವನು ಕ್ರಿ.ಶ 655 ರಲ್ಲಿ ಪುನಃ ಬಾದಾಮಿಯನ್ನು ಪಡೆದ ವರ್ಣನೆಯಿದೆ.

## ಕಲೆ & ವಾಸ್ತು ಶಿಲ್ಪ :



- ಚಾಲುಕ್ಯರನ್ನು 'ಕರ್ನಾಟಕದ ದೇವಾಲಯ ವಾಸ್ತುಶಿಲ್ಪದ ಪ್ರವರ್ತಕರು' ಎಂದು ಕರೆಯಲಾಗಿದೆ.
- ಶೈವ, ವೈಷ್ಣವ, ಜೈನ ಮುಂತಾದ ಎಲ್ಲ ಪಂಥಗಳ ಸಂಪ್ರದಾಯಗಳನ್ನು ಪ್ರೋತ್ಸಾಹಿಸಿದರು. ಜೈನ ದೇವಾಲಯಗಳ ನಿರ್ಮಾಣಕ್ಕೆ ಇವರು ಪ್ರೋತ್ಸಾಹ ನೀಡಿದರು. ಬೌದ್ಧ ವಿಹಾರಗಳೂ ಪ್ರೋತ್ಸಾಹಿಸಲ್ಪಟ್ಟವು.
- ಇವರು ಉತ್ತರ ಭಾರತದ ನಾಗರ & ದಕ್ಷಿಣ ಭಾರತದ ದ್ರಾವಿಡ ಶೈಲಿಗಳ ಮಿಶ್ರಣವಾದ 'ವೇಸರ ಶೈಲಿ'ಯ ನಿರ್ಮಾಪಕರಾಗಿರುವರು.
- ಇವರು ಗುಹೆ ದೇವಾಲಯಗಳ ನಿರ್ಮಾಪಕರಾಗಿರುವರು.
- ಐಹೊಳೆ : **ಪರ್ಶಿಬ್ರೌನರ್ ಐಹೊಳೆಯನ್ನು 'ಭಾರತೀಯರ ದೇವಾಲಯಗಳ ವಾಸ್ತುಶಿಲ್ಪದ ತೊಟ್ಟಿಲು' ಎಂದು ಕರೆದಿದ್ದಾರೆ.**
    1. ದುರ್ಗಾ ದೇವಾಲಯ : ಇದು ಬೌದ್ಧರ ಚೈತ್ಯಾಲಯವನ್ನು ಹೋಲುತ್ತಿದ್ದು ಗಜಾಷ್ಠಕಾರದಲ್ಲಿದೆ. (ಇದರ ತಳವಿನ್ಯಾಸ ಕುದುರೆಲಾಳ ಆಕೃತಿಯಲ್ಲಿದೆ).



downloaded from: www.kpscvaani.com

2. ಮೇಗುತಿ ಜೈನ ಬಸದಿ : ರವಿಕೀರ್ತಿಯ ಹೆಸರಾಂತ ಐಹೊಳೆ ಶಾಸನ ಕೆತ್ತಿರುವುದು ಇದೇ ದೇವಾಲಯದಲ್ಲಿ.
3. ಹುಚ್ಚಮ್ಮಗುಡಿ : ಪೂರ್ವಗೊಡೆಯ ಮೇಲೆ ನಾಗರ ಶೈಲಿಯ ಗೋಪುರ ಹೊಂದಿದೆ.
4. ಮಾಲಗಿತ್ತಿ ದೇವಾಲಯ : ದ್ರಾವಿಡ ಶೈಲಿಯಲ್ಲಿದೆ.
5. ಲಾಡಖಾನ ದೇವಾಲಯ : ಇದರ ಶಿಖರ ಗರ್ಭಗುಡಿಯಲ್ಲಿ ಮೇಲಿರದೆ ದೇಗುಲದ ಮಧ್ಯೆ ಭಾಗದಲ್ಲಿದೆ.
6. ಶಿವದೇವಾಲಯ (ರಣರಾಗ) : ಐಹೊಳೆಗೆ 22 ಕಿ.ಮೀ ದೂರದ ಮಹಾಕೂಟದಲ್ಲಿದೆ.
7. ಕೊಂಟಿಗುಡಿ & ರಾಮಲಿಂಗ ಗುಡಿಗಳು ಇಲ್ಲಿನ ಪ್ರಸಿದ್ಧ ದೇವಾಲಯಗಳು.

- ಪಟ್ಟದಕಲ್ಲು – ಇದು ಚಾಲುಕ್ಯರ ವಾಸ್ತು ಶಿಲ್ಪದ ತವರು ಮನೆಯಾಗಿದೆ.
- ಪರ್ಶಿಬ್ರೌನ್ – ಇದನ್ನು ದ್ರಾವಿಡ ವಾಸ್ತು ಶಿಲ್ಪದ ಅತ್ಯುತ್ತಮ ಕೃತಿ ಎಂದಿದ್ದಾರೆ.

## ದೇವಾಲಯ :

1. ವಿರೂಪಾಕ್ಷ ದೇವಾಲಯ – ಲೋಕಮಹಾದೇವಿ ದ್ರಾವಿಡ ಶೈಲಿ
2. ಸಂಗಮೇಶ್ವರ ದೇವಾಲಯ – ವಿಜಯಾದಿತ್ಯ
3. ಪಾಪನಾಥ ದೇವಾಲಯ
4. ಕಾಶೀನಾಥ ದೇವಾಲಯ
5. ಸಿದ್ದೇಶ್ವರ ದೇವಾಲಯ
6. ಮಲ್ಲಿಕಾರ್ಜುನ
7. ಗಳಗನಾಥ
8. ಕಾಶಿನಾಥ ದೇವಾಲಯ
9. ಕರಿಸಿದ್ದೇಶ್ವರ ದೇವಾಲಯ
10. ಮಹಾಲಕ್ಷ್ಮೀ ದೇವಾಲಯ

- ಬಾದಾಮಿ :
  - ಗುಹಾಂತರ ಜೀನಾಲಯ (1ನೇ ಕೀರ್ತಿವರ್ಮ & ಮಂಗಳೇಶ)
  - ಗುಹಾಂತರ ಹಿಂದೂ ದೇವಾಲಯ
  - ತ್ರಿಮೂರ್ತಿ ದೇವಾಲಯ
  - ಬಾದಾಮಿಯಿಂದ 4 ಕಿ.ಮೀ ಅಂತರದಲ್ಲಿರುವ ಬನಶಂಕರಿಯಲ್ಲಿನ 'ಬನಶಂಕರಿ' ದೇವಾಲಯ



downloaded from: www.kpscvaani.com

## ಚಿತ್ರಕಲೆ :

- ಅಜಂತಾದ 2ನೇ ಗುಹೆಯ ಚಾಲುಕ್ಯರಿಗೆ ಸಂಬಂಧಿಸಿದ್ದು ಇಲ್ಲಿನ ಬುದ್ಧನ ಪ್ರೇರಣೆ ಚಿತ್ರ & ಪರ್ಷಿಯಾನ ರಾಜ 2ನೇ ಖುಸ್ರುವಿನ ರಾಯಭಾರಿಯನ್ನು 2ನೇ ಪುಲಿಕೇಶಿಯು ಸ್ವಾಗತಿಸುತ್ತಿರುವ ಚಿತ್ರ ಅಮೋಘವಾಗಿದೆ.
- ವಿಜಯಾದಿತ್ಯನ ರಾಣಿ ವಿನಾಪೋಟ ಹೆಸರಾಂತ ನರ್ತಕಿ (ಪಟ್ಟದ ಕಲ್ಲು ಶಾಸನವು ಈ ಬಗ್ಗೆ ಮಾಹಿತಿ ನೀಡುತ್ತದೆ).
- ಲಚ್ಚಲಾದೇವಿ – ಶ್ರೀ ನೃತ್ಯವಿದ್ಯಾಧರಿ ಎಂಬ ಬಿರುದು. (ಶಿಕಾರಿಪುರ ಶಾಸನ ತಿಳಿಸುತ್ತದೆ).

## ಕಂಚಿಯ ಪಲ್ಲವರು (ಕ್ರಿ.ಶ 350–895) :

- ಪಲ್ಲವರು ತಮಿಳುನಾಡಿನ ಪ್ರಪ್ರಥಮ ರಾಜರುಗಳು.
- ದಕ್ಷಿಣ ಭಾರತವನ್ನು ಆಳಿದ ವಂಶಗಳಲ್ಲಿ ಇವರಿಗೆ ವಿಶೇಷವಾದ ಸ್ಥಾನವಿದೆ.
- ಮೊದಲು ಇವರು ಶಾತವಾಹನರ ಅಧಿಕಾರಿಗಳಾಗಿದ್ದರು.
- ಶಾತವಾಹನರ ಅವನತಿಯ ನಂತರ ಪಲ್ಲವರು ತಮ್ಮನ್ನ ತಾವೇ ಸ್ಥಳಿಯ ರಾಜರುಗಳೆಂದು ಘೋಷಿಸಿಕೊಂಡರು.
- ಶಿವಸ್ಕಂದವರ್ಮನು ಈ ಸಂತತಿಯ ಮೊದಲ ದೊರೆಯಾಗಿದ್ದನು.
- ಕದಂಬರು ಇವರ ನಿರಂತರ ಶತೃತ್ವ ಹೊಂದಿದ್ದರು.




GNANADHARE ACADEMY



downloaded from: www.kpscvaani.com

## 1ನೇ ನರಸಿಂಹವರ್ಮ :

- ಪಲ್ಲವ ರಾಜರುಗಳಲ್ಲಿ ಅತ್ಯಂತ ಪ್ರಸಿದ್ಧ ದೊರೆ.
- ಚಾಲುಕ್ಯರ ಮೇಲಿದ್ದ ಸೇಡನ್ನು ತೀರಿಸಿಕೊಂಡು ಇಮ್ಮಡಿ ಪುಲಕೇಶಿಯನ್ನು ಸೋಲಿಸಿ ವಾತಾಪಿಯನ್ನು ವಶಪಡಿಸಿಕೊಂಡನು.
- ಈತನು ಮಹಾಮಲ್ಲ & ವಾತಾಪಿಕೊಂಡ ಎಂಬ ಬಿರುದುಗಳನ್ನು ಹೊಂದಿದ್ದನು.
- ಈತನ ಆಳ್ವಿಕೆಯ ಕಾಲದಲ್ಲಿ ಹ್ಯೂಯೆನ್‌ತ್ಸಾಂಗ್ ಕಂಚಿಯನ್ನು ದರ್ಶಿಸಿದ್ದನು.
- ಕಂಚಿ ಬಳಿಯಲ್ಲಿನ ಸಮುದ್ರ ತೀರದಲ್ಲಿ ಒಂದು ನಗರವನ್ನು ನಿರ್ಮಿಸಿ ಅದಕ್ಕೆ ಮಹಾಬಲಿಪುರಂ ಎಂಬ ಹೆಸರನ್ನು ಇಟ್ಟನು.
- ಅಪರಾಜಿತ ಪಲ್ಲವನ ಕಾಲದಲ್ಲಿ ಪಲ್ಲವ ಸಾಮ್ರಾಜ್ಯ ಚೋಳರ ಆದಿತ್ಯನಿಂದ ಕೊನೆಗೊಂಡಿತು.

## ಆಡಳಿತ :

- ತಮಿಳುನಾಡಿನಲ್ಲಿ ಆಡಳಿತವನ್ನು ವ್ಯವಸ್ಥೆಗೊಳಿಸಿದ್ದರು.
- ಇವರ ರಾಜ್ಯವೂ ಸದೃಢ, ಸುವ್ಯವಸ್ಥಿತವಾಗಿದ್ದು, ಮಂತ್ರಿ & ಪ್ರಾಂತ್ಯಾಧಿಕಾರಿಗಳನ್ನು ಹೊಂದಿದ್ದರು.
- ರಾಜ್ಯವನ್ನು ಮಂಡಲ, ನಾಡು, ಗ್ರಾಮಗಳಾಗಿ ವಿಂಗಡಿಸಿದ್ದರು.
- ಗ್ರಾಮ ಸಭೆಯು ಗ್ರಾಮದ ಸಮಸ್ಯೆಗಳನ್ನು ಗಮನಿಸುತ್ತಿದ್ದರು.
- ಗ್ರಾಮಭೋಜಕ ಗ್ರಾಮದ ಆಡಳಿತ ನೋಡಿಕೊಳ್ಳುತ್ತಿದ್ದರು.
- ಪಲ್ಲವರು ಒಳ್ಳೆಯ ನೌಕಾಬಲವನ್ನು ಹೊಂದಿದ್ದರು.
- ಇಲ್ಲಿನ ಮಲಯ, ಇಂಡೋನೇಷಿಯಾ ಹಾಗೂ ಇತರೆ ಆಗ್ನೇಯ ಏಷ್ಯಾ ರಾಷ್ಟ್ರಗಳೊಡನೆ ಸಂಬಂಧಗಳನ್ನು ಹೊಂದಿದ್ದನು
- ಭಾರತೀಯ ಭಾಷೆ, ಮತ, ಸಂಪ್ರದಾಯ, ಸಂಸ್ಕೃತಿಗಳು ಆ ದೇಶಗಳಲ್ಲಿಯೂ ಪ್ರಭಾವ ಬೀರಿದೆ.

## ಸಾಹಿತ್ಯ :

- ಪಲ್ಲವರು ಸಂಸ್ಕೃತ & ತಮಿಳು ಭಾಷೆಗಳೆರಡಕ್ಕೂ ಪ್ರೋತ್ಸಾಹ ನೀಡಿದರು.
- ವೈದಿಕ ಧರ್ಮದ ಪುನರುಜ್ಜೀವನಕ್ಕೂ ಸಹಾಯ ಮಾಡಿತು.



downloaded from: www.kpscvaani.com

- ತಮಿಳಿನಲ್ಲಿ ಶ್ಲೋಕಗಳು ರಚನೆಯಾದವು. ಇದೇ ತಮಿಳು ಸಾಹಿತ್ಯದ ನಿಧಿಯಾಗಿದೆ.
- ಕಂಚಿಯು ಸಂಸ್ಕೃತ ಸಾಹಿತ್ಯದ ಕೇಂದ್ರವಾಗಿತ್ತು.
- ಪಲ್ಲವರ ಆಸ್ಥಾನದಲ್ಲಿದ್ದ ಕವಿಗಳು – ಭಾರವಿ (ಕಿರತಾರ್ಜುನೀಯ) ಹಾಗೂ ದಂಡಿ (ದಶಕುಮಾರ ಚರಿತ).
- ರಾಜ ಮಹೇಂದ್ರವರ್ಮನು ಸ್ವತಃ 'ಮತ್ತ ವಿಲಾಸ ಪ್ರಹಸನ' ಎಂಬ ಸಾಮಾಜಿಕ ನಾಟಕವನ್ನು ಹಾಗೂ 'ಭಗವದುಜ್ಜಕ' ಎಂಬ ಗ್ರಂಥವನ್ನು ರಚಿಸಿದ್ದಾರೆ.

## ಧರ್ಮ :

- ಪಲ್ಲವರು ಮೊದಲು ಬೌದ್ಧಮತೀಯರಾಗಿದ್ದರು ನಂತರ ಎಲ್ಲಾ ಧರ್ಮಗಳಿಗೂ ಪ್ರೋತ್ಸಾಹ ನೀಡಿದರು.
- ಮಹೇಂದ್ರವರ್ಮನು ಜೈನ ಮತವಲಂಬಿಯಾದುದರಿಂದ ನಾಡಿನಲ್ಲಿ ಅನೇಕ ಜೈನರಿದ್ದರು.

## ಕಲೆ & ವಾಸ್ತುಶಿಲ್ಪ :



- ಪಲ್ಲವರ ವಾಸ್ತುಶಿಲ್ಪವನ್ನು ಕಲ್ಲಿನಲ್ಲಿ ಕೊರೆದು ಮಾಡಿದ ದೇವಾಲಯಗಳನ್ನು & ರಚನಾ ವಿನ್ಯಾಸದ ದೇವಾಲಯಗಳು ಎಂದು ವಿಂಗಡಿಸಬಹುದು.
- 1ನೇ ಮಹೇಂದ್ರವರ್ಮನ ಕಾಲದಿಂದ – ವಾಸ್ತುಶಿಲ್ಪಕ್ಕೆ (ದೇವಾಲಯಗಳಿಗೆ) ಕಲ್ಲನ್ನು ಬಳಸಲಾಯಿತು.
- ದಕ್ಷಿಣ ಭಾರತದಲ್ಲಿ ವಿಶಿಷ್ಟ ಕಲೆ ಮತ್ತು ವಾಸ್ತುಶೈಲಿ ಇವರ ಕಾಲದಲ್ಲಿ ಆರಂಭವಾಯಿತು.
- ಪಲ್ಲವರ ಕಾಲದಲ್ಲಿ ರೂಪುಗೊಂಡ ಕಲಾಶೈಲಿಯನ್ನು ದ್ರಾವಿಡ ಶೈಲಿ ಎನ್ನುವರು.
- ಮಹಾಬಲಿಪುರದಲ್ಲಿ ಕಲ್ಲಿನಲ್ಲಿ ಕೊರೆದು ಮಾಡಿದ ಅನೇಕ ದೇವಾಲಯಗಳನ್ನು ನೋಡಬಹುದು.
- ಏಕಶಿಲೆಗಳಲ್ಲಿ ಅದ್ಭುತ ವಿಗ್ರಹಗಳನ್ನು ಕೆತ್ತಿ, ಬಿಡಿಸಲಾಗಿದೆ. ಇವುಗಳು ಮಹಾಭಾರತದ ಹಾಗೂ ಭಾಗವತದ ಕಥೆಗಳನ್ನು ಹೊಂದಿವೆ.



GNANADHARE IAS ACADEMY
downloaded from: www.kpscvaani.com

- ಇಲ್ಲಿನ ಪಂಚ ರಥಗಳು ಸುಪ್ರಸಿದ್ಧ ಏಕಶಿಲಾ ದೇವಾಲಯಗಳಾಗಿವೆ.
- ಅರ್ಜುನನ ತಪಸ್ಸು ಎನ್ನುವ ಕೆತ್ತನೆ ದೃಶ್ಯವು ಅತ್ಯುತ್ತಮ ಕಲಾಕೃತಿಯಾಗಿದೆ.
- ಕಂಚಿಯಲ್ಲಿನ ಕೈಲಾಸನಾಥ, ಏಕಾಂಬರನಥ & ವೈಕುಂಠ ಪೆರುಮಾಳರ ದೇವಾಲಯಗಳು ಮಹಾಬಲಿಪುರದ ಕಡಲದಂಡೆಯ ದೇವಾಲಯ ಪ್ರಾಚೀನ ಭಾರತ ವಾಸ್ತುಶಿಲ್ಪ ಅತ್ಯುತ್ತಮ ನಿದರ್ಶನಗಳಾಗಿವೆ.

## ಶಿಕ್ಷಣ :

- ದೇವಾಲಯಗಳು ಧಾರ್ಮಿಕ ಹಾಗೂ ಕಲಾತ್ಮಕ ಚಟುವಟಿಕೆಗಳ ಕೇಂದ್ರಗಳಾದವು.
- ದೇವಾಲಯದ ಅಂಗಳದಲ್ಲಿ ಸಂಜೆ ಸಮಯದಲ್ಲಿ ಗ್ರಾಮೀಣ ಜನರು ಕಲೆತು ಅನೇಕ ವಿಷಯಗಳನ್ನು ಚರ್ಚಿಸುತ್ತಿದ್ದರು.
- ವಿರಾಮ ವೇಳೆಯಲ್ಲಿ ಜನರು ಇಲ್ಲಿ ಸಭೆ ಸೇರುತ್ತಿದ್ದು, ಪುರಾಣ ಶ್ರವಣ ಅಥವಾ ಭಕ್ತಿ ಗೀತೆಗಳನ್ನು ಹಾಡುತ್ತಿದ್ದರು. ಹೀಗಾಗಿ ದೇವಾಲಯಗಳು ಸಾಮಾಜಿಕ, ಶೈಕ್ಷಣಿಕ ಕೇಂದ್ರಗಳಾಗಿದ್ದವು.

## ಕಂಚಿಯಲ್ಲಿನ ದೇವಾಲಯಗಳು:

- ಕೈಲಾಸನಾಥ, ಕಾಮಕೊಟ್ಟಂ, ಏಕಂಬರನಾಥ, ಕಾಮಾಕ್ಷಿ, ವರದರಾಜ, ಮಹಾಕಾಳೇಶ್ವರ, ಪುಣ್ಯಕೋಟೇಶ್ವರ, ಕಶ್ಯಪೇಶ್ವರ, ಸರ್ವತೀರ್ಥೇಶ್ವರ ಚೊಕ್ಕನಾಥೇಶ್ವರ ತ್ರೈಲೋಕ್ಯನಾಥ, ಮುತ್ತೀಶ್ವರ, ಗಣಪತಿ, ಸುಬ್ರಹ್ಮಣ್ಯ ಮುಂತಾದವು.
- ಮಹಾಬಲಿಪುರಂ ಚೈನ್ನೈನಿಂದ 32 ಮೈಲಿ ದೂರದಲ್ಲಿರುವ ಇದು ಸಮುದ್ರ ತೀರದಲ್ಲಿದ್ದು ಪಲ್ಲವರ ಶಿಲ್ಪಕಲೆಯ ಕೇಂದ್ರವಾಗಿದೆ.
- 1ನೇ ನರಸಿಂಹವರ್ಮನ ಕಾಲದಲ್ಲಿ – ಶಿಲಾರಥಗಳು ಪಗೋಡಾಗಳು, ಕಲ್ಲಿನ ದೇವಾಲಯಗಳು, ಮಂಟಪಗಳು ಇಲ್ಲಿ ನಿರ್ಮಿತವಾದವು
- ಇಲ್ಲಿನ ವರಾಹ ಮಂಟಪ, ಮಹಿಷಾಸುರ ಮರ್ದಿನಿ ಮಂಟಪಗಳು ಶಿಲ್ಪಗಳು ಅತ್ಯಂತ ವೈಭವವಾಗಿದೆ.
- ಸಿಂಹವಿಷ್ಣು 1ನೇ ಮಹೇಂದ್ರವರ್ಮ ಮತ್ತು ಅವನ ರಾಣಿಯರ ಅಳೆತ್ತರದ ಪ್ರಮಾಣದ ಆಕೃತಿಗಳನ್ನು ವರಾಹಮಂಟಪದಲ್ಲಿ ಬಿಡಿಸಲಾಗಿದೆ.
- ಈ ಮಂಟಪಗಳ ಸಮೀಪದಲ್ಲಿ 'ಅರ್ಜುನನ ತಪಸ್ಸು' ಅಥವಾ ದೇವಗಂಗೆ ಧರೆಗೆ' ಇಳಿದು ಬರುತ್ತಿರುವ ದೃಶ್ಯ ಎಂದು ಕರೆಯಲ್ಪಡುವ ಶಿಲ್ಪಕಲಾಗುಚ್ಚವು ಪಲ್ಲವರ ಕಾಲದ ಶಿಲ್ಪಕಲಾ ನೈಪುಣ್ಯಕ್ಕೆ ನಿರ್ದಶನವಾಗಿದೆ.



downloaded from: www.kpscvaani.com

## ರಾಷ್ಟ್ರಕೂಟರು (ಕ್ರಿ.ಶ 753–973) :




- ರಾಷ್ಟ್ರಕೂಟರು ಕನ್ನಡಿಗರು. ಪ್ರಾರಂಭದಲ್ಲಿ ಚಾಲುಕ್ಯರ ಸಾಮಂತರಾಗಿದ್ದರು. ಅನಂತರ ಸ್ವತಂತ್ರರಾಗಿ ದಕ್ಷಿಣದಲ್ಲಿ ವಿಸ್ತಾರವಾದ ಸಾಮ್ರಾಜ್ಯದ ಒಡೆಯರಾಗಿ ಪ್ರಸಿದ್ಧರಾದವರು.
- 8ನೇ ಶತಮಾನದಿಂದ 10ನೇ ಶತಮಾನದವರೆಗೆ ಆಳಿದರು, ರಾಷ್ಟ್ರಕೂಟ ಎಂದರೆ ರಾಷ್ಟ್ರದ ಮುಖ್ಯಸ್ಥರು.
- ಉತ್ತರದ ನರ್ಮದಾ ನದಿಯಿಂದ ದಕ್ಷಿಣದ ಕಾವೇರಿ ನದಿಯವರೆಗೆ ಹರಡಿದ ಸಾಮ್ರಾಜ್ಯ.
- ಸ್ಥಾಪಕ – ದಂತಿಮಾರ್ಗ (ಬಾದಾಮಿ ಚಾಲುಕ್ಯರ ದೊರೆ 2ನೇ ಕೀರ್ತಿವರ್ಮನನ್ನು ಸೋಲಿಸಿ ಸಾಮ್ರಾಜ್ಯ ಸ್ಥಾಪನೆ)
- ರಾಜಧಾನಿ – ಮಾನ್ಯಖೇಟ (ಗುಲ್ಬರ್ಗಾ ಜಿಲ್ಲೆ)
- ಲಾಂಛನ – ಗರುಡ
- ನಾಣ್ಯಗಳು – ಸುವರ್ಣ, ದ್ರಮ್ಮ, ಗದ್ಯಾಣ, ಕಾಸು, ಕಲಾಜು, ಮಂಜತಿ, ಅಕ್ಕರಿ ಇತ್ಯಾದಿ (ಚಿನ್ನ & ಬೆಳ್ಳಿ)

## ದಂತಿದುರ್ಗ (ಕ್ರಿ.ಶ.753–756) :

- ಇವನು ಚಾಲುಕ್ಯ ದೊರೆ 2ನೇ ಕೀರ್ತಿವರ್ಮನನ್ನು ಸೋಲಿಸಿ, ಸ್ವತಂತ್ರ ಅಧಿಪತ್ಯೆ ಸಾಧಿಸಿದನು.
- ಹಿರಣ್ಯ ಗರ್ಭದಾನ ಯಾಗವನ್ನು ಮಾಡಿದನು.
- ಬಿರುದುಗಳು – ಪೃಥ್ವಿವಲ್ಲಭ, ಮಹಾರಾಜಾಧಿರಾಜ, ರಾಜಪರಮೇಶ್ವರ

GNANADHARE



downloaded from: www.kpscvaani.com

## ಒಂದನೇ ಕೃಷ್ಣ (ಕ್ರಿ.ಶ. 756–774) :

- ದಂತಿದುರ್ಗನಿಂದ ಸೋಲಲ್ಪಟ್ಟ 2ನೇ ಕೀರ್ತಿವರ್ಮನನ್ನು ಪುನಃ ಸೋಲಿಸಿದನು.
- ವೆಂಗಿಯ 4ನೇ ವಿಷ್ಣುವರ್ಧನನ್ನು ಸೋಲಿಸಿ ಸಾಮಂತನನ್ನಾಗಿಸಿದನು.
- ಇವನಿಗೆ 'ಶುಭತಂಗ' 'ಅಕಾಲವರ್ಷ' ಎಂಬ ಬಿರುದುಗಳು ಇದ್ದವು.
- ಅತ್ಯದ್ಭುತಗಳಲ್ಲಿ ಒಂದಾದ 'ಎಲ್ಲೋರದ ಕೈಲಾಸನಾಥ ದೇವಾಲಯ' ನಿರ್ಮಿಸಿದ & ಕಟ್ಟಿದಂತಹ ಶಿಲ್ಪಿ ವಿಶ್ವ ಕರ್ಮ.

## 2ನೇ ಗೋವಿಂದ (ಕ್ರಿ.ಶ. 744–780) :

- ಇವನು ಗಂಗರ ಶ್ರೀಪುರುಷ & ವೆಂಗಿಯ ವಿಷ್ಣುವರ್ಧನನ್ನು ಸೋಲಿಸಿದ.
- ಬಿರುದುಗಳು : ಪ್ರತಾಪವಲೋಕ, ಪ್ರಭೂತವರ್ಷ, ಜಗತ್ತುಂಗ.

## ಧ್ರುವ (ಕ್ರಿ.ಶ. 780–793) :

- ಇವನು ಮೊಟ್ಟ ಮೊದಲ ಬಾರಿಗೆ ಸಾಮ್ರಾಜ್ಯವನ್ನು ಉತ್ತರ ಭಾರತದ ಕನೂಜ್‌ವರೆಗೆ ಆಕ್ರಮಿಸಿದ ಮೊದಲ ಕನ್ನಡ ರಾಜ ಎಂಬ ಕೀರ್ತಿಗೆ ಪಾತ್ರನಾಗಿದ್ದಾನೆ.
- ಇವನು ತನ್ನ ಉತ್ತರ ಭಾರತದ ದಂಡಯಾತ್ರೆಯಲ್ಲಿ :
    1. ಝೂನ್ಸಿಯಲ್ಲಿ – ಪ್ರತಿಹಾರದ ವತ್ಸರಾಜನನ್ನು
    2. ಗಂಗಾ ಯಮುನ ತೀರದಲ್ಲಿ – ಬಂಗಾಲದ ಧರ್ಮಪಾಲನನ್ನು
    3. ಕನೂಜಿನ – ಇಂದ್ರಾಯುಧನನ್ನು ಸೋಲಿಸಿದ (ಕಾರ್ಡಾ ಶಾಸನವು ಈ ಸಾಧನೆಗಳ ಬಗ್ಗೆ ತಿಳಿಸುತ್ತದೆ)
- ಇವನು ಹೊಯ್ಸಳದ ರಾಜಧಾನಿ ಹಳೆಬೀಡಿನಲ್ಲಿ ಧ್ರುವಸಮುದ್ರ ಎಂಬ ಕೆರೆಯನ್ನು ನಿರ್ಮಿಸಿದ್ದನು. ಆದ್ದರಿಂದ ಅದಕ್ಕೆ ದ್ವಾರಸಮುದ್ರ ಎಂಬ ಹೆಸರು ಬಂದಿದೆ.
- ಧಾರಾವರ್ಷ, ಶ್ರೀವಲ್ಲಭ, ಕಲಿವಲ್ಲಭ ಎಂಬ ಬಿರುದುಗಳಿದ್ದವು.



downloaded from: www.kpscvaani.com

## 3ನೇ ಗೋವಿಂದ (ಕ್ರಿ.ಶ.793–841) :

- ಇವನ ಕಾಲದಲ್ಲಿನ ರಾಷ್ಟ್ರಕೂಟ ಸಾಮ್ರಾಜ್ಯವು ಹಿಮಾಲಯದವರೆಗೂ ಹಬ್ಬಿತ್ತು.
- ನೃಪತುಂಗನ 'ಸಂಜನ ತಾಮ್ರ ಶಾಸನ' ತಿಳಿಸಿರುವಂತೆ "ಗೋವಿಂದನ ಅಶ್ವಪಡೆಯು ಹಿಮಾಲಯದಲ್ಲಿ ಹರಿಯುತ್ತಿದ್ದ ಝರಿಗಳ ನೀರನ್ನು ಕುಡಿದವು & ಸಮರ ಗಜಗಳು ಗಂಗಾನದಿಯ ನೀರನ್ನು ಕುಡಿದವು" ಎಂದು ವರ್ಣಿಸಿದೆ.
- ಶ್ರೀವಲ್ಲಭ, ನರೇಂದ್ರ, ಜಗತ್ತುಂಗ, ಪ್ರಭೂತವರ್ಷ, ಜನವಲ್ಲಭ ಇವನ ಬಿರುದುಗಳು.

## ಅಮೋಘವರ್ಷ ನೃಪತುಂಗ (ಕ್ರಿ.ಶ. 814–878) :

- ರಾಷ್ಟ್ರಕೂಟರ ಅರಸರಲ್ಲೇ ಪ್ರಸಿದ್ಧನಾದ ಇವನ ಮೊದಲ ಹೆಸರು ಶರ್ವ.
- ಈತನ ಪ್ರಾರಂಭಿಕ ಆಳ್ವಿಕೆಯು ಅನೇಕ ಅಡೆತಡೆಗಳಿಂದ ಕೂಡಿತ್ತು.
- ಗಂಗರೊಡನೆ ಹಾಗೂ ಪಲ್ಲವರೊಡನೆ ವಿವಾಹ ಸಂಬಂಧದಿಂದ ವೈಷಮ್ಯವನ್ನು ನಿವಾರಿಸಿದನು.
- ಶಾಂತಿಪ್ರಿಯನಾದುದರಿಂದ ಉತ್ತರದ ಕೆಲವು ಸಾಮ್ರಾಜ್ಯಗಳನ್ನು ಕಳೆದುಕೊಂಡನು.
- ಬಂಕೇಶ ಇವನ ಸೇನಾನಿಯಾಗಿದ್ದನು. (ಬಂಕಾಪುರ ಕಟ್ಟಿಸಿದನು).
- ಜೈನ ಗುರು ಜೀನ ಸೇನಾಚಾರ್ಯ – ಇವನ ಗುರುಗಳು.
- ಮೊದಲು ವೈಷ್ಣವನಾಗಿದ್ದು ನಂತರ ಜೈನ ಧರ್ಮ ಅವಲಂಬಿಸಿದನು.
- ಇವನು ವೆಂಗಿಯ ಚಾಲುಕ್ಯರನ್ನು ಕಡಲೆಯಂತೆ ಹುರಿದ ಎಂದು ಬಾಗುಮ್ರಾ ಶಾಸನ ತಿಳಿಸುತ್ತದೆ.
- ಕಲಾಪ್ರಿಯನಾದ ಈತ 'ಮಾನ್ಯಖೇಟ' ಎಂಬ ಹೊಸ ರಾಜಧಾನಿಯನ್ನು ನಿರ್ಮಿಸಿದ್ದು ಅದು 'ಇಂದ್ರನ ಅರಮನೆಯನ್ನು ಮೀರಿಸುವಂತಿತ್ತು' ಎಂದು ಶಾಸನಗಳು ತಿಳಿಸಿವೆ.
- ಕ್ರಿ.ಶ 851ರಲ್ಲಿ ಅರಬ್ ಸುಲೈಮನ್ ನೃಪತುಂಗ ಆಸ್ಥಾನಕ್ಕೆ ಭೇಟಿ ನೀಡಿ ಅವನ ಸಾಮ್ರಾಜ್ಯವು ಅಂದಿನ ಪ್ರಪಂಚದ 4 ಖ್ಯಾತ ಸಾಮ್ರಾಜ್ಯಗಳಲ್ಲಿ ಒಂದಾಗಿತ್ತು ಎಂದು ಬಣ್ಣಿಸಿದ್ದಾನೆ. (ರೋಮನ್/ಚೀನಾ ಬಾಗ್ದಾದನ ಖಲೀಫನ ಸಾಮ್ರಾಜ್ಯ).
- ಕೊಲ್ಲಾಪುರದ ಲಕ್ಷ್ಮೀ ದೇವಸ್ಥಾನಕ್ಕೆ ತನ್ನ ಕಿರುಬೆರಳನ್ನೇ ಕಾಣಿಕೆಯಾಗಿ ನೀಡಿದ ಇವನನ್ನು ಕರ್ನಾಟಕದ ಅಶೋಕ ಎನ್ನುತ್ತಾರೆ.
- ಇವನ ಬಿರುದುಗಳೆಂದರೆ – ವೀರನಾರಾಯಣ, ರಟ್ಟಮಾರ್ತಾಂಡ, ಅತೀಶಯದವಳ & ಲಕ್ಷ್ಮೀ ವಲ್ಲಭೇಂದ್ರ & ನೃಪತುಂಗ.



downloaded from: www.kpscvaani.com

- ಇವನ ಕೃತಿಗಳು – ಕವಿರಾಜಮಾರ್ಗ, ಪ್ರಶ್ನೋತ್ತರ ರತ್ನಮಾಲ
- ಶ್ರೀ ವಿಜಯ – ಇವನ ಆಸ್ಥಾನದ ಕವಿಯಾಗಿದ್ದನು.

## 3ನೇ ಕೃಷ್ಣ (ಕ್ರಿ.ಶ. 939–966) :

- ಇವನು ಪರಾಕ್ರಮಿಯಾಗಿದ್ದು ಗಂಗಾಸಿಂಹಾಸನವನ್ನು ರಾಚಮಲ್ಲನಿಂದ ಕಿತ್ತು ಬೂತುಗನಿಗೆ ಕೊಟ್ಟನು.
- ಇವನು ಕಂಚಿ, ತೊಂಡಮಂಡಲ & ತಂಜಾವೂರುಗಳನ್ನು ಗೆದ್ದು ಕಂಚಿಗೊಂಡ ಎಂಬ ಬಿರುದು ಪಡೆದನು.
- ರಾಮೇಶ್ವರನನ್ನು ಗೆದ್ದು ಅಲ್ಲಿ ಕೃಷ್ಣೇಶ್ವರ & ಮಾರ್ತಾಂಡೇಶ್ವರ ಗುಡಿಗಳನ್ನು ನಿರ್ಮಿಸಿದನು.
- ಇವನ ಆಸ್ಥಾನದಲ್ಲಿ ಉಭಯ ಕವಿ ಕವಿಚಕ್ರವರ್ತಿಯಾದ ಪೊನ್ನನಿದ್ದನು.

## ರಾಷ್ಟ್ರಕೂಟರ ಕಡೆಯ ಅರಸರು :

- 3ನೇ ಕೃಷ್ಣ ನಂತರ ಖೋಟ್ಟಿಗ ಅಧಿಕಾರಕ್ಕೆ ಬಂದನು. ದುರ್ಬಲನಾದ ಈತ ಪೌರಮಾರ ಸೀಯಕ ಹರ್ಷನೊಂದಿಗೆ ಕ್ರಿ.ಶ 972ರಲ್ಲಿ ನಡೆದ ಕದನದಲ್ಲಿ ಹತನಾದನು.
- ಇವನ ನಂತರ ಇಮ್ಮಡಿ ಕರ್ಕನು ಅಧಿಕಾರಕ್ಕೆ ಬಂದಿದ್ದು, ಇವನನ್ನು 2ನೇ ತೈಲಪನು ಕ್ರಿ.ಶ. 973ರಲ್ಲಿ ಸೋಲಿಸಿ ರಾಷ್ಟ್ರಕೂಟರ ಆಳ್ವಿಕೆಗೆ ಇತಿಶ್ರೀ ಹಾಡಿದನು.

## ಆಡಳಿತ :

- ಇವರ ಸಾಮ್ರಾಜ್ಯ ಅಂದಿನ ಸಮಕಾಲೀನ ಕಾನೂಜ್ ಸಾಮ್ರಾಜ್ಯಕ್ಕಿಂತಲೂ ವಿಶಾಲವಾಗಿತ್ತು. ಸಾಮ್ರಾಜ್ಯವನ್ನು ಅನೇಕ ವಿಭಾಗಗಳಾಗಿ ವಿಂಗಡಿಸಿದ್ದನು.
- ಪರ್ಶಿಯಾ, ಅರೇಬಿಯಾಗಳೊಂದಿಗೆ ವ್ಯಾಪಾರ ಸಂಬಂಧಗಳನ್ನು ಹೊಂದಿ ಅಪಾರ ಐಶ್ವರ್ಯವನ್ನು ಗಳಿಸಿತು.
- ರಾಷ್ಟ್ರವೆಂಬುದು ಆಡಳಿತದ ಪ್ರಮುಖ ಘಟಕವಾಗಿತ್ತು.
- ವಿಷಯ ರಾಷ್ಟ್ರದ ಉಪವಿಭಾಗವಾಗಿತ್ತು. 200 ಗ್ರಾಮಗಳನ್ನು ಒಳಗೊಂಡ ಘಟಕವೇ 'ವಿಷಯ' ಇದರ ಮುಖ್ಯಸ್ಥ ವಿಷಯಪತಿ ಆಗಿದ್ದನು.
- ವಿಷಯದ ನಂತರದ ಘಟಕ 'ಭುಕ್ತಿ' ಇದು 100–500 ಹಳ್ಳಿಗಳನ್ನು ಒಳಗೊಂಡಿದ್ದು ಇದರ ಮುಖ್ಯಸ್ಥ ಭೋಗಪತಿ ಆಗಿದ್ದನು.



downloaded from: www.kpscvaani.com

- ಆಡಳಿತದ ಅನುಕೂಲಕ್ಕಾಗಿ ರಾಷ್ಟ್ರ (ಮಂಡಲ), ವಿಷಯ, ನಾಡು, ಗ್ರಾಮಗಳಾಗಿ ವಿಭಜಿಸಲಾಗಿತ್ತು.
- ಗ್ರಾಮದ ಮುಖ್ಯಸ್ಥನಿಗೆ ಗ್ರಾಮಪತಿ ಎಂದು ಕರೆಯುತ್ತಿದ್ದರು. ಗ್ರಾಮ ಸೈನ್ಯಕ್ಕೆ ಈತನೇ ಮುಖ್ಯಸ್ಥ. ಗ್ರಾಮ ಲೆಕ್ಕಿಗ ಈತನ ಸಹಾಯಕ.

**ಕಂದಾಯ :**

- ಭೂಕಂದಾಯ ರಾಜ್ಯದ ಮುಖ್ಯ ಆದಾಯವಾಗಿತ್ತು. ಒಟ್ಟು ಉತ್ಪನ್ನದ ಶೇ.1ರಷ್ಟು ಇದ್ದಿತ್ತು.
- ವಿದೇಶಿ ವ್ಯಾಪಾರದಿಂದ ರಾಜ್ಯಕ್ಕೆ ಅಪಾರ ಸುಂಕ ಬರುತ್ತಿತ್ತು.
- ಅಲ್ಲದೆ ಉದ್ರಂಗ, ಉಪರಿಕರ, ಪ್ರತ್ಯಯ, ವಿಷ್ಠಿ & ಭಾಗಾಕಾರ ಎಂಬ ಇತರೆ ತೆರಿಗೆಗಳು ರೂಢಿಯಲ್ಲಿದ್ದವು.

**ಸೇನಾಢಳಿತ :**

- ರಾಷ್ಟ್ರಕೂಟರ ಸೇನೆಯು ಕಾಲ್ದಳ, ಅಶ್ವಪಡೆ, ಗಜಪಡೆ, ರಥಪಡೆಗಳಿಂದ ಕೂಡಿದ್ದರಿಂದ ಇದನ್ನು ಚದುರಂಗ ಬಲ ಎನ್ನುತ್ತಿದ್ದರು.
- ಸೈನ್ಯದ ಮುಖ್ಯಸ್ಥರನ್ನ ದಂಡನಾಯಕ ಎನ್ನುತ್ತಿದ್ದರು.

**ಶಿಕ್ಷಣ :**

- ಗುರುಕುಲ ಪದ್ಧತಿ ಜಾರಿಯಲ್ಲಿತ್ತು.
- ಮಠಗಳಲ್ಲಿ ದೇವಾಲಯ ಆಗ್ರಹಾರಗಳಲ್ಲಿ ಬೋಧಿಸುತ್ತಿದ್ದರು.
- ಸಂಸ್ಕೃತ, ವೇದ, ಜ್ಯೋತಿಷ್ಯ, ತರ್ಕಶಾಸ್ತ್ರ, ಪುರಾಣಗಳಲ್ಲಿ ಶಿಕ್ಷಣ ನೀಡುತ್ತಿದ್ದರು.
- ಕಳಸ, ಇಂಡಿ, ಸಲೋಟಗಿ, ಮಾನ್ಯ ಖೇಟಗಳು ಆಗಿನ ಪ್ರಸಿದ್ಧ ಶೈಕ್ಷಣಿಕ ಕೇಂದ್ರಗಳಾಗಿದ್ದವು.

**ಸಾಹಿತ್ಯ :**

- ಚಂಪೂ ಶೈಲಿ – ಗದ್ಯ & ಪದ್ಯ ಸೇರಿ ರಚಿಸಿದ್ದು.
- 10ನೇ ಶತಮಾನದ ಕನ್ನಡದ ಸುವರ್ಣಯುಗವಾಗಿತ್ತು



downloaded from: www.kpscvaani.com

- ಇವರ ಕಾಲದಲ್ಲಿ ಕನ್ನಡ & ಸಂಸ್ಕೃತದಲ್ಲಿ ಸಾಹಿತ್ಯ ರಚನೆಯಾಗಿತ್ತು.
- ಆದಿಕವಿ ಪಂಪನ ಹೆಸರಿನಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯವು 'ನಾಡೋಜ' ಎಂಬ ಪ್ರಶಸ್ತಿಯನ್ನು ಕರ್ನಾಟಕದ ಹಿರಿಯ ಸಾಧಕರಿಗೆ ನೀಡುತ್ತಾ ಬಂದಿದೆ.

## ಸಂಸ್ಕೃತ ಸಾಹಿತ್ಯ :

| ಕವಿಗಳು | ಕೃತಿಗಳು |
|---|---|
| 1. ತ್ರಿವಿಕ್ರಮ | ನಳಚಂಪೂ, ಮದಲಸಚಂಪು |
| 2. ಸೋಮದೇವ ಸೂರಿ | ನೀತಿವಾಕ್ಯಾಮೃತ, ಯಶಸ್ತಿಲಕ & ಚಂಪೂ |
| 3. ಮಹಾವೀರ ಚಾರ್ಯ | ಗಣಿತ ಸಾರ ಸಂಗ್ರಹ |
| 4. ಜಿನಸೇನಾಚಾರ್ಯ | ಹರಿವಂಶ, ಪಾರ್ಶಭ್ಯದಯ, ಆದಿಪುರಾಣ |
| 5. ವೀರಸೇನಾ | ದವಳ, ಜಯದವಳ |
| 6. ಅಮೋಘವರ್ಷ | ಪ್ರಶ್ನೋತ್ತರ ಮಾಲ |
| 7. ಶಕ್ತಾಯನ (ಶಕಟಾಯನ) | ಅಮೋಘ ವೃತ್ತಿ ಶಬ್ದಾನುಶಾಸನ |

## ಕನ್ನಡ ಸಾಹಿತ್ಯ :

| ಕವಿಗಳು | ಕೃತಿಗಳು |
|---|---|
| 1. ಶ್ರೀವಿಜಯ | ಕವಿರಾಜಮಾರ್ಗ (ಕನ್ನಡದ ಮೊದಲ ಕೃತಿ) |
| 2. ಪೊನ್ನ | ಶಾಂತಿಪುರಾಣ & ಭುವನೈಕ್ಯ ರಾಮಾಭ್ಯುದಯ<br>ಜೀನಾಕ್ಷರ & ಪ್ರತ್ಯಾಗಾತ |
| 3. ಪಂಪ | ಆದಿಪುರಾಣ & ಪಂಪಭಾರತ (ವಿಕ್ರಮಾರ್ಜುನ ವಿಜಯ) |
| 4. ರನ್ನ | ಅಜಿತಪುರಾಣ & ಗದಾಯುದ್ಧ (ಸಾಹಸ ಭೀಮ ವಿಜಯ) |
| 5. ಶಿವಕೋಟ್ಯಾಚಾರ್ಯ | ವಡ್ಡಾರಾಧನೆ (ಕನ್ನಡದ ಮೊದಲ ಗದ್ಯ ಕಾವ್ಯ) |
| 6. ದಂಡಿ | ದಶಕುಮಾರ ಚರಿತೆ & ಕಾವ್ಯದರ್ಶ |
| 7. ಹಾಲಾಯುದ | ಮಿತ್ರ ಸಂಜೀವಿನಿ, ಕವಿರಹಸ್ಯ |
| 8. ಅಸಗ | ವರ್ಧಮಾನ ಪುರಾಣ |
| 9. ಕುಮುದೇಂದು | ಸಿರಿಭೂದಲಯ |
| 10. ಅಕಳಂಕ ದೇವ | ಅಷ್ಟಶತಿ, ಪ್ರಮೋಧ ಕಮಲ |



downloaded from: www.kpscvaani.com

## ರತ್ನತ್ರಯರು :

| ಕವಿಗಳು | ಆಶ್ರಯದಾತರು |
|---|---|
| 1. ಪಂಪ | ಅರಿಕೇಸರಿ ಆಸ್ಥಾನ |
| 2. ಪೊನ್ನ | 3ನೇ ಕೃಷ್ಣ |
| 3. ರನ್ನ | ಸತ್ಯಾಶ್ರಯ & ಇರವಬೇಡಂಗ |

- ಐತಿಹಾಸಿಕ ವ್ಯಕ್ತಿಗಳು: ಪಾರ್ಶ್ವನಾಥ & ಮಹಾವೀರ

## ಕಲೆ & ವಾಸ್ತುಶಿಲ್ಪ :

- ರಾಷ್ಟ್ರಕೂಟರು ಕಲೆ & ವಾಸ್ತುಶಿಲ್ಪದ ಮಹಾನಿರ್ಮಾಪಕರಾಗಿದ್ದಾರೆ.
- ರಾಷ್ಟ್ರಕೂಟರ ಅರಸರು ಶಿವ & ವಿಷ್ಣುವಿನ ಆರಾಧಕರಾಗಿದ್ದರು.
- ಎಲ್ಲೋರ – ರಾಷ್ಟ್ರಕೂಟರು ನಿರ್ಮಿಸಿದ 34 ಗುಹಾಂತರ ದೇವಾಲಯಗಳು ಇಲ್ಲಿವೆ. ಅವುಗಳಲ್ಲಿ ಜಗತ್ಪ್ರಸಿದ್ಧವಾದುದು ಕೈಲಾಸನಾಥ ದೇವಾಲಯ. ಒಂದನೇ ಕೃಷ್ಣನು ಇದರ ನಿರ್ಮಾತೃ. ಈ ದೇವಾಲಯವನ್ನು ಎರಡು ಆನೆಗಳು ಹೊತ್ತು ನಿಂತಂತೆ ಕೆತ್ತಲಾಗಿದೆ. ಇದರಲ್ಲಿ ರಾವಣನು ಕೈಲಾಸ ಪರ್ವತವನ್ನು ಎತ್ತುತ್ತಿರುವ ದೃಶ್ಯ, ಗಿರಿಜಾ ಕಲ್ಯಾಣ, ಪಗಡೆ ಆಡುತ್ತಿರುವುದು, ದಶವತಾರ, ಭೈರವ, ರುದ್ರತಾಂಡವ ಇತ್ಯಾದಿ ದೃಶಗಳು ಅದ್ಭುತ ಕಲಾಸಾಧನೆಯಾಗಿದೆ.





downloaded from: www.kpscvaani.com

- ಪರ್ಶಿಬ್ರೌನ – ಇಂತಹ ಅಪೂರ್ವವಾದ ಕಲಾಕೃತಿ ಪ್ರಪಂಚದ ಯಾವ ಭಾಗದಲ್ಲೂ ದೊರೆಯುವುದಿಲ್ಲ ಎನ್ನುತ್ತಾರೆ.
- ವಿ.ಎ.ಸ್ಮಿತ – ಪ್ರಪಂಚದ ಮಹಾ ಅಚ್ಚರಿಗಳಲ್ಲಿ ಒಂದು ಎಂದಿದ್ದಾರೆ.
- ಎಲಿಫೆಂಟಾ – ಇದರ ಮೊದಲ ಹೆಸರು 'ಗೋರಖ್‌ಪುರ'. ಇಲ್ಲಿ ರಾಷ್ಟ್ರಕೂಟರ ಕಾಲದ 7 ಗುಹೆಗಳಿವೆ. ಅವುಗಳಲ್ಲಿ ಮಧ್ಯಕಾಲೀನ ತ್ರಿಮೂರ್ತಿ ಗುಹೆ ದೊಡ್ಡದಾಗಿದೆ.
- ಕೈಲಾಸ ದೇವಾಲಯ 2 ಸ್ಥಳಗಳಲ್ಲಿದೆ.
    1. ಎಲ್ಲೋರ
    2. ಕಂಚಿ.

## ರಾಷ್ಟ್ರಕೂಟರ ಶಾಸನಗಳು :

ರಾಷ್ಟ್ರಕೂಟರ ಅನೇಕ ಶಾಸನಗಳು ತ್ರಾಮ ಪತ್ರಗಳಾಗಿವೆ. ಉದಾಹರಣೆಗೆ

- ದಂತಿದುರ್ಗದ ಸಮನಗಡ ತಾಮ್ರ ಪತ್ರ
- ಅಮೋಘವರ್ಷನ ಸಂಜನ ತಾಮ್ರ ಪತ್ರ
- ಮೂರನೆ ಗೋವಿಂದನ ತಾಮ್ರ ಪತ್ರಗಳು

ಅಮೋಘವರ್ಷದ ಸಂಜನ ತಾಮ್ರ ಪತ್ರವು ರಾಜನು ಪ್ರಜೆಗಳ ಕಲ್ಯಾಣಕ್ಕೆ ದೇವಿಗೆ ತನ್ನ ಹೆಬ್ಬೆರಳು ಕೊಯ್ದು ರಕ್ತಾಭಿಷೇಕ ಮಾಡಿದ್ದನ್ನು ಉಲ್ಲೇಖಿಸಿದೆ. ಇಲ್ಲಿ ರಾಜ ಮತ್ತು ಪ್ರಜೆಗಳ ಸಂಬಂಧ ತಿಳಿಯುತ್ತದೆ. ಮೂರನೆ ಗೋವಿಂದ ತಾಮ್ರ ಪತ್ರಗಳು ಬ್ರಿಟಿಷ್ ಮ್ಯೂಜಿಯಂನಲ್ಲಿ ಇವೆ.

## ಕಲ್ಯಾಣಿ ಚಾಲುಕ್ಯ (ಕ್ರಿ. ಶ 973 – 1189) :



- ರಾಜಧಾನಿ – ಬೀದರ್ ಜಿಲ್ಲೆಯ ಬಸವ ಕಲ್ಯಾಣ
- ಸ್ಥಾಪಕ – 2ನೇ ತೈಲಪ (ಇಮ್ಮಡಿ ತೈಲಪ)
- ಲಾಂಛನ – ವರಾಹ
- ನಾಣ್ಯಗಳು – ಕಲ್ಯಾಣ, ಕಳಂಜು, ಕಾಸು, ಮಂಜರಿ, ಅಕ್ಕ
- ಮೂಲ – ಇವರು ಬಾದಾಮಿ ಚಾಲುಕ್ಯರ ವಂಶದವರೆಂದು

GNANADHARE IAS ACADEMY



downloaded from: www.kpscvaani.com

ಹೇಳಿದ್ದಾರೆ.

## ಇಮ್ಮಡಿ ತೈಲಪ (ಕ್ರಿ.ಶ. 973–997) :

- ಇಮ್ಮಡಿ ತೈಲಪ ಕಲ್ಯಾಣ ಚಾಲುಕ್ಯ ವಂಶದ ಸ್ಥಾಪಕ.
- ಕ್ರಿ.ಶ 973ರಲ್ಲಿ ಇಮ್ಮಡಿ ಕರ್ಕನನ್ನು ಮಳಖೇಡದಲ್ಲಿ ಸೋಲಿಸಿ ಪಟ್ಟವೇರಿದನು.
- ಇವನು ಗಂಗಚಂಶದ ಪಾಂಚಾಲದೇವನನ್ನು ಸೋಲಿಸಿ 'ಪಾಂಚಾಲವರ್ದನ ಪಂಚಾನನ' ಎಂಬ ಬಿರುದು ಪಡೆದನು.
- 'ಆಹವಮಲ್ಲ', 'ಮಹಾರಾಜಾಧಿರಾಜ' 'ಸತ್ಯಾಶ್ರಯ ಕುಲತಿಲಕ' & 'ಶ್ರೀ ಪೃಥ್ವಿವಲ್ಲಭ' ಮುಂತಾದ ಬಿರುದುಗಳನ್ನು ಹೊಂದಿದ್ದನು.

## ಇರಿವಬೆಡಂಗ ಸತ್ಯಾಶ್ರಯ (ಕ್ರಿ.ಶ 997–1008) :

- ಸತ್ಯಾಶ್ರಯನು ರಾಣಿ ಜೌಕಬ್ಬೆಯ ಮಗ.
- ಇವನು ಚೋಳರನ್ನು ಹಿಮ್ಮೆಟ್ಟಿಸಿ ಇರಿವಬೆಡಂಗ ಎಂಬ ಬಿರುದು ಪಡೆದ.
- ಇವನು ಕನ್ನಡದ ಕವಿ ರನ್ನನ ಆಶ್ರಯದಾತನಾಗಿದ್ದನು. ರನ್ನ ಇವನನ್ನು ಮಹಾಭಾರತದ ಭೀಮನಿಗೆ ಹೋಲಿಸಿದ್ದಾನೆ.
- ಇವನ ನಂತರ ಬಂದ ಒಂದನೇ ಸೋಮೇಶ್ವರನು ರಾಜಧಾನಿಯನ್ನು ಮಾನ್ಯಖೇಟದಿಂದ ಕಲ್ಯಾಣಕ್ಕೆ ವರ್ಗಾಯಿಸಿದರು.

## ಜಯಸಿಂಹ (ಕ್ರಿ.ಶ.1015) :

- ಇವನು ಚೋಳರನ್ನು ಸೋಲಿಸಿ, 'ಚೋಳೋಗ್ರ ಕಾಲನು' ಎಂಬ ಬಿರುದು ಪಡೆದನು.
- ಇವನ ಅಕ್ಕ 'ಅಕ್ಕ ದೇವಿಯು ಪರಿಣಿತ ಸೇನಾನಿಯಾಗಿದ್ದು 'ರಣಭೈರವ' ಎಂಬ ಬಿರುದು ಪಡೆದಿದ್ದಳು.
- ಜಯಸಿಂಹನ ಆಸ್ಥಾನದಲ್ಲಿ ದುರ್ಗಸಿಂಹನು ಪಂಚತಂತ್ರ ಎಂಬ ಕೃತಿಯನ್ನು ಕನ್ನಡದಲ್ಲಿ ರಚಿಸಿದ್ದು ಇದು ವಸುಭಾಗಭಟನ ಸಂಸ್ಕೃತದಲ್ಲಿನ ಪಂಚತಂತ್ರದ ಭಾಷಾಂತರವಾಗಿದೆ.

## ಒಂದನೇ ಸೋಮೇಶ್ವರ :



downloaded from: www.kpscvaani.com

- ತ್ರೈಲೋಕ್ಯಮಲ್ಲ ಈತನ ಬಿರುದಾಗಿತ್ತು. ಇವನ್ನು ಹೊಸ ರಾಜಧಾನಿ ಕಲ್ಯಾಣಿಯನ್ನು ಕಟ್ಟಿದ. ಇದೆ ಬೀದರ್ ಜಿಲ್ಲೆಯ ಬಸವ ಕಲ್ಯಾಣ.
- ಇವರ ಚೋಳರ ರಾಜಧಿರಾಜರನ್ನು ಮಣಿಸಿದ ಪ್ರಯುಕ್ತ ಅಣ್ಣೀಗೇರಿಯಲ್ಲಿ ಚೋಳಗೊಂಡ ಶ್ರೀ ಪುರುಷ ಎಂಬ ಮಂದಿರವನ್ನು ಕಟ್ಟಿಸಿದ.
- ಜಾತಕ ತಿಲಕ ಬರೆದ ನರಗುಂದದ ಶ್ರೀಧರಾಚಾರ್ಯ ಈತನ ಸಮಕಾಲೀನ.
- ಚೋಳರ ರಾಜಾಧಿರಾಜನನ್ನು ಕೊಪ್ಪಂನಲ್ಲಿ ಸೋಲಿಸಿದನು.

## ಆರನೇ ವಿಕ್ರಮಾದಿತ್ಯ (ಕ್ರಿ.ಶ 1076–1126) :

- ಕ್ರಿ.ಶ. 1076ರಲ್ಲಿ 2ನೇ ಸೋಮೇಶ್ವರನನ್ನು ಸೋಲಿಸಿ, ಅಧಿಕಾರಕ್ಕೆ ಬಂದ ಈತ ಕ್ರಿ.ಶ 1076ರಲ್ಲಿ ಚಾಲುಕ್ಯ ವಿಕ್ರಮಶಕೆಯನ್ನು ಆರಂಭಿಸಿದನು. ತ್ರಿಭುವನ ಪೆರ್ಮಾಡಿ ದೇವ ಇವನ ಬಿರುದುಗಳಾಗಿದ್ದವು.
- ಹಾಸನ ಬಳಿ ನಡೆದ ಕಣ್ಣೆಗಾಲ ಕದನದಲ್ಲಿ ಹೊಯ್ಸಳರ ವಿಷ್ಣುವರ್ಧನನ್ನು ಸೋಲಿಸಿದನು.
- 6ನೇ ವಿಕ್ರಮಾದಿತ್ಯನು ತನ್ನ ರಾಯಭಾರಿಯನ್ನು ಸಿಂಹಳದ ದೊರೆ (ಸಿಲೋನ್) 'ವಿಜಯಬಾಹುವಿನ' ಆಸ್ಥಾನಕ್ಕೆ ಕಳಿಸಿ ಉತ್ತಮ ಸಂಪರ್ಕವನ್ನು ಹೊಂದಿದ್ದನು.
- ಬಿಲ್ಹಣನು ಇವನನ್ನು ಕರ್ನಾಟಕದ ಚಂದ್ರ ಎಂದು ಕರೆದಿದ್ದಾನೆ.
- ಇವನು ಕಾಶ್ಮೀರ ಕವಿ ಬಿಲ್ಹಣ (ವಿಕ್ರಮಾಂಕದೇವ ಚರಿತ) & ಅವನ ಗುರು ವಿಜ್ಞಾನೇಶ್ವರ (ಮಿತಾಕ್ಷರ)ನ ಆಶ್ರದಾತನಾಗಿದ್ದನು.
- ಇವನ ತಮ್ಮ ಕೀರ್ತಿವರ್ಮ ಕನ್ನಡದ ಮೊದಲ ಪಶುವೈದ್ಯ ಕೃತಿ ಗೋವೈದ್ಯವನ್ನು ಬರೆದನು.
- ಇವನು ವಿಕ್ರಮಾಪು ಎಂಬ ಹೊಸ ನಗರವನ್ನು ನಿರ್ಮಿಸಿದನು.
- ಇವನು ದಂಡನಾಯಕ ದಂಡಾದೀಶನು ಇಟಗಿಯಲ್ಲಿ ಮಹಾದೇವ ದೇವಾಲಯ ನಿರ್ಮಿಸಿದನು. ಇದನ್ನು ದೇವಾಲಯಗಳ ಚಕ್ರವರ್ತಿ ಎಂದು ಕರೆಯಲಾಗಿದೆ.
- ಇವನ ಹೆಂಡತಿ ಚಂದ್ರಲೇಖ ನೃತ್ಯ ಸಂಗೀತ ಪ್ರವೀಣೆಯಾಗಿದ್ದು ಅಭಿನವ ಸರಸ್ವತಿ ಎಂಬ ಬಿರುದು ಪಡೆದಿದ್ದಾಳೆ.



downloaded from: www.kpscvaani.com

## ಮೂರನೇ ಸೋಮೇಶ್ವರ (ಕ್ರಿ.ಶ 1127–1138) :

- ಇವನು ಶಾಂತಪ್ರಿಯ ಅರಸನಾಗಿದ್ದು ಮಾನಸೋಲ್ಲಾಸ ಅಥವಾ ಅಭಿಲಾಷಿತಾರ್ಥ ಚಿಂತಾಮಣಿ ಎಂಬ ಕೃತಿಯನ್ನು ರಚಿಸಿದ್ದಾನೆ.
- ವಿಕ್ರಮಾಂಕಭ್ಯುದಯಂ ಎಂಬುದು ಇವನ ಮತ್ತೊಂದು ಕೃತಿ.
- ಸರ್ವಜ್ಞ ಚಕ್ರವರ್ತಿ, ಸರ್ವಜ್ಞರಾಜ ಇವನ ಬಿರುದುಗಳು
- ಕೊನೆಯ ದೊರೆ – ನಾಲ್ಕನೇ ಸೋಮೇಶ್ವರ

## ಆಡಳಿತ :

- ಕಲ್ಯಾಣಿ ಚಾಲುಕ್ಯರು ಬಾದಾಮಿ ಚಾಲುಕ್ಯರ ಆಡಳಿತ ವ್ಯವಸ್ಥೆಯನ್ನು ಹೋಲುವಂತಹ ಆಡಳಿತ ಪದ್ದತಿ ರೂಪಿಸಿದರು.
- ಭೂಕಂದಾಯವು ರಾಜ್ಯದ ಮೂಲ ಆದಾಯವಾಗಿತ್ತು. ಆದಾಯದ ಇತರೆ ಮೂಲಗಳಲ್ಲಿ ಮಾರಾಟ ತೆರಿಗೆ, ಸುಂಕ, ವೃತ್ತಿ ತೆರಿಗೆ ಸೇರಿದ್ದವು.
- ಭೂಕಂದಾಯದ ವ್ಯವಸ್ಥೆಗೆ "ಕಡಿತವರ್ಗಡೆ" ಎಂಬ ಅಧಿಕಾರಿಯನ್ನು ನೇಮಿಸಲಾಗಿತ್ತು.
- ವ್ಯಾಪಾರದಲ್ಲಿ ಹಾಗೂ ವ್ಯವಹಾರಗಳಲ್ಲಿ ವಿವಿಧ ಶ್ರೇಣಿಗಳಿದ್ದವು.
- ರಾಜ್ಯಾಡಳಿತವನ್ನು ದಕ್ಷತೆಯಿಂದ ನಿರ್ವಹಿಸಲು ಅನೇಕ ಇಲಾಖೆಗಳನ್ನು ಸೃಷ್ಟಿಸಲಾಯಿತು.
  1. ದಾಸಿವರ್ಗಡೆ – ಅರಮನೆಯ ಪಾರುಪತ್ಯೆಗಾರ
  2. ಬಾಣಸವರ್ಗಡೆ – ಉಗ್ರಾಣ ಪಾರುಪತ್ಯೆಗಾರ
  3. ಅಂತಃ ಪುರಾಧ್ಯಕ್ಷ –ಅಂತಃಪುರದ ಮೇಲ್ವಿಚಾರಕ
  4. ಚಾಲುಕ್ಯರ – ಸಾಮ್ರಾಜ್ಯ ಆಡಳಿತ ವಿಂಗಡನೆ
  5. ರಾಷ್ಟ್ರ – ರಾಷ್ಟ್ರಪತಿ
  6. ವಿಷಯ – ವಿಷಯಪತಿ
  7. ನಾಡು – ನಾಡರಸ
  8. ಥಾನ – ಗ್ರಾಮಕೂಟ



downloaded from: www.kpscvaani.com

## ಸಾಹಿತ್ಯ (ಸಂಸ್ಕೃತ ಸಾಹಿತ್ಯ) :

| ಕವಿ | ಕೃತಿ |
|---|---|
| 1. ಬಿಲ್ಹಣ | ವಿಕ್ರಮಾಂಕದೇವ ಚರಿತ |
| 2. 3ನೇ ಸೋಮೇಶ್ವರ | ಮಾನಸೋಲ್ಲಾಸ (ಅಭಿಲಾಷಿತೀರ್ಥಚಿಂತಾಮಣಿ) |
| 3. ವಾದಿರಾಜ | ಪಾರ್ಶ್ವನಾಥ ಚರಿತೆ, ಯಶೋಧರ ಚರಿತೆ |
| 4. ಉದಯಾದಿತ್ಯ | ಉದಯಾದಿತ್ಯ ಅಲಂಕಾರ (ಅಲಂಕಾರ ಶಾಸ್ತ್ರ) |
| 5. ವಿಜ್ಞಾನೇಶ್ವರ | ಮಿತಾಕ್ಷರ ಸಂಹಿತೆ (ಕಾನೂನು ಸಂಹಿತೆ) |
| 6. ಬಸವಣ್ಣ | ವಚನಗಳು (ಕನ್ನಡ) |
| 7. ನಾಗಚಂದ್ರ | ಮಲ್ಲಿನಾಥ ಪುರಾಣ, ರಾಮಚಂದ್ರ ಚರಿತ ಪುರಾಣ |

## ಕಲ್ಯಾಣಿ ಚಾಲುಕ್ಯ ಕಾಲದ ಕನ್ನಡ ಸಾಹಿತ್ಯ :

| ಕವಿ | ಕೃತಿ |
|---|---|
| 1. ರನ್ನ (ಕವಿಚಕ್ರವರ್ತಿ) | ಅಜಿತಪುರಾಣ, ಸಾಹಸ ಭೀಮವಿಜಉ (ಗದಾಯುದ್ಧ) ಪರಶುರಾಮ ಚರಿತೆ, ಚಕ್ರೇಶ್ವರ ಚರಿತೆ, ರನ್ನಕಂದ |
| 2. 1ನೇ ನಾಗವರ್ಮ | ಕರ್ನಾಟಕ ಕಾದಂಬರಿ, ಛಂದೋಬುದಿ |
| 3. 2ನೇ ಛಾವುಮಡರಾಯ | ಲೋಕೋಪಕಾರಿ (ವೈದ್ಯಶಾಸ್ತ್ರ) |
| 4. ಶ್ರೀಧರಾಚಾರ್ಯ | ಜಾತಕ ತಿಲಕ (ಕನ್ನಡ ಮೊದಲ ಜೋತಿಷ್ಯ ಶಾಸ್ತ್ರ) |
| 5. 2ನೇ ನಾಗವರ್ಮ | ಕಾವ್ಯವಲೋಕನ (ಶೃಂಗಾರ) ಭಾಷಾಭೂಷಣ (ವ್ಯಾಕರಣ) ಅಭಿದಾನ ವಸ್ತುಕೋಶ (ನಿಘಂಟು) |
| 6. ದುರ್ಗಸಿಂಹ | ಪಂಚತಂತ್ರ |
| 7. ಸೋಮನಾಥ ಜಗದ್ದಳ | ಕರ್ನಾಟಕ ಕಲ್ಯಾಣ ಕಾರಕ |
| 8. ಪಾರ್ಶ್ವನಾಥ | ಸಂಗೀತ ಮಯಸಾರ |
| 9. ನಯಸೇನ | ಧರ್ಮಾಮೃತ |
| 10. ಕೀರ್ತಿವರ್ಮ | ಗೋವೈದ್ಯ |

- ದೇವರ ಅಥವಾ ಜೇಡರ ದಾಸಿಮಯ್ಯ ಕನ್ನಡದ ಪ್ರಪಥಮ ವಚನಾಕಾರ ಆಗಿದ್ದು ಇವರ ಅಂಕಿತ ನಾಮ – ರಾಮನಾಥ



downloaded from: www.kpscvaani.com



## ಕಲೆ & ವಾಸ್ತುಶಿಲ್ಪ :

- ಇವರ ವಾಸ್ತುಶಿಲ್ಪದ ಪ್ರಮುಖ ಶೈಲಿಯೆಂದರೆ – ಇವರು ದೇವಾಲಯಗಳ ಗರ್ಭಗುಡಿಗೆ ಪ್ರದಕ್ಷಿಣೆ ಪಥ ಇಲ್ಲದಿರುವುದು ಅಥವಾ ಒಳಗಡೆ ಇರುವುದು
- ಕಲ್ಯಾಣಿ ಚಾಲುಕ್ಯರು ನಿರ್ಮಿಸಿದ ಪ್ರಮುಖ ದೇವಾಲಯಗಳೆಂದರೆ
  1. ಜಲಸಾಂಗ್ವಿಯದ – ಸರಸ್ವತಿ, ಸೋಮೇಶ್ವರ, ತ್ರಿಕೂಟೇಶ್ವರ ದೇವಾಲಯಗಳು
  2. ಲಕ್ಕುಂಡಿಯಾ – ಕಾಶಿ ವಿಶ್ವೇಶ್ವರ & ಜೈನಬಸದಿ ಕುರುವತ್ತಿಯ ಮಲ್ಲಿಕಾರ್ಜುನ ದೇವಾಲಯ
  3. ಸಾವಡಿಯಾ – ಕಲ್ಲೇಶ್ವರ ದೇವಾಲಯ
  4. ಬಳ್ಳಿಗಾವೆಯ – ತ್ರಿಪುರಾಂತಕ
  5. ಇಟಗಿಯ – ಮಹದೇವ ದೇವಾಲಯ

## ನಾಣ್ಯಗಳು :

- ಗದ್ಯಾಣ, ಪಣ, ದ್ರುಮ್ಮು, ಪೊನ್, ಸುವರ್ಣ ಎಂಬ ನಾಣ್ಯಗಳನ್ನು ಟಂಕಿಸಲು ಲಕ್ಕುಂಡಿ ಹಾಗೂ ಸೂಡಿ ಎಂಬಲ್ಲಿ ಟಂಕಸಾಲೆಗಳನ್ನು ಸ್ಥಾಪಿಸಿದರು.



Coins of Chalukya Dynasty

GNANADHARE IAS ACADEMY



downloaded from: www.kpscvaani.com

## ಕಲ್ಯಾಣ ಕಲಚೂರಿಗಳು :



- ರಾಜಧಾನಿ – ಮೊದಲಿಗೆ ಮಂಗಳವೇಡ ನಂತರ ಕಲ್ಯಾಣಿ
- ಸ್ಥಾಪಕ – ಜೋಗಮ
- ಲಾಂಛನ – ನಂದಿ
- 2ನೇ ಬಿಜ್ಜಳ – ಇವನು 3ನೇ ತೈಲಪನ ಕಾಲದಲ್ಲಿ ಕಲ್ಯಾಣವನ್ನು ಆಕ್ರಮಿಸಿಕೊಂಡು ಸ್ವತಂತ್ರ ಪ್ರಾರಂಭಿಸಿದನು.
- ಇವರ ಮಂತ್ರಿ ಬಸವಣ್ಣನವರಾಗಿದ್ದರು.
- ಬಿರುದುಗಳು – ಭೂಜಬಲ ಚಕ್ರವರ್ತಿ, ತ್ರಿಭುವನ ಮಲ್ಲ, ಕಳಚೂರ್ಯ ಚಕ್ರವರ್ತಿ, ಶನಿವಾರ ಸಿದ್ದಿ
- ಬಸವಣ್ಣ – 2ನೇ ಬಿಜ್ಜಳನ ಪ್ರಧಾನ ಮಂತ್ರಿಯಾದ ಬಸವಣ್ಣನವರನ್ನು ಕರ್ನಾಟಕದ ಮಾರ್ಟಿನ್ ಲೂಥರ್ ಎಂದು ಕರೆಯುವರು.
- ಬಸವಣ್ಣನವರು 20ನೇ ಏಪ್ರಿಲ್ 1132ರಲ್ಲಿ ಬಿಜಾಪುರ ಜಿಲ್ಲೆ ಬಾಗೇವಾಡಿ ಎಂಬಲ್ಲಿ ಮಾದರಸ & ಮೊದಲಾಂಭಿಕೆಯ ಮಗನಾಗಿ ಜನಿಸಿದರು.
- ಬಸವಣ್ಣನವರ ಗುರು ಈಶಾನ್ಯದೇವ ಅಥವಾ ಜಾತಕವೇದಮುನಿ.
- ಮರಣ 1168ರಲ್ಲಿ ಕೂಡಲಸಂಗಮದಲ್ಲಿ ಮಲಪ್ರಭಾ & ಕೃಷ್ಣ ನದಿ ಸೇರುವ ಸ್ಥಳ.
- ಬಸವಣ್ಣನವರು ಅನುಭವ ಮಂಟಪ ಸ್ಥಾಪಿಸಿದರು. ಅದರ ಅಧ್ಯಕ್ಷರು ಅಲ್ಲಮಪ್ರಭು ಆಗಿದ್ದರು.
- ಬಸವಣ್ಣನವರು ಕೋಶಾಧಿಕಾರಿಯಾಗಿದ್ದ ಸಿದ್ಧರಸರ ಮಗಳು ನೀಲಾಂಭಿಕೆಯನ್ನು & ಮಂತ್ರಿ ಬಲದೇವರ ಮಗಳಾದ ಗಂಗಾಭಿಕೆಯನ್ನು ಮದುವೆಯಾದರು.
- ಇವರು 'ಶಕ್ತಿ ವಿಶಿಷ್ಟಾದ್ವೈತ' ಎಂಬ ಶೈವ ಮತವನ್ನು ಪ್ರತಿಪಾದಿಸಿದರು.
- ಮಡಿವಾಳ ಮಾಚಯ್ಯ, ಅಂಬಿಗೆ ಚೌಡಯ್ಯ, ಗಂಗಾದೇವಿ, ಅಕ್ಕಮಹಾದೇವಿ, ನೀಲಾಂಬಿಕೆ–ಅನುಭವ ಮಂಟಪದ ಪ್ರಮುಖ ಸದಸ್ಯರಾಗಿದ್ದರು.
- ಇವರು ವಿಧವಾ & ಅಂತರ್ ಜಾತಿ ವಿವಾಹವನ್ನು ಪ್ರೋತ್ಸಾಹಿಸಿದರು.
- ಮಧುವಯ್ಯ ಎಂಬ ಬ್ರಾಹ್ಮಣರ ಮಗಳು & ಹರಳಯ್ಯ ಎಂಬ ಅಸ್ಪೃಶ್ಯನ ಜೊತೆ ಮದುವೆ ಮಾಡಿಸಿದರು.



downloaded from: www.kpscvaani.com

## ಕಲ್ಯಾಣದ ಚಾಲುಕ್ಯರ ಶಾಸನಗಳು :

ಕಲ್ಯಾಣಿ ಚಾಲುಕ್ಯರ ಇತಿಹಾಸವನ್ನು ತಿಳಿಯಲು

- ಚಿಕ್ಕೇರೂರು ಶಾಸನ
- 6ನೇ ವಿಕ್ರಮಾಧಿತ್ಯನ ನೀಲಗುಂದ ತಾಮ್ರ ಶಾಸನ
- ಆರನೆ ವಿಕ್ರಮಾದಿತ್ಯನ ಗದಗ ಶಾಸನ ಮುಂತಾವುಗಳು ಮುಖ್ಯವಾಗಿದೆ.

ಆರನೆ ವಿಕ್ರಮಾದಿತ್ಯನ್ನು ಚೋಳರ ವಶದಲ್ಲಿದ್ದ ಚಾಲುಕ್ಯರ ಪ್ರದೇಶಗಳನ್ನು ಹಿಂತಿರುಗಿ ಪಡೆದನೆಂದು ಅವರ ನೀಲಗುಂದ ತಾಮ್ರ ಶಾಸನವು ತಿಳಿಸುತ್ತದೆ. ಅವನ ನ್ಯಾಯಪ್ರಿಯತೆಯನ್ನು ಕುರುವತ್ತಿ ಶಾಸನ (1102) ತಿಳಿಸುತ್ತದೆ. ಪ್ರಜಾಪೀಡಕನಾದ ಬೊಪ್ಪಯ್ಯನನ್ನು ಶಿಕ್ಷಿಸಿದ್ದು ಈ ಶಾಸನದಲ್ಲಿದೆ.

ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ಶಾಸನವು ವಿಕ್ರಮಾದಿತ್ಯನು ಮಂತ್ರಿ ಸಪ್ತ ಮಾಳವಗಳನ್ನು ಗೆದ್ದ ರಾವಿಗ ದಂಡನಾಥನ ಬಗ್ಗೆ ತಿಳಿಸುತ್ತದೆ. ಆರನೇ ವಿಕ್ರಮಾದಿತ್ಯನ ಗದಗ ಶಾಸನವು, ವಿಕ್ರಮಾದಿತ್ಯನು ವಿಕ್ರಮ ಶಕವನ್ನು ಪ್ರಾರಂಭಿಸಿ, ವಿದೇಶೀ ಶಕ ವರ್ಷ ಉಪಯೋಗವು ಕೊನೆಗೊಂಡಿತು ಎಂದು ತಿಳಿಸುತ್ತದೆ. ಹೀಗೆ ಕಲ್ಯಾಣದ ಚಾಲುಕ್ಯರ ಅನೇಕ ಶಾಸನಗಳು ಇತಿಹಾಸಕ್ಕೆ ಆಧಾರಗಳಾಗಿವೆ.

## ಕಲಚೂರಿಗಳ ಶಾಸನಗಳು :

ಕಳಚೂರಿಗಳ ಬಗ್ಗೆ ಬಲ್ಲೇರಿ ಶಾಸನ, ಬಿಜ್ಜಳನ ಹೂಲಿ ಶಾಸನ, ತಂಬೂರು ಶಾಸನಗಳು ಅನೇಕ ಮಾಹಿತಿಗಳನ್ನು ಒದಗಿಸುತ್ತವೆ. ಈ ಶಾಸನಗಳು ಎರಡನೆ ಬಿಜ್ಜಳನ ಸ್ವತಂತ್ರ ಆಳ್ವಿಕೆಯ ಕುರಿತು ವರ್ಣಿಸುತ್ತವೆ.



GNANADHARE IAS ACADEMY
downloaded from: www.kpscvaani.com

## ಚೋಳರು (ಕ್ರಿ. ಶ 850 – 1279) :




- ಚೋಳರು ಪಲ್ಲವರ ಆಶ್ರಯದಲ್ಲಿದ್ದು, ಅನಂತರ ಸ್ವತಂತ್ರರಾದರು.
- ಸಂಗಮ್ ಸಾಹಿತ್ಯದ ಪ್ರಕಾರ ಕರಿಕಾಲ ಚೋಳನು ಈ ವಂಶದ ಮೂಲಪುರುಷ.
- ವಿಜಯಾಲಯ ಚೋಳ ರಾಜ್ಯವನ್ನು ಪುನರುಜ್ಜೀವನಗೊಳಿಸಿ ತಂಜಾವೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು.
- ಮೂರನೇಯ ರಾಜೇಂದ್ರನ ಕಾಲದಲ್ಲಿ ಚೋಳ ರಾಜ್ಯವು ಕ್ಷೀಣಿಸಿ, ಪಾಂಡ್ಯರು ಮೇಲುಗೈ ಸಾಧಿಸಿದರು.

## ಒಂದನೇ ರಾಜರಾಜ :

- ಶೂರ, ಶ್ರೇಷ್ಠ ಯೋಧ ಹಾಗೂ ದಕ್ಷ ಆಡಳಿತಗಾರನಾಗಿದ್ದನು.
- ಚೋಳ ರಾಜ್ಯದ ಶಿಲ್ಪಿಯಾಗಿ ಅದರ ತಳಹದಿಯನ್ನು ಭದ್ರಮಾಡಿ ತನ್ನ ರಾಜ್ಯವನ್ನು ವಿಸ್ತರಿಸಿದನು.
- ಚೇಳರನ್ನು, ಗಂಗರನ್ನು & ಪಾಂಡ್ಯರನ್ನು ಸೋಲಿಸಿದನು.
- ನೌಕಾಸೈನ್ಯವನ್ನು ನಿರ್ಮಿಸಿ ಶ್ರೀಲಂಕಾವನ್ನು ಆಕ್ರಮಿಸಿಕೊಂಡನು.

## ಆಡಳಿತ :

- ಚೋಳರು ಉತ್ತಮವಾದ ಹಾಗೂ ದಕ್ಷವಾದ ಆಡಳಿತ ವ್ಯವಸ್ಥೆಯನ್ನು ತಮ್ಮ ರಾಜ್ಯದಲ್ಲಿ ಹೊಂದಿದ್ದರು.
- ರಾಜ್ಯವನ್ನು ಮಂಡಲಂ, ಕೊಟ್ಟಂಗಿ, ನಾಡು, ಕುರ್ರಂ ಅಥವಾ ಗ್ರಾಮ ಸಮುದಾಯ ಹಾಗೂ ತರ–ಕುರಂ ಎಂದು ವಿಭಾಗಿಸಲಾಗಿತ್ತು.
- ಚೋಳರ ಆಳ್ವಿಕೆಯ ಪ್ರಮುಖ ಲಕ್ಷಣವೆಂದರೆ ಗ್ರಾಮದ ಸ್ವಯಂಮಾಧಿತ್ವದ ಬೆಳವಣಿಗೆ.
- ಪ್ರತಿ ಗ್ರಾಮದಲ್ಲೂ 'ಊರ್' ಎಂಬ ಪ್ರಜೆಗಳ ಸಭೆ ಇತ್ತು.
- ತರ–ಕುರ್ರಂ ಒಂದು ಹಳ್ಳಿ. ಪ್ರತಿ ಕುರ್ರಂಗೂ ಮಹಾಸಭಾ ಎನ್ನುವ ಗ್ರಾಮಸಭೆ ಇತ್ತು. ಇದನ್ನು ಪೆರುಂಗುರಿ ಎಂದರು. ಅದರ ಸದಸ್ಯರನ್ನು ಪೆರುಮಕ್ಕಳ್ ಎಂದು ಕರೆಯಲಾಗುತ್ತಿತ್ತು.
- ಸದಸ್ಯರನ್ನು ಚುನಾವಣೆಯ ಮೂಲಕ ಆರಿಸಲಾಗುತ್ತಿತ್ತು.
- ಸಂಸ್ಕೃತ ವಿದ್ವಾಂಸರು & ಶ್ರೀಮಂತರು ಮಾತ್ರ ಈ ಚುನಾವಣೆಗೆ ಅರ್ಹರಾಗಿರುತ್ತಿದ್ದರು.

GNANADHARE IAS ACADEMY



downloaded from: www.kpscvaani.com

- ನೀರಾವರಿ ವ್ಯವಸ್ಥೆಗೆ ವಿಶೇಷ ಗಮನ ನೀಡಿದ್ದರು. ಅನೇಕ ಕೆರೆಗಳನ್ನು ಕಟ್ಟಿಸಿದ್ದರು.
- ಬೆಂಗಳೂರು ಬಳಿಯ ಬೆಳ್ಳಂದೂರು ಕೆರೆ ಇವರ ರಚನೆಯಾಗಿದೆ.

## ಕಂದಾಯ :

- ಭೂ ಕಂದಾಯದ ಆರನೇಯ ಒಂದು ಭಾಗವನ್ನು ಕಂದಾಯವನ್ನಾಗಿ ವಸೂಲಿ ಮಾಡಲಾಗುತ್ತಿತ್ತು.

## ಕಲೆ & ವಾಸ್ತುಶಿಲ್ಪ :



- ಚೋಳರು ಶೈವರಾಗಿದ್ದು ಇವರು ಅನೇಕ ಶಿವ ದೇವಾಲಯಗಳನ್ನು ಕಟ್ಟಿಸಿದ್ದಾರೆ.
- ತಂಜಾವೂರಿನ ಬೃಹದೀಶ್ವರ ಮಂದಿರ 500 ಅಡಿ ಉದ್ದ, 250 ಅಡಿ ಅಗಲದ ವಿಶಾಲ ಪ್ರಾಕಾರದಲ್ಲಿದೆ. ಅದರ ಶಿಖರ 200 ಅಡಿ ಎತ್ತರವಾಗಿದೆ.
- ಗಂಗೈಕೊಂಡ – ಚೋಳೇಶ್ವರ
- ಚನ್ನಪಟ್ಟಣದ – ಅಪ್ರಮೇಯ
- ಬೇಗೂರಿನ – ಚೋಳೇಶ್ವರ
- ಬಿನ್ನಮಂಗಲದ – ಮುಕ್ತೆಶ್ವರ
- ದೇವಾಲಯಗಳು ಆರ್ಥಿಕ, ಸಾಂಸ್ಕೃತಿಕ ಕೇಂದ್ರಗಳಾಗಿ ಕೆಲಸ ಮಾಡುತ್ತಿದ್ದವು.
- ಇವರ ಕಾಲದಲ್ಲಿನ ಶಿವ, ಗಣಪತಿ, ವಿಷ್ಣು, ದುರ್ಗೆ, ಕಾರ್ತಿಕೇಯ ಮೂರ್ತಿಗಳು ಪ್ರಸಿದ್ದವಾಗಿವೆ.

## ಸಾಹಿತ್ಯ :

- ಚೋಳರು ವಿದ್ಯೆಗೆ ಪ್ರೋತ್ಸಾಹ ನೀಡಲು ಅನೇಕ ಅಗ್ರಹಾರಗಳನ್ನು ಸ್ಥಾಪಿಸಿದರು.
- ಉತ್ತರ ಮೇರೂರು ಅಗ್ರಹಾರ ಇದರಲ್ಲಿ ಪ್ರಸಿದ್ದವಾದುದು.




downloaded from: www.kpscvaani.com

- ದೇವಾಲಯಗಳು ವಿದ್ಯಾಕೇಂದ್ರಗಳಾಗಿದ್ದವು.
- ತಮಿಳು ಸಾಹಿತ್ಯದ ಸರ್ವತೋಮುಖ ಪ್ರಗತಿಯ ಕಾಲವಿದು.
- ಕಂಬ ರಚಿಸಿದ ರಾಮಾಯಣ, ಸೆಕ್ಕಿರಲ್ ರಚಿಸಿದ ಪೆರಿಯ ಪುರಾಣ, ತಿರುಕ್ಕಾದೇವನ ಜೀವಕ ಚಿಂತಾಮಣಿ ಮುಂತಾದವು.

## ಹೊಯ್ಸಳರು (ಕ್ರಿ.ಶ. 1000–1346) :

- ರಾಜಧಾನಿ :
  1. ಸೊಸೆಯೂರು (ಈಗಿನ ಅಂಗಡಿ) ಅಥವಾ ಶಶಕಪುರ (ಚಿಕ್ಕಮಗಳೂರು ಜಿಲ್ಲೆ)
  2. ಹಳೇಬೀಡು (ದ್ವಾರ ಸಮುದ್ರ, ಹಾಸನ ಜಿಲ್ಲೆ) (ವಿಷ್ಣುವರ್ಧನ)
  3. ಬೇಲೂರು (ವಿನಯಾದಿತ್ಯ)
  4. ಕಣ್ಣನೂರು (2ನೇ ನರಸಿಂಹ) (ಸೋಮೇಶ್ವರ)
- ಸ್ಥಾಪಕ – ಸಳ ಅಥವಾ ನೃಪಕಾಮ (ಕ್ರಿ.ಶ. 1006–1047)




- ಸಳನು ಜೈನಮುನಿಯಾದ ಸುದತ್ತ ಮುನಿಯ ಆದೇಶದಂತೆ ಹುಲಿಯೊಡನೆ ಕಾದಾಡಿ ಅದನ್ನು ಕೊಂದು 'ಹೊಯ್‌ಸಳ' ಎನಿಸಿಕೊಂಡು ಈ ವಂಶದ ಸ್ಥಾಪಕನಾದನು.
- ಬಿರುದು – ಮಲೆ ಪೆರೋಳ್‌ಗಂಡ ಎಂಬುದು ಹೊಯ್ಸಳ ಅರಸರ ಬಿರುದು
- ಗುರು – ಸುದಾತ್ತ ಚಾರ್ಯ
- ಕುಲದೇವತೆ – ವಾಸಂತಿಕ ದೇವಿ
- ಧರ್ಮ – ಜೈನ & ವೈದಿಕ ಧರ್ಮ
- ಲಾಂಛನ – ಹುಲಿಯನ್ನು ಸಂಹರಿಸುತ್ತಿರುವ ಸಳನ ಚಿತ್ರ
- ನಾಣ್ಯಗಳು – ಗದ್ಯಾಣ, ಪಣ, ಹೊನ್ನು



downloaded from: www.kpscvaani.com

- ತಾವು ಯಾದವ ವಂಶದವರೆಂದೂ ಗುಜರಾತಿನ ದ್ವಾರಕೆಯಿಂದ ಬಂದವರೆಂದೂ ಹೊಯ್ಸಳರು ಹೇಳಿಕೊಂಡಿದ್ದಾರೆ.
- ಎರೆಯಂಗನು ಯಾದವ ವಂಶಾಕಾಶದ ಸೂರ್ಯನೆಂದೂ 1090ರ ಒಂದು ಶಾಸನದ ಹೇಳಿಕೆ.

## ವಿನಯಾದಿತ್ಯ (ಕ್ರಿ.ಶ. 1047–958) :

- ನೃಪಕಾಮನ ನಂತರ ಇವನ ಮಗ ವಿನಯಾಧಿತ್ಯನು ಅಧಿಕಾರಕ್ಕೆ ಬಂದನು
- ಚೆಂಗಾಳ್ವರು, ಕೋಂಗಾಳ್ವರು & ವೈನಾಡಿನ ಕದಂಬರನ್ನು ಸೋಲಿಸಿ ರಾಜ್ಯವನ್ನು ವಿಸ್ತರಿಸಿದನು.
- ಇವನು ತನ್ನ ರಾಜಧಾನಿಯನ್ನು ಸೊಸೆಯೂರಿನಿಂದ ಹಳೇಬೀಡಿಗೆ ವರ್ಗಾಯಿಸಿದನು.

## ವಿಷ್ಣುವರ್ಧನ (ಬಿಟ್ಟಿಗ/ಬಿಟ್ಟಿದೇವ) (ಕ್ರಿ.ಶ. 1108–1152) :

- ಕಲ್ಯಾಣಿ ಚಾಲುಕ್ಯರ ಸಾಮಂತನಾಗಿದ್ದ ಇವನು ಗಂಗವಾಡಿಯನ್ನು ಚೋಳರಿಂದ ರಕ್ಷಿಸಿದನು.
- ಕ್ರಿ.ಶ 1116ರಲ್ಲಿ ನಡೆದ ಭೀಕರ ತಲಕಾಡು ಕದನದಲ್ಲಿ ಗಂಗವಾಡಿಯನ್ನು ಗೆದ್ದು, ವೀರಗಂಗೆ & ತಲಕಾಡುಗೊಂಡ ಎಂಬ ಬಿರುದು ಪಡೆದ. ಈ ವಿಜಯದ ನೆನಪಿಗಾಗಿ ತಲಕಾಡಿನಲ್ಲಿ ಕೀರ್ತಿನಾರಾಯಣ ದೇವಾಲಯವನ್ನು ಹಾಗೂ ಬೇಲೂರಿನಲ್ಲಿ ವಿಜಯ ನಾರಾಯಣ ದೇವಾಲಯವನ್ನು ಕಟ್ಟಿಸಿದನು.
- ಮಧುರೈ ಪಾಂಡ್ಯರನ್ನು ಸೋಲಿಸಿ ಮಧುರೈಗೊಂಡ ಎಂಬ ಬಿರುದು ಪಡೆದನು.
- ಇವನು ಪಾಂಡ್ಯರ ನೊಳಂಬವಾಡಿಯನ್ನು ಜಯಿಸಿ ನೊಳಂಬವಾಡಿಗೊಂಡ ಎಂಬ ಬಿರುದು ಪಡೆದನು.
- ಇವನು ತನ್ನ ದಿಗ್ವಿಜಯಗಳ ಜ್ಞಾಪಕಾರ್ಥವಾಗಿ ಬೇಲೂರು, ತಲಕಾಡು, ಗದಗ, ಮೇಲುಕೋಟೆ & ಬಂಕಾಪುರದಲ್ಲಿ ತನ್ನ ವಿಜಯನಾರಾಯಣ ದೇವಾಲಯಗಳನ್ನು ನಿರ್ಮಿಸಿದನು.
- ಇವನು ರಾಜಧಾನಿಯನ್ನು ವೇಲಾಪುರ (ಬೇಲೂರು)ನಿಂದ ಹಳೇಬೀಡಿಗೆ ವರ್ಗಾಯಿಸಿದನು.
- ವೈಷ್ಣವ ಆಚಾರ್ಯರಾದ ರಾಮಾನುಜಾಚಾರ್ಯರು, ಶೈವನಾದ ಚೋಳ ಅರಸ ಕುಲೋತ್ತುಂಗ ಚೋಳನ ಕಿರುಕುಳ ತಾಳದೆ ಕರ್ನಾಟಕಕ್ಕೆ ಬಂದು ವಿಷ್ಣುವರ್ಧನನ ಆಶ್ರಯದಲ್ಲಿ ಮೇಲುಕೋಟೆಯಲ್ಲಿ ನೆಲೆಸಿದನು.
- ರಾಜ್ಯವನ್ನು ವಿಸ್ತರಿಸಲು ಪ್ರಯತ್ನಿಸಿ 6ನೇ ವಿಕ್ರಮಾದಿತ್ಯನಿಂದ ಸೋತನು.
- ಚಾಲುಕ್ಯರ ಜೊತೆ ಸ್ಪರ್ಧಿಸಿ ಚಕ್ರವರ್ತಿ ಎನಿಸಲು ಯಜ್ಞಾಯಾಗಾದಿಗಳನ್ನು ಮಾಡಬೇಕೆಂದು ಭಾವಿಸಿ ವಿಷ್ಣುವರ್ಧನನು ಜೈನಸಂಪ್ರದಾಯ ತ್ಯಜಿಸಿ ವೈದಿಕ ವೈಷ್ಣವನಾದನು.



downloaded from: www.kpscvaani.com

## 2ನೇ ಬಲ್ಲಾಳ (ಕ್ರಿ.ಶ. 1173–1220) :

- ತನ್ನ ತಂದೆಯ ಅಸಮರ್ಥತೆಯಿಂದ ರಾಜ್ಯವು ಕುಗ್ಗುತ್ತಿರಲು ಬಲ್ಲಾಳನು 1173ರಲ್ಲಿ ತಂದೆಯ ವಿರುದ್ಧ ಬಂಡೆದ್ದು ಅಧಿಕಾರವನ್ನು ತನ್ನ ಕೈಗೆ ತೆಗೆದುಕೊಂಡನು.
- ಇವನು ಉಚ್ಚಂಗಿಯ ಪಾಂಡ್ಯ ರಾಜ ಕಾಮದೇವನನ್ನು ಸೋಲಿಸಿ ಗಿರಿದುರ್ಗಮಲ್ಲ, ಗಂಡಬೇರುಂಡ, ಶನಿವಾರಸಿದ್ದಿ ಎಂಬ ಬಿರುದನ್ನು ಪಡೆದನು.
- ಚೋಳರಾಜನನ್ನು ಮುತ್ತಿದ ಪಾಂಡ್ಯರನ್ನು ಸೋಲಿಸಿ ಮುಮ್ಮಡಿ ರಾಜನಿಗೆ (ಚೋಳ) ಅಧಿಕಾರ ವಹಿಸಿ 'ಚೋಳ ರಾಜ್ಯ ಪ್ರತಿಷ್ಠಾಪನಾಚಾರ್ಯ' ಎಂಬ ಬಿರುದು ಪಡೆದನು.
- ಇವನು ಸೆವುಣರ ಬಿಲ್ಲಮನನ್ನು ಸೂರಟೂರು ಕದನದಲ್ಲಿ ಸೋಲಿಸಿದ್ದು ಪ್ರಮುಖ ಸಾಧನೆಯಾಗಿದೆ.
- ಜನ್ನ & ಅಭಿನವ ಪಂಪ ಎಂದೇ ಹೆಸರಾದ ನಾಗಚಂದ್ರ ಇವನ ಆಸ್ಥಾನದಲ್ಲಿದ್ದರು.

## 2ನೇ ನರಸಿಂಹ (ಕ್ರಿ.ಶ 1220–1235) :

- ಇವನೂ ಸಹ ಸೆವಣೂರಿಂದ ಚೋಳ ರಾಜ್ಯವನ್ನು ರಕ್ಷಿಸಿ 'ಚೋಳಕುಲ ರಕ್ಷಕ' ಎಂಬ ಬಿರುದನ್ನು ಪಡೆದನು.
- ಇವನು ಶ್ರೀರಂಗಂ ಬಳಿಯ ಕಣ್ಣನೂರಿನಲ್ಲಿ ಹೊಸ ರಾಜಧಾನಿ ನಿರ್ಮಿಸಿದನು.
- ಚೋಳ ರಾಜ್ಯ ಪ್ರತಿಷ್ಠಾನಿರತ ಎಂಬ ಬಿರುದನ್ನು ಪಡೆದಿರುವನು.

## 3ನೇ ಬಲ್ಲಾಳ (ಕ್ರಿ.ಶ 1291–1343) :

- 3ನೇ ಬಲ್ಲಾಳನು ಹೊಯ್ಸಳರ ಕಡೆಯ ಶ್ರೇಷ್ಠ ದೊರೆಯಾಗಿದ್ದು ಇವನ ಆಡಳಿತದ ಕಾಲಾವಧಿಯಲ್ಲಿ ಮುಸ್ಲಿಂ ದೊರೆ ಅಲ್ಲಾವುದ್ದೀನ್ ಖಿಲ್ಜಿಯ ಸೇನಾನಿ ಮಲ್ಲಿಕಾಫರ ದಕ್ಷಿಣ ಭಾರತದ ಮೇಲೆ ದಾಳಿ ಮಾಡಿದನು.
- ಇವನು ಹಿಂದೂ ರಾಜ್ಯದ ರಕ್ಷಣೆಗಾಗಿ ಹಂಪಿ ಎಂಬ ರಾಜಧಾನಿಯನ್ನು ನಿರ್ಮಿಸಿ ಮುಂದೆ ವಿಜಯನಗರ ಸಾಮ್ರಾಜ್ಯದ ಹುಟ್ಟಿಗೆ ಕಾರಣನಾಗಿದ್ದಾನೆ.
- ಕೊನೆಯ ದೊರೆ – 3ನೇ ಬಲ್ಲಾಳನ ಮಗ ವೀರವಿರೂಪಾಕ್ಷ.



downloaded from: www.kpscvaani.com

## ಆಡಳಿತ :

- ಹೊಯ್ಸಳರು ಪ್ರಾಂತಾಡಳಿತ ವ್ಯವಸ್ಥೆಯನ್ನು ಜಾರಿಗೊಳಿಸಿದ್ದರು.
- ಆಡಳಿತವನ್ನು ರಾಣಿ & ಅರಸು ಮನೆತನದವರಿಗೆ ಕೊಡಲಾಗುತ್ತಿತ್ತು.
- ಕೃಷಿಗೆ ಬೆಂಬಲ ಸೂಚಿಸುವ ಸಲುವಾಗಿ ಹೊಯ್ಸಳರು ಶಾಂತಿಸಾಗರ, ಬಲ್ಲಾಳರಾಯ ಸಮುದ್ರ, ವಿಷ್ಣು ಸಮುದ್ರ ಮುಂತಾದ ನೂರಾರು ಕೆರೆಗಳನ್ನು ಕಟ್ಟಿಸಿದರು.
- ಭೂಕಂದಾಯವು ರಾಜ್ಯದ ಮುಖ್ಯ ಆದಾಯವಾಗಿತ್ತು.
- ನಾಡು & ವಿಷಯಗಳ ಆಡಳಿತವನ್ನು ಅಧಿಕಾರಿಗಳು ನೋಡಿಕೊಳ್ಳುತ್ತಿದ್ದರು.
- ಪಂಚ ಪ್ರಧಾನರು ಅಥವಾ 5 ಜನ ಮಂತ್ರಿಗಳು ರಾಜನಿಗೆ ಆಡಳಿತದಲ್ಲಿ ನೆರವಾಗಿದ್ದರು. ಅವರೆಂದರೆ :
    1. ಸಂದಿ ವಿಗ್ರಹಕ – ವಿದೇಶಾಂಗ ಮಂತ್ರಿ
    2. ಶ್ರೀ ಕರಣಾಧಿಕಾರಿ – ಲೆಕ್ಕ ವಿಭಾಗದ ಮೇಲ್ವಿಚಾರಕ
    3. ಸೇನಾಪತಿ – ಸೇನೆಯ ಮುಖಂಡ
    4. ಮಹಾಪಸಾಯಕ – ಅಂತಃಪುರದ ಪಾರುಪತ್ಯೆಗಾರ
    5. ಹಿರಿಯ ಭಂಡಾರಿ – ರಾಜ್ಯದ ಖಜಾಂಚಿ
- ಗರುಡ ಪದ್ದತಿ ಆಚರಣೆಯಲ್ಲಿತ್ತು (ರಾಜ ಮನೆತನಕ್ಕೆ ತಮ್ಮ ಜೀವವನ್ನು ತ್ಯಾಗ ಮಾಡುವುದು).

## ಸಾಹಿತ್ಯ (ಸಂಸ್ಕೃತ ಸಾಹಿತ್ಯ) :

| ಕವಿ | ಆಶ್ರಯದಾತ |
|---|---|
| 1. ರಾಮಾನುಜಾಚಾರ್ಯ | ವಿಷ್ಣುವರ್ಧನ |
| 2. ಮಧ್ವಾಚಾರ್ಯರು | ವಿಷ್ಣುವರ್ಧನ |
| 3. ತ್ರಿವಿಕ್ರಮ ಪಂಡಿತ | ವಿಷ್ಣುವರ್ಧನ |
| 4. 2ನೇ ವಿದ್ಯಾಚಕ್ರವರ್ತಿ | 2ನೇ ನರಸಿಂಹ |
| 5. 3ನೇ ವಿದ್ಯಾಚಕ್ರವರ್ತಿ | 2ನೇ ನರಸಿಂಹ |
| 6. ನಾರಾಯಣ ಪಂಡಿತ | 2ನೇ ನರಸಿಂಹ |



downloaded from: www.kpscvaani.com

## ಕನ್ನಡ ಸಾಹಿತ್ಯ :

| ಕವಿ | ಕೃತಿ |
|---|---|
| 1. ಜನ್ನ (ಜೈನ, ಧರ್ಮ, ಕವಿಚಕ್ರವರ್ತಿ ಬಿರುದು) | ಯಶೋಧರ ಚರಿತ<br>ಅಜಿತ ನಾಥ ಪುರಾಣ |
| 2. ನಾಗಚಂದ್ರ (ಜೈನ ಧರ್ಮ ಅಭಿನವ ಪಂಪ) (ಮತ್ತು ಕವಿ ಮನೋಹರ ಬಿರುದುಗಳು) | ರಾಮಚಂದ್ರಚರಿತ ಪುರಾಣ<br>ಪಂಪರಾಮಾಯಣ &<br>ಜೈನರಾಮಾಯಣ<br>ಮಲ್ಲಿನಾಥ ಪುರಾಣಗಳು |
| 3. ಹರಿಹರ (ರಗಳೆ ಕವಿ & ಸರಸ ಕವಿ ಸಾರ್ವಭೌಮ ಬಿರುದುಗಳು) | ಗಿರಿಜಾ ಕಲ್ಯಾಣ<br>ಪಂಪಾ ಶತಕ<br>ರಕ್ಷಾ ಶತಕ<br>ಶಿವಾಕ್ಷರಮಾಲೆ |
| 4. ರಾಘವಾಂಕ (ಷಟ್ಪದಿ ಬ್ರಹ್ಮ) | ಹರಿಶ್ಚಂದ್ರ ಕಾವ್ಯ<br>ಸೋಮನಾಥ ಚರಿತೆ<br>ವೀರೇಶ್ವರ ಚರಿತೆ<br>ಶರಭ ಚರಿತೆ |
| 5. ರಾಜೇಂದ್ರ ಅಥವಾ ರಾಜಾದಿತ್ಯ (ಗಣಿತಶಾಸ್ತ್ರಜ್ಞ) | ಕ್ಷೇತ್ರ ಗಣಿತ, ಲೀಲಾವತಿ, ವ್ಯವಹಾರ ಗಣಿತ |
| 6. ಕೇಶಿರಾಜ | ಶಬ್ದಮಣಿದರ್ಪಣ (ಕನ್ನಡದ ಮೊದಲ ವ್ಯಾಕರಣ ಗ್ರಂಥ) |
| 7. ಮಲ್ಲಿಕಾರ್ಜುನ | ಸೂಕ್ತಿ ಸುಧಾರ್ಣ |
| 8. ಶಾಂತಿನಾಥ (2ನೇ ನರಸಿಂಹನ ಕಾಲ) | ಸುಕುಮಾರ ಚರಿತೆ |
| 9. ನೇಮಿಚಂದ್ರ (ಕವಿರಾಜಮಲ್ಲ) | ನೇಮಿಚಂದ್ರ ಪುರಾಣ, ಲೀಲಾವತಿ |
| 10. ನಯಸೇನ | ಧರ್ಮಾಮೃತ |

- ಕಂತಿಯು ಕನ್ನಡದ ಪ್ರಥಮ ಕವಯಿತ್ರಿ – ಇವಳು ಕಂತಿ ಹಂಪನ ಸಮಸ್ಯೋತ್ತರಗಳು ಎಂಬ ಕೃತಿ ರಚಿಸಿದ್ದಾಳೆ



downloaded from: www.kpscvaani.com

- ಹೊಯ್ಸಳರ ಕಾಲದಲ್ಲಿ ಜೈನ, ಬೌದ್ಧ, ಶೈವ, ವೈಷ್ಣವ, ವಿರೇಶ್ವರ, ಶ್ರೀ ವೈಷ್ಣವ ಮತಗಳು ಪ್ರಚಲಿತದಲ್ಲಿದ್ದವು.

## ಕಲೆ & ವಾಸ್ತುಶಿಲ್ಪ :

- ವಾಸ್ತುಶಿಲ್ಪದಲ್ಲಿ ಹೊಯ್ಸಳರು ಮೊಗಲರಂತೆ 'ಸುವರ್ಣಯುಗ' ಸ್ಥಾಪಿಸಿದ್ದು ಹೊಯ್ಸಳ ಶೈಲಿ ಅಥವಾ ವೇಸರ ಶೈಲಿ ಎಂಬ ಹೊಸ ವಾಸ್ತುಶಿಲ್ಪ ಶೈಲಿಯನ್ನು ಸೃಷ್ಟಿಸಿದರು.
- ವಿಷ್ಣುವರ್ಧನನ ಕಾಲದಲ್ಲಿ ವಾಸ್ತುಶಿಲ್ಪ ಸುವರ್ಣಯುಗವನ್ನು ಕಂಡಿತು.
- ಇವರ ಕಾಲದ ಪ್ರಮುಖ ಶಿಲ್ಪಿಗಳೆಂದರೆ ಜಕ್ಕಣ, ಬಳ್ಳಿಗಾವೆಯದಾಸೋಜ, ಚವಣ ಚಿಕ್ಕಹಂಸ, ಗದುಗಿನ ನಾಗೋಜ, ನಂದಿಯ ಬೈರೋಜ ಮಲ್ಲಿತಮ್ಮ ಕೇತುಮಲ್ಲ ಪ್ರಮುಖರು.

## ಶಿಕ್ಷಣ :

- ಅಗ್ರಹಾರಗಳು, ಮಠಗಳು, ದೇವಾಲಯಗಳು ಶಿಕ್ಷಣದ ಪ್ರಮುಖ ಕೇಂದ್ರಗಳಾಗಿದ್ದವು.
- ಮೇಲುಕೋಟೆ, ಸಾಲಗಮೆ, ರಸೀಕೆರೆ ಮುಂತಾದವು ಶಿಕ್ಷಣ ಕೇಂದ್ರಗಳಾಗಿದ್ದವು.
- ವೇದ, ವೇದಶಾಸ್ತ್ರ, ಕನ್ನಡ, ಸಂಸ್ಕೃತಗಳ ಅಧ್ಯಯನ ನಡೆಯುತಿತ್ತು.

## ಹೊಯ್ಸಳರ ಅಥವಾ ವೇಸರ ಶೈಲಿಯ ಲಕ್ಷಣಗಳು :

- ನಕ್ಷತ್ರಕಾರದ ಗರ್ಭಗುಡಿ & ತಳವಿನ್ಯಾಸ ಹೊಂದಿರುವುದು.
- ಉತ್ತರ ಜಗುಲಿಯ ಮೇಲೆ (4–5 ಅಡಿ) ದೇವಾಲಯಗಳ ನಿರ್ಮಾಣ.
- ದೇವಾಲಯಗಳು ಗರ್ಭಗುಡಿ, ಸುಖಮಾಸಿ, ನವರಂಗ & ವಿಶಾಲವಾದ ಮಹಾ ಮಟಂಪಗಳಿಂದ ಕೂಡಿರುವುದು.
- ಹೊರಭಾಗದಲ್ಲಿ ಪ್ರದಕ್ಷಿಣಾ ಪಥ.
- ದೇವಾಲಯಗಳನ್ನು ಗರ್ಭಗುಡಿಗಳ ಸಂಖ್ಯೆಯನ್ನು ಆಧರಿಸಿ ಏಕಕೂಟ, ದ್ವಿಕೂಟ, ತ್ರಿಕೂಟ, ಚತುಷ್ಕೂಟ & ಪಂಚಕೂಟಗಳಾಗಿ ನಿರ್ಮಿಸಿರುವುದು.
- ಶಿಲಾ ಜಾಲಾಂದ್ರಗಳ ಕೆತ್ತನೆ.



downloaded from: www.kpscvaani.com

- ಸೂಕ್ಷ್ಮ ಕೆತ್ತನೆಯ ಕಂಬಗಳು ನಯವಾಗಿದ್ದು ಹೊಳಪನ್ನು ಹೊಂದಿವೆ.
- ದೇವಾಲಯದ ಗೋಡೆಗಳ ಮೇಲೆ ಸೂಕ್ಷ್ಮ ಹಾಗೂ ವೈವಿಧ್ಯಮಯ ಕೆತ್ತನೆ.
- ಉತ್ತಮ ಗುಣಮಟ್ಟದ ಬಳಪದ ಕಲ್ಲಿನ ಬಳಕೆ. ನಿರ್ಮಾಣದಲ್ಲಿ ಗಾರೆಯ ಬಳಕೆಯೇ ಇಲ್ಲದಿರುವುದು. ಸುಂದರ ಕೆತ್ತನೆಗಳನ್ನು ಒಂದರಲ್ಲೊಂದು ರಂದ್ರಗಳಿದ್ದಂತೆ ಜೋಡಿಸಿರುವುದು.
- ಸುಂದರ ಕೆತ್ತನೆಗಳನ್ನು ಪ್ರವೇಶಾದ್ವಾರದ 2 ಬದಿಯಲ್ಲೂ ದ್ವಾರಪಾಲಕರನ್ನು ಕೆತ್ತಿರುವುದು.





| ಸ್ಥಳ | ದೇವಾಲಯಗಳು |
|---|---|
| 1. ಬೇಲೂರು | ಚನ್ನಕೇಶವದೇವಾಲಯ (ಏಕಕೂಟ) ಶಿಲ್ಪಿಗಳು – ದಾಸೋಜ, ಚವಣ ಚಿಕ್ಕ ಹಂಸರು, ನರಸಿಂಹ ಕಂಬ, ಮೋಹಿನಿ ಕಂಬ & ತಿರುಗು ಕಂಬ ಎಂಬ ಅನೇಕ ವಿವಿಧ ಸೂಕ್ಷ್ಮ ಕೆತ್ತನೆಯ ಕಂಬಗಳನ್ನು ಹೊಂದಿವೆ. 42 ನೃತ್ಯ ಭಂಗಿಯ ಮದನಿಕೆಯರ ವಿಗ್ರಹಗಳು ಇವೆ. ಕ್ರಿ.ಶ. 1117ರಲ್ಲಿ ತಲಕಾಡಿನ ಚೋಳರ ವಿರುದ್ಧ ಪಡೆದ ವಿಜಯದ ಸ್ಮರಾಣಾರ್ಥ ವಿಷ್ಣುವರ್ಧನ ಇದನ್ನು ಕಟ್ಟಿಸಿದ. |
| 2. ಹಳೇಬೀಡು ಅಥವಾ ದ್ವಾರಸಮುದ್ರ | ಹೊಯ್ಸಳೇಶ್ವರ ದೇವಾಲಯ (ದ್ವಿಕೂಟ) (ಶಿವ & 2 ನಂದಿಯ ವಿಗ್ರಹಗಳನ್ನು ಹೊಂದಿದೆ. |
| 3. ಸೋಮನಾಥೇಶ್ವರ | ಕೇಶವ ದೇವಾಲಯ (ತ್ರಿಕೂಟ) |
| 4. ದೊಡ್ಡಗದ್ದವಳ್ಳಿ | ಮಹಾಲಕ್ಷ್ಮೀ ದೇವಾಲಯ (ಚತುಷ್ಕೂಟ) |
| 5. ತಲಕಾಡು | ಕೀರ್ತಿನಾರಾಯಣ ದೇವಾಲಯ |



downloaded from: www.kpscvaani.com

6. ಮೇಲುಕೋಟೆ — ಚೆಲುವ ನಾರಾಯಣ ದೇವಾಲಯ
7. ಅಮೃತ ಪುರ — ಅಮೃತೇಶ್ವರ ದೇವಾಲಯ
8. ತೊಂಡೂರು — ವೀರನಾರಾಯಣ ದೇವಾಲಯ
9. ಬೆಳಗಾವಿಯ — ಕೇದಾರೇಶ್ವರ & ತ್ರಿಪುರಾಂತ ದೇವಾಲಯ
10. ಹುಲಿಯೂರು — ರಂಗನಾಥ & ಮಲ್ಲಿಕಾರ್ಜುನ ದೇವಾಲಯ

- ಶಾಂತಲೆಯು ನೃತ್ಯದಲ್ಲಿ ಪ್ರವೀಣೆಯಾಗಿದ್ದು ಬೇಲೂರಿನಲ್ಲಿ ಕಪ್ಪೆ ಚೆನ್ನಿಗರಾಯ ದೇವಸ್ಥಾನವನ್ನು ನಿರ್ಮಿಸಿದ್ದಾಳೆ.

## ಹೊಯ್ಸಳರ ಶಾಸನಗಳು :

- ಹೊಯ್ಸಳರ ನೂರಾರು ಶಾಸನಗಳು ಅವರ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ. ಹೊಯ್ಸಳರ ಮೂಲದ ಬಗ್ಗೆ ಪೌರಾಣಿಕ ಕಥೆಯನ್ನು ಸಮರ್ಥಿಸುವ ಶಾಸನವೊಂದು ಇವರ ಮೂಲ ಪುರಷನು ಬೆಣ್ಣೆ ನಾಡಿನಲ್ಲಿ ವಾಸಿಸುತ್ತಿದ್ದನೆಂದು ತಿಳಿಸುತ್ತದೆ. ನಿಜಾಮನ ರಾಜ್ಯದಲ್ಲಿ ಸಿಕ್ಕಿದ ನಾಗೆ ಶಾಸನವು ದೋರನೆಂಬ ಅರಸನ ಬಗ್ಗೆ ತಿಳಿಸುತ್ತದೆ. ಚಾಲುಕ್ಯರ ಆರನೇ ವಿಕ್ರಮಾದಿತ್ಯನು ಕಳಿಸಿದ ಜಗದೇವನ್ನು ವಿಷ್ಣುವರ್ಧನನು ಸೋಲಿಸಿದನೆಂದು ಶ್ರವಣ ಬೆಳಗೊಳದ ಶಾಸನವು ತಿಳಿಸುತ್ತದೆ.
- ಹಲ್ಮಿಡಿ ಶಾಸನ ಮತ್ತು ದೊಡ್ಡಗಣ ಶಾಸನ (1106) ವಿಷ್ಣುವರ್ಧನನ ಸಿಂಹಾಸನಾ ರೋಹಣದ ಬಗ್ಗೆ ವರ್ಣಿಸುತ್ತವೆ. ಅಡುತೊರೆ ಶಾಸನವು ತಲಕಾಡಿನಿಂದ ಅನೇಕ ವಿಗ್ರಹಗಳನ್ನು ದ್ವಾರಸಮುದ್ರಕ್ಕೆ ಒಯ್ಯಲು ಪ್ರಯತ್ನಿಸಿದ ವಿಷಯವನ್ನು ತಿಳಿಸುತ್ತದೆ. ನಾಗಮಂಗಲದ 76ನೇ ಶಾಸನವು ವಿಜಯ ನಾರಸಿಂಹನು ಚೆಂಗಾಳ್ವರನ್ನು ಸೋಲಿಸಿದ್ದನ್ನು ತಿಳಿಸುತ್ತದೆ.
- ಬೇಲೂರ 86ನೇ ಶಾಸನವು ಎರಡನೇ ಬಲ್ಲಾಳನು ತಂದೆಯನ್ನು ಸಿಂಹಾಸನದಿಂದ ತಳ್ಳಿ ತಾನೇ ಸಿಂಹಾಸನಕ್ಕೆ ಬಂದಿದ್ದನ್ನು ವರ್ಣಿಸಿದೆ.
- ಹೊಯ್ಸಳ ನರಸಿಂಹನು ರಾಮೇಶ್ವರದಲ್ಲಿ ವಿಜಯಸ್ತಂಭ ಸ್ಥಾಪಿಸಿದ್ದನ್ನು ದಾವಣಗೆರೆ 75ನೇ ಶಾಸನ ಉಲ್ಲೇಖಿಸಿದ ದಾವಣಗೆರೆ 25ನೇ ಅರಿಸಿಕೆರೆ 82ನೇ ಶಾಸನಗಳು ವೀರ ನರಸಿಂಹನ ಪ್ರಜಾ ಕಲ್ಯಾಣ ಕಾರ್ಯಕ್ರಮಗಳನ್ನು ವರ್ಣಿಸಿವೆ.
- ಬೆಂಗಳೂರು–ಕೋಲಾರಗಳ ಸಮೀಪ ದೊರಕಿದ ರಾಮನಾಥನ ತಮಿಳು ಶಾಸನಗಳು ಅವನು ಮೂರನೆ ನರಸಿಂಹನೊಡನೆ ಹೋರಾಟ ನಡೆಸಿದ್ದನ್ನು ತಿಳಿಸುತ್ತವೆ.
- ಕಠಾರಿ ಸಾಳುವ ಇರಿಸಯ್ಯ 3ನೇ ಬಲ್ಲಾಳನ ಮಂತ್ರಿಯಾಗಿದ್ದನೆಂದು ಕುರಿಕಿ ಶಾಸನವು ಹೇಳುತ್ತದೆ.



downloaded from: www.kpscvaani.com

- ಚಿಕ್ಕಮಂಗಳೂರಿನ 70ನೇ ಶಾಸನವು ವಿಷ್ಣುವರ್ಧನನು ತನ್ನ ಸಹೋದರ ಉದಯಾದಿತ್ಯ ನೆನಪಿಗಾಗಿ ಕೈಗೊಂಡ ಕಾರ್ಯಗಳನ್ನು ತಿಳಿಸುತ್ತದೆ.
- ಶ್ರವಣ ಬೆಳಗೊಳದ 73ನೇ ಶಾಸನವು ವಿಷ್ಣುವರ್ಧನನ ದಂಡನಾಯಕ ಗಂಗರಾಜನ ಜಿನಭಕ್ತಿಯನ್ನು ವರ್ಣಿಸಿದೆ. ಬೇಲೂರಿನ ಒಂದು ಶಾಸನವು ಹೊಯ್ಸಳರ ಸರ್ವಧರ್ಮ ಸಮನ್ವಯತೆ ಬಗ್ಗೆ ವರ್ಣಿಸಿದೆ.
- ಹೀಗೆ ಹೊಯ್ಸಳರ ಇನ್ನೂ ಅನೇಕ ಶಾಸನಗಳು ಅವರ ಇತಿಹಾಸವನ್ನು ತಿಳಿಯಲು ಆಧಾರಗಳಾಗಿವೆ.

## ದೇವಗಿರಿಯ ಯಾದವರು (ಕ್ರಿ.ಶ 1189–1318) :

- ರಾಜಧಾನಿ – ದೇವಗಿರಿ (ಮಹಾರಾಷ್ಟ್ರದ ದೌಲತಾಬಾದ್)
- ಸ್ಥಾಪಕ – ದೃಢ ಪ್ರಹಾರ (ಸುಬಾಹು ಎಂಬ ಯಾದವ ವಂಶದ ಪ್ರಮುಖನ ಮಗ)
- ಲಾಂಛನ – ವೈಷ್ಣವ
- ಪ್ರಮುಖ ಅರಸ – 2ನೇ ಸಿಂಘಣ
- ಕೊನೆಯ ಅರಸ – 3ನೇ ಸಿಂಘಣ
- ಸೇವುಣ ಚಂದ್ರ – ಸೇವುಣಪುರ ನಗರದ ನಿರ್ಮಾಪಕ
- ಹೇಮಾದ್ರಿ – ಮಹಾದೇವನ ಮಂತ್ರಿಯಾಗಿದ್ದ ಈತನು 'ಚಾತುವರ್ಗ ಚಿಂತಾಮಣಿ ಹಾಗೂ ಕೈವಲ್ಯ ದೀಪಿಕಾ'ವನ್ನ ಬರೆದನು.
- ಕ್ರಿ.ಶ 1296ರಲ್ಲಿ ಅಲ್ಲಾವುದ್ದೀನ್ ಖಿಲ್ಜಿ ದೇವಗಿರಿಯನ್ನು ಮುತ್ತಿ ಸಂಪತ್ತು ದೋಚಿ ದೆಹಲಿ ಸುಲ್ತಾನನಾದ.
- ಕ್ರಿ.ಶ 1307ರಲ್ಲಿ ಮಲ್ಲಿಕಾಫರ್ ದೇವಗಿರಿ ಮೇಲೆ ದಂಡೆತ್ತಿ ರಾಜ ರಾಮಚಂದ್ರನನ್ನು ಸೆರೆಹಿಡಿದು ದೆಹಲಿಯಲ್ಲಿ ಬಂಧಿಸಿದ.
- ದೇವಗಿರಿಯನ್ನು ನಿರ್ಮಿಸಿದ ದೊರೆ 5ನೇ ಬಿಲ್ಲಮ.

### ಕಲೆ & ವಾಸ್ತುಶಿಲ್ಪ :

- ಸೇವುಣರು ಮಹಾರಾಷ್ಟ್ರದಲ್ಲಿ 'ಹೇಮಡಾಪಂಥಿ' ಎಂಬ ವಿಶಿಷ್ಟ ಶೈಲಿಯಲ್ಲಿ ದೇವಾಲಯಗಳನ್ನು ನಿರ್ಮಿಸಿದ್ದಾನೆ.



downloaded from: www.kpscvaani.com

- ಇವರ ಕಾಲದ ಪ್ರಮುಖ ದೇವಾಲಯಗಳೆಂದರೆ
    1. ಲಕ್ಕುಂಡಿಯ ಕಾಶಿವಿಶ್ವೇಶ್ವರ ದೇವಾಲಯ
    2. ಥಾನ ಜಿಲ್ಲೆಯ ಅಂಬರನಾಥ ದೇವಾಲಯ
    3. ನಾಸಿಕ್ ಜಿಲ್ಲೆಯಲ್ಲಿರುವ ಗೊಂದೇಶ್ವರ ದೇವಾಲಯ
    4. ನರಗುಂದದ ದಂಡೇಶ್ವರ ಗುಡಿ.

ಕ್ರಿ.ಶ 1318ರವರೆಗೆ 3ನೇ ಸಂಘಣ ಅಥವಾ ಮೆಲ್ಲುಗಿ ದೆಹಲಿ ಸುಲ್ತಾನರ ಸಾಮಂತನಾಗಿ ಆಳುತ್ತಿದ್ದು ನಂತರ ದೇವಗಿರಿ ಮಹಮ್ಮದ್ ಬಿನ್ ತುಘಲಕ್‌ನ ರಾಜಧಾನಿಯಾಗಿ ದೇವಗಿರಿ ಯಾದವರ ಆಳ್ವಿಕೆ ಕೊನೆಗೊಂಡಿತು.

## ಬಿಜಾಪುರದ ಆದಿಲ್ ಷಾ (ಕ್ರಿ.ಶ 1489–1686) :

- ರಾಜಧಾನಿ – ಬಿಜಾಪುರ
- ಸ್ಥಾಪಕ – ಯೂಸಫ್ ಆದಿಲ್ ಖಾನ್
- ಆಡಳಿತ ಭಾಷೆ – ಪರ್ಶಿಯನ್ & ಮರಾಠಿ
- ನಾಣ್ಯಗಳು – ಚಿನ್ನ, ಬೆಳ್ಳಿ & ತಾಮ್ರದ ನಾಣ್ಯಗಳು ಚಲಾವಣೆಯಲ್ಲಿದ್ದವು.
- ಧರ್ಮ – ಇಸ್ಲಾಂ (ಶಿಯಾ & ಸನ್ನಿ)
- ಕೊನೆಯ ಅರಸ – ಸಿಕಂದರ್

### ಯೂಸುಫ್ ಆದಿಲ್ ಖಾನ್ (ಕ್ರಿ.ಶ 1489–1510) :

- ಆದಿಲ್ ಷಾ ವಂಶದ ಸ್ಥಾಪಕ.
- ಇವನಿಗೆ ಆದಿಲ್ ಖಾನ್ ಎಂಬ ಬಿರುದಿತ್ತು.
- ಮರಾಠರೊಂದಿಗೆ ಸಂಬಂಧ ಹೊಂದಿದ್ದ ಇವನು ಕ್ರಿ.ಶ 1510ರಲ್ಲಿ ವಿಜಯನಗರ ಅರಸ ಕೃಷ್ಣದೇವರಾಯನೊಡನೆ ಯುದ್ಧದಲ್ಲಿ ಸೋತು ಹತನಾದನು.



downloaded from: www.kpscvaani.com

## 2ನೇ ಇಬ್ರಾಹಿಂ ಆದಿಲ್ ಷಾ (ಕ್ರಿ.ಶ 1580–1626) :

- ಇವನನ್ನು ಜಗದ್ಗುರು ಬಾದ್ ಷಾ ಎಂದು ಕರೆಯುತ್ತಿದ್ದರು.
- ಇವನು ಅಧಿಕಾರಕ್ಕೆ ಬಂದಾಗ ಅಪ್ರಾಪ್ತನಾದ್ದರಿಂದ ಇವನ ಚಿಕ್ಕಮ್ಮ (1ನೇ ಆಲಿ ಆದಿಲ್ ಷಾ ಪತ್ನಿ) ಚಾಂದ್‌ಬೀಬಿ ಆಡಳಿತ ನಿರ್ವಹಿಸಿದಳು.
- ಸಂಗೀತ ಪ್ರಿಯನಾದ ಇವನೂ ಉರ್ದುವಿನಲ್ಲಿ ಕಿತಾಬ್ ಇ ನವರಸ ಎಂಬ ಕೃತಿಯನ್ನು ರಚಿಸಿದನು.
- ಇವನು ಹಿಂದೂಗಳ ಪ್ರೀತಿಗೂ ಪಾತ್ರನಾಗಿದ್ದನು.
- ಇವನು ಬಿಜಾಪುರದಲ್ಲಿ ಇಬ್ರಾಹಿಂ ರೋಜಾನನ್ನು (ಇದನ್ನು ದಕ್ಷಿಣದ ತಾಜ್ ಮಹಲ್ ಎನ್ನುವರು) ತಜ್ ಚಾವಡಿ, ಮಲ್ಲಿಕ್, ಜಹನ್ ಮಸೀದಿಗಳನ್ನು ನಿರ್ಮಿಸಿದನು. ಈ ಕಟ್ಟಡಗಳ ಮೇಲೆ ಕುರಾನಿನ ಲಿಪಿಗಳಿವೆ (ಕ್ಯಾಲಿಗ್ರಫಿ).

## ಮಹಮ್ಮದ್ ಆದಿಲ್ ಷಾ (ಕ್ರಿ.ಶ 1626–1656) :

- ಇವನು ಭಾರತದಲ್ಲೇ ಅತೀ ದೊಡ್ಡ ಗುಮ್ಮಟ ಹಾಗೂ ವಿಶ್ವ ವಿದ್ಯಾಲಯಗಳನ್ನು ಪಿಸುಮಾತಿನ ಮೊಗಸಾಲೆ ಎಂದೇ ಹೆಸರಾದ ಗೋಳ ಗುಮ್ಮಟವನ್ನು ಕಟ್ಟಿಸಿದನು.
- ಭಾರತದಲ್ಲಿಯೇ ಅತಿ ದೊಡ್ಡ ಗುಮ್ಮಟ – ಗೋಳಗುಮ್ಮಟ.

## ಸಾಹಿತ್ಯ :

- ಇವರು ಪರ್ಷಿಯನ್ ಉರ್ದು ಮರಾಠಿ & ಕನ್ನಡ ಭಾಷೆಯಲ್ಲಿ ಸಾಹಿತ್ಯ ರಚನೆಯನ್ನು ಪ್ರೋತ್ಸಾಹಿಸಿದರು.
- ಫೆರಿಸ್ತಾ – ತಾರೀಖ್ ಇ ಫೆರಿಸ್ತಾ (ಪರ್ಶಿಯನ್ ಭಾಷೆ)
- ಮಲ್ಲಾಮಸತ್ರಿ – ಗುಲ್‌ಶನ್ ಇ ಇಸ್ ಆಲಿನಾಮ & ತಾರೀಖ್ ಇ ಸಿಕಂದರಿ (ದಖನ್ನಿ ಉರ್ದು)
- ಹಶನ ಶೌಕಿ – ಪುತುಹ್ ನಾಮ (ಉರ್ದು)
- ಅಬ್ದುಲ್ – ಇಬ್ರಾಹಿಂ ನಾಮ (ದಖ್ಖನಿ ಉರ್ದು)




downloaded from: www.kpscvaani.com

## 2ನೇ ಇಬ್ರಾಹಿಂ ಆಸ್ಥಾನ ಕವಿ :

- 2ನೇ ಇಬ್ರಾಹಿಂ – ಕಿತಾನ್ ಇ ನವರಸ ಉರ್ದು
- ರಾಘವೇಂದ್ರ ಸ್ವಾಮೀಜಿ (ಕುಮಾರ ವಾಲ್ಮೀಕಿ) – 1. ನ್ಯಾಯಮುಕ್ತಾವಳಿ ಚಂದ್ರಿಕ ಕನ್ನಡ 2. ತಂತ್ರದೀಪಿಕಾ
- ನರಹರಿ ತೊರವೆ ರಾಮಾಯಣ – ಕನ್ನಡ

## ಕಲೆ & ವಾಸ್ತುಶಿಲ್ಪ :

- ಆದಿಲ್ ಷಾಹಿಗಳು ಬಿಜಾಪುರವನ್ನು ಸುಂದರ ಸ್ಮಾರಕಗಳಿಂದ ಅಲಂಕರಿಸಿದರು. ಆದ್ದರಿಂದ ಬಿಜಾಪುರವನ್ನು ದಕ್ಷಿಣ ಭಾರತದ ರಾಣಿ ಎಂದು ಕರೆಯಲಾಗಿದೆ. ಇವರ ವಾಸ್ತುಶಿಲ್ಪವು ಇಂಡೋಸಾರ್ಸೆನಿಕ್ ಶೈಲಿಯಲ್ಲಿದೆ.
- ಅರಮನೆಗಳು : ಗಗನ ಮಹಲ್ 2ನೇ ಇಬ್ರಾಹಿಂ (62 ಅಡಿ), ಸಾತ ಮಹಲ್, ಆನಂದ ಮಹಲ್ ಆದಿಲ್ ಷಾ, ಸಂಗೀತ ಮಹಲ್, ಮೆಹತರ ಮಹಲ್, ಮೆಹತರ ಫಕೀರ.
- ಮಸೀದಿಗಳು : ಜಮ್ಮಾ ಮಸೀದಿ, ಕಾಶೀ ಮಸೀದಿ (ಲಕ್ಷ್ಮೇಶ್ವರ), ಇಬ್ರಾಹಿಂ ರೋಜಾ, ಗೋಳ ಗುಮ್ಮಟ, ಬಾರ ಕಮಾನ್
- ಇಬ್ರಾಹಿಂ ರೋಜಾ : ಇದು ಜೋಡಿ ಗುಮ್ಮಟಗಳನ್ನು ಹೊಂದಿದೆ. ಇದನ್ನು 2ನೇ ಇಬ್ರಾಹಿಂ ಆದಿಲ್ ಷಾ ಕಟ್ಟಿಸಿದ ಒಂದು ಕಟ್ಟಡ ಮಸೀದಿ ಇನ್ನೊಂದು ಕಟ್ಟಡ ಗೋರಿಯಾಗಿದೆ.
- ಇಬ್ರಾಹಿಂ ರೋಜಾವು ತೂಗಾಡುವ ಛಾವಣಿಗೆ ಹೆಸರಾಗಿದೆ.
- ಡಾ// ಕಸಿನ್ಸ್ ಇದನ್ನು ದಕ್ಷಿಣದ ತಾಜ್ ಮಹಲ್ ಎಂದಿದ್ದಾರೆ.
- ಗೋಳ ಗುಮ್ಮಟ – ಇದು ಪ್ರಪಂಚದ 4ನೇ & ಭಾರತದ ಅತೀ ದೊಡ್ಡ ಗುಮ್ಮಟವಾಗಿದೆ.
- ಮಹಮ್ಮದ್ ಆದಿಲ್ ಷಾ ಇದರ ನಿಮಾತೃ
- ಮಲ್ಲಿಕ ಸಂದಲ್ ಇದರ ನಿರ್ಮಾಣದ ಶಿಲ್ಪಿ.
- ಇಂಡೋ ಸಾರ್ಸೆನಿಕ್ ಶೈಲಿಯಲ್ಲಿದೆ.
- ಇದನ್ನು ಪಿಸುಮಾತಿನ ಗ್ಯಾಲರಿ ಎಂದು ಕರೆಯಲಾಗಿದೆ.



GNANADHARE IAS ACADEMY



downloaded from: www.kpscvaani.com

## ಇಕ್ಕೇರಿ (ಕೆಳದಿಯ) ನಾಯಕರು (ಕ್ರಿ.ಶ 1499–1763) :

- ರಾಜಧಾನಿ – ಕೆಳದಿ & ಬಿದನೂರು ಇಕ್ಕೇರಿ ಹಾಗೂ ಭುವನ ಗಿರಿಗಳು ಅವರ ಇತರ ರಾಜಧಾನಿಗಳು
- ಸ್ಥಾಪಕ – ಚೌಡಪ್ಪ & ಭದ್ರಪ್ಪ ಎಂಬ ವೀರಶೈವ ಸಹೋದರರು.
- ಲಾಂಛನ – ಗಂಡಬೇರುಂಡ
- ಧರ್ಮ – ಲಿಂಗಾಯುತ (ವೀರಶೈವ)
- ಕೆಳದಿಯ ಇತಿಹಾಸವನ್ನು ಅಭ್ಯಸಿಸಲು, ಬಸವರಾಜನ ಶಿವತತ್ವರತ್ನಾಕರ ಎಂಬ ಗ್ರಂಥವು ಸಹಾಯ ಮಾಡುತ್ತದೆ. ವಿಜಯನಗರ ಹಾಗೂ ಕೆಳದಿ ಅರಸರ ಬಗ್ಗೆ ಅನೇಕ ಸಂಗತಿಗಳನ್ನು ಈ ಗ್ರಂಥ ತಿಳಿಸುತ್ತದೆ. ಇದು ಸಂಸ್ಕೃತ ಗ್ರಂಥ.
- ಕನ್ನಡ ಗ್ರಂಥ 'ಕೆಳದಿ ನೃಪ ವಿಜಯ'ವನ್ನು ಲಿಂಗಣ್ಣನೆಂಬ ಕವಿಯು ಬರೆದನು. ಇದು ಕೆಳದಿಯ ಇತಿಹಾಸವನ್ನು ನೇರವಾಗಿ ತಿಳಿಸುವ ಅಮೂಲ್ಯ ಆಧಾರ ಗ್ರಂಥವಾಗಿದೆ.
- ಮೈಸೂರಿನ ಒಡೆಯರ ಇತಿಹಾಸವನ್ನು ತಿಳಿಯಲು ಅನೇಕ ಆಧಾರ ಗ್ರಂಥಗಳು ಲಭ್ಯವಾಗಿವೆ.
- 'ಚಿಕ್ಕದೇವರಾಜ ಧರಣೀ ರಮಣ ವಂಶಾಭ್ಯುದಯ' (ಕ್ರಿ.ಶ 1700) ಎಂಬ ಕೃತಿಯು ಚಿಕ್ಕದೇವರಾಜ ಒಡೆಯರವರೆಗಿನ ಅವರ ವಂಶದ ಚರಿತ್ರೆಯನ್ನು ತಿಳಿಸುತ್ತದೆ.
- ನೀಲಕಂಠ ಕವಿಯ 'ನಂಜರಾಜ ಯಶೋಲ್ಲಾಸ' ಎರಡನೇ ಕೃಷ್ಣರಾಜ ಒಡೆಯರ ಕಾಲದ ಶ್ರೀರಂಗಪಟ್ಟಣದ ವೈಭವವನ್ನು ತಿಳಿಸುತ್ತದೆ.
- ಇಮ್ಮಡಿ ಬೈರವ ಪಾಂಡ್ಯನ ಆಶ್ರಯದಲ್ಲಿದ್ದ ಚಂದ್ರ ಎಂಬ ಕವಿ (ಕ್ರಿ.ಶ. 1646) ಕಾರ್ಕಳದ ಗೊಮ್ಮಟೇಶ್ವರನ ಚರಿತ್ರೆ, ವಿಗ್ರಹದ ಪ್ರತಿಷ್ಠೆಯ ಕುರಿತು ಬರೆದಿದ್ದಾನೆ.
- ಗೋವಿಂದ ವೈದ್ಯನು 'ಕಂಠೀರವ ನರಸರಾಜ ವಿಜಯ' ಐತಿಹಾಸಿಕ ಕಾವ್ಯವಾಗಿದೆ. ನರಸರಾಜ ಒಡೆಯರ ಜೀವನ, ಯುದ್ಧಗಳು. ವೈಭವ ಶ್ರೀರಂಗಪಟ್ಟಣ ಮೊದಲಾದ ಆ ಕಾಲದ ಮುಖ್ಯ ನಗರಗಳ ವರ್ಣನೆಗಳನ್ನು ಈ ಗ್ರಂಥವು ಒದಗಿಸುತ್ತದೆ.
- ತಿರುಮಲಾರ್ಯನು ಬರೆದ 'ಚಿಕ್ಕದೇವರಾಜ ವಂಶಾವಳಿ' ಒಡೆಯರ ಚರಿತ್ರೆಯನ್ನು ತಿಳಿಸುವ ಗ್ರಂಥವಾಗಿದೆ. ಅವನೇ ಬರೆದ 'ಚಿಕ್ಕದೇವರಾಜ ವಿಜಯ' ಚಾರಿತ್ರಿಕ ಕಾವ್ಯವಾಗಿದೆ. ಶ್ರೀವೈಷ್ಣವ ಧರ್ಮದ ಹುಟ್ಟು ಮತ್ತು ಬೆಳವಣಿಗೆಯನ್ನು ಈ ಗ್ರಂಥವು ವಿವರಿಸುತ್ತದೆ.
- ತಿರುಮಲಾರ್ಯನು ಬರೆದ 'ಚಿಕ್ಕದೇವರಾಜಚರಿತ್ರ'ವು ಚಿಕ್ಕದೇವರಾಜರ ಕಾಲದ ಮುಖ್ಯ ಘಟನೆಗಳನ್ನು ತಿಳಿಸುತ್ತದೆ.



downloaded from: www.kpscvaani.com

- ಚಿಕ್ಕೊಪಾಧ್ಯಾಯನ 'ದಿವ್ಯಸೂರಿಚರಿತೆ' 12 ಮಂದಿ ಆಳ್ವಾರುಗಳ ಚರಿತ್ರೆಯನ್ನೂ ಚಿಕ್ಕದೇವರಾಜ ಒಡೆಯರ ವಂಶ ಚರಿತ್ರೆಯನ್ನು ನೀಡುವ ಗ್ರಂಥವಾಗಿದೆ.
- ಚಿಕ್ಕದೇವರಾಜ ಒಡೆಯರ ಆಸ್ಥಾನದಲ್ಲಿದ್ದ ತಿಮ್ಮ ಕವಿ ಬರೆದ 'ಯದುಗಿರಿ ಮಹಾತ್ಮ'ಯಲ್ಲಿ ಚಿಕ್ಕದೇವರಾಜ ಒಡೆಯರ ವಂಶಾವಳಿ ಹಾಗೂ ದಿಗ್ವಿಜಯಗಳ ವರ್ಣನೆಯಿದೆ.
- ಚಿದಾನಂದ ಕವಿಯ 'ಮುನಿವಂಶಾಭ್ಯುದಯ' ಎಂಬ ಗ್ರಂಥವು ಮೈಸೂರಿನ ಒಡೆಯರ ವಂಶಾವಳಿಯನ್ನು ಚಿಕ್ಕದೇವರಾಜ ಒಡೆಯರ ಚರಿತ್ರೆಯನ್ನು ಮತ್ತು ಮೈಸೂರು ಒಡೆಯರಿಗೂ ಮತ್ತು ಶ್ರವಣ ಬೆಳಗೊಳದ ಜೈನ ಮಠಾಧೀಶರಿಗೂ ಇದ್ದ ಸಂಬಂಧಗಳನ್ನು ತಿಳಿಸುವ ಗ್ರಂಥ ಇದಾಗಿದೆ.
- ಚಾಮಯ್ಯನೆಂಬ ಕವಿಯ 'ದೇವರಾಜೇಂದ್ರ ಸಾಂಗತ್ಯ' ದೇವರಾಜ ಒಡೆಯರ ಜೀವನ ಮತ್ತು ಸಾಧನೆಗಳನ್ನು ತಿಳಿಸುತ್ತದೆ.
- ನಂಜರಾಜನ ಆಶ್ರಯದಲ್ಲಿದ್ದ ನೂರೊಂದನ (ಕ್ರಿ.ಶ.1740) 'ಸೌಂದರ್ಯ ಕಾವ್ಯ'ದಲ್ಲಿ ದಳವಾಯಿ ದೇವರಾಜ ಮತ್ತು ನಂಜರಾಜರ ಪರಾಕ್ರಮದ ವರ್ಣನೆಗಳಿವೆ.
- ಶಾನುಭೋಗ ವೆಂಕಟರಮಣಯ್ಯ (1790)ನು ಮೈಸೂರು ರಾಜರ ಚರಿತ್ರೆಯನ್ನು ಗದ್ಯರೂಪದಲ್ಲಿ ಬರೆದಿದ್ದಾನೆ.
- ಶ್ರೀನಿವಾಸ ಕವಿ ಬರೆದ 'ಕೃಷ್ಣನೃಪ ಜಯೋತ್ಕರ್ಷ' ಮೂರನೆ ಕೃಷ್ಣರಾಜ ಒಡೆಯರ ವ್ಯಕ್ತಿತ್ವವನ್ನು ನಿರೂಪಣೆ ಮಾಡಲು ಸಹಾಯಮಾಡುವ ಗ್ರಂಥವಾಗಿದೆ.
- ಎರಡನೆ ಕೃಷ್ಣರಾಜ ಒಡೆಯರ ಭಕ್ತಿಯಾಗಿದ್ದ ನಲ್ಲಪ್ಪನೆಂಬವನು ಬರೆದ 'ಹೈದರನಾಮೆ' (1781) ಹೈದರ ಆಲಿಯು ಒಡೆಯರನ್ನು ಬಂಧನದಲ್ಲಿಟ್ಟು ತಾನೇ ನವಾಬನಾದ ಘಟನೆಗಳನ್ನು ವಿವರಿಸುವ ಗ್ರಂಥವಾಗಿದೆ.
- ತಮ್ಮಯ್ಯ ಕವಿಯು (ಕ್ರಿ.ಶ–1834) ರಾಜವಂಶ 'ರತ್ನ ಪ್ರಬೆ' ಎಂಬ ಗ್ರಥದಲ್ಲಿ ಮೈಸೂರು ರಾಜರ ಪರಂಪರೆಗಳನ್ನೂ ಮೂರನೆ ಕೃಷ್ಣರಾಜ ಒಡೆಯರ ಗ್ರಂಥಗಳು ಹಾಗೂ ಅವರ ಧರ್ಮ ಕಾರ್ಯಗಳನ್ನು ವಿವರಿಸಿದ್ದಾನೆ.
- ನಂಜುಂಡ ಎಂಬ ಕವಿ (1841) 'ಕೃಷ್ಣರಾಜ ಪಟ್ಟಾಭಿಷೇಕ ವರ್ಣನೆ' ಯನ್ನು ಬರೆದಿದ್ದಾನೆ.



downloaded from: www.kpscvaani.com

## ಸದಾಶಿವ ನಾಯಕ (ಕ್ರಿ.ಶ 1514–1546) :

- ಇವನು ಅಹಮ್ಮದ್ ನಗರ, ಗುಲ್ಬರ್ಗಾ & ಬಿಜಾಪುರ ಸುಲ್ತಾನರನ್ನು ಸೋಲಿಸಿದ್ದರಿಂದ ಕೃಷ್ಣದೇವರಾಯ ಇವನಿಗೆ ಹಲವು ಬಿರುದು ನೀಡಿದನು.
  - ಕೋಟೆ ಕೋಲಾಹಲ, ರಾಯನಾಯಕ, ಶತೃಸಪ್ತಾಂಗ ಹರಣ, ಏಕಾಂಗವೀರ.
- ಇವನು ರಾಜಧಾನಿಯನ್ನು ಕೆಳದಿಯಿಂದ ಇಕ್ಕೇರಿಗೆ ಬದಲಾಯಿಸಿದನು.
- ಕೆಳದಿಯಲ್ಲಿ ರಾಮೇಶ್ವರ ಗುಡಿಯನ್ನು ನಿರ್ಮಿಸಿದನು.
- ಕೆಳದಿ ಕಾಸರಗೋಡು ಕೋಟೆಯನ್ನು ನಿರ್ಮಿಸಿದನು.

## ದೊಡ್ಡ ಸಂಕಣ್ಣ ನಾಯಕ (ಕ್ರಿ.ಶ 1546–1559) :

- ಇವನು ಗೋವಾದ ಪೋರ್ಚುಗೀಸರನ್ನು ಸೋಲಿಸಿ ರಾಮರಾಯನಿಂದ ಭುಜಕೀರ್ತಿ ಎಂಬ ಬಿರುದು ಗಳಿಸಿದನು.
- ಇವನು ಕಾಶಿಯಲ್ಲಿ ಒಂದು ಜಂಗಮ ಮಠವನ್ನು ಸ್ಥಾಪಿಸಿದ.
- ಇವನು ಕೆಳದಿಯಲ್ಲಿ ವೀರಭದ್ರೇಶ್ವರ ದೇವಾಲಯ ಇಕ್ಕೇರಿಯಲ್ಲಿ ಅಘೋರೇಶ್ವರ ಗುಡಿ ಕಟ್ಟಿಸಿದ.
- ದೊಡ್ಡ ಸಂಕಣ್ಣನ ತಮ್ಮ ಚಿಕ್ಕ ಸಂಕಣ್ಣನು ಕ್ರಿ.ಶ 1559–1571ರವರೆಗ ಆಳಿದನು.
- ಇವನು ತಾಳಿಕೋಟೆ ಯುದ್ಧದಲ್ಲಿ ರಾಮರಾಯನ ಪರ ಹೋರಾಡಿ ಮಡಿದನು.

## ವೆಂಕಟಪ್ಪ ನಾಯಕ (ಕ್ರಿ.ಶ 1582–1629) :

- ವಿಜಯನಗರ ಅರಸರಿಂದ ಪೂರ್ಣ ಸ್ವಾತಂತ್ರ್ಯವನ್ನು ಘೋಷಿಸಿಕೊಂಡು ಆಳ್ವಿಕೆ ನಡೆಸಿದನು.
- ಇವನು ಶೃಂಗೇರಿಯಲ್ಲಿ ಒಂದು ಮಠವನ್ನು ಸ್ಥಾಪಿಸಿ ಅದನ್ನು ಅಭಿನವ ನರಸಿಂಹ ಭಾರತಿ ಶ್ರೀಗಳಿಗೆ ಅರ್ಪಿಸಿ ಶೃಂಗೇರಿಯ ಪುನರ್ ನಿರ್ಮಾಪಕ ಎಂಬ ಬಿರುದು ಪಡೆದನು.
- ಇವನ ಆಶ್ರಯದಲ್ಲಿದ್ದ ವಿದ್ವಾಂಸರು & ಅವರ ಕೃತಿಗಳು



downloaded from: www.kpscvaani.com

| ವಿದ್ವಾಂಸರು | ಅವರ ಕೃತಿಗಳು |
|---|---|
| ರಂಗನಾಥ ದೀಕ್ಷಿತ | ತಂತ್ರಸಾರ |
| ತಿರುಮಲ್ಲಭಟ್ಟ | ಶಿವಗೀತೆ & ಶಿವಷಟ್ಪದಿ |
| ಅಶ್ವ ಪಂಡಿತ | ಮಾನಪ್ರಿಯ |
| ಭಟ್ಟೋಜಿ ದೀಕ್ಷಿತ | ತತ್ವಕೌಸ್ತುಭ |

- ವೆಂಕಟಪ್ಪನ ನಂತರ ಬಂದ ಅವನ ಮೊಮ್ಮಗ ವೀರಭದ್ರನಾಯಕರು ರಾಜಧಾನಿಯನ್ನು 1639ರಲ್ಲಿ ಇಕ್ಕೇರಿಯಿಂದ ಬದನೂರಿಗೆ ವರ್ಗಾಯಿಸಿದ.

## ಶಿವಪ್ಪ ನಾಯಕ (ಕ್ರಿ.ಶ 1645–1660) :

- ಜನಾನುರಾಗಿಯಾದ ಶಿವಪ್ಪ ನಾಯಕನು 1645 ರಲ್ಲಿ ಪಟ್ಟಕ್ಕೆ ಬಂದನು. ಕೆಳದಿಯ ನಾಯಕರಲ್ಲಿಯೇ ಅತ್ಯಂತ ಶ್ರೇಷ್ಠ ನಾಯಕನು ಇವನು.
- ವೀರಭದ್ರ ನಾಯಕನ ಕಾಲದಲ್ಲಿ ಅವನನ್ನು ಬೆಂಬಲಿಸಿ ರಾಜಧಾನಿಯಲ್ಲಿ ನಡೆದ ಸಂಚುಗಳನ್ನು ವಿಫಲಗೊಳಿಸಲು ಅವನಿಗೆ ನೆರವಾದನು. ಅಲ್ಲದೆ ಆಡಳಿತದಲ್ಲಿ ಹಾಗೂ ಮಿಲಿಟರಿಯಲ್ಲಿ ಸಾಕಷ್ಟು ಅನುಭವವನ್ನು ಹೊಂದಿದನು.
- ಇವನು ಯುದ್ಧದಲ್ಲಿ ವೀರನಾಗಿದ್ದು, ಮುತ್ಸದ್ದಿ ಆಡಳಿತಗಾರನೂ ಆಗಿದ್ದನು. ಇವನು ಕೆಳದಿ ರಾಜ್ಯವನ್ನು ವಿಸ್ತರಿಸಿದನು.
- ಸಾಂಸ್ಕೃತಿಕ ಬೆಳವಣಿಗೆಗೆ ಉದಾರ ಸಹಾಯವನ್ನು ಮಾಡಿದನು.
- ರಾಜ್ಯವನ್ನು ಕಳೆದುಕೊಂಡು ದೇಶಭ್ರಷ್ಟನಾಗಿ ತಿರುಗುತ್ತಿದ್ದ ವಿಜಯನಗರದ ಅರಸ ಶ್ರೀರಂಗರಾಯನಿಗೆ ಶಿವಪ್ಪನಾಯಕ ಆಶ್ರಯ ನೀಡಿದ.
- ಇವನು ತನ್ನ ಭೂಸುಧಾರಣೆಗಳಿಂದ ಶಿಸ್ತುಗಾರ ಶಿವಪ್ಪನಾಯಕ ಎಂದೇ ಹೆಸರಾಗಿದ್ದನು.
- ವೀರಭದ್ರಪ್ಪ ನಾಯಕನಿಗೆ ವಿರಕ್ತಿ ಹುಟ್ಟಿ ಅವನು ಪುಣ್ಯಕ್ಷೇತ್ರ ಸಂದರ್ಶನದಲ್ಲಿ ಕಾಲಾ ಕಳೆಯುತ್ತಿದ್ದನು. ಆಡಳಿತ ನೋಡಿಕೊಳ್ಳಲು ಯಾರೂ ಇಲ್ಲದಂತಾಯಿತು. ಆಗ ರಾಜ್ಯದ ಹಿರಿಯರು ಶಿವಪ್ಪ ನಾಯಕನಿಗೇ ರಾಜ್ಯಭಾರ ನೀಡಿದರು. ಅವನ ಏಳ್ಗೆಯನ್ನು ಸಹಿಸದ ಕೆಲವರು ಅವನನ್ನು ಕೊಲ್ಲಲು ಹೊಂಚು ಹಾಕಿದರು. ಶಿವಪ್ಪನು ಈ ಸಂಚಿನಿಂದ ಪಾರಾದನು.
- ಬಿಜಾಪುರದ ನವಾಬನು ಶಿವಮೊಗ್ಗದ ಮೇಲೆ ದಾಳಿ ಮಾಡಿದನು. ಶಿವಪ್ಪ ನಾಯಕನು ಬಿಜಾಪುರದ ನವಾಬನನ್ನು ಸೋಲಿಸಿ ಅವನ ದಕ್ಷಿಣ ಪ್ರಾಂತ್ಯದ ಆಕಾಂಕ್ಷೆಯನ್ನು ಮಣ್ಣುಗೂಡಿಸಿದನು.



downloaded from: www.kpscvaani.com

- ಈ ಸಂದರ್ಭದಲಿ ವೀರಭದ್ರಪ್ಪ ನಾಯಕನು ಕಂಡಲೂರು ಎಂಬಲ್ಲಿ ಕಾಣಿಸಿಕೊಂಡನು ಶಿವಪ್ಪ ನಾಯಕನು ಕಂಡಲೂರಿನಲ್ಲಿ ಅವನನ್ನು ಕಂಡು, ರಾಜಧಾನಿಗೆ ವಾಪಸ್ಸಾಗಿ ರಾಜ್ಯದ ಕಾರುಭಾರ ವಹಿಸಿಕೊಳ್ಳಬೇಕೆಂದು ವಿಜ್ಞಾಪಿಸಿಕೊಂಡನು. ಆದರೆ ವೀರಭದ್ರನು ವಾಪಸ್ಸಾಗಲಿಲ್ಲ ಕ್ರಿ.ಶ 1645ರಲ್ಲಿ ಅವನು ಮರಣ ಹೊಂದಿದನು. ಹೀಗೆ ಶಿವಪ್ಪ ನಾಯಕನು ವೀರಭದ್ರ ನಾಯಕನ ಕಾಲದಲ್ಲಿಯೇ ನಿಜವಾದ ಆಡಳಿತಗಾರನಾಗಿದ್ದನು.

## ಶಿವಪ್ಪ ನಾಯಕನ ಸಾಧನೆಗಳು:

ವೀರಭದ್ರಪ್ಪ ನಾಯಕನ ಸಹಾಯಕನಾಗಿ: ವೀರಭದ್ರಪ್ಪನ ಕಾಲದಲ್ಲಿ ವಾಸ್ತವವಾಗಿ ರಾಜ್ಯದ ವ್ಯವಹಾರಗಳನ್ನು ನೋಡಿಕೊಂಡವನು ಚಿಕ್ಕ ಸಂಕಣ್ಣ ನಾಯಕನ ಮಗನಾದ ಶಿವಪ್ಪ ನಾಯಕನೇ ಆಗಿದ್ದನು.

- ವೀರಭದ್ರಪ್ಪ ನಾಯಕನ ಕಾಲದಲ್ಲಿ ಕರೀಕೆರೆಯ ಪಾಳೆಯಗಾರನು ಇತರರೊಡನೆ ಸೇರಿ ಕೆಳದಿಯ ಮೇಲೆ ದಾಳಿ ಮಾಡಿದ್ದನು. ಕೆಳದಿಯ ಅಪಾರ ಹಾನಿಗೆ ಕಾರಣನಾಗಿದ್ದನು. ವೀರಭದ್ರಪ್ಪ ನಾಯಕನು ತರೀಕೆರೆಯ ಪಾಳೆಯಗಾರನನ್ನು ಧಮನಿಸಲು ಶಿವಪ್ಪ ನಾಯಕನನ್ನು ಕೇಳಿಕೊಂಡನು.
- ತರೀಕೆರೆಯ ಪಾಳೆಯಗಾರನನ್ನು ಸೋಲಿಸಿ ತರೀಕೆರೆಯನ್ನು ಮತ್ತು ಬಸವಾ ಪಟ್ಟಣವನ್ನು ಆಕ್ರಮಿಸಿದನು
- ತುಳುವ ಪ್ರಾಂತ್ಯದ ಬೈರಸನು ಮಲಯಾಳವನ್ನು ವಶಪಡಿಸಿಕೊಂಡು, ಕೊಡಗಿನ ಮೇಲೆ ಕಣ್ಣಿಟ್ಟಿದ್ದರು. ಶಿವಪ್ಪ ನಾಯಕನು ಅವನನ್ನು ಹಿಮ್ಮೆಟ್ಟಿಸಿದನು..

## ಪಟ್ಟಾಭಿಷೇಕ:–

ಕ್ರಿ.ಶ 1645ರಲ್ಲಿ ವೀರಭದ್ರಪ್ಪ ನಾಯಕನು ಮರಣ ಹೊಂದಿದನು. ಅವನಿಗೆ ಸಂತಾನವಿರಲಿಲ್ಲ ಆದ್ದರಿಂದ ಕೆಳದಿಯ ಪ್ರಮುಖರು. ಶಿವಪ್ಪ ನಾಯಕನ ಯೋಗ್ಯತೆಯನ್ನು ಈಗಾಗಲೇ ಕಂಡವರು ಅವನಿಗೆ ಕ್ರಿ.ಶ1645 ರಲ್ಲಿ ಪಟ್ಟಾಭಿಷೇಕ ಮಹೋತ್ಸವ ನಡೆಸಿದರು.

## ಯುದ್ದಗಳು ಮತ್ತು ರಾಜ್ಯ ವಿಸ್ತಾರ:

ಶಿವಪ್ಪ ನಾಯಕನು ಅನೇಕ ಊರು–ಪ್ರದೇಶಗಳನ್ನು ಗೆದ್ದು ತನ್ನ ನೇರ ಆಡಳಿತದ ಅಡಿ ಅವುಗಳನ್ನು ತಂದನು. ಇನ್ನು ಕೆಲವು ಪ್ರದೇಶಗಳನ್ನು ಗೆದ್ದು ಆ ಅರಸದಿಂದ ಕಪ್ಪಗಳನ್ನು ಪಡೆದು, ವಾರ್ಷಿಕ ಪೊಗದಿಯನ್ನು ನಿಗದಿ ಮಾಡಿ, ಅಲ್ಲಿಯ ಆಡಳಿತವನ್ನು ಅವರಿಗೇ ವಹಿಸಿಕೊಟ್ಟನು.



downloaded from: www.kpscvaani.com

## ಪೊಗದಿ ಪಡೆದ ಪ್ರದೇಶಗಳು:

ಶಿವಪ್ಪ ನಾಯಕನು ಬನವಾಸಿ, ಶಿರಸಿ, ಚೋಳರು, ಹೇರೂರು, ಸೋದೆ ಅರಸರನ್ನು ಸೋಲಿಸಿದನು. ಅವರು ಶಿವಪ್ಪ ನಾಯಕನೊಡನೆ ಸಂಧಿಯನ್ನು ಯಾಚಿಸಿದರು. ಶಿವಪ್ಪ ನಾಯಕನು ಈ ಅರಸರಿಂದ ಕಪ್ಪ ಕಾಣಿಕೆಗಳನ್ನು ಪಡೆದು, ಈ ಪ್ರಾಂತ್ಯಗಳನ್ನೆಲ್ಲ ತನ್ನ ಅಧೀನದಲ್ಲಿ ತಂದನು. ಆ ಪ್ರದೇಶಗಳನ್ನು ಆಡಳಿತಕ್ಕಾಗಿ ಅವರವರಿಗೇ ವಹಿಸಿಕೊಟ್ಟನು.

## ವಿದೇಶೀಯರ ಉಪಟಳದ ದಮನ:

ಕ್ರಿ.ಶ 1653 ರ ಸುಮಾರಿಗೆ ಕರ್ನಾಟಕದ ಕರಾವಳಿಯಲ್ಲಿ ಪೋರ್ಚುಗೀಸರು, ಡಚ್ಚರು, ಇಂಗ್ಲೀಷರೇ ಮೊದಲಾದ ವಿದೇಶೀಯರು ವಾಸವಾಗಿದ್ದರು. ಅವರು ವ್ಯಾಪಾರಕ್ಕಾಗಿ ಇಲ್ಲಿಗೆ ಬಂದವರಾಗಿದ್ದರು. ದೇಶೀಯ ರೈತರು, ಉದ್ದಿಮೆದಾರರು, ಸಣ್ಣ ವ್ಯಾಪಾರಿಗಳಿಗೆ ವಿದೇಶೀ ವ್ಯಾಪಾರಿಗಳ ಉಪಟಳ ಹೆಚ್ಚಾಯಿತು. ಶಿವಪ್ಪ ನಾಯಕನು ಇಂಥ ವಿದೇಶಿಯರನ್ನು ಬಗ್ಗು ಬಡಿದು, ಅವರಿಂದಾಗುವ ಉಪಟಳವನ್ನು ದಮನ ಮಾಡಿದನು.

ಬೇಲೂರಿನ ಪಾಳೆಯಗಾರನು ವಿಜಯನಗರದ ರಂಗ ರಾಯನ ವೈರಿಯಾಗಿದ್ದನು. ಅವನು ರಂಗರಾಯನ ಅಸಹಾಯಕ ಪರಿಸ್ಥಿತಿಯ ದುರ್ಲಾಭ ಪಡೆಯಲು ಯತ್ನಿಸುತ್ತಿದ್ದನು. ಶಿವಪ್ಪ ನಾಯಕನು ಬೇಲೂರಿನ ಪಾಳೆಯಗಾರನ ಮೇಲೇರಿ ಹೋಗಿ ಅವನನ್ನು ಸೋಲಿಸಿ, ಸೆರೆಹಿಡಿದನು.

ಇದರಿಂದ ಸಂತೋಷಗೊಂಡ ರಂಗರಾಜನು ಶಿವಪ್ಪ ನಾಯಕನನ್ನು ಸತ್ಕರಿಸಿದನು. ಅವನಿಗೆ

- ಅಮೂಲ್ಯವಾದ ರತ್ನಾಭರಣಗಳನ್ನು
- ರಾಮಬಾಣ ಎಂದೇ ಪ್ರಸಿದ್ಧವಾದ ಆನೆಯನ್ನು
- ಇಂದ್ರನೀಲದಿಂದ ಶೋಭಿಸುತ್ತಿರುವ ಕರ್ಣಕುಂಡಲವನ್ನು
- ಶಂಖ ಚಕ್ರಗಳನ್ನು
- ಜಗತ್ ಝುಂಪಾ ಎಂಬ ಛತ್ರವನ್ನೂ ನೀಡಿ ಗೌರವಿಸಿದನು.
- ಶಿವಪ್ಪ ನಾಯಕನು ವಿಜಯನಗರದ ಶ್ರೀರಂಗ ವತಿಯಿಂದ ಶ್ರೀರಂಗಪಟ್ಟಣದ ಮೇಲೆ ದಾಳಿ ಮಾಡಿ ಭರ್ಜರಿ ವಿಜಯವನ್ನು ಸಾಧಿಸಿದನು. ಈ ಯುದ್ಧದಲ್ಲಿ ಶಿವಪ್ಪ ನಾಯಕನು ಮಹಾ ಸಾಹಸವನ್ನು ಮೆರೆದನು. ಇದರಿಂದ ಅವನಿಗೆ ಇಕ್ಕೇರಿಯ ಪಿಂಡ ಎಂಬ ಬಿರುದು ಎಂಬ ಬಿರುದು ದೊರೆತವು.

ಒಟ್ಟಿನಲ್ಲಿ ವಿಜಯನಗರದ ರಂಗರಾಯನಿಗೆ ಆಶ್ರಯ ನೀಡಿ, ಬೇಲೂರು, ಮೈಸೂರುಗಳ ಮೇಲೇರಿ ಹೋಗಿ ವಿಜಯ ಸಾಧಿಸಿ ರಂಗರಾಯನಿಗೆ ಅ) ಬೇಲೂರು ಮತ್ತು ಆ) ಸಕ್ಕರೆ ಪಟ್ಟಣಗಳನ್ನು ಕೊಡಿಸಿದನು.



downloaded from: www.kpscvaani.com

## ಬೀಳಗಿ ಅರಸನ ಸೋಲು:

ಬೀಳಗಿಯಲ್ಲಿ ಒಂಟಿ ಒಡೆಯನೆಂಬ ಖ್ಯಾತಿಯ ಪಾಳೆಯಗಾರನಿದ್ದನು. ಶಿವಪ್ಪ ನಾಯಕನು ಅವನನ್ನು ಸೋಲಿಸಿ ಬೀಳಗಿಯನ್ನು ಇಕ್ಕೇರಿ ರಾಜ್ಯಕ್ಕೆ ಸೇರಿಸಿಕೊಂಡನು.

## ಶಿವಪ್ಪ ನಾಯಕನ ಇತರೆ ಯುದ್ಧಗಳು

- ಸೋದೆಯ ರಾಣಿ ಅಮ್ಮಾಜಿಯನ್ನು ಸೋಲಿಸಿದನು. ಚಂದ್ರಗುತ್ತಿಯ ಜೈನರಾಜನನ್ನು ಜಯಸಿದನು.
- ಚಂದ್ರಗುತ್ತಿಯ ಜೈನರಾಜನನ್ನು ಜಯಿಸಿದನು.
- ಹೊನ್ನಾಳಿಯಲ್ಲಿನ ಮುಸಲ್ಮಾರನ್ನು ಸೋಲಿಸಿದನು.
- ತರೀಕೆರೆಯ ತೆರಗುಪ್ಪ ನಾಯಕನನ್ನು ಪರಾಜಿತಗೊಳಿಸಿದನು ಹೀಗೆ ಸೋದೆ, ಚಂದ್ರಗುತ್ತಿ, ಹೊನ್ನಾಳಿಗಳನ್ನು ಕೆಳದಿ ರಾಜ್ಯಕ್ಕೆ ಸೇರಿಸಿಕೊಂಡನು
- ಬೆಳಗುತ್ತಿ ಅರಸರನ್ನು ಸೋಲಿಸಿದನು ಅವರು ಕೆಳದಿಯ ಅಧಿಪತ್ಯವನ್ನು ಒಪ್ಪಿಕೊಂಡರು
- ಸವಣೂರನ್ನು ವಶಪಡಿಸಿಕೊಂಡನು ಹಾಲುಬೆಣ್ಣೆ ಕಂದಾಯಕ್ಕೆ ಅವನು ಎನ್ನುವವನಿಗೆ ನೀಡಿದನು.

## ಮೈಸೂರು ಪ್ರಾಂತ್ಯಗಳ ವಶ:

ಶಿವಪ್ಪ ನಾಯಕನು ಮೈಸೂರು ಪ್ರಾಂತ್ಯದ ಅಧೀನದಲ್ಲಿದ್ದ ಅರಕಲಗೂಡು, ಬೇಲೂರು, ವಸ್ತಾರೆ ಹೆಬ್ಬೆ ಮುಂತಾದ ಪ್ರದೇಶಗಳನ್ನು ಗೆದ್ದು ತನ್ನ ರಾಜ್ಯಕ್ಕೆ ಕೂಡಿಸಿಕೊಂಡನು.

**ರಾಜ್ಯ ವಿಸ್ತಾರ:** ಶಿವಪ್ಪ ನಾಯಕನ ಕಾಲದಲ್ಲಿ ಕೆಳದಿ ರಾಜ್ಯವು

- ಪಶ್ಚಿಮಕ್ಕೆ ಅರಬೀ ಸಮುದ್ರದವರೆಗೆ,
- ಪೂರ್ವಕ್ಕೆ ಚಿತ್ರದುರ್ಗದವರೆಗೆ
- ದಕ್ಷಿಣಕ್ಕೆ ಶ್ರೀರಂಗ ಪಟ್ಟಣದವರೆಗೆ
- ಉತ್ತರಕ್ಕೆ ಬಿಜಾಪುರ ಹಾಗೂ ಮರಾಠಾ ಪ್ರಾಂತ್ಯಗಳ ಪ್ರಾಂತ್ಯಗಳವರೆಗೆ ಹಬ್ಬಿತ್ತು.



downloaded from: www.kpscvaani.com

## ಶಿವಪ್ಪ ನಾಯಕನ ಆಡಳಿತ

ಶಿವಪ್ಪ ನಾಯಕನ ವೀರ ಯೋಧ ಅದಕ್ಕಿಂತಲೂ ಮಿಗಿಲಾಗಿ ಅತ್ಯಂತ ಅನುಭವಿ, ಪ್ರಜಾಹಿತೈಷಿ ಆಡಳಿತಗಾರನಾಗಿದ್ದನು ಎಂಬುದೇ ಸತ್ಯಕ್ಕೆ ತೀರ ಸಮೀಪವಾದ ಮಾತಾಧೀತು ಎಂದು ಇತಿಹಾಸಕಾರರ ಅಭಿಪ್ರಾಯವಾಗಿದೆ.

ಶಿವಪ್ಪ ನಾಯಕನು ಕಂದಾಯ ಆಡಳಿತ ಸುಧಾರಣೆ ಮಾಡಿದನು. ಈ ದಿಶೆಯಲ್ಲಿ ಇವನೇ ಪ್ರಪ್ರಥಮನೂ ಆಗಿದ್ದಾನೆ.

ಭೂಮಿಯನ್ನು ಕಂದಾಯ ನಿರ್ಣಯಕ್ಕಾಗಿ ಐದು ವಿಭಾಗಗಳಲ್ಲಿ ವಿಂಗಡಿಸಿದನು. ಅವುಗಳೆಂದರೆ

1. ಉತ್ತಮ ಭೂಮಿ
2. ಮಧ್ಯಮ ಭೂಮಿ
3. ಕನಿಷ್ಠ ಭೂಮಿ
4. ಅಧಮ ಭೂಮಿ
5. ಅಧಮಾಧಮ ಭೂಮಿ

- ಪ್ರತಿ ವರ್ಗಗಳ ಭೂಮಿಯ ಉತ್ಪತ್ತಿಯನ್ನು ಆಧರಿಸಿ ಕಂದಾಯವನ್ನು ನಿಷ್ಕರ್ಷ ಮಾಡಿದನು. ಕಂದಾಯವನ್ನು ನಿಗದಿ ಮಾಡುವಾಗ ಮಣ್ಣಿನ ಫಲವತ್ತತೆ, ನೀರಾವರಿ ಸೌಲಭ್ಯ ಮುಂತಾದವುಗಳನ್ನು ಗಮನಿಸಲಾಗುತ್ತಿತ್ತು. ಈ ರೀತಿಯ ಕಂದಾಯ ನಿಷ್ಕರ್ಷೆಯೇ ಶಿವಪ್ಪ ನಾಯಕನ ಶಿಸ್ತು ಎಂದು ಹೆಸರಾಯಿತು. ಇವನ ಕಂದಾಯ ಆಡಳಿತ ಕರ್ನಾಟಕದಲ್ಲಿ ಅಷ್ಟೇ ಅಲ್ಲ ಇಡೀ ದೇಶದಲ್ಲಿ ಪ್ರಖ್ಯಾತವಾಯಿತು.
- ಭೂಮಿಯನ್ನು ಗ್ರಾಮೀಣ ಮಟ್ಟದಲ್ಲಿಯೂ ಅಳೆಯುವ ಮತ್ತು ಕಾಗದ ಪತ್ರಗಳನ್ನು ತಯಾರಿಸುವ ಪದ್ಧತಿಯನ್ನು ರೂಢಿಯಲ್ಲಿ ತಂದನು. ಭೂಮಾಪಾನ (ಐಚಿಟಿಜ ಖಾಊತಿಞು) ಕಂದಾಯ ಆಡಳಿತದ ಮುಖ್ಯ ಲಕ್ಷಣಗಳಲ್ಲಿ ಒಂದು ಎಂಬುದನ್ನು ಗಮನಿಸಬೇಕು. ಭೂ ಸರ್ವೆ ಆದನಂತರ, ಪ್ರತಿ ಎಕರೆಯ ಬೆಳೆಯ ಸರಾಸರಿಯನ್ನು ತೆಗೆಯುತ್ತಿದ್ದರು.
- ಅನಂತರ ಐದೂ ವಿಭಾಗಗಳ ಕಂದಾಯವನ್ನು ನಿರ್ಧರಿಸುತ್ತಿದ್ದರು. ಗರಿಷ್ಠ ಮತ್ತು ಕನಿಷ್ಠ ಕಂದಾಯದ ರಕಂ ನಿಗದಿ ಮಾಡುತ್ತಿದ್ದರು.
- ಶಿವಪ್ಪ ನಾಯಕನು ಆಡಳಿತದಲ್ಲಿ ಹಲವಾರು ಜನಾಭಿವೃದ್ಧಿ ಯೋಜನೆಗಳನ್ನು ತಯಾರಿಸಿದನು. ಭಾವಿಗಳನ್ನು ಕೆರೆಗಳನ್ನು ತೋಡಿಸಿ ರೈತರಿಗೆ ನೀರಾವರಿ ಅನುಕೂಲತೆಗಳನ್ನು ಕಲ್ಪಿಸಿದನು.
- ರಾಜ್ಯದಲ್ಲಿ ಸಾಗುವಳಿ ಮಾಡದೆ ಇರುವ ಭೂಮಿಯನ್ನು ಸಾಗುವಳಿಯ ಅಡಿಯಲ್ಲಿ ತರಲು ಅವನು ಪ್ರಯತ್ನಿಸಿದನು.



downloaded from: www.kpscvaani.com

- ಶಿವಪ್ಪನಾಯಕನ ಕಂದಾಯದ ಆಡಳಿತದ ಇನ್ನೊಂದು ಮುಖ್ಯ ಸಂಗತಿಯೆಂದರೆ ಭೂಮಿಗಳನ್ನು ಸರಕಾರದ ವೆಚ್ಚದಿಂದಲೇ ಸಾಗುವಳಿ ಮಾಡಿಸಿ ರಾಜ್ಯದ ಆದಾಯವನ್ನು ಹೆಚ್ಚಿಸಿದ್ದು. ಅವನ ಕಂದಾಯ ಆಡಳಿತದಿಂದ ರೈತರಿಗೆ ಹೆಚ್ಚಿನ ಲಾಭವಾಯಿತು. ಜತೆಗೆ ಸರಕಾರದ ಉತ್ಪನ್ನವೂ ಹೆಚ್ಚಿತು. ಹೀಗೆ ಶಿವಪ್ಪ ನಾಯಕನು ಉತ್ತಮ ಆಡಳಿತಗಾರನೂ ಆಗಿದ್ದನು.

## ವ್ಯಾಪಾರ ವ್ಯವಹಾರಗಳು:

ವಿದೇಶಿ ವ್ಯಾಪರಿಗಳಿಂದ ಪ್ರಜೆಗಳಿಗೆ ಆಗುವ ತೊಂದರೆಗಳನ್ನು ಹೋಗಲಾಡಿಸಿದನು. ದೇಶೀಯ ವ್ಯಾಪಾರಿಗಳಿಗೆ ಸವಲತ್ತುಗಳನ್ನೂ, ರಕ್ಷಣೆಯನ್ನು ನೀಡಿದನು. ಕೊಂಕಣಿಗರು ಹಾಗೂ ಕೋಮಟಿಗರು ವ್ಯಾಪಾರಿ ವೃತ್ತಿಯವರಾಗಿದ್ದು, ಅವರ ವ್ಯಾಪಾರ ವೃದ್ಧಿಗೆ ಸಹಾಯ ಮಾಡಿದನು.

## ಉದಾರ ಧಾರ್ಮಿಕ ನೀತಿ:–

- ಶಿವಪ್ಪ ನಾಯಕನು ಉದಾರ ಧಾರ್ಮಿಕ ನೀತಿಯನ್ನು ಅನುಸರಿಸಿದನು. ತನ್ನ ರಾಜ್ಯದಲ್ಲಿ ಹಿಂದುಗಳಂತೆ ಮುಸಲ್ಮಾನರನ್ನೂ ಕ್ರಿಶ್ಚಿಯನ್ನರನ್ನೂ ಉದಾರ ಭಾವನೆಯಿಂದ ನೋಡಿಕೊಂಡನು
- ಅವನು ರಾಜ್ಯದ ಹಾಗೂ ಜನತೆಯ ಉತ್ಕರ್ಷವಾಗಿ ವಾಜಪೇಯಿ ಯಾಗವನ್ನೂ ಮಾಡಿಸಿದನು.
- ಹಳೆಯ ದೇವಾಲಯಗಳನ್ನು ದುರಸ್ತಿಗೊಳಿಸಿದನು. ರಾಮೇಶ್ವರ, ಕಾಶಿ, ಕೇದಾರ ಮುಂತಾದ ಪುಣ್ಯಕ್ಷೇತ್ರಗಳಲ್ಲಿ ಶಿವನ ಹಾಗೂ ವಿಷ್ಣುವಿನ ದೇವಾಲಯಗಳನ್ನು ಕಾಲಕಾಲಕ್ಕೆ ದೇವತಾಕಾರ್ಯಗಳು ಸಾಂಗವಾಗಿ ನೆರವೇರುವಂತೆ ಯೋಜನೆಗಳನ್ನು ರೂಪಿಸಿ ಸಹಾಯಮಾಡಿದನು.
- ಅವನ ರಾಜ್ಯದಲ್ಲಿ ಸುಮಾರು 3000 ಕ್ರಿಶ್ಚಿಯನ್ ಪ್ರಜೆಗಳಿದ್ದರು ಶಹ ಈಸಾಕ್ ಎಂಬ ಮುಸಲ್ಮಾನ ವ್ಯಾಪಾರಿಯೊಬ್ಬನು ಶಿವಪ್ಪ ನಾಯಕನ ಆಪ್ತ ಸ್ನೇಹಿತನಾಗಿದ್ದನು. ಈ ಉದಾಹರಣೆಗಳು ಅವನ ಸರ್ವಧರ್ಮ ಸಮಾನ ದೃಷ್ಟಿಗೆ ಉದಾಹರಣೆಗಳಾಗಿವೆ.
- ಶಿವಪ್ಪ ನಾಯಕನು ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಿದ ರಾಜನಾಗಿದ್ದನು. ಅವನು ಸ್ವತಃ ಸಾಧಕನಾಗಿ ಯೋಗಮಾರ್ಗದಲ್ಲಿ ಸಾಧಕನಾಗಿದ್ದನು.
- ಶಿವಪ್ಪ ನಾಯಕನು ಶೃಂಗೇರಿ ಪೀಠಕ್ಕೆ ದಾನ ದತ್ತಿಗಳನ್ನು ನೀಡಿದನು. ಕಳಸದ ಭೈರವನಿಂದ ಶೃಂಗೇರಿ ಪೀಠಕ್ಕೆ ತೊಂದರೆಯುಂಟಾದಾಗ ಭೈರವನನ್ನು ನಿಯಂತ್ರಿಸಿ ಶೃಂಗೇರಿ ಪೀಠವನ್ನು ರಕ್ಷಿಸಿದನು.
- ಕೆಳದಿಯ ಮಹಂತ ಮಠ ಮತ್ತು ಆನಂದಾಪುರದ ಜಂಗಮ ಮಠಗಳಿಗೆ ಸಹಾಯ ಮಾಡಿದನು. ಈ ಮಠಗಳಲ್ಲಿ ನಿರಂತರ ದಾಸೋಹಕ್ಕೆ ಕಾರಣನಾದನು.



downloaded from: www.kpscvaani.com

- ತುಂಗಾ ನದಿಯ ದಂಡೆಯ ಮೇಲೆ ಶಿವರಾಜಪುರ ಎಂಬ ಅಗ್ರಹಾರವನ್ನು ಕಟ್ಟಿಸಿದನು
- ವಾರಣಾಸಿಯಲ್ಲಿ ಒಂದು ಮಠವನ್ನು ಸ್ಥಾಪಿಸಿದನು.
- ವಾರಣಾಸಿಯಲ್ಲಿ ಶಿವಪ್ಪ ನಾಯಕನ ಭವ್ಯ ಪ್ರತಿಮೆಯು ದೊರಕಿದೆ.
- ಕಾವೇರಿ ನದಿಗೆ ಸೇತುವೆಯನ್ನು ಕಟ್ಟಿಸಿದನು.
- ಕೇರಳದಲ್ಲಿ ಹತ್ತಾರು ಕೋಟೆಗಳನ್ನು ಕಟ್ಟಿಸಿದನು.

ಹೀಗೆ ಪ್ರಜಾಹಿತ ಚಿಂತಕನಾದ ಶಿವಪ್ಪನಾಯಕನು ಕ್ರಿ.ಶ 1660ರಲ್ಲಿ ತನ್ನ ರಾಜ್ಯವನ್ನು ಸಹೋದರ ವೆಂಕಟಪ್ಪ ನಾಯಕನಿಗೆ ಒಪ್ಪಿಸಿ ತಾನು ವಾನಪ್ರಸ್ಥಾಶ್ರಮ ಸ್ವೀಕರಿಸಿದನು.

## ಐದನೆಯ ಮದಕರಿ ನಾಯಕ (1755–1777):–

ಐದನೆಯ ಮದಕರಿ ನಾಯಕನು ಚಿತ್ರದುರ್ಗದ ನಾಯಕರಲ್ಲಿ ಕೊನೆಯ ಮತ್ತು ಶ್ರೇಷ್ಠ ದೊರೆಯಾಗಿದ್ದನು. ಇವನು ಬಿಳಿಕೊಡೆ ಕುಟುಂಬಕ್ಕೆ ಸೇರಿದವನಾಗಿದ್ದನು. ಇವನು ರಾಜಾ ವೀರ ಮದಕರಿ ನಾಯಕ ಎಂದು ಹೆಸರಾಗಿದ್ದಾನೆ. ಇವನ ಸೈನಿಕ ಸಾಧನೆಗಳನ್ನು ಈ ಕೆಳಗಿನಂತೆ ವಿವರಿಸಬಹುದು.

### ಸೈನಿಕ ಚಟುವಟಿಕೆಗಳು:–

1. **ರಾಯದುರ್ಗದ ನಾಯಕನ ಸೋಲು:** ರಾಯದುರ್ಗದ ನಾಯಕನು ಚಿತ್ರದುರ್ಗದ ಗೋವುಗಳನ್ನು ಅಪಹರಿಸಿ ತನ್ನ ವಶದಲ್ಲಿ ಇಟ್ಟುಕೊಂಡಿದ್ದನು. ಆ ಕಾಲದಲ್ಲಿ ಗಡಿ ರಾಜ್ಯಗಳ ಗೋವುಗಳನ್ನು ಅಪಹರಿಸಿ ತಮ್ಮ ಘನತೆಯನ್ನು ಹೆಚ್ಚಿಸಿಕೊಳ್ಳುವುದು ಒಂದು ಸಂಪ್ರದಾಯವೇ ಆಗಿತ್ತು. ಮದಕರಿನಾಯಕನು ರಾಯದುರ್ಗ ಪಾಳೆಯಗಾರನ ಮೇಲೆ ದಂಡೆತ್ತಿ ಹೋಗಿ ಅವನನ್ನು ಸೋಲಿಸಿ ಗೋವುಗಳನ್ನು ಮರಳಿ ಪಡೆದನು.
2. **ಸಂಯುಕ್ತ ಸೇನೆಯ ಸೋಲು:** ರಾಯದುರ್ಗದ ಕೃಷ್ಣಪ್ಪ ನಾಯಕನು ಬಿದನೂರಿನ ಅರಸು, ಸವಣೂರು ನವಾಬ ಮತ್ತು ಹರಪನ ಹಳ್ಳಿಯ ನಾಯಕ–ಅವರನ್ನು ಒಡಗೂಡಿ ಚಿತ್ರದುರ್ಗದ ಮೇಲೆ ದಾಳಿ ಮಾಡಿದನು. ಈ ಸಂಯುಕ್ತ ಸೇನೆಯನ್ನು ಐದನೆಯ ಮದಕರಿ ನಾಯಕನು ಸೋಲಿಸಿದನು.
3. **ಹೈದರಾಲಿಯ ಆಕ್ರಮಣ:** ಹೈದರಾಲಿಯು ತನ್ನ ದೊಡ್ಡ ಸೈನ್ಯದೊಂದಿಗೆ ಬಂದು ಚಿತ್ರದುರ್ಗದ ಗಡಿ ಹಳ್ಳಿಗಳನ್ನು ಲೂಟಿ ಮಾಡ ತೊಡಗಿದನು.

GNANADHARE IAS ACADEMY



downloaded from: www.kpscvaani.com

4. **ಹೈದರನ ಸ್ನೇಹಿತನಾಗಿ ಮದಕರಿ ನಾಯಕ:** ಐದನೆಯ ಮದಕರಿ ನಾಯಕನು ಹೈದರಾಲಿಯ ಸ್ನೇಹಿತನಾಗಿದ್ದನಷ್ಟೆ ಅವನಿಗೆ ಅನೇಕ ಯುದ್ದಗಳಲ್ಲಿ ಸಹಾಯ ಮಾಡಿ ಅವನ ಗೆಲುವಿಗೆ ಕಾರಣನಾದ
   - ಹೈದರಾಲಿಗೂ ಮರಾಠರಿಗೂ ಬಂಕಾಪುರದ ಬಗ್ಗೆ ಯುದ್ದವಾಯಿತು. ಐದನೇ ಮದಕರಿ ನಾಯಕನು. ಈ ಯುದ್ದದಲ್ಲಿ ಮೈಸೂರಿನ ಹೈದರಾಲಿಗೆ ಸಹಾಯ ಮಾಡಿದನು. ಪರಿಣಾಮವಾಗಿ ಹೈದರಾಲಿಯು ಬಂಕಾಪುರವನ್ನು ವಶಪಡಿಸಿಕೊಳ್ಳಲು ಶಕ್ತನಾದನು.
   - ಹೈದರಾಲಿಗೂ ಕೆಳದಿಯ ನಾಯಕರಿಗೂ ಯುದ್ದದಲ್ಲಿ ಚಿತ್ರದುರ್ಗದ ಸೈನ್ಯವು ಮಹತ್ವದ ಪಾತ್ರವನ್ನು ವಹಿಸಿತು. ಕ್ರಿ.ಶ 1763 ರಲ್ಲಿ ಹೈದರಾ
   - ಹೈದರಾಲಿಯು ಬಿದನೂರನ್ನು ವಶಪಿಸಿಕೊಳ್ಳಲು ಐದನೆಯ ಮದಕರಿ ನಾಯಕನ ಸೈನಿಕ ಸಹಾಯ ಮಹತ್ವದ ಕಾರಣವಾಗಿತ್ತು.
   - ಗುತ್ತಿಯ ನಾಯಕನಾದ ಮುರಾರಿಯ ಯುದ್ದದಲ್ಲಿ ನಿಸ್ಸೀಮನಾಗಿದ್ದನು. ಹೈದರಾಲಿಯು ಗುತ್ತಿಯಾ ಮೇಲೇರಿ ಹೋದನು ಆದರೆ ಯುದ್ದದಲ್ಲಿ ಸೋತನು ಮುರಾರಿಯ ವಿರುದ್ದ ಮದಕರಿ ನಾಯಕನ ಸಹಾಯವನ್ನು ಹೈದರಾಲಿ ಕೇಳಿದನು. ಮದಕರಿ ನಾಯಕನು ಗುತ್ತಿಯ ಮೇಲೆ ಮಿಂಚಿನ ದಾಳಿ ನಡೆಸಿ ಮುರಾರಿ ನಾಯಕನನ್ನು ಸೋಲಿಸಿ ಸೆರೆ ಹಿಡಿದು ಹೈದರಾಲಿಯ ಮುಂದೆ ತಂದು ನಿಲ್ಲಿಸಿದನು.
   - ಹೈದರಾಲಿಯು ನಿಡುಗಲ್ಲಿನ ಮೇಲೆ ದಾಳಿ ನಡೆಸಿದಾಗ ಮದಕರಿ ನಾಯಕನು ಅವನಿಗೆ ಸಹಾಯ ಮಾಡಿದ್ದು ನಿಡುಗಲ್ಲನ್ನು ಗೆಲ್ಲಲು ಹೈದರಾಲಿಗೆ ಸಾಧ್ಯವಾಯಿತು.
5. ಮರಾಠರೊಡನೆ ಮದಕರಿಯ ಸ್ನೇಹ : ಐದನೆ ಮದಕರಿ ನಾಯಕನ ಸಾಹಸವನ್ನು ಅವನ ಯೋಗ್ಯತೆಯನ್ನು ಕಂಡು ಹೈದರಾಲಿಯು ಅಸೂಯೆಪಟ್ಟನು. ದಿನೇ ದಿನೇ ಪ್ರಬಲನಾಗುತ್ತಿರುವ ಮದಕರಿ ನಾಯಕನನ್ನು ಬಗ್ಗು ಬಡಿಯಲು ಹೈದರನು ನಿಶ್ಚಯಿಸಿದನು. ಇದನ್ನು ತಿಳಿದ ಮದಕರಿ ನಾಯಕನು, ಪೇಶ್ವೆ ಮಾಧವರಾಯನ ನೇತೃತ್ವದಲ್ಲಿ ಪ್ರಬಲರಾಗುತ್ತಿದ್ದ ಮರಾಠರೊಡನೆ ಸ್ನೇಹವನ್ನು ಬೆಳೆಸಿದನು.
6. ಮರಾಠರು ಮತ್ತು ಹೈದರಾಲಿಯು ಮಧ್ಯೆ ಅನವಟ್ಟಿಯಲ್ಲಿ ಯುದ್ದವಾಯಿತು. ಮದಕರಿ ನಾಯಕನು ಈ ಯುದ್ದದಲ್ಲಿ ಹೈದರಾಲಿಯ ವಿರುದ್ಧ ಮರಾಠರಿಗೆ ಸಹಾಯ ಮಾಡಿದನು. ಹೈದರಾಲಿಯು ಈ ಯುದ್ದದಲ್ಲಿ ಸೋತನು.
7. ಮರಾಠರು ಸಾವನದುರ್ಗ, ನುಗ್ಗೇನಹಳ್ಳಿ, ಹಾಲವಾಡಿ ಮತ್ತು ಬಾಣಾವರವನ್ನು ಆಕ್ರಮಿಸಿದರು. ಮದಕರಿಯ ಸಹಾಯವಿಲ್ಲದಿದ್ದರೆ ಮರಾಠರಿಗೆ ಈ ಯುದ್ದದಲ್ಲಿ ಜಯ ಸಿಗುತ್ತಿರಲಿಲ್ಲ.



downloaded from: www.kpscvaani.com

## ಹೈದರಾಲಿಯೊಡನೆ ಹೋರಾಟ:

- ಮದಕರಿ ನಾಯಕನು ಮರಾಠರಿಗೆ ಸಹಾಯ ಮಾಡಿದ್ದರಿಂದ ಹೈದರಾಲಿಯು ಕೋಪಗೊಂಡನು. ಆದರೆ ಮರಾಠರಲ್ಲಿ ಪೇಶ್ವೆ ಮಾಧವರಾಯನ ನಂತರ ಕರ್ನಾಟಕದ ಮೇಲಿನ ಅವರ ನಿಯಂತ್ರಣ ದುರ್ಬಲವಾಯಿತು. ಇದರ ಲಾಭವನ್ನು ಪಡೆಯಲು ಹೈದರಾಲಿಯು 1777 ರಲ್ಲಿ ಚಿತ್ರದುರ್ಗದ ಮೇಲೆ ದಾಳಿಯನ್ನು ಮಾಡಿದನು.
- ಇದೇ ಸಮಯದಲ್ಲಿ ಮದಕರಿನಾಯಕನ ಶತ್ರುವಾಗಿದ್ದ ಹಾಲಪ್ಪನು ಹೈದರಾಲಿಯನ್ನು ಸೇರಿಕೊಂಡನು
- ಮದಕರಿ ನಾಯಕನು ಪರಾಕ್ರಮದಿಂದ ಮುನ್ನುಗ್ಗಿ ಹೈದರಾಲಿಯ ಸೇನಾಧಿಪತಿಗಳಾದ ಮುಖದಂ ಸಾಹೇಬ ಮತ್ತು ಮುಹಿಮುದ್ದೀನರನ್ನು ಸೆರೆಹಿಡಿದನು.
- ನಂತರ, ಹೈದರನು ತನ್ನ ಸೇನಾಧಿಪತಿಗಳನ್ನು ಬಿಡಿಸಿಕೊಳ್ಳಲು ದೊಡ್ಡ ಸೈನ್ಯದೊಡನೆ ಚಿತ್ರದುರ್ಗವನ್ನು ಮುತ್ತಿದನು.
- ಈ ಮುತ್ತಿಗೆ ಅನೇಕ ದಿನಗಳವರೆಗೆ ನಡೆಯಿತು ದಾಳಿಕೋರನಿಗೆ ಕೋಟೆಯನ್ನು ಪ್ರವೇಶಿಸಲು ಸಾಧ್ಯವಾಗಲಿಲ್ಲ
- ಹೈದರನ ಕೆಲವು ಸೈನಿಕರು, ಕೋಟೆಯ ಕಳ್ಳಗಂಡಿಯನ್ನು ಪತ್ತೆ ಹಚ್ಚಿ ಆ ಮೂಲಕ ಕೋಟೆಯನ್ನು ಪ್ರವೇಶಿಸಲು ಪ್ರಯತ್ನಿಸಿದರು. ಕಾವಲುಗಾರ ಕಾತ್ಯಾಯ ನಾಯಕನ ಹೆಂಡತಿ ಓಬವ್ವ ಒನಕೆಯಿಂದ ಹಲವಾರು ಸೈನಿಕರನ್ನು ಕೊಂದಳು ಅವಳು ಒನಕೆ ಓಬವ್ವ ಎಂದು ಹೆಸರಾದಳು
- ಮದಕರಿಯ ನಾಯಕನ ಸೈನ್ಯದಲ್ಲಿದ್ದ ಮುಸ್ಲಿಂ ಸೈನಿಕರು ಕೋಟೆಯ ರಹಸ್ಯಗಳನ್ನು ಹೈದರಾಲಿಗೆ ತಿಳಿಸಿದರು. ಮದಕರಿ ನಾಯಕನ ಮದ್ದುಗುಂಡುಗಳು ಸಂಗ್ರಹಕ್ಕೆ ಎಣ್ಣೆಯನ್ನು ಸರವಿದರು. ಇದರಿಂದಾಗಿ ಹೈದರನು ಏರಿ ಬಂದಾಗ ಮದಕರಿ ನಾಯಕನ ಫಿರಂಗಿಗಳು ಪ್ರಯೋಜನವಾಗಲಿಲ್ಲ.
- ಚಿತ್ರದುರ್ಗ ಸೈನ್ಯ ವೀರಾವೇಶದಿಂದ ಹೋರಾಡಿದರೂ ಕೂಡ ಕೋಟೆಯನ್ನು ರಕ್ಷಿಸಲಾಗಲಿಲ್ಲ ಹೈದರಾಲಿ ಚಿತ್ರದುರ್ಗವನ್ನು ವಶಪಡಿಸಿಕೊಂಡನು. ಮದಕರಿ ನಾಯಕನನ್ನು ಸೆರೆ ಹಿಡಿದು ಶ್ರೀರಂಗ ಪಟ್ಟಣದ ಸೆರೆಮನೆಯಲ್ಲಿಟ್ಟನು ಕ್ರಿ.ಶ 1779ರಲ್ಲಿ ಐದನೇ ಮದಕರಿ ನಾಯಕನು ಜೈಲಿನಲ್ಲಿಯೇ ಮರಣ ಹೊಂದಿದನು ಹೈದರಾಲಿಯು ಚಿತ್ರದುರ್ಗವನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡನು.
- ಚಿತ್ರದುರ್ಗದ ನಾಯಕರು ಪ್ರಬಲವಾದ ಫಿರಂಗಿ ದಳವನ್ನು ಹೊಂದಿದ್ದರು ತಮ್ಮ ಕೋಟೆಯನ್ನು ಕಟ್ಟಲು ಫ್ರೆಂಚ್ ಇಂಜನಿಯರರನ್ನು ನೇಮಿಸಿಕೊಂಡಿದ್ದರು. ತಮ್ಮ ಸೈನಿಕರಿಗೆ ತರಬೇತಿ ನೀಡಲು ನುರಿತ ಫ್ರೆಂಚ್ ಸೇನಾಧಿಪತಿಗಳನ್ನು ನೇಮಿಸಿ ಕೊಂಡಿದ್ದರು.
- ಈ ನಾಯಕರು ಅಗ್ರಹಾರಗಳು ದೇವಾಲಯಗಳು, ಮಠಗಳನ್ನು ಕಟ್ಟಿಸಿದರು ಅವುಗಳ ನಿರ್ವಹಣೆಗೆ ಉದಾರ ಸಹಾಯವನ್ನು ಮಾಡಿದರು. ಈ ಮೂಲಕ ಕರ್ನಾಟಕ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದರು.



downloaded from: www.kpscvaani.com

## ಚೆನ್ನಮ್ಮಾಜಿ ಕ್ರಿ.ಶ (1671–1697) :

- ಶಿವಪ್ಪ ನಾಯಕರ ನಂತರ ಸೋಮಶೇಖರನು ಸಾವಿಗೀಡಾಗಿದ್ದರಿಂದ ಆತನ ಪತ್ನಿ ಚೆನ್ನಮ್ಮಾಜಿಯ ಆಳ್ವಿಕೆ ನಡೆಸಿದಳು.
- ಇವಳು ಛತ್ರಪತಿ ರಾಜಾರಾಮನಿಗೆ ಕೆಳದಿಯಲ್ಲಿ ಆಶ್ರಯ ನೀಡಿದಳು.
- ಭುವನಗಿರಿ ಈ ಕಾಲದಲ್ಲಿ ಸ್ವಲ್ಪ ಕಾಲದವರೆಗೆ ರಾಜಧಾನಿಯಾಗಿತ್ತು.

## ಬಸಪ್ಪನಾಯಕ :

- ಇವನು ಶಿವತತ್ವ ರತ್ನಾಕರ ಎಂಬ ಕೃತಿಯನ್ನು ರಚಿಸಿದನು.
- ಬಸಪ್ಪ ನಾಯಕನ ನಂತರ ಬಂದ 2ನೇ ಬಸಪ್ಪ ನಾಯಕನಿಗೂ & ಚಿತ್ರದುರ್ಗದ ಮದಕರಿನಾಯಕನಿಗೂ ಮಾಯಕೊಂಡದಲ್ಲಿ ನಡೆದ ಯುದ್ಧದಲ್ಲಿ ಮದಕರಿ ಮಡಿದನು.
- 3ನೇ ಸೋಮೇಶ್ವರ ಕೆಳದಿಯ ಕಡೆಯ ಅರಸ ಇವನ ಕಾಲದಲ್ಲಿ 1763ರಲ್ಲಿ ಹೈದರಾಲಿ ಇವನ್ನು ಬಂಧಿಸಿ ಕೆಳದಿಯನ್ನು ಮೈಸೂರಿಗೆ ಸೇರಿಸಿಕೊಂಡನು.

## ಚಿತ್ರದುರ್ಗದ ನಾಯಕರು :

- ರಾಜಧಾನಿ – ಚಿತ್ರದುರ್ಗ. (ಇದಕ್ಕೆ ಚಂದ್ರವಳ್ಳಿ, ಚಿತ್ರಕಲ್ಲುದುರ್ಗ, ಸೂಳ್ಗಲ್ಲು, ದುರ್ಗ, ಪೆರುಮಾಳಪುರ, ಚಿನ್ಮಲಾದ್ರಿ & ಫರೂಕಬಾದ ಎಂಬ ನಾನಾ ಹೆಸರುಗಳಿವೆ)
- ಸ್ಥಾಪಕ – ಮತ್ತಿ ತಿಮ್ಮಣ್ಣ ನಾಯಕ.
- ಪ್ರಮುಖ ನಾಯಕ – 5ನೇ ಮದಕರಿ ನಾಯಕ

## 5ನೇ ಮದಕರಿ ನಾಯಕ :

- ಇವನು ಹೈದರಾಲಿಯ ಸಮಕಾಲೀನ
- ಇವನು ಚಿತ್ರದುರ್ಗಕ್ಕೆ 7ನೇ ಸುತ್ತಿನ ಕೋಟೆಯನ್ನು ನಿರ್ಮಿಸಿದನು.



downloaded from: www.kpscvaani.com

- ಹೈದರಾಲಿಗೆ & 5ನೇ ಮದಕರಿಗೂ ನಡೆದ 3 ಭಾರಿ ಯುದ್ದದಲ್ಲಿ 2 ಭಾರಿ ಜಯಗಳಿಸಿದನು.
- ಹೈದರಾಲಿ ಮುತ್ತಿಗೆ ಹಾಕಿದ್ದಾಗ ಕಾವಲುಗಾರ ಮುದ್ದೆ ಹನುಮಪ್ಪನ ಪತ್ನಿ ಓಬವ್ವ ತನ್ನ ಒನಕೆಯಿಂದ ಹೈದರಾಲಿ ಸೈನಿಕರನ್ನು ಕೊಂದು ಹೋರಾಡಿ ಮಡಿದಳು.
- 3ನೇ ಬಾರಿ ಹೈದರಾಲಿಯೊಂದಿಗಿನ ಯುದ್ದದಲ್ಲಿ ಮೋಸದಿಂದ ಸೆರೆಸಿಕ್ಕ ಮದಕರಿನಾಯಕ 1779ರಲ್ಲಿ ಹೈದರಾಲಿಯ ಶ್ರೀರಂಗಪಟ್ಟಣ ಜೈಲಿನಲ್ಲಿ ಮರಣ ಹೊಂದಿದನು.

## ಯಲಹಂಕದ ನಾಡ ಪ್ರಭುಗಳು :

- ಸ್ಥಾಪಕ – ರಣಭೈರೇಗೌಡ (ಮೊರಸು ಒಕ್ಕಲುನವರು)
- ರಾಜಧಾನಿ – ಕಂಚಿಪುರ, ಆಲೂರು, ಮರಸೂ (ಮರಸೂನಿಂದ ಸ್ವಲ್ಪ ದೂರದಲ್ಲಿರವ ದೇವನಹಳ್ಳಿ ಸಮೀಪದ ಅವಂತಿಗೆ ರಾಜಧಾನಿ ಬದಲಿಸಿದರು)
- ಕುಲದೇವತೆ – ಭೈರವದೇವನ ಸತಿ ಕೆಂಪಮ್ಮ
- ರಣಭೈರವನ ಮಗ ಜಯಗೌಡನಿಗೆ ಯಲಹಂಕ ಭೂಪಾಲ ಎಂಬ ಬಿರುದಿತ್ತು.

## ಒಂದನೇ ಕೆಂಪೇಗೌಡ (ಕ್ರಿ.ಶ 1513–1569) :

- ಇವರು ಕ್ರಿ.ಶ 1537ರಲ್ಲಿ ಬೆಂಗಳೂರು ಕೋಟೆ ಗವಿಗಂಗಾಧರೇಶ್ವರ ದೇವಾಲಯ ಬುಲ್‌ಟೆಂಪಲ್ & ಆಲಸೂರಿನ ಸೋಮೇಶ್ವರ ದೇವಾಲಯಗಳನ್ನು ನಿರ್ಮಿಸಿದ್ದಾನೆ.
- ಬೆಂಗಳೂರು ನಗರದ 4 ದಿಕ್ಕುಗಳಲ್ಲಿ ಕಾವಲು ಗೋಪುರ ಕಟ್ಟಿಸಿರುವನು.

ಆಲಸೂರು, ಕೆಂಪಾಬುದಿ (ಲಾಲ್‌ಬಾಗ್), ಧರ್ಮಾಂಬುದಿ (ಸಂಪಿಗೆ ರಾಮನಗರ), ಹೆಬ್ಬಾಳ

ದಕ್ಷಿಣದ ಕಾಶೀ ಎಂದೇ ಹೆಸರಾಗಿರುವ ಶಿವಗಂಗೆಯಲ್ಲಿ ಆಂಜನೇಯ ಸ್ವಾಮಿ ದೇವಾಲಯ ನಿರ್ಮಿಸಿದನು.

- ಕೆಂಪೇಗೌಡನ ತರುವಾಯ ಅವನ ಮಗ ಗಿಡ್ಡೇಗೌಡ ಆಳ್ವಿಕೆ ನಡೆಸಿದನು.
- ಇವನ ನಂತರ 2ನೇ ಕೆಂಪೇಗೌಡ ಆಳ್ವಿಕೆ ನಡೆಸಿದನು.
- ಇವನು ರಾಜಧಾನಿಯನ್ನು ಮಾಗಡಿಗೆ ಬದಲಾಯಿಸಿದನು. ಆದ್ದರಿಂದ ಇವನ್ನು ಮಾಗಡಿ ಕೆಂಪೇಗೌಡ ಎಂದೇ ಕರೆಯಲಾಯಿತು.
- ಇವನ ನಂತರ ಬಂದ 3ನೇ ಕೆಂಪೇಗೌಡನನ್ನು ಮಳೆ ಕೆಂಪರಾಯ ಎನ್ನುತ್ತಿದ್ದರು.



downloaded from: www.kpscvaani.com

ಕೊನೆಯ ನಾಯಕ – 3ನೇ ಕೆಂಪ ವೀರಪ್ಪ ಎಂಬುವವನು 3ನೇ ಕೆಂಪೇಗೌಡನೆಂಬ ಹೆಸರನ್ನು ಹೊಂದಿ ಆಳ್ವಿಕೆ ನಡೆಸಿದ. ಇವನ್ನು ಮೈಸೂರಿನ ದೊಡ್ಡ ಕೃಷ್ಣರಾಜರು ಸೋಲಿಸಿ ಯಲಹಂಕ ನಾಡನ್ನು ಮೈಸೂರು ಸಂಸ್ಥಾನದಲ್ಲಿ ವಿಲೀನಗೊಳಿಸಿದರು.

## ವಿಜಯನಗರದ ಶಾಸನಗಳು :

ವಿಜಯನಗರಕ್ಕೆ ಸಂಬಂಧಿಸಿದ ಸುಮಾರು 7000ಕ್ಕೂ ಹೆಚ್ಚು ಶಾಸನಗಳು ದೊರಕಿವೆ. ಇವು ಸಂಸ್ಕೃತ, ಕನ್ನಡ ತೆಲಗು ಮತ್ತು ತಮಿಳು ಭಾಷೆಗಳಲ್ಲಿವೆ ಇವರ ಕಾಲದ ಕೆಲವು ಪ್ರಮುಖ ಶಾಸನಗಳು ಹಾಗೂ ಅವುಗಳ ಐತಿಹಾಸಿಕ ಮಹತ್ವವನ್ನು ಸಂಕ್ಷಿಪ್ತವಾಗಿ ಈ ಕೆಳಗಿನಂತೆ ಹೇಳಬಹುದು.

### 1. ಆಲದಳ್ಳಿ ಶಾಸನ(1338) :

ಅರಸಿಕೆರೆಯ ಆಲದಹಳ್ಳಿಯ ಈ ಶಾಸನವು ವಿಜಯ ನಗರ ಸ್ಥಾಪನೆಯ ಕುರಿತು ಮಾಹಿತಿ ಒದಗಿಸುತ್ತದೆ. ಹೊಯ್ಸಳ ಮೂರನೆ ಬಲ್ಲಾಳನು ಬಂಕಾಪುರಕ್ಕೆ ಭೇಟಿ ನೀಡಿ ಕೆಲವು ಪ್ರದೇಶಗಳನ್ನು ಅಳಲು ಮತ್ತು ಮುಸಲ್ಮಾನರ ದಾಳಿಯನ್ನು ತಡೆಗಟ್ಟಲು ಸಂಗಮನ ಮಕ್ಕಳನ್ನು ಕೇಳಿಕೊಂಡ ವಿಷಯದ ವಿವರಣೆ ಈ ಶಾಸನದಲ್ಲಿದೆ.

### 2. ಕ್ರಿ.ಶ 1346 ರ ಶೃಂಗೇರಿ ಶಾಸನ :

ಮೊದಲನೇ ಹರಿಹರನು ತನ್ನ ಸಹೋದರರು ಹಾಗೂ ಕುಟುಂಬದೊಡನೆ ವಿಜಯೋತ್ಸವವನ್ನು ಆಚರಿಸಲು ಶೃಂಗೇರಿಗೆ ಹೋಗಿ ಭಾರತೀ ತೀರ್ಥರ ಅಶೀರ್ವಾದ ಪಡೆದು, ದೇವಾಲಯಕ್ಕೆ ಸಹಾಯ ನೀಡಿದ ವಿಷಯ ಈ ಶಾಸನದಲ್ಲಿದೆ. ಹರಿಹರನನ್ನು ಈ ಶಾಸನವು ಮೂರು ಸಮುದ್ರಗಳ ಒಡೆಯನೆಂದು ವರ್ಣಿಸಿದೆ.

### 3. 1365 ರ ಮೈಸೂರಿನ ಶಾಸನ :

ಮೊದಲನೇ ಬುಕ್ಕನು ಹೊಸಪೇಟೆಯನ್ನು ರಾಜಧಾನಿಯಾಗಿ ಮಾಡಿಕೊಂಡು ತುರುಕರು, ತೆಲುಗರು ಮತ್ತು ಪಾಂಡ್ಯರೊಡನೆ ಯುದ್ಧ ಮಾಡಿದ ವರ್ಣನೆ ಈ ಶಾಸನದಲ್ಲಿದೆ.




downloaded from: www.kpscvaani.com

## 4. 1368 ರ ಶ್ರವಣಬೆಳಗೊಳ ಶಾಸನ:

ಈ ಶಾಸನದಲ್ಲಿ ವೈಷ್ಣವರು ಮತ್ತು ಜೈನರಲ್ಲಿ ಸಂಘರ್ಷವುಂಟಾಗಿ, ಮೊದಲನೇ ಬುಕ್ಕದೇವನು ಅಲ್ಪಸಂಖ್ಯಾತರಾದ ಜೈನರನ್ನು ಬಹುಸಂಖ್ಯಾಕರಾದ ವೈಷ್ಣವರು ರಕ್ಷಿಸಬೇಕೆಂದು ತೀರ್ಮಾನ ನೀಡಿದ ವಿವರಣೆಯಿದೆ. ಇದು ಬುಕ್ಕದೇವನ ಧಾರ್ಮಿಕ ನೀತಿಯನ್ನು ತಿಳಿಸುತ್ತದೆ.

## 5. 1377 ರ ಗುರುರಾಜ ಪೇಟೆ ಶಾಸನ :

ಈ ಶಾಸನವು ಎರಡನೇ ಹರಿಹರನ ಬಗ್ಗೆ ತಿಳಿಸುತ್ತದೆ. ಎರಡನೇ ಹರಿಹರ ಹಾಗೂ ಅವನ ಸಹೋದರರು ಪೂರ್ವ–ಪಶ್ಚಿಮ ಸಮುದ್ರಗಳ ಒಡೆಯರಾಗಿದ್ದರು ಎಂಬುದನ್ನು ತಿಳಿಸುತ್ತದೆ.

## 6. 1510 ರ ಹಂಪೆಯ ಶಾಸನ :

ಈ ಶಾಸನವು ಹಂಪೆಯ ವಿರೂಪಾಕ್ಷ ದೇವನ ಗುಡಿಯಲ್ಲಿದೆ. ಕೃಷ್ಣದೇವರಾಯನ ಸಾಧನೆಗಳನ್ನು ಹಾಗೂ ರಾಯನು ವಿರೂಪಾಕ್ಷ ದೇವಾಲಯಕ್ಕೆ ಗೋಪುರವನ್ನು ಮತ್ತು ರಂಗಮಂಟಪವನ್ನು ಕಟ್ಟಿಸಿದ ವಿವರಣೆಯಿದೆ.

7. ತಿರುಪತಿ, ಕಂಚಿ, ನಾಗೇನಹಳ್ಳಿ ಮತ್ತು ಪುರಿಯಲ್ಲಿ ದೊರೆತ ಶಾಸನಗಳು ಕೃಷ್ಣದೇವರಾಯನು ಅವನ ಪರಿವಾರದೊಡನೆ ತಿರುಪತಿ ಮುಂತಾದ ವಿವಿಧ ದೇವಾಲಯಗಳಿಗೆ ಬೇಟಿ ನೀಡಿದ ಮತ್ತು ಅವನು ಉದಯಗಿರಿ ಕೊಂಡವೀಡು, ನಾಗಾರ್ಜುನಕೊಂಡ ಮತ್ತು ಪೆನುಗೊಂಡೆಗಳನ್ನು ಜಯಿಸಿದ ವಿವರಣೆಗಳನ್ನು ನೀಡುತ್ತವೆ.

## 8. 1526 ರ ಅತ್ತಿಯ ಶಾಸನ :

ಈ ಶಾಸನವು, ಕೃಷ್ಣದೇವರಾಯನು ಕೃಷ್ಣವೇಣಿ ನದಿಯ ದಂಡೆಯ ಮೇಲೆ ಬೀಡು ಬಿಟ್ಟಾಗ ಅತ್ತಿ ಎಂಬ ಹಳ್ಳಿಗೆ ಅನುದಾನ ನೀಡಿದ ವಿಷಯವನ್ನು ಹಾಗೂ ರಾಯಚೂರಿನಲ್ಲಿ ಅವನು ಬೀಡು ಬಿಟ್ಟ ವಿಷಯಗಳನ್ನು ತಿಳಿಸುತ್ತದೆ.



downloaded from: www.kpscvaani.com

### 9. 1539 ರ ಕಾಳಹಸ್ತಿ ಶಾಸನ :

ಆಂಧ್ರಪ್ರದೇಶದ ಚಿತ್ತೂರ ಜಿಲ್ಲೆಯ ಕಾಳಹಸ್ತಿ ದೇವಾಲಯದಲ್ಲಿ ದೊರೆತ ಈ ಶಾಸನ ಅಚ್ಯುತರಾಯನ ಕುರಿತು ಮಾಹಿತಿಗಳನ್ನು ಒದಗಿಸುತ್ತದೆ.

ಸೆಲ್ಲಪ್ಪನಾಯಕರು ದಂಗೆಯೆದ್ದಾಗ ಅವನನ್ನು ಅಚ್ಯುತರಾಯನು ಹತ್ತಿಕ್ಕೆ ತಾಮ್ರ ಪರ್ಣಿಯಲ್ಲಿ ಯುದ್ಧದಲ್ಲಿ ವಿಜಯಿಯಾಗಿ ಪಾಂಡ್ಯರೊಡನೆ ವೈವಾಹಿಕ ಸಂಬಂಧವನ್ನು ಅಚ್ಯುತರಾಯನು ಮಾಡಿಕೊಂಡ ವರ್ಣನೆ ಈ ಶಾಸನದಲ್ಲಿದೆ. ಹೀಗೆ ವಿಜಯನಗರದ ಇತಿಹಾಸವನ್ನು ತಿಳಿಸುವ ಇನ್ನೂ ಅನೇಕ ಶಾಸನಗಳು ಇತಿಹಾಸಕ್ಕೆ ಆಧಾರಗಳಾಗಿವೆ.

### ಇತರ ಕೆಲವು ಶಾಸನಗಳು :

ಬಹುಮನಿ ಸುಲ್ತಾನರು ಆದಿಲ್‌ಶಾಹಿಗಳು, ಮೈಸೂರಿನ ಒಡೆಯರು ಕೆಳದಿ ಅರಸರು ಹೊರಡಿಸಿದ ಅನೇಕ ಶಾಸನಗಳು ದೊರಕಿವೆ. ಮುಸ್ಲಿಂ ಅರಸರ ಅನೇಕ ಶಾಸನಗಳು ಪರ್ಶಿಯನ್ ಭಾಷೆಯಲ್ಲಿವೆ. ಹೈದರಲಿ ಹಾಗೂ ಟಿಪ್ಪು ಸುಲ್ತಾನರು ಕೂಡ ಪರ್ಶಿಯನ್ ಭಾಷೆಯಲ್ಲಿ ಶಾಸನಗಳನ್ನು ಹೊರಡಿಸಿದರು. ಮರಾಠರ ನಾಯಕರಾದ ಷಹಾಜಿ ಮತ್ತು ಏಕೋಜಿ ಅವರ ಶಾಸನಗಳು ಬೆಂಗಳೂರಿನಲ್ಲಿ ದೊರಕಿವೆ. ಧಾರವಾಡ ಜಿಲ್ಲೆಯ ಭದ್ರಾಪುರದಲ್ಲಿ ಶಿವಾಜಿಯು ಹೊರಡಿಸಿದ ಸಂಸ್ಕೃತ ಶಾಸನವಿದೆ. ಇವೆಲ್ಲ ಸಮಕಾಲಿನ ಇತಿಹಾಸದ ಮೇಲೆ ಬೆಳಕು ಬೀರುತ್ತವೆ.

ಶಾಸನಗಳ ಗುಂಪಿಗೆ ಸೇರಿಸಬಹುದಾದ ವೀರಗಲ್ಲುಗಳು ಹಾಗೂ ಮಾಸ್ತಿ ಕಲ್ಲುಗಳ ಅಂದಿನ ಜನಜೀವನ ಹಾಗೂ ಆಚಾರ ವಿಚಾರಗಳನ್ನು ತಿಳಿಯಲು ಸಹಾಯಕವಾಗಿವೆ.

ಹೀಗೆ ಶಾಸನಗಳು ಕರ್ನಾಟಕ ಇತಿಹಾಸವನ್ನು ತಿಳಿಯಲು ಮಹತ್ವದ ಆಧಾರಗಳಾಗಿವೆ.

## ➤ ನಾಣ್ಯಗಳು (Coins) :

ಇತಿಹಾಸ ರಚನೆಯಲ್ಲಿ ನಾಣ್ಯಗಳು ಕೂಡ ಮುಖ್ಯ ಆಧಾರಗಳಾಗಿವೆ. ನಾಣ್ಯಗಳ ಅಧ್ಯಯನ ಶಾಸ್ತ್ರಕ್ಕೆ ನ್ಯುಮಿಸ್ ಮೆಟಿಕ್ಸ್ (Numis matics) ಎಂದು ಹೇಳುತ್ತಾರೆ.

### ಇತಿಹಾಸ ರಚನೆಯಲ್ಲಿ ನಾಣ್ಯಗಳ ಪಾತ್ರ :

1. ಕಾಲಗಣನೆಗೆ ಸಹಾಯಕಾರಿ
2. ಲಾಂಛನಗಳನ್ನು ತಿಳಿಯಬಹುದು
3. ನಾಣ್ಯಗಳಲ್ಲಿ ಅರಸರ ಹೆಸರು ಮತ್ತು ಬಿರುದುಗಳನ್ನು ತಿಳಿಯಬಹುದು



downloaded from: www.kpscvaani.com

4. ನಾಣ್ಯಗಳಲ್ಲಿ ದೊರಕುವ ಮಾಹಿತಿಗಳು ಇತರ ಮೂಲಾಧಾರಗಳನ್ನು ದೃಡ ಪಡಿಸುತ್ತದೆ.
5. ಸಿಂಹಾಸನಾರೋಹಣ ಅಥವಾ ಇತರ ಮುಖ್ಯ ಸಂದರ್ಭಗಳಲ್ಲಿ ನಾಣ್ಯಗಳನ್ನು ಹೊರಡಿಸುತ್ತಿದ್ದರು. ಅದರಿಂದ ಅನೇಕ ಇಂಥ ಘಟನೆಗಳನ್ನು ತಿಳಿಯಬಹುದು.
6. ವ್ಯಾಪರ ಸಂಪರ್ಕಗಳ ಬಗ್ಗೆ ತಿಳಿಯಬಹುದು
7. ಆರ್ಥಿಕ ಸ್ಥಿತಿಯನ್ನು ತಿಳಿಯಬಹುದು
8. ರಾಜ್ಯ ವಿಸ್ತಾರವನ್ನು ತಿಳಿಯಬಹುದು
9. ರಾಜರುಗಳ ಹವ್ಯಾಸಗಳನ್ನು ತಿಳಿಯಬಹುದು
10. ನಾಣ್ಯಗಳಲ್ಲಿ ಅನೇಕ ಬಾರಿ ದೇವರುಗಳ ಚಿತ್ರವಿರುವುದರಿಂದ ಧಾರ್ಮಿಕ ಜೀವನದ ಬಗ್ಗೆ ಕೂಡ ತಿಳಿಯಬಹುದಾಗಿದೆ.
11. ನಾಣ್ಯಗಳ ಮೇಲಿರುವ ಕಲಾಕೃತಿಗಳು ಆ ಕಾಲದ ಕಲಾ ಕೌಶಲ್ಯವನ್ನು ತಿಳಿಸುತ್ತದೆ.

ಕರ್ನಾಟಕ ಇತಿಹಾಸವನ್ನು ತಿಳಿಯಲು ಅನೇಕ ನಾಣ್ಯಗಳು ಮೂಲಾಧಾರಗಳಾಗಿವೆ. ಪ್ರಾಚೀನ ಕಾಲದ ರೋಮನ್ನರ ನಾಣ್ಯಗಳ ದಕ್ಷಿಣ ಭಾರತದಲ್ಲಿ ದೊರಕಿವೆ. ಇದರಿಂದ ದಕ್ಷಿಣ ಭಾರತ ಹಾಗೂ ರೋಮನ್ ಸಾಮ್ರಾಜ್ಯಗಳ ನಡುವಿನ ವ್ಯಾಪಾರಿ ಸಂಪರ್ಕದ ಬಗ್ಗೆ ತಿಳಿಯಬಹುದಾಗಿದೆ.

**ಶಾತಾವಾಹನರ ನಾಣ್ಯಗಳು ದೊಡ್ಡ ಪ್ರಮಾಣದಲ್ಲಿ ದೊರಕಿವೆ. ಈ ನಾಣ್ಯಗಳು ಶಾತವಾಹನರ ಕಾಲಾನುಕ್ರಮವನ್ನು ತಿಳಿಯಲು ಸಹಾಯ ಮಾಡುತ್ತವೆ.**

- ಕದಂಬರ ಪದ್ಮಟಂಕವೆಂಬ ಬಂಗಾರದ ನಾಣ್ಯಗಳು
- ಗಂಗರ ಗಜ ಲಾಂಛನವುಳ್ಳ ಬಂಗಾರದ ನಾಣ್ಯಗಳು
- ಚಾಲುಕ್ಯರ ಎರಡನೇ ವಿಕ್ರಮಾಧಿತ್ಯನ ಕನ್ನಡ ಬರಹವುಳ್ಳ ಬಂಗಾರದ ನಾಣ್ಯಗಳು
- ಹೊಯ್ಸಳ ವಿಷ್ಣುವರ್ಧನನ ತಲಕಾಡುಗೊಂಡ ಎಂಬ ಬಿರುದು ಹೊತ್ತಿರುವ ಬಂಗಾರದ ನಾಣ್ಯಗಳು ದೊರಕಿವೆ. ಇವು ಸಮಕಾಲೀನ ಇತಿಹಾಸಗಳ ಮೇಲೆ ಬೆಳಕು ಚೆಲ್ಲುತ್ತವೆ.
- ಇವಲ್ಲದೆ ವರಹ, ಗದ್ಯಾಣ ಪಣ ಮತ್ತು ಹೊನ್ನು ಮೊದಲಾದ ನಾಣ್ಯಗಳು ಕೂಡ ದೊರಕಿವೆ.
- ಹೊಯ್ಸಳ ವಿಷ್ಣುವರ್ಧನನು ಹೊರಡಿಸಿದ ಮೂರು ಬಗೆಯ ನಾಣ್ಯಗಳು ದೊರಕಿವೆ. ಒಂದು ಬಗೆಯ ನಾಣ್ಯದಲ್ಲಿ ‘ಮಲೆ ಪರೋಳ್ ಗಂಡ’ ಎಂಬ ಬರಹ ಇನ್ನೊಂದು ಬಗೆಯ ನಾಣ್ಯಗಳಲ್ಲಿ ‘ನೊಳಂಬ ವಾಡಿಗೊಂಡ’ ಎಂಬ ಬರಹ ಮಗದೊಂದು ತರಹ ನಾಣ್ಯಗಳಲ್ಲಿ ‘ತಲಕಾಡುಗೊಂಡ’ ಎಂಬ


downloaded from: www.kpscvaani.com

ಬರಹಗಳಿವೆ. ಇವುಗಳಿಂದ ವಿಷ್ಣುವರ್ಧನನು ಮಲೆಪರು, ನೊಳಂಬವಾಡಿ ಮತ್ತು ತಲಕಾಡುಗಳನ್ನು ಗೆದ್ದನೆಂಬುದು ತಿಳಿಯುತ್ತದೆ. ಈ ನಾಣ್ಯಗಳ ಹಿಂಬದಿಗೆ ಶಾರ್ದೂಲದ ಚಿತ್ರಗಳಿವೆ.

- ವಿಜಯನಗರದ ಎರಡನೇ ಹರಿಹರನು ಕರ್ನಾಟಕದಲ್ಲಿ ನಾಣ್ಯ ಚಲಾವಣೆಯಲ್ಲಿ ಹೊಸ ಪದ್ಧತಿಯನ್ನೇ ಆರಂಭಿಸಿದನು.
- ಆ ಕಾಲದ ನಾಣ್ಯ ಟಂಕಿಸುವುದರ ಮೇಲೆ ಸಂಪೂರ್ಣ ಆಡಳಿತಾತ್ಮಕ ನಿಯಂತ್ರಣವಿತ್ತು. 'ಹಾಗೆ'' 'ಗದ್ಯಾಣ' 'ವರಹ' 'ಪತ್ರಾಪ' ಇವು ವಿಜಯನಗರದಲ್ಲಿ ವಿವಿಧ ಬಂಗಾರದ ನಾಣ್ಯಗಳಾಗಿದ್ದವು. 'ತೋರ' ಬೆಳ್ಳಿಯ ನಾಣ್ಯವಾದರೆ 'ಪಣ' 'ಜಿಟಲ್' ಮತ್ತು 'ಕಾಸು' ಇವು ತಾಮ್ರದ ನಾಣ್ಯಗಳಾಗಿದ್ದವು. ವರಹ ನಾಣ್ಯದ ಮುಂಭಾದಲ್ಲಿ ಹನುಮನ ಚಿತ್ರವಿದೆ. ಹಿಂಬದಿಯಲ್ಲಿ 'ಶ್ರೀವೀರಹರಿಹರ' ಎಂಬ ಹೆಸರಿದೆ. ಕೃಷ್ಣದೇವರಾಯನು ತಿರುಪತಿಯ ವೆಂಕಟೇಶ್ವರನ ಗೌರವಾರ್ಥ ಬಂಗಾರದ ನಾಣ್ಯವನ್ನು ಬಿಡುಗಡೆಗೊಳಿಸಿದನು. ಈ ನಾಣ್ಯದ ಮುಂಭಾಗದಲ್ಲಿ ಶಂಖ, ಚಕ್ರಗಳನ್ನು ಹಿಡಿದ ಭವ್ಯವಾದ ವೆಂಕಟೇಶ್ವರನ ಮೂರ್ತಿಯನ್ನು ಕೆತ್ತಿದ್ದಾರೆ. ಹಿಂದುಗಡೆ ದೇವನಾಗರಿ ಲಿಪಿಯಲ್ಲಿ ಶ್ರೀಕೃಷ್ಣರಾಯ ಎಂಬ ಹೆಸರನ್ನು ಕೆತ್ತಲಾಗಿದೆ.
- ಕೃಷ್ಣರಾಯನು ಉದಯಗಿರಿ ವಿಜಯದ ನೆನಪಿಗೆ ಹೊರಡಿಸಿದ ನಾಣ್ಯದ ಮುಂಭಾಗದಲ್ಲಿ ಬಾಲಕೃಷ್ಣನ ಚಿತ್ರ ಹಿಂಬಾಗದಲ್ಲಿ ಶ್ರೀ ಪತಾಪ ಕೃಷ್ಣರಾಯ ಎಂಬ ಹೆಸರನ್ನು ಕಾಣಬಹುದು.
- ಕೃಷ್ಣರಾಯನು ಹೊರಡಿಸಿದ ತಾಮ್ರದ ನಾಣ್ಯದ ಮುಂಭಾಗದಲ್ಲಿ ಗರುಡನ ಚಿತ್ರ, ಹಿಂಬದಿಯಲ್ಲಿ ದೇವನಾಗಿರಿ ಲಿಪಿಯಲ್ಲಿ ಶ್ರೀ ಪ್ರತಾಪ ಕೃಷ್ಣರಾಯ ಎಂಬ ಬರಹವಿದೆ. ಶಿವ ಪಾರ್ವತಿಯರ ಚಿತ್ರಗಳಿರುವ ನಾಣ್ಯಗಳೂ ಇವೆ.
- ಕೆಳದಿ ಮತ್ತು ಮೈಸೂರು ರಾಜರ ನಾಣ್ಯಗಳನ್ನು ಹೊರಡಿಸಿದ್ದರು. ದೆಹಲಿ ಸುಲ್ತಾನರ ನಾಣ್ಯಗಳನ್ನು ಹೋಲುವ ಬೆಳ್ಳಿಯ ನಾಣ್ಯಗಳನ್ನು ಬಹುಮನಿ ಮತ್ತು ಆದಿಲ್‌ಶಾಹಿಗಳು ಹೊರಡಿಸಿದರು. ಹೈದರಾಲಿಯ ನಾಣ್ಯದ ಮೇಲೆ 'ಹೈ' ಅಕ್ಷರವಿದೆ.
- ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ರೂಪಾಯಿ, ಅರ್ಧ ರೂಪಾಯಿ, ಪಾವಲಿಗಳು ಚಲಾವಣೆಯಲ್ಲಿದ್ದವು. ಹೀಗೆ ನಾಣ್ಯಗಳು ಕರ್ನಾಟಕ ಇತಿಹಾಸ ಅಧ್ಯಯನಕ್ಕೆ ಮುಖ್ಯ ಮೂಲಧಾರಗಳಾಗಿವೆ.



downloaded from: www.kpscvaani.com

## ➢ ಸ್ಮಾರಕಗಳು :

- ಕಟ್ಟಡಗಳು (ಗುಹೆಗಳು, ಸ್ತೂಪಗಳು, ದೇವಾಲಯಗಳು ಮತ್ತು ಮನೆಗಳು) ಮೂರ್ತಿಗಳು, ಚಿತ್ರಗಳು, ಆಭರಣಗಳು ಮತ್ತು ಮಡಕೆಗಳು ಮೊದಲಾದವುಗಳು ಸೇರುತ್ತವೆ.
- ಗುಹೆಗಳು ಸ್ತೂಪಗಳು, ದೇವಾಲಯಗಳು ಮುಂತಾದವುಗಳ ಅಧ್ಯಯನದಿಂದ ಕಲೆ ಮತ್ತು ವಾಸ್ತುಶಿಲ್ಪದ ಕುರಿತು ಮಾಹಿತಿಗಳು ದೊರೆಯುತ್ತವೆ. ಆ ಕಾಲದ ಸಾಂಸ್ಕೃತಿಕ ಜೀವನದ ಬಗ್ಗೆ ಇವುಗಳಿಂದ ತಿಳಿಯಬಹುದು.
- ಕದಂಬರು, ಗಂಗರು, ಚಾಲುಕ್ಯರು ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರ ಅನೇಕ ದೇವಾಲಯಗಳು ಕರ್ನಾಟಕದಲ್ಲಿವೆ. ಇವುಗಳ ಅಧ್ಯಯನದಿಂದ ಆ ಕಾಲದ ಕಲಾ ಬೆಳವಣಿಗೆ, ಧಾರ್ಮಿಕ ಹಾಗೂ ಸಾಮಾಜಿಕ ಜೀವನಗಳ ಪರಿಚ'ಯವಾಗುತ್ತದೆ. ಎಲ್ಲೋರಾದ ಕೈಲಾಸನಾಥ ದೇವಾಲಯ, ಬೇಲೂರಿನ ಚನ್ನಕೇಶವ ದೇವಾಲಯ ಆ ಕಾಲದ ಕಲಾ ಶ್ರೇಷ್ಠತೆಗೆ ಉದಾಹರಣೆಗಳಾಗಿವೆ.
- ಅಂದಿನ ಜನರ ಆಚಾರ, ಸಂಪ್ರದಾಯಗಳು, ಉಡಿಗೆ ತೊಡಿಗೆಗಳು, ಸಂಗೀತ' ನೃತ್ಯ ಮೊದಲಾದವುಗಳ ಬಗ್ಗೆ ಕೂಡ ತಿಳಿಯಬಹುದು.
- ವಿಜಯನಗರದ ಇತಿಹಾಸವನ್ನು ತಿಳಿಯಲು, ಹಂಪಿಯ ವಿರೂಪಾಕ್ಷ ದೇವಾಲಯ, ರಾಮಸ್ವಾಮಿ ದೇವಾಲಯ ಮುಂತಾದವುಗಳು ಮಹತ್ವದ ದೇವಾಲಯ ಸ್ಮಾರಕಗಳಾಗಿವೆ. ಉಗ್ರ ನರಸಿಂಹ ಹಾಗೂ ಗಣಪತಿಯ ಮೂರ್ತಿಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ಅದರಂತೆ ಅರಮನೆಗಳು ಮುಂತಾದ ಕಟ್ಟಡಗಳೂ ಸ್ಮಾರಕಗಳಾಗಿವೆ.

## ❖ಸಾಹಿತ್ಯಿಕ ಆಧಾರಗಳು :–

ಕರ್ನಾಟಕದ ಇತಿಹಾಸವನ್ನು ತಿಳಿಯಲು ಸಾಹಿತ್ಯಿಕ ಆಧಾರಗಳೂ ಮೂಲಾಧಾರಗಳಾಗಿವೆ.

ಸಾಹಿತ್ಯ ಆಧಾರಗಳಲ್ಲಿ:–

1. ದೇಶೀಯ ಸಾಹಿತ್ಯ
2. ವಿದೇಶೀಯರ ಬರವಣಿಗೆಗಳು : ಎಂಬ ಎರಡು ವಿಭಾಗಗಳನ್ನು ಮಾಡಬಹುದು.

## ➢ ದೇಶೀಯ ಸಾಹಿತ್ಯ :–

ಕರ್ನಾಟಕ ಇತಿಹಾಸಕ್ಕೆ ದೇಶೀಯ ಸಾಹಿತ್ಯ ಆಧಾರಗಳು ಬಹಳ ಪ್ರಮುಖವಾದ ಆಧಾರಗಳು. ಕೆಲವು ಬಾರಿ ಉತ್ಪ್ರೇಕ್ಷೆಗಳಿಂದ ಒಡಗೂಡಿರಬಹುದಾದ ಸಾಹಿತ್ಯ ಆಧಾರಗಳನ್ನು ಸ್ವೀಕರಿಸುವಾಗ ಇತಿಹಾಸಕಾರನು



downloaded from: www.kpscvaani.com

ಆಂತರಿಕ ಮತ್ತು ಬಾಹ್ಯ ವಿಮರ್ಶೆಗೆ ಆಧಾರವನ್ನು ಒಳಪಡಿಸಿ ಜಾಗರೂಕತೆಯಿಂದ ಸ್ವೀಕರಿಸುವುದು ಅನಿವಾರ್ಯ.

ದೇಶೀಯ ಸಾಹಿತ್ಯಿಕ ಆಧಾರಗಳಲ್ಲಿ ಸಂಸ್ಕೃತ ಹಾಗೂ ಕನ್ನಡ ಸಾಹಿತ್ಯಾಧಾರಗಳು ಕರ್ನಾಟಕ ಇತಿಹಾಸಕ್ಕೆ ವಿಫುಲವಾಗಿ ದೊರೆತಿವೆ. ಅದರಂತೆ ತೆಲಗು, ತಮಿಳು ಸಾಹಿತ್ಯಾಧಾರಗಳೂ ಕೆಲಮಟ್ಟಿಗೆ ದೊರೆತಿವೆ. ಷಾಹಿ ಸುಲ್ತಾನರ ಕಾಲಕ್ಕೆ ಸಂಬಂಧಿಸಿ ಪರ್ಶಿಯನ್ ಆಧಾರಗಳು ಇವೆ. ಕೆಲವು ಅತಿ ಮುಖ್ಯ ಸಾಹಿತ್ಯ ಆಧಾರಗಳು ಹೀಗಿವೆ.

### ✓ ರಾಮಾಯಣ ಮತ್ತು ಮಹಾಭಾರತ :

ರಾಮಾಯಣ ಮತ್ತು ಮಹಾಭಾರತಗಳಲ್ಲಿ ಪ್ರಾಚೀನ ಕರ್ನಾಟಕದ ಬಗ್ಗೆ ವಿವರಣೆಯಿದೆ. ಮಹಾಭಾರತವು ದಕ್ಷಿಣ ಭಾರತದ ರಾಜ ವಂಶಗಳ ಬಗ್ಗೆ ತಿಳಿಸುತ್ತದೆ.

### ✓ ಮೌರ್ಯರು ಇತಿಹಾಸ :

ಅಶೋಕ ಚಕ್ರವರ್ತಿಯು ಬನವಾಸಿಗೆ, ಬೌದ್ಧ ಧರ್ಮ ಪ್ರಸಾರಕ್ಕೆ ಭಿಕ್ಷುಗಳನ್ನು ಕಳಿಸಿದ ಉಲ್ಲೇಖವು ಮಹಾವಂಶದಲ್ಲಿದೆ. ಚಂದ್ರಗುಪ್ತ ಮೌರ್ಯನು ಕರ್ನಾಟಕದ ಶ್ರವಣಬೆಳಗೊಳಕ್ಕೆ ಬಂದ ಸಂಗತಿಯನ್ನು ಜೈನ ಗ್ರಂಥಗಳು ತಿಳಿಸುತ್ತವೆ.

### ✓ ಶಾತವಾಹನದ ಇತಿಹಾಸ :

- ಹಾಲರಾಜನ ಗಾಥಾ ಸಪ್ತಶತಿ
- ಗುಣಾಢ್ಯನ ಬೃಹತ್ಕಥಾ ಗ್ರಂಥಗಳು ಮುಖ್ಯವಾಗಿದೆ.
- ಹಾಲರಾಜನು ಪ್ರಾಕೃತ ಭಾಷೆಯಲ್ಲಿ ಗಾಥಾ ಸಪ್ತಶತಿಯನ್ನು ಬರೆದನು. ಈ ಕೃತಿಯಲ್ಲಿ ಶುದ್ಧ ಕನ್ನಡ ಶಬ್ದಗಳನ್ನು ಅವನು ಯಥೇಚ್ಚವಾಗಿ ಬಳಸಿದ್ದಾನೆ. ಈ ಕೃತಿಯಲ್ಲಿ 700 ಪ್ರಾಕೃತ ಶ್ಲೋಕಗಳಿವೆ.
- ಲೀಲಾವತಿ ಎಂಬ ಪ್ರಾಕೃತ ಭಾಷೆಯಲ್ಲಿದ್ದ ಶಾಸನ' ಮಿಲಿಟರಿ ಶಕ್ತಿಯ ಬಗ್ಗೆ ತಿಳಿಸುತ್ತದೆ. ಗುಣಾಢ್ಯನ ಬೃಹತ್ಕಥಾ ಕೂಡ ಪ್ರಾಕೃತ ಭಾಷೆಯಲ್ಲಿದೆ.



downloaded from: www.kpscvaani.com

## ✓ ಗಂಗರ ಇತಿಹಾಸ :

ಗಂಗರ ದುರ್ವಿನೀತನು ಸ್ವತಃ ವಿದ್ವಾಂಸನಾಗಿದ್ದನು. ಅವನ ಅಸ್ಥಾನದಲ್ಲಿದ್ದ ಪೂಜ್ಯ ಪಾದನು 'ಜೈನೇಂದ್ರ ವ್ಯಾಕರಣವನ್ನು ಬರೆದನು. ವಿದ್ಯಾಧನಂಜನಯದ 'ರಾಘವ ಪಾಂಡವೀಯ' ವೀರನಂದಿಯ 'ಚಂದ್ರಪ್ರಭು ಪುರಾಣ' ಅಸಗನ 'ವರ್ಧಮಾನ ಪುರಾಣ' ಮುಂತಾದ ಗ್ರಂಥಗಳು ಆ ಕಾಲದ ಜನಜೀವನದೊಡನೆ ಧಾರ್ಮಿಕ ಸಂಗತಿಗಳನ್ನು ತಿಳಿಯಲು ಅನುಕೂಲವಾಗಿದೆ. ಅದರಂತೆ ಶಿವಮಾರನ ಗಜಾಷ್ಟಕ, ಚಾವುಂಡರಾಯನ ಚಾವುಂಡರಾಯ ಪುರಾಣ ಮುಂತಾದ ಗ್ರಂಥಗಳು ಗಂಗರ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ.

## ✓ ಬಾದಾಮಿ ಚಾಲುಕ್ಯರ ಕುಲ :

ಎರಡನೇ ಪುಲಕೇಶಿಯ ಪುತ್ರ ಚಂದ್ರಾದಿತ್ಯನ ರಾಣಿ ವಿಜಯ ಭಟ್ಟಾರಿಕ ಕೌಮುದಿ ಮಹೋತ್ಸಹ' ಎಂಬ ನಾಟಕವನ್ನು ರಚಿಸಿದಳು. ಅಕಳಾಂಕನು 'ತತ್ವಾರ್ಥ' ರಾಜವಾರ್ತಿಕ'ವನ್ನು ಬರೆದನು. ಈ ಗ್ರಂಥ ಜೈನ ಧರ್ಮದ ತತ್ವಗಳನ್ನು ಒಳಗೊಂಡಿದೆ.

## ✓ ರಾಷ್ಟ್ರಕೂಟರ ಕಾಲ :

- ಅಮೋಘವರ್ಷನ 'ಕವಿರಾಜ ಮಾರ್ಗ'ವು ಕರ್ನಾಟಕದ ಮೇರೆಗಳನ್ನು ಕಾವೇರಿಯಿಂದ ಗೋದಾವರಿಯವರೆಗೆ ಇದ್ದ ನಾಡು ಎಂದು ನಮೂದಿಸಿದೆ. ಅಲ್ಲದೆ ಹಿಂದೆ ಆಗಿ ಹೋದ ಅನೇಕ ಕವಿಗಳು ಮತ್ತು ಸಾಹಿತಿಗಳ ಬಗ್ಗೆ ಕೂಡ ಈ ಗ್ರಂಥವು ತಿಳಿಸುತ್ತದೆ. ಕರ್ನಾಟಕದ ಅಂದಿನ ಜನಜೀವನವನ್ನು ತಿಳಿಸುತ್ತದೆ.
- ಕನ್ನಡದ ಮೊಟ್ಟ ಮೊದಲನೇ ಗ್ರಂಥ ವ್ಯಕ್ತಿಗಳನ್ನು ಹೋಲಿಸಿದ್ದಾರೆ.
- ರಾಷ್ಟ್ರಕೂಟರ ಮೂರನೆಯ ಕೃಷ್ಣನಿಂದ 'ಉಭಯಕವಿ ಚಕ್ರವರ್ತಿ' ಎಂದು ಬಿರುದು. ಪಡೆದ ಪೊನ್ನ ಕವಿಯ 'ಭುವನೈಕ ರಾಮಾಭ್ಯುದಯ' ಸಮಕಾಲೀನ ಚರಿತ್ರೆಯನ್ನು ಒಳಗೊಂಡ ಗ್ರಂಥವಾಗಿದೆ.

## ✓ ಕಲ್ಯಾಣಿ ಚಾಲುಕ್ಯರ ಕಾಲ :

- ರನ್ನನ 'ಸಾಹಸ ಭೀಮ ವಿಜಯ'ದಲ್ಲಿ ಕವಿಯು ತನಗೆ ಆಶ್ರಯ ನೀಡಿದ ಇರಿವ ಬೆಡಂಗ ಸತ್ಯಾಶ್ರಯವನ್ನು ನಾಯಕನನ್ನಾಗಿ ಮಾಡಿ, ಭೀಮನ ವಿವರಣೆ ನೀಡಿದ್ದಾನೆ. ಈ ಗ್ರಂಥವು ಕಲ್ಯಾಣಿ ಚಾಲುಕ್ಯರ ಸತ್ಯಾಶ್ರಯನ ಸಾಧನೆಗಳನ್ನು ತಿಳಿಸುತ್ತದೆ.
- ನಯಸೇನನ 'ಧರ್ಮಮೃತ' ಆ ಕಾಲದ ಸಾಮಾಜಿಕ ಸ್ಥಿತಿಗತಿಗಳನ್ನು ವಿವರಿಸುತ್ತದೆ.



downloaded from: www.kpscvaani.com

- ಬಿಲ್ಹಣನ 'ವಿಕ್ರಮಾಂಕ ದೇವ ಚರಿತ' ಇನ್ನೊಂದು ಐತಿಹಾಸಿಕ ಗ್ರಂಥ ಆರನೇ ವಿಕ್ರಮಾದಿತ್ಯನ ಯುದ್ದಗಳು ಮತ್ತು ಇತರ ಸಾಧನೆಗಳನ್ನು ವಿವರವಾಗಿ ಈ ಗ್ರಂಥವು ನೀಡುತ್ತದೆ. ಚಾಲುಕ್ಯರ ಮೂಲದ ಬಗ್ಗೆ ಕೂಡ ಪ್ರಚಲಿತವಿದ್ದ ಹೇಳಿಕೆಗಳನ್ನು ಕವಿಯು ಈ ಗ್ರಂಥದಲ್ಲಿ ನೀಡಿದ್ದಾನೆ.
- ಆರನೆ ವಿಕ್ರಮಾದಿತ್ಯನ ಅಸ್ಥಾನದಲ್ಲಿದ್ದ ವಿಜ್ಞಾನೇಶ್ವರನ 'ಮಿತಾಕ್ಷರ' ಎಂಬ ಗ್ರಂಥವು ಆರನೇ ವಿಕ್ರಮಾದಿತ್ಯನ ಸಾಧನೆಗಳನ್ನು ಕಲ್ಯಾಣ ಪಟ್ಟಣದ ವರ್ಣನೆಯನ್ನು ನೀಡುತ್ತದೆ.
- ನಾಲ್ಕನೆ ಸೋಮೇಶ್ವರನ ಮಾನಸೋಲ್ಲಾಸ ಗ್ರಂಥವು ಕರ್ನಾಟಕ ಸಂಸ್ಕೃತಿಯ ಸಮಗ್ರ ಪರಿಚಯವನ್ನು ಮಾಡಿಕೊಡುತ್ತದೆ. ಭರತ ನಾಟ್ಯ, ಕರ್ನಾಟಕ ಸಂಗೀತದ ಪರಿಚಯ ಮಾಡಿಕೊಡುವ ಈ ಗ್ರಂಥವು ಅಂದಿನ ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಜೀವನದ ವಿವರಣೆಯನ್ನು ನೀಡುತ್ತದೆ.

## ✓ ಹೊಯ್ಸಳರ ಇತಿಹಾಸ :

- ರಾಜಾದಿತ್ಯನು 'ಕ್ಷೇತ್ರ ಗ್ರಂಥ' ವ್ಯವಹಾರ ಗಣಿತ ಮತ್ತು 'ಲೀಲಾವತಿ' ಎಂಬ ಗ್ರಂಥಗಳನ್ನು ಬರೆದನು. ಅವನ ಕೃತಿಗಳಲ್ಲಿ ಎರಡನೆಯ ಬಲ್ಲಾಳ ಮತ್ತು ಸೇವುಣರ ಐದನೆಯ ಭೀಮ ಇವರ ನಡುವೆ ನಡೆದ ಸೊರಟೂರು ಕಾಳಗದ ವರ್ಣನೆಯಿದೆ. ಸೈನ್ಯದ ಬಗ್ಗೆ ವಿವರವಾದ ಮಾಹಿತಿಗಳನ್ನು ಈ ಗ್ರಂಥಗಳು ಪೂರೈಸುತ್ತವೆ.
- ಮಲ್ಲಿಕಾರ್ಜುನನೆಂಬ ಕವಿ 'ಸೂಕ್ತಿ ಸುಧಾರ್ಣವವನ್ನು ಬರೆದನು. ಅವನು ಹೊಯ್ಸಳರ ಮೂಲದ ಬಗ್ಗೆ ಮತ್ತು ಸೋಮೇಶ್ವರನ ವೀರತನದ ವರ್ಣನೆಗಳನ್ನು ನೀಡಿದ್ದಾನೆ
- ಚನ್ನಬಸವೇಶ್ವರ ಕಾಲಜ್ಞಾನವು ಹೊಯ್ಸಳರ ಚರಿತ್ರೆಯನ್ನು ತಿಳಿಯಲು ಅನೇಕ ವಿಧಗಳಿಂದ ಸಹಾಯ ಮಾಡುತ್ತದೆ. ಹೊಯ್ಸಳರ ವಂಶ ಕ್ರಿ.ಶ. 984 ರಿಂದ ಪ್ರಾರಂಭವಾಗಿ ಕ್ರಿ.ಶ 1645 ರಲ್ಲಿ ಅಂತ್ಯಗೊಂಡಿತೆಂದು ಈ ಗ್ರಂಥವು ತಿಳಿಸುತ್ತದೆ.
- 'ಗದ್ಯಕಣಾಮೃತ' ಎಂಬ ಗ್ರಂಥವು ಇನ್ನೊಂದು ಮಹತ್ವದ ಆಧಾರ ಗ್ರಂಥವಾಗಿದೆ. ಎರಡನೇ ವೀರನರಸಿಂಹನ ಆಶ್ರಯದಲ್ಲಿರುವ ಕಾಲಕಲಭ ಎನ್ನುವ ಕವಿ ಈ ಗ್ರಂಥದ ಕರ್ತೃವಾಗಿದ್ದಾನೆ. ಎರಡನೇ ವೀರ ನರಸಿಂಹನ ಚರಿತ್ರೆ ಅವನು ಮಗಧ ಪಾಂಡ್ಯ ಪಲ್ಲವರೊಡನೆ ಮಾಡಿದ ಯುದ್ದಗಳು. ಮುಂತಾದವುಗಳ ವರ್ಣನೆಗಳನ್ನು ನೀಡಿದ್ದಾನೆ. ಈ ಕವಿಗೆ ಎರಡನೆ ವಿದ್ಯಾ ಚಕ್ರವರ್ತಿ ಎಂಬ ಹೆಸರು ಕೂಡ ಇತ್ತು.
- ರಾಮಾನುಜಾಚಾರ್ಯರು ಅನೇಕ ಗ್ರಂಥಗಳನ್ನು ರಚಿಸಿದರು. ಶ್ರೀವೈಷ್ಣವ ಸಿದ್ದಾಂತವು ಹೊಯ್ಸಳರ ಕಾಲದಲ್ಲಿ ಬೆಳೆದು ಬಂದುದನ್ನು ಇಲ್ಲಿ ನೋಡಬಹುದು. ಹೊಯ್ಸಳರ ಮೂರನೇ ಬಲ್ಲಾಳ ಮತ್ತು ಮೂರನೇ ನರಸಿಂಹ ಇವರ ಸಮಕಾಲೀನರಾದ ಮಧ್ವಾಚಾರ್ಯರು 37 ಗ್ರಂಥಗಳನ್ನು ರಚಿಸಿದರು. ಆ



downloaded from: www.kpscvaani.com

ಕಾಲದ ಧಾರ್ಮಿಕ ಜೀವನವನ್ನು ತಿಳಿಯಲು ರಾಮಾನುಜಾಚಾರ್ಯ ಹಾಗೂ ಮಧ್ವಾಚಾರ್ಯರ ಕೃತಿಗಳು ಸಹಾಯಮಾಡುತ್ತದೆ.

- ನಾರಾಯಣ ಪಂಡಿತನ ಮದ್ವಚರಿತವು ಮಧ್ವಾಚಾರ್ಯರ ಚರಿತ್ರೆಯನ್ನು ತಿಳಿಸುತ್ತದೆ. ರಾಘವಾಂಕನ 'ಸೋಮನಾಥ ಚರಿತ್ರೆ'ಯು ಸೌರಾಷ್ಟ್ರದ ಶಿವಭಕ್ತ ಅದಯ್ಯನು ಪುಲಿಗೆರೆಯಲ್ಲಿ ಸೋಮನಾಥನನ್ನು ಸ್ಥಾಪಿಸಿ, ಜೈನರನ್ನು ಶೈವರನ್ನಾಗಿ ಮಾಡಿದ ಕಥಾ ವಸ್ತುವನ್ನು ಒಳಗೊಂಡಿದೆ. ಇದು ಜೈನರ ಮತಾಂತರ ಇತಿಹಾಸವನ್ನು ತಿಳಿಸುತ್ತದೆ. ಹೊಯ್ಸಳ ನರಸಿಂಹನ ಮಂತ್ರಿ ಕೆರೆಯ ಪದ್ಮರಸನ 'ದೀಕ್ಷಾಬೋದೆ' ಶೈವ ದೀಕ್ಷೆಯನ್ನು ಪಡೆಯುವ ವಿಧಾನಗಳನ್ನು ತಿಳಿಸುತ್ತದೆ.
- ಹೊಯ್ಸಳ ವೀರಬಲ್ಲಾಳನ ಕಾಲದ ನೇಮಿಚಂದ್ರನು ಲೀಲಾವತಿ ಮತ್ತು ನೇಮಿನಾಥ ಪುರಾಣಗಳನ್ನು ರಚಿಸಿದನು. ಹರಿವಂಶ ಮತ್ತು ಕುರುವಂಶಗಳ ಇತಿಹಾಸದ ಕೆಲವು ಸಂಗತಿಗಳು ಇಲ್ಲಿವೆ.

### ✓ ವಿಜಯನಗರದ ಇತಿಹಾಸ :

- ವಿಜಯನಗರದ ಇತಿಹಾಸವನ್ನು ತಿಳಿಯಲು ಅನೇಕ ಸಂಸ್ಕೃತ ಕನ್ನಡ ಮತ್ತು ತೆಲಗು ಗ್ರಂಥಗಳು ಸಹಾಯ ಮಾಡುತ್ತವೆ.
- 'ಮಧುರಾವಿಜಯಂ' ಎಂಬ ಗ್ರಂಥವು ಕಂಪಣ್ಣನ ಪತ್ನಿ ಗಂಗಾಂಬಿಕ ಬರೆದ–ಸಂಸ್ಕೃತ ಗ್ರಂಥವಾಗಿದೆ. ಅವಳು ಪತಿಯೊಡನೆ ಮಧುರಕ್ಕೆ ಹೋಗಿ, ಕಂಪಣ್ಣನು ಮಧುರಾ ಸುಲ್ತಾನನೊಡನೆ ನಡೆಸಿದ ಯುದ್ದವನ್ನು ಕಣ್ಣಾರೆ ನೋಡಿ ಬರೆದ ಗ್ರಂಥ ಇದು. ವಿಜಯನಗರದ ಪ್ರಾರಂಭಿಕ ಇತಿಹಾಸ, ಮಧುರಾ ಸುಲ್ತಾನನೊಡನೆ ನಡೆಸಿದ ಯುದ್ದವನ್ನು ಕಣ್ಣಾರೆ ನೋಡಿ ಬರೆದ ಗ್ರಂಥ ಇದು. ವಿಜಯನಗರದ ಪ್ರಾರಂಭಿಕ ಇತಿಹಾಸ, ಮಧುರಾ ಸುಲ್ತಾನನೊಡನೆ ಯುದ್ಧ ಮುಂತಾದವುಗಳು ಈ ಗ್ರಂಥದಿಂದ ತಿಳಿಯುತ್ತವೆ.
- ಗಂಗಾಂಬಿಕ ಮೊದಲನೇ ಬುಕ್ಕದೇವನನ್ನು ಪೂರ್ಣಚಂದ್ರನಿಗೆ ಹೋಲಿಸಿದ್ದಾಳೆ. ಐತಿಹಾಸಿಕ ದೃಷ್ಟಿಯಿಂದ ಈ ಗ್ರಂಥ ಮಹತ್ವದ್ದಾಗಿದೆ.
- ರಾಜನಾಥ ಡಿಂಡಿಮನ 'ಸಾಳುವಾಭ್ಯುದಯ' ಸಾಳ್ವವಂಶದ ಚರಿತ್ರೆಯನ್ನು ತಿಳಿಸುತ್ತದೆ. ಸಾಳ್ವರಾಜನ ದಿಗ್ವಿಜಯಗಳು ಆಸ್ಥಾನ ವೈಭವ ಮುಂತಾದವುಗಳನ್ನು ಇಲ್ಲಿ ವಿವರಿಸಲಾಗಿದೆ.
- ದೂರ್ಜಟಿಯ 'ಕೃಷ್ಣದೇವರಾಯ ವಿಜಯ'ವು ಕೃಷ್ಣದೇವರಾಯನ ಸಿಂಹಾಸನಾ ರೋಹಣ, ಅವನ ದಂಡಯಾತ್ರೆಗಳು ಮುಂತಾದ ವಿಷಯಗಳನ್ನು ತಿಳಿಸುತ್ತದೆ.
- ಮೂರನೆ ರಾಜನಾಥನ ಅಚ್ಯುತಾಭ್ಯುದಯ'ವು ಅಚ್ಯುತರಾಯನ ಜೀವನ ವೃತ್ತಾಂತವನ್ನು ಅವನ ವಿವಾಹ, ಯುದ್ದಗಳು ಮುಂತಾದ ವಿಷಯಗಳನ್ನು ತಿಳಿಸುತ್ತದೆ.



downloaded from: www.kpscvaani.com

- ಕೃಷ್ಣದೇವರಾಯನ ಆಸ್ಥಾನದ ಕವಿಯಾದ ಲಕ್ಷ್ಮೀನಾರಾಯಣನು ಬರೆದ 'ಸಂಗೀತ ಸೂರ್ಯೋದಯ'ವು ಸಂಗೀತ ಬೆಳವಣಿಗೆಯನ್ನಲ್ಲದೆ. ಕೃಷ್ಣದೇವರಾಯನ ಸೈನಿಕ ಸಾಧನೆಗಳನ್ನು ತಿಳಿಸುತ್ತದೆ.
- ವಾಮನಭಟ್ಟನು ಬರೆದ 'ವಿರೂಪಾಕ್ಷ ವಸಂತೋತ್ಸವ' ನವರಾತ್ರಿ ವೈಭವವನ್ನು ತಿಳಿಸುತ್ತದೆ. ವಿಜಯನಗರ ರಾಜಧಾನಿ ಸ್ಥಾಪನೆಯ ಬಗ್ಗೆ ಮಹತ್ವದ ವಿವರಗಳನ್ನು ಈ ಗ್ರಂಥವು ನೀಡುತ್ತದೆ.
- ಅಚ್ಯುತರಾಯನ ಪತ್ನಿ ವರದಾಂಬಿಕಾ ಬರೆದ 'ವರದಾಂಬಿಕಾ ಪರಿಣಯ' ಐತಿಹಾಸಿಕ ಮಹತ್ವವುಳ್ಳ ಕೃತಿಯಾಗಿದೆ. ಅಚ್ಯುತರಾಯ ಮತ್ತು ವರದಾಂಬಿಕೆಯರ ವಿವಾಹದಿಂದ ಅವನ ಮಗ ವೆಂಕಟಾದ್ರಿಯ ಯುವ ರಾಜ್ಯಾಭಿಷೇಕದವರೆಗಿನ ಅನೇಕ ಘಟನೆಗಳು ಈ ಗ್ರಂಥದಿಂದ ತಿಳಿಯುತ್ತವೆ.
- ವಿಜಯನಗರದ ಕಾಲದಲ್ಲಿ ಬರೆಯಲ್ಪಟ್ಟ ಅನೇಕ ತೆಲಗು ಕೃತಿಗಳು ಕೂಡ ಈ ವಂಶದ ಇತಿಹಾಸವನ್ನು ತಿಳಿಯಲು ಆಧಾರಳಾಗಿವೆ.
- ಕೃಷ್ಣದೇವರಾಯನ ಆಸ್ಥಾನ ಕವಿಯಾದ ಅಲಾಸಾನಿ ಪೆದ್ದಣನು ಬರೆದ 'ಮನು ಚರಿತಮು' ಎಂಬ ಕೃತಿಯು ರಾಯನ ತಮಿಳು ರಾಜ್ಯಗಳ ಮೇಲಿನ ವಿಜಯಗಳು, ಬಹಮನಿಯ ಮೇಲಿನ ದಾಳಿ, ಗಜಪತಿಯ ಮೇಲಿನ ದಿಗ್ವಿಜಯ ಮುಂತಾದವುಗಳನ್ನು ತಿಳಿಸುತ್ತದೆ.
- ಕೃಷ್ಣದೇವರಾಯನ 'ಅಮುಕ್ತ ಮೌಲ್ಯದ' ಆಡಳಿತ ಪದ್ದತಿಗಳನ್ನೂ, ಕೃಷ್ಣರಾಯನ ಸಾಂಸಾರಿಕ ಜೀವನವನ್ನೂ ತಿಳಿಸುವ ಗ್ರಂಥವಾಗಿದೆ.
- ನಂದಿ ತಿಮ್ಮಣ್ಣನ 'ಪಾರಿಜಾತಾಪರಣಮು' ಎಂಬ ಗ್ರಂಥವು ಕೃಷ್ಣದೇವರಾಯನು ಗಜಪತಿ ಪ್ರತಾಪ ರುದ್ರದೇವನನ್ನು ಸೋಲಿಸಿದ. ಉದಯಗಿರಿಯನ್ನು ಆಕ್ರಮಿಸಿದ ವಿವರಣೆಗಳನ್ನು ನೀಡುತ್ತದೆ.
- 'ರಾಯವಾಚಕಂ' ಎಂಬ ಗ್ರಂಥವು ಕೃಷ್ಣದೇವರಾಯನ ಜೀವನ, ದಿಗ್ವಿಜಯಗಳು ಹಾಗೂ ವ್ಯಕ್ತಿತ್ವಗಳನ್ನು ತಿಳಿಸುವ ಗ್ರಂಥವಾಗಿದೆ.
- 'ರಾಮರಾಜ್ಯಮು' ಗ್ರಂಥವು ಅಳಿಯ ರಾಮರಾಯನ ಬಗ್ಗೆ ತಿಳಿಸುತ್ತದೆ.
- 'ರಾಮರಾಜನ' ಬಖೈರವು ಎರಡನೇ ವೆಂಕಟನ ಆಸ್ಥಾನ ಕವಿ ರಾಮೋಜಿ ತಿರುಮಲನಿಂದ ಬರೆಯಲ್ಪಟ್ಟಿತು. ತಾಳಿಕೋಟೆ ಯುದ್ಧದ ಬಗ್ಗೆ ಅಮೂಲ್ಯವಾದ ಮಾಹಿತಿಯನ್ನು ಈ ಗ್ರಂಥವು ನೀಡುತ್ತದೆ.
- ವಿಜಯನಗರದ ಇತಿಹಾಸವನ್ನು ತಿಳಿಯಲು ಅನೇಕ ಕನ್ನಡ ಗ್ರಂಥಗಳೂ ಆಧಾರಗಳಾಗಿವೆ. ಅವುಗಳಲ್ಲಿ ಕೆಲವು ಗ್ರಂಥಗಳನ್ನು ಇಲ್ಲಿ ನೋಡಬಹುದು.
- 'ಖಗೇಂದ್ರಮಣಿದರ್ಪಣವನ್ನು ಒಂದನೆಯ ಹರಿಹರನ (1336–56) ಕಾಲದಲ್ಲಿ ಮಂಗರಸನೆಂಬ ಕವಿ ಬರೆದನು. ಇಲ್ಲಿ ಅವನು ಮುಗಳಿ ಪುರದ ವರ್ಣನೆಯನ್ನು ನೀಡಿದ್ದಾನೆ'.
- ಭೀಮ ಕವಿಯು 'ಬಸವ ಪುರಾಣ'ವನ್ನು ಬರೆದನು. ಬಸವೇಶ್ವರರ ಜೀವನ ಚರಿತ್ರೆ ಹಾಗೂ ಅನೇಕ ಪವಾಡ ಘಟನೆಗಳನ್ನು ಕವಿಯು ಈ ಗ್ರಂಥದಲ್ಲಿ ವಿವರಿಸಿದ್ದಾನೆ.



downloaded from: www.kpscvaani.com

- ಎರಡನೆ ಹರಿಹರನ ಕಾಲದಲ್ಲಿ ಜೈನ ಕವಿ ಮಧುರನ 'ಧರ್ಮನಾಥ ಪುರಾಣ'ವು 15ನೇ ತೀರ್ಥಂಕರನಾದ ಧರ್ಮನಾಥನ ಚರಿತ್ರೆಯನ್ನು ನೀಡುತ್ತದೆ.
- ಕವಿ ಭಾಸ್ಕರನು 'ಜೀವಂಧರ ಚರಿತೆ'ಯನ್ನು ಬರೆದನು. ರಾಜಪುರಿಯ ಸತ್ಯಂಧರ ರಾಜನ ಮಗನಾದ ಜೀವಂಧರನ ಚರಿತ್ರೆ ಇಲ್ಲಿ ವರ್ಣಿಸಲ್ಪಟ್ಟಿದೆ.
- ಚಂದ್ರಕವಿ (1430) ರಚಿಸಿದ 'ವಿರೂಪಾಕ್ಷಾಸ್ಥಾನ'ವು ಹಂಪೆಯ ವಿರೂಪಾಕ್ಷನ ಆಸ್ಥಾನವನ್ನು ವರ್ಣಿಸುತ್ತದೆ.
- ಸಿಂಗಿರಾಜನ (ಕ್ರಿ.ಶ 1500) 'ಸಿಂಗಿರಾಜಪುರಾಣ' ಅಥವಾ 'ಮಲಬಸವರಾಜ ಚಾರಿತ್ರ' ಬಸವೇಶ್ವರ ಜೀವನ ಚರಿತ್ರೆಯನ್ನೂ ಮತ್ತು ಅವರ 88 ಪವಾಡಗಳನ್ನೂ ವರ್ಣಿಸುವ ಕೃತಿಯಾಗಿದೆ.
- ನಂಜುಂಡ ಕವಿ (1525) ಯ 'ಕುಮಾರ ರಾಮನ ಕಥೆ' ಐತಿಹಾಸಿಕ ಮಹತ್ವವನ್ನು ಗಳಿಸಿದೆ. ಮುಸಲ್ಮಾನರು ವಿಜಯನಗರದ ಮೇಲೆ ದಾಳಿ ಮಾಡಿದಾಗ, ಕುಮಾರ ರಾಮನು ಅವರೊಡನೆ ಹೋರಾಡಿದ ವಿವರಣೆ ಈ ಗ್ರಂಥದಲ್ಲಿದೆ.
- ವಿರೂಪಾಕ್ಷ ಪಂಡಿತನ (ಕ್ರಿ.ಶ 1584) 'ಚೆನ್ನಬಸವ ಪುರಾಣ'ದಲ್ಲಿ ವಿಜಯನಗರದ ಅರಸರಿಗೆ ಸಂಬಂಧಿಸಿದ ಚರಿತ್ರಾಂಶಗಳಿವೆ.

## ➢ ವಿದೇಶೀಯರ ಬರಹಗಳು :

ಕರ್ನಾಟಕದ ಇತಿಹಾಸಕ್ಕೆ ವಿದೇಶಿಯರ ಬರಹಗಳು ಕೂಡ ಮುಖ್ಯ ಮೂಲಾಧಾರಗಳಲ್ಲಿ ಒಂದಾಗಿವೆ. ವಿದೇಶಗಳ ರಾಯಭಾರಿಗಳು ವ್ಯಾಪಾರಿಗಳು, ಪ್ರವಾಸಿಗಳನ್ನು ಕರ್ನಾಟಕಕ್ಕೆ ಭೇಟಿ ನೀಡಿ ತಾವು ಕಂಡಿದ್ದನ್ನು ಕೇಳಿದ್ದನ್ನು ಬರಹ ರೂಪದಲ್ಲಿ ನೀಡಿದ್ದಾರೆ. ಅವರಲ್ಲಿ ಅತಿ ಮುಖ್ಯವಾದ ಕೆಲವು ಬರಹಗಾರರು ಮತ್ತು ಅವರ ಬರಹಗಳ ಬಗ್ಗೆ ಇಲ್ಲಿ ನೋಡೋಣ.

'ಪೆರಿಪ್ಲಸ್ ಆಫ್ ದಿ ಎರಿತ್ರಿಯನ್ ಸೀ' ಎಂಬ ಗ್ರಂಥದ ಕರ್ತೃ ಯಾರೆಂದು ತಿಳಿದಿಲ್ಲ- 'ದಿ ಜಾಗ್ರಫಿ' ಎಂಬ ಭೂಗೋಳಶಾಸ್ತ್ರಜ್ಞ ಟಾಲೆಮಿಯ ಗ್ರಂಥಗಳು ಕ್ರಿಸ್ತ ಶಕ ಆರಂಭದ ಮಹತ್ವದ ಗ್ರಂಥಗಳಾಗಿವೆ.

ಇವು ಕರ್ನಾಟಕದ ಸಾಗರೋತ್ತರ ಸಂಪರ್ಕದ ಬಗ್ಗೆ ಮಾಹಿತಿಗಳನ್ನು ಒದಗಿಸುತ್ತವೆ. ಟಾಲೆಮಿಯು ತನ್ನ ಗ್ರಂಥದಲ್ಲಿ ಕರ್ನಾಟಕದ ಬನವಾಸಿ, ಪಟ್ಟದಕಲ್ಲು ಮತ್ತು ಪುನ್ನಾಟಗಳನ್ನು ಉಲ್ಲೇಖಿಸಿದ್ದಾನೆ.

### ✓ ಚೀನೀ ಯಾತ್ರಿಕರ ಬರಹಗಳು :

ಪ್ರಾಚೀನ ಕಾಲದಿಂದಲೂ ಭಾರತ ಮತ್ತು ಚೀನಾ ದೇಶಗಳ ಮಧ್ಯೆ ಸಂಪರ್ಕವಿತ್ತು. ಅನೇಕ ಬೌದ್ಧ ಯಾತ್ರಿಕರು ಚೀನಾ ದೇಶದಿಂದ ಭಾರತಕ್ಕೆ ಬಂದಿದ್ದರು.



downloaded from: www.kpscvaani.com

7ನೇ ಶತಮಾನದಲ್ಲಿ ಭಾರತಕ್ಕೆ ಬಂದ ಚೀನೀ ಯಾತ್ರಿಕ ಹುಯೆನ್‌ತ್ಸಾಂಗನು ಕರ್ನಾಟಕಕ್ಕೂ ಬಂದಿದ್ದನು. ಅವನು ಬರುವಾಗ ಬಾದಾಮಿಯಲ್ಲಿ ಎರಡನೇ ಪುಲಕೇಶಿ ರಾಜನಾಗಿದ್ದನು. ಅವನು ತನ್ನ ಬರಹದಲ್ಲಿ.

- ಕರ್ನಾಟಕದ ಮಣ್ಣು, ಬೆಳೆಗಳ ಬಗ್ಗೆ
- ಕರ್ನಾಟಕದ ಜನರ ಸ್ವಭಾವದ ಬಗ್ಗೆ
- ಎರಡನೇ ಪುಲಕೇಶಿಯ ಘನತೆಯ ಬಗ್ಗೆ
- ಹರ್ಷವರ್ಧನ – ಪುಲಕೇಶಿಯರ ಯುದ್ಧದಲ್ಲಿ ಹರ್ಷನು ಸೋತ ಬಗ್ಗೆ – ತಿಳಿಸಿದ್ದಾನೆ. ಅಲ್ಲದೆ ಅಂದಿನ ಸಾಮಾಜಿಕ ಹಾಗೂ ಧಾರ್ಮಿಕ ಸ್ಥಿತಿಗತಿಗಳ ಬಗ್ಗೆ ಕೂಡ ಬರೆದಿದ್ದಾನೆ.

## ✓ ಅರಬ್ ವಿದ್ವಾಂಸರ ಬರಹಗಳು :

1. ತಬೆರಿಯು ಪರ್ಶಿಯನ್ ಚಕ್ರವರ್ತಿ ಎರಡನೇ ಖುಸ್ರುವಿನ ಅಸ್ಥಾನದಲ್ಲಿದ್ದ ಇತಿಹಾಸಕಾರನಾಗಿದ್ದನು. ಅವನು ಎರಡನೆ ಖುಸ್ರು ಹಾಗೂ ಬಾದಾಮಿಯ ಎರಡನೇ ಪುಲಕೇಶಿ ಇವರ ಸಂಬಂಧ, ರಾಯಭಾರಿಗಳ ವಿನಿಮಯ ಮುಂತಾದ ವಿಷಯಗಳನ್ನು ತನ್ನ ಬರಹದಲ್ಲಿ ನಮೂದಿಸಿದ್ದಾನೆ.
2. ಸುಲೈಮಾನವೆಂಬ ಅರಬ್ ಪ್ರವಾಸಿಯು ರಾಷ್ಟ್ರಕೂಟರ ಅಮೋಘವರ್ಷ ನೃಪತುಂಗನ ಕಾಲದಲ್ಲಿ ಕರ್ನಾಟಕಕ್ಕೆ ಬಂದಿದ್ದನು. ಅವನು ನೃಪತುಂಗನ ಘನತೆ, ವ್ಯಕ್ತಿತ್ವ ಧಾರ್ಮಿಕ ನೀತಿ ಮುಂತಾದವುಗಳ ಬಗ್ಗೆ ಬರೆದಿದ್ದಾನೆ. ಇವು ರಾಷ್ಟ್ರಕೂಟರ ಇತಿಹಾಸಕ್ಕೆ ಆಧಾರಗಳಾಗಿವೆ.
3. ಅಲ್ ಮಸೂದಿಯು ರಾಷ್ಟ್ರಕೂಟರ ವೈಭವವನ್ನು ವರ್ಣಿಸಿದ್ದಾನೆ.
4. ಇಬನ್ ಬತೂತ, ಅರಬ್ ಪ್ರವಾಸಿಗಳಲ್ಲಿಯೇ ಪ್ರಸಿದ್ದನು. ಇವನು ಮಹಮ್ಮದ್ ಬಿನ್ ತುಘಲಕನ ಕಾಲದಲ್ಲಿ ಭಾರತಕ್ಕೆ ಬಂದಿದ್ದನು. ಮಹಮ್ಮದ್ ತುಘಲಕನ ಹೊಯ್ಸಳರ ಮತ್ತು ರಾಮಚಂದ್ರ ದೇವನ ಮೇಲಿನ ದಾಳಿಗಳನ್ನು ವಿವರಿಸಿದ್ದಾನೆ. ಅಲ್ಲದೆ ಮೂರನೇ ಬಲ್ಲಾಳನ ಅಂತ್ಯದ ಬಗ್ಗೆ ಕೂಡ ತಿಳಿಸಿದ್ದಾನೆ.
5. ಅಬ್ದುಲ್ ರಜಾಕ್ ಎಂಬ ಪರ್ಶಿಯಾದ ರಾಯಭಾರಿಯು ವಿಜಯನಗರದ ಎರಡನೇ ದೇವರಾಯನ ಅಸ್ಥಾನದಲ್ಲಿದ್ದನು. ಇವನ ಬರಹಗಳು ಎರಡನೆ ದೇವರಾಯನ ಸಾಧನೆಗಳು ಹಾಗೂ ವಿಜಯ ನಗರದ ರಾಜಧಾನಿಯ ಆರ್ಥಿಕ ಹಾಗೂ ವಾಣಿಜ್ಯಿಕ ವೈಭವಗಳನ್ನು ತಿಳಿಸಿದ್ದಾನೆ.

## ✓ ಯುರೋಪಿಯನ್ ಯಾತ್ರಿಕರ ಬರಹಗಳು :

### 1. ಮಾರ್ಕೋಪೋಲೋ :

ಇವನ್ನು ಯುರೋಪಿಯನ್ ಪ್ರವಾಸಿಗರೇ ಮೊದಲಿಗನು. ಇವನು ತಾನು ಕಂಡ, ಕೇಳಿದ ಅನೇಕ ದಾಖಲೆಗಳನ್ನು ದಾಖಲಿಸಿದ್ದಾನೆ. ಇವನ ಬರಹ ಕರ್ನಾಟಕ ಇತಿಹಾಸಕ್ಕೆ ಸ್ವಲ್ಪ ಮಟ್ಟಿಗೆ ಸಹಾಯ ಮಾಡುತ್ತದೆ.



downloaded from: www.kpscvaani.com

### 2. ಸಂತ ಥಾಮಸ್ ಮತ್ತು ಜೋರ್ಡನ್ :

ಇವರು ಹಿಂದುಗಳ ಆಚಾರ, ವಿಚಾರ, ಸಂಪ್ರದಾಯಗಳ ಬಗ್ಗೆ ಬರೆದಿದ್ದಾರೆ.

### 3. ಡ್ಯುರೇಟ ಬಾರ್ಬೋಸಾ :

- ಇವನು ಕ್ರಿ.ಶ.ಸುಮಾರು. 1516 ರಲ್ಲಿ ವಿಜಯನಗರಕ್ಕೆ ಬಂದಿದ್ದನು.
- ವಿದೇಶೀಯರಿಗೆ ಮತ್ತು ಎಲ್ಲ ಧರ್ಮೀಯರಿಗೂ ವಿಜಯ ನಗರದಲ್ಲಿದ್ದ ಚಲನ ಮತ್ತು ವಾಸ್ತವ್ಯ ಸ್ವಾತಂತ್ರ್ಯದ ಬಗ್ಗೆ ಬರೆದಿದ್ದಾರೆ.
- ವಾಣಿಜ್ಯ ವ್ಯವಹಾರಗಳು ಆಮದು ರಫ್ತುಗಳ ಬಗ್ಗೆ.
- ಕೂಲಿಗಳ ಜೀವನ
- ಸೈನ್ಯ, ಕೃಷ್ಣದೇವರಾಯನ ಯುದ್ಧಗಳ ಬಗ್ಗೆ – ಬಾರ್ಬೋಸಾ ತಿಳಿಸಿದ್ದಾನೆ.

### 4. ಡೊಮಿಂಗೋ ಪಯಸ್ :

ಪೋರ್ಚುಗಲ್‌ನ ಡೊಮಿಂಗೊ ಪಯಸ್ 1520–21 ರಲ್ಲಿ ವಿಜಯನಗರವನ್ನು ಸಂದರ್ಶಿಸಿದನು.

- ಕೃಷ್ಣದೇವರಾಯನ ದೈಹಿಕ ವರ್ಣನೆ
- ಸೈನಿಕ ಆಡಳಿತ ಸೈನ್ಯದ ಸ್ವರೂಪಗಳು
- ಆರ್ಥಿಕ ಸ್ಥಿತಿ – ಬೆಳೆಗಳು – ಉದ್ಯಮಗಳು ವರ್ತಕರ ಸಂಘಗಳು
- ಆಸ್ಥಾನದ ನರ್ತಕಿಯರ ಆಭರಣಗಳು
- ರಾಜಧಾನಿಯಲ್ಲಿ 1,00,000 ಮನೆಗಳು – ಮುಂತಾದವುಗಳ ಬಗ್ಗೆ ಹೇಳಿದ್ದಾನೆ.

### 5. ನೂನಿಜ್ (Nuniz) :

ಪೋರ್ಚುಗಲಾದ ಕುದುರೆ ವ್ಯಾಪಾರಿಯಾದ ಇವನು ಕ್ರಿ.ಶ 1535 ರಿಂದ 1537 ರವರೆಗೆ ವಿಜಯನಗರದಲ್ಲಿದ್ದನು. ಅವನ ಗ್ರಂಥವು 37 ಅಧ್ಯಾಯನಗಳನ್ನು ಒಳಗೊಂಡಿದೆ.

- ವಿಜಯನಗರದ ಸ್ಥಾಪನೆಯ ಕುರಿತ ಘಟನೆಗಳು ತೆಲಗು–ಚೋಳ ರಾಜರ ದಂಗೆಗಳು.
- ತೆಲಗು – ಚೋಳ ರಾಜರ ದಂಗೆಗಳು
- ಮಂತ್ರಿ ತಿಮ್ಮರಸನು ಕೃಷ್ಣರಾಯನನ್ನು ರಕ್ಷಿಸಿ ಆಡಿನ ಕಣ್ಣುಗಳನ್ನು ರಾಜನಿಗೆ ತೋರಿಸಿದ್ದು.
- ಕೃಷ್ಣರಾಯನ ಮಗ ತಿರುಮಲನಿಗೆ ವಿಷಪ್ರಾಶನ.



downloaded from: www.kpscvaani.com

- ವಿಜಯ ನಗರದ ಆಡಳಿತ
- ಬೆಳೆಗಳು
- ವಿಜಯ ನಗರದ ವೈಭವ – ಮುಂತಾದವುಗಳ ಬಗ್ಗೆ ನೂನಿಜ್ ಹೇಳಿದ್ದಾನೆ.

### 6. ನಿಕೊಲೊ ಕೊಂಟಿ :

- ವಿಜಯ ನಗರದ ರಾಜಧಾನಿ
- ರಾಜನ ಆಸ್ಥಾನದ ವೈಭವ ಮುಂತಾದ ವಿಷಯಗಳ ಬಗ್ಗೆ ಬರೆದಿದ್ದಾನೆ.
- ಇಟಲಿಯ ಪಿಯಟ್ರೊ ಡೆಲ್ಲಿವೆಲ್ಲಾ, ಸೀಜರ್ ಫ್ರೆಡರಿಕ್ ಮುಂತಾದವರು ವಿಜಯನಗರಕ್ಕೆ ಭೇಟಿ ನೀಡಿ, ಅಂದಿನ ರಾಜಕೀಯ, ಸಾಮಾಜಿಕ, ಆರ್ಥಿಕ ಜೀವನವನ್ನು ವರ್ಣಿಸಿದ್ದಾರೆ.

7. ರಷ್ಯಾದ ನರ್ತಕ ಅರ್ಥನೇಸಸ್ ಎನ್ನುವವನ ಬರವಣಿಗೆಯಿಂದ ಬಹುಮನಿ ಸುಲ್ತಾನರ ಆಳ್ವಿಕೆಯ ಬಗ್ಗೆ ತಿಳಿಯಬಹುದು ಅವನು ಕ್ರಿ.ಶ 1420 ರಲ್ಲಿ ಡೆಕ್ಕನ್ ಪ್ರದೇಶಕ್ಕೆ ಬಂದಿದ್ದನು.

8. ಇಟಲಿಯ ಲುಡೋನಿ ಕೊಡಿಬಾರ್ತನ ಬರವಣಿಗೆಯಿಂದ ಪಶ್ಚಿಮ ಕರಾವಳಿ ತೀರದ ಗೋವಾ ಕಲ್ಲಿಕೋಟ ಮುಂತಾದ ಬಂದರುಗಳ ಬಗ್ಗೆ ತಿಳಿಯಬಹುದು.

ಹೀಗೆ ಇನ್ನು ಅನೇಕ ವಿದೇಶೀ ಬರಹಗಾರರು ತಮ್ಮ ಬರಹಗಳಲ್ಲಿ ಕರ್ನಾಟಕದ ಬಗ್ಗೆ ಬರೆದಿದ್ದಾರೆ. ಅವರ ಬರಹಗಳು ಕರ್ನಾಟಕದ ಇತಿಹಾಸಕ್ಕೆ ಮುಖ್ಯ ಆಧಾರವಾಗಿವೆ.

## ಸಿಂಧೂ ಮತ್ತು ಆರ್ಯ ಸಂಸ್ಕೃತಿಗಳ ನಡುವಿನ ವ್ಯತ್ಯಾಸ

| | ಸಿಂಧೂ ಸಂಸ್ಕೃತಿ | | ಆರ್ಯ ಸಂಸ್ಕೃತಿ |
|---|---|---|---|
| 1 | ನಗರ ನಾಗರಿಕತೆ, ನಗರವಾಸಿಗಳು. | 1 | ಗ್ರಾಮೀಣ ನಾಗರಿಕತೆ, ಗ್ರಾಮ ವಾಸಿಗಳು. |
| 2 | ಅಸ್ತಿತ್ವ ಕಾಲ ಕ್ರಿ.ಪೂ.3000 | 2 | ಅಸ್ತಿತ್ವ ಕಾಲ ಕ್ರಿ.ಪೂ.2000–800 |
| 3 | ಸಿಂಧೂ ಜನರ ಯುದ್ಧಪ್ರಿಯರಲ್ಲ. ರಕ್ಷಣ ಆಯುಧಗಳುನ್ನು ಮಾತ್ರ ಹೊಂದಿದ್ದರು. ಶಾಂತಪ್ರಿಯರು. ಮೂಲ ನಿವಾಸಿಗಳು. | 3 | ಆರ್ಯರು ಯುದ್ಧ ಪ್ರಿಯರು. ಉತ್ತಮ ಯುದ್ಧಾಸ್ತ್ರಗಳನ್ನು ಹೊಂದಿದ್ದರು. ವಲಸಿಗರು. |



downloaded from: www.kpscvaani.com

| | | | |
|---|---|---|---|
| 4 | ಲಿಪಿ ಅಥಾವ ಬರವಣಿಗೆ ಗೊತ್ತಿತ್ತು. ಆದರೆ ಸಾಹಿತ್ಯ ರಚನೆಯಾಗಲಿಲ್ಲ. | 4 | ಲಿಪಿ ಗೊತ್ತಿರಲಿಲ್ಲ. ಅದರೆ ಅಪಾರ ಸಾಹಿತ್ಯ ಸಂಸ್ಕೃತದಲ್ಲಿ ಸೃಷ್ಟಿಯಾಯಿತು. |
| 5 | ಹರಪ್ಪನವರಿಗೆ ಗೂಳಿ ಪವಿತ್ರ ಪ್ರಾಣಿ. | 5 | ಆರ್ಯರಿಗೆ ಹಸು ಪವಿತ್ರ ಪ್ರಾಣಿ |
| 6 | ಕುದುರೆ ಬಗ್ಗೆ ಗೊತ್ತಿರಲಿಲ್ಲ. | 6 | ಕುದುರೆ ಬಗ್ಗೆ ಗೊತ್ತಿತ್ತು. ಆದರೆ ಆನೆ ಗೊತ್ತಿರಲಿಲ್ಲ. |
| 7 | ನೃತ್ಯ, ಚದುರಂಗದಂತಹ ಒಳಾಂಗಣ ಕ್ರಿಡೆಗಳು ಜನಪ್ರಿಯವಾಗಿದ್ದವು. | 7 | ರಥಸ್ಪರ್ಧೆ, ಬೇಟೆ ಮೊದಲಾದ ಹೊರಾಂಗಣ ಕ್ರೀಡೆಗಳು ಜನಪ್ರಿಯವಾಗಿದ್ದವು. |
| 8 | ಕಬ್ಬಿಣದ ಬಳಕೆ ಗೊತ್ತಿರಲಿಲ್ಲ. | 8 | ಕಬ್ಬಿಣದ ಬಳಕೆ ಗೊತ್ತಿತ್ತು |
| 9 | ವಿಭಕ್ತ ಕುಟುಂಬಗಳು ಹೇರಳವಾಗಿದ್ದವು. | 9 | ಅವಿಭಕ್ತ ಕುಟುಂಬಗಳು ಹೇರಳವಾಗಿದ್ದವು. |
| 10 | ಸ್ತ್ರಿಯರು ಸೌಂದರ್ಯಪ್ರಿಯರು. ಸ್ವಚ್ಛತೆಗೆ ಹೆಚ್ಚಿನ ಗಮನ ನೀಡಿದ್ದರು. | 10 | ಸ್ತ್ರಿಯರು ಸೌಂದರ್ಯಪ್ರಿಯರಾದಂತೆ ಕಂಡಿಲ್ಲ. ಸ್ವಚ್ಛತೆಗೆ ಹೆಚ್ಚಿನ ಗಮನ ನೀಡಿರಲಿಲ್ಲ. |
| 11 | ಕಲೆ, ವಾಸ್ತುಶಿಲ್ಪದಲ್ಲಿ ನುರಿತವರು. | 11 | ಕಲೆ, ವಾಸ್ತುಶಿಲ್ಪದಲ್ಲಿ ನುರಿತವರಲ್ಲ. |
| 12 | ಮಾತೃದೇವತೆ ಆರಾಧನೆ ರೂಡಿ, ಮಾತಪ್ರಧಾನ ಸಮಾಜವಾಗಿತ್ತು. | 12 | ಪುರುಷ ದೇವರ ಪ್ರಾಬಲ್ಯ, ಪಿತೃ ಪ್ರಾಧಾನ ಸಮಾಜವಾಗಿತ್ತು. ಸ್ತ್ರೀ ಪ್ರಬಲ್ಯ ಕಡಿಮೆ. |
| 13 | ಪ್ರಜಾಸತ್ತೆ ಪ್ರಭುತ್ವದ ಜನಪ್ರಿಯತೆ. | 13 | ಅನುವಂಶಿಕ ರಾಜಪ್ರಭುತ್ವವಿದ್ದಿತು. |
| 14 | ಹೂಳುವ ಶವ ಸಂಸ್ಕಾರ ಪದ್ದತಿ ಜನಪ್ರಿಯವಾಗಿತ್ತು. | 14 | ಶವಗಳನ್ನು ಸುಡುವ್ ಪದ್ದತಿ ಜನಪ್ರಿಯವಾಗಿತ್ತು. |
| 15 | ಕೃಷಿ ಪ್ರಧಾನ ಆರ್ಥಿಕ ವ್ಯವಸ್ಥೆ ಹೊಂದಿರಲಿಲ್ಲ. | 15 | ಕೃಷಿ, ಪಶುಪಾಲನೆ ಪ್ರಧಾನ ಆರ್ಥಿಕ ವ್ಯವಸ್ಥೆ ಹೊಂದಿತ್ತು. |
| 16 | ತಾಮ್ರ, ಕಂಚು ಹೆಚ್ಚು ಬಳಕೆಯಲ್ಲಿತ್ತು. | 16 | ಕಬ್ಬಿಣ ಹೆಚ್ಚು ಬಳಕೆಯಲ್ಲಿತ್ತು. |
| 17 | ವಿದೇಶಿ ವ್ಯಾಪಾರ, ಕೈಗಾರಿಕೆಗಳಲ್ಲಿ ಮುಂದುವರಿದಿದ್ದರು ವರ್ತಕರು. | 17 | ವಿದೇಶಿ ವ್ಯಾಪಾರ, ಕೈಗಾರಿಕೆಗಳಲ್ಲಿ ಮುಂದುವರಿದಿರಲಿಲ್ಲ. |
| 18 | ಹರಪ್ಪನ್ನರಲ್ಲಿ ಮೂರ್ತಿಪೂಜೆ ರೂಢಿಯಲ್ಲಿತ್ತು. | 18 | ಇಲ್ಲಿ ಮೂರ್ತಿಪೂಜೆ ರೂಢಿಯಲ್ಲಿರಲಿಲ್ಲ. |
| 19 | ಈ ಸಂಸ್ಕೃತಿಯ ಕರ್ತೃಗಳು ದ್ರಾವಿಡರು. | 19 | ಈ ಸಂಸ್ಕ್ರತಿಯ ಕರ್ತೃಗಳು ಆರ್ಯರು. |
| 20 | ಇವರ ಲಿಪಿ ಬಲದಿಂದ ಎಡಕ್ಕೆ ಸಾಗುತ್ತದೆ. | 20 | ಇವರ ಲಿಪಿ ಎಡದಿಂದ ಬಲಕ್ಕೆ ಸಾಗುತ್ತದೆ. |
| 21 | ಉನ್ನತ ಭೌತಿಕ ನಾಗರಿಕತೆ ಸೃಷ್ಟಿಸಿದರು. | 21 | ತಾತ್ವಿಕ ಉನ್ನತಾದರ್ಶ ನಾಗರಿಕತೆ ಸೃಷ್ಟಿಸಿದರು. |
| 22 | ಸಿಂಧೂ ಜನ ಕೈಗಾರಿಕೆಗಳಲ್ಲಿ ನುರಿತವರು. | 22 | ಆರ್ಯರು ಕೈಗಾರಿಕೆಗಳಲ್ಲಿ ನುರಿತವರಲ್ಲ. |
| 23 | ಕಪ್ಪು ವರ್ಣದ ಚಪ್ಪಟೆ ಮೂಗುಳ್ಳ ದೃಢಕಾಯರು. | 23 | ಕೆಂಪುವರ್ಣದ ಚೂಪು ಮೂಗುಳ್ಳ ಕುಳ್ಳಗಿನ ವ್ಯಕ್ತಿಗಳು. |
| 24 | ಅಗ್ನಿಯನ್ನು ಪವಿತ್ರವೆಂದು ಪರಿಗಣಸಿರಲಿಲ್ಲ. | 24 | ಅಗ್ನಿಯನ್ನು ಪವಿತ್ರವೆಂದು ಪರಿಗಣಸಿದ್ದರು. |



downloaded from: www.kpscvaani.com

| | | | |
|---|---|---|---|
| 25 | ಅರೆದೇವ ಮಾನವರ ಪೂಜೆ, ಶಿವನ ಪೂಜೆ. | 25 | ಪ್ರಕೃತಿ ಆರಾಧಕರು, ಇಂದ್ರ, ವರುಣ, ಅಗ್ನಿಪೂಜೆ. |
| 26 | ಭೌತಿಕ ನಾಗರಿಕತೆ. | 26 | ತಾತ್ತ್ವಕ, ಆಧ್ಯಾತ್ಮಿಕ ನಾಗರಿಕತೆ. |
| 27 | ಬರವಣಿಗೆ, ಕಲೆ, ಹರಪ್ಪನ್ನರಿಗೆ ತಿಳಿದಿತ್ತು. ಆದರೆ ಸಾಹಿತ್ಯ ಆಧಾರಗಳು ದೊರೆತಿಲ್ಲ. | 27 | ವೈದಿಕ ಆರ್ಯನ್ನರಿಗೆ ಬರವಣಿಗೆ ಕಲೆ ಗೊತಿರಲಿಲ್ಲ. ಆದರೆ ಸಾಹಿತ್ಯಗಳು ದೊರೆತಿವೆ. |
| 28 | ಪ್ರಾಕ್ತಾನ ಆಧಾರಗಳು ದೊರೆತಿವೆ. | 28 | ಪ್ರಾಕ್ತಾನ ಆಧಾರಗಳು |

## ➤ ವೈದಿಕ ಯುಗ :–

ವೈದಿಕ ಯುಗದ ಸಂಸ್ಕೃತಿಯಲ್ಲಾದ ವಿಕಾಸಕ್ಕನುಗುಣವಾಗಿ ವೈದಿಕ ಯುಗವನ್ನು ಎರಡು ಹಂತಗಳಾಗಿ ವಿಂಗಡಿಸಬಹುದು. ಅವುಗಳೆಂದರೆ :

- ಋಗ್ವೇದ ಕಾಲ (ಕ್ರಿ.ಪೂ 1500–1000ವರೆಗೆ)
- ಉತ್ತರ ವೈದಿಕ ಕಾಲ (ಕ್ರಿ.ಪೂ 1000–6000ವರೆಗೆ)

## 1. ಋಗ್ವೇದ ಕಾಲ (ಕ್ರಿ.ಪೂ 1500–1000ವರೆಗೆ) :

### ಆಡಳಿತ ವ್ಯವಸ್ಥೆ :

- ಋಗ್ವೇದ ಕಾಲದ ಜನರ ರಾಜಕೀಯ ಹಾಗು ಸಾಮಾಜಿಕ ವ್ಯವಸ್ಥೆ ಪಿತೃ ಪ್ರಧಾನ ಕುಟುಂಬ ವ್ಯವಸ್ಥೆ ಪ್ರಮುಖ ಆಧಾರವಾಗಿತ್ತು. ಆ ಕಾಲದ ರಾಜಕೀಯ ಘಟಕಗಳನ್ನು 5 ಭಾಗಗಳಾಗಿ ವಿಂಗಡಿಸಬಹುದಿತ್ತು. ಅವುಗಳೆಂದರೆ:
  ಕುಟುಂಬ (ಕುಲ), ಗ್ರಾಮ, ವಿಶ್, ಜನ, ರಾಷ್ಟ್ರ
- ಕುಟುಂಬ ಅಥವಾ ಕುಲ ಇದು ಅತ್ಯಂತ ಚಿಕ್ಕ ರಾಜಕೀಯ ಘಟಕವಾಗಿದ್ದು ಒಂದೇ ಸೂರಿನಡಿ ವಾಸಿಸುವ ಜನರಾಗಿದ್ದರು. 'ಕುಲಪ' ಇದರ ಮುಖ್ಯಸ್ಥನಾಗಿದ್ದನು.
- ಕುಲಗಳ ಗುಂಪನ್ನು 'ಗ್ರಾಮ' ಎನ್ನಲಾಗುತ್ತಿತ್ತು. 'ಗ್ರಾಮೀಣ' ಇದರ ಮುಖ್ಯಸ್ಥ.
- ಗ್ರಾಮಗಳ ಗುಂಪನ್ನು 'ವಿಶ್' ಎನ್ನಲಾಗುತ್ತಿತ್ತು. ಋಗ್ವೇದದಲ್ಲಿ ಇದನ್ನು 171 ಬಾರಿ ಉಲ್ಲೇಖಿಸಲಾಗಿದೆ. 'ವಿಶ್ವತಿ' ಇದರ ಮುಖಂಡ.
- ವಿಶ್‌ಗಳ ಗುಂಪನ್ನು 'ಜನ' ಎನ್ನಲಾಗುತ್ತಿತ್ತು. ಇದು ಋಗ್ವೇದದಲ್ಲಿ 275 ಬಾರಿ ಉಲ್ಲೇಖಗೊಂಡಿದೆ. ಇದರ ಮುಖಂಡ 'ರಾಜನ್' (ರಾಜ) ರಾಜನು ಜನರ ರಕ್ಷಕನಾಗಿದ್ದನು. ಈ ಜನ



downloaded from: www.kpscvaani.com

ಅಲೆಮಾರಿಗಳಾಗಿದ್ದರಿಂದ ರಾಜನು ಭೂಪ್ರದೇಶಕ್ಕೆ ರಾಜನಾಗಿರದೆ ಒಂದು ಬಣದ (ಟ್ರೈಬ್) ಮುಖಂಡನಾಗಿರುತ್ತಿದ್ದನು.

- ರಾಜನನ್ನು ಕೆಲವೊಮ್ಮೆ ಜನರೇ ಆಯ್ಕೆ ಮಾಡುತ್ತಿದ್ದರು.
- ಋಗ್ವೇದ ಕಾಲದಲ್ಲಿ ಅರಸೊತ್ತಿಗೆ ಮಾದರಿ ರಾಜತ್ವ ಅಸ್ತಿತ್ವದಲ್ಲಿತ್ತು. ಸಾಮಾನ್ಯವಾಗಿ ಅನುವಂಶಿಯವಾಗಿತ್ತು. ರಾಜತ್ವ ಒಂದು ಬಣೀಯ ಸಂಸ್ಥೆಯಾಗಿತ್ತು. ರಾಜನು ಮೂಲತಃ ಸೈನಿಕ ನಾಯಕನಾಗಿದ್ದು ಅವನು ಹಸುಗಳಿಗಾಗಿ ಯುದ್ಧ ಮಾಡುತ್ತಿದ್ದನೇ ವಿನಃ ಭೂಮಿಗಲ್ಲ. ಅವನು ಬಣವನ್ನು ಆಳುತ್ತಿದ್ದನೇ ವಿನಃ ಪ್ರದೇಶವನ್ನಲ್ಲ. ರಾಜನು ತನ್ನ ಸೇವೆಗೆ ಪ್ರತಿಫಲವಾಗಿ 'ಬಲಿ' ಅಥವಾ ದಾನದತ್ತಿಗಳನ್ನು ಪಡೆಯುತ್ತಿದ್ದನು. ಈ ಬಲಿ ಎಂಬ ದಾನವನ್ನು ತನ್ನ ಬಣದಿಂದ ಹಾಗೂ ಸೋಲಲ್ಪಟ್ಟ ಬಣದಿಂದ ಪಡೆಯುತ್ತಿದ್ದನು. ಋಗ್ವೇದದಲ್ಲಿ ಭೂಪ್ರದೇಶವನ್ನು ಸೂಚಿಸಿದ ಜನಪದ ಒಮ್ಮೆಯೂ ಬಳಕೆಯಾಗಿಲ್ಲ.
- ರಾಜತ್ವ ಅನುವಂಶೀಯವಾದರೂ ಇತರ ಬಣೀಯ ಸಂಸ್ಥೆಗಳು ರಾಜನ ಆಯ್ಕೆ ಪ್ರಕ್ರಿಯೆಯಲ್ಲಿ ಗಮನಾರ್ಹ ಪಾತ್ರ ವಹಿಸುತ್ತಿದ್ದನು.
- ಸಭಾ ಸಮಿತಿ, ವಿಧಾತ & ಗಣ ಪ್ರಮುಖವಾಗಿ ಬಣೀಯ ಸಂಸ್ಥೆಗಳಾಗಿದ್ದು, ರಾಜನಿಗೆ ಆಡಳಿತದಲ್ಲಿ ನೆರವಾಗುತ್ತಿದ್ದವು ಎಂದು ಋಗ್ವೇದ ಉಲ್ಲೇಖಿಸಿದೆ. ಮಹಿಳೆಯರು ಸಭಾ & ವಿಧಾತದ ಚಟುವಟಿಕೆಗಳಲ್ಲಿ ಭಾಗವಹಿಸಬಹುದಿತ್ತು.
- ರಾಜನಿಗೆ ದಿನನಿತ್ಯದ ಆಡಳಿತದಲ್ಲಿ ಪುರೋಹಿತ & ಸೇನಾನಿಗಳೆಂಬ ಅಧಿಕಾರಿಗಳು ಸಹಾಯ ಮಾಡುತ್ತಿದ್ದರು. ಕಂದಾಯ ಸಂಗ್ರಹಣೆಗೆ ಅಧಿಕಾರಗಳಿರಲಿಲ್ಲ. ಸಮಾಜಘಾತುಕ ಚಟುವಟಿಕೆ ಪತ್ತೆಗೆ 'ಸ್ವಸ' (ಗೂಢಾಚಾರ) ಅಧಿಕಾರಿಗಳಿರುತ್ತಿದ್ದರು. ಅಲ್ಲದೇ ಗ್ರಾಮೀಣ (ಗ್ರಾಮದ ಮುಖ್ಯಸ್ಥ), ವ್ರಜಪತಿ (ಹುಲ್ಲುಗಾವಲಿನ ಮೇಲ್ವಿಚಾರಕ), ದೂತ ಎಂಬ ಅಧಿಕಾರಗಳ ಬಗ್ಗೆ ಋಗ್ವೇದದಲ್ಲಿ ಉಲ್ಲೆಖಿಸಲಾಗಿದೆ.
- ಸ್ಥಿರ /ಖಾಯಂ ಸೇನೆಯ ಯಾವುದೇ ಕುರುಹುಗಳು ದೊರೆತಿಲ್ಲ. ಬುಡಕಟ್ಟಿನ ವಿವಿಧ ಗುಂಪುಗಳಾದ ವ್ರಾತ, ಗಣ, ಗ್ರಾಮ, ಸಾರ್ಥ ಇವುಗಳು ಸೈನಿಕ ಕಾರ್ಯವನ್ನು ನಿರ್ವಹಿಸುತ್ತಿದ್ದವು. 'ಪತ್ತಿ' ಎಂಬ ಕಾಲ್ದಳ & ರಥಕರ ಎಂಬ ಸೈನಿಕ ದಳಗಳಿದ್ದವು.



downloaded from: www.kpscvaani.com

**ರಾಜರು & ಪ್ರದೇಶಗಳು :**

| | |
|---|---|
| ಪೂರ್ವದ ರಾಜ | ಸಾಮ್ರಾಟ್ |
| ಪಶ್ಚಿಮದ ರಾಜ | ಸುವ್ರಾಟ್ |
| ಉತ್ತರದ ರಾಜ | ವಿರಾಟ್ |
| ದಕ್ಷಿಣದ ರಾಜ | ಭೋಜ |
| ಮಧ್ಯದೇಶದ ರಾಜ | ರಾಜ |

- ಐತರೇಯ ಬ್ರಾಹ್ಮಣದಲ್ಲಿ ರಾಜತ್ವದ ಉಗಮದ ಬಗ್ಗೆ ಉಲ್ಲೇಖವಿದೆ.
- ಋಗ್ವೇದ ಕಾಲದಲ್ಲಿ 'ರಾಜನ್' ಪದವಿಯ ಜೊತೆಗೆ 'ಸಾಮ್ರಾಟ್' ಎಂಬ ಪದವಿಯೂ ಇರುವುದೆಂದು ತಿಳಿದುಬರುತ್ತದೆ. ಇದು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ.

## ವಿವಿಧ ವೈವಾಹಿಕ ಪದ್ಧತಿಗಳು :

- ಮದುವೆಗೆ ದಂಪತಿಗಳಿಬ್ಬರೂ ಒಂದೇ ವರ್ಣದವರಾಗಿದ್ದು ಬೇರೆ ಬೇರೆ ಗೋತ್ರಕ್ಕೆ ಸೇರಿರಬೇಕು

ಎಂಟು ರೀತಿಯ ವಿವಾಹ ಪದ್ಧತಿಗಳಿದ್ದವು.

1. ಬ್ರಹ್ಮ : ಸೂಕ್ತ ವರದಕ್ಷಿಣೆಯೊಂದಿಗೆ ಒಂದೇ ವರ್ಣದ ಜೋಡಿಗಳ ನಡುವೆ ವೈದಿಕ ವಿಧಾನಗಳ ಪ್ರಕಾರ ನಡೆಯುವ ವಿವಾಹ.
2. ದೈವ : ಧಾರ್ಮಿಕ ಸಂಸ್ಥಾನದ ಶುಲ್ಕವಾಗಿ ಪುರೋಹಿತನಿಗೆ ಮನೆಯ ಯಜಮಾನ ತನ್ನ ಮಗಳನ್ನು ನೀಡಿ ವಿವಾಹ ಮಾಡುವುದು.
3. ಆರ್ಷ : ಈ ವಿವಾಹದಲ್ಲಿ ವರದಕ್ಷಿಣೆ ನೀಡದೆ, ಕನ್ಯಾ ಶುಲ್ಕವನ್ನು ನಿರೀಕ್ಷಿಸದೆ ವಿವಾಹ ಮಾಡಿಕೊಡುವುದು.
4. ಪ್ರಜಾಪತ್ಯ : ತಂದೆಯು ತನ್ನ ಮಗಳನ್ನು ವರದಕ್ಷಿಣೆ ನೀಡದೆ ಕನ್ಯಾ ಶುಲ್ಕ ನಿರೀಕ್ಷಿಸದೆ ವಿವಾಹ ಮಾಡಿಕೊಡುವುದು.



downloaded from: www.kpscvaani.com

5. **ಗಾಂಧರ್ವ** : ವಿವಾಹವಾಗುವ ಪುರುಷ, ಸ್ತ್ರೀಯರಿಬ್ಬರೂ ಪರಸ್ಪರ ಒಪ್ಪಿಗೆಯಿಂದ ವಿವಾಹವಾಗುವ ಪದ್ಧತಿ.
6. **ಅಸುರ** : ಕನ್ಯೆಯನ್ನು ಖರೀದಿಸಿ ವಿವಾಹವಾಗುವುದು.
7. **ಪೈಶಾಚ** : ಇದನ್ನು ವಿವಾಹವೆಂದು ಕರೆಯುವುದೇ ಅಸಾಧ್ಯ ಏಕೆಂದರೆ, ಕನ್ಯೆಯರು ನಿದ್ರೆಯಲ್ಲಿರುವಾಗ, ಮಧ್ಯಪಾನ ಮಾಡಿದ್ದಾಗ, ಮತಿಭ್ರಮಣವಾಗಿದ್ದಾಗ ಆಕೆಯೊಂದಿಗೆ ಕೂಡುವ ಪದ್ಧತಿ ಇದು.
8. **ರಾಕ್ಷಸ** : ವಶಪಡಿಸಿಕೊಂಡು ಸೆರೆ ಹಿಡಿದು ವಿವಾಹವಾಗುವುದು, ಮೊದಲ 4 ವಿವಾಹ ಪದ್ಧತಿಗಳು ಸರ್ವಸಮ್ಮತವಾದ ವೈವಾಹಿಕ ಪದ್ದತಿಗಳಾಗಿವೆ.

- ಋಗ್ವೇದ ಸಮಾಜವು ನಾಲ್ಕು ವರ್ಣಗಳಿಂದ ಕೂಡಿತ್ತು. ಅವುಗಳೆಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ. ಈ ವರ್ಗೀಕರಣವು ವ್ಯಕ್ತಿ ಅನುಸರಿಸುವ ವೃತ್ತಿಯಿಂದ ನಿರ್ಧರಿತವಾಗುತ್ತಿತ್ತು.
- ಋಗ್ವೇದ ಕಾಲದ ಜನರು ಹಾಲು & ಅದರ ಉತ್ಪನ್ನಗಳಾದ ಮೊಸರು, ಬೆಣ್ಣೆ, ತುಪ್ಪಗಳಿಂದ ತಯಾರಿಸಿದ ಆಹಾರಗಳನ್ನು ಸೇವಿಸುತ್ತಿದ್ದರು. ಋಗ್ವೇದದಲ್ಲಿ 'ಕ್ಷೀರ–ಪಾಕ ಮೋದಾನಂ' (ಹಾಲಿನಿಂದ ತಯಾರಿಸಿದ ಆಹಾರವಸ್ತು)ವಿನ ಉಲ್ಲೇಖವಿದೆ. ಗೋಧಿಯಿಂದ ತಯಾರಿಸಿದ ರೊಟ್ಟಿ, ಬಾರ್ಲಿಯನ್ನು ಉಪಯೋಗಿಸುತ್ತಿದ್ದರು. ಸಾಮಾನ್ಯವಾಗಿ ಪ್ರಾಣಿಗಳ (ಕುರಿ, ಆಡು & ಎಮ್ಮೆ) ಮಾಂಸವನ್ನು ಬಳಸುತ್ತಿದ್ದರು. ಗೋವಧೆಯನ್ನು ನಿಷೇಧಿಸಿದ್ದರು. ವೇದಗಳ ಏಕ ಭಾಗದಲ್ಲಿ 'ಅಘ್ನ್ಯಾ" (ಗೋವಧೆ ಕೂಡದು) ಎಂಬ ಪದಗಳ ಬಳಕೆಯೇ ಇದಕ್ಕೆ ಆಧಾರ. ಗೋಹತ್ಯೆ ಶಿಕ್ಷಾರ್ಹ ಅಪರಾಧವಾಗಿದ್ದು, ಗೋವಧೆ ಮಾಡಿದವರನ್ನು ರಾಜ್ಯದಿಂದ ಉಚ್ಚಾಟಿಸುವ ಹಾಗೂ ಮರಣದಂಡನೆ ಶಿಕ್ಷೆಯನ್ನು ನೀಡಲಾಗುತ್ತಿತ್ತು.

## ಮಹಾಕಾವ್ಯಗಳು :

- ಮಹಾಭಾರತ, ರಾಮಾಯಣಕ್ಕಿಂತ ಹಳೆಯದಾದ ಸಂಗತಿಯಾಗಿದ್ದು ಕ್ರಿ.ಪೂ 10ನೇ ಶತಮಾನದಿಂದ ಕ್ರಿ.ಶ 4ನೇ ಶತಮಾನದವರೆಗೆ ರಾಜಕೀಯ ವಿಷಯಗಳನ್ನು ತಿಳಿಸುತ್ತದೆ. ಇದು ವೇದವ್ಯಾಸರಿಂದ ರಚಿತವಾಗಿದೆ.
- ಮೂಲತಃ ಮಹಾಭಾರತ 8,800 ಶ್ಲೋಕಗಳನ್ನು ಒಳಗೊಂಡಿದ್ದು ಜಯಸಂಹಿತಾ ಎಂದು ಕರೆಯಲ್ಪಡುತ್ತಿತ್ತು. ಇದು 24,000 ಶ್ಲೋಕಗಳಿಗೆ ಏರಿಕೆಯಾಗಿ ಭಾರತ ಎಂಬುದಾಗಿ ಹೆಸರಿಸಲ್ಪಟ್ಟಿತ್ತು. ಅಂತಿಮವಾಗಿ 1,00,000 ಶ್ಲೋಕಗಳನ್ನು ಕ್ರೋಢೀಕರಿಸಿ ಮಹಾಭಾರತ ಎಂಬುದಾಗಿ ಕರೆಯಲಾಗುತ್ತಿದೆ.
- ವಾಲ್ಮೀಕಿ ಮುನಿಗಳಿಂದ ರಚಿತವಾದ ರಾಮಾಯಣವು ಮೂಲತಃ 6,000 ಚರಣಗಳನ್ನು ಒಳಗೊಂಡಿದ್ದು ತದನಂತರ 12,000 & ಅಂತಿಮವಾಗಿ 24,000 ಶ್ಲೋಕಗಳಿಗೆ ಹೆಚ್ಚಾಯಿತು.



downloaded from: www.kpscvaani.com

- ರಾಮಾಯಣದ ಸಂರಚನೆ ಕ್ರಿ.ಶ. 5ನೇ ಶತಮಾನದಲ್ಲಿ ಪ್ರಾರಂಭವಾಯಿತು. ಇದರ ರಚನಾಕಾರ್ಯ ವಿವಿಧ ಹಂತಗಳಲ್ಲಿ ಮುನ್ನಡೆದು ಕ್ರಿ.ಶ. 12ನೇ ಶತಮಾನದ ಹೊತ್ತಿಗೆ ಈಗಿನ ರೂಪವನ್ನು ಪಡೆದುಕೊಂಡಿತ್ತು.

## 2. ಉತ್ತರ ವೈದಿಕ ಕಾಲ (ಕ್ರಿ.ಪೂ 1000–6000ವರೆಗೆ) :

### ರಾಜಕೀಯ ವ್ಯವಸ್ಥೆ :

- **ರಾಜಸೂಯ ಯಾಗ :** ರಾಜನು ಪಟ್ಟಾಭಿಷೇಕನಾಗುವ ಸಂದರ್ಭದಲ್ಲಿ ನಡೆಸುವ ಯಜ್ಞ.
- **ವಾಜಪೇಯ ಯಾಗ :** ರಾಜನಿಗೆ ನಿಯುಕ್ತನಾಗುವ ವ್ಯಕ್ತಿಯು ಇತರ ಕ್ಷತ್ರಿಯರೊಂದಿಗೆ ರಥದ ಸ್ಪರ್ಧೆಯಲ್ಲಿ ಭಾಗವಹಿಸುವ ಆಚರಣೆ. ಇದು 17 ದಿನದಿಂದ 1 ವರ್ಷದವರೆಗೆ ನಡೆಯುತ್ತದೆ.
- **ಅಶ್ವಮೇಧ ಯಾಗ :** ಚಕ್ರಾಧಿಪತಿಯಾಗಲು ಬಯಸುವ ರಾಜರು ಮಾಡುವ ಆಚರಣೆಯಾಗಿದ್ದು, ರಾಜನ ಯಾಗದ ಕುದುರೆ ಸುತ್ತುವ ಪ್ರದೇಶದಲ್ಲಿ ರಾಜನ ಪರಮಾಧಿಕಾರ ಸ್ಥಾಪಿತವಾಗುತ್ತದೆ. ಇದು ಮೂರು ದಿನಗಳ ಕಾಲ ನಡೆಯುತ್ತದೆ. ಐತರೇಯ & ಶತಪಥ ಬ್ರಾಹ್ಮಣಗಳಲ್ಲಿ ಅಶ್ವಮೇಧ ಯಾಗ ಮಾಡಿದ ಹಲವು ರಾಜರ ಹೆಸರುಗಳಿವೆ. ಐತರೇಯ ಬ್ರಾಹ್ಮಣವು 5 ವಿವಿಧ ರಾಜ್ಯಪದ್ದತಿಯನ್ನು ತಿಳಿಸುತ್ತಾ, ವಿವಿಧ ಪ್ರದೇಶಗಳ ರಾಜರು ವಿವಿಧ ಬಿರುದುಗಳಿಂದ ಕರೆಯಲ್ಪಡುತ್ತಿದ್ದರು ಎಂದು ಉಲ್ಲೇಖಿಸಿದೆ. ಸಾಮ್ರಾಜ್ಯವನ್ನು 'ಸಾಮ್ರಾಟ್'ನಿಂದ (ಪೂರ್ವದ ದೊರೆಗಳು), ಸ್ವರಾಜ್ಯವನ್ನು 'ಸ್ವರಾಟ" (ಪಶ್ಚಿಮದ ದೊರೆಗಳು), ವೈರಾಜ್ಯವನ್ನು 'ವಿರಾಟ್' (ಉತ್ತರದ ದೊರೆಗಳು), ಭೋಜ್ಯವನ್ನು 'ಭೋಜ' (ದಕ್ಷಿಣದ ದೊರೆಗಳು) ಹಾಗೂ ರಾಜ್ಯವನ್ನು 'ರಾಜ' ಅಥವಾ 'ರಾಜನ್' (ಮಧ್ಯ ದೇಶದ ದೊರೆಗಳು).

### ಸಾಮಾಜಿಕ ಜೀವನ :

- ಈ ಕಾಲದಲ್ಲಿ ವೈವಾಹಿಕ ಪದ್ದತಿಯಲ್ಲಿ 2 ವಿಧಗಳಿದ್ದವು. ಅವುಗಳೆಂದರೆ

✓ **ಅನುಲೋಮ ವಿವಾಹ :** ಮೇಲ್ವರ್ಣದ ಪುರುಷ & ಕೆಳವರ್ಣದ ಸ್ತ್ರೀಯ ನಡುವಿನ ವಿವಾಹಕ್ಕೆ ಸಮಾಜವು ಸಮ್ಮತಿ ನೀಡಿತ್ತು.

✓ **ಪ್ರತಿಲೋಮ :** ಕೆಳಮಟ್ಟದ ಪುರುಷ & ಮೇಲ್ವರ್ಗದ ಮಹಿಳೆಯರ ನಡುವಿನ ವಿವಾಹವನ್ನು ಸಮಾಜವು ಒಪ್ಪಿರಲಿಲ್ಲ.



downloaded from: www.kpscvaani.com

## ಧಾರ್ಮಿಕ ವ್ಯವಸ್ಥೆ :

- ಉತ್ತರ ವೈದಿಕ ಕಾಲದ ಧಾರ್ಮಿಕ ಆಚರಣೆಗಳು ಕಾಲಕ್ರಮೇಣ ಜಟಿಲವಾಗತೊಡಗಿದ್ದು, ಇದು ಮುಂದೆ ವರ್ಣಾಶ್ರಮ ವ್ಯವಸ್ಥೆಗೆ ಅಡಿಪಾಯವಾಯಿತು. ಈ ಆಶ್ರಮ ವ್ಯವಸ್ಥೆಯು ಮೇಲ್ವರ್ಗದ ವರ್ಣಗಳಿಗೆ ಮಾತ್ರ ಅನ್ವಯಿಸುತ್ತಿದ್ದವು. ಈ ನಾಲ್ಕು ಆಶ್ರಮಗಳೆಂದರೆ :

✓ **ಬ್ರಹ್ಮಚರ್ಯ :** ಇದು ವಿದ್ಯಾರ್ಥಿ ಜೀವನದ/ಶಿಕ್ಷಣದ ಹಂತ (25 ವರ್ಷದವರೆಗೆ)

✓ **ಗೃಹಸ್ಥ :** ಸಾಂಸಾರಿಕ ಜೀವನದ ಹಂತ (25–50 ವರ್ಷದವರೆಗೆ)

✓ **ವಾನಪ್ರಸ್ಥ :** ಮಧ್ಯ ವಯಸ್ಸಿನ ನಂತರ ಐಹಿಕ ಸುಖಭೋಗಗಳಿಂದ ದೂರವಾಗಿ ಅರಣ್ಯದಲ್ಲಿ ವಾಸಿಸುವುದು (50–75 ವರ್ಷಗಳು)

✓ **ಸನ್ಯಾಸ :** ಆತ್ಮ, ನಿರೀಕ್ಷೆ, ಧ್ಯಾನದಲ್ಲಿ ತೊಡಗಿ ಬ್ರಹ್ಮನ ಸಾಕ್ಷಾತ್ಕಾರಕ್ಕಾಗಿ ಪ್ರಯತ್ನಿಸುವ ಹಂತ (75–100 ವರ್ಷದವರೆಗೆ)

## ಸಾಹಿತ್ಯ :

1. **ಸಂಹಿತೆಗಳು** : ಸಂಹಿತೆಗಳು ಧಾರ್ಮಿಕ ಪ್ರಾರ್ಥನೆಗಳು & ಮಂತ್ರಗಳನ್ನು ಒಳಗೊಂಡಿವೆ. ಈ ಸಂಹಿತೆಗಳನ್ನು ಋಗ್ವೇದ, ಯಜುರ್ವೇದ, ಸಾಮವೇದ & ಅಥರ್ವಣ ವೇದಗಳು ಎಂಬುದಾಗಿ ವರ್ಗೀಕರಿಸಿದೆ. ಮೊದಲ ಮೂರು ವೇದಗಳನ್ನು 'ತ್ರಯಿ' ಎಂದು ಕರೆಯಲಾಗುತ್ತಿತ್ತು.

✓ **ಋಗ್ವೇದ :** ಇದು ಪ್ರಪಂಚದಲ್ಲೆ ಅತ್ಯಂತ ಪ್ರಾಚೀನ ಧಾರ್ಮಿಕ ಕೃತಿಯಾಗಿದೆ. ಇದನ್ನು ಸುಮಾರು ಕ್ರಿ.ಪೂ. 1200–100 ಕಾಲದಲ್ಲಿ ರಚಿಸಿರಬಹುದೆಂದು ಹೇಳಲಾಗಿದೆ. ಇದು ವಿವಿಧ ದೈವಗಳ ಪ್ರಾರ್ಥನೆಗಳ ಸಂಗ್ರಹವಾಗಿದ್ದು 10 ಮಂಡಲಗಳಾಗಿ ವಿಭಜಿತವಾಗಿದೆ. ಇದರಲ್ಲಿ 1028 ಮಂತ್ರಗಳಿವೆ. ಈ ಮಂತ್ರಗಳನ್ನು ಗೃಹಸ್ಥರಾದ ವಾಸುದೇವ, ಅತ್ರಿ, ಭಾರದ್ವಾಜ & ವಶಿಷ್ಠರು ರಚಿಸಿದ್ದಾರೆಂದು ಹೇಳಲಾಗುತ್ತಿದೆ. 'ಹೋತ್ರಿ' ಪುರೋಹಿತರು ಈ ಮಂತ್ರಗಳನ್ನು ಯಜ್ಞಯಾಗಾದಿಗಳಲ್ಲಿ ಪಠಿಸುತ್ತಿದ್ದರು. ಋಗ್ವೇದದ ಮೂರನೇ ಮಂಡಲವು ವಿಶ್ವಾಮಿತ್ರ ಋಷಿಯಿಂದ ರಚಿಸಲ್ಪಟ್ಟಿದ್ದು, ಸೂರ್ಯದೇವತೆ ಸಾವಿತ್ರಿಯನ್ನು ಕುರಿತು 'ಗಾಯಿತ್ರಿ ಮಂತ್ರ'ದ ಬಗ್ಗೆ ಉಲ್ಲೇಖಿಸಿದೆ.

✓ **ಸಾಮವೇದ :** ಸಾಮವೇದವು 'ಸಾಮನ್' ಎಂಬ ಪದದಿಂದ ಬಂದಿದ್ದು ಇದರರ್ಥ 'ಇಂಪಾದ ಸಂಗೀತ'. ಸಾಮವೇದ ಪ್ರಾರ್ಥನೆಗಳನ್ನು ಹಾಡಲು ಅನುಕೂಲವಾಗುವಂತೆ ರಾಗ ಸಂಯೋಜನೆ ಮಾಡಿದೆ. ಸಾಮವೇದದಲ್ಲಿ 75 ಪದ್ಯಗಳನ್ನುಳಿದು ಉಳಿದ ಪದ್ಯಗಳೆಲ್ಲ ಋಗ್ವೇದದ ಎಂಡು & ಒಂಬತ್ತನೇ ಮಂಡಲಿಗಳಿಂದ ಆಯ್ದುವಾಗಿವೆ. ಇವುಗಳನ್ನು ಯಾಗದ ಸಂದರ್ಭದಲ್ಲಿ 'ಉದ್ಗಾತ್ರಿ' ಸುಶ್ರಾವ್ಯವಾಗಿ ಹಾಡುತ್ತಿದ್ದರು. ಆರ್.ಸಿ. ಮುಜುಂದಾರ್‌ರವರು 'ಸಾಮವೇದವು ಭಾರತದ ಸಂಗೀತ ಪರಂಪರೆಯ & ಯಜ್ಞಗಳ ಬೆಳವಣಿಗೆಯನ್ನು ತಿಳಿಸುತ್ತದೆ' ಎಂದಿದ್ದಾರೆ.



downloaded from: www.kpscvaani.com

- ✓ **ಯಜುರ್ವೇದ** : ಇದು ಯಜ್ಞಗಳ ಆಚರಣೆಯ ವಿಧಿ ವಿಧಾನಗಳನ್ನು ಒಳಗೊಂಡಿದೆ. ಇದು ಗದ್ಯ & ಪದ್ಯ ರೂಪದಲ್ಲಿರುತ್ತದೆ. ಈ ವೇದವನ್ನು 'ಅಧ್ವರ್ಯು' ಎಂಬ ಋತ್ವಿಕರು ಉಚ್ಚರಿಸುತ್ತಿದ್ದರು. ಇದರಲ್ಲಿ ಶುಕ್ಲ ಯಜುರ್ವೇದ (ಮಂತ್ರಗಳನ್ನು ಮಾತ್ರ ಒಳಗೊಂಡಿದೆ) & ಕೃಷ್ಣ ಯಜುರ್ವೇದ (ಧಾರ್ಮಿಕ ಮಂತ್ರಗಳು & ಗದ್ಯ ರೂಪವನ್ನು ಒಳಗೊಂಡಿದೆ) ಎಂಬ ಎರಡು ಭಾಗಗಳಿವೆ. ಯಜುರ್ವೇದದಲ್ಲಿ 'ರಾಜಸೂಯ' & 'ವಾಜಪೇಯ' ಯಾಗಗಳ ಬಗ್ಗೆ ಮೊಟ್ಟಮೊದಲ ಬಾರಿಗೆ ಉಲ್ಲೇಖಿಸಲಾಗಿದೆ.
- ✓ **ಅಥರ್ವವೇದ** : ಇದನ್ನು 'ಬ್ರಹ್ಮವೇದ' ಎಂದು ಕರೆಯುವರು. ಇದು ಆರ್ಯೇತರ ನಂಬಿಕೆಗಳನ್ನು ಒಳಗೊಂಡ ಕೃತಿ. ಇದರಲ್ಲಿ ವಶೀಕರಣ, ಯಂತ್ರ, ಮಂತ್ರ, ತಾಯತ, ಔಷಧಿ ಬಗ್ಗೆ ಮಾಹಿತಿಯಿದೆ. ಇದರಲ್ಲಿ 731 ಮಂತ್ರಗಳಿವೆ. ಈ ವೇದ ಮಂತ್ರಗಳಿಂದ ಆಗಿನ ಜನರ ನಂಬಿಕೆ & ಆಚರಣೆ, ಆಚಾರ–ವಿಚಾರಗಳ ಬಗ್ಗೆ ತಿಳಿಯುತ್ತದೆ.

2. **ಬ್ರಾಹ್ಮಣಕಗಳು** : ಇವು ಗದ್ಯ ರೂಪದಲ್ಲಿದ್ದು ವೇದಗಳ ಸ್ತೋತ್ರಗಳನ್ನು ವಿವರಿಸುತ್ತದೆ. ಇವು ವೇದ ಮಂತ್ರಗಳ ಅರ್ಥ ವಿವರಣೆ ನೀಡುವುದರ ಜೊತೆಗೆ ಯಜ್ಞ ಯಾಗಾದಿಗಳ ಆಚರಣೆ ಬಗ್ಗೆ ವಿವರಣೆ ನೀಡುತ್ತದೆ. ಶತಪಥ ಬ್ರಾಹ್ಮಣವು ಅತ್ಯಂತ ವಿಸ್ತಾರವಾದ ಹಾಗೂ ಪ್ರಮುಖವಾದ ಬ್ರಾಹ್ಮಣವಾಗಿದ್ದು ಆರ್ಯರ ಭೌಗೋಳಿಕ ವಿಸ್ತರಣೆಯ ಬಗ್ಗೆ ತಿಳಿಸುತ್ತದೆ. ಪ್ರತಿಯೊಂದು ಬ್ರಾಹ್ಮಣವು ಯಾವುದಾದರೊಂದು ವೇದಸಂಹಿತೆಗೆ ಸಂಬಂಧಿಸಿರುತ್ತದೆ. ಅವುಗಳೆಂದರೆ

| ವೇದಗಳು | ಸಂಬಂಧಿತ ಬ್ರಾಹ್ಮಣಗಳು |
|---|---|
| ಋಗ್ವೇದ | ಐತರೇಯ & ಕೌಷೀತಕಿ ಬ್ರಾಹ್ಮಣಗಳು |
| ಸಾಮವೇದ | ತಾಂಡ್ಯಮಹಾ & ಜೈಮಿನಿಯ ಬ್ರಾಹ್ಮಣಗಳು |
| ಯಜುರ್ವೇದ | ತೈತರೀಯ & ಶತಪಥ ಬ್ರಾಹಣಗಳು |
| ಅಥರ್ವವೇದ | ಗೋಪಥ ಬ್ರಾಹ್ಮಣಗಳು |

3. **ಅರಣ್ಯಕಗಳು** : ಅರಣ್ಯಕಗಳೆಂದರೆ ಅರಣ್ಯಗಳಲ್ಲಿ ವಾಸಿಸುವ ಸನ್ಯಾಸಿಗಳಿಂದ ರಚಿತವಾದ ಕೃತಿಗಳಾಗಿದ್ದು ಬ್ರಾಹ್ಮಣಗಳ ಕೊನೆಯ ಭಾಗದಂತಿದೆ. & ಪ್ರತ್ಯೇಕ ಗ್ರಂಥಗಳಾಗಿಯೂ ಇವೆ. ಇವು ಯಜ್ಞ ಯಾಗಾದಿಗಳಿಗೆ ಹೆಚ್ಚು ಆದ್ಯತೆ ನೀಡದೆ ಧ್ಯಾನಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಿದೆ.

ಬ್ರಾಹ್ಮಣಗಳಂತೆ, ಅರಣ್ಯಕಗಳೂ ಸಹಾ ಯಾವುದಾದರೊಂದು ವೇದಸಂಹಿತೆಗೆ ಸಂಬಂಧಿಸಿರುತ್ತದೆ. ಪ್ರಮುಖ ಅರಣ್ಯಕಗಳೆಂದರೆ ಐತರೇಯ, ಕೌಷೀತಕಿ, ಜೈಮಿನೀಯಾ & ತೈತರೀಯಾ ಅರಣ್ಯಕಗಳು.



downloaded from: www.kpscvaani.com

4. **ಉಪನಿಷತ್ತುಗಳು** : ಉಪನಿಷತ್ತುಗಳು ಎಂಬುದು 'ಉಪ–ನಿ–ಷದ್' ಎಂಬ ಶಬ್ದದಿಂದ ಬಂದಿದ್ದು ಈ ಪದದ ಅರ್ಥ 'ಗುರುವಿನ ಬಳಿ ಕುಳಿತು' ಎಂದಾಗಿದೆ. ಒಟ್ಟು 108 ಉಪನಿಷತ್ತುಗಳಿವೆ. ಬ್ರಹ್ಮ, ಕರ್ಮ & ಆತ್ಮದ ಬಗೆಗಿನ ತಾತ್ವಿಕ ಚಿಂತನೆಗಳನ್ನು ಉಪನಿಷತ್ತುಗಳು ಒಳಗೊಂಡಿವೆ. ಈ ಉಪನಿಷತ್ತುಗಳು 'ಗುರು–ಶಿಷ್ಯರ' ನಡುವಿನ ಸಂವಾದದಂತಿವೆ. ಇವು ಜ್ಞಾನ ಮಾರ್ಗ & ಕರ್ಮ ಮಾರ್ಗಗಳ ನಡುವಿನ ಕೊಂಡಿಯಂತಿದೆ. ಅವುಗಳಲ್ಲಿ 13 ಉಪನಿಷತ್ತುಗಳು

- ✓ ಐತರೇಯ
- ✓ ಕೌಷೀತಕಿ
- ✓ ಛಾಂದೋಗ್ಯ
- ✓ ಕೇನಾ
- ✓ ಈಶ್
- ✓ ಬೃಹದಾರಣ್ಯಕ
- ✓ ತೈತರೀಯ
- ✓ ಕಠ
- ✓ ಮೈತ್ರೀ
- ✓ ಪ್ರಶ್ನಾ
- ✓ ಶ್ವೇತಾಶ್ವತರ
- ✓ ಮುಂಡಕ್
- ✓ ಮಾಂಡೂಕ

| **ವೇದಗಳು** | **ಸಂಬಂಧಿತ ಉಪನಿಷತ್ತುಗಳು** |
|---|---|
| ಋಗ್ವೇದ | ಐತರೇಯ & ಕೌಷೀತಕಿ ಉಪನಿಷತ್ತು |
| ಸಾಮವೇದ | ಛಾಂದೋಗ್ಯ & ಕೇನ ಉಪನಿಷತ್ತು |
| ಯಜುರ್ವೇದ | ತೈತರೀಯ, ಬೃಹದಾರಣ್ಯಕ & ಕಠಾ, ಈಶ, ಶ್ವೇತಾಶ್ವತರ ಉಪನಿಷತ್ತು |
| ಅಥರ್ವವೇದ | ಮುಂಡಕ್, ಮಾಂಡುಕ್ಯ & ಪ್ರಶ್ನಾ |

5. **ವೇದಾಂಗಗಳು :** ಇವು ವೇದಗಳ ಮೇಲಿನ ವ್ಯಾಖ್ಯಾನಗಳನ್ನು ಒಳಗೊಂಡಿದೆ. ಇವುಗಳನ್ನು ಸೂತ್ರ ರೂಪದಲ್ಲಿ ಅಂದರೆ ವಿಸ್ತೃತವಲ್ಲದ ಗದ್ಯರೂಪದಲ್ಲಿ ಸ್ಮರಣೆಗೆ ಅನುಕೂಲವಾಗುವಂತೆ ರಚಿಸಲಾಗಿದೆ. ಪ್ರಮುಖವಾಗಿ ಆರು ವೇದಾಂಗಗಳಿವೆ. ಅವುಗಳೆಂದರೆ :



downloaded from: www.kpscvaani.com

- ✓ ಶಿಕ್ಷಾ – ವಿಧಿಯುಕ್ತ ಉಚ್ಚರಣೆ
- ✓ ಕಲ್ಪ – ಧಾರ್ಮಿಕ ಆಚರಣೆ/ಸಂಸ್ಕಾರ ಶಾಸ್ತ್ರ
- ✓ ವ್ಯಾಕರಣನಿರುಕ್ತ – ಪದ ನಿಷ್ಪತ್ತಿ/ವ್ಯುತ್ಪತ್ತಿ ಶಾಸ್ತ್ರ
- ✓ ಛಾಂದ – ಛಂದಸ್ಸು
- ✓ ಜ್ಯೋತಿಷ್ಯ

6. **ಉಪವೇದಗಳು** : ಉಪವೇದಗಳು ನಾಲ್ಕು. ಅವುಗಳೆಂದರೆ:
- ✓ ಧನುರ್ವೇದ – ಯುದ್ಧ ಕಲೆಯ ಬಗ್ಗೆ (ಋಗ್ವೇದಕ್ಕೆ ಸಂಬಂಧಿಸಿದಂತೆ)
- ✓ ಗಂಧರ್ವವೇದ – ಸಂಗೀತ ಕಲೆಯ ಬಗ್ಗೆ (ಸಾಮವೇದಕ್ಕೆ ಸಂಬಂದಿಸಿದಂತೆ)
- ✓ ಶಿಲ್ಪವೇದ – ವಾಸ್ತುಶಿಲ್ಪದ ಬಗ್ಗೆ (ಯಜುರ್ವೇದಕ್ಕೆ ಸಂಬಂಧಿಸಿದಂತೆ)
- ✓ ಆಯುರ್ವೇದ – ವೈದ್ಯಕೀಯ ಶಾಸ್ತ್ರದ ಬಗ್ಗೆ (ಅಥರ್ವ ವೇದಕ್ಕೆ ಸಂಬಂಧಿಸಿದಂತೆ)

7. **ಪುರಾಣಗಳು** : 18 ಪುರಾಣಗಳಿದ್ದು, ರಾಜವಂಶಗಳ ವಂಶಾವಳಿಯ ಬಗ್ಗೆ ಮಾಹಿತಿ ಒಳಗೊಂಡಿದೆ. ಇವು ಸಾಮಾನ್ಯವಾಗಿ ಗಾಥಾರೂಪದಲ್ಲಿ, ದಾನಸ್ತುತಿ ರೂಪದಲ್ಲಿದೆ.
- ✓ ಮತ್ಸ್ಯಪುರಾಣ – ಶಾತವಾಹನರ ಕಾಲದ ಬಗ್ಗೆ ಮಾಹಿತಿ ನೀಡುತ್ತದೆ.
- ✓ ವಾಯುಪುರಾಣ – ಗುಪ್ತರ ಅರಸರ ವಂಶಾವಳಿ, ಆಡಳಿತದ ಬಗ್ಗೆ ತಿಳಿಸುತ್ತದೆ.
- ✓ ವಿಷ್ಣು ಪುರಾಣ – ಮಹಾಭಾರತದ ಕಾಲದಲ್ಲಿ ಹಸ್ತಿನಾಪುರವನ್ನು ಆಳ್ವಿಕೆ ಮಾಡಿದ ರಾಜರುಗಳ ಬಗ್ಗೆ ತಿಳಿಸುತ್ತದೆ.
- ✓

8. **ಸ್ಮೃತಿಗಳು :** ಇವು ಧಾರ್ಮಿಕ & ರಾಜ್ಯಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳಾಗಿವೆ. ಇವು ಆರ್ಯರ ನ್ಯಾಯ, ಕಾನೂನುಗಳನ್ನು ಒಳಗೊಂಡ ಕೃತಿಗಳಾಗಿವೆ. ಪ್ರಮುಖವಾದ ಧರ್ಮಶಾಸ್ತ್ರ (ಸ್ಮೃತಿ) ಮನುಸ್ಮೃತಿ, ಯಾಜ್ಞವಲ್ಕ್ಯ ಸ್ಮೃತಿ, ವಿಷ್ಣು ಸ್ಮೃತಿ ಹಾಗೂ ನಾರದ ಸ್ಮೃತಿಗಳು.

ಮನುಸ್ಮೃತಿ – ಮನುಸ್ಮೃತಿಯು ಹಿಂದೂ ಧರ್ಮದ ಅತ್ಯಂತ ಪ್ರಾಚೀನ ಧರ್ಮಶಾಸ್ತ್ರ ಗ್ರಂಥವಾಗಿದ್ದು, ಇದನ್ನು ಮನು ಚಕ್ರವರ್ತಿಯಿಂದ ರಚಿಸಲ್ಪಟ್ಟಿದೆ. ಈ ಕೃತಿಯಲ್ಲಿ ವರ್ಣಾಶ್ರಮ ವ್ಯವಸ್ಥೆಯನ್ನು ಉಲ್ಲೇಖಿಸುತ್ತಾ ಮಾನವನ ಜೀವಿತಾವಧಿಯನ್ನು 4 ಆಶ್ರಯಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ :



downloaded from: www.kpscvaani.com

- ಬ್ರಹ್ಮಚರ್ಯೆ
- ಗೃಹಸ್ಥ
- ವಾನಪ್ರಸ್ಥ
- ಸನ್ಯಾಸ

9. **ಮಹಾ ಕಾವ್ಯಗಳು :** ಮಹಾಭಾರತ & ರಾಮಾಯಣ

- **ಮಹಾಭಾರತ :** ಮಹಾಭಾರತದ ಕರ್ತೃ ಶ್ರೀ ವೇದವ್ಯಾಸರು. ಹಿಂದೂ ಸಂಪ್ರದಾಯದ ಪ್ರಕಾರ ಮಹಾಭಾರತದ ಕಾಲವನ್ನು 'ದ್ವಾಪರ ಯುಗ'ವೆಂದು ಕರೆಯಲಾಗಿದೆ. ಮಹಾಭಾರತದ ಬಗ್ಗೆ ಗೃಹ್ಯಸೂತ್ರದಲ್ಲಿ ಅಶ್ವಲಾಯನದಿಂದ, ಪಾಣಿನೀಯ ಅಷ್ಟಾಧ್ಯಾಯಿಯಲ್ಲಿ ಪ್ರಥಮ ಉಲ್ಲೇಖವಿರುವುದು ತಿಳಿದುಬರುತ್ತದೆ. ಮೂಲ ಭಾರತದಲ್ಲಿ 880 ಶ್ಲೋಕಗಳಿದ್ದವು. ಗುಪ್ತರ ಕಾಲದಲ್ಲಿ ರಚಿತವಾದ ಮಹಾಭಾರತವು, 1ಲಕ್ಷ ಶ್ಲೋಕಗಳನ್ನು ಒಳಗೊಂಡಿದೆ. ಮಹಾಭಾರತದಲ್ಲಿ 18 ಪರ್ವಗಳಿವೆ.
- **ರಾಮಾಯಣ :** ರಾಮಾಯಣದ ಕರ್ತೃ ವಾಲ್ಮೀಕಿ ಮಹರ್ಷಿ ಹಿಂದೂ ಸಂಪ್ರದಾಯದ ಪ್ರಕಾರ ರಾಮಾಯಣದ ಕಾಲವನ್ನು 'ತ್ರೇತಾಯುಗ'ವೆಂದು ಕರೆಯುತ್ತಾರೆ. ಋಗ್ವೇದದಲ್ಲಿ ಇಕ್ಷ್ವಾಕು, ರಾಮ, ದಶರಥ ಅರಸರ ಹೆಸರುಗಳ ಉಲ್ಲೇಖವಿದೆ. ರಾಮಾಯಣವು ಅಂದಿನ ಕಾಲದ ಭೌಗೋಳಿಕ, ರಾಜಕೀಯ, ಸಾಮಾಜಿಕ, ಧಾರ್ಮಿಕ ಪರಿಸ್ಥಿತಿಯ ಮೇಲೆ ಬೆಳಕು ಚೆಲ್ಲುತ್ತದೆ. ಮೂಲ ರಾಮಾಯಣವು 6,000 ಶ್ಲೋಕಗಳಿಂದ ಕೂಡಿದ್ದು, ಕ್ರಮೇಣ 24,000 ಶ್ಲೋಕಗಳನ್ನು ಒಳಗೊಂಡ ಬೃಹತ್ ಕಾವ್ಯವಾಗಿದೆ. ಇದನ್ನು 7 ಖಂಡಗಳಾಗಿ ವಿಭಾಗಿಸಲಾಗಿದೆ.



downloaded from: www.kpscvaani.com

**10. ದರ್ಶನಗಳು :** ಭಾರತದ ತತ್ವಜ್ಞಾನದ ಆರು ಶಾಲೆಗಳನ್ನು ಷಡ್ದರ್ಶನಗಳೆನ್ನುವರು.

| **ದರ್ಶನಗಳು** | **ಕರ್ತೃ** | **ಆರಂಭವಾದ ವರ್ಷ** | **ಮೂಲ ಗ್ರಂಥ** | **ಸಾರಾಂಶ** |
|---|---|---|---|---|
| ನ್ಯಾಯ ದರ್ಶನ | ಗೌತಮ | ಕ್ರಿ.ಪೂ. 6ನೇ ಶತಮಾನ | ನ್ಯಾಯಸೂತ್ರ | ದೇವರನ್ನು ಮಾನವ ಜ್ಞಾನದ ಮೂಲಕ ತಲುಪಬೇಕೆಂದು ತಿಳಿಸುತ್ತದೆ |
| ವೇಶೇಷಿಕ ದರ್ಶನ | ಕಣಾದ | ಕ್ರಿ.ಪೂ. 6ನೇ ಶತಮಾನ | ವೈಶೀಷಿಕ ಸೂತ್ರ | ವಿಶ್ವದ ಸೃಷ್ಟಿಯು ಅಣುಗಳಿಂದ ಆಗಿದೆಯೆಂದು ವಾದಿಸುತ್ತಾ ದೈವವನ್ನು ನಿರಾಕರಿಸುವರು |
| ಸಾಂಖ್ಯ ದರ್ಶನ | ಕಪಿಲಾ | ಕ್ರಿ.ಪೂ. 6ನೇ ಶತಮಾನ | ಸಾಂಖ್ಯಸೂತ್ರ | ದೇವರ ಅಸ್ತಿತ್ವವನ್ನು ನಿರಾಕರಿಸುತ್ತಾ ವಸ್ತು ಹಾಗೂ ಆತ್ಮಕ್ಕೆ ಪ್ರಾಧಾನ್ಯತೆ ನೀಡಿರುವುದು. ಇವು ಅಮರವಾದುದು. |
| ಯೋಗ ದರ್ಶನ | ಪತಂಜಲಿ ಮಹರ್ಷಿ | ಕ್ರಿ.ಪೂ. 2ನೇ ಶತಮಾನ | ಯೋಗಸೂತ್ರ | ಮೋಕ್ಷಸಾಧನೆಗೆ ಯೋಗವೇ ಸಾಧನ. ಆದುದರಿಂದ ದೈಹಿಕ, ಮಾನಸಿಕ ನಿಗ್ರಹ ಮುಖ್ಯ ಎಂದಿದ್ದಾರೆ |
| ಪೂರ್ವ ಮೀಮಾಂಸ ಜೈಮಿನಿ | ಕ್ರಿ.ಪೂ. 4ನೇ ಶತಮಾನ | ಪೂರ್ವ ಮೀಮಾಂಸ ಸೂತ್ರ | | ಕರ್ಮ ಸಿದ್ಧಾಂತದ ಮೂಲಕ ಮುಕ್ತಿಯನ್ನು ಸಾಧಿಸಬಹುದೆಂದು ಪ್ರತಿಪಾದಿಸಿದ್ದಾರೆ. |
| ವೇದಾಂತ (ಉತ್ತರ ಮೀಮಾಂಸ) | ಮಹರ್ಷಿ ವೇದವ್ಯಾಸರು | ಕ್ರಿ.ಪೂ. ಉತ್ತರ 4ನೇ ಶತಮಾನ | | ಮೀಮಾಂಸ ಸೂತ್ರ ದೇವರಲ್ಲಿ ಶರಣಾಗತಿ ಹೊಂದುವ ಮೂಲಕ ಮುಕ್ತಿಯನ್ನು ಪಡೆಯಬಹುದೆಂದು ಪ್ರತಿಪಾದಿಸುವರು. |

GNANADHARE IAS ACADEMY



downloaded from: www.kpscvaani.com

## ಪುರುಷಾರ್ಥಗಳು – ನಾಲ್ಕು

- ಧರ್ಮ
- ಅರ್ಥ
- ಕಾಮ
- ಮೋಕ್ಷ

## ಋಣಗಳು – ಮೂರು

- ಋಷಿ ಋಣ
- ಪಿತೃ ಋಣ
- ದೇವ ಋಣ

## ವರ್ಣಾಶ್ರಮಗಳು – ನಾಲ್ಕು

- ಬ್ರಹ್ಮಚರ್ಯ
- ಗೃಹಸ್ಥ
- ವಾನಪ್ರಸ್ಥ
- ಸನ್ಯಾಸ

## ಚತುರ್ವರ್ಣಗಳು – ನಾಲ್ಕು

- ಬ್ರಾಹ್ಮಣ
- ಕ್ಷತ್ರೀಯ
- ವೈಶ್ಯ
- ಶೂದ್ರ

## ಸಮಾಜ:

- ಪಿತೃ ಪ್ರಧಾನ ಕುಟುಂಬ ಮತ್ತು ಅವಿಭಕ್ತ ಕುಟುಂಬ ವ್ಯವಸ್ಥೆ ರೂಢಿಯಲ್ಲಿತ್ತು.
- ಮನೆ ಯಜಮಾನನನ್ನು ಗೃಹಪತಿ ಎನ್ನಲಾಗುತ್ತಿತ್ತು.
- ಕುಟುಂಬವನ್ನು 'ಕುಲ' ಎನ್ನುತ್ತಿದ್ದರು.
- ಉತ್ತರಾಧಿಕಾರತ್ವದ ಹಕ್ಕು ಗಂಡು ಮಕ್ಕಳಿಗೆ ಮಾತ್ರ ಇತ್ತು.
- ಅಗಮ್ಯಗಮನ (ಹಾದರ) ಅಂದರೆ ತಂದೆ ಮಗಳ ಮತ್ತು ಅಣ್ಣ ತಂಗಿ ವಿವಾಹಗಳು ಕೆಲ ಸಮಯ ಜಾರಿಯಲ್ಲಿತ್ತು.
- ವೈಯಕ್ತಿಕ ಭೂಮಿಯ ಹಕ್ಕನ್ನು ಊರ್ವರ/ಕ್ಷೇತ್ರ ಎನ್ನುತ್ತಿದ್ದರು.
- ಸ್ತ್ರೀಯರಿಗೆ ಉನ್ನತ ಸ್ಥಾನಮಾನವಿತ್ತು.
- ಈ ಕಾಲದ ಸ್ತ್ರೀಯರಿಗೆ ಉನ್ನತ ಸ್ಥಾನವಿತ್ತು.
- ಈ ಕಾಲದ ಸ್ತ್ರೀ ವಿದ್ವಾಂಸರುಗಳೆಂದರೆ –ವಿಶ್ವಾಸವರ, ಘೋಷ, ಅಪಾಲ, ಗಾರ್ಗಿ ಕಾತ್ಯಾಯಿನಿ, ಲೋಪಮುದ್ರಾ, ಮುದ್ಯಾಲಿನ ಮುಂತಾದವರು.
- ಬಾಲ್ಯ ವಿವಾಹ ಪದ್ಧತಿ ಇರಲಿಲ್ಲ.
- ವರದಕ್ಷಿಣೆ ಪದ್ಧತಿ ಇರಲಿಲ್ಲ.



downloaded from: www.kpscvaani.com

- ದಸ್ಯುಗಳನ್ನು ಹೊರತು ಪಡಿಸಿ ಅಂತರ್ ಜಾತಿ ವಿವಾಹಗಳು ರೂಢಿಯಲ್ಲಿದ್ದವು.
- ಏಕಪತ್ನಿತ್ವ ಅಸ್ತಿತ್ವ ಉನ್ನತ ವರ್ಗದಲ್ಲಿ ಮಾತ್ರ ಬಹುಪತ್ನಿತ್ವ ರೂಢಿಯಲ್ಲಿದ್ದವು.
- ವಿದವಾ ಪುನರ್ ವಿವಾಹಕ್ಕೆ ಅಧ್ಯತೆ ನೀಡಲಾಗಿತ್ತು.
- ನಿಯೋಗ ಪದ್ಧತಿ (ಪತಿ ತೀರಿಕೊಂಡಾಗ ಗಂಡು ಸಂತಾನಕ್ಕಾಗಿ ಮೈದುನನೊಂದಿಗೆ ಬಾಳ್ವೆ ಮಾಡುವ ಪದ್ದತಿ) ರೂಢಿಯಲ್ಲಿತ್ತು.
- ಸ್ತ್ರೀ ಗುಲಾಮರಿದ್ದು, ಗೃಹಕಾರ್ಯಗಳಲ್ಲಿ ತೊಡಗುತ್ತಿದ್ದರು.
- ಹತ್ತಿ, ಉಣ್ಣೆ ಮತ್ತು ಜಿಂಕೆ ಚರ್ಮಗಳಿಂದ ಉಡುಪು ತಯಾರಿಸುತ್ತಿದ್ದರು.
- ಉಡುಪುಗಳಿಗೆ ಚಿನ್ನದ ಕಸೂತಿ ಕೆಲಸ ಮಾಡುತ್ತಿದ್ದರು.
- ಸೋಮ ಮತ್ತು ಸುರಾ ಎಂಬ ಪಾನೀಯಗಳ ಬಳಕೆಯಿತ್ತು.
- ಸೋಮ ಎಂಬುದು ಹಿಮಾಲಯದ 'ಮುಜಾವಂತ' ಶಿಖರದಲ್ಲಿ ಬೆಳೆಯುತ್ತಿದ್ದ ಗಿಡವೊಂದರ ರಸ.
- ಸುರಾವು ಸಾಮಾನ್ಯ ಮಾದಕ ಪಾನೀಯವಾಗಿದ್ದು ಧಾನ್ಯಗಳಿಂದ ತಯಾರಿಸುತ್ತಿದ್ದರು. ನಂತರದಲ್ಲಿ ಇದನ್ನು ನಿಷೇಧಿಸಲಾಯಿತು.
- ಋಗ್ವೇದದ 9ನೇ ಮಂಡಲವು ಒಂದೇ ಕುಟುಂಬದ ಜನರು ವಿವಿಧ ವೃತ್ತಿಗಳನ್ನು ಮಾಡುತ್ತಿದ್ದರ ಬಗ್ಗೆ ತಿಳಿಸುತ್ತದೆ.
- ಋಗ್ವೇದದ 10ನೇ ಮಂಡಲದ 'ಪುರುಷಸೂಕ್ತ'ವು ಮೊಟ್ಟ ಮೊದಲ ಬಾರಿಗೆ ಚಾತುರ್ವಣಗಳಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರ ಉಗಮದ ಬಗ್ಗೆ ಉಲ್ಲೇಖಿಸಿದೆ.

## ವೇದಕಾಲದ ದೇವತೆಗಳು:-

- ಪ್ರಜಾಪತಿ (ಜೀವರಾಶಿಗಳ ಅಧಿಪತಿ)
- ವಿಶ್ವ ಕರ್ಮನ್ (ಸೃಷ್ಟಿಕರ್ತ)
- ಧಾತೃ (ಸ್ಥಾಪಕ)
- ವಿಧಾತೃ (ನಿಯಾಮಕ)
- ಮನ್ಯು (ಕ್ರೋಧ)
- ಶ್ರದ್ಧಾ (ನಿಷ್ಠೆ / ನಂಬಿಕೆ)
- ದ್ಯಯುಸ (ಸ್ವರ್ಗಾಧಿಪತಿ)
- ಪೃಥ್ವಿ (ಭೂಮಾತೆ)



downloaded from: www.kpscvaani.com

- ಮಿತ್ರ
- ಸೂರ್ಯ, ಪೂಷನ್ (ಪಾಲಕ), ಅಶ್ವಿನಿ, ನಾಸತ್ಯ (ಸಂಜೆಯ ತಾರೆಗಳು)
- ರುದ್ರ (ಮಿಂಚು ಗುಡುಗಿನ ದೇವತೆ), ಪರ್ಜನ್ಯ (ಮಳೆಯ ದೇವತೆ).
- ಇಂದ್ರ
- ಅಧಿತಿ, ಉಸಸ್ – ಸ್ತ್ರೀ ದೇವತೆಗಳು

## ಕಲೆ ಮತ್ತು ವಿಜ್ಞಾನದ ಬೆಳವಣಿಗೆ :

ಆರ್ಯರು ಕಲೆಯಲ್ಲಿ ನುರಿತರಾಗಿದ್ದರು. ಋಗ್ವೇದದಲ್ಲಿ ಬರುವ 1000 ಸ್ತಂಭಗಳ ಆಧಾರವುಳ್ಳ ಮತ್ತು 1000 ದ್ವಾರಗಳುಳ್ಳ ಭವನ ಉಲ್ಲೇಖ ಇದಕ್ಕೆ ಸಾಕ್ಷಿ. ಆರ್ಯರು ವಿವಿಧ ಬಣ್ಣಗಳ ಮಡಕೆ ತಯಾರಿಕೆಯಲ್ಲಿ ನುರಿತವರಾಗಿದ್ದರು. ಅಕ್ಕಸಾಲಿಗರು ಇಂದ್ರನು ಪ್ರತಿಮೆಗಳ ತಯಾರಿಕೆ ಹಾಗೂ ಲೋಹ ಆಭರಣ ಮತ್ತು ಆಯುಧಗಳ ತಯಾರಿಕೆಯಲ್ಲಿ ಪಳಗಿದ್ದರು. ಗೋವಿನ ಕಿವಿಯ ಮೇಲೆ 8ರ ಗುರುತು ಹಾಕಿ ಅದನ್ನು **ಅಷ್ಟಕರ್ಣಿ** ಎಂದು ಉಲ್ಲೇಖಿಸಿರುವುದನ್ನು ನೋಡಿದರೆ ಅವರಿಗೆ ಬರವಣಿಗೆ ಕಲೆ ಗೊತ್ತಿತ್ತೆಂದು ತಿಳಿಯುತ್ತದೆ.

ಆರ್ಯರಿಗೆ ಖಗೋಳಶಾಸ್ತ್ರ ವೈದ್ಯಶಾಸ್ತ್ರ ಮತ್ತು ಗಣಿತಶಾಸ್ತ್ರಗಳ ಅರಿವಿತ್ತು. ಅವರಿಗೆ ಗ್ರಹಗಳ ಚಲನೆಯು ಗೊತ್ತಿತ್ತು. ಅವರು ಚಂದ್ರಮಾನ ಪಂಚಾಂಗವನ್ನು ಅಳವಡಿಸಿಕೊಂಡಿದ್ದರು. ಅದರಲ್ಲಿ ವರ್ಷಕ್ಕೆ 12 ತಿಂಗಳು, 366 ದಿನಗಳು ಹಾಗೂ 28 ಮಳೆ ನಕ್ಷತ್ರಗಳು ಇದ್ದವು. ಆರ್ಯ ಖಗೋಳ ತಜ್ಞರು ವಿಶ್ವದ ಕೇಂದ್ರ ಬಿಂದು ಸೂರ್ಯನೆಂದು, ಭೂಮಿ ಅದರ ಸುತ್ತ ತಿರುಗುವನೆಂದು ಪ್ರತಿಪಾದಿಸಿದರು. ಅವರು ಬೀಜಗಣಿತ, ಅಂಕಗಣಿತ, ಜ್ಯಾಮಿತಿ ಮತ್ತು ರೇಖಾಗಣಿತಗಳು ಗಣಿತದಲ್ಲಿ ಖಚಿತವಾಗಿ ವಿಭಾಗಿಸಿದರು. ಸಸ್ಯಶಾಸ್ತ್ರ ರಾಸಾಯನಶಾಸ್ತ್ರ ಜೀವಶಾಸ್ತ್ರ ಮತ್ತು ಭೌತಶಾಸ್ತ್ರಗಳ ಬಗ್ಗೆ ಅವರಿಗೆ ಅರಿವಿತ್ತು.

## ಕಲೆ–ಧರ್ಮಗಳು ಪೋಷಣೆ:

ಸುಂದರ ಪಾಂಡ್ಯನು ಧಾರ್ಮಿಕವಾಗಿ ಉದಾರಿ, ಮತಸಹಿಷ್ಣು ಅವನು ಶೈವ, ವೈಷ್ಣವ ಮತ್ತು ಜೈನ ಮತಗಳನ್ನು ಉದಾರವಾಗಿ ಕಂಡು ಪೋಷಿಸಿದನು. ಆತ ಚಿದಂಬರಂನ ಶಿವಾಲಯ ಮತ್ತು ಶ್ರೀರಂಗಂನ ರಂಗನಾಥ ದೇವಾಲಯಗಳನ್ನು ವಿಸ್ತರಿಸಿದ್ದಲ್ಲದೆ. ಅವುಗಳ ಗೋಪುರಗಳನ್ನು ಬಂಗಾರದ ತಗಡುಗಳಿಂದ ಅಲಂಕರಿಸಿದನು. ಚಿದಂಬರಂನ ನಟರಾಜ ದೇವಾಲಯದ ಪಶ್ಚಿಮ ದಿಕ್ಕಿನ ಗೋಪುರವನ್ನು ನಿರ್ಮಿಸಿದನು. ಕೊಪ್ಪೆರುಂಜಿಂಗನಿಂದ ವಶಪಡಿಸಿಕೊಂಡ ರತ್ನಖಚಿತವಾದ ಕಂಠೀಹಾರವನ್ನು ಶ್ರೀರಂಗಂನ ರಂಗನಾಥಸ್ವಾಮಿಗೆ ಅರ್ಪಿಸಿದನು.



downloaded from: www.kpscvaani.com

ಹೀಗೆ ದಾನಶೂರನೂ, ಉದಾರಿಯೂ ಆದ ಸುಂದರ ಪಾಂಡ್ಯನ ಶ್ರೇಷ್ಠತೆಯನ್ನು ಅವರ ಬಿರುದುಗಳಾದ **ಶ್ರೀ ಪರಮೇಶ್ವರ, ಮಹಾರಾಜಾಧಿರಾಜ ಎಲ್ಲಾಂತ ಟೈಯಾನು ಪೆರುಮ (ಸಕಲ ಸಾರ್ವಬೌಮ), ಜಮ್ಮಾಂಡಲಮುಮ್ ಕೊಂಡರುಳಿಯ** (ಪ್ರಪಂಚವನ್ನೆಲ್ಲಾ ಗೆದ್ದವನು), **ಪಚ್ಚಿರಾಜ, ಕಾಂಚಿಪುರಂ ಕೊಂಡನ್‌ಗಳು** ಸಮರ್ಥಿಸಿವೆ. ಅವನು ಚಿದಂಬರಂ ದೇವಾಲಯಕ್ಕೆ ಚಿನ್ನದ ಹಜಾರವನ್ನು ಕಟ್ಟಿಸಿದನು. ಅವನ ಶಾಸನಗಳು ಆತನ ವಿರೋಚಿತ ಗುಣಗಳನ್ನು, ಉದಾರತೆಯನ್ನು ಕೊಂಡಾಡಿವೆ. ಚೋಳರ ಹಾಗೂ ಹೊಯ್ಸಳರ ರಾಜಕೀಯ ಪರಮಾಧಿಕಾರ ಅಂತ್ಯಗೊಳಿಸಿದುದು ಅವರ ಗಣ್ಯ ಸಾಧನೆಗಳು. ಅವನ ರಾಜ್ಯ ದಕ್ಷಿಣದ ಕನ್ಯಾಕುಮಾರಿಯಿಂದ ಉತ್ತರದ ನೆಲ್ಲೂರುವರೆಗೆ ವಿಸ್ತರಿಸಿತ್ತು.

## ಮೊಗಲರ ಸಾಂಸ್ಕೃತಿಕ ಕೊಡುಗೆಗಳು (ಸುವರ್ಣಯುಗ)

**ಭಾರತದ ಸಾಂಸ್ಕೃತಿ ಇತಿಹಾಸದಲ್ಲಿ ಮೊಗಲರ ಆಳ್ವಿಕೆಯು ಉಜ್ವಲವಾದುದು.** ಕಾರಣ ಮಹಾ ಮೊಗಲರು ಧರ್ಮ, ಶಿಕ್ಷಣ, ಸಾಹಿತ್ಯ ಮತ್ತು ಕಲೆಗಳಲ್ಲಿ ಅದ್ವಿತೀಯ ಸಾಧನೆಗೈದಿದ್ದಾರೆ. ಪ್ರಾಚೀನ ಕಾಲದ ಮೌರ್ಯ ಮತ್ತು ಗುಪ್ತರು ನಂತರ ಇಂತಹ ಮಹೋನ್ನತ ಪ್ರಗತಿ ಕಂಡುಬಂದುದು ಇದೇ ಮೊದಲು. ಅಂಧಕಾರಯುಗ ಎಂಬ ಕಳಂಕ ಹೊತ್ತಿರುವ ಮಧ್ಯಯುಗದಲ್ಲಿ ಇಂತಹ ಪ್ರಗತಿ ಕಂಡುಬಂದಿದ್ದು, ನಿಜಕ್ಕೂ ಅದ್ಭುತವೇ, ಏಕಾಡಳಿತ, ಸರದಾರರ ಪ್ರೋತ್ಸಾಹ, ಆರ್ಥಿಕ ಸಮೃದ್ಧಿ, ಮತಸಹಿಷ್ಣುತೆ ಅಂಶಗಳು ಇಂತಹ ಬೆಳವಣಿಗೆಗೆ ಕಾರಣವಾದವು. ಹಿಂದೂ–ಮುಸ್ಲಿಂ ಸಂಸ್ಕೃತಿಗಳ ಬೆರಕೆಯಿಂದ ಅವಿರ್ಭವಿಸಿದ ಸಾಂಸ್ಕೃತಿಕ ಉತ್ಕರ್ಷವು ರಾಷ್ಟ್ರೀಯತೆಯನ್ನು ಅಭಿವ್ಯಕ್ತಿಗೊಳಿಸಿತು. ಈ ತೆರನಾದ ಬೆಳವಣಿಗೆ ದೆಹಲಿ ಸುಲ್ತಾನರ ಕಾಲದಲ್ಲೂ ಕಂಡುಬರಲಿಲ್ಲ. ವೈಭವ ಕಟ್ಟಡಗಳ ನಿರ್ಮಾಣಕ್ಕೆ ಹೆಸರಾದ ಷಹಜಹಾನನ ಕಾಲವಂತೂ ಸುವರ್ಣಯುಗವಾಗಿತ್ತು. ಮೊಗಲರ ಕಾಲದ ಸಂಸ್ಕೃತಿ ವೈಭವ ಇಂತಿದೆ.

### 1. ಶಿಕ್ಷಣ:

ಮಧ್ಯಯುಗದಲ್ಲಿ ಜಗತ್ತಿನ ಯಾವ ಸರ್ಕಾರವೂ ಶಿಕ್ಷಣವು ತನ್ನ ಆದ್ಯ ಕರ್ತವ್ಯವೆಂದು ಭಾವಿಸಿರಲಿಲ್ಲ. ಅದೊಂದು ಖಾಸಗಿ ವ್ಯವಹಾರವಾಗಿತ್ತು. ಅಂತೆಯೇ ಮೊಗಲರ ಕಾಲದಲ್ಲಿ ಶಿಕ್ಷಣಕ್ಕೆ ಪ್ರತ್ಯೇಕ ಇಲಾಖೆ ಇರಲಿಲ್ಲ. ಶಿಕ್ಷಣ ತೀರಾ ಸಂಪ್ರದಾಯವಾಗಿತ್ತು. ಮೊಗಲ್ ದೊರೆಗಳ ವಿದ್ಯೆಗೆ ಪ್ರೋತ್ಸಾಹಿಸಿದರು. ಪ್ರತಿ ಮಸೀದಿಗೆ ಹೊಂದಿಕೊಂಡಂತೆ ಒಂದೊಂದು **ಮುಕ್ತಾಬ್** (ಪ್ರಾಥಮಿಕ ಶಾಲೆ) ಮತ್ತು **ಮದರಸ** (ಕಾಲೇಜು)ಗಳು ಇರುತ್ತಿದ್ದವು. ಅಲ್ಲಿ ಮುಲ್ಲಾಗಳು ಅರೆಬಿಕ್, ಪರ್ಶಿಯನ್, ಉರ್ದುಭಾಷೆ ಹಾಗೂ ಕುರಾನ್, ಷರಿಯತ್, ತತ್ವಶಾಸ್ತ್ರ ಧರ್ಮಶಾಸ್ತ್ರ, ಷಾನಾಮ, ಕಾವ್ಯ ಮೊದಲಾದ ವಿಷಯಗಳಲ್ಲಿ ಬೋಧಿಸುತ್ತಿದ್ದರು. ಹಿಂದೂಗಳ ಶಿಕ್ಷಣವು ಪಾಠಶಾಲ ಮತ್ತು ವಿದ್ಯಾಪೀಠಗಳಲ್ಲಿ ನಡೆಯುತ್ತಿತ್ತು. ಅಲ್ಲಿ ವ್ಯಾಕರಣ, ತರ್ಕಶಾಸ್ತ್ರ, ಇತಿಹಾಸ,



downloaded from: www.kpscvaani.com

ವೈದ್ಯಶಾಸ್ತ್ರ ವೇದ, ಉಪನಿಷತ್, ಪುರಾಣ, ಜ್ಯೋತಿಷ್ಯ, ಖಗೋಳಶಾಸ್ತ್ರ, ಗಣಿತ, ನ್ಯಾಯಶಾಸ್ತ್ರ, ಮೊದಲಾದ ವಿಷಯಗಳಲ್ಲಿ ಬೋಧಿಸಿಲಾಗುತ್ತಿತ್ತು. ಮುಸ್ಲಿಂರಿಗೆ ಪರ್ಶಿಯನ್ ಭಾಷೆ ಮತ್ತು ಹಿಂದೂಗಳಿಗೆ ಸಂಸ್ಕೃತ ಭಾಷೆ ಶಿಕ್ಷಣ ಮಾಧ್ಯಮವಾಗಿತ್ತು. ಮೊಗಲ್ ಬಾದಷಹರು, ಕುಲೀನರು, ಅಧಿಕಾರಿಗಳು, ಶಿಕ್ಷಣ ಸಂಸ್ಥೆಗಳಿಗೆ, ವಿದ್ವಾಂಸರಿಗೆ ಹಣ ಹಾಗೂ ಭೂಮಿಯನ್ನು ದಾನ ಮಾಡುತ್ತಿದ್ದರು. ದೆಹಲಿ, ಅಗ್ರ, ಫತೇಪುರ್ ಸಿಕ್ರಿ, ಲಾಹೋರ್, ಲಖ್ನೋ, ಜಾನ್‌ಪುರ, ಸಿಯಾಲ್‌ಕೋಟೆ, ಮುಲ್ತಾನ, ಥಟ್ಟಾ ಬೀದರ್, ಬಿಜಾಪುರ, ಅಹಮದ್‌ನಗರ, ಢಾಕಾಗಳು ಮುಸ್ಲಿಂ ಶಿಕ್ಷಣ (ಮದರಸ) ಕೇಂದ್ರಗಳಾಗಿದ್ದವು. ಬನಾರಸ್, ಮಥುರಾ, ನಳಂದ ತಕ್ಷಶಿಲಾ, ನಾಡಿಯಾ, ಮಿಥಿಲ, ಪೈತಾನ್, ಶ್ರೀನಗರ, ಪ್ರಯಾಗ, ಜೈಪುರ, ಅಯೋಧ್ಯೆಗಳು ಹಿಂದೂಗಳ ವಿದ್ಯಾಪೀಠ ಕೇಂದ್ರಗಳಾಗಿದ್ದವು. ಶಿಕ್ಷಣದಲ್ಲಿ ವಿಜ್ಞಾನ ವಿಷಯಗಳ ಅಧ್ಯಯನಕ್ಕೆ ಹೆಚ್ಚಿನ ಗಮನ ನೀಡಿರಲಿಲ್ಲ.

ಮೊಗಲ್ ಚಕ್ರವರ್ತಿಗಳು ಶಿಕ್ಷಣ ಪಕ್ಷಪಾತಿಗಳೂ, ವಿದ್ಯಾಭಿಮಾನಿಗಳು ಆಗಿದ್ದರು. ಬಾಬರ್‌ನು ಸ್ವತಃ ವಿದ್ವಾಂಸನಾಗಿದ್ದು ಸಾಹಿತ್ಯಪ್ರಿಯನಾಗಿದ್ದನು. ಆತ ದೆಹಲಿಯಲ್ಲಿ ಒಂದು ಮದರಸವನ್ನು ಸ್ಥಾಪಿಸಿದನು. ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಬಾಬರ್ ಒಂದು ಪ್ರತ್ಯೇಕ ಇಲಾಖೆಯನ್ನು ತೆರೆದನು. ಹುಮಾಯುನ್ ಸಹ ದೆಹಲಿಯಲ್ಲಿ ಮದರಸನ್ನು ಸ್ಥಾಪಿಸಿದನಲ್ಲದೆ ಷೇರ್‌ಷಹನ **ಪುರಾನಖಿಲ್ಲಾ** ಕಟ್ಟಡವನ್ನು ಗ್ರಂಥಾಲಯವಾಗಿ ಪರಿವರ್ತಿಸಿದನು.

ಷೇರ್‌ಷಹ **ನರಸಾಲ್** ಎಂಬಲ್ಲಿ ಒಂದು ಮದರಸ ನಿರ್ಮಿಸಿ ಸಾಮಾನ್ಯ ಮುಸ್ಲಿಂರಿಗೂ ಶಿಕ್ಷಣ ವ್ಯವಸ್ಥೆ ಮಾಡಿದನು. ದೆಹಲಿಯ ಹುಮಾಯನ್ ಗೋರಿಯನ್ನು ಮದರಸ ಅಗಿ ಪರಿವರ್ತಿಸಲಾಯಿತು. ಅಕ್ಬರ್‌ನು ಶಿಕ್ಷಣ ಕ್ಷೇತ್ರದಲ್ಲಿ ನವಯುಗವನ್ನೇ ಆರಂಭಿಸಿದನು. ಅವನು ತನ್ನ ಆಡಳಿತವನ್ನು ಆವರಿಸಿದ್ದ ಇಸ್ಲಾಮಿಕ್ ಉಕ್ಕಿನ ಪರದೆಯನ್ನು ಹರಿದು ಹಾಕಿ ಜಾತ್ಯಾತೀತ ಶಿಕ್ಷಣ ಪದ್ಧತಿಯನ್ನು ರೂಪಿಸಿದನು. ಅವನು ಫತೇಪುರ್ ಸಿಕ್ರಿ, ಅಗ್ರಗಳಲ್ಲಿ ಕಾಲೇಜುಗಳನ್ನು ಸ್ಥಾಪಿಸಿದನು. ಪ್ರಥಮ ಬಾರಿಗೆ ಆತ ಹಿಂದೂಗಳಿಗೆ ಮದರಸಗಳಿಗೆ ಪ್ರವೇಶ ದೊರಕಿಸಿಕೊಟ್ಟನು. ಅನೇಕ ಪಾಠಶಾಲೆಗಳನ್ನು, ವಿದ್ಯಾಪೀಠಗಳನ್ನು ತೆರೆದನು. ಪರಿಣಾಮವಾಗಿ ಪರ್ಶಿಯನ್ ಭಾಷೆ ಕಲಿತ ಹಿಂದೂ ವಿದ್ವಾಂಸರು ಸಂಸ್ಕೃತ ಗ್ರಂಥಗಳನ್ನು ಪರ್ಶಿಯನ್‌ಗೆ ಅನುವಾದಿಸಿದರು. ಮುಸ್ಲಿಂರು ಸಹ ಸಂಸ್ಕೃತ ಕಲಿತರು. **ಅಕ್ಬರ್ ಅಬುಲ್ ಫಜಲ್ ನೇತೃತ್ವದಲ್ಲಿ ಆಗ್ರಾದಲ್ಲಿ 24000 ಗ್ರಂಥಗಳುಳ್ಳ ಒಂದು ಗ್ರಂಥ ಭಂಡಾರವನ್ನು, ಒಂದು ಅನುವಾದ ಇಲಾಖೆಯಲ್ಲಿ ಸ್ಥಾಪಿಸಿದನು**. ಅಕ್ಬರ್‌ನ ಸಾಕು ತಾಯಿ ಮೆಹಂಅನಾಗ ದೆಹಲಿಯಲ್ಲಿ ಮದರಸವೊಂದನ್ನು ನಿರ್ಮಿಸಿದಳು. ಅಕ್ಬರ್ ಸ್ಥಾಪಿಸಿದ ಸಿಕ್ರಿಯ ಇಬಾದತ್‌ಖಾನ್ ಸದಾ ಪಂಡಿತರಿಂದ ತುಂಬಿರುತ್ತಿತ್ತು.

ಶಿಕ್ಷಣ ಪ್ರೇಮಿಯಾದ ಜಹಂಗೀರ್ ಮದರಸಗಳ ಜೀರ್ಣೋದ್ಧಾರಕ್ಕಾಗಿ ಶ್ರಮಿಸಿದನು. ಅವನು ವಾರಸುದಾರರಿಲ್ಲದ ಸತ್ತವರ ಆಸ್ತಿಯನ್ನು ಮದರಸಗಳ ಉದ್ದಾರಕ್ಕಾಗಿ ಬಳಸಬೇಕೆಂದು ಆಜ್ಞೆ ಮಾಡಿದ್ದನು. ಷಾಜಹಾನ್‌ಗೂ ವಾಚನಾಭಿರುಚಿ ಇದ್ದಿತು. ರಾತ್ರಿವೇಳೆ ಅವನು ಸ್ವಲ್ಪಕಾಲವನ್ನು ಅಧ್ಯಯನದಲ್ಲಿ ಕಳೆಯುತ್ತಿದ್ದನು. ಅವನು ದೆಹಲಿಯ ಜಾಮೀ ಮಸೀದಿ ಬಳಿ ಒಂದು ಮದರಸವನ್ನು ನಿರ್ಮಿಸಿದನು. ಆತನ ಗುಜರಾತಿ ಫೈಜಿಸಾಪ್ ಮದರಸದಲ್ಲಿ 4600 ಗ್ರಂಥಗಳಿದ್ದವು. ಆತ ಪಂಡಿತರಿಗೆ ವಿಶೇಷ ಬಹುಮಾನಗಳನ್ನು ನೀಡಿದನು.



downloaded from: www.kpscvaani.com

ದಾರಾ–ಉಲ್–ಬುಖಾ ಎಂಬ ಶಿಕ್ಷಣ ಸಂಸ್ಥೆಯನ್ನು ರಿಪೇರಿ ಮಾಡಿಸಿದನು. ಅವನ ಮಗ **ದಾರಾಷೂಕೂ** ವಿದ್ಯಾಭಿಮಾನಿಯಾಗಿದ್ದು ಅರೆಬಿಕ್, ಪರ್ಶಿಯನ್ ಮತ್ತು ಸಂಸ್ಕೃತಗಳಲ್ಲಿ ಪಂಡಿತನಾಗಿದ್ದನು. ಮೊಗಲ್ ವಂಶ ಭಾರತಕ್ಕೆ ನೀಡಿದ ಶ್ರೇಷ್ಠ ವಿದ್ವಾಂಸನೆಂದರೆ ದಾರಾಷೂಕು.

ಶಿಕ್ಷಣ ಪೋಷಕನಾದ ನತದೃಷ್ಟ ಅವರ ಗೋರಿಯನ್ನು ಕಂಡ ಸರ್ ವಿಲಿಯಂ ಸ್ಲೀಮನ್ಸ್ **"ದಾರಶ ಮೊಗಲ್ ಸಿಂಹಾಸನ ಒಡೆಯನಾಗಿದ್ದರೆ ಭಾರತದ ವಿದ್ಯಾಭ್ಯಾಸದ ಗತಿಯೇ ಬದಲಾಗುತ್ತಿತ್ತು ಮತ್ತು ಆ ಮೂಲಕ ಭಾರತದ ಅದೃಷ್ಟವೇ ಬಲಾಗುತ್ತಿತ್ತು"** ಎಂದು ಹೇಳಿದ್ದಾರೆ. ಹಿಂದೂಗಳ ಶಿಕ್ಷಣ ವಿರೋಧಿಯಾದ ಔರಂಗಜೇಬ್‌ನು ಅನೇಕ ಹಿಂದೂ ಪಾಠಶಾಲೆಗಳನ್ನು ಮುಚ್ಚಿಸಿದನು. ಕೇವಲ ಮುಸ್ಲಿಂ ಶಿಕ್ಷಣ ಸಂಸ್ಥೆಗಳಿಗೆ ಮಾತ್ರ ಎಲ್ಲಾ ರೀತಿಯ ಪ್ರೋತ್ಸಾಹ ಕೊಟ್ಟನು. ಅವನ ಕಾಲದಲ್ಲಿ ಗ್ವಾಲಿಯಾರ್. ಸಿಯಾಲ್‌ಕೋಟ್, ಅಂಬಾಲ, ಥಾನೇಶ್ವರಗಳಲ್ಲಿ ಮದರಸಗಳನ್ನು ನಿರ್ಮಿಸಲಾಯಿತು. ಇಸ್ಲಾಮಿಕ್ ಶಿಕ್ಷಣ ಪದ್ಧತಿಯಲ್ಲಿ ತತ್ವಶಾಸ್ತ್ರ ಅಧ್ಯಯನ ಮಾಡಿದವರಿಗೆ ಫಜಿಲ್, ಧರ್ಮಶಾಸ್ತ್ರ ಅಧ್ಯಯನ ಮಾಡಿದವರಿಗೆ **ಆಲಿಂ** ಮತ್ತು ಸಾಹಿತ್ಯ ಅಧ್ಯಯನ ಮಾಡಿದವರಿಗೆ **ಕಬಿಲ್** ಎಂಬ ಪದವಿಗಳನ್ನು ನೀಡಲಾಗುತ್ತಿತ್ತು.

**ಸ್ತ್ರೀ ಶಿಕ್ಷಣ:** ಮೊಗಲರ ಕಾಲದಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೂ ಅವಕಾಶ ಇದ್ದಿತು. ಪರ್ದಾ ಪದ್ಧತಿ ಕಠಿಣವಾಗಿ ರೂಢಿಯಲ್ಲಿದ್ದುದ್ದರಿಂದ ಶ್ರೀಮಂತ ಮನೆತನದ ಸ್ತ್ರೀಯರು ತಮ್ಮ ವಾಸಗೃಹಗಳಲ್ಲೇ ಇದ್ದು ಅಧ್ಯಯನ ನಿರತರಾಗಿದ್ದರು. ಶ್ರೀಮಂತರು ತಮ್ಮ ಹೆಣ್ಣು ಮಕ್ಕಳಿಗೆ ತಮ್ಮ ಮನೆಯಲ್ಲೇ ಪಾಠ ಹೇಳುವ ಶಿಕ್ಷಕರನ್ನು ನೇಮಿಸಿಕೊಂಡಿದ್ದರು. ಅಕ್ಬರ್ ತನ್ನ ಅರಮನೆಯಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಒಂದು ಶಾಲೆ ತೆರೆದಿದ್ದನು. ರಾಜಕುಮಾರಿಯರಿಗೆ ಅರಮನೆಯಲ್ಲೇ ಶಿಕ್ಷಣ ದೊರೆಯುತ್ತಿತ್ತು. ರಾಜ ಮನೆತನದ ಕೆಲವು ರಾಣಿಯರು ಸುಶಿಕ್ಷಿತರೂ. ಪಂಡಿತರೂ ಆಗಿದ್ದರೂ. ಉದಾ:ಗೆ **ಹುಮಾಯುನ್ ನಾಮ**ದ ಕರ್ತೃ ಹಾಗೂ ಬಾಬರನ ಮಗನಾದ **ಗುಲ್‌ಬದನ್‌ಬೇಗಂ,** ದೊಡ್ಡ ವಿದ್ಯಾವಂತೆಯಾಗಿದ್ದಳು. ಅದೇ ರೀತಿ ಸಲಿಮಾ ಸುಲ್ತಾನ್, ಅಕ್ಬರ್‌ನ ರಾಣಿ, ನೂರ್‌ಜಹಾನ್, ಮಮ್ತಾಜ್ ಮಹಲ್, ಷಾಜಹಾನ್‌ನ ಮಗಳಾದ **ಜಹನಾರ ಬೇಗಂ** ಔರಂಗಜೇಬ್‌ನ ಮಗಳಾದ ಜೆಜುನ್ನೀಸರು ವಿದ್ವಾಂಸರಾಗಿ ಅನೇಕ ಕವನಗಳನ್ನು ರಚಿಸಿದರು. ಜೆಬುನ್ನೀಸ ಒಂದು ಗ್ರಂಥಾಲಯ ತೆರೆದಳು. ಒಟ್ಟಾರೆ ಮಧ್ಯಯುಗ ಸ್ತ್ರೀ ಉನ್ನತ ಶಿಕ್ಷಣವನ್ನು ಉಪೇಕ್ಷಿಸಲಾಗಿತ್ತು.

## 2. ಸಾಹಿತ್ಯ:

ಸಾಹಿತ್ಯಾಭಿಮಾನಿಗಳಾದ ಮೊಗಲರ ಅನೇಕ ಚರಿತ್ರೆಕಾರರಿಗೆ, ಪಂಡಿತರಿಗೆ, ಕವಿಗಳಿಗೆ ಆಶ್ರಯ ನೀಡಿ ಸಾಹಿತ್ಯವನ್ನು ಪೋಷಿಸಿದರು. ಅವರ ಕಾಲದಲ್ಲಿ **ಪರ್ಶಿಯನ್** ಮತ್ತು **ಹಿಂದಿ ಸಾಹಿತ್ಯ ಶ್ರೀಮಂತಗೊಂಡಿತು. ಪರ್ಶಿಯನ್ ಮೊಗಲರ ಆಡಳಿತ ಭಾಷೆಯಾಗಿತ್ತು.** ಗುಪ್ತರ ಕಾಲ ಸಂಸ್ಕೃತ ಸಾಹಿತ್ಯದಲ್ಲಿ ಕ್ಲಾಸಿಕಲ್‌ಯುಗವಾದಂತೆ ಮೊಗಲರ ಕಾಲವು ಪರ್ಶಿಯನ್ ಸಾಹಿತ್ಯದ ನವೋದಯ ಕಾಲವಾಗಿತ್ತು. ಸಾಹಿತ್ಯ ಪ್ರಗತಿಯ ಅವರ ಕಾಲವನ್ನು **ರೋಮಿನ ಆಗಸ್ಟಸ್ ಸೀಸರ್** ಹಾಗೂ ಇಂಗ್ಲೆಂಡಿನ **ಎಲಿಜಬೆತ್‌ಗಳ ಆಳ್ವಿಕೆಗೂ** ಹೋಲಿಸಲಾಗಿದೆ. ಮೊಗಲರ



downloaded from: www.kpscvaani.com

ಕಾಲ ಭಾರತದಲ್ಲಿ 2ನೇ ಕ್ಲಾಸಿಕಲ್ ಯುಗವಾಗಿತ್ತು. ಮೊಗಲರ ಕಾಲದ ಸಾಹಿತ್ಯವನ್ನು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.

## ಮೊಗಲ್ ಸಾಹಿತ್ಯ

- ಪರ್ಶಿಯನ್ ಸಾಹಿತ್ಯ
  - ಆತ್ಮ ಚರಿತ್ರೆಗಳು
  - ಐತಿಹಾಸಿಕ ಸಾಹಿತ್ಯ
  - ಅನುವಾದಗಳು
  - ಕಾವ್ಯಗಳು
- ಹಿಂದಿ ಸಾಹಿತ್ಯ
- ಸಂಸ್ಕೃತ ಸಾಹಿತ್ಯ
- ಉರ್ದು ಸಾಹಿತ್ಯ

GNANADHARE IAS ACADEMY

**ಪರ್ಶಿಯನ್ ಸಾಹಿತ್ಯ** :

ಮೊಗಲರ ಕಾಲ ಪರ್ಶಿಯನ್ ಸಾಹಿತ್ಯದ ಶ್ರೀಮಂತ ಗಣಿಯಾಗಿತ್ತು. ಅಕ್ಬರ್‌ನ ಕಾಲವಂತೂ ಪರ್ಶಿಯನ್ ಸಾಹಿತ್ಯದ ಪುನರುತ್ಥಾನ ಕಾಲವಾಗಿತ್ತು. ಐನ್-ಎ-ಅಕ್ಬರಿ ಪರ್ಶಿಯನ್ ಕವಿಗಳ ಪಟ್ಟಿ ನೀಡುತ್ತದೆ. ಅದರಲ್ಲಿ ಕವಿಪುಂಗವ ಅಬುಲ್ ಫೈಜಿ ಶ್ರೇಷ್ಠ ಅಮೀರ್ ಖುಸ್ರು ನಂತರ ಭಾರತ ಇಂತಹ ಶ್ರೇಷ್ಠ ಕವಿಯನ್ನು ಕಂಡಿರಲಿಲ್ಲ. ಪರ್ಶಿಯನ್ ಸಾಹಿತ್ಯವನ್ನು ಆತ್ಮಚರಿತ್ರೆಗಳು, ಐತಿಹಾಸಿಕ ಸಾಹಿತ್ಯ, ಅನುವಾದಗಳು ಮತ್ತು ಕಾವ್ಯಗಳೆಂದು 4 ಭಾಗಗಳಾಗಿ ವಿಂಗಡಿಸಲಾಗಿದೆ.

### a) ಆತ್ಮ ಚರಿತ್ರೆಗಳು:

**'ಆತ್ಮಕಥನಗಳ ರಾಜ'** ಎಂದೇ ಹೆಸರಾದ ಬಾಬರ್ ತುರ್ಕಿಭಾಷೆಯಲ್ಲಿ ತನ್ನ ಆತ್ಮಕಥನವಾದ **ಬಾಬರ್‌ನಾಮ** ಅಥವಾ **ತುಜಕ್-ಇ-ಬಾಬರಿ**ಯನ್ನು ಬರೆದನು. **ಬಾಬರ್‌ನಾಮ ಇಡೀ ಏಷ್ಯಾದಲ್ಲೇ ಶ್ರೇಷ್ಠ ಆತ್ಮಚರಿತ್ರೆ ಎಂದು ದಾಖಲಾಗಿದೆ.** ಇದು ಪರ್ಶಿಯನ್, ಫ್ರೆಂಚ್, ಇಂಗ್ಲೀಷ್ ಭಾಷೆಗಳಿಗೆ ಅನುವಾದಗೊಂಡಿದೆ. **ಎರಿಸ್ಕನ್‌ನು ಫ್ರೆಂಚ್ ಭಾಷೆಗೂ, ಬೆವರಿಡ್ಜ್ ಇದನ್ನು ಇಂಗ್ಲೀಷ್‌ಗೂ ಭಾಷಾಂತರಿಸಿದರು.** ಬಾಬರ್‌ನ ಮಗಳಾದ ಗುಲ್‌ಬದನ್ ಬೇಗಂ ಹುಮಾಯುನ್‌ನ ಆತ್ಮಕಥನವಾದ **ಹುಮಾಯುನ್‌ನಾಮ**ವನ್ನು ಬರೆದಳು. ಜಹಂಗೀರ್ ತನ್ನ ಆತ್ಮಕಥನ **ತುಜಲಕ್-ಇ-ಜಹಂಗೀರಿ**ಯನ್ನು ಬರೆದನು. ಅಪೂರ್ಣವಾದ. ಅದನ್ನು ಮಹಮದ್ ಹಾದಿ ಪೂರ್ಣಗೊಳಿಸಿದನು. ಅಬುಲ್‌ಫಜಲ್‌ನ **ಅಕ್ಬರ್ ನಾಮ,** ಅಬ್ದುಲ್ ಹಮೀದ್ ಲಾಹೋರಿಯ **ಬಾದಷಹನಾಮ**ಗಳು ಆತ್ಮಕಥನದ ಸಾಲಿಗೆ ಸೇರುತ್ತವೆ. ಬಾಬರ್‌ನ ಅಸ್ಥಾನದಲ್ಲಿ ಘಿಯಾಸುದ್ಧೀನ್, ಮೀರ್ ಮಹಮದ್ ಖಿಂಢಾ, ಶಹಾಬುದ್ದೀನ್, ಮೀರ್ ಇಬ್ರಾಹಿಂ, ಹುಮಾಯೂನ್ ಆಸ್ಥಾನದಲ್ಲಿ ಖಿಂದಾಮೀರ್, ಅಬ್ದುಲ್ ಲತೀಫ್, ಷೇಕ್‌ಹಸನ್ ಎಂಬ ಕವಿಗಳಿದ್ದರು.



downloaded from: www.kpscvaani.com

### b) ಐತಿಹಾಸಿಕ ಸಾಹಿತ್ಯ:

ಪರ್ಶಿಯನ್ ಸಾಹಿತ್ಯವು ಸಿಂಹಪಾಲು ಐತಿಹಾಸಿಕ ಸಾಹಿತ್ಯವನ್ನು ಒಳಗೊಂಡಿದೆ. ಗದ್ಯರೂಪದಲ್ಲಿ ಪರ್ಶಿಯನ್ ಭಾಷೆಯಲ್ಲಿ ರಚನೆಯಾದ ಪ್ರಮುಖ ಐತಿಹಾಸಿಕ ಕೃತಿಗಳು ಇಂತಿವೆ. ಅಕ್ಬರನ್ ಆಸ್ಥಾನದ ಪ್ರಸಿದ್ಧ ಚರಿತ್ರೆಕಾರ, ಕವಿ, ವಿಮರ್ಶಕನಾದ **ಅಬುಲ್‌ಫಜಲ್‌ನು ಐನಿ ಅಕ್ಬರಿ** ಮತ್ತು **ಅಕ್ಬರ್‌ನಾಮ** ಗಳನ್ನು ರಚಿಸಿದನು. ಬ್ಲೂಚ್ ಬರೆದಂತೆ **"ದೆಹಲಿಯು ಅಮೀರ್ ಖುಸ್ರು ನಂತರ ಅಬುಲ್‌ಫಜಲ್ ನಂತಹ ಶ್ರೇಷ್ಠ ಕವಿಯನ್ನು ಇಸ್ಲಾಂ ಭಾರತ ಸೃಷ್ಟಿಸಲಿಲ್ಲ"** ಫಜಲ್‌ನು ರಖಿತ್ ಮತ್ತು ಇನ್‌ಷಾ ಎಂಬ ಅಕ್ಬರ್‌ನ ಖಾಸಗಿ ಪತ್ರಗಳನ್ನು ಸಂಗ್ರಹಿಸಿದನು. ಅದೇ ರೀತಿ ಅಕ್ಬರ್‌ನು ಆಶ್ರಯದಲ್ಲಿ ನಿಜಾಮುದ್ದೀನ್ ಅಹಮದ್ **ತಬಕತ್–ಇ–ಅಕ್ಬರಿ (ಯಟು-ು-ಂಞಾಛಟಿಡು),** ಮುಲ್ಲ ದಾವೂದ್‌ನ **ತಾರೀಖ್–ಇ–ಅಲ್ಫಿ,** ಬದೌನಿಯ **ಮುಂತಾಕಬ್–ಉಲ್–ತವಾರಿಕ್,** ಪ್ಯೆಜಿ–ಸರ್–ಹಿಂದಿಯ **ಅಕ್ಬರ್‌ನಾಮ,** ಗುಲ್‌ಬದನ್ ಬೇಗಂಳ **ಹುಮಾಯುನ್‌ನಾಮ,** ಜಹನಾರ ಬೇಗಂಳ **ತಜಕಿರಾತ್–ಉಲ್‌ವಾಕಿಯಾತ್,** ಅಬ್ಬಾಸ ಸರ್ವಾನಿಯ ಅಹ್ಮದ್ ಯಾದಗರ್‌ನ **ತಾರೀಖ್–ಇ–ಸಲಾತಿನ್–ಅಫಘಾನಿ, ಅಬ್ದುಲ್‌ಬಾಕಿಯ ಮಾಸಿರ್–ಇ–ಹಮಿಗಳು** ರಚನೆಯಾದವು.

ಜಹಂಗೀರ್‌ನ ಕಾಲದಲ್ಲಿ ಜಹಂಗೀರನ **ತುಜಕ್–ಇ–ಜಹಂಗೀರಿ,** ಮುತ್ಮಮದ್‌ಖಾನ್‌ನ ಇಕ್ಬಾಲ್‌ನಾಮ–ಇ–ಜಹಂಗಿರಿ, ಕಮ್‌ಗರ್‌ಖಾನ್‌ನ ಮಾಸಿರ್–ಎ–ಜಹಾಂಗೀರಿ, ನೂರುದ್ದೀನ್‌ನ **ಖಕಿಮಿಯ ಆತ್‌ಲಕ್–ಇ–ಜಹಂಗೀರಿಗಳು** ರಚನೆಗೊಂಡವು. ಷಾಜಹಾನ್ ಆಸ್ತಾನದ ಚರಿತ್ರೆಕಾರರಾದ ಮಹಮದ್ ಸಲಿಹ್‌ನ ಷಹಜಹಾನ್ ನಾಮ, **ಅಬ್ದುಲ್ ಹಮೀದ ಲಾಹೋರಿ (ಬಾದಷಹನಾಮ), ಅಮೀನ್‌ಯ್ ಖಾಜಾನಿ (ಬಾದಷಹನಾಮ), ಇನಾಯಿತ್‌ಖಾನನ (ಷಾಜಹಾನ್‌ನಾಮ), ಜಹನ ಅರಳ ಮುನಿತ್–ಆಲ್–ಅರವಡ್, ಮಹಮದ್ ಸಾಲಿಹ್ (ಅಮಲ್–ಏ–ಸಾಲಿಹ್)** ಎಂಬ ಕೃತಿಗಳು ರಚಿಸಿದರು. ಷಾಜಹಾನ್‌ನ ಹಿರಿಯ ಮಗ ದಾರಾಷೂಕು ಪರ್ಶಿಯನ್, ಅರೆಬಿಕ್ ಮತ್ತು ಸಂಸ್ಕೃತಗಳಲ್ಲಿ ಶ್ರೇಷ್ಠ ಪಂಡಿತನಾಗಿದ್ದನು. ಅವನು ಅನೇಕ ಮುಸ್ಲಿಂ ಸೂಫಿ ಸಂತರ ಚರಿತ್ರೆಗಳನ್ನು ರಚಿಸಿದನು. **ಮಜಂ–ಉಲ್–ಬರಕೈನ್, ಸಗಿನತ್–ಉಲ್–ಔಲಿಯಾ, ಸಕಿನಲ್–ಆಲ್–ಔಲಿಯಾ** ಮುಖ್ಯವಾದುದು. ದಾರಾನು ಉಪನಿಷತ್, ಭಗವದ್ಗೀತೆ, ಯೋಗಶಾಸ್ತ್ರಗಳನ್ನು ಪರ್ಶಿಯನ್‌ಗೆ ಅನುವಾದಿಸಿದನು. ಅದೇ ರೀತಿ ಷಾಹಜಹಾನ್ ಆಶ್ರಯದಲ್ಲಿ ಮಹಮದ್ ಸಲೇಹ್‌ನು ಅಮಲ್–ಏ–ಸಾಲಿಹ್ ಎಂಬ ಕೃತಿಯನ್ನು ರಚಿಸಿದನು. ಔರಂಗಜೇಬ್‌ನ ಕಾಲದಲ್ಲಿ ಪರ್ಶಿಯನ್ ಸಾಹಿತ್ಯ ಅವನತಿಗೊಂಡಿತು. ಅವನು ಇತಿಹಾಸ ಲೇಖನಾ ಕಲೆಯನ್ನು ನಿಷೇಧಿಸಿದನು. ಆದರೂ ಕೆಲವರು ಅವನ ಕಣ್‌ತಪ್ಪಿಸಿ ಸಾಹಿತ್ಯ ರಚಿಸಿದರು. ಉದಾ:ಗೆ ಖಾಫಿಖಾನ್‌ನ **ಮುಂತಾಕಬ್–ಉಲ್–ಲುಬಾಬ್,** ಮಹಮದ್ ಸಾಖಿನ ಮಾಸಿರ್ ಆಲಮ್‌ಗೀರಿ, ಮಿರ್ಜಾ ಮಹಮದ್ ಖಾಜಿಂನ ಆಲಮ್‌ಗೀರ್‌ನಾಮ, ಭೀಮಸೇನನ ನುಷ್ಕ್–ಇ–ದಿಲ್‌ಕುಷ್, ಈಶ್ವರಿದಾಸನ ಫತುಹತ್–ಇ–ಆಲಮ್‌ಗಿರಿ, ಸುಜನರಾಯ್‌ಕತ್ರಿಯ ಖುಲಾಸಾತ್–ಉತ್–ತವಾರಿಕ್ ಎಂಬ ಐತಿಹಾಸಿಕ ಗ್ರಂಥಗಳು ರಚನೆಯಾದವು. ಔರಂಗಜೇಬ್‌ನ ಕಾಲದಲ್ಲಿ ಪತ್ವಾ–ಇ–ಆಲಂಗೀರ್ ಎಂಬ ಕಾನೂನು ಗ್ರಂಥ ರಚನೆಯಾಯಿತು. ನಿಮತ್ ಅಲಿ ಖಾನ್ ವಾಕಿಯಾ–ಇ–ಹೈದರಾಬಾದ್ ಎಂಬ ಕೃತಿ ರಚಿಸಿದನು. **ಮಿರ್ಜಾ ಮಹಮ್ಮದ್ ಖಾಜಿಂನ**




downloaded from: www.kpscvaani.com

**ಆಲಂಗೀರ್ ನಾಮ, ಮಹಮದ್ ಸಾಕಿಯ ಮಾಸಿರ್–ಇ–ಆಲಂಗೀರ್, ಸುರ್ಜನ ರಾಯ ಖತಿಯ ಖುಲಾಸತ್–ಉಲ್–ತವಾರಿಕ್, ಭಿಮಸೇನ–ನಸ್ಕ್–ಇ–ದಿಲ್‌ಕುಷ್‌ಗಳು ರಚನೆಯಾದವು, ಔರಂಗಜೇಬನ ಮಗಳಾದ ಜುಬ್ಬುನ್ನಿಸಾಳು ದಿವಾನ್–ಇ–ಮಖಜಿ ಎಂಬ ಕೃತಿ ಬರೆದಳು ಅಕ್ಬರ್‌ನು ಅನಕ್ಷರಸ್ಥನಾದರೂ ಸಹಾ ಪಂಡಿತರೊಡನೆ ಕಾಲ ಕಳೆಯುತ್ತಿದ್ದನು.** ಅಕ್ಬರ್‌ನ ಆಶ್ರಯದಲ್ಲಿ 100 ವರ್ಷಗಳ ಇಸ್ಲಾಂ ಚರಿತ್ರೆಯನ್ನು ರಚಿಸಲಾಯಿತು.

### c) ಅನುವಾದಗಳು:

ಅಕ್ಬರ್‌ನು ಕಾಲದಲ್ಲಿ ಅನೇಕ ಸಂಸ್ಕೃತ ಗ್ರಂಥಗಳು ಪರ್ಶಿಯನ್ ಭಾಷೆಗೆ ಅನುವಾದಗೊಂಡವು, ಅಕ್ಬರ್ ಅನುವಾದಕ್ಕೆ ಒಂದು ಪ್ರತ್ಯೇಕ ಇಲಾಖೆಯನ್ನೇ ತೆರೆದಿದ್ದನು. ಅವನ ಅರಮನೆಯಲ್ಲಿ 24000 ಗ್ರಂಥಗಳುಳ್ಳ ಒಂದು ಗ್ರಂಥ ಭಂಡಾರವಿತ್ತು. ಅಬುಲ್‌ಫೈಜಿ ಅದರ ಗ್ರಂಥಪಾಲಕನಾಗಿದ್ದನು. ಪರ್ಶಿಯನ್‌ಗೆ ಅನುವಾದಗೊಂಡ ಕೃತಿಗಳು ಇಂತಿವೆ.

| ಕವಿಗಳು | ಕೃತಿಗಳು |
|---|---|
| ಬದೌನಿಯಿಂದ | ರಾಮಾಯಣ, ಮಹಾಭಾರತ (ರಜ್‌ನಾಮ) |
| ಅಬುಲ್ ಫೈಜಿಯಿಂದ | ತಾರೀಖ್–ಇ–ರಸೀದಿ |
| ಅಬುಲ್ ಫಜಲ್‌ನಿಂದ | ಪಂಚತಂತ್ರ |
| ಅಬುಲ್ ಫೈಜಿಯಿಂದ | ಲೀಲಾವತಿ, ನಳದಮಯಂತಿ |
| ಹಾಜಿ ಇಬ್ರಾಹಿಂ ಸರ್‌ಹಿಂದಿ | ಅಥರ್ವಣವೇದ |
| ಅಬ್ದುಲ್ ರಹೀಂಖಾನ್ –ಇ– ಖಾನ್‌ನಿಂದ | ಬಾಬರ್‌ನಾಮ |
| ರಾಜ ತೋದರ ಮಲ್ | ಭಾಗವತ ಪುರಾಣ |
| ಇಬನ್ ಹರ್‌ಕಿಶನ್ | ಪ್ರಬೋಧ ಚಂದ್ರೋದಯ |
| ಮುಲ್ಲಾಷಾ ಮಹಮದ್‌ನಿಂದ | ಕಲ್ಹಣನ ರಾಜ ತರಂಗಿಣಿ |
| ಮೌಲಾನಾ ಶೈರಿಯಿಂದ | ಹರಿವಂಶ |
| ತೋದರಮಲ್‌ನಿಂದ | ಭಾಗವತ ಪುರಾಣ |
| ದಾರಾಷೂಕುನಿಂದ | ಭಗವದ್ಗೀತೆ, ಉಪನಿಷತ್‌ಗಳು, ಯೋಗ, ವಶಿಷ್ಟ |

ಇದೇ ರೀತಿ ಕುರಾನ್ ಮತ್ತು ಬೈಬಲ್‌ಗಳು ಪರ್ಶಿಯನ್ ಭಾಷೆಗೆ ಅನುವಾದಗೊಂಡವು. ಕೆಲವು ಗ್ರೀಕ್ ಮತ್ತು ಅರೆಬಿಕ್ ಕೃತಿಗಳು, ಮೌಲಾನಾ–ಷಾ–ಮಹಮದ್‌ನು ಕಾಶ್ಮೀರ್ ಚರಿತ್ರೆಯನ್ನು ಭಾಷಾಂತರಿಸಿದ. ಕೆಲವು ಗ್ರೀಕ್–ಅರಬ್ಬೀ ಗ್ರಂಥಗಳನ್ನು ಪರ್ಶಿಯನ್‌ಗೆ ಅನುವಾದಿಸಲಾಯಿತು. **ಅಬ್ದುಲ್ ರಹೀಂಖಾನ್–ಇ–ಖಾನಾನನು**



downloaded from: www.kpscvaani.com

**ಬಾಬರ್‌ನಾಮವನ್ನು ತುರ್ಕಿ ಭಾಷೆಯಿಂದ ಪರ್ಶಿಯನ್‌ಗೆ ಅನುವಾದಿಸಿದನು.** ದಾರಾಶೂಕುನ **ಮರ್ಜುಲ್–ಇ–ಬಹ್ರೈನ್** ಕೃತಿ ಹಿಂದೂ–ಇಸ್ಲಾಂ ಧರ್ಮಗಳು ಒಂದೇ ದೇವರನ್ನು ಪಡೆಯುವ 2 ದಾರಿಗಳೆಂದಿದ್ದಾನೆ.

### d) ಕಾವ್ಯಗಳು:

ಹುಮಾಯುನ್‌ನು ಮಾಸ್ನವಿ ರುಬಿಯಾ ಮತ್ತು ಗಜಲ್‌ಗಳನ್ನು ಬರೆದನು. ನೂರ್‌ಜಹಾನ್ ಪರ್ಶಿಯನ್‌ನಲ್ಲಿ ಅನೇಕ ಕೃತಿಗಳನ್ನು ರಚಿಸಿದಳು. ಜೆಬುನ್ನೀಸಳು ದಿವಾನ–ಇ–ಮಕ್ಷಿ ಎಂಬ ಕಾವ್ಯಮಯ ಗ್ರಂಥ ರಚಿಸಿದಳು. ಔರಂಗಜೇಬ್‌ನು ಪರ್ಶಿಯನ್‌ನಲ್ಲಿ ಫತ್ವಾ–ಇ–ಆಲಮ್‌ಗೀರ್ ಎಂಬ ನ್ಯಾಯಶಾಸ್ತ್ರ ಗ್ರಂಥವನ್ನು ಬರೆದನು. ಕಾವ್ಯ ಕೃತಿಗಳಲ್ಲಿ ಘಜಲೀ ಮುಖ್ಯವಾಗಿದ್ದು ಮಹಮದ್ ಹುಸ್ಲೇನ್ ಶ್ರೇಷ್ಠಮಟ್ಟದ ಘಜಲಿಗಳನ್ನು ರಚಿಸಿದನು.

## ಹಿಂದಿ ಸಾಹಿತ್ಯ:

15 ಮತ್ತು 16ನೇ ಶತಮಾನಗಳಲ್ಲಿ ನಡೆದ ಭಕ್ತಿಪಂಥ ಚಳುವಳಿ ಹಿಂದಿ ಸಾಹಿತ್ಯ ರಚನೆಗೆ ಕಾರಣವಾಯಿತು. ಅಕ್ಬರನ ಕಾಲ ಹಿಂದಿ ಪದ್ಯ ಸಾಹಿತ್ಯದ ಸುವರ್ಣಯುಗವಾಗಿತ್ತು. ರಾಮ ಮತ್ತು ಕೃಷ್ಣ ಪಂಥದ ಸಂತರು ಹಿಂದಿಯಲ್ಲಿ ಸಾಹಿತ್ಯ ರಚಿಸಿದರು. ಮಹಾತ್ಮ ಕಬೀರ್‌ರು ಹಿಂದಿಯಲ್ಲಿ **ದೋಹಾ**ಗಳನ್ನು ರಚಿಸಿದರು. ಹಿಂದಿಯಲ್ಲಿ ರಚಿತದ ಮೊದಲ ಮೇರು ಕಾವ್ಯವೆಂದರೆ **ಮಲ್ಲಿಕ್ ಮೆಹಮದ್ ಜಯಿಸಿಯ ಪದ್ಮಾವತ್,** ಇದು ಚಿತ್ತೂರಿನ ರಾಣಿ ಪದ್ಮಾವತಿಯನ್ನು ಕುರಿತಾದುದು. ಅಬ್ದುಲ್ ರಹೀಂಖಾನ್ ರಹೀಂಸ್‌ತಸ್ಯೆ ಎಂದು ಕರೆಯುವ ಹಿಂದಿ ಗೀತೆಗಳನ್ನು ಮಾನಸಿಂಗ್‌ನು ಹಿಂದಿ ಕವಿತೆಗಳನ್ನು ರಚಿಸಿದರು ಅಕ್ಬರ್‌ನ ಕಾಲ ಹಿಂದಿ ಸಾಹಿತ್ಯದ ಸುವರ್ಣಯುಗವಾಗಿತ್ತು. ಅಕ್ಬರ್‌ನ ಆಸ್ಥಾನದಲ್ಲಿ **ತುಳಸಿದಾಸ್, ಸೂರ್‌ದಾಸ್, ರಾಸ್‌ದಾಸ್, ಬೀರಬಲ್, ರಾಜಮಾಸಿಂಗ್, ಭಗವಾನ್‌ದಾಸ್, ಹರಿನಾಥಗಂಜ್, ನರಹರಿ ಅಬ್ದುಲ್‌ರಹೀಂಖಾನ್–ಇ–ಖಾನ್** ಎಂಬ ಹಿಂದಿ ಕವಿಗಳಿದ್ದರು. ಕವಿಪ್ರಿಯ ಎಂಬ ಬಿರುದು ಗಳಿಸಿದ್ದ **ಕವಿಪ್ರಿಯನಾದ ಬೀರ್‌ಬಲ್ ಪ್ರಸಿದ್ಧ ಕವಿಯಾಗಿದ್ದನು.** ಅವನು ಶೈಕ್ಷಣಿಕ ಪದ್ಯಗಳನ್ನು ಬರೆದನು. ಅಬ್ದುಲ್ ರಹೀಂಖಾನ್–ಏ–ಖಾನ್‌ನು ಹಿಂದಿಯಲ್ಲಿ ಅನೇಕ ದೋಹಾಗಳನ್ನು ರಚಿಸಿದನು.

**'ಭಾರತದ ಆದ್ಯಾತ್ಮಿಕ ಗುರು'** ಎಂದು ಕರೆಯುವ ತುಳಸಿದಾಸ ಹಿಂದಿಯಲ್ಲಿ ಮೇರು ಕವಿ. ಆತನು **ತುಳಸಿ ರಾಮಾಯಣ** ಎಂದೇ ಹೆಸರಾದ **'ರಾಮಚರಿತ ಮಾನಸ'** ವನ್ನು ಬರೆದನು. ಅದನ್ನು **'ಹಿಂದೂಗಳ ಬೈಬಲ್'** ಎಂದು ಕರೆಯಲಾಗಿದೆ. ಅರಮನೆಯ ರಾಜರಿಂದ ಹಿಡಿದು ಗುಡಿಸಿಲಿನ ದೀನದಲಿತರ ಪ್ರತಿಯೊಬ್ಬನ ಕೈಯಲ್ಲಿ ಈ ಕೃತಿ ರಾರಾಜಿಸುತ್ತಿದೆ. ಸೂರ್‌ದಾಸ್‌ರು **ಸೂರ್‌ಸಾಗರ, ಸುರಾವಳಿಗಳನ್ನು** ರಚಿಸಿದರು. **ತುಳಸಿದಾಸರು ವಿನಯಪ್ರತಿಕ ಎಂಬ ಭಕ್ತಿಗೀತೆಗಳನ್ನು ಬರೆದರು.** ಅಬ್ದುಲ್ ರಹೀಂ ಹಿಂದಿ ಹಾಡುಗಳಿಗೆ ಹೆಸರಾಗಿದ್ದನು ರಾಸ್‌ಖಾನ್ ಕೃಷ್ಣಲೀಲೆಗಳನ್ನು ಕುರಿತು ಕವಿತೆಗಳನ್ನು ಬರೆದನು. ಅದೇ ಪ್ರೇಮಾವಾಟಿಕೆ. ಜಹಂಗೀರ್‌ನ ಆಸ್ಥಾನದಲ್ಲಿ ಸುಂದರ ಸೇನಾಪತಿ, ಕೇಶವದಾಸ್, ಶಿವಮಣಿ ಮಿಶ್ರ, ಬನ್ಸಾರಿದಾಸರೆಂಬ ಹಿಂದಿ ಕವಿಗಳಿದ್ದರು. ಕೇಶವದಾಸರ ವೀರಸಿಂಗ್



downloaded from: www.kpscvaani.com

ದೇವಚರಿತ ಅಲಂಕಾರ ಮಂಜರಿ ರಸಿಕಪ್ರಿಯಾ, ಸುಂದರ ಸೇನಾಪತಿಯ ಕವಿತಾ ರತ್ನಾಕರ, ಬೃಂದಾವನ ದಾಸನ ಚೈತನ್ಯ ಭಾಗವತ, ಸುಂದರ ಕವಿಯ ಸುಂದರ ಶೃಂಗಾರ ಚೈತನ್ಯರ ಚೈತನ್ಯ ಚರಿತಾಮೃತಂ (ಬಂಗಾಳಿ), ರಾಸ್‌ಖಾನ್‌ನ ಪ್ರೇಮವಾಟಿಕ ಹಿಂದಿಯಲ್ಲಿ ರಚನೆಗೊಂಡವು. ಬಂಗಾಳಿಯಲ್ಲಿ ಬೃಂದಾವನದಾಸ್(ಚೈತನ್ಯ ಭಾಗವತ) ತ್ರಿಲೋಚನಾದಾಸ್, ನರಹರಿ, ಮರಾಠಿಯಲ್ಲಿ ತುಕಾರಾಂ, ರಾಮದಾಸರು ಭಕ್ತಿಗೀತೆಗಳನ್ನು ರಚಿಸಿದರು. **ಭಕ್ತಿ ರತ್ನಾಕರ** ಎಂಬ ಕೃತಿ ರಚಿಸಿನು.

## ಸಂಸ್ಕೃತ ಸಾಹಿತ್ಯ:

ಮೊಗಲರು ಸಂಸ್ಕೃತ ಸಾಹಿತ್ಯವನ್ನು ಸಹ ಪೋಷಿಸಿದರು. ಮೊಗಲರ ಆಶ್ರಯದಲ್ಲಿದ್ದ ಸಂಸ್ಕೃತ ಕವಿಗಳು ಮತ್ತು ಅವರ ಕೃತಿಗಳು ಇಂತಿವೆ.

| ಕವಿಗಳು | ಕೃತಿಗಳು |
|---|---|
| ಜಗನ್ನಾಥ ಪಂಡಿತ(ಕವಿರಾಜ) | ರಸ, ಗಂಗಾಧರ, ಗಂಗಾಲಹರಿ |
| ಬಿರಾರಿ ಕೃಷ್ಣದಾಸ | ಪಾರ್ಸಿ ಪ್ರಕಾಶ (ನಿಘಂಟ) |
| ರಾಮಚಂದ್ರ | ರಾಮವಿನೋದ |
| ಮುನೀಶ್ವರ | ಸಿದ್ಧಾಂತ ಸಾರ್ವಭೌಮ |
| ರಘುನಾಥ | ಮಹೂರ್ತಮಾಲ |
| ಭಗವತಿಸ್ವಾಮಿನ್ | ಕಾವ್ಯವಿರತ್ತ ಪ್ರಬೋಧ |
| ವೈಜಯಂತಿ | ಆನಂದತಿಲಕ |
| ಚೈತನ್ಯ | ಕೃಷ್ಣ ಕೀರ್ತನೆಗಳು |
| ವಲ್ಲಭದೇವಿ | ಶುಭ ಸೀತಾವಳಿ |
| ಸಿದ್ದಚಂದ್ರ ಉಪಾಧ್ಯಾಯ | ಭಾಮಚಂದ್ರ ಚರಿತ |
| ಪದ್ಮ ಶಂಕರ್ | ಅಕ್ಬರ್‌ಷಾಹಿ ಶೃಂಗಾರದರ್ಪಣ |
| ಅಬುಲ್ ಫಜಲ್ | ಪಾರ್ಸಿ ಪ್ರಕಾಶ (ನಿಘಂಟು) |

ಅಕ್ಬರ್‌ನ ಕಾಲದಲ್ಲಿ ನುರಿತ ಪಂಡಿತರಿಂದ ಸಂಸ್ಕೃತ–ಪರ್ಶಿಯನ್ ನಿಘಂಟನ್ನು ಸಿದ್ದಪಡಿಸಲಾಯಿತು.

## ಉರ್ದು ಸಾಹಿತ್ಯ:

ಅಕ್ಬರ್‌ನ ಕಾಲದಲ್ಲಿ ನೂರಿ ಅಜಂಪುರಿ, ಹಜರತ್ ಕಮಲದ್ದೀನ್, ಷೇಕ್‌ಸಾದಿ, ಮಹಮದ್ ಅಫಜಲ್‌ರು ಉರ್ದು ಕವಿಗಳಾಗಿದ್ದರು. ನಾಸಿರ್ ಆಫಜಾಲಿ ಆಲಹಾಬಾದಿ, ಪಂಡಿತ್ ಚಂದ್ರ ಭನ್ ಷಾಹಜಹಾನ್‌ನ ಕಾಲದ ಉರ್ದು ಕವಿಗಳಾಗಿದ್ದರು. ಹಕೀಂಖಾನ್ ಅರ್ಜು, ಮಾಜರ್‌ರು ಉತ್ತರದಲ್ಲಿ ಉರ್ದು ಸಾಹಿತ್ಯವನ್ನು ಹೆಚ್ಚು




downloaded from: www.kpscvaani.com

ಜನಪ್ರಿಯಗೊಳಿಸಿದರು. ಉತ್ತರಕ್ಕಿಂತ ದಖನ್‌ನಲ್ಲಿ ಉರ್ದು ಜನಪ್ರಿಯವಾಯಿತು. ಗೊಲ್ಕೊಂಡ ಸುಲ್ತಾನ ಕುಲಿ ಕುತುಬ್‌ಷಾ ಪ್ರಸಿದ್ಧ ಉರ್ದು ಕವಿಯಾಗಿದ್ದನು. ಬಿಜಾಪುರ ಸುಲ್ತಾನನ ಆಶ್ರಯದಲ್ಲಿದ್ದ ಮಹಮದ್ ನಶ್ರತ್‌ಷಾ **ಆಲಿನಾಮ** ಮತ್ತು **ಗುಲ್‌ಶಾನ್–ಇ–ಇಸ್ಕ್** ಎಂಬ ಕೃತಿಗಳನ್ನು ರಚಿಸಿದನು.

## ಮೊಗಲರ ಕವಿಗಳು & ಕೃತಿಗಳು

| ಕವಿಗಳು | ಕೃತಿಗಳು | ಕವಿಗಳು | ಕೃತಿಗಳು |
|---|---|---|---|
| ಬಾಬರ್ | ಬಾಬರ್ ನಾಮ | ಗುಲ್‌ಬದನ್ ಬೇಗಂ | ಹುಮಾಯುನ್‌ನಾಮ |
| ಅಬುಲ್‌ಫಜಲ್ | ಐನಿ, ಅಕ್ಬರಿ, ಅಕ್ಬರನಾಮ | ಅಬುಲ್‌ಫೈಜಿ | ಲೀಲಾವತಿ |
| ಮುಲ್ಲಾ ದಾವೂದ್ | ತಾರೀಖ್–ಇ–ಆಲ್ಫಿ | ಅಬ್ಬಾಸ್ ಸರ್ವಾನಿ | ತೌಫಿ–ಇ–ಅಕ್ಬರ್‌ಷಾಹ |
| ಫಿರ್ದೂಷಿ | ಷಾನಾಮ | ಬದೌನಿ | ಮುಂತಾಕಬ್–ಉತ್ ತವಾರಿಕ್ |
| ನಿಜಾಮುದ್ದೀನ್ | ತಬಕತ್–ಇ–ಅಕ್ಬರಿ | ಕಬೀರ್ | ದೋಹಗಳು |
| ಮಹಮದ್ ಜೈಸಿ | ಪದ್ಮಾವತ್ | ತುಳಸಿದಾಸ | ರಾಮಚರಿತ ಮಾನಸ |
| ಸೂರ್‌ದಾಸ್ | ಸೂರ್‌ಸಾಗರ್ | ಫೈಜಿ–ಸರ್–ಹಿಂದಿ | ಅಕ್ಬರ್‌ನಾಮ |
| ಜಹಂಗೀರ್ | ತುಜಕ್–ಇ–ಜಹಂಗೀರ್ | ಅಬ್ದುಲ್ ಹಮೀದ್ ಲಾಹೋರಿ | ಬಾದಷಾನಾಮ |
| ಇನಾಯಿತ್‌ಖಾನ್ | ಷಹಜಹಾನ್‌ನಾಮ | ಮಹಮದ್ ಸಲೇಹ್ | ಅಮಲ್–ಇ–ಸಾಲಿಹ್ |
| ಔರಂಗಜೇಬ್ | ಫತ್ವಾ–ಇ–ಆಲಮ್‌ಗೀರ್ ನಾಮ | ಖಾಫಿಖಾನ್ | ಮುಂತಾಕಬ್–ಉಲ್–ಲುಬಾಬ್ |
| ಮಹಮದ್ ಖಾಜಿಂ | ಆಲಮ್‌ಗೀರ್‌ನಾಮ | ಕೇಶವದಾಸ | ಅಲಂಕಾರ ಮಂಜರಿ |
| ಜಗನ್ನಾಥ | ರಸಗಂಗಾಧರ, ಗಂಗಾಲಹರಿ | ಚೈತನ್ಯ | ಚೈತನ್ಯ ಚರಿತಾಮೃತಂ |
| ಕೃಷ್ಣದಾಸ್ | ಪಾರ್ಸಿ ಪ್ರಕಾಶ | | |

### 3. ಕಲೆ ಮತ್ತು ವಾಸ್ತುಶಿಲ್ಪ(ಕಲಾ ವೈಭವ):

ಮೊಗಲ್ ಚಕ್ರವರ್ತಿಗಳು ಕಲಾಭಿಮಾನಿಗಳು, ಮಹಾನಿರ್ಮಾಪಕರು, ಉಳಿದೆಲ್ಲಾ ರಂಗಗಳಿಗಿಂತ ಕಲೆಯಲ್ಲಿ ಅವರ ಸಾಧನೆ ಅಮೋಘವಾದುದಾಗಿದೆ. ಅವರು ಕಟ್ಟಡಗಳ ನಿರ್ಮಾಣದಲ್ಲಿ ನಿಷ್ಣಾತರು ಮತ್ತು ಅದ್ವಿತೀಯರು. ಅವರ ಕೀರ್ತಿ ನಿಂತಿರುವುದು ಅವರ ಕಟ್ಟಡಗಳ ಮೇಲೇನೆ. ಅವರ ಕಾಲ ಭವ್ಯವಾದ ಕಟ್ಟಡಗಳಿಂದ ತುಂಬಿ ಹೋಗಿದೆ. ಷಾಜಹಾನ್‌ನಂತೂ ಅದಕ್ಕಾಗಿ ಅವತರಿಸಿದನು. ಅವರು ಅನೇಕ ಅರಮನೆಗಳು, ಮಸೀದಿಗಳು, ಸಮಾಧಿಗಳು, ಕೋಟೆಗಳು, ದ್ವಾರಗಳು, ತೋಟಗಳು, ಆಡಳಿತ ಸೌಧಗಳನ್ನು ನಿರ್ಮಿಸಿದರು. ಅವು ಭವ್ಯತೆ, ಸೌಂದರ್ಯಕ್ಕೆ ಹಾಗೂ ದೀರ್ಘ ಬಾಳಿಕೆಗೆ ಹೆಸರಾಗಿರುವ ಅವನ್ನು ವರ್ಸೇಲ್ಸ್ ಶೋಭಾಯಮಾನತೆಗೆ ಒಗ್ಗಿರುವ ಕಣ್ಣುಗಳನ್ನು ಕುಕ್ಕುವಂತಿವೆ ಎಂದು ಬಣ್ಣಿಸಲಾಗಿದೆ. ಅವರ ವಾಸ್ತುಶಿಲ್ಪ ಶೈಲಿಯನ್ನು ಹ್ಯಾವೆಲ್‌ರು ಇಂಡೋ ಅರ್ಯನ್ ಶೈಲಿ ಎಂತಲೂ, ಜೆ.ಎನ್. ಸರ್ಕಾರ್‌ರು



downloaded from: www.kpscvaani.com

**ಇಂಡೋ ಪರ್ಶಿಯನ್, ಇಂಡೋ ಸೆರಾಸನಿಕ್ ಶೈಲಿ** ಎಂದು ಹೇಳಿದ್ದಾರೆ. ವಿ.ಎ ಸ್ಮಿತ್‌ರು ಅದನ್ನು **ಹಿಂದೂ-ಮಹಮದೀಯ ಶೈಲಿ** ಎಂದು ಕೆರೆದಿದ್ದಾರೆ. ಅಕ್ಬರ್ ಕಾಲದ ಮುನ್ನ ಅವರ ಕಲೆಯ ಮೇಲೆ ಪರ್ಶಿಯನ್ ಶೈಲಿಯ ಪ್ರಭಾವ ಗಾಢವಾಗಿತ್ತು. ಅನಂತರ ಭಾರತೀಯ ಪ್ರಭಾವಕ್ಕೆ ಒಳಗಾಯಿತು. ಒಟ್ಟಾರೆಯಾಗಿ ಅದು **ಇಂಡೋ-ಪರ್ಶ್ಶಿಯನ್ ಶೈಲಿಯಾಗಿದೆ**. ಅದರ ಲಕ್ಷಣಗಳು ಇಂತಿವೆ.

1. ಮೊಗಲ್ ಕಟ್ಟಡಗಳ ವಿನ್ಯಾಸ, ಕಾರ್ಯತಂತ್ರ ಭಾರತೀಯದ್ದಾಗಿದೆ. ಇದಕ್ಕೆ ಕಾರಣ ಕಟ್ಟಡಗಳ ನಿರ್ಮಾಣಕ್ಕೆ ಭಾರತೀಯ ಕಲ್ಲುಕುಟಿಗಳನ್ನು ಬಳಸಿಕೊಂಡಿದುದು.
2. ಎತ್ತರವಾದ ಮೀನಾರ್‌ಗಳು, ದುಂಡಾದ ಗುಮ್ಮಟಗಳು, ವಿವಿಧ ಬಗೆಯ ಸ್ತಂಭಗಳು, ತೆರೆದ ಪ್ರಾಂಗಣ, ವಿಶಾಲವಾದ ಒಳಾಂಗಣಗಳ ನಿರ್ಮಾಣ.
3. ತೆರೆದ ಪ್ರಾರ್ಥನಾ ಮಂದಿರ, ಆದರೆ ಹಿಂದೂಗಳ ಪ್ರಾರ್ಥನಾ ಮಂದಿರಗಳ 4 ಗೋಡೆಗಳ ಮಧ್ಯೆ ಕತ್ತಲೆಯಿಂದ ಕೂಡಿರುತ್ತವೆ.
4. ಸಮಾಧಿ ಮತ್ತು ಮಸೀದಿಗಳನ್ನು ಜಂಟಿಯಾಗಿ ನಿರ್ಮಿಸಿರುವುದು.
5. ಕಟ್ಟಡಗಳನ್ನು ಅಮೂಲ್ಯ ರತ್ನಾಭರಣ, ಅಮೃತ ಶಿಲೆಗಳಿಂದ ಅಲಂಕರಿಸಿರುವುದು.
6. ಭವ್ಯತೆ ಮತ್ತು ಸೌಂದರ್ಯತೆ, ಕಟ್ಟಡಗಳ ಸೌಂದರ್ಯ ಹೆಚ್ಚಿಸಲು ಅವುಗಳ ಮುಂದೆ ತೋಟ, ಕಾರಂಜಿ. ಈಜುಕೋಳಗಳನ್ನು ನಿರ್ಮಿಸಿರುವುದು
7. ಕಲೆಗೆ ಕೆಂಪು ಮರಳುಕಲ್ಲನ್ನು ಬಳಸಿರುವುದು ಇತ್ಯಾದಿ

## 4. ಚಿತ್ರಕಲೆ:

ಮೊಗಲರು ವಾಸ್ತುಶಿಲ್ಪದಂತೆ ಚಿತ್ರಕಲೆಯನ್ನು ವಿಶೇಷವಾಗಿ ಪ್ರೋತ್ಸಾಹಿಸಿದರು. ಅವರು ಚಿತ್ರಕಲೆಯು ಪರ್ಶಿಯನ್ ಚಿತ್ರಕಲೆಯಿಂದ ಪ್ರಭಾವಿತಗೊಂಡಿದ್ದು, ಇಂಡೋ-ಪರ್ಶಿಯನ್ ಅಂಶಗಳ ಮಿಶ್ರಣವಾಗಿತ್ತು. ಅರಮನೆಯ ಗೋಡೆಗಳ ಮೇಲೆ ಅರಮನೆ, ಯುದ್ಧ ಬೇಟೆ, ಮರ, ಗಿಡಬಳ್ಳಿ, ಹಕ್ಕಿಗಳು ಪ್ರಾಣಿಗಳು, ಸ್ತ್ರೀಯರ ಚಿತ್ರಗಳನ್ನು ದುರ್ಬಾರಿ ಶೈಲಿಯಲ್ಲಿ ಬಿಡಿಸಲಾಯಿತು. ಬಾಬರ್ ನಿಸರ್ಗ ಪ್ರೇಮಿಯಾಗಿದ್ದು, ಪ್ರಕೃತಿ ಸೌಂದರ್ಯವನ್ನು ಆಸಕ್ತಿಯಿಂದ ವೀಕ್ಷಿಸಿ ಆನಂದಿಸುತ್ತಿದ್ದನು. ಬಾಬರ್‌ನು ಭಾರತಕ್ಕೆ ಬರುವಾಗ ತನ್ನೊಡನೆ ಅನೇಕ ಚಿತ್ರಕಾರರನ್ನು ಕರೆತಂದನು. ಹುಮಾಯುನ್ ದೇಶಭ್ರಷ್ಟವಾಗಿ ಪರ್ಶಿಯಾದಲ್ಲಿ ಅಲೆಯುತ್ತಿದ್ದಾಗ ಅಲ್ಲಿನ ಚಿತ್ರಕಲೆಯಿಂದ ಪ್ರಭಾವಿತನಾದನು. ಅವನು ಪರ್ಶಿಯಾದಿಂದ **ಮೀರುಸೈಯದ್ ಆಲಿ ಮತ್ತು ಖ್ವಾಜಾ ಅಬ್ದುಸ್ ಸಮದ್ ಎಂಬ ಚಿತ್ರಕಾರರನ್ನು** ಭಾರತಕ್ಕೆ ಕರೆತಂದನು. ಅವರು 12 ಸಂಪುಟಗಳ ಸಚಿತ್ರ ಗ್ರಂಥವಾದ **'ದಸ್ತನ್-ಇ-ಅಮೀರ್ ಹಮ್ಜಾ(ಊಚಿಟಚಿಟಿಚಿಚಿ)** ವನ್ನು ಸಿದ್ದಪಡಿಸಿದರು. ಅದರಲ್ಲಿ 1200 ಚಿತ್ರಗಳಿದ್ದವು. ಅವರಿಂದ ಅಕ್ಬರ್ ಚಿತ್ರಕಲೆ ಕಲಿತನು. ಮೀರ್‌ಸೈಯದ್‌ನನ್ನು **'ಪೂರ್ವದ ರಾಫೆಲ್'** ಎಂದು ಕರೆಯಲಾಗುತ್ತಿತ್ತು. ಅಕ್ಬರ್‌ನು ಚಿತ್ರಕಲೆಗೆ ಗರಿಷ್ಠ ಪ್ರೋತ್ಸಾಹ ನೀಡಿದನು. ಅವನ



downloaded from: www.kpscvaani.com

ಕಾಲದಲ್ಲಿ ಚಿತ್ರಕಲೆಯಲ್ಲಿ ಹಿಂದೂ-ಪರ್ಶಿಯನ್ ಅಂಶಗಳು ಸಮನ್ವಯಗೊಂಡವು. ಅಕ್ಬರ್ ಚಿತ್ರಕಾರರನ್ನು ಸದಾ ಗೌರವಿಸುತ್ತಿದ್ದನು. ಅವನು ಅಬ್ದುಸ್ ಸಮದ್‌ನ ನೇತೃತ್ವದಲ್ಲಿ ಚಿತ್ರಕಲೆಗೆ ಒಂದು ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸಿದನು. ಫತೇಪುರ್ ಸಿಕ್ರಿ ರಾಜಮಹಲ್ ಕಟ್ಟಡಗಳನ್ನು ಅಲಂಕರಿಸಲು ಚಿತ್ರ ಕಲಾಕಾರರ ತಂಡವನ್ನು ಆಹ್ವಾನಿಸಿದನು. ಅವರಿಂದ ರಾಷ್ಟ್ರೀಯ ಚಿತ್ರಶಾಲೆ ಬೆಳೆಯಿತು. ಅಕ್ಬರ್‌ನ ಆಸ್ಥಾನದಲ್ಲಿ 17 ಚಿತ್ರಕಾರರಿದ್ದರು. ಅವರಲ್ಲಿ 13 ಮಂದಿ ಹಿಂದೂಗಳು, ಅವರೆಂದರೆ **ಮೀರ್‌ಸೈಯದ್ ಆಲಿ, ಅಬ್ದುಸ್ ಸಮದ್, ಕುಶ್ರಾತ್‌ಕುಲಿ, ಫರೂಕ್ ಬೇಗ್, ಲಾಲ್ ಹರಿವಂಶ, ಬಸವಾನ್, ದಶ್ವಂತ್, ಮುಕುಂದ, ಕೇಶುಲಾಲ್, ಹರಿಬನ್ಸ್, ಜಗನ್ನಾಥ, ತಾರಾಚಂದ್, ಬಿಸ್ನಾದಾಸ್, ಗೋವರ್ದನದಾಸ್, ಮಹೇಶ್, ಜಗನ್‌**ರು ಪ್ರಮುಖರು ಅಕ್ಬರು ಅಬ್ದುಸ್ ಸಮದ್‌ನಿಗೆ **'ಷಿರನ್ ಕಲಂ'** (ಖಿಜಿಜಾ ರಿಜಟ) ಎಂಬ ಬಿರುದು ಕೊಟ್ಟು ಗೌರವಿಸಿದ್ದನು. ಅವನ ಗ್ರಂಥಭಂಡಾರವು ಚಿತ್ರಗಳಿಂದ ತುಂಬಿಹೋಯಿತು ಅಕ್ಬರ್ ಕಾಲದಲ್ಲಿ ರಾಮಾಯಣ, ಜಾಫರ್‌ನಾಮ, ಅಕ್ಬರ್‌ನಾಮ, ಬಾಬರ್‌ನಾಮ, ಚಂಗೀಸನಾಮ ಕೃತಿಗಳನ್ನು ಸಚಿತ್ರಗೊಳಿಸಲಾಯಿತು.

ಜಹಂಗೀರ್‌ನ ಕಾಲದಲ್ಲಿ ಮೊಗಲ್ ಚಿತ್ರಕಲೆ ಉನ್ನತ ಶಿಖರವನ್ನು ಮುಟ್ಟಿತು. ಚಿತ್ರಕಲೆಗೆ ಅವನ ಕಾಲ **ಸುವರ್ಣಯುಗವಾಗಿತ್ತು**. ಅವನು ನಿಸರ್ಗಪ್ರೇಮಿ, ಪಕ್ಷಿ ಪ್ರಿಯ, ಅವನ ತುಜಕ್-ಇ-ಜಹಂಗೀರಿ, ರಾಜಕಮಲ್ ಗಜಲ್, ರುಬೈಯಾಸ್ ಗ್ರಂಥಗಳು ಚಿತ್ರಕಲೆಗೆ ಹೆಸರಾಗಿವೆ. **ಗೋವರ್ಧನ್, ತುಳಸಿ, ಬಿಶನ್‌ದಾಸ್, ಮಾಧವ, ಕೇಶವ, ಮನೋಹರ್, ಅಬ್ದುಲ್ ಹಸನ್, ಉಸ್ತಾದ್ ಮನ್ಸೂರ್, ನಾಂದಿರುಲ್ ಆಶ್ರಾ** ಹಾಗೂ **ಅಬ್ದುಲ್ ಹಸನ್‌ಗೆ ನಾದಿರ್-ಉಲ್-ಹಮಾ** ಎಂಬ ಬಿರುದುಗಳನ್ನು ನೀಡಿದ್ದನು. ಚಿತ್ರಕಲೆ ಆಗ ಪರ್ಶಿಯನ್ ಪ್ರಭಾವಕ್ಕೆ ಒಳಗಾಯಿತು. ಪಕ್ಷಿ ಪ್ರಾಣಿಗಳು, ಹೂಗಳು, ಜಹಂಗೀರನ ಸಿಂಹಾಸನಾರೋಹಣ, ಬೇಟೆ ಚಿತ್ರಗಳು, ರಾಜ-ರಾಣಿಯರ, ಅಸ್ಥಾನಿಕರ ದೃಶ್ಯಗಳು, ಜಹಂಗೀರ್‌ನ ಕಾಬೂಲ್ ಬೇಟಿ, ಖುಸ್ರಾವ್ ವಿಚಾರಣೆ ದೃಶ್ಯಗಳು ಚಿತ್ರಕಲೆಗೊಂಡವು, ಹಮಜನಾಮ, ರಜ್‌ನಾಮ, ಬಾಬರ್‌ನಾಮ, ಲೀಲಾವತಿಗಳು ಚಿತ್ರರೂಪದಲ್ಲಿ ಚಿತ್ರಕಲೆಗೊಂಡವು **ಜಹಂಗೀರ್ ಮರಣದೊಂದಿಗೆ ಮೊಗಲ್ ಚಿತ್ರಕಲೆಯ ಹೃದಯ ಸಹ ಕಳೆದುಕೊಂಡಿತು.**

ಷಾಜಹಾನ್‌ನು ಚಿತ್ರಕಲೆಗಿಂತ ಬಂಗಾರದ ಲೋಹ ಆಭರಣಗಳ ತಯಾರಿಕೆಯಲ್ಲಿ, ವಾಸ್ತುಶಿಲ್ಪದಲ್ಲಿ, ನಿಷ್ಣಾತನಾಗಿದ್ದನು. ಶ್ರೀಮಂತ ಚಿತ್ರಕಲೆ ಇರುವ ಅವನ ಚಿತ್ರಕಲೆಯನ್ನು **ಮಿಲಿಯೇಚರ್ ಪೇಂಟಿಂಗ್** ಎಂದು ಕರೆಯಲಾಗಿದೆ. **ಮಹಮದ್ ನಾದಿರ್, ಮೀರ್ ಹಸೀಂ, ಫಕೀರ್ ಉಲ್ಲಾ, ಅನೂಪ್‌ಚಿತ್ರ, ಚಿತ್ರಮಣಿ** ಎಂಬ ಚಿತ್ರಕಾರರು ಷಾಜಹಾನ್‌ನ ಅಸ್ಥಾನದಲ್ಲಿದ್ದರು. ಮಹಮದ್ ನಾದಿರ್‌ನನ್ನು ಚಿತ್ರಕಲೆಯ ರಾಜ ಎಂದು ಕರೆಯಲಾಗಿದೆ. ಅವನ ಮಗ ದಾರಾಷೂಕುನಿಗೆ ಚಿತ್ರಕಲೆಯಲ್ಲಿ ವಿಶೇಷ ಅಭಿರುಚಿ ಇದ್ದಿತು. ಅವನ ಕಾಲದಲ್ಲಿ (ಹಣಿಡಿಚಿಞ ಂಟಛಿಷ) ಅನ್ನು ಸಿದ್ದಪಡಿಸಲಾಯಿತು.

ಔರಂಗಜೇಬನ ಕಾಲದಲ್ಲಿ ಚಿತ್ರಕಲೆ ಸಂಪೂರ್ಣವಾಗಿ ನಶಿಸಿತು ಸಚಿತ್ರಾತ್ಮಕ ಚಿತ್ರಕಲೆ ಪೋಷಿಸುವುದು ಇಸ್ಲಾಂ ಧರ್ಮಕ್ಕೆ ವಿರುದ್ದ ಚಿತ್ರಕಲೆ ಮೂರ್ತಿಪೂಜೆಗೆ ಅವಕಾಶ ಕಲ್ಪಿಸುತ್ತದೆ ಎಂದು



downloaded from: www.kpscvaani.com

ಭಾವಿಸಿದ ಅವನು ಚಿತ್ರಕಲೆಯನ್ನು ನಿಷೇಧಿಸಿದನು. ತನ್ನ ಅಸ್ಥಾನದಿಂದ ಚಿತ್ರಕಾರರನ್ನು ಹೊರಹಾಕಿದನು. ಅವರು ಔಧ್, ಪಾಟ್ನಾ, ಲಖ್ನೋ, ಹೈದರಬಾದ್, ಮೈಸೂರು, ಕಾಂಗ್ರಾ, ಬಂಗಾಳ ರಾಜ್ಯಗಳಿಗೆ ವಲಸೆ ಹೋದರು. ಅಷ್ಟೇ ಅಲ್ಲದೆ ಬಿಜಾಪುರದ ಅಸಾರ್‌ಮಹಲ್ ಮತ್ತು ಗೊಲ್ಕೊಂಡು ಅರಮನೆಗಳ ಭಿತ್ತಿಚಿತ್ರಗಳನ್ನು ನಾಶಪಡಿಸಿದನು. ಸಿಕಂದರ್‌ನಲ್ಲಿರುವ ಅಕ್ಬರ್‌ನ ಗೋರಿಯ ಬಣ್ಣಕ್ಕೆ ಸುಣ್ಣ ಬಳಿಸಿದನು.

**ಕಾಂಗ್ರ ಕಲೆ:** ಕಾಂಗ್ರ ರಮ್ಯಕಲೆ ರಜಪೂತರ ಕಾಲದಲ್ಲಿ ಖ್ಯಾತಿಗೆ ಬಂದಿತು. ಕಿಷನ್‌ಲಾಲ್, ಗುರುಸಹಾಯ್, ರಾಮ್‌ದಯಾಳ್‌ರು ಕಾಂಗ್ರ ಚಿತ್ರಕಲೆಯನ್ನು ಶ್ರೀಮಂತಗೊಳಿಸಿದರು. ಅವರು ಕಾಳಿವರ್ದನಗಿರಿ, ಗೋಪಿಕಾ ವಸ್ತ್ರಾಪಹರಣ, ಸಂಗೀತರಾಗಮಾಲ ಇತ್ಯಾದಿ ದೃಶ್ಯಗಳನ್ನು ಚಿತ್ರಿಸಿದರು. ಜೈಪುರ, ಜೋದ್‌ಪುರ, ಬುಂಡಿಗಳ ಅರಮನೆಗಳಲ್ಲಿ ರಜಪೂತ ಚಿತ್ರಕಲೆ ಅಭಿವೃದ್ಧಿಗೊಂಡಿತು.

## 5. ಸಂಗೀತ:

ಭಾರತದ ಸಂಗೀತ ದೇವ ಸೃಷ್ಟಿ ಎಂದು ನಂಬಿದ್ದ ಭಾರತೀಯ ಸಂಗೀತದಲ್ಲಿ 6 ರಾಗಗಳು ಮತ್ತು 30 ರಾಗಿಣಿಗಳಿಂದ ಕೂಡಿದೆ. 6 ರಾಗಗಳು

| ರಾಗಗಳು | ರಾಗದ ವೇಳೆ |
|---|---|
| 1. ರಾಗ ಭೈರವ | ಬೆಳಿಗ್ಗೆ 4–00 ರಿಂದ 8–00 ಗಂಟೆ |
| 2. ರಾಗ ಇಂದೋಲ | ಬೆಳಿಗ್ಗೆ 8–00 ರಿಂದ 12 –00 |
| 3. ರಾಗ ಮೇಘ | 12–00 ರಿಂದ 4–00 ಮಧ್ಯಾಹ್ನ |
| 4. ಶ್ರೀರಾಗ | ಸಂಜೆ 4–00 ರಿಂದ 8–00 ರಾತ್ರಿ |
| 5. ರಾಗ ದೀಪಕ್ | ರಾತ್ರಿ 8–00 ರಿಂದ 12–00 |
| 6. ರಾಗ ಮಾಲ್ಕೋಸ | ರಾತ್ರಿ 12–00 ರಿಂದ ಬೆಳಗಿನ ಜಾವ 4–00 |

- ಹಿಂದೂಸ್ಥಾನಿ ಸಂಗೀತವನ್ನು ಪರಿಚಯಿಸಿದ ಮೊದಲಿಗೆ **ಅಮೀರ್ ಖುಸ್ರ.**
- ಭಾರತದ ಸಂಗೀತದೊಡನೆ ಅರಬ್, ಪರ್ಶಿಯನ್ ಸಂಗೀತವನ್ನು ಕೂಡಿಸಿದ ಕೀರ್ತಿ ಅಕ್ಬರ್‌ನಿಗೆ ಸಲ್ಲುತ್ತದೆ.
- ಐನ್–ಏ–ಅಕ್ಬರಿ ಕೃತಿಯು ಸಂಗೀತ ಉಪಕರಣಗಳನ್ನು ಕೆಳಕಂಡ 4 ವರ್ಗಗಳಾಗಿ ವಿಂಗಡಿಸಿದ.
  - ತಂತಿವಾದ್ಯಗಳು; ವೀಣೆ, ಸಿತಾರ್, ತಂಬೂರಿ, ಸರೋದ್,




downloaded from: www.kpscvaani.com

- o ಗಜಸಾರಂಗ ಸಹಾಯದಿಂದ ನುಡಿಸುವ ಉಪಕರಣಗಳು: ದಿಲ್‌ರಾಬ ಮತ್ತು ಮಯೂರಿ.
- o ಡ್ರಮ್ ಮಾದರಿಯವು, ಪಾಖವಾಜ, ತಬಲ, ನಕ್ಕರ, ಢೋಂಕ.
- o ಬಾಯಿಯಿಂದ ನುಡಿಸುವ ಉಪಕರಣಗಳು, ಕೊಳಲು, ಬೀನ್, ಬಾನ್ಸುರಿ, ಸುರ್ನಾ ಇತ್ಯಾದಿ

- ಮೊಗಲರ ಕಲಾದಲ್ಲಿ 9 ಮಂದಿ ಒಟ್ಟಾಗಿ ನುಡಿಸುವ ಹೊಸ ಸಂಗೀತ ಉಪಕರಣ ನೌಬತ್ ಬೆಳಕಿಗೆ ಬಂದಿತು. ಔರಂಗಜೇಬನನ್ನು ಬಿಟ್ಟು ಉಳಿದೆಲ್ಲ ಮೊಗಲ್ ಚಕ್ರವರ್ತಿಗಳ ಸಂಗೀತಪ್ರಿಯರಾಗಿದ್ದರು.
- ಮೊಗಲರ ಕಾಲ ಹಿಂದೂಸ್ಥಾನಿ ಸಂಗೀತದ ವೈಭವ ಕಾಲವಾಗಿತ್ತು. ಬಾಬರ್ ಸ್ವತಃ ಹಲವು ಹಾಡುಗಳನ್ನು ರಚಿಸಿ ಹಾಡಿದನು.
- ಹುಮಾಯನ್ ಸಹ ಸಂಗೀತಪ್ರಿಯನಾಗಿದ್ದು. ಪ್ರತಿ ಸೋಮವಾರ ಮತ್ತು ಬುಧವಾರ ಹಾಡುಗಾರಿಕೆಯಲ್ಲಿ ಕಾಲ ಕಳೆಯುತ್ತಿದ್ದನು.
- ಅಕ್ಬರ್ ಸ್ವತಃ ನುರಿತ ಸಂಗೀತಗಾರನಾಗಿದ್ದನು. ಪ್ರತಿ ನುಡಿಸುತ್ತಿದ್ದನು. ಲಾಲ್ ಕುಲ್ವಂತ್‌ನಿಂದ ಸಂಗೀತ ಶಿಕ್ಷಣ ಗಳಿಸಿದ್ದನು. ಆತ ಸಾಮ್ರಾಜ್ಯದ ನಾನಾ ಕಡೆಯಿಂದ ಸಂಗೀತಗಾರರನ್ನು ಆಹ್ವಾನಿಸಿದನು. ಅವನ ಅಸ್ಥಾನದಲ್ಲಿ 36 ಸಂಗೀತಗಾರರಿದ್ದರೆಂದು ಅಬುಲ್‌ಫಜಲ್ ಹೇಳಿದ್ದಾನೆ. ಅವರಲ್ಲಿ **ತಾನ್‌ಸೇನ್, ಬಾಜ್‌ಬಹದ್ದೂರ್, ಬಾಬಾರಾಮದಾಸ್, ಸೂರ್‌ಸಾಸ್, ಅಬ್ದುರ್ ರಹೀಂ, ರಾಜ ಮಾನ್‌ಸಿಂಗ್‌ರು** ಪ್ರಮುಖರು ಬಾಜ್ ಬಹದ್ದೂರ್ ಸಂಗೀತ ಕಲೆ ಮತ್ತು ಹಿಂದಿ ಗಾಯನದಲ್ಲಿ ತನ್ನ ಕಾಲದವರೆಲ್ಲೆಲ್ಲಾ ಅತ್ಯುತ್ತಮನು. **'ಹಿಂದೂಸ್ಥಾನಿ ಸಂಗೀತ ಪಿತಾಮಹ'** ಎಂದೇ ಹೆಸರಾದ ಗ್ವಾಲಿಯಾರ್‌ನ **ತಾನ್‌ಸೇನ್** ಹಿಂದಿ ಹಾಡುಗಾರಿಕೆಗೆ ಹೆಸರಾಗಿದ್ದನು. ಗ್ವಾಲಿಯಾರ್‌ನ ಈತ ದೀಪಕರಾಗ ಸೇರಿದಂತೆ ಅನೇಕ ರಾಗಗಳನ್ನು ಅನ್ವೇಷಿಸಿದನು. ನಕರ ಎಂಬ ವಾದ್ಯ ಕಂಡುಹಿಡಿದನು.
- ರಬ್ಬಯ್ಯ ಘರಾನ, ರುದ್ರವೀಣೆ ಎಂಬ ಸಂಗೀತ ಉಪಕರಣಗಳ ಶೋಧಕರು ಈತನೇ, ಅಬುಲ್‌ಫಜಲ್ ಬರೆದಂತೆ **ಭಾರತದಲ್ಲಿ ಕಳೆದ 1000 ವರ್ಷಗಳ ಅವಧಿಯಲ್ಲಿ ತಾನ್‌ಸೇನ್ ನಂತಹ ಸಂಗೀತಗಾರ ಹುಟ್ಟಲಿಲ್ಲ"** ಅಕ್ಬರ್ ಶಾಸ್ತ್ರೀಯ ಸಂಗೀತಕ್ಕೆ ಪ್ರೋತ್ಸಾಹ ನೀಡಿದನು. ಅಲ್ಲದೆ ಭಾರತ ರಾಷ್ಟ್ರೀಯ ಸಂಗೀತಕ್ಕೆ ಜನ್ಮ ನೀಡಿದ ಕೀರ್ತಿ ಅಕ್ಬರ್‌ನಿಗೆ ಸಲ್ಲುತ್ತದೆ.
- ತಾನ್‌ಸೇನ್‌ನ ನಂತರ ಸ್ಥಾನ ಪಡೆದ ರಾಮದಾಸ ಬೈರಾಂಖಾನ್‌ನಿಂದ 1 ಲಕ್ಷ ಟಂಕ ಬಹುಮಾನ ಪಡೆದಿದ್ದನು. ಮಾಳ್ವದ ರಾಜ ಬಾಜ್‌ಬಹದ್ದೂರ್ ಹಿಂದಿ ಹಾಡುಗರಿಕೆಗೆ ಹೆಸರಾಗಿದ್ದನು.



downloaded from: www.kpscvaani.com

- ರಾಮದಾಸನ ಮಗ ಸೂರ್‌ದಾಸ್ ಸಹ ಪ್ರಸಿದ್ಧಿ ಸಂಗೀತಗಾರನಾಗಿದ್ದನು. ಅಕ್ಬರ್ ಆಶ್ರಯದಲ್ಲಿ **ದಾಮೋದರ್ ಮಿತ್ರನ ಸಂಗೀತ ದರ್ಪಣ, ಆಹೋಬಲನ ಸಂಗೀತ ಪಾರಿಜಾತ, ಭಾವಭಟ್ಟನ ಅನುವಿಲಾಸ, ಅನುಪ ರತ್ನಾಕರಣ** ಎಂಬ ಸಂಗೀತ ಕೃತಿಗಳು ರಚನೆಯಾದವು.
- ಜಹಂಗೀರ್ ಸಹ ಸಂಗೀತಪ್ರಿಯನಾಗಿದ್ದನು. ಅವನ ಅಸ್ಥಾನದಲ್ಲಿ **ಫರ್ವೇಜ್‌ದಾದ್, ಕುರಂದಾದ್, ಚಿತ್ತೂರ್ ಖಾನ್ ಹಮಾಜ** ಎಂಬ ಸಂಗೀತಗಾರರಿದ್ದರು. ಷಾಜಹಾನ್‌ನ ಆಸ್ಥಾನದಲ್ಲಿ **ಜಗನ್ನಾಥ, ಜನಾರ್ಧನಭಟ್ಟ, ರಾಮದಾಸ್, ಸೂರ್‌ಸೇನ್, ಸುಖಸೇನ್, ಲಾಲ್‌ಖಾನ್** ಎಂಬ ಸಂಗೀತಗಾರರಿದ್ದರು.
- ಷಾಜಹಾನ್‌ನ ಆಸ್ಥಾನದಲ್ಲಿ ಜಗನ್ನಾಥನಿಗೆ **ಕವಿರಾಯ** ಎಂಬ ಬಿರುದು ಇದ್ದಿತು. ಸಂಗೀತಕ್ಕೆ ಇಸ್ಲಾಂಧರ್ಮದಲ್ಲಿ ಅವಕಾಶವಿಲ್ಲವೆಂದು ಔರಂಗಜೇಬ್‌ನು ಸಂಗೀತವನ್ನು ಸಂಪೂರ್ಣವಾಗಿ ನಿಷೇಧಿಸಿದನು ಮತ್ತು ತನ್ನ ಆಸ್ಥಾನದಿಂದ ಸಂಗೀತಗಾರರನ್ನು ಹೊರಹಾಕಿದನು.

## 6. ಉದ್ಯಾನಗಳು:

ಮೊಗಲ್ ಸಾಮ್ರಾಟರು ಪ್ರಕೃತಿ ಪ್ರೇಮಿಗಳು, ಸೌಂದರ್ಯೋಪಾಸಕರಾಗಿದ್ದರು. ಅವರದು ಹೂವಿನ ತೋಟಗಳನ್ನು ನಿರ್ಮಿಸುವುದರಲ್ಲಿ ಎತ್ತಿದ ಕೈ ಅವರು ತಮ್ಮ ಅರಮನೆ, ಸಮಾಧಿ, ಮಸೀದಿ ಕಟ್ಟಡಗಳಿಗೆ ಶೋಬೆ ಹೆಚ್ಚಿಸಲು ಅನೇಕ ಹೂದೋಟಗಳನ್ನು ನಿರ್ಮಿಸಿದರು. ಅವನ್ನು ವಿವಿಧ ಮರಗಿಡ, ಕಾರಂಜಿ, ಕೃತಕ ಜಲಪಾತ, ಹೂಬಳ್ಳಿ, ಕೊಳಗಳಿಂದ ಅಲಂಕರಿಸಿದರು **ಅವು ಭೂಮಿಯ ಮೇಲಿನ ಸ್ವರ್ಗದಂತಿದ್ದವು.** ಕೆಲವನ್ನು ಮನರಂಜನೆಗಾಗಿ, ಬೇಟೆಗಾಗಿ, ಕುದುರೆ ಸವಾರಿಗಾಗಿ ನಿರ್ಮಿಸಿದರು, ರಾಜಧಾನಿ ಮತ್ತು ವಿವಿಧ ಪಟ್ಟಣಗಳಲ್ಲಿ ಅವನ್ನು ನಿರ್ಮಿಸಿದರು. ಉದ್ಯಾನವನ ನಿರ್ಮಾಣ ಕಲೆಯನ್ನು ಬಾಬರ್ ಪರ್ಶಿಯಾದಿಂದ ಭಾರತಕ್ಕೆ ತಂದನು. ಅವನು ಕಾಬೂಲ್, ಆಗ್ರ ಮತ್ತು ದೆಹಲಿಗಳಲ್ಲಿ ಹೂದೋಟಗಳನ್ನು ನಿರ್ಮಿಸಿದನು. ಅಗ್ರದಲ್ಲಿ ಅರಾಂಭಾಘ್‌ನ್ನು ನಿರ್ಮಿಸಿದನು. **'ಸ್ವರ್ಗದ ಉದ್ಯಾನ (ನೂರ್–ಎ–ಅಥ–ಶಾನ್)** ಎಂದು ಕರೆಯುವ ಇದಕ್ಕೆ ಈಗ **ರಾಮ್‌ಬಾಪ್** ಎಂಬ ಹೆಸರಿದೆ. ಅಕ್ಬರ್‌ನ ಸಿಕಂದ್ರಾ ಸಿಕ್ರಿ, ಆಗ್ರ, ಶ್ರೀನಗರಗಳಲ್ಲಿ ತೋಟಗಳನ್ನು ನಿರ್ಮಿಸಿದನು. ಸಿಕಂದ್ರಾ ಗೋರಿಯ ಉದ್ಯಾನವನ ಕಾರಂಜಿಗಳಿಂದ ಕಂಗೊಳಿಸುತ್ತಿತ್ತು. ಜಹಂಗೀರ್‌ನು ಲಾಹೋರಿನ ಷಹದಾರವನ, ದಿಲ್‌ಷಾದ್‌ಬಾಘ್, ಕಾಶ್ಮೀರ್‌ನ ಶ್ರೀನಗರದ **ಶಾಲಿಮಾರ್** ತೋಟಗಳಲ್ಲಿ ನಿರ್ಮಸಿದನು. ಶ್ರೀನಗರದಲ್ಲಿ ವಿಶ್ವಪ್ರಸಿದ್ಧ **ಸಾಲ್ಟ್‌ರೇಂಜ್** ಸರೋವರವಿದೆ. ಷಾಜಹಾನ್‌ನ ಅಗ್ರದ ತಾಜ್‌ಮಹಲ್ ಮುಂದೆ 19001000 ಅಡಿ ವಿಸ್ತೀರ್ಣದ ತೋಟ. ಕಾರಂಜಿ ಹಾಗೂ ಕೊಳವನ್ನು ನಿರ್ಮಿಸಿದನು. ಅದು ಪ್ರವಾಸಿಗರಿಗೆ ಸ್ವರ್ಗದಂತಿದೆ. ಅದೇ ರೀತಿ ಅವನು ಲಾಹೋರಿನ ಶಾಲಿಮಾರ್, ಆಗ್ರದ ಅಂಗುರಿಭಾಘ, ದೆಹಲಿಯ ಕೆಂಪುಕೋಟೆಯ ಉದ್ಯಾನವನಗಳನ್ನು ನಿರ್ಮಿಸಿದನು. ಪಂಜಾಬ್‌ನಲ್ಲಿ ಪಿಂಜೋರ್‌ಬಾಘ ಇದೆ. ಅಕ್ಬರ್‌ಗೋರಿಯ ಪಾರ್ಶ್ವಗಳಲ್ಲಿ ಕಾರಂಜಿಗಳಿವೆ.



downloaded from: www.kpscvaani.com

ಷಾಜಹಾನನ ಮಾವ ಆಸಫ್‌ಖಾನ್ ಶ್ರೀನಗರದಲ್ಲಿ ನಂದನವನ (ನಿಷಾತ್‌ಬಾಘ್) ವನ್ನು ನಿರ್ಮಿಸಿದನು. ದಾರಾಶೂಕು ಕಾಬೂಲಿನ ವಜೀರ್‌ಬಾಘಗೆ ತಳಹದಿ ಹಾಕಿದನು.

## 7. ಹಸ್ತಾಕ್ಷರ ಕಲೆ:

ಹಸ್ತಾಕ್ಷರ ಕಲೆ ಚಿತ್ರಕಲೆಯ ಒಂದು ಭಾಗವಾಗಿತ್ತು. ಮೊಗಲರ ಕಾಲದಲ್ಲಿ ಅದು ಹೆಚ್ಚು ಜನಪ್ರಿಯವಾಯಿತು. ಕ್ಯಾಲಿಗ್ರಫಿಯನ್ನು ನಾಣ್ಯಗಳನ್ನು ಟಂಕಿಸಲು, ಕಟ್ಟಡಗಳ ಮೇಲೆ ಕುರಾನಿನ ಸಾಲುಗಳನ್ನು ಕೆತ್ತಲು ಬಳಸಲಾಗುತ್ತಿತ್ತು. ಅದರಲ್ಲಿ 8 ಬಗೆಗಳಿದ್ದವು ಕ್ಯಾಲಿಗ್ರಫಿಯನ್ನು ಲಲಿತಕಲೆ ಎಂದು ಪರಿಗಣಿಸಿದ್ದರಿಂದ ಅದಕ್ಕೆ ಪ್ರೋತ್ಸಾಹ ದೊರೆಯಿತು. ಅನಕ್ಷರಸ್ಥನಾದ ಅಕ್ಬರ್ ಅದನ್ನು ಮೆಚ್ಚಿಕೊಂಡಿದ್ದನು. ಅವನು ಅನೇಕ ಕ್ಯಾಲಿಗ್ರಫಕರನ್ನು ನೇಮಿಸಿಕೊಂಡಿದ್ದನು. ಅವರು ಅಕ್ಬರ್‌ನ ಗ್ರಂಥಾಲಯಕ್ಕೆ ಸುಂದರ ಹಸ್ತಪ್ರತಿಗಳನ್ನು ಸಿದ್ದಪಡಿಸಿದರು. ಅವನ ಅಸ್ಥಾನದಲ್ಲಿ **ಜರಿಕಲಂ** ಎಂಬ ಬಿರುದು ಗಳಿಸಿದ **ಮಹಮದ್ ಹುಸ್ಸೇನ್** ಎಂಬ ಹಸ್ತಾಕ್ಷರ ತಜ್ಞನಿದ್ದನು. ಅದೇ ರೀತಿ ಷಾಜಹಾನ್ ಅಸ್ಥಾನದಲ್ಲಿ **ಮೀರ್‌ಹಸೀಂ,** ಔರಂಗಜೇಬನ ಆಸ್ಥಾನದಲ್ಲಿ **ಜವಹಾರ್ ರಾಕಂ** ಎಂಬ ಹಸ್ತಾಕ್ಷರ ತಜ್ಞರಿದ್ದರು. ಔರಂಗಜೇಬ್‌ನು ಕ್ಯಾಲಿಗ್ರಫಿಯಲ್ಲಿ ನುರಿತವನಾಗಿದ್ದನು. ಅಕ್ಬರನು ಹಸ್ತಾಕ್ಷರ ಕೆಲವನ್ನು ಸಚಿತ್ರಗಳಲ್ಲಿ ಕಲೆಹಾಕಿದನು.

## 8. ಕುಂಭ ಕಲೆ:

**ಮಣ್ಣಿನ ಕಲಾತ್ಮಕ ಮಡಿಕೆಗಳು ಹಾಗೂ ಪಾತ್ರೆಗಳ ತಯಾರಿಕೆಗೆ ಕುಂಭಕಲೆ ಎಂದು ಹೆಸರು**. ಅವುಗಳಿಗೆ ವಿಶೇಷ ಬೇಡಿಕೆ ಇದ್ದುದರಿಂದ ಅದಕ್ಕೆ ಮೊಗಲರು ಪ್ರೋತ್ಸಾಹ ನೀಡಿದರು. ವಿವಿಧ ಮಣ್ಣಿನ ಮಡಿಕೆಗಳನ್ನು ಕಪ್ಪು ಬೂದು ಮತ್ತು ಬಿಳಿ ಬಣ್ಣಗಳಲ್ಲಿ ತಯಾರಿಸಲಾಗುತ್ತಿತ್ತು. ನುರಿತ ಕಲಾವಿದರು ಅವುಗಳ ಮೇಲೆ ಹಿಂದೂ ದೇವತೆಗಳು, ಹೂಬಳ್ಳಿ ಚಿತ್ರಗಳನ್ನು ಸೂಕ್ಷ್ಮ ರೇಖಾವಿನ್ಯಾಸಗಳಿಂದ ಅಲಂಕರಿಸುತ್ತಿದ್ದರು. ಕಲಾವಿದ ವರ್ಣ ಸಂಯೋಜನೆ ಅದ್ಭುತವಾಗಿತ್ತು. ಅವರು ಮಡಕೆಗಳ ತಯಾರಿಕೆಯಲ್ಲಿ ವಿಶೇಷ ಕೌಶಲ್ಯ ವಿನೂತನತೆಯನ್ನು ತೋರ್ಪಡಿಸುತ್ತಿದ್ದರು. ಅದರಿಂದ ಬಿದರಿ ಕಲೆ ರೂಪುಗೊಂಡಿತು.

**ಸೂಚನೆ:** ಮುಸ್ಲಿಂ ಪ್ರಭುತ್ವ ಕಾಲದ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿ ಬೆಳವಣಿಗೆಗಳನ್ನು ದೆಹಲಿ ಸುಲ್ತಾನರು ಅಧ್ಯಾಯದಲ್ಲಿ ಪ್ರತ್ಯೇಕವಾಗಿ ವಿವರಿಸಲಾಗಿದೆ.



downloaded from: www.kpscvaani.com

### 9. ಕಲೆ :-

ಕದಂಬರು ವೈದಿಕ ಧರ್ಮಾನುಯಾಯಿಗಳಾದರೂ ಜೈನ ಮತ್ತು ಬೌದ್ಧ ಧರ್ಮಗಳನ್ನು ಪ್ರೋತ್ಸಾಹಿಸಿದರು. ಹಾನಗಲ್, ಪುಲಿಗೆರೆ ಮುಂತಾದ ಸ್ಥಳಗಳಲ್ಲಿ ಜೈನ ದೇವಾಲಯಗಳಿಗೆ ಮತ್ತು ವಿದ್ವಾಂಸರುಗಳಿಗೆ ದಾನ ದತ್ತಿಗಳನ್ನು ನೀಡಿ ಕರ್ನಾಟಕದಲ್ಲಿ ಜೈನ ಸಂಸ್ಕೃತಿಯು ಹರಡಲು ಉತ್ತೇಜನ ನೀಡಿದರು.

ಕದಂಬರ ನಾಡಿನಲ್ಲಿ ಬೌದ್ಧ ಧರ್ಮವು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಇದು ಎರಡು ಪ್ರಮುಖ ಕೇಂದ್ರಗಳಾದ ಅಂಜತ ಮತ್ತು ಬನವಾಸಿಯನ್ನು ಒಳಗೊಂಡಿತ್ತು. ದೇವಾಲಯಗಳು ಹಬ್ಬ, ಉತ್ಸವಗಳ ಕೇಂದ್ರವಾಗಿದ್ದವು. ಪ್ರಾಕೃತ-ಸಂಸ್ಕೃತ ಭಾಷೆಗೆ ಪ್ರೋತ್ಸಾಹ ನೀಡಿದ್ದು, ಮೊದಲು ಪ್ರಾಕೃತ ನಂತರ ಸಂಸ್ಕೃತ ರಾಜಭಾಷೆಯಾಯಿತು. ಕನ್ನಡವೂ ಜನರ ಭಾಷೆ ಆಗಿತ್ತು. ಅತ್ಯಂತ ಪ್ರಾಚೀನವಾದ ಹಲ್ಮಿಡಿ ಶಾಸನವು ಐದನೆಯ ಶತಮಾನದಲ್ಲಿ ರೂಢಿಯಲ್ಲಿದ್ದ ಕನ್ನಡ ಭಾಷೆಯ ಸ್ವರೂಪವನ್ನು ತೋರಿಸಿಕೊಡುತ್ತದೆ. ಇದೇ ಕನ್ನಡದಲ್ಲಿ ದೊರೆತ ಮೊದಲ ಶಾಸನವಾಗಿದೆ.

ಕರ್ನಾಟಕದಲ್ಲಿ ವಾಸ್ತುಶಿಲ್ಪ ಕಲೆಗೆ ತಳಹದಿಯನ್ನು ಕದಂಬರು ಹಾಕಿದರು. ಬನವಾಸಿಯಲ್ಲಿ ಅನೇಕ ದೇವಾಲಯಗಳನ್ನು ಮತ್ತು ಬಸದಿಗಳನ್ನು ನಿರ್ಮಿಸಿದರು. ಕದಂಬರ ಕಾಲದಲ್ಲಿ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣ ಅಭಿವೃದ್ಧಿಗೊಂಡು ಶಿಕ್ಷಣ ಕೇಂದ್ರಗಳಾದ ಅಗ್ರಹಾರಗಳು, ಬ್ರಹ್ಮಪುರಿಗಳು ಮತ್ತು ಬಳ್ಳಿಗಾವೆಯಲ್ಲಿದ್ದವು. ಅಗ್ರಹಾರಗಳು ಗುರುಕುಲಗಳಾಗಿದ್ದು ವಸತಿ ಶಾಲೆಗಳಂತೆ ನಡೆಯುತ್ತಿದ್ದವು.

## ಮೊಗಲರ ಕಾಲದ ಪ್ರಮುಖ ಕಟ್ಟಡಗಳ ಸಮೀಕ್ಷೆ ಇಂತಿದೆ.

- **ಬಾಬರ್‌ನ ಕಟ್ಟಡಗಳು:**

ಬಾಬರ್‌ನು ಭಾರತದಲ್ಲಿ ಅತ್ಯಲ್ಪಕಾಲ ಉಳಿದರೂ ಸುಂದರವಾದ ಕಟ್ಟಡಗಳನ್ನು ನಿರ್ಮಿಸಿದನು. ಬಾಬರ್‌ನಾಮದಲ್ಲಿ ಹೇಳಿರುವಂತೆ ಆತ ಇಲ್ಲಿನ ಕಟ್ಟಡಗಳ ನಿರ್ಮಾಣಕ್ಕೆ ಕಾನ್‌ಸ್ಟ್ಯಾಂಟಿನೋಪಲನ್‌ನಿಂದ ಶಿಲ್ಪಿಗಳನ್ನು ಕರೆಸಿಕೊಂಡಿದ್ದನು. ಉದಾ:ಗೆ ಪ್ರತಿನಿತ್ಯ ಆಗ್ರ ಕಟ್ಟಡಗಳ ನಿರ್ಮಾಣದಲ್ಲಿ 680 ಶಿಲ್ಪಿಗಳು ಹಾಗೂ ಫತೇಪುರ್ ಸಿಕ್ರಿ, ಬಿಯಾನ, ಗ್ವಾಲಿಯಾರ್, ದೋಲ್‌ಪುರ ಕಟ್ಟಡಗಳ ನಿರ್ಮಾಣಕ್ಕೆ 1491 ಶಿಲ್ಪಿಗಳು ಕಾರ್ಯನಿರತರಾಗಿದ್ದರು. ಇವರಲ್ಲಿ **ಅಲ್ಬೇನಿಯಾದ ಶಿಲ್ಪಿ ಸಿನಾನ್ ಇದ್ದನು.** ಬಾಬರ್‌ನ ಕಟ್ಟಡಗಳೆಂದರೆ ಪಾಣಿಪತ್ ಬಳಿಯ **ಕಾಬೂಲಿಬಾಗ್ ಮಸೀದಿ, ಸಂಭಾಲದ ಜಾಮೀ ಮಸೀದಿ** ಮತ್ತು ಆಗ್ರದ ಹಳೆಯ ಲೂದಿ ಕೋಟೆಯೊಳಗಿನ ಮಸೀದಿಗಳು, ರಾಮ್‌ಭಾಘ, ಜಹುಬಾಘ ಮುಖ್ಯವಾದವು. ಈಗಿನ ಆಯೋಧ್ಯದ ವಿವಾದಾಸ್ಪದವಾದ ಬಾಬ್ರಿ ಮಸೀದಿ ನಿರ್ಮಾಪಕ ಬಾಬರ್‌ನೇ ಆಗಿದ್ದಾನೆ. ಇದನ್ನು 1992ರಲ್ಲಿ ಕೆಡವಲಾಯಿತು. ಬಾಬರ್‌ನ ಸಮಾಧಿ ಕಾಬೂಲ್‌ನಲ್ಲಿದೆ.



downloaded from: www.kpscvaani.com

- **ಷೇರ್‌ಷಹನ ಕಟ್ಟಡಗಳು:**

ದೆಹಲಿಯ **ಪುರಾನ್ ಖ್ವಿಲಾ** ಮತ್ತು ಬಿಹಾರಿನ ಸಸಾರಾಂನ **ಅವರ ಗೋರಿ** (ಒಚಿಣಾುಟಜಾು) ಷೇರ್‌ಷಹನ ಮುಖ್ಯ ನಿರ್ಮಾಣಗಳು ಅವು ಪರ್ಶಿಯನ್ ಶೈಲಿಯಲ್ಲಿವೆ. ಸಸಾರಂನ ಅವನ ಸಮಾಧಿ ತಾಜ್‌ಮಹಲ್‌ಗಿಂತ ಶ್ರೇಷ್ಠವೆಂದು ಕನ್ನಿಂಗ್‌ಹ್ಯಾಂ ಹೇಳಿದ್ದಾರೆ. ಫರ್ಗ್ಯುಸನ್ ಪ್ರಕಾರ "ಪುರಾನ್ ಖ್ವಿಲಾ (ಕಾಡಿಚಿಟಿಚಿ ಕಿಣುಟಚಿ) ಷೇರ್‌ಷಹನ ಕಟ್ಟಡಗಳಲ್ಲೇ ಅಪೂರ್ವವಾದದು" ಪಂಜಾಬಿನ ರೋಹತಸ್ ಕೋಟೆ, ಮಾನ್‌ಕೋಟೆ, ದೆಹಲಿಯ ಹಳೇಕೋಟೆಗಳು ಷೇರ್‌ಷಹನ ಇತರ ನಿರ್ಮಾಣಗಳು

- **ಹುಮಾಯುನ್‌ನ ಕಟ್ಟಡಗಳು:**

ಹುಮಾಯುನ್‌ನ ಬದುಕು ದುರಂತಗಳ ಸರಮಾಲೆಯಿಂದ ಕೂಡಿದ್ದರೂ ಆತ ಕಲಾರಸಿಕನೇ ಆಗಿದ್ದನು. ಆಗ್ರ ಮಸೀದಿ, ಹಿಸ್ಸಾರ್ ಜಿಲ್ಲೆಯ **ಫತೇಬಾದ್ ಮಸೀದಿ, ಲಾಹೋರಿನ ಶಾಲಿಮಾರ್ ತೋಟ ಮತ್ತು ದೆಹಲಿಯ ದೀನ್‌ಪನ್ನಾ ಅರಮನೆ** ಹುಮಾಯುನ್‌ನ ಪ್ರಮುಖ ನಿರ್ಮಾಣಗಳಾಗಿವೆ. ಹುಮಾಯುನ್ ದೆಹಲಿಯ ದೀನ್‌ಪನ್ನಾ ಎಂಬ ನಗರವನ್ನು ನಿರ್ಮಿಸಿದನು. ಆದರೆ ಅಧೀಗ ಉಳಿದಿಲ್ಲ. ಅಕ್ಬರ್‌ನ ಕಾಲದಲ್ಲಿ ಹುಮಾಯುನ್‌ನ ವಿಧವೆ ಹಾಜ್ಜೀಬೇಗಂ ದೆಹಲಿಯಲ್ಲಿ **ಹುಮಾಯುನ್ ಗೋರಿಯನ್ನು** ನಿರ್ಮಿಸಿದಳು(1565). 6.71 ಮೀ ಎತ್ತರದ ಜಗತಿ ಮೇಲೆ ನಿಂತಿರುವ ಅದು 38ಮೀ ಎತ್ತರವಾಗಿದೆ. ಇದಕ್ಕೆ 2 ಗುಮ್ಮಟ್ಟಗಳಿವೆ. ಪರ್ಶಿಯನ್ ಶೈಲಿಯಲ್ಲಿರುವ ಇದು ಸೌಂದರ್ಯದಲ್ಲಿ **2ನೇ ತಾಜ್‌ಮಹಲ್** ನಂತಿದೆ.

- **ಅಕ್ಬರ್‌ನ ಕಟ್ಟಡಗಳು:**

ಅಕ್ಬರ್‌ನು ಕಲಾರಸಿಕನು, ಮಹಾನಿರ್ಮಾಪಕನೂ ಆಗಿದ್ದು ಮೊಗಲ್ ವಾಸ್ತುಶಿಲ್ಪಕ್ಕೆ ಭದ್ರವಾದ ಬುನಾದಿ ಹಾಕಿದನು. **ಅಕ್ಬರ್ ತನ್ನ ಮನಸ್ಸಿನಲ್ಲಿ ಮೂಡಿದ ಕಲ್ಪನೆಯನ್ನು ಕಲ್ಲಿನಲ್ಲಿ ಅರಳಿಸಿಬಿಟ್ಟನು.** ಈಗ ಕಲೆಯಲ್ಲಿ ಪ್ರಥಮಬಾರಿಗೆ ಹಿಂದೂ–ಮುಸ್ಲಿಂ ಶೈಲಿಗಳು ಸಮಾಗಮಗೊಂಡವು. ಅವನು ಅನೇಕ ಹಿಂದೂ ಶಿಲ್ಪಿಗಳನ್ನು ನೇಮಿಸಿಕೊಂಡನು. ಆತ ವಾಸ್ತುಶಿಲ್ಪಕ್ಕೆ ಕೆಂಪು ಮರಳುಕಲ್ಲನ್ನು ಬಳಸಿದನು. ಅದರ ಕಮಾನುಗಳು ಸುಂದರವಾಗಿವೆ.

ಅವನ ಬಹುತೇಕ ಕಟ್ಟಡಗಳು ಅವರ ಕನಸಿನ ನಗರ (ಆಾಥಿ ಚಿ ಗಿಳಿಣಾಥಿ) ಎಂದು ಕರೆಯಲಾಗಿದೆ. ಅದನ್ನು ಷೇಕ್‌ಸಲೀಂಚಿಸ್ತಿಯ ಗೌರವ ಹಾಗೂ ಗುಜರಾತಿನ ವಿಜಯದ ನೆನಪಿಗಾಗಿ ನಿರ್ಮಿಸಿದನು. ಸಿಕ್ರಿ ನಿರ್ಮಾಣಕ್ಕೆ 11 ವರ್ಷಗಳು (1569–80) ಬೇಕಾದವು. ಫತೇಪುರ **ಸಿಕ್ರಿ 2 ಮೈಲಿ ಉದ್ದ ಹಾಗೂ 1 ಮೈಲಿ ಆಗಲವಾಗಿದೆ.** ಅದಕ್ಕೆ **9 ದ್ವಾರಗಳಿದ್ದವು.** ಇಲ್ಲಿ ಅಕ್ಬರ್ ನಿರ್ಮಿಸಿದ **ದಿವಾನ್–ಇ–**



downloaded from: www.kpscvaani.com

**ಖಾಸ್, ದಿವಾನ್–ಇ–ಆಮ್, ಪಂಚಮಹಲ್, ಜೋದ್‌ಬಾಯ್ ಅರಮನೆ, ಬೀರ್‌ಬಲ್ ಮಹಲ್, ಖಾಸ್ ಮಹಲ್, ಹಿರಾನ್ ಮಹಲ್, ಇಬಾದತ್‌ಖಾನ, ತುರ್ಕಿ ಸುಲ್ತಾನ್‌ಳ ಅರಮನೆ** (ವಾಸ್ತುಶಿಲ್ಪದ ಅನರ್ಘ್ಯ ರತ್ನ), **ವೈದ್ಯಾಲಯ, ಮಾರಿಯಂ ಮಹಲ್, ರಾಯಲ್ ಸ್ಕೂಲ್, ಕೋಶಗಾರ, ಬಾದಶಹ ಮಲಗುವ ಕೊಠಡಿಗಳು, ಜಾಮೀ ಮಸೀದಿ, ಷೇಕ್ ಸಲೀಂ ಚಿಸ್ತಿ ಸಮಾಧಿ, ಬುಲಂದ್ ದರ್ವಾಜ್ (ಗುಜರಾತ್ ದಿಗ್ವಿಜಯದ ನೆನಪಿಗಾಗಿ ನಿರ್ಮಿಸಿದ ವಿಜಯದ ಬಾಗಿಲು)** ಮುಂತಾದ ಕಟ್ಟಡಗಳಿವೆ. **ಬುಲಂದ್ ದರ್ವಾಜ್ ದ್ವಾರವು ಭಾರತದಲ್ಲೇ ಅತ್ಯಂತ ಎತ್ತರವಾದ ಬಾಗಿಲಾಗಿದೆ**. ಅದು 176 ಅಡಿ ಎತ್ತರ ಹಾಗೂ 130 ಅಡಿ ಅಗಲವಾಗಿದೆ. ಅದು ಭಾರತದ ಅತ್ಯುತ್ತಮ ವಾಸ್ತುಶಿಲ್ಪ ಕೃತಿಗಳಲ್ಲಿ ಒಂದಾಗಿದೆ. ಅದಕ್ಕೆ ಜೈನ ಶೈಲಿಯ ಗುಮ್ಮಟ ಕಳಸಗಳಿವೆ. ನಡುಗುಮ್ಮಟ 41 ಅಡಿ ಎತ್ತರವಾಗಿದೆ. 288 ಅಡಿ ಉದ್ದ, 66 ಅಡಿ ಅಗಲವಾಗಿರುವ ಗುಜರಾತ್ ದಿಗ್ವಿಜಯದ ನೆನಪಿಗೆ ಅದನ್ನು ನಿರ್ಮಿಸಲಾಯಿತು. ಜಾಮೀಮಸೀದಿ ಭಾರತದ ಸುಂದರ ಮಸೀದಿಗಳಲ್ಲಿ ಒಂದಾಗಿದೆ. ಫರ್ಗ್ಯುಸನ್‌ರು ಜಾಮೀಮಸೀದಿಯನ್ನು **'ಶಿಲೆಯಲ್ಲಿನ ಕಲ್ಪನಾ ಪ್ರಪಂಚದ ವಿಹಾರವೆಂದು' 'ಸಿಕ್ರಿಯ ಭದ್ರತೆಯ ಸಂಕೇತ'** ಎಂದು ವರ್ಣಿಸಲಾಗಿದೆ. ಅಕ್ಬರ್‌ನು ನಿರ್ಮಿಸಿದ ಸಿಕ್ರಿಯ ಷೇಕ್ ಸಲೀಂ ಚಿಸ್ತಿಯ ಸಮಾಧಿಯ ಬಿಳಿ ಅಮೃತಶಿಲೆಗಳಿಂದ ಕಟ್ಟಿದ್ದು ಅದರ ಗುಮ್ಮಟ ಆಕರ್ಷಣೆಯವಾಗಿದೆ.

ವಿ.ಎ. ಸ್ಮಿತ್‌ರು ಫತೇಪುರ ಸಿಕ್ರಿಯನ್ನು **"ಶಿಲೆಯಲ್ಲಿನ ಅದ್ಭುತ ರಮ್ಯ ಕಾವ್ಯ"** ಹಾಗೂ ವಾಸ್ತುಶಿಲ್ಪದ ವಜ್ರ, ಹಿಂದೆಂದೂ ಸೃಷ್ಟಿಯಾಗದ ಅಥವಾ ಮತ್ತೆ ಸೃಷ್ಟಿಸಲಾಗದು ಎಂತಲೂ ಫರ್ಗ್ಯುಸನ್‌ರು **'ಒಬ್ಬ ಮಹಾಶಯ ಮನಸ್ಸಿನ ದರ್ಪಣವಾಗಿದೆ'** ಎಂದು ಬಣ್ಣಿಸಿದ್ದಾರೆ. ಪಂಚಮಹಲ್ 5 ಮಹಡಿಗಳ ಕಟ್ಟಡವಾಗಿದ್ದು, 84 ಸ್ತಂಭಗಳಿಂದ ಕೂಡಿದೆ. ಫತೇಪುರ ಸಿಕ್ರಿ 1585 ರವರೆಗೂ ರಾಜಧಾನಿಯಾಗಿದ್ದು, ಅನಂತರ ಆಗ್ರಾ ರಾಜಧಾನಿಯಾಯಿತು ಆಗ್ರದ **ಆಲೈಕೋಟೆ 2.4** ಕಿ.ಮೀ ಉದ್ದ ಹಾಗೂ 75 ಅಡಿ ಎತ್ತರ (25 ಮೀ) ವಾಗಿತ್ತು. ಅದಕ್ಕೆ **ಆನೆದ್ವಾರ** ಅಥವಾ **ದೆಹಲಿದ್ವಾರ** ಮತ್ತು **ಅಮರ್‌ಸಿಂಗ್ ದ್ವಾರ** ಎಂಬ 2 ದ್ವಾರಗಳಿದ್ದವು. ಆಗ್ರದಲ್ಲಿ ಅಕ್ಬರ್ ನಿರ್ಮಿಸಿದ **ಅಕ್ಬರ್ ಮಹಲ್, ಮೋತಿ ಮಹಲ್, ದಿವಾನ್ –ಇ–ಆಮ್, ದಿವಾನ್–ಇ–ಖಾಸ್, ನಗೀನಾ ಮಸೀದಿ, ಜನಾನ ಅರಮನೆ, ಜಹಂಗೀರ್ ಮಹಲ್** ಕಟ್ಟಡಗಳಿವೆ ಅಕ್ಬರನು **ಸಿಕಂದರ್**‌ನಲ್ಲಿ ತನ್ನ ಗೋರಿಯ ನಿರ್ಮಾಣ ಕಾರ್ಯ ಆರಂಭಿಸಿದನು. **"ಅಕ್ಬರ್‌ನ ಗೋರಿ ಭಾರತದ ಪ್ರಸಿದ್ಧ ಚಕ್ರವರ್ತಿಯ ಪ್ರಸಿದ್ಧ ಅರ್ಹ ಸ್ಮಾರಕ"** ಎಂದು ಹ್ಯಾವೆಲ್ ಹೇಳಿದ್ದಾರೆ. ಅದರ ನಿರ್ಮಾಣ ವೆಚ್ಚ **15 ಲಕ್ಷ ರೂ ಇಡೀ ಏಷ್ಯಾದಲ್ಲೇ ಅತ್ಯಂತ ಸುಂದರ ಗೋರಿ ಇದಾಗಿದೆ.**

ಅದರ ಮೇಲೆ ಮರಗಿಡ ಪುಷ್ಪ ಪತಂಗ ಕೆತ್ತನೆಗಳ ಅಲಂಕಾರಗಳಿವೆ. ಅದರ ಮುಂದೆ ಸುಂದರ ತೋಟವಿದೆ. ಅಕ್ಬರ್ ಅಲಹಾಬಾದಿನಲ್ಲಿ 40 ಸ್ತಂಭಗಳುಳ್ಳ ಅರಮನೆಯನ್ನು ನಿರ್ಮಿಸಿದನು. ಜೊತೆಗೆ ಅಜ್ಮೀರ್, ಬಿಕನೀರ್, ಜೋದ್‌ಪುರ ಅರಮನೆಗಳು ಆಗ್ರ, ಅಲಹಾಬಾದ್. ಅಟ್ಟೋಕ್, ಲಾಹೋರ್‌ನ ಕೋಟೆಗಳು ಅಟ್ಟೋಕ್ ಮಸೀದಿ, ಮೆರ್ತಾ ಮಸೀದಿ, ಅನೇಕ ಸರಾಯಿಗಳು, ಕೆರೆಗಳು, ಮದರಸಗಳು ಕೋಟೆಗಳಾದ **ಅಗ್ರಮ, ಲಾಹೋರ್** ಮತ್ತು ಅಲಹಾಬಾದ್ ಕೋಟೆಗಳನ್ನು ನಿರ್ಮಿಸಿದನು.



downloaded from: www.kpscvaani.com

- **ಜಹಂಗೀರ್‌ನ ಕಟ್ಟಡಗಳು:-**

ಜಹಂಗೀರ್‌ನು ಚಿತ್ರಕಲೆಯಲ್ಲಿ ಹೆಚ್ಚು ಆಸಕ್ತನಾಗಿದ್ದರೂ ವಾಸ್ತುಶಿಲ್ಪವನ್ನು ಕಡೆಗಣಿಸಲಿಲ್ಲ. ಅವನ ರಾಣಿ ನೂರ್‌ಜಹಾನ್‌ಳು ತನ್ನ ತಂದೆ ಮಿರ್ಜಾ ಗಯಾಸ್ ಬೇಗ್ ಅಥವಾ **ಇತ್ಮದ್-ಉದ್-ದೌಲ್‌**ನ ಸಮಾಧಿಯನ್ನು ಆಗ್ರದಲ್ಲಿ ನಿರ್ಮಿಸಿದಳು. ಇದು ಸೌಂದರ್ಯದಲ್ಲಿ ತಾಜ್‌ಮಹಲನ್ನು ಹೋಲುತ್ತದೆ. ಬಿಳಿ ಅಮೃತಶಿಲೆಗಳಿಂದ ಅದನ್ನು ನಿರ್ಮಿಸಲಾಗಿದೆ. **"ಇತ್ಮದ್-ಉದ್-ದೌಲ್ ಸಮಾಧಿ ಮೊಗಲರ, ಮನದಲ್ಲಿ ಅಡಗಿರುವ ಪೂರ್ವ ಭುವನ ಸುಂದರಿ"** ಎಂದು ಪರ್ಸಿಬ್ರೌನ್ ಹೇಳಿದ್ದಾರೆ. ನೂರ್‌ಜಹಾನ್ ಲಾಹೋರಿನಲ್ಲಿ ನಿರ್ಮಿಸಿದಳು. **ಜಹಂಗೀರ್ ಸಮಾಧಿ, ಬಾದಷಹ ಮಸೀದಿ, ನಿಜಾಮುದ್ದೀನ್ ಔಲಿಯಾನ ಗೋರಿ**ಗಳನ್ನು. ಅಗ್ರಕೋಟೆಯಲ್ಲಿ ಜಹಂಗೀರ್ ಮಹಲನ್ನು ನಿರ್ಮಿಸಿದಳು. ಜಹಂಗೀರ್ ದೆಹಲಿಯ ಅಬ್ದುಲ್ ರಹೀಂಖಾನ್-ಇ-ಖಾನಾನ ಸಮಾಧಿ ನಿರ್ಮಿಸಿದನಲ್ಲದೆ. ಸಿಕಂದರ್‌ನ ಅಕ್ಬರ್ ಗೋರಿ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿದನು. ಜಹಂಗೀರ್ ತೋಟಗಳನ್ನು ನಿರ್ಮಿಸುವುದರಲ್ಲಿ ಎತ್ತಿದ ಕೈ ಆತ ದಿಲ್‌ಷಾದ್‌ಬಾಘ್, ನಿಷಾತ್‌ಬಾಘ್, ಕಾಶ್ಮೀರ್‌ನ ಶ್ರೀನಗರ ವಿಖ್ಯಾತ **ಶಾಲಿಮಾರ್ ತೋಟಗಳನ್ನು** ನಿರ್ಮಿಸಿದನು. ಲಾಹೋರ್ ಬಳಿ ಮೊಗಲ್ ಉದ್ಯಾನವನ್ನು ನಿರ್ಮಿಸಿದನು.

- **ಷಾಜಹಾನ್‌ನ ಕಟ್ಟಡಗಳು:**

ಷಾಜಹಾನ್ ಕಾಲ ವಾಸ್ತುಶಿಲ್ಪ ದೃಷ್ಟಿಯಿಂದ **ಸುವರ್ಣಯುಗವಾಗಿತ್ತು**. ಎ.ಎಲ್ ಶ್ರೀವಾಸ್ತವರ ಪ್ರಕಾರ **"ಮಧ್ಯಯುಗದ ಭಾರತದ ಚರಿತ್ರೆಯಲ್ಲಿ ಷಾಜಹಾನ್ ಕಾಲ ಸುವರ್ಣಯುಗವಾಗಿತು"**. **'ಕಟ್ಟಡಗಳ ರಾಜ', 'ವೈಭವ ಕಟ್ಟಡಗಳ ನಿರ್ಮಾಪಕ'** ಎಂದೇ ಹೆಸರಾದ ಷಾಜಹಾನ್ ವಾಸ್ತುರಚನೆಯಲ್ಲಿ ಉಳಿದೆಲ್ಲಾ ಮೊಗಲರನ್ನು ಮೀರಿಸಿದನು. ಅವನ ಕಟ್ಟಡಗಳು ಅಪೂರ್ವ ಅಲಂಕಾರಕ್ಕೆ ವಿಫುಲ ಪ್ರದರ್ಶನಕ್ಕೆ, ಸೌಂದರ್ಯಕ್ಕೆ ಭವ್ಯತೆಗೆ ಹೆಸರಾಗಿವೆ. ಅವನು ಕೆಂಪು ಕೋಟೆ ಒಳಗೆ 3 ದೇವಾಲಯಗಳನ್ನು ಕಟ್ಟಿಸಿದನು. ವಾಸ್ತುಶಿಲ್ಪ ಪ್ರಗತಿಯ ಅವನ ಕಾಲವನ್ನು **ರೋಮಿನ ಆಗಸ್ಟಸ್ ಸೀಸರ್** ಆಳ್ವಿಕೆಗೆ ಹೋಲಿಸಲಾಗಿದೆ. ಪರ್ಸಿಬ್ರೌನ್ ಹೇಳಿದಂತೆ **"ಷಾಜಹಾನ್ ಮರಳುಗಲ್ಲುಗಳಿಂದ ಪಡೆದ ಮೊಗಲ್ ನಗರಗಳನ್ನು ಅಮೃತಶಿಲೆಗಳಿಂದ ಬಿಟ್ಟನು"** ಆತ **"ವಾಸ್ತು ಶಿಲ್ಪವನ್ನು ದೈತ್ಯರಂತೆ ಕಲ್ಪಿಸಿ ರತ್ನಗಳಂತೆ ಪೂರ್ಣಗೊಳಿಸಿದನು"** ಬಿಳಿ ಅಮೃತಶಿಲೆಗಳ ಯುಗ ಅವನದು. ಅವನು ಅನೇಕ ಅರಮನೆಗಳು, ಮಸೀದಿಗಳು ಗೋರಿಗಳು, ಕೋಟೆಗಳು, ಉದ್ಯಾನವನಗಳನ್ನು ನಿರ್ಮಿಸಿದನು. ಕೌಶಲ್ಯಪೂರ್ಣ ಅಲಂಕಾರ, ವಿಪುಲ ಪ್ರದರ್ಶನ, ದೀರ್ಘಬಾಳಿಕೆ, ಭವ್ಯತೆ ಸೌಂದರ್ಯತೆಯಲ್ಲಿ ಅವು ಉಳಿದ ಮೊಗಲ್ ಕಟ್ಟಡಗಳನ್ನು ಮೀರಿಸಿವೆ. ಅವನ ರಚನೆಗಳು ಬೃಹತ್ ಗಾತ್ರದ ಆಭರಣಗಳಂತಿವೆ. ಅವುಗಳೆಂದರೆ

**ದೆಹಲಿ ಕಟ್ಟಡಗಳು: ಕೆಂಪುಕೋಟೆ, ಮೋತಿಮಹಲ್, ರಂಗಮಹಲ್, ದಿವಾನ್-ಇ-ಖಾಸ್ (ಷಾ ಮಹಲ್), ಹೀರಾಮಹಲ್, ನಹು-ಇ-ಬಿಹಿಸ್ತ್, ಜಾಮೀಮಸೀದಿ, ದಿವಾನ್-ಇ-ಆಮ್** ದೆಹಲಿಯಲ್ಲಿನ




downloaded from: www.kpscvaani.com

ಷಾಜಹಾನ್‌ನ ಮುಖ್ಯ ಕಟ್ಟಡಗಳು ದೆಹಲಿಯ ಕೆಂಪುಕೋಟೆ ಐತಿಹಾಸಿಕ ಪ್ರಸಿದ್ಧಿ ಪಡೆದಿದೆ. ಕೆಂಪು ಅಮೃತಶಿಲೆಗಳಿಂದ ನಿರ್ಮಿತ ಅದು 930495 ಮೀ ಉದ್ದಗಲವಿದೆ. ಅದಕ್ಕೆ 3 ದ್ವಾರಗಳಿವೆ. ಕೋಟೆಯ ಒಳಗಡೆ ಪಬ್ಲಿಕ್ ದರ್ಬಾರ್‌ಹಾಲ್, ಉಗ್ರಾಣ, ಆನೆ–ಕುದರೆ ಲಾಯ, ತೋಟ ಮತ್ತು ಇತರೆ ಕಟ್ಟಡಗಳಿವೆ ಇದರ ನಿರ್ಮಾಣ ವೆಚ್ಚ 50 ಲಕ್ಷ ಇದರ ಒಳಗಿರುವ ದಿವಾನ್–ಇ–ಖಾಸ್ ಅರಮನೆ **ಪ್ರಪಂಚದ ಮೇಲಿನ ಸ್ವರ್ಗ** ಎನಿಸಿಕೊಂಡಿದೆ. ಅಮೃತಶಿಲೆ. ಚಿನ್ನ, ಅನರ್ಘ್ಯಶಿಲೆಗಳಿಂದ ಅಲಂಕರಿಸಿರುವುದರಲ್ಲಿ ಖಾಸ್‌ದನ ಒಂದು ಶಾಸನದ ಉಕ್ತಿಯೊಂದು ಹೀಗಿದೆ **"ಭೂಮಿಯ ಮೇಲೆ ಸ್ವರ್ಗ ಇರುವುದಾದರೆ ಅದು ಇಲ್ಲಿಯೇ ಇದೆ. ಇಲ್ಲಿಯೇ ಇದೆ. ಅದು ಇದೇ"** ಅಲ್ಲಿದ್ದ ವಿಶ್ವವಿಖ್ಯಾತ ಮಯೂರ ಸಿಂಹಾಸನ ಇಡೀ ಅರಮನೆಗೆ ಶೋಭೆ ತರುತ್ತಿತ್ತು. ದೆಹಲಿಯ **ಜಾಮೀ ಮಸೀದಿ ಇಡೀ ಭಾರತದಲ್ಲೇ ಅತ್ಯಂತ ದೊಡ್ಡ ಮಸೀದಿಯಾಗಿದೆ(1644–58)**. ಷಾಜಹಾನ್ ದೆಹಲಿ ಬಳಿ ಷಾಜಹಾನಾಬಾದ್ ಎಂಬ ಹೊಸ ರಾಜಧಾನಿ ನಿರ್ಮಿಸಿದನು (1638). ಇದೆ ರೀತಿ ಲಾಹೋರಿನ ಕೋಟೆಯಲ್ಲಿ ದಿವಾನ್–ಇ–ಆಮ್, ಶೀಷ್ ಮಹಲ್‌ಗಳನ್ನು ನಿರ್ಮಿಸಿದನು.

- **ಆಗ್ರ ಕಟ್ಟಡಗಳು:**

ಷಾಜಹಾನ್ ಆಗ್ರದಲ್ಲಿ ವಿಶ್ವ ಪ್ರಸಿದ್ಧ **ತಾಜ್‌ಮಹಲ್, ಹವಳ** ಮಸೀದಿ ಅಥವಾ **ಮೋತಿ ಮಸೀದಿ, ದಿವಾನ್–ಇ–ಆಮ್, ದಿವಾನ್–ಇ–ಖಾಸ್, ಅಂಗುರಿಬಾಘ್, ಮಚ್ಚಿಭವನ್, ಜಾಮೀ ಮಸೀದಿ, ಮುಜಮ್ಮಾನ್ ಬುರುಜು, ಆಗ್ರಕೋಟೆ, ಖಾಸ್‌ಮಹಲ್, ಶಿಪ್‌ಮಹಲ್ (ದರ್ಪಣಗಳ ಅರಮನೆ)**ಗಳನ್ನು ನಿರ್ಮಿಸಿದನು. ಮೋತಿ ಮಸೀದಿ ಅಪೂರ್ವಕ್ಕೆ ಹೆಸರಾಗಿದೆ. ಮಮ್ತಾಜ್ ಮಹಲ್‌ನ ಪ್ರೀತಿಯ ನೆನಪಿಗೆ ತಾಜ್‌ಮಹಲ್‌ನ್ನು ನಿರ್ಮಿಸಿದನು. ಅದ್ಬುತತೆ, ಭವ್ಯತೆ ಸೌಂದರ್ಯವನ್ನು ಮೀರಿಸುವ ಮತ್ತೊಂದು ಕಟ್ಟಡ ಹಿಂದೂಸ್ಥಾನ್‌ನಲ್ಲಿ ಇಲ್ಲವಾಗಿದೆ. ಮೋತಿಮಸೀದಿ (ಹಜಿಡಿಟ ಒಜಿಜು) 237187 ಅಡಿ ಉದ್ದಗಲವಾಗಿದೆ. ಜಹನಾರ 5 ಲಕ್ಷ ರೂ.ನಿಂದ 103100 ಅಡಿ ಉದ್ದಗಲದ ಜಾಮಿ ಮಸೀದಿಯನ್ನು ಕೆಂಪುಶಿಲೆಯಲ್ಲಿ ನಿರ್ಮಿಸಿದಳು. ಇವಲ್ಲದೆ ಷಾಜಹಾನ್ ನಿರ್ಮಿಸಿದ ಇತರ ಕಟ್ಟಡಗಳೆಂದರೆ **ನಿಜಾಮುದ್ದೀನ್ ಔಲಿಯಾ ಗೋರಿ** (ದೆಹಲಿ), **ಜಿರೋಖ–ಇ–ದರ್ಶನ್** (ಆಗ್ರ). **ಆಗ್ರದ ನಗೀನ ಮಸೀದಿ, ಜಾಮೀ ಮಸೀದಿ**(ಅಜ್ಮೀರ್), **ಮೋತಿ ಮಸೀದಿ, ಮಚ್ಚಿ ಭವನ, ಜಹಂಗೀರ್ ಗೋರಿ** (ಲಾಹೋರ್) **ಲಾಹೋರಿನ ಶಾಲಿಮಾರ್ ತೋಟ, ಕೋಟೆ, ಕಾಶ್ಮೀರ್‌ನ ಶಾಲಿಮಾರ್ ಬಾಗ್, ವಜೀರ್‌ಬಾಗ್ ತೋಟಗಳು** ಇತ್ಯಾದಿ.

**ತಾಜ್‌ಮಹಲ್ (1632–53) ತಾಜ್‌ಮಹಲ್‌ನ್ನು ಷಜಹಾನನು ತನ್ನ ಪ್ರೀತಿಪಾತ್ರ ಮಡದಿ ಮಮ್ತಾಜ್ ಮಹಲ್‌ಳ ಜ್ಞಾಪಕಾರ್ಥ ಆಗ್ರದ ಯಮುನಾ ನದಿ ದಂಡೆಯಲ್ಲಿ ನಿರ್ಮಿಸಿದನು. ದಾಂಪತ್ಯ ನಿಷ್ಠೆಯ ಪವಿತ್ರ ಸ್ಮಾರಕವಿದು.** ಇದು ಪೂರ್ಣ ಪರ್ಶಿಯನ್ ಶೈಲಿಯಲ್ಲಿದೆ. ಆದರೂ ರಚನಾ ವಿನ್ಯಾಸ ಭಾರತೀಯದ್ದಾಗಿದೆ. ಇದಕ್ಕೆ ಬಿಳಿ ಅಮೃತಶಿಲೆಯನ್ನು ಬಳಸಲಾಗಿದೆ. 6.6 ಮೀ ಎತ್ತರದ ಜಗಲಿಯ ಮೇಲಿರುವ ಇದು 187



GNANADHARE IAS ACADEMY
downloaded from: www.kpscvaani.com

ಅಡಿ ಎತ್ತರವಿದೆ. ಇದರ ನಾಲ್ಕು ದಿಕ್ಕುಗಳಿಗೆ 4 ಮೀನಾರ್‌ಗಳು 137 ಅಡಿ ಎತ್ತರವಾಗಿವೆ. ಇದರ ನಡುಗುಮ್ಮಟ 80 ಅಡಿ ಎತ್ತರವಿದೆ ಹಾಗೂ 800 ಅಡಿ ಸುತ್ತಳತೆ ಹೊಂದಿದೆ. ತಾಜ್‌ಮಹಲ್ ನಕ್ಷೆಯನ್ನು ವೆನಿಶಿಯಾದ ವೆರೊನಿಯೋ ತಯಾರಿಸಿದನು. **ಷಿರಾಜಿ** ಇದರ ನಿರ್ಮಾಪಕ. ತಾಜ್‌ಮಹಲ್‌ನ್ನು ನಿರ್ಮಾಣ ಮಾಡಿದ ಶಿಲ್ಪಿ ಆಗ್ರದ ನಿವಾಸಿ **ಉಸ್ತಾದ್ ಇಸಾಕ್**. ಇದನ್ನು 20,000 ಕುಶಲಕರ್ಮಿಗಳು 22 ವರ್ಷಗಳ ಕಾಲ ನಿರ್ಮಿಸಿದರು. ಇದರ ನಿರ್ಮಾಣ ವೆಚ್ಚ 3 ಕೋಟಿ ರೂ.ಗಳು ಇದರ ಮುಂದೆ 10001900 ಅಡಿ ವಿಸ್ತಾರದ ತೋಟವಿದೆ. ಮಧ್ಯದಲ್ಲಿ ಕೊಳವಿದೆ. ಈ ತೋಟದ ನಕ್ಷೆ ತಯಾರಕ ಕಾಶ್ಮೀರ್‌ನ ಹಿಂದೂ **ರಣಮಲ್** ಬೆಳದಿಂಗಳಲ್ಲಿ ಇದರ ಬಣ್ಣ ಬದಲಾಗುತ್ತದೆ. ಪರ್ಶಿಯಾದಲ್ಲೂ ಇಂತಹ ಕಟ್ಟಡವಿಲ್ಲ ಮೊಗಲ್ ವಾಸ್ತುಶಿಲ್ಪದ ಪರಾಕಾಷ್ಟತೆಯ ಪ್ರತೀಕವಾದ ತಾಜ್‌ಮಹಲ್ ಅಪೂರ್ವ ಸೌಂದರ್ಯಕ್ಕೆ ಹೆಸರಾಗಿದೆ. ಪ್ರೇಮಿಗಳಿಗೆ ಇದೊಂದು ಸ್ವರ್ಗದ ತಾಣವಾಗಿದೆ. ಪರ್ಶಿಬ್ರೌನ್‌ರು ತಾಜ್‌ಮಹಲನ್ನು **ಭಾರತದ ಶ್ರೇಷ್ಠ ಕಲಾಕೃತಿಗಳಲ್ಲಿ ಒಂದು** ಎಂದು ಹೇಳಿದ್ದಾರೆ. ಆಗ್ರಾಗೆ ಅದು **ವಿಶ್ವಪರಂಪರೆ ತಾಣ ಎಂಬ ಕೀರ್ತಿ ತಂದಿದೆ**. ಆಧುನಿಕ ಅದ್ಭುತಗಳಲ್ಲಿ ಒಂದಾದ ತಾಜ್‌ಮಹಲ್‌ನ್ನು **"**ಶಿಲೆಗಳಲ್ಲಿನ ಭಾವಗೀತೆ**"** **'**ಸೌಂದರ್ಯದ ನಿಧಿ**'** **'**ವಾಸ್ತುಶಿಲ್ಪದ ರಾಣಿ**'** **'**ಅಮೃತಶಿಲೆಗಳಲ್ಲಿನ ಕನಸು**'** ಸೌಂದರ್ಯರಾಣಿ ಎಂದೆಲ್ಲಾ ವರ್ಣಿಸಲಾಗಿದೆ. ರವೀಂದ್ರನಾಥ ಠಾಗೂರ್ ತಾಜ್‌ಮಹಲ್‌ನ್ನು **ಕೆನ್ನೆಯ ಮೇಲಿನ ಚಿರಂತನ ಹನಿ** (ಣಜಚಿಡಿ ಠಟಿ ಣಉಜ ಅಟಜಿಞ ಠಜಿ ಜಾಟಿಜಾಟಟೀಥಿ) ಎಂದು ಕರೆದಿದ್ದಾರೆ. ಐರೋಪ್ಯ ಪ್ರಭಾವಕ್ಕೆ ಒಳಗಾಗದ ಅದು ಹಿಂದೂ–ಮುಸ್ಲಿಂ ಶೈಲಿಗಳ ಸಮಾಗಮಕ್ಕೆ ಉತ್ತಮ ಉದಾರಣೆಯಾಗಿದೆ.

- **ಮಯೂರ ಸಿಂಹಾಸನ:**

ಇದನ್ನು ಷಾಜಹಾನ್‌ನು 7 ವರ್ಷಗಳ ಪರಿಶ್ರಮದಿಂದ 1 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿದನು. ಇದು 9 ಅಡಿ ಉದ್ದ, $7^1/_2$ ಅಡಿ ಅಗಲ ಹಾಗೂ 15 ಅಡಿ ಎತ್ತರವಾಗಿತ್ತು. ಇದನ್ನು ಲಕ್ಷ ಬಂಗಾರದ ತೊಲಗಳಿಂದ ತಯಾರಿಸಲಾಗಿತ್ತು. ಅದು ಚಿನ್ನದಿಂದ ಮಾಡಿದ 20 ಕಂಬಗಳು ಹೊತ್ತು ನಿಂತಿತ್ತು. ಸಿಂಹಾಸನದ ಎರಡೂ ಬದಿಯ ಎರಡು ನವಿಲುಗಳನ್ನು ಅಪೂರ್ವ ಮುತ್ತುಗಳಿಂದ ಅಲಂಕರಿಸಲಾಗಿತ್ತು. ಸಿಂಹಾಸನವು ಪಾದಗಳ ಮೇಲೆ ನಿಂತ ತೂಗುಮಂಚದಂತಿತ್ತು. ಪಾದಗಳನ್ನು ಸಹ ಚಿನ್ನದಿಂದ ಮಾಡಲಾಗಿತ್ತು. ಇದನ್ನು ದೆಹಲಿಯ ಕೆಂಪುಕೋಟೆ ಅರಮನೆಯಲ್ಲಿ ಇಡಲಾಗಿತ್ತು. ಅದು ಇಡೀ ಮೊಗಲ್ ಆಸ್ಥಾನಕ್ಕೆ ಶೋಭೆ ತಂದುಕೊಟ್ಟಿತ್ತು. ಮೊಗಲ್ ಬಾದಷಗಳ ಅಡಂಬರಕ್ಕೆ ಅದು ಉತ್ತಮ ಸಾಕ್ಷಿಯಾಗಿದೆ. ಇದು ಅಂದಿನ ಜಗತ್ತಿನ ಯಾವ ಚಕ್ರವರ್ತಿಯೂ ಹೊಂದಿದ ಅತ್ಯಂತ ದುಬಾರಿ ಸಿಂಹಾಸನವಾಗಿತ್ತು. 1739ರಲ್ಲಿ ದೆಹಲಿಯನ್ನು ಮುತ್ತಿದ ನಾದಿರುಷಾನು ಇದನ್ನು ಕೊಳ್ಳಹೊಡೆದನ್ನು. ಇದು ಈಗ ಲಂಡನ್‌ನ ವಸ್ತು ಸಂಗ್ರಹಾಲಯದಲ್ಲಿದೆ. ಅದರ ಮೂಲ ಸಿಂಹಾಸನ ಲಭ್ಯವಾಗಿಲ್ಲ. ಇದರ ನಿರ್ಮಾಪಕ **ಬಾದಲ್‌ಖಾನ್,** ಷಾಜಹಾನ್‌ನ ಕಿರೀಟವನ್ನು ವಿಶ್ವವಿಖ್ಯಾತ **ಕೋಹಿನೂರ್** ವಜ್ರದಿಂದ ತಯಾರಿಸಲಾಗಿತ್ತು.



downloaded from: www.kpscvaani.com

- **ಔರಂಗಜೇಬ್‌ನ ಕಟ್ಟಡಗಳು:**

ಔರಂಗಜೇಬ್‌ನ ಕಾಲದಲ್ಲಿ ಮೊಗಲ್ ವಾಸ್ತುಶಿಲ್ಪ ನಶಿಸಿತು. ಅವನ ಆಳ್ವಿಕೆಯಲ್ಲಿ ಸುಂದರವಾದ ಒಂದೇ ಒಂದು ಸ್ಮಾರಕವಾಗಲೀ, ಸುಂದರ ಹಸ್ತಪ್ರತಿಯಾಗಲಿ, ಚಿತ್ರವಾಗಲಿ ರಚನೆಯಾಗಲಿಲ್ಲ. ಅವನು ಮತಾಂಧನಾಗಿದ್ದು ಕಲೆಗೆ ಹೆಚ್ಚಿನ ಪ್ರೋತ್ಸಾಹ ನೀಡಲಿಲ್ಲ ಆದರೂ ಅವನಿಂದ **ದೆಹಲಿಯ ಕೆಂಪುಕೋಟೆಯಲ್ಲಿರುವ ಮೋತಿ ಮಸೀದಿ, ಬನಾರಸ್‌ಗಳ ಮಸೀದಿಗಳು ಲಾಹೋರಿನ ಬಾದಷಹ ಮಸೀದಿಗಳು** ನಿರ್ಮಾಣಗೊಂಡವು ದೆಹಲಿಯ ಕೆಂಪುಕೋಟೆಯ ಮೋತಿ ಮಸೀದಿ, ಔರಂಗಬಾದಿನ ತನ್ನ ರಾಣಿ ರಬಿಯಾ ದೌರಾನಿಯ ಗೋರಿಗಳನ್ನು ಸಹ ಅವನು ನಿರ್ಮಿಸಿದನು.

- **ಪ್ರಾದೇಶಿಕ ಕಲೆ:**

ಮೊಗಲರ ಸಮಕಾಲಿನ ಪ್ರಾದೇಶಿಕ ರಾಜ್ಯಗಳಲ್ಲಿ ಹಲವು ಸುಂದರ ಕಟ್ಟಡಗಳು ನಿರ್ಮಾಣಗೊಂಡವು. ಉದಾ:ಗೆ ಬಿಜಾಪುರದ 2ನೇ ಮಹಮದ್ ಅದಿಲ್‌ಷಾನ ಗೋಳಗುಮ್ಮಟ, ಅಸಾರ್ ಮಹಲ್, ಜಾಮೀ ಮಸೀದಿ, 2ನೇ ಇಬ್ರಾಹಿಂನ ಇಬ್ರಾಹಿಂ ರೋಜಾ, ಬೀದರ್‌ನ ಗವಾನನ ಮದರಸ ಕಾಲೇಜು, ಗುಲ್ಬರ್ಗದ ಜಾಮೀ ಮಸೀದಿ, ಗೊಲ್ಕೊಂಡು, ಅಹಮದ್‌ನಗರ, ಗ್ವಾಲಿಯಾರ್‌ನ ಕೋಟೆಗಳು ಅರಮನೆಗಳು ಇದೇ ಕಾಲಕ್ಕೆ ಸೇರಿವೆ. ಗೊಲ್ಕೊಂಡದ **ಕುಲಿ ಕುತಬ್‌ಷಾನ ಗೋರಿ** ದಖಿನ್ ಉತ್ಕೃಷ್ಟ ಕಟ್ಟಡಗಳಲ್ಲಿ ಒಂದಾಗಿದೆ. ಮಾನ್‌ಸಿಂಗ್ ಗ್ವಾಲಿಯಾರ್‌ನಲ್ಲಿ ಮಾನಮಂದಿರ ಮತ್ತು ಕೋಟೆ, ರಾಣಕುಂಭನ ಚಿತ್ತೂರಿನ ಕೀರ್ತಿ ಸ್ತಂಭಗಳು ಹಾಗೂ ಜೈನಪುರದ ಹವಾಮಹಲ್, ಅಮೃತಶಸರದ ಸ್ವರ್ಣ ಮಂದಿರಗಳು ಮೊಗಲರ ಕಾಲದಲ್ಲೇ ನಿರ್ಮಾಣವಾದವು.

## ಕೊಡುಗೆಗಳು

### ಗಂಗರ ಕೊಡುಗೆಗಳು

ಚೈತ್ಯಾಲಯ, ದೇವಾಲಯ, ಮಠ ಹಾಗೂ ಅಗ್ರಹಾರಗಳು ಶಿಕ್ಷಣ ನೀಡುವ ಕೇಂದ್ರಗಳಾಗಿದ್ದವು. ಉನ್ನತ ವಿದ್ಯಾಭ್ಯಾಸಕ್ಕೆ ಬ್ರಹ್ಮಪುರಿ ಮತ್ತು ಘಟಿಕ ಸ್ಥಾನಗಳಿದ್ದವು. ತಲಕಾಡು, ಶ್ರವಣಬೆಳಗೊಳ, ಬಂಕಾಪುರ ಮತ್ತು ಪೆರೂರುಗಳನ್ನು ಜ್ಞಾನಾರ್ಜನೆಯ ಕೇಂದ್ರಗಳೆಂದು ಹೆಸರಿಸಲಾಗಿದೆ.

ಗಂಗರು ಜೈನ ಮತಾವಲಂಬಿಗಳಾದುದರಿಂದ ಜೈನ ಮತವು ಅಭಿವೃದ್ಧಿಗೆ ಬಂದಿತು. ಪೂಜ್ಯಪಾದ, ವಜ್ರನಂದಿ, ಅಜಿತಸೇನ ಮುಂತಾದವರುಗಳಿಂದ ಈ ಧರ್ಮವು ಜನಪ್ರಿಯವಾಯಿತು. ಅಲ್ಲದೆ ಶ್ರವಣಬೆಳಗೊಳದಲ್ಲಿ 58 ಅಡಿ ಏಕಶಿಲಾ ಗೊಮ್ಮಟೇಶ್ವರ ಪ್ರತಿಮೆಯನ್ನು ಪ್ರತಿಷ್ಠಾಪನೆಗೊಳಿಸಿ ಅದನ್ನು ಅತ್ಯಂತ



downloaded from: www.kpscvaani.com

ಪ್ರಸಿದ್ಧ ಕೇಂದ್ರವನ್ನಾಗಿ ಮಾರ್ಪಡಿಸಿದರು. ಹನ್ನೆರಡು ವರ್ಷಗಳಿಗೊಮ್ಮೆ ಮಹಾಮಸ್ತಕಾಭಿಷೇಕ ಗೊಮ್ಮಟೇಶ್ವರನಿಗೆ ಇಂದಿಗು ನಡೆಯುತ್ತಿರುವುದನ್ನು ನೀವು ಗಮನಿಸಿದ್ದೀರಲ್ಲವೇ?

## ಬಾಹುಬಲಿ ಗೊಮ್ಮಟೇಶ್ವರ

ಶ್ರವಣಬೆಳಗೊಳದ ಗೊಮ್ಮಟೇಶ್ವರ(ಬಾಹುಬಲಿ) ಮೂರ್ತಿಯು ವಿರಕ್ತ ಜೀವನದ ಸಂಕೇತವಾಗಿದೆ. ನಾಲ್ಕನೇ ರಾಚಮಲ್ಲನ ಮಂತ್ರಿಯಾಗಿದ್ದ ಚಾವುಂಡರಾಯನು ಇದನ್ನು ನಿರ್ಮಿಸಿದವನು. 100 ಜನ ಸಹೋದರರಲ್ಲಿ ಭರತ ಹಿರಿಯವ, ಬಾಹುಬಲಿ ಕಿರಿಯವ. ಭರತನಿಗೆ ರಾಜ್ಯಾಭಿಷೇಕವಾದ ಮೇಲೆ ಒಂದು ಚಕ್ರರತ್ನ ದೊರಕಿ ಎಲ್ಲಾ ರಾಜ್ಯಗಳನ್ನು ಗೆದ್ದು ಚಕ್ರಾಧಿಪತಿಯಾಗುತ್ತಾನೆ. ಅದಕ್ಕೂ ಮೊದಲು ಎಲ್ಲಾ ತಮ್ಮಂದಿರೂ ಅವನ ಅಧಿಪತ್ಯವನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಬಾಹುಬಲಿ ಒಪ್ಪದಿದ್ದಾಗ, ಯುದ್ಧಕ್ಕೆ ಅಣಿಯಾಗುತ್ತಾರೆ. ದೃಷ್ಟಿ ಯುದ್ಧ, ಜಲ ಯುದ್ಧ, ಮಲ್ಲ ಯುದ್ಧದಲ್ಲಿ ಭರತ ಸೋಲುತ್ತಾನೆ. ಮಲ್ಲ ಯುದ್ಧದ ಅಂತ್ಯದಲ್ಲಿ ಬಲಶಾಲಿಯಾದ ಬಾಹುಬಲಿ ಭರತನನ್ನು ಚಕ್ರದಂತೆ ತಿರುಗಿಸಿ ಇನ್ನೇನು ಬಿಸಾಡಬೇಕು ಎನ್ನುವಷ್ಟರಲ್ಲಿ ಬಾಹುಬಲಿಯ ಮನದಲ್ಲಿ ವಿರಕ್ತಿ ಉಂಟಾಗಿ, ಅಣ್ಣನನ್ನು ಕೆಳಗಿಳಿಸಿ ನಮಸ್ಕಾರ ಮಾಡಿ ನಿರ್ವಾಣಕ್ಕೆ ಹೋಗಿ ನಿಂತೇ ತಪಸ್ಸು ಮಾಡುತ್ತಾನೆ. ಆದರೂ ಮುಕ್ತಿಯಾಗಿದಿದ್ದಾಗ, ಬಾಹುಬಲಿಯು ತನ್ನ ಅಣ್ಣನ ಸಾಮ್ರಾಜ್ಯದಲ್ಲಿ ನಿಂತು ತಪಸ್ಸು ಮಾಡುತ್ತಿರುವುದರಿಂದ ಅವನಿಗೆ ನಿರ್ವಾಣ ದೊರಕುತ್ತಿಲ್ಲವೆಂದು ತಿಳಿಯುತ್ತದೆ. ಆಗ ಭರತನೇ ಬಂದು ಬಾಹುಬಲಿಗೆ ಇಡೀ ಸಾಮ್ರಾಜ್ಯವೇ ಬಾಹುಬಲಿಯದೆಂದೂ ಅದನ್ನು ಆಳುತ್ತಿರುವವನು ತಾನೆಂದು ತಿಳಿಸಿದಾಗ ಮೋಕ್ಷ ಲಭಿಸುತ್ತದೆ.

ಗಂಗರಾಜರು ಕಲೆ ಮತ್ತು ವಾಸ್ತುಶಿಲ್ಪಗಳಿಗೆ ಪ್ರೋತ್ಸಾಹ ನೀಡಿದ್ದರು. ಇವರು ಸುಂದರ ದೇವಾಲಯಗಳನ್ನು, ಬಸದಿಗಳನ್ನು ಕಟ್ಟಿಸಿದರು. ಮಣ್ಣೆಯಲ್ಲಿರುವ ಕಪಿಲೇಶ್ವರ ದೇವಸ್ಥಾನ, ತಲಕಾಡಿನ ಪಾತಾಳೇಶ್ವರ ಮತ್ತು ಮರುಳೇಶ್ವರ, ಕೋಲಾರದ ಕೋಲಾರಮ್ಮ, ಬೇಗೂರಿನ ನಾಗರೇಶ್ವರ, ಶ್ರವಣಬೆಳಗೊಳದ ಗೊಮ್ಮಟೇಶ್ವರ ಮುಂತಾದವು. ಗಂಗರ ವಿಶಿಷ್ಟ ಕೊಡುಗೆಯೆಂದರೆ ಎತ್ತರದ ಮಾನಸ್ತಂಭ ಮತ್ತು ಬ್ರಹ್ಮ ಮಾನಸ್ತಂಭಗಳು.

ಸಾಹಿತ್ಯಾಭಿಮಾನಿಗಳಾದ ಗಂಗರಾಜರು ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಭಾಷೆಗಳಿಗೆ ಪ್ರೋತ್ಸಾಹ ನೀಡಿದ್ದರಿಂದ ಗ್ರಂಥ ರಚನೆಗಳಾದವು. ಇಮ್ಮಡಿ ಮಾಧವನು 'ದತ್ತಕ ಸೂತ್ರ'ಕ್ಕೆ ಟಿಪ್ಪಣಿ ಬರೆದನು. ದುರ್ವಿನೀತನು 'ಶಬ್ದಾವತಾರ' ಸಂಸ್ಕೃತ ಕೃತಿಯನ್ನು ರಚಿಸಿದನಲ್ಲದೇ, ಗುಣಾಢ್ಯನ 'ವಡ್ಡಕತೆ'ಯನ್ನು ಸಂಸ್ಕೃತಕ್ಕೆ ಅನುವಾದ ಮಾಡಿದನು. ಶ್ರೀಪುರಷನು 'ಗಜಶಾಸ್ತ್ರ'ವನ್ನು ಎರಡನೇ ಶಿವಮಾಧವನು 'ಗಜಾಷ್ಟಕ' ಕನ್ನಡ ಕೃತಿಯನ್ನು ರಚಿಸಿದರು. ಕವಿ ಹೇಮಸೇನನು 'ರಾಘವ ಪಾಚಿಡವೀಯ'ವನ್ನು ವಾದೀಬಸಿಂಹನು 'ಗದ್ಯ ಚಿಂತಾಮಣಿ' ಮತ್ತು 'ಷಾತ್ರ ಚೂಡಾಮಣಿ'ಯನ್ನು, ನೇಮಿಚಂದ್ರನು 'ದ್ರವ್ಯಸಾರ ಸಂಗ್ರಹ'ವನ್ನು ಚಾವುಂಡರಾಯನು 'ಚಾವುಂಡ ಪುರಾಣ'ವನ್ನು ರಚಿಸಿ ಪ್ರಸಿದ್ಧರಾದರು.



downloaded from: www.kpscvaani.com

## ಚಾಳುಕ್ಯರ ಕೊಡುಗೆಗಳು

ಚಾಳುಕ್ಯರು ಶೈವ, ವೈಷ್ಣವ, ಜೈನ ಮುಂತಾದ ಎಲ್ಲಾ ಪಂಥಗಳ ಸಂಪ್ರದಾಯಗಳನ್ನು ಪ್ರೋತ್ಸಾಹಿಸಿದರು. ಜೈನ ದೇವಾಲಯಗಳ ನಿರ್ಮಾಣಕ್ಕೆ ಇವರು ಪ್ರೋತ್ಸಾಹ ನೀಡಿದರು. ಬೌದ್ಧ ವಿಹಾರಗಳು ಕೂಡ ಪ್ರೋತ್ಸಾಹಿಸಲ್ಪಟ್ಟವು.

ಬಾದಾಮಿಯ ಚಾಳುಕ್ಯರು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದರು. ಕನ್ನಡ ಹಾಗೂ ಸಂಸ್ಕೃತ ಭಾಷೆಗಳು ಚೆನ್ನಾಗಿ ಬೆಳೆದವು. ಕನ್ನಡವು ಅವರ ದೇಶ ಭಾಷೆಯಾಗಿತ್ತು. ಈ ಕಾಲದ ಕಾವ್ಯದಲ್ಲಿ ತ್ರಿಪದಿ ಶೈಲಿಯು ಬೆಳವಣಿಗೆಯಾಯಿತು. ಕನ್ನಡದಲ್ಲಿ ಕೃತಿಗಳು ಇಲ್ಲವಾದರೂ ಅನೇಕ ಶಾಸನಗಳು ಕನ್ನಡದಲ್ಲಿ ಬರೆಯಲ್ಪಟ್ಟಿವೆ. ಬಾದಾಮಿಯ ಕಪ್ಪೆ ಅರಭಟ್ಟನ ಶಾಸನದ ಒಂದು ಪದ್ಯವು ತ್ರಿಪದಿ ಶೈಲಿಯಲ್ಲಿರುವುದು ಕಂಡುಬರುತ್ತದೆ.

ಈ ಕಾಲದ ಸಂಸ್ಕೃತ ವಿದ್ವಾಂಸರುಗಳೆಂದರೆ ರವಿಕೀರ್ತಿ, ವಿಜ್ಜಿಕ ಮತ್ತು ಅಕಳಂಕರು. ಎರಡನೇ ಪುಲಿಕೇಶಿಯ ಸೊಸೆಯಾದ ವಿಜ್ಜಿಕ ಎಂಬ ಕವಿಯತ್ರಿಯು ಬರೆದ 'ಕೌಮುದೀ ಮಹೋತ್ಸವ' ಶಿವಭಟ್ಟಾಕರನ 'ಹರ ಪಾರ್ವತೀಯ' ಮುಖ್ಯವಾದ ಸಂಸ್ಕೃತ ನಾಟಕಗಳಾಗಿವೆ.

## ಪಲ್ಲವರ ಕೊಡುಗೆಗಳು:–

ಪಲ್ಲವರು ಸಂಸ್ಕೃತ ಮತ್ತು ತಮಿಳು ಭಾಷೆಗಳೆರಡಕ್ಕೂ ಪ್ರೋತ್ಸಾಹ ನೀಡಿದರು. ಕಂಚಿಯು ಸಂಸ್ಕೃತ ಸಾಹಿತ್ಯದ ಕೇಂದ್ರವಾಗಿತ್ತು. ಪಲ್ಲವರ ಅಸ್ಥಾನದಲ್ಲಿದ್ದ ಕವಿಗಳು ಭಾರವಿ (ಕಿರಾತಾರ್ಜುನೀಯ) ಹಾಗೂ ದಂಡಿ (ದಶಕುಮಾರ ಚರಿತ). ರಾಜ ಮಹೇಂದ್ರವರ್ಮನು ಸ್ವತಃ 'ಮತ್ತ ವಿಲಾಸ ಪ್ರಹಸನ' ಎಂಬ ಸಾಮಾಜಿಕ ನಾಟಕವನ್ನು ಹಾಗೂ 'ಭಗವದುಜ್ಜುಕ' ಗ್ರಂಥವನ್ನು ರಚಿಸಿದ್ದಾನೆ. ಪಲ್ಲವರು ಎಲ್ಲಾ ಮತಗಳಿಗೂ ಪ್ರೋತ್ಸಾಹ ನೀಡಿದರು. ಮೊದಲು ಪಲ್ಲವ ದೊರೆಗಳು ಬೌದ್ಧಮತೀಯರಾಗಿದ್ದರು. ನಳಂದ ವಿಶ್ವವಿದ್ಯಾನಿಲಯದ ಮಹಾನ್ ವಿದ್ವಾಂಸ ಧರ್ಮಪಾಲನು ಕಂಚಿಯಲ್ಲಿ ಜನಿಸಿದವನು. ಮಹೇಂದ್ರವರ್ಮನು ಜೈನ ಮತಾವಲಂಬಿಯಾದುದರಿಂದ ನಾಡಿನಲ್ಲಿ ಅನೇಕ ಜೈನರಿದ್ದರು.

ಈ ಯುಗವು ಭಕ್ತಿ ಚಳುವಳಿಯ ಉದಯವನ್ನು ಕಂಡಿತು. ವೈದಿಕ ಧರ್ಮದ ಪುನರುಜ್ಜೀವನಕ್ಕೂ ಸಹಾಯ ಮಾಡಿತು. ತಮಿಳಿನಲ್ಲಿ ಶ್ಲೋಕಗಳು ರಚನೆಯಾದವು. ಇದೇ ತಮಿಳು ಸಾಹಿತ್ಯದ ನಿಧಿಯಾಗಿದೆ.

ಪಲ್ಲವರು ಕಲೆ ಮತ್ತು ವಾಸ್ತುಶಿಲ್ಪದ ಪ್ರೇಮಿಗಳಾಗಿದ್ದರು. ತಮ್ಮ ರಾಜ್ಯದಲ್ಲಿ ಇವರು ಅನೇಕ ದೇವಾಲಯಗಳನ್ನು ನಿರ್ಮಿಸಿದರು. ಈ ದೇವಾಲಯಗಳಲ್ಲಿ ಅತ್ಯುತ್ತಮ ಕಲಾಕೌಶಲತೆಯನ್ನು ಕಾಣಬಹುದು. ಪಲ್ಲವರ ವಾಸ್ತುಶಿಲ್ಪವನ್ನು ಕಲ್ಲಿನಲ್ಲಿ ಕೊರೆದು ಮಾಡಿದ ದೇವಾಲಯಗಳು ಮತ್ತು ರಚನಾ ವಿನ್ಯಾಸದ ದೇವಾಲಯಗಳು ಎಂಬುದಾಗಿ ವಿಂಗಡಿಸಬಹುದು.

ಮಹಾಬಲಿಪುರದಲ್ಲಿ ಕಲ್ಲಿನಲ್ಲಿ ಕೊರೆದು ಮಾಡಿದ ಅನೇಕ ದೇವಾಲಯಗಳನ್ನು ಕಾಣಬಹುದು. ಏಕಶಿಲೆಗಳನ್ನು ಅದ್ಬುತ ವಿಗ್ರಹಗಳನ್ನು ಕೆತ್ತಿ. ಬಿಡಿಸಲಾಗಿದೆ.



downloaded from: www.kpscvaani.com

ಇವುಗಳು ಮಹಾಭಾರತದ ಹಾಗೂ ಭಾಗವತದ ಕಥೆಗಳನ್ನು ಹೊಂದಿವೆ. ಇಲ್ಲಿನ ಪಂಚ ರಥಗಳ ಸುಪ್ರಸಿದ್ಧ ಏಕಶಿಲಾ ದೇವಾಲಯಗಳಾಗಿವೆ. 'ಅರ್ಜುನನ ತಪಸ್ಸು' ಎನ್ನುವ ಕೆತ್ತನೆ ದೃಶ್ಯವು ಅತ್ಯುತ್ತಮ ಕಲಾಕೃತಿಯಾಗಿದೆ.

ಕಂಚಿಯಲ್ಲಿನ ಕೈಲಾಸನಾಥ, ಏಕಾಂಬರನಾಥ ಮತ್ತು ವೈಕುಂಠ ಪೆರುಮಾಳರ ದೇವಾಲಯಗಳು, ಮಹಾಬಲಿಪುರದ ಕಡಲದಂಡೆಯ ದೇವಾಲಯ ಪ್ರಾಚೀನ ಭಾರತ ವಾಸ್ತುಶಿಲ್ಪ ಅತ್ಯುತ್ತಮ ನಿರ್ದಶನಗಳಾಗಿವೆ.

ದೇವಾಲಯಗಳು ಧಾರ್ಮಿಕ ಹಾಗೂ ಕಲಾತ್ಮಕ ಚಟುವಟಿಕೆಗಳ ಕೇಂದ್ರಗಳಾದವು. ದೇವಾಲಯದ ಅಂಗಗಳಲ್ಲಿ ಸಂಜೆ ಸಮಯದಲ್ಲಿ ಗ್ರಾಮೀಣ ಜನರು ಕಲೆತು ಅನೇಕ ವಿಷಯಗಳನ್ನು ಚರ್ಚಿಸುತ್ತಿದ್ದರು. ವಿರಾಮ ವೇಳೆಯಲ್ಲಿ ಜನರು ಇಲ್ಲಿ ಕಥೆ ಸೇರುತ್ತಿದ್ದು, ಪುರಾಣ ಶ್ರವಣ ಅಥವಾ ಭಕ್ತಿ ಗೀತೆಗಳನ್ನು ಹಾಡುತ್ತಿದ್ದರು. ಹೀಗಾಗಿ ದೇವಾಲಯಗಳು ಸಾಮಾಜಿಕ, ಶೈಕ್ಷಣಿಕ ಕೇಂದ್ರಗಳಾಗಿದ್ದವು.

ಪಲ್ಲವರು ಒಳ್ಳೆಯ ನೌಕಾಬಲವನ್ನು ಹೊಂದಿದ್ದರು. ಇಲ್ಲಿನ ವರ್ತಕರು ಮಲಯ, ಇಂಡೋನೇಷಿಯನ್ ಹಾಗೂ ಇತರೆ ಆಗ್ನೇಯ ಏಷ್ಯಾ ರಾಷ್ಟ್ರಗಳೊಡನೆ ವಾಣಿಜ್ಯ ಸಂಬಂಧಗಳನ್ನು ಹೊಂದಿದ್ದರು. ಭಾರತೀಯ ಭಾಷೆ, ಮತ, ಸಂಪ್ರದಾಯ, ಸಂಸ್ಕೃತಿಗಳು ಆ ದೇಶಗಳಲ್ಲಿಯೂ ಪ್ರಭಾವ ಬೀರಿರುವುದನ್ನು ಕಾಣಬಹುದು.

## ರಾಷ್ಟ್ರಕೂಟದ ಕೊಡುಗೆಗಳು

ರಾಷ್ಟ್ರಕೂಟರ ಕಾಲದಲ್ಲಿ ರಾಜರು ಕನ್ನಡ ಮತ್ತು ಸಂಸ್ಕೃತ ಎರಡಕ್ಕೂ ಪ್ರೋತ್ಸಾಹ ನೀಡಿದ್ದರು. ಸಂಸ್ಕೃತದಲ್ಲಿ ಅತ್ಯುತ್ತಮ ಗ್ರಂಥಗಳು ರಚನೆಯಾದವು. ತ್ರಿವಿಕ್ರಮನು 'ನಳಚಂಪು' ಎಂಬ ಸಂಸ್ಕೃತ ಸಾಹಿತ್ಯದ ಪ್ರಥಮ ಚಂಪೂಕೃತಿಯನ್ನು ರಚಿಸಿದನು. ಹಲಾಯುಧನು 'ಕವಿರಹಸ್ಯ'ವನ್ನು ಬರೆದನು. ಜಿನಸೇನ, ಗಣಿತಜ್ಞ ಮಹಾವೀರಾಚಾರ್ಯ, ವ್ಯಾಕರಣ ಶಾಸ್ತ್ರಜ್ಞನಾದ ಶಕಟಾಯನ, ಗುಣಭದ್ರ, ವೀರಸೇನ, ಅಮೋಘವರ್ಷನ ಅಸ್ಥಾನದಲ್ಲಿದ್ದರು. ಆದಿಕವಿ ಪಂಪನು 'ಆದಿಪುರಾಣ' ವಿಕ್ರಮಾರ್ಜುನ ವಿಜಯವನ್ನು ಕನ್ನಡದಲ್ಲಿ ಬರೆದನು. ಉಭಯಕವಿ ಚಕ್ರವರ್ತಿ ಪೊನ್ನನು 'ಶಾಂತಿಪುರಾಣ'ವನ್ನು ರಚಿಸಿದನು. ಅಮೋಘವರ್ಷನ ಆಸ್ಥಾನದಲ್ಲಿದ್ದ ಶ್ರೀ ವಿಜಯ 'ಕವಿರಾಜಮಾರ್ಗ'ವನ್ನು ರಚಿಸಿದನು. ಇದು ಕನ್ನಡದ ಮೇರುಕೃತಿಯಾಗಿದೆ. ಇದರಿಂದ ಕನ್ನಡ ಸಾಹಿತ್ಯವು ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿರುವುದನ್ನು ತಿಳಿಯಬಹುದು.

ಅಗ್ರಹಾರಗಳು, ಮಠಗಳು ಅಂದಿನ ಪ್ರಮುಖ ಶೈಕ್ಷಣಿಕ ಕೇಂದ್ರಗಳಾಗಿದ್ದವು. ಸಂಸ್ಕೃತ, ವೇದ, ಜ್ಯೋತಿಷ್ಯ, ತರ್ಕಶಾಸ್ತ್ರ, ಪುರಾಣಗಳಲ್ಲಿ ಶಿಕ್ಷಣ ನೀಡುತ್ತಿದ್ದರು. ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಸಾಲೊಟಗಿ ಪ್ರಮುಖ ವಿದ್ಯಾ ಕೇಂದ್ರಗಳಲ್ಲೊಂದಾಗಿತ್ತು.

ರಾಷ್ಟ್ರಕೂಟ ಅರಸರು ಶಿವ ಮತ್ತು ವಿಷ್ಣುವಿನ ಆರಾಧಕರಾಗಿದ್ದರು. ಜೈನ ಮತ ರಾಜಾಶ್ರಯ ಪಡೆದ ಪ್ರಬಲ ಮತವಾಗಿತ್ತು. ಆದರೂ ಎಲ್ಲಾ ಮತಗಳಿಗೂ ಪ್ರೋತ್ಸಾಹ ನೀಡಿದ್ದರು. ಅನೇಕ ಶಿವ, ವಿಷ್ಣು ದೇವಾಲಯಗಳನ್ನು ನಿರ್ಮಿಸಿದ್ದಾರೆ.



downloaded from: www.kpscvaani.com

ರಾಷ್ಟ್ರಕೂಟ ಅರಸರು ಕಲಾಪೋಷಕರಾಗಿದ್ದರು. ಎಲ್ಲೋರ ಮತ್ತು ಎಲಿಫೆಂಟಾಗಳಲ್ಲಿ ಕಲ್ಲಿನಲ್ಲಿ ಕೊರೆದು ಮಾಡಿರುವ ದೇವಾಲಯಗಳು ಭಾರತೀಯ ಕಲೆಗೆ ಇವರು ನೀಡಿರುವ ಮಹಾನ್ ಕಾಣಿಕೆಗಳಾಗಿದೆ. ಒಂದನೇ ಕೃಷ್ಣನು ಕಟ್ಟಿಸಿದ ಎಲ್ಲೋರದ ಕೈಲಾಸನಾಥ ಮಂದಿರವು ಏಕ ಶಿಲೆಯ ಅದ್ಭುತ ರಚನೆಯಾಗಿದೆ. 100 ಅಡಿ ಎತ್ತರ, 275 ಅಡಿ ಉದ್ದ ಹಾಗೂ 154 ಅಡಿ ಅಗಲವಾಗಿದ್ದು, ಬೃಹತ್ ಬಂಡೆಯನ್ನು ಕೊರೆದು ಕಟ್ಟಲಾಗಿದೆ. ಅಲ್ಲಿಯೇ ಪ್ರಸಿದ್ಧ ದಶಾವತಾರ ಗುಹಾಲಯವಿದೆ. ಮುಂಬಯ್ ಬಳಿಯ ಎಲಿಫೆಂಟಾದ ಗುಹೆಗಳನ್ನು ಶಿಲ್ಪಕಲೆಯು ರಾಷ್ಟ್ರಕೂಟರ ಕಾಲದ ಶಿಲ್ಪಕಲೆಗೆ ಮುಕುಟ ಪ್ರಾಯವಾಗಿದೆ. ಅರ್ಧನಾರೀಶ್ವರ, ಮಹೇಶ ಮೂರ್ತಿ(ತ್ರಿಮುಖ) ವಿಗ್ರಹಗಳನ್ನು ಸೊಗಸಾಗಿ ಕೆತ್ತಲಾಗಿದೆ. ರಾಯಚೂರು ಜಿಲ್ಲೆ ಶಿರವಾಳದಲ್ಲಿ ಇವರ ಕಾಲದ ದೇವಾಲಯಗಳಿವೆ. ಪಟ್ಟದಕಲ್ಲಿನ ಸುಂದರ ಜಿನ ದೇವಾಲಯವಿದೆ.

ಚಾಲುಕ್ಯರ ಕಾಲದಲ್ಲಿ ಸಾಹಿತ್ಯಕ್ಕೆ ಪ್ರೋತ್ಸಾಹ ದೊರಕಿತು. ಜೈನ ವಿದ್ವಾಂಸರ ನೆರವಿನಿಂದ ಕನ್ನಡ ಸಾಹಿತ್ಯವು ಅಭಿವೃದ್ಧಿ ಹೊಂದಿತು. ರನ್ನನು ಬರೆದ 'ಗದಾಯುದ್ಧ'(ಸಾಹಸ ಭೀಮ ವಿಜಯ), ದುರ್ಗಸಿಂಹನ 'ಪಂಚತಂತ್ರ' ಬಿಲ್ಹಣನ 'ವಿಕ್ರಮಮಾಂಕದೇವ ಚರಿತ' ನಯಸೇನನ 'ಧರ್ಮಾಮೃತ' ಹಾಗೂ ವಿಜ್ಞಾನೇಶ್ವರನು ಬರೆದ ಕಾನೂನು ಗ್ರಂಥ 'ಮಿತಾಕ್ಷರ' ಮುಖ್ಯವಾದ ಗ್ರಂಥಗಳಾಗಿವೆ. ರಾಜ ಮೂರನೆಯ ಸೋಮೇಶ್ವರನು ಬರೆದ 'ಮಾನಸೋಲ್ಲಾಸ' ಸಂಸ್ಕೃತ ವಿಶ್ವಕೋಶವೆನಿಸಿದೆ. ಚಾಲುಕ್ಯರ ಕಾಲದ ವಿಶಿಷ್ಠ ಕೊಡುಗೆ ವಚನ ಸಾಹಿತ್ಯ, ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಮಾಚಯ್ಯ ಮುಂತಾದವರು ಗಣ್ಯವಚನಕಾರರಾಗಿದ್ದರು.

ಸಾಹಿತ್ಯಾಭಿಮಾನಿಗಳಾದ ಚಾಳುಕ್ಯರು ಕಲಾರಾಧಕರಾಗಿದ್ದರು. ಕಲೆಯ ಕ್ಷೇತ್ರದಲ್ಲಿ ನೀಡಿದ ಕೊಡುಗೆ ಅಪಾರ, ಲಕ್ಕುಂಡಿಯ ಕಾಶಿ ವಿಶ್ವೇಶ್ವರ, ಇಟಗಿಯ ಮಹಾದೇವ ದೇವಾಲಯ, ಕುರುವತ್ತಿಯ ಮಲ್ಲಿಕಾರ್ಜುನ ಮಂದಿರ, ಗದಗಿನ ತ್ರಿಕೂಟೇಶ್ವರ ಮುಂತಾದ ಪ್ರಸಿದ್ಧ ದೇವಾಲಯಗಳು ಇವರ ಕೊಡುಗೆಯಾಗಿವೆ. ಈ ವಂಶದ ಅರಸರು ನೂರಾರು ದೇವಾಲಯಗಳನ್ನು ನಿರ್ಮಿಸಿ ಕನ್ನಡ ನಾಡನ್ನು ಕಲೆಗಳ ಬೀಡನ್ನಾಗಿ ಪರಿವರ್ತಿಸುವಲ್ಲಿ ಅಮೂಲ್ಯ ಕೊಡುಗೆ ನೀಡಿದ್ದಾರೆ.

ಇವರ ಕಾಲದಲ್ಲಿ ಸಂಗೀತ ನೃತ್ಯಗಳೂ ಅಭಿವೃದ್ಧಿಗೊಂಡವು, ಸಂಗೀತ, ನೃತ್ಯ ಸೇವೆಗೆ ಕಲಾವಿದರನ್ನು ನೇಮಿಸುತ್ತಿದ್ದರು. ಮಹಾರಾಣಿಯ ಚಂದ್ರಲೇಖೆಯು ಅನೇಕ ಸಂಗೀತ ವಿದ್ವಾಂಸರಿಗೆ ಮತ್ತು ನೃತ್ಯಗಾರ್ತಿಯರಿಗೆ ಆಶ್ರಯ ನೀಡಿದ್ದಳು. ಸಂಗೀತ, ನೃತ್ಯ, ಕಲೆ, ಆಭರಣ ಮುಂತಾದ ವಿಷಯಗಳು 'ಮಾನಸೋಲ್ಲಾಸ' ಹಾಗೂ ಎರಡನೆಯ ಜಗದೇವಕಮಲ್ಲನ 'ಸಂಗೀತ ಚೂಡಾಮಣಿ' ಗ್ರಂಥಗಳಲ್ಲಿ ವ್ಯಕ್ತವಾಗಿವೆ.

## ಚೋಳರ ಕೊಡುಗೆಗಳು:–

ಚೋಳರು ಶೈವರಾಗಿದ್ದು, ಇವರು ಅನೇಕ ಶಿವಾಲಯಗಳನ್ನು ಕಟ್ಟಿಸಿದರು. ತಂಜಾಪೂರಿನ ಬೃಹದೀಶ್ವರ ಮಂದಿರ 500 ಅಡಿ ಉದ್ದ, 250 ಅಡಿ ಅಗಲದ ವಿಶಾಲ ಪ್ರಾಕಾರದಲ್ಲಿದೆ. ಅದರ ಶಿಖರ 200 ಅಡಿ ಎತ್ತರವಾಗಿದೆ. ರಾಜೇಂದ್ರನು ಕಟ್ಟಿಸಿದ ಚೋಳೇಶ್ವರ (ಗಂಗೈಕೊಂಡ ಚೋಳಪುರ), ಚನ್ನಪಟ್ಟಣ ಹತ್ತಿರದ



downloaded from: www.kpscvaani.com

ಅಪ್ರಮೇಯ, ಬೆಂಗಳೂರು ಬಳಿ ಬೇಗೂರಿನ ಚೋಳೇಶ್ವರ, ಬಿನ್ನಮಂಗಲದ ಮುಕ್ತೇಶ್ವರ ಕರ್ನಾಟಕದಲ್ಲಿನ ಇವರ ದೇವಾಲಯಗಳಾಗಿವೆ.

ದೇವಾಲಯಗಳು ಆರ್ಥಿಕ, ಸಾಂಸ್ಕೃತಿಕ ಕೇಂದ್ರಗಳಾಗಿ ಕೆಲಸ ಮಾಡುತ್ತಿದ್ದವು. ಇವರ ಕಾಲದಲ್ಲಿನ ಶಿವ, ಗಣಪತಿ, ವಿಷ್ಣು, ದುರ್ಗೆ, ಕಾರ್ತಿಕೇಯರ ಮೂರ್ತಿಗಳು ಪ್ರಸಿದ್ದವಾದವು.

ಚೋಳರ ವಿದ್ಯೆಗೆ ಪ್ರೋತ್ಸಾಹ ನೀಡಲು ಅನೇಕ ಅಗ್ರಹಾರಗಳನ್ನು ಸ್ಥಾಪಿಸಿದರು. ಉತ್ತರ ಮೇರೂರು ಅಗ್ರಹಾರ ಇದರಲ್ಲಿ ಪ್ರಸಿದ್ದವಾದದು. ದೇವಾಲಯಗಳು ವಿದ್ಯಾ ಕೇಂದ್ರಗಳಾಗಿದ್ದವು. ಇವು ಧಾರ್ಮಿಕ ಚಟುವಟಿಕೆಗಳ ಕೇಂದ್ರಗಳಾಗಿದ್ದವು. ತಮಿಳು ಸಾಹಿತ್ಯದ ಸರ್ವತೋಮುಖ ಪ್ರಗತಿಯ ಕಾಲವಿದು. ಕಂಬ ಮುಂತಾದವುಗಳು ಪ್ರಮುಖವಾಗಿವೆ.

## ಹೊಯ್ಸಳರ ಕೊಡುಗೆಗಳು:–

ಹೊಯ್ಸಳರ ಕಾಲದಲ್ಲಿ ಜೈನ, ಬೌದ್ಧ, ಶೈವ, ವೈಷ್ಣವ, ವೀರಶೈವ, ಶ್ರೀ ವೈಷ್ಣವ ಮತಗಳು ಪ್ರಚಲಿತವಾಗಿದ್ದವು.

ಅಗ್ರಹಾರಗಳು, ಮಠಗಳು, ದೇವಾಲಯಗಳು ಶಿಕ್ಷಣದ ಕೇಂದ್ರಗಳಾಗಿದ್ದವು. ಮೇಲುಕೋಟೆ, ಸಾಲಗಾಮೆ, ಅರಿಸೀಕೆರೆ ಮುಂತಾದವು ಗಣ್ಯ ಶಿಕ್ಷಣ ಕೇಂದ್ರಗಳಾಗಿದ್ದವು. ವೇದ ವೇದಶಾಸ್ತ್ರ, ಕನ್ನಡ ಸಂಸ್ಕೃತಗಳ ಅಧ್ಯಯನವು ನಡೆಯುತ್ತಿತ್ತು.

ಕನ್ನಡ ಸಾಹಿತ್ಯವು ವಿಪುಲವಾಗಿ ಬೆಳೆಯಿತು. ರುದ್ರಭಟ್ಟನು 'ಜಗನ್ನಾಥ ವಿಜಯ'ವನ್ನು ಕವಿಚಕ್ರವರ್ತಿ ಜನ್ನನು 'ಯಶೋಧರ ಚರಿತೆ'ಯನ್ನು ಹರಿಹರನು 'ಗಿರಿಜಾ ಕಲ್ಯಾಣ' ಎಂಬ ಚಂಪೂ ಕಾವ್ಯವನ್ನು, ರಾಘವಾಂಕನು 'ಹರಿಶ್ಚಂದ್ರ ಕಾವ್ಯ' ಹಾಗೂ ಕೇಶೀರಾಜನು 'ಶಬ್ದಮಣಿ ದರ್ಪಣ'ವನ್ನು ರಚಿಸಿದ್ದಾರೆ. ಸಂಸ್ಕೃತದಲ್ಲೂ ರಾಮಾನುಜಾಚಾರ್ಯರ ಶ್ರೀಭಾಷ್ಯ ಪರಾಶರಭಟ್ಟರ ಶ್ರೀಗುಣ ರತ್ನಕೋಶ ಮುಂತಾದವುಗಳು ರಚಿತವಾದವು. ಹೊಯ್ಸಳರ ಶಿಲ್ಪಕಲೆ ಜಗದ್ವಿಖ್ಯಾತವಾದುದು.

ಬಳಪದ ಮೃದು ಕಲ್ಲಿನಿಂದ ಹೊಯ್ಸಳರು ಅಸಂಖ್ಯಾತ ದೇವಾಲಯಗಳನ್ನು ರಚಿಸಿದರು. ಇವರ ದೇವಾಲಯಗಳಲ್ಲಿ ನಕ್ಷತ್ರಾಕಾರದ ಗರ್ಭಗೃಹ, ಉಪಪೀಠ (ಜಗತಿ), ಭಿತ್ತಿ ಅಲಂಕರಣ, ಶಿಖರ ಹಾಗೂ ಕಂಬಗಳೆಂಬ ಐದು ಲಕ್ಷಣಗಳನ್ನು ನೋಡಬಹುದು.

ಬೇಲೂರಿನ ಚೆನ್ನಕೇಶವ ದೇವಾಲಯದ ಕಂಬಗಳ ಚಾಚುಪೀಠಗಳಲ್ಲಿ ಸುಂದರ ಮದನಿಕೆಯರ ವಿಗ್ರಹಗಳಿವೆ. ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯವನ್ನು ದಂಡನಾಯಕ ಕೇತಮಲ್ಲನು ಕಟ್ಟಿಸಿದನು. ಸೋಮದಂಡನಾಯಕನು ಕಟ್ಟಿಸಿದ ಸೋಮನಾಥಪುರದ ಕೇಶವ ದೇವಲಾಯವು ಪ್ರಸಿದ್ಧವಾದುದು. ಇದಲ್ಲದೆ ಅರಸೀಕೆರೆ, ಗೋವಿಂದನಹಳ್ಳಿ, ದೊಡ್ಡಗದ್ದವಳ್ಳಿ, ಭದ್ರಾವತಿ ಮುಂತಾದೆಡೆ ಅನೇಕ ದೇವಾಲಯಗಳೂ, ಬಸದಿಗಳೂ ಇವೆ. ಇವೆಲ್ಲವೂ ಅತಿ ಸೂಕ್ಷ್ಮ ಕುಸುರಿ ಕೆತ್ತನೆಗೆ ಹೆಸರುವಾಸಿಯಾಗಿವೆ. ವಾಸ್ತುಶಿಲ್ಪಗಳಲ್ಲಿ



downloaded from: www.kpscvaani.com

ಅಳಿಸಲಾಗದ ಪ್ರಭಾವ ಬೀರಿವೆ. ಹೊಯ್ಸಳರ ಕಾಲದಲ್ಲಿ ದಾಸೋಜ, ಚಾವಣ, ಜಕಣ, ಡಂಕಣ ಮುಂತಾದ ಖ್ಯಾತ ಶಿಲ್ಪಿಗಳನ್ನು ಹೆಸರಿಸಬಹುದು.

## ಮಗಧ ರಾಜ್ಯದ ಏಳಿಗೆ :

ಮಗಧ ರಾಜ್ಯದ ಸಂಸ್ಥಾಪಕರು ಜರಾಸಂಧ & ಬೃಹದ್ರತೆರೆಂದು ಕೆಲವು ವೃತ್ತಾಂತಗಳು ತಿಳಿಸುತ್ತದೆ. ಈ ರಾಜ್ಯದ ಬೆಳವಣಿಗೆ ಕಂಡುಬಂದದ್ದು ಹರ್ಯಂಕರಿಂದ. ಈ ರಾಜ್ಯದ ವಿಸ್ತರಣೆಯು ಶಿಶುನಾಗರಿಂದ & ನಂದ ದೊರೆಗಳಿಂದ ಆರಂಭಗೊಂಡಿತು. ಮೌರ್ಯರ ಕಾಲಕ್ಕೆ ಇದು ಹೆಚ್ಚಿನ ಪ್ರವರ್ಧಮಾನಕ್ಕೆ ಬಂದಿತು.

ಈ ಹೋರಾಟದಲ್ಲಿ ಮಗಧ ರಾಜ್ಯವು ಉತ್ತರ ಭಾರತದಲ್ಲಿದ್ದ ಅನೈಕ್ಯತೆಯನ್ನು ಹೋಗಲಾಡಿಸಿ, ಕೆಲವು ಪ್ರದೇಶಗಳನ್ನು ವಶಪಡಿಸಿಕೊಳ್ಳುವ ಮೂಲಕ ಉತ್ತರ ಭಾರತದಲ್ಲಿ ಭೌಗೋಳಿಕವಾಗಿ, ಸೈನಿಕವಾಗಿ ಹಾಗೂ ರಾಜಕೀಯವಾಗಿ ಅತ್ಯಂತ ಸಂಪದ್ಭರಿತ ಹಾಗೂ ಪ್ರಭಾವಶಾಲಿ ರಾಜ್ಯವಾಗಿ ಏಳಿಗೆಗೆ ಬಂದಿತು.

ಮಗಧ ಸಾಮ್ರಾಜ್ಯವನ್ನು ಮೌರ್ಯರು ಆಕ್ರಮಿಸುವವರೆಗೆ ಕ್ರಮವಾಗಿ ಹರ್ಯಂಕ, ಶಿಶುನಾಗ ಹಾಗೂ ನಂದ ವಂಶದ ದೊರೆಗಳು ಮಗಧವನ್ನು ಆಳಿದ್ದವು.

## ಹರ್ಯಂಕ ವಂಶ :

ಪುರಾಣಗಳ ಪ್ರಕಾರ ಮಗಧ ರಾಜ್ಯವನ್ನು ಸ್ಥಾಪಿಸಿದವರು ಜರಾಸಂಧ & ಬೃಹದ್ರಥ. ಮಗಧ ರಾಜ್ಯವನ್ನು ಆಳಿದ ರಾಜರ ಹೆಸರುಗಳನ್ನು ಸಹಾ ಇಲ್ಲಿ ಉಲ್ಲೇಖಿಸಲಾಗಿದೆ. ಬೌದ್ಧ ಸಾಹಿತ್ಯ ಮಗಧ ರಾಜ್ಯವನ್ನು 'ಹರ್ಯಂಕ' & 'ಶಿಶುನಾಗ' ಸಂತತಿಗಳು ಆಳ್ವಿಕೆ ಮಾಡಿದವೆಂದು ತಿಳಿಸಲಾಗಿದೆ. ಈ ಮಗಧ ರಾಜ್ಯದ ಮೊದಲ ರಾಜಧಾನಿ ಗಿರಿವ್ರಜವಾಗಿದ್ದು, ನಂತರದಲ್ಲಿ ರಾಜಗೃಹಕ್ಕೆ ಬದಲಾಯಿಸಲಾಯಿತು. ಚೀನೀ ಯಾತ್ರಿಕನ ಪ್ರಕಾರ ಬಿಂಬಸಾರನು 'ರಾಜಗೃಹ'ವೆಂಬ ನಗರವನ್ನು ಗಿರಿವ್ರಜದ ತಪ್ಪಲಿನಲ್ಲಿ ಸ್ಥಾಪಿಸಿದನು. ಈ ರಾಜಗೃಹವು 5 ಬೆಟ್ಟಗಳಿಂದ ಸುತ್ತುವರಿದು ಆ ಬೆಟ್ಟಗಳು ಕೋಟೆಯಂತಿದ್ದವು.

## ಬಿಂಬಸಾರ (ಕ್ರಿ.ಪೂ 544–492) :

- ಬಿಂಬಸಾರನು ಹರ್ಯಂಕ ಸಂತತಿಗೆ ಸೇರಿದವನೆಂದು 'ಬುದ್ಧ ಚರಿತ'ದ ಕರ್ತೃ ಅಶ್ವಘೋಷನು ತಿಳಿಸುತ್ತಾನೆ.
- ಹರ್ಯಂಕ ರಾಜವಂಶವು ಬಿಂಬಸಾರನಿಂದ ಆರಂಭವಾಯಿತು.
- ಇವನ ರಾಜಧಾನಿ ಬಿಹಾರದ ಗಿರಿವ್ರಜ / ರಾಜಗೃಹವಾಗಿತ್ತು.
- ಈತ ಗೌತಮಬುದ್ಧನ ಸಮಕಾಲೀನನಾಗಿದ್ದನು.



downloaded from: www.kpscvaani.com

- ಬಿಂಬಸಾರನು ರಾಜ್ಯ ವಿಸ್ತರಣೆಯಲ್ಲಿ ತೊಡಗಿದ್ದನು. ಈತ ಮೀಸಲಿರಿಸಿದ ಸೈನ್ಯವನ್ನು ಹೊಂದಿದ ಮೊದಲ ದೊರೆಯಾಗಿದ್ದನು.
- ಈತನ ದಿಗ್ವಿಜಯಗಳಲ್ಲಿ ಗಜಸೈನ್ಯವು ಅತ್ಯಂತ ಪ್ರಮುಖ ಪಾತ್ರ ವಹಿಸಿತ್ತು.
- ಬಿಂಬಸಾರನು ಚಂಪಾನಗರವನ್ನು ರಾಜಧಾನಿಯಾಗಿಸಿಕೊಂಡಿದ್ದ ಅಂಗರಾಜ್ಯದ ದೊರೆ ಬ್ರಹ್ಮದತ್ತನಿಂದ ಅಂಗ ರಾಜ್ಯವನ್ನು ವಶಪಡಿಸಿಕೊಂಡನು ಹಾಗೂ ತನ್ನ ಪುತ್ರನಾದ ಕುನಿಕನನ್ನು ಪ್ರಾಂತಾಧಿಕಾರಿಯನ್ನಾಗಿ ನೇಮಿಸಿದನು.
- ಬಿಂಬಸಾರನು ಉತ್ತಮ ರಾಜತಾಂತ್ರಿಕ ಸಂಬಂಧವನ್ನು ಹೊಂದಿದ್ದನು. ಗಾಂಧಾರದ ದೊರೆ ಪುಕ್ಕುಸತಿಯು ಬಿಂಬಸಾರನ ಆಸ್ಥಾನಕ್ಕೆ ರಾಯಭಾರಿಯನ್ನು ಕಳುಹಿಸಿದ್ದನು.
- ಗೌತಮ ಬುದ್ದನು ತನ್ನ ಅನುಯಾಯಿಗಳೊಂದಿಗೆ ಮಗಧ ರಾಜಧಾನಿಯಾದ ಗಿರಿವ್ರಜ/ರಾಜಗೃಹಕ್ಕೆ ಬಂದಿದ್ದನು. ಅವರುಗಳನ್ನು ಬಿಂಬಸಾರನು ಅತ್ಯಂತ ಗೌರವಪೂರ್ವಕವಾಗಿ ಕಂಡನೆಂದು ಹೇಳಲಾಗಿದೆ.
- ಬಿಂಬಸಾರನು ತನ್ನ ಪತ್ನಿ ಮಾದ್ರ ರಾಜಕುಮಾರಿ ಖೇಮಾಳ ಪ್ರಭಾವದಿಂದ ಬೌದ್ಧ ಧರ್ಮದ ಅನುಯಾಯಿಯಾದನು.
- ಬಿಂಬಸಾರನು ತನ್ನ ಮಗನಾದ ಅಜಾತಶತ್ರುವಿನಿಂದ ಹತನಾದನೆಂದು ಇತಿಹಾಸವು ತಿಳಿಸಿದೆ.

## ಶಿಶುನಾಗ ವಂಶ :

- ಹರ್ಯಂಕ ವಂಶದ ಉದಯನನ ನಂತರದ ಉತ್ತಾರಾಧಿಕಾರಿಯಾದ ನಾಗದಾಸಕನು ಅಸಮರ್ಥನಾಗಿದ್ದು ಇವನ ವಿರುದ್ಧ ಸಿಡಿದೆದ್ದ ಜನರು ಅವನ ಮಂತ್ರಿಯಾದ ಶಿಶುನಾಗನನ್ನು ಅಧಿಕಾರಕ್ಕೆ ತಂದನು. ಈತ ಶಿಶುನಾಗ ವಂಶದ ಆಳ್ವಿಕೆ ಆರಂಭಿಸಿದನು.
- ಈತ ತನ್ನ ರಾಜಧಾನಿಯನ್ನು ತಾತ್ಕಾಲಿಕವಾಗಿ ವೈಶಾಲಿಗೆ ವರ್ಗಾಯಿಸಿದನು.
- ಇವನ ಕಾಲದಲ್ಲಿ ಅವಂತಿ ರಾಜ್ಯದ ಬಲವನ್ನು ಅಂತಿಮವಾಗಿ ಮುರಿದು ಅದನ್ನು ಮಗಧ ಸಾಮ್ರಾಜ್ಯದ ಭಾಗವನ್ನಾಗಿ ಮಾಡಿದನು.
- ಶಿಶುನಾಗನ ಉತ್ತರಾಧಿಕಾರಿ ಕಾಲ ಆಶೋಕನಾಗಿದ್ದನು.
- ಈತನ ಕಾಲದಲ್ಲಿ ಮಗಧದ ರಾಜಧಾನಿಯನ್ನು ವೈಶಾಲಿಯಿಂದ ಪಾಟಲೀಪುತ್ರಕ್ಕೆ ವರ್ಗಾಯಿಸಿದನು. ಹಾಗೂ 2ನೇ ಬೌದ್ಧ ಸಮ್ಮೇಳನವು ವೈಶಾಲಿಯಲ್ಲಿ ಕ್ರಿ.ಪೂ. 383ರಲ್ಲಿ ಇವನ ರಾಜಾಶ್ರಯದಲ್ಲಿ ನಡೆಯಿತು.



downloaded from: www.kpscvaani.com

## ನಂದವಂಶ (ಕ್ರಿ.ಪೂ. 345–322) :

- ನಂದ ವಂಶವನ್ನು ಮೊದಲ ಕ್ಷತ್ರಿಯೇತರ ಮನೆತನವೆಂದು ಪರಿಗಣಿಸಲಾಗಿದೆ.
- ಈ ಸಂತತಿಯ ಸ್ಥಾಪಕ ಮಹಾಪದ್ಮನಂದ. ಪುರಾಣಗಳು ಈತ ಶಿಶುನಾಗ ಸಂತತಿಯ ಕೊನೆಯ ದೊರೆ ಮಹಾನಂದಿನ್‌ನಿಗೆ ಶೂದ್ರ ಸ್ತ್ರೀಯಿಂದ ಜನಿಸಿದ ಮಗನೆಂದು ಉಲ್ಲೇಖಿಸುತ್ತದೆ. ಜೈನ ಸಾಹಿತ್ಯ ಹಾಗೂ ಗ್ರೀಕ್ ಬರವಣಿಗೆಗಳ ಪ್ರಕಾರ ಈತ ಕೀಳು ಜಾತಿಯಲ್ಲಿ ಜನಿಸಿದವನೆಂದು ತಿಳಿದುಬರುತ್ತದೆ.
- ಮಹಾಪದ್ಮನಂದನು ಕಳಿಂಗ & ಕೋಸಲಾವನ್ನು ವಶಪಡಿಸಿಕೊಂಡನು. ಈತ ಕಳಿಂಗದಿಂದ ಜಿನ ಪ್ರತಿಮೆಯನ್ನು ವಿಜಯದ ನೆನಪಿಗಾಗಿ ತಂದನು.
- ಧನನಂದನು ಈ ನಂದ ವಂಶದ ಕೊನೆಯ ಅರಸ.
- ಗ್ರೀಕ್ ಲೇಖಕರು ಧನನಂದನನ್ನು ಅಗ್ಗಮಸ್ ಅಥವಾ ಕ್ಯಾಂಡ್ರಮಸ್ ಎಂದು ಕರೆದಿದ್ದಾರೆ.
- ಧನನಂದನು ಉತ್ತಮ ಸೈನ್ಯವನ್ನು ನಿರ್ವಹಣೆ ಮಾಡಿದ್ದನು. ಈತನ ಕಾಲದಲ್ಲಿ ವಾಯುವ್ಯ ಭಾರತದ ಮೇಲೆ ಗ್ರೀಕ್‌ನ ಅಲೆಗ್ಸಾಂಡರನು ಕ್ರಿ.ಪೂ 326ರಲ್ಲಿ ದಾಳಿಗೆ ಬಂದಿದ್ದನು. ಧನನಂದನನ ಸೈನ್ಯವು ಅಲೆಗ್ಸಾಂಡರನ ಸೈನ್ಯವನ್ನು ಹಿಮ್ಮೆಟ್ಟಿಸಿತು.
- ಧನನಂದನು ತನ್ನ ಸೈನ್ಯದ ನಿರ್ವಹಣೆಗಾಗಿ ಪ್ರಜೆಗಳಿಗೆ ಅಧಿಕ ತೆರಿಗೆ ವಿಧಿಸಲಾರಂಭಿಸಿದನು. ಇದರಿಂದಾಗಿ ಪ್ರಜೆಗಳಿಗೆ ಈತ ಅಪ್ರಿಯನಾದನು. ಇಂತಹ ರಾಜಕೀಯ ಸನ್ನಿವೇಶದ ಲಾಭ ಪಡೆದ ಚಂದ್ರಗುಪ್ತ ಮೌರ್ಯನು ಕ್ರಿ.ಪೂ.321ರಲ್ಲಿ ಮಗಧವನ್ನು ಕೌಟಿಲ್ಯನ ಸಹಾಯದಿಂದ ಆಕ್ರಮಿಸಿ ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದನು.

## ಭಾರತದ ಮೇಲೆ ವಿದೇಶಿಯರ ದಾಳಿ :

ಭಾರತದ ವಾಯುವ್ಯ ಹಾಗೂ ಪಶ್ಚಿಮ ಗಡಿ ಭಾಗಗಳಾದ ಪಂಜಾಬ್, ಸಿಂಧ್ ಹಾಗೂ ಅಫ್ಘಾನಿಸ್ತಾನ ಪ್ರದೇಶಗಳಲ್ಲಿ ಕ್ರಿ.ಪೂ 5ನೇ ಶತಮಾನದ ವೇಳೆಗೆ ಬಲಿಷ್ಟವಾದ ರಾಜಕೀಯ ವ್ಯವಸ್ಥೆ ಇಲ್ಲದಾಗಿತ್ತು. ಈ 16 ಮಹಾಜನಪದಗಳಲ್ಲಿ ಕಾಂಬೋಜ ಹಾಗೂ ಗಾಂಧಾರ ಜನಪದಗಳು ಮಾತ್ರ ಭಾರತದ ವಾಯುವ್ಯ ಭಾಗದಲ್ಲಿ ಅಸ್ತಿತ್ವದಲ್ಲಿತ್ತು. ಈ ಎರಡು ಮಹಾಜನಪದಗಳು ಸಣ್ಣ ಸಣ್ಣ ಪ್ರಾಂತ್ಯಗಳಾಗಿ ವಿಭಾಗಗೊಂಡಿದ್ದಲ್ಲದೇ, ಆಂತರಿಕ ಕಲಹ, ನಿರಂತರ ಹೋರಾಟಗಳಲ್ಲಿ ಕೂಡಿತ್ತು. ಈ ರಾಜಕೀಯ ಸನ್ನಿವೇಶವು ವಿದೇಶಿ ದಾಳಿಗೆ ಮೂಲ ಪ್ರೇರಕವಾಯಿತು.

ಮಗಧ ರಾಜ್ಯವು ಪೂರ್ವ ಹಾಗೂ ಮಧ್ಯಪ್ರದೇಶದಲ್ಲಿನ ವಿಸ್ತರಣೆಗೆ ತೊಡಗಿದ್ದು, ವಾಯುವ್ಯ ಭಾರತದಲ್ಲಿ ಸಂಪೂರ್ಣವಾಗಿ ರಾಜಕೀಯ ಅನೈಕ್ಯತೆ ಉಂಟಾದ ಪರಿಣಾಮ ಭಾರತವು ಪರ್ಷಿಯನ್ನರ ದಾಳಿಗೆ



downloaded from: www.kpscvaani.com

ತುತ್ತಾಯಿತು. ಭಾರತದ ಮೇಲೆ ದಾಳಿಯಿಟ್ಟ ಮೊದಲ ವಿದೇಶಿಯರೆಂದರೆ ಪರ್ಷಿಯನ್ನರು & ಮ್ಯಾಸಿಡೋನಿಯರು.

## ಪರ್ಷಿಯನ್ನರ ದಾಳಿ :

### ಸೈರಸ್ (ಕ್ರಿ.ಪೂ 558–530) :

- ಪರ್ಷಿಯಾದ ದೊರೆ ಸೈರಸನು ಭಾರತದ ಮೇಲೆ ದಾಳಿಯಿಟ್ಟ ಮೊದಲ ದೊರೆ.
- ಈತ ಗೆಡ್ರೋಷ್ಯಾದ ಮೂಲಕ ಭಾರತದ ಮೇಲೆ ದಾಳಿ ಮಾಡಿ ಇಂಡೋ–ಪರ್ಷಿಯನ್ ಗಡಿ ಭಾಗದ ಪ್ರದೇಶಗಳನ್ನು ವಶಪಡಿಸಿಕೊಂಡನು.
- ಈತ ಗಾಂಧಾರವನ್ನು ಆಳುತ್ತಿದ್ದ ಪುಕ್ಕಸತಿ ರಾಜನನ್ನು ಸೋಲಿಸಿದನು.
- ಈತ ಉತ್ತರ ಕಾಬೂಲ್‌ನ ಕಾಪಿಶಾನಗರವನ್ನು ತನ್ನ ದಾಳಿಯ ಸಂದರ್ಭದಲ್ಲಿ ನಾಶಪಡಿಸಿದನು.

### ಡೇರಿಯಸ್ (ಕ್ರಿ.ಪೂ 522–484) :

- ಈತ ಸೈರಸ್‌ನ ಮೊಮ್ಮಗ ಹಾಗೂ ಸೈರಸ್‌ನ ಉತ್ತರಾಧಿಕಾರಿ.
- ಇವನ್ನು ಧಾರಾ ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು.
- ಈತ ಗ್ರೀಕ್ ಭೂ ಅನ್ವೇಷಣೆ ಸ್ಕೈಲಾಕ್ಸ್‌ನನ್ನು ಸಿಂಧೂ ನದಿ ಕಣಿವೆ ಪ್ರದೇಶದ ಸ್ಪಷ್ಟ ಭೌಗೋಳಿಕ ನಕ್ಷೆ ರಚಿಸಲು ಭಾರತಕ್ಕೆ ಕಳುಹಿಸಿ ಆ ಮೂಲಕ ಭಾರತದ ಮೇಲೆ ದಾಳಿ ಮಾಡುವ ಯೋಜನೆ ಹೊಂದಿದ್ದನು.
- ಡೇರಿಯಸ್‌ನು ಭಾರತದ ವಾಯುವ್ಯ ಗಡಿ ಭಾಗಗಳಾದ ಪಂಜಾಬ್, ಸಿಂಧ್ ಭಾಗಗಳನ್ನು ಕ್ರಿ.ಪೂ 518ರಲ್ಲಿ ವಶಪಡಿಸಿಕೊಂಡನು ಎಂಬ ಬಗ್ಗೆ ಪರ್ಸೆಪೊಲಿಸ್ & ನಕ್ಷಿ–ಐ–ರುಸ್ತು ಶಾಸನಗಳು ತಿಳಿಸುತ್ತದೆ.
- ಕ್ರಿ.ಪೂ 517ರಲ್ಲಿ ಹೆರೊಡೋಟಸ್‌ನು (ಇತಿಹಾಸದ ಪಿತಾಮಹ) ಡೇರಿಯಸ್‌ನ ಸ್ಕೈಲಕ್ಸ್‌ನ ನಾಯಕತ್ವದಲ್ಲಿ ಒಂದು ನೌಕಪಡೆಯನ್ನು ಕಳುಹಿಸಿದನು. ಇದು ಸಿಂಧೂ ನದಿ ಕಣಿವೆಯ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಸಹಕಾರಿಯಾಯಿತು ಎಂದು ಉಲ್ಲೇಖಿಸುತ್ತಾನೆ.



GNANADHARE IAS ACADEMY
downloaded from: www.kpscvaani.com

## ಕ್ಸರಕ್ಸಸ್ (ಕ್ರಿ.ಪೂ 486–465) :

- ಈತ ಒಂದನೇ ಡೇರಿಯಸ್‌ನ ಮಗ.
- ಈತನ ಕಾಲದ ಸೈನ್ಯದಲ್ಲಿ (ಅಖೇಮಿಯನ್ ಸೈನ್ಯ) ಬಹುಸಂಖ್ಯಾತ ಭಾರತೀಯರಿದ್ದರೆಂದು ತಿಳಿದುಬರುತ್ತದೆ ಹಾಗೂ ಇವರು ಗ್ರೀಕರ ವಿರುದ್ಧ ಯುದ್ಧಗಳಲ್ಲಿ ಹೋರಾಡುತ್ತಿದ್ದರು.

## ಮ್ಯಾಸಡೋನ್ನಿಯನ್ನರ ದಾಳಿ :

ಕ್ರಿ.ಪೂ 4ನೇ ಶತಮಾನದಲ್ಲಿ ಪಶ್ಚಿಮ ಏಷ್ಯಾದ ಸಾರ್ವಭೌಮತ್ವಕ್ಕಾಗಿ ಗ್ರೀಕ್ & ಪರ್ಶಿಯನ್ನರು ಹೋರಾಟ ನಡೆಸಿದರು. ಕ್ರಿ.ಪೂ 331ರಲ್ಲಿ ಅಬೇಮಿಯನದ ದೊರೆ 3ನೇ ಡೇರಿಯಸ್‌ನನ್ನು ಸೋಲಿಸಿದ ಗ್ರಿಕರು ಪಶ್ಚಿಮ ಏಷ್ಯಾದ ಪ್ರದೇಶಗಳಾದ ಇರಾನ್ & ಇರಾಕ್‌ನನ್ನು ವಶಪಡಿಸಿಕೊಂಡರು. ಆ ಮೂಲಕ ಪರ್ಶಿಯಾದ ಆಳ್ವಿಕೆಗೆ ಒಳಪಟ್ಟ ಭಾರತದ ಪ್ರದೇಶಗಳ ಮೇಲೆ ಗ್ರೀಕ್ ದಾಳಿ ಆರಂಭವಾಯಿತು.

## ಅಲೆಗ್ಸಾಂಡರ್ :

- ಈತ ಮ್ಯಾಸಿಡೋನಿಯಾ ಸಾಮ್ರಾಜ್ಯದ ಸ್ಥಾಪಕನಾದ ಫಿಲಿಪ್ಪನ ಮಗ.
- ಗ್ರೀಕ್ ತತ್ವಜ್ಞಾನಿಯಾದ ಅರಿಸ್ಟಾಟಲ್ ಇವನ ಗುರು.
- ಅಲೆಗ್ಸಾಂಡರನು ಪ್ರೀತಿಸುತ್ತಿದ್ದ ವಸ್ತುಗಳೆಂದರೆ ಖಡ್ಗ & ಹೋಮರನ “ಈಲಿಯಡ್” ಕಾವ್ಯಗಳು.
- ಈತ ಅತ್ಯಂತ ಮಹತ್ವಾಕಾಂಕ್ಷೆ ದೊರೆಯಾಗಿದ್ದು ಬಾಲ್ಯದಿಂದಲೂ ಯುದ್ಧ ಹಾಗೂ ರಾಜ್ಯ ವಿಸ್ತರಣೆಯಲ್ಲಿ ಆಸಕ್ತಿ ಹೊಂದಿದ್ದನು. ಇವನ ತಂದೆ ಫಿಲಿಪ್ಸನು ಪರ್ಷಿಯಾವನ್ನು ಆಕ್ರಮಿಸುವ ಯೋಜನೆ ಹೊಂದಿದ್ದು, ಈತ ಕೊಲೆಯಾದ ಕಾರಣ ಈ ಯೋಜನೆ ಸಫಲವಾಗಲಿಲ್ಲ. ಆದುದರಿಂದ ಅಲೆಗ್ಸಾಂಡರನು ಪರ್ಶಿಯಾವನ್ನು ಸೋಲಿಸಲು ಅತ್ಯುತ್ತಮವಾದ ಸೈನ್ಯವನ್ನು ಸಂಘಟಿಸಿ ಯಶಸ್ವಿಯಾದನು.
- ಈತ ಕ್ರಿ.ಪೂ. 331ರಲ್ಲಿ ಅಖೇಮಿಯನ್ ದೊರೆಯಾದ ಮೂರನೇ ಡೇರಿಯಸ್‌ನನ್ನು ಸೋಲಿಸಿ ಅವನಿಂದ ಪಶ್ಚಿಮ ಏಷ್ಯಾದ ಪ್ರದೇಶಗಳನ್ನು ವಶಪಡಿಸಿಕೊಂಡನು.
- ಪರ್ಶಿಯಾದ ದಾಳಿಯ ನಂತರ ಅಲೆಗ್ಸಾಂಡರನು ಕ್ರಿ.ಪೂ 326ರಲ್ಲಿ ಕೈಬರ್‌ಪಾಸ್‌ನ ಮೂಲಕ ಭಾರತಕ್ಕೆ ಬಂದನು.
- ಅಲೆಗ್ಸಾಂಡರನು ಭಾರತದ ಮೇಲೆ ದಂಡೆತ್ತಿ ಬಂದ ವಿಚಾರವನ್ನು ಗ್ರೀಕ್ & ರೋಮನ್ ಬರವಣಿಗೆಗಳ ಆಧಾರದಿಂದ ತಿಳಿಯಬಹುದಾಗಿದೆ. ಆದರೆ ಭಾರತದ ಯಾವುದೇ ಸಾಹಿತ್ಯಾಧಾರಗಳು ದಾಳಿಯ ಬಗ್ಗೆ ಉಲ್ಲೇಖಿಸಿರುವುದಿಲ್ಲ.



downloaded from: www.kpscvaani.com

# ➢ ಮೌರ್ಯ ಸಾಮ್ರಾಜ್ಯ (ಕ್ರಿ.ಪೂ 324–185) :–

## ಸಾಹಿತಿಕ ಆಧಾರಗಳು :

ಸಾಹಿತಿಕ ಆಧಾರಗಳಲ್ಲಿ ಎರಡು ವಿಧ

1. ದೇಶೀಯ ಬರವಣಿಗೆಗಳು
2. ವಿದೇಶೀಯ ಬರವಣಿಗೆಗಳು

## ಕೌಟಿಲ್ಯನ ಅರ್ಥಶಾಸ್ತ್ರ :

ಈ ಗ್ರಂಥವು ಮೌರ್ಯರ ಕಾಲದ ಆಡಳಿತ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲುತ್ತದೆ. ಇದರ ಕರ್ತೃ ಕೌಟಿಲ್ಯ. ಈತನನ್ನು ಚಾಣುಕ್ಯನೆಂದೂ ಸಹಾ ಕರೆಯುವರು. ಈತ ಚಂದ್ರಗುಪ್ತ ಮೌರ್ಯನ ಪ್ರಧಾನಮಂತ್ರಿಯಾಗಿದ್ದನು. ಈ ಗ್ರಂಥವು ರಾಜನ, ಮಂತ್ರಿಗಳ ಕರ್ತವ್ಯ, ಗೂಢಚರ್ಯೆ ವ್ಯವಸ್ಥೆ, ರಾಜತಾಂತ್ರಿಕ ವ್ಯವಸ್ಥೆ, ಯುದ್ಧ ನೀತಿ ಇತ್ಯಾದಿಗಳ ಬಗ್ಗೆ ಉಪಯುಕ್ತ ಮಾಹಿತಿಯನ್ನು ಒದಗಿಸುತ್ತದೆ.

| ವಿದ್ವಾಂಸರು / ಸಾಹಿತ್ಯಗಳ ಪ್ರಕಾರ | ಮೌರ್ಯರ ಮೂಲದ ಬಗ್ಗೆ ಅಭಿಪ್ರಾಯ |
|---|---|
| ಜಸ್ಟಿನ್ | ಸ್ಯಾಂಡೋಕೋಟಸ್ (ಚಂದ್ರಗುಪ್ತ ಮೌರ್ಯನು) ಸಾಮಾನ್ಯ ಕುಲದಲ್ಲಿ ಜನಿಸಿದ ವ್ಯಕ್ತಿಯೆಂದು ವರ್ಣಿಸಿದ್ದಾನೆ. |
| ಮುದ್ರಾರಾಕ್ಷಸ (ವಿಶಾಖದತ್ತ) | ಚಂದ್ರಗುಪ್ತ ಮೌರ್ಯನನ್ನು ಮಯೂರಸುತನೆಂದು ಕರೆದಿದ್ದು ನಂದ ವಂಶಸ್ಥನೆಂದು ತಿಳಿಸಿದೆ. ಇದರಲ್ಲಿ ಚಂದ್ರಗುಪ್ತನನ್ನು ವೃಷಾಲನೆಂದು ಸೂಚಿಸಿದ್ದು ಆರಂಭಿಕ ಶೂದ್ರನೆನಿಸಿದನು. |
| ಬೌದ್ಧ ಮೂಲಗಳು | ಚಂದ್ರಗುಪ್ತ ಮೌರ್ಯನು 'ಮೋರಿಯಾ' ಎಂಬ ಕ್ಷತ್ರಿಯ ಕುಲಕ್ಕೆ ಸೇರಿದವನು. |
| ಬೌದ್ಧ ಸಾಹಿತ್ಯ ದಿವ್ಯವದನ & ಮಹಾವಂಶಟಿಕ | ಚಂದ್ರಗುಪ್ತ ಮೌರ್ಯನು ಪಿಪ್ಪಲಿವನವನ್ನು ಆಳುತ್ತಿದ್ದ ಮೋರಿಯಾ ಎಂಬ ಕುಲಕ್ಕೆ ಸೇರಿದವನು. ಅಲ್ಲದೇ ಈ ಗ್ರಂಥವು ಚಂದ್ರಗುಪ್ತ ಮೌರ್ಯನು ಸಾಕ್ಯ ಬುಡಕಟ್ಟಿಗೆ/ ಪಂಗಡಕ್ಕೆ ಸೇರಿದವನು ಎಂದು ಉಲ್ಲೇಖಿಸುತ್ತದೆ. (ಬುದ್ಧ ಜನಿಸಿದ ಪಂಗಡ) |
| ಪುರಾಣಗಳು | ನಂದರ ಆಸ್ಥಾನದಲ್ಲಿ ಮುರಾ ಎಂಬ ಶೂದ್ರ ಹೆಂಗಸಿಗೆ ಚಂದ್ರಗುಪ್ತನು ಜನಿಸಿದ ಕಾರಣ ಮೌರ್ಯ ಎಂದು ಕರೆಯಲಾಗುತ್ತದೆ. |
| ಜೈನ ಸಾಹಿತ್ಯ | ಚಂದ್ರಗುಪ್ತ ಮೌರ್ಯನು ನವಿಲುಗಳನ್ನು ಸಾಕುವ ಅಥವಾ |



downloaded from: www.kpscvaani.com

| | |
|---|---|
| | ಮಯೂರ ಪೋಷಕ ಪಂಗಡಕ್ಕೆ ಸೇರಿದವನು. |
| ಬೃಹತ್ಕಥಾ ಮಂಜರಿ | ಚಂದ್ರಗುಪ್ತನು ಮೌರ್ಯನು ಶೂದ್ರ ಕುಲದವರೆಂದು ಪ್ರತಿಪಾದಿಸಿವೆ. |
| ರುದ್ರದಾಮನನ ಜುನಾಗಢ ಶಿಲಾಶಾಸನ | ಚಂದ್ರಗುಪ್ತನು ಮೌರ್ಯನು ವೈಶ್ಯ ಕುಲದವರೆಂದು ಪ್ರತಿಪಾದಿಸಿವೆ. |
| ರೋಮಿಲಾ ಥಾಪರ್ | ಚಂದ್ರಗುಪ್ತನು ಮೌರ್ಯನು 'ಮೋರಿಯಾ' ಪಂಗಡಕ್ಕೆ ಸೇರಿದವನಾಗಿದ್ದು, ಇದು ಹೀನ ಕುಲವಾಗಿರುತ್ತದೆ. ಇವರ ಪ್ರಕಾರ ಚಂದ್ರಗುಪ್ತನು ಮೌರ್ಯನು ವೈಶ್ಯ ಕುಲಕ್ಕೆ ಸೇರಿದವನು. |
| ಹೆಚ್.ಸಿ. ರಾಯಚೌಧರಿ | ಚಂದ್ರಗುಪ್ತನು ಮೌರ್ಯನು ಕ್ಷತ್ರಿಯ ವರ್ಗಕ್ಕೆ ಸೇರಿದವನು. |

## ಕೌಟಿಲ್ಯನ ಅರ್ಥಶಾಸ್ತ್ರ :

ಅರ್ಥಶಾಸ್ತ್ರದ ಕರ್ತೃ ಕೌಟಿಲ್ಯ ಈತನಿಗೆ ವಿಷ್ಣುಗೋಪ, ದ್ರಾವಿಡಾಚಾರ್ಯ, ಚಾಣಕ್ಯ ಎಂಬ ಇತರ ಹೆಸರುಗಳಿದ್ದವು. ಈ ಅರ್ಥಶಾಸ್ತ್ರ ಗ್ರಂಥವನ್ನು ರಾಜದಂಡ ಶಾಸ್ತ್ರ ಅಥವಾ ಸರ್ಕಾರ ರಚನಾ ಶಾಸ್ತ್ರವೆಂದು ಕರೆಯುವರು. ಅರ್ಥಶಾಸ್ತ್ರವು ಸಂಸ್ಕೃತದಲ್ಲೇ ಅದ್ವಿತೀಯವಾದ ಕೃತಿಯಾಗಿದೆ. ಈತ ತಕ್ಷಶಿಲೆ ವಿಶ್ವವಿದ್ಯಾಲಯದಲ್ಲಿ ಪಾಂಡಿತ್ಯ ಪಡೆದಿದ್ದು ಚಂದ್ರಗುಪ್ತ ಮೌರ್ಯನ ಪ್ರಧಾನಮಂತ್ರಿಯಾಗಿದ್ದನು. ಅರ್ಥಶಾಸ್ತ್ರದ ಬಗ್ಗೆ ತಿಳಿಸಿದವರು ಡಾ// ಆರ್. ಶಾಮಶಾಸ್ತ್ರಿಗಳು ಇವರು ಮಯಸುರು ಓರಿಯೆಂಟಲ್ ಗ್ರಂಥಾಲಯದ ಕ್ಯೂರೇಟರ್ ಆಗಿದ್ದು ಯಾವುದೋ ಸಂಶೋಧನೆಯಲ್ಲಿ ತೊಡಗಿದ್ದಾಗ, ಈ ಕೃತಿಯನ್ನು ಹೊರತೆಗೆದು 1909ರಲ್ಲಿ ಪ್ರಕಟಿಸಿದರು.

ಭೂಮಿಯನ್ನು ಪಡೆದು ಪರಿಪಾಲಿಸುವ ಶಾಸ್ತ್ರವನ್ನು ವಿವರಿಸುವುದೇ ಅರ್ಥಶಾಸ್ತ್ರ ಎಂಬ ವ್ಯಾಖ್ಯೆಯನ್ನು ಕೌಟಿಲ್ಯನು ನೀಡಿದ್ದಾನೆ. ಈ ಕೃತಿಯು 6000 ಶ್ಲೋಖಗಳನ್ನು ಒಳಗೊಂಡಿದ್ದು, 15 ವಿಭಾಗಗಳಾಗಿ ಹಾಗೂ 180 ಉಪವಿಭಾಗಗಳಾಗಿ ವಿಂಗಡನೆಯಾಗಿದೆ. ಮೊದಲ 5 ವಿಭಾಗಗಳು ತಂತ್ರ ಅಥವಾ ಆಂತರಿಕ ಆಡಳಿತದ ಬಗ್ಗೆ 8 ವಿಭಾಗಗಳು ಅವಪ ಅಥವಾ ನೆರೆ ರಾಷ್ಟ್ರಗಳೊಂದಿಗೆ ಸಂಬಂಧವನ್ನು ಉನ್ನುಳಿದ ವಿಭಾಗಗಳ ಇತರೆ ವಿಷಯಗಳನ್ನು ಚರ್ಚಿಸುತ್ತದೆ. ಆದರೆ ಈ ಕೃತಿಯಲ್ಲಿರುವ ಅಂಶಗಳ ಆಧಾರದ ಮೇಲೆ 3 ವಿಭಾಗಗಳಾಗಿ ವಿಂಗಡಿಸಿದೆ.

- ರಾಜ ಅವನ ಮಂತ್ರಿಮಂಡಲ ಹಾಗೂ ಸರ್ಕಾರದ ವಿವಿಧ ಖಾತೆಗಳು
- ಸಿವಿಲ್ & ಕ್ರಿಮಿನಲ್ ಅಪರಾಧದ ಕಾಯ್ದೆಗಳು
- ಅಂತರರಾಜ್ಯ ಕಾಯ್ದೆ ಪದ್ದತಿ ರಾಯಭಾರ & ಯುದ್ಧಗಳ ಬಗ್ಗೆ



downloaded from: www.kpscvaani.com

## ಕೌಟಿಲ್ಯನ ಸಿದ್ಧಾಂತಗಳು :

- ### ಕೌಟಿಲ್ಯನ ಸಪ್ತಾಂಗ ಸಿದ್ಧಾಂತ :

ಅರ್ಥಶಾಸ್ತ್ರದಲ್ಲಿ ಕೌಟಿಲ್ಯನು ರಾಜ್ಯವನ್ನು ಒಂದು ಶರೀರಕ್ಕೆ ಹೋಲಿಸಿ, ಅವುಗಳ 7 ಅಂಗಗಳನ್ನು 'ಸಪ್ತಾಂಗ' ಎಂದು ವಿವರಿಸಿದ್ದಾನೆ. ಅವುಗಳೆಂದರೆ :

1. ಸ್ವಾಮಿ (ರಾಜ)
2. ಅಮಾತ್ಯ (ಮಂತ್ರಿ)
3. ರಾಷ್ಟ್ರ
4. ದುರ್ಗ
5. ಬಲ
6. ಕೋಶ
7. ಮಿತ್ರ

ಈ ಎಲ್ಲಾ ಅಂಶಗಳೂ ಹೇಗೆ ಕಾರ್ಯ ನಿರ್ವಹಿಸುತ್ತವೆ ಎಂಬುದರ ಬಗ್ಗೆ ವಿವರಿಸಿದ್ದಾನೆ.

- ### ಮಂಡಲ ಸಿದ್ಧಾಂತ :

ಕೌಟಿಲ್ಯನು ರಾಜ್ಯದ ನೆರೆಹೊರೆಯ 12 ರಾಜ್ಯಗಳ ಆಧಾರದ ಮೇಲೆ ಮಂಡಲ ಸಿದ್ಧಾಂತವನ್ನು ಪ್ರತಿಪಾದಿಸುತ್ತಾನೆ. ಆ ರಾಜ್ಯಗಳೆಂದರೆ :

1. ವಿಜಿಗಿಷು – ಸಾಮ್ರಾಟ
2. ಅರಿ – ವಿಜಿಗಿಷುವಿನ ಶತ್ರು ಹಾಗೂ ಪಕ್ಕದ ರಾಜ್ಯ
3. ಮಿತ್ರ – ಅರಿಯ ಪಕ್ಕದ ರಾಜ್ಯ ಹಾಗೂ ವಿಜಿಗಿಷುವಿನ ಮಿತ್ರ
4. ಅರಿಮಿತ್ರ – ಮಿತ್ರನ ನೆರೆಯ ರಾಜ್ಯ ಹಾಗೂ ಅರಿಯ ಮಿತ್ರ
5. ಮಿತ್ರ – ಅರಿಮಿತ್ರನ ಪಕ್ಕದ ರಾಜ್ಯ ಹಾಗೂ ಮಿತ್ರನ ಮಿತ್ರ
6. ಪಾರ್ಶ್ವನಿಗ್ರಹ – ವಿಜಿಗಿಷುವಿನ ಪಕ್ಕದಲ್ಲಿ ಬರುವ ಮತ್ತೊಂದು ಶತೃರಾಷ್ಟ್ರ
7. ಅರಿಮಿತ್ರ ಮಿತ್ರ – ಮಿತ್ರ ಮಿತ್ರನ ರಾಜ್ಯದ ಮೇಲೆ ಬರುವ ಅರಿ ಮಿತ್ರನ ಸ್ನೇಹಿತ
8. ಅಕ್ರಂದ – ಪಾರ್ಶ್ವ ನಿಗ್ರಹಕ ಕೆಳಗೆ ಬರುವ ಅದರ ಶತೃ ರಾಷ್ಟ್ರ
9. ಪಾಸ್ವನಿಗ್ರಹಸಾರ – ಅಕ್ರಂದ ರಾಜ್ಯದ ಕೆಳಗೆ ಬರುವ ಶತೃ ರಾಷ್ಟ್ರ
10. ಅಕ್ರಂದ ಸಾರ – ವಿಜಿಗಿಷುವಿನ ಪರವಾಗಿರುವ ಅಕ್ರಂದ ರಾಜ್ಯದ ಮಿತ್ರ
11. ಮಧ್ಯಮ – ವಿಜಿಗಿಷು & ಅರಿಯ ರಾಜ್ಯಕ್ಕೆ ಹೊಂದಿಕೊಂಡಿರುವ ಸ್ವತಂತ್ರಬಲಿಷ್ಟರಾಷ್ಟ್ರ
12. ಉದಾಸೀನ – ಭೌಗೋಳಿಕವಾಗಿ ಇತರೆಲ್ಲ ರಾಜ್ಯಗಳಿಂದ ದೂರವಿರುವ ಬಲಿಷ್ಟ ರಾಷ್ಟ್ರ



downloaded from: www.kpscvaani.com

- **ಷಡ್ಗುಣ ಸಿದ್ಧಾಂತ :**

ಒಂದು ರಾಜ್ಯ ತನ್ನ ವಿದೇಶಾಂಗ ನೀತಿಯನ್ನು ಪಾಲಿಸಿಕೊಂಡು ಬರಲು ಕೌಟಿಲ್ಯನು 6 ಸಿದ್ಧಾಂತಗಳನ್ನು ಪ್ರತಿಪಾದಿಸುವನು. ಅವುಗಳೆಂದರೆ :

1. ಸಂಧಿ – ಶಾಂತಿ ಒಪ್ಪಂದ
2. ವಿಗ್ರಹ – ಯುದ್ಧ ನೀತಿ
3. ಯಾನ – ಶಕ್ತಿ ಪ್ರದರ್ಶನ
4. ಆಸನ – ತಟಸ್ಥತೆ
5. ಸಂಶ್ರಯ – ಆಶ್ರಯ ಪಡೆಯುವುದು
6. ದ್ವೈದೇಭವ – ಎರಡು ನೀತಿ ಅನುಸರಿಸುವುದು

## ಮೆಗಾಸ್ತನೀಸನ ಇಂಡಿಕಾ :

ಚಂದ್ರಗುಪ್ತ ಮಾರ್ಯನ ಆಸ್ಥಾನಕ್ಕೆ ಗ್ರೀಕ್ ಸೆಲ್ಯೂಕಸ್‌ನ ರಾಯಭಾರಿಯಾಗಿ ಕ್ರಿ.ಪೂ 302–298ರವರೆಗೆ ಬಂದ ಮೆಗಾಸ್ತನೀಸನು ಭಾರತದಲ್ಲಿ ತಾನು ಕಂಡ & ಕೇಳಿದ ಘಟನೆಗಳ ವಿಚಾರಗಳನ್ನು 'ಇಂಡಿಕಾ' ಕೃತಿಯಲ್ಲಿ (ಗ್ರೀಕ್ ಭಾಷೆ) ಸ್ಪಷ್ಟ ಚಿತ್ರಣ ನೀಡಿದ್ದಾನೆ. ಮೆಗಾಸ್ತನೀಸನಿಗೆ ಭಾರತೀಯ ಭಾಷೆಗಳ ಅರಿವಿರಲಿಲ್ಲ ಹಾಗೂ ಸಂಸ್ಕೃತ ಪದಗಳನ್ನು ಅರ್ಥೈಸುವ ಬಗ್ಗೆ ವಿಫಲನಾಗಿರುವನು. ಈತನ ಕೃತಿಯಲ್ಲಿ ಆದರ್ಶಗಳು ಹೆಚ್ಚಾಗಿ ಕಂಡುಬರುತ್ತವೆ ಹಾಗೂ ವಿಮರ್ಶಾತ್ಮಕತೆ ಕಂಡುಬರುವುದಿಲ್ಲ. ಆದರೂ ಮೆಗಸ್ತಾನೀಸನ ಕೃತಿಯು ಮೌರ್ಯ ಸಾಮ್ರಾಜ್ಯದ ಬಗ್ಗೆ ಉಪಯುಕ್ತ ಮಾಹಿತಿ ನೀಡುವುದು. ಅವುಗಳೆಂದರೆ

- ಮೆಗಸ್ತಾನೀಸನು ಪಾಟಲೀಪುತ್ರದ ನಗರಸಭೆಯ ಕಾರ್ಯಕಲಾಪಗಳನ್ನು ಕುರಿತು ವರ್ಣಿಸಿದ್ದಾನೆ. ನಗರಪಾಲಕನೆಂಬ ಅಧಿಕಾರಿ ನಗರಸಭೆಯ ಮುಖಂಡನಾಗಿದ್ದನು. ಆಡಳಿತ ನಿರ್ವಹಣೆಗಾಗಿ ನಗರಸಭೆಯನ್ನು 6 ವಿಭಾಗಗಳಾನ್ನಾಗಿ ವಿಭಾಗಿಸಲಾಗಿದ್ದು, ಪ್ರತಿ ವಿಭಾಗಗಳಲ್ಲಿ 5 ಮಂದಿ ಪ್ರತಿಸ್ಪರ್ಧಿಗಳಿರುತ್ತಿದ್ದರು. ಈ ವಿಭಾಗಗಳು ಕ್ರಮವಾಗಿ
    1. ಔದ್ಯೋಗಿಕ ಕಾರ್ಯಗಳನ್ನು ನೋಡುವುದು
    2. ವಿದೇಶಿಯರ ವಸತಿ ಸೌಕರ್ಯ & ಅವರ ಕಾರ್ಯ ಚಟುವಟಿಕೆಗಳ ಮೇಲೆ ನಿಗಾ ಇಡುವುದು
    3. ಜನನ & ಮರಣಗಳ ದಾಖಲೆಯನ್ನು ಮಾಡುವುದು
    4. ವ್ಯಾಪಾರ ವಹಿವಾಟಿನ ನಿರ್ವಹಣೆ
    5. ತಯಾರಿಸಲಾಗುವ ಕಬ್ಬಿಣ, ಚಿನ್ನ & ಇತರೆ ಲೋಹದ ವಸ್ತುಗಳ ಉತ್ಪಾದನೆಯ ಬಗ್ಗೆ ತನಿಖೆ ಮಾಡುವುದು
    6. ತೆರಿಗೆ ಸಂಗ್ರಹ



downloaded from: www.kpscvaani.com

- ಮೆಗಸ್ತಾನೀಸನು ಅಂದಿನ ಸಾಮಾಜಿಕ ವ್ಯವಸ್ಥೆಯನ್ನು ಕುರಿತು ತಿಳಿಸುತ್ತಾ ಅಂದಿನ ಭಾರತೀಯ ಸಮಾಜವು 7 ಶ್ರೇಣಿಗಳಾಗಿ ವರ್ಗಿಕರಣಗೊಂಡಿತ್ತು ಎಂದಿದ್ದಾನೆ.
- ಮೆಗಸ್ತಾನೀಸನು ತನ್ನ ಕೃತಿಯಲ್ಲಿ ರಾಜ, ಆಡಳಿತದ ಕೇಂದ್ರಬಿಂದು. ಈತನಿಗೆ ಮಂತ್ರಿಮಂಡಲವು ಆಡಳಿತದಲ್ಲಿ ಸಹಕರಿಸುತ್ತವೆ. ರಾಜನು ಪರ್ಷಿಯನ್ ಮಾದರಿಯ ಆಸ್ಥಾನವನ್ನೊಳಗೊಂಡ ಅರಮನೆಯಲ್ಲಿ ವಾಸವಾಗಿರುತ್ತಿದ್ದನು. ರಾಜನು ಸಮರ್ಥವಾದ ಗೂಡಚರ್ಯೆಯನ್ನು ನೇಮಿಸುತ್ತಿದ್ದನು. ನ್ಯಾಯದಾನದಲ್ಲಿ ರಾಜನೇ ಪರಮೊಚ್ಛ ಅಧಿಕಾರ ಹೊಂದಿದ್ದನು.
- ಮೆಗಸ್ತಾನೀಸನ ಪ್ರಕಾರ ಅಂದಿನ ಭಾರತದಲ್ಲಿ ಜೀತಪದ್ದತಿ ಇರಲಿಲ್ಲ & ಕ್ಷಾಮ ಪರಿಸ್ಥಿತಿ ಕಂಡುಬರಲಿಲ್ಲವೆಂದು ಉಲ್ಲೇಖಿಸಿದ್ದಾನೆ.
- ರಾಜನು ಪ್ರಜೆಗಳಿಗೆ ತೆರಿಗೆ ವಿಧಿಸುತ್ತಿದ್ದು, ಭೂಕಂದಾಯವು ರಾಜ್ಯದ ಮುಖ್ಯ ಆದಾಯದ ಮೂಲವಾಗಿತ್ತು.
- ರಾಜನು ಬೇಟೆಯಲ್ಲ ಆಸಕ್ತನಾಗಿದ್ದು, ಬೇಟೆಗೆ ಹೋದಾಗ ಸ್ತ್ರೀ ಅಂಗರಕ್ಷಕರನ್ನು ಅವನೊಂದಿಗೆ ಕರೆದೊಯ್ಯತ್ತಿದ್ದನು.
- ಇಂಡಿಕಾ ಕೃತಿಯು ನಮಗೆ ದೊರೆತಿಲ್ಲ ಅದರ ಉಲ್ಲೇಖಗಳು ಇತರ ಕೃತಿಯಲ್ಲಿ ಇರುವುದರಿಂದ ಕೆಲವು ವಿಚಾರಗಳಷ್ಟೇ ತಿಳಿದುಬಂದಿದೆ.

## ಚಂದ್ರಗುಪ್ತ ಮೌರ್ಯ (ಕ್ರಿ.ಪೂ 324–300) :

ಮೌರ್ಯ ಸಾಮ್ರಾಜ್ಯದ ಸ್ಥಾಪಕ ಚಂದ್ರಗುಪ್ತ ಮೌರ್ಯ. ತಂದೆಯನ್ನು ಕಳೆದುಕೊಂಡಿದ್ದ ಚಂದ್ರಗುಪ್ತ ಮೌರ್ಯನನ್ನು ತಕ್ಷಶಿಲೆಯ ಬ್ರಾಹ್ಮಣನಾದ ಚಾಣುಕ್ಯನು ಕರೆದೊಯ್ದು ಅಗತ್ಯ ಶಿಕ್ಷಣವನ್ನು ನೀಡಿದನು. ಇವನು ತನ್ನ ಗುರುವಾದ ಚಾಣುಕ್ಯನ ನೆರವಿನಿಂದ ಈ ಸಾಮ್ರಾಜ್ಯವನ್ನು ಸ್ಥಾಪಿಸಿದನು.

ಚಂದ್ರಗುಪ್ತ ಮೌರ್ಯನು ಚಾಣುಕ್ಯನ ಸಹಾಯದಿಂದ ನಂದ ಸಂತತಿಯ ಕೊನೆಯ ದೊರೆಯಾದ ಧನನಂದನನ್ನು ಕ್ರಿ.ಪೂ 321ರಲ್ಲಿ ಕೊಂದು, ಆತನ ಕ್ರೂರ ಆಡಳಿತವನ್ನು ಕೊನೆಗಾಣಿಸಿ ಮಗಧವನ್ನು ಆಕ್ರಮಿಸುವ ಮೂಲಕ ಮೌರ್ಯ ಸಾಮ್ರಾಜ್ಯಕ್ಕೆ ಅಡಿಪಾಯ ಹಾಕಿದ್ದು ವಿಶಾಕದತ್ತನ ಮುದ್ರಾರಾಕ್ಷಸದಲ್ಲಿ ಉಲ್ಲೇಖವಿದೆ. ಬೌದ್ಧ ಮೂಲಗಳ ಪ್ರಕಾರ ಈ ಹಿಂದೆ ಚಾಣುಕ್ಯನು ನಂದರು ಆಳುತ್ತಿದ್ದ ಪಾಟಲೀಪುತ್ರಕ್ಕೆ ಭೇಟಿ ನೀಡಿದ್ದು, ಆ ಸಂದರ್ಭದಲ್ಲಿ ನಂದರಿಂದ ಅಪಮಾನಿತನಾಗಿದ್ದನು. ಈ ಮಧ್ಯೆ ಚಂದ್ರಗುಪ್ತ ಮೌರ್ಯನ ತಾಯಿ ಮೊರಿಯಾನಗರದ ರಾಜನ ಪತ್ನಿಯಾಗಿದ್ದು, ರಾಜನು ಕೊಲೆಯಾದ ನಂತರ ಆಕೆಯನ್ನು ಪಾಟಲೀಪುತ್ರಕ್ಕೆ ಕರೆತರಲಾಯಿತು. ಆಕೆ 'ಚಂದ್ರಗುಪ್ತ'ನೆಂಬ ಮಗುವಿಗೆ ಜನ್ಮವಿತ್ತಳು. ಚಂದ್ರಗುಪ್ತನು ಯುವಕನಾಗಿರುವಾಗಲೇ ಪಂಜಾಬಿನಲ್ಲಿ ಅಲೆಗ್ಸಾಂಡರ್‌ನನ್ನು ಸಂಧಿಸಿದ್ದನು. ಇದರ ಬಗ್ಗೆ ಪ್ಲುಟಾರ್ಕ್‌ನ ಬರವಣಿಗೆಯಲ್ಲಿ ಕಾಣಬಹುದಾಗಿದೆ.



downloaded from: www.kpscvaani.com

ಅಲೆಗ್ಸಾಂಡರ್‌ನನ್ನು ಅಪಮಾನಿಸಿದ ಕಾರಣ ಚಂದ್ರಗುಪ್ತನನ್ನು ಕೊಲೆಗೈಯಲು ಆಜ್ಞೆ ಮಾಡಲಾಗಿತ್ತು. ಆತನು ತಪ್ಪಿಸಿಕೊಂಡು ಅಡವಿಯಲ್ಲಿ ರಕ್ಷಣೆ ಪಡೆಯುತ್ತಿದ್ದ ವೇಳೆ ಚಾಣುಕ್ಯನನ್ನು ಅನಿರೀಕ್ಷಿತವಾಗಿ ಸಂಧಿಸಿದನು. ಬಾಲಕನಲ್ಲಿದ್ದ ವಿಶೇಷ ನಾಯಕತ್ವದ ಗುಣಗಳನ್ನು ಗುರುತಿಸಿದ ಚಾಣುಕ್ಯ ಅವನೊಬ್ಬ ರಾಜನಾಗುವಂತೆ ತಕ್ಷಶಿಲೆಯಲ್ಲಿ 8 ವರ್ಷಗಳ ತರಬೇತಿ ನೀಡಿದನು. ಪ್ಲುಟಾರ್ಕ್‌ನ ಬರವಣಿಗೆಗಳಲ್ಲಿ ಚಂದ್ರಗುಪ್ತ ಮೌರ್ಯನು ತಕ್ಷಶಿಲೆಯಲ್ಲಿ ಇದ್ದನೆಂದು ಉಲ್ಲೇಖಿಸುತ್ತದೆ.

## ವಾಯುವ್ಯ ಭಾರತದ ದಿಗ್ವಿಜಯ :

ಚಂದ್ರಗುಪ್ತನು ಚಾಣುಕ್ಯನ ಮಾರ್ಗದರ್ಶನದಡಿಯಲ್ಲಿ ಒಂದು ಬಲಿಷ್ಠ ಸೈನ್ಯವನ್ನು ಕಟ್ಟಿದ್ದನು. ಗ್ರೀಕ್ & ಜೈನ ಸಾಹಿತ್ಯಾಧಾರಗಳ ಪ್ರಕಾರ ಚಂದ್ರಗುಪ್ತನು ಕ್ರಿ.ಪೂ 323ರಲ್ಲಿ ಅಲೆಗ್ಸಾಂಡರನ ಮರಣಾನಂತರ ವಾಯುವ್ಯ ಭಾರತದ ಗ್ರೀಕ್ ಪ್ರದೇಶಗಳನ್ನು ಸ್ವತಂತ್ರಗೊಳಿಸಿದನು. ಆ ಮೂಲಕ ವಾಯುವ್ಯ ಭಾರತದ ಮೇಲೆ ಹತೋಟಿ ಸಾಧಿಸಿದನು. ಜಸ್ಟಿನ್‌ನ ಪ್ರಕಾರ "ಅಲೆಗ್ಸಾಂಡರ್‌ನ ಸಾವಿನ ನಂತರ ಭಾರತವು ದಾಸ್ಯದ ಶೃಂಖಲೆಯನ್ನು ಕಿತ್ತೊಗೆಯಲು ಗವರ್ನರುಗಳನ್ನು ಕೊಂದಿತು" ಎಂದಿದ್ದಾನೆ .

## ಮಗಧದ ಆಕ್ರಮಣ :

ವಾಯುವ್ಯ ಭಾರತವನ್ನು ವಶಪಡಿಸಿಕೊಂಡ ನಂತರ ಮಗಧ ಸಾಮ್ರಾಜ್ಯದ ಮೇಲೆ ಚಾಣಕ್ಯನ ಸಹಾಯದಿಂದ ದಾಳಿ ಮಾಡಿ ಕ್ರಿ. ಪೂ 321ರಲ್ಲಿ ನಂದರ ಕೊನೆಯ ದೊರೆ ಧನನಂದನನ್ನು ಕೊಂದು ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದನು.

## ಸೆಲ್ಯೂಕಸ್‌ನೊಂದಿಗೆ ಯುದ್ಧ :

ಅಲೆಗ್ಸಾಂಡರನು ಭಾರತದ ವಾಯುವ್ಯ ಭಾಗಗಳ ಮೇಲೆ ತನ್ನ ಅಧಿಪತ್ಯವನ್ನು ಸ್ಥಾಪಿಸಿ ಆಳಲು ತನ್ನ ಪ್ರತಿನಿಧಿಗಳನ್ನು ನೇಮಿಸಿದ್ದನು. ಚಂದ್ರಗುಪ್ತ ಅವರನ್ನು ಸೋಲಿಸಿ, ಅವರ ಪ್ರದೇಶಗಳನ್ನು ತನ್ನ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿದನು. ಅಲೆಗ್ಸಾಂಡರ್‌ನ ಮರಣಾನಂತರ ಮಧ್ಯ ಏಷ್ಯಾದಲ್ಲಿಯ ಗ್ರೀಕ್ ಸಾಮ್ರಾಜ್ಯಕ್ಕೆ ಸೆಲ್ಯೂಕಸ್ ಅಧಿಪತಿಯಾದನು. ಕ್ರಿ.ಪೂ 305ರಲ್ಲಿ ಅಲೆಗ್ಸಾಂಡರ್ ಹೊಂದಿದ್ದ ಭಾರತೀಯ ಪ್ರದೇಶಗಳನ್ನು ಪುನಃ ವಶಪಡಿಸಿಕೊಳ್ಳಲು ಸಿಂಧೂ ನದಿಯನ್ನು ದಾಟಿ ಬಂದನು. ಚಂದ್ರಗುಪ್ತ ಮೌರ್ಯನು ಅವನನ್ನು ಸೋಲಿಸಿದನು. ಆದ್ದರಿಂದ ಸೆಲ್ಯೂಕಸ್ ಚಂದ್ರಗುಪ್ತನೊಂದಿಗೆ ಒಂದು ಒಪ್ಪಂದ ಮಾಡಿಕೊಳ್ಳಬೇಕಾಯಿತು. ಅದರಂತೆ ಅವನು ಕಾಬೂಲ್, ಆಫ್ಘಾನಿಸ್ತಾನ್, ಕಂದಹಾರ್, ಹೀರತ್, ಗಾಂಧಾರ & ಬಲೂಚಿಸ್ತಾನಗಳನ್ನೊಳಗೊಂಡ ವಿಸ್ತಾರವಾದ ದೇಶವನ್ನು ಚಂದ್ರಗುಪ್ತ ಮೌರ್ಯನಿಗೆ ನೀಡಿದನು. ಚಂದ್ರಗುಪ್ತ ಮೌರ್ಯನಿಗೆ ತನ್ನ ಮಗಳನ್ನು ಮದುವೆ



downloaded from: www.kpscvaani.com

ಮಾಡಿಕೊಟ್ಟನು. (ಅಪ್ಪೆನ್ ಉಲ್ಲೇಖಿಸಿದ್ದಾನೆ). ಇದಕ್ಕೆ ಪ್ರತಿಯಾಗಿ ಚಂದ್ರಗುಪ್ತ ಮೌರ್ಯನು ಯುದ್ಧ ತರಬೇತಿ ಹೊಂದಿದ್ದ 500 ಆನೆಗಳನ್ನು ಆತನಿಗೆ ಬಳುವಳಿಯಾಗಿ ನೀಡಿದನು. ಹಾಗೂ ಮೆಗಾಸ್ತಾನೀಸ್ ಎಂಬ ರಾಯಭಾರಿಯನ್ನು ಚಂದ್ರಗುಪ್ತ ಮೌರ್ಯನ ಆಸ್ಥಾನಕ್ಕೆ ಕಳುಹಿಸಿದನು. ಅವನು ಗ್ರೀಕ್ ಭಾಷೆಯಲ್ಲಿ 'ಇಂಡಿಕಾ' ಎಂಬ ಕೃತಿಯನ್ನು ರಚಿಸಿದ್ದಾನೆ. ಈ ಯುದ್ಧದಿಂದಾಗಿ ಮೌರ್ಯ ಸಾಮ್ರಾಜ್ಯವು ಪರ್ಷಿಯಾದವರೆಗೂ ಹಬ್ಬಿತು.

## ಬಿಂದುಸಾರ (ಕ್ರಿ.ಪೂ 300–273) :

ಈತ ಚಂದ್ರಗುಪ್ತ ಮೌರ್ಯನ ಉತ್ತರಾಧಿಕಾರಿ. ಚಂದ್ರಗುಪ್ತ ಮೌರ್ಯ ಮಗನಾದ ಬಿಂದುಸಾರನನ್ನು ಚೀನೀ ಸಾಹಿತ್ಯವು 'ಬಿಂದುಪಾಲ' ಎಂದು ಕರೆದಿದೆ. ಗ್ರೀಕ್ ದಾಖಲೆಗಳು ಇವನನ್ನು 'ಅಮಿತ್ತಘಾತ', 'ಅಮಿತ್ರಖಾಡ' (ಶತ್ರುನಾಶಕ) ಎಂದು ಕರೆದಿದೆ. ಸ್ಟ್ರಾಬೋನು (ಗ್ರೀಕ್ ಬಂಗಾರ) ಅಮಿತ್ರೋಕಟ ಎಂದು ಬಣ್ಣಿಸಿದ್ದಾನೆ.

ರೋಮಿಲಾ ಥಾಪರ್ ಎಂಬ ಇತಿಹಾಸಕಾರರು ಬಿಂದುಸಾರನ ಕಾಲದಲ್ಲಿ ಮೌರ್ಯ ಸಾಮ್ರಾಜ್ಯವು ದಕ್ಷಿಣ ಪ್ರಸ್ಥಭೂಮಿಯವರೆಗೆ ವಿಸ್ತರಿಸಿದ್ದು, ಮೈಸೂರು ಪ್ರಾಂತ್ಯವನ್ನು ಒಳಗೊಂಡಿತ್ತೆಂದು ಅಭಿಪ್ರಾಯಿಸಿರುತ್ತಾರೆ.

ಟಿಬೆಟ್‌ನ ಬೌದ್ಧ ಸನ್ಯಾಸಿಯಾದ ತಾರನಾಥನು ಭಾರತಕ್ಕೆ ಭೇಟಿ ಕೊಟ್ಟಿದ್ದು ಬಿಂದುಸಾರನ 16 ನಗರಗಳ ರಾಜರುಗಳನ್ನು & ಮಂತ್ರಿಮಂಡಲಗಳನ್ನು ಕೌಟಿಲ್ಯನ ಸಹಾಯದಿಂದ ನಾಶಪಡಿಸಿದನೆಂದೂ ಅದರಂತೆ ಬಿಂದುಸಾರನ ಪೂರ್ವ & ಪಶ್ಚಿಮಗಳ ನಡುವಿನ ರಾಜ್ಯಗಳನ್ನು ತನ್ನ ಸಾಮ್ರಾಜ್ಯಕ್ಕೆ ಸೇರ್ಪಡಿಸಿಕೊಂಡನೆಂದು ಉಲ್ಲೇಖಿಸಿದೆ.

ತಮಿಳು ಸಾಹಿತ್ಯವು ಬಿಂದುಸಾರನ ಕಾಲದಲ್ಲಿ ಮೌರ್ಯರು ದಕ್ಷಿಣ ಭಾರತದ ಮೇಲೆ ದಾಳಿ ಮಾಡಿದ್ದರೆಂದು ಉಲ್ಲೇಖಿಸಿದೆ.

ಬೌದ್ಧ ಸಾಹಿತ್ಯವಾದ ದಿವ್ಯವದನವು ಬಿಂದುಸಾರನು ತನ್ನ ಮಕ್ಕಳಾದ ಸುಶಿಮಾ & ಆಶೋಕನನ್ನು ತಕ್ಷಶಿಲೆ ಹಾಗೂ ಉಜ್ಜಯಿನಿಗಳ ರಾಜಪ್ರತಿನಿಧಿಯಾಗಿ (ವೈಸರಾಯ್) ನೇಮಿಸಿದ್ದನೆಂದು ತಿಳಿಸುತ್ತದೆ. ಬಿಂದುಸಾರನ ಕಾಲದಲ್ಲಿ ತಕ್ಷಶಿಲೆಯಲ್ಲಿ ಜನರು ದಂಗೆಯೆದ್ದಾಗ ಅಲ್ಲಿನ ರಾಜ್ಯಪಾಲ ಸುಶೀಮನು ದಂಗೆಯನ್ನು ಅಡಗಿಸಲು ವಿಫಲನಾದನು. ಆಗ ಬಿಂದುಸಾರನು ತನ್ನ ಮಗನಾದ ಉಜ್ಜಯಿನಿ ರಾಜ್ಯಪಾಲನಾದ ಅಶೋಕನನ್ನು ಕಳುಹಿಸಿ ದಂಗೆಯನ್ನು ಅಡಗಿಸಿದನೆಂದು ಉಲ್ಲೇಖಿಸಿವೆ.

ಬಿಂದುಸಾರನು ಸೆಲ್ಯೂಕಸ್ ನಿಕೇಚರನ ಮಗನಾದ ಸಿರಿಯಾದ 1ನೇ ಆಂಟಿಯೋಕಸ್ ಸಾಟರ್‌ನೊಂದಿಗೆ ಉತ್ತಮ ಸಂಬಂಧ ಹೊಂದಿದ್ದನು. ಈತನು ಡೈಮಾಕಸ್ ಎಂಬ ರಾಯಭಾರಿಯನ್ನು ಬಿಂದುಸಾರನ ಆಸ್ಥಾನಕ್ಕೆ ಕಳುಹಿಸಿದ್ದನು. ಒಮ್ಮೆ ಬಿಂದುಸಾರನು ಗ್ರೀಕ್ ದೊರೆ 1ನೇ ಅಂಟಿಯೋಕಸ್‌ನಿಗೆ, ಮದ್ಯ, ಅಂಜೂರದ ಹಣ್ಣು ಹಾಗೂ ಓರ್ವ ತತ್ವಜ್ಞಾನಿಯನ್ನು ಕಳುಹಿಸಿಕೊಡಲು ಕೇಳಿಕೊಂಡನು. ಆಂಟಿಯೋಕಸ್‌ನು ಮದ್ಯ ಹಾಗೂ ಅಂಜೂರದ ಹಣ್ಣನ್ನು ಕಳುಹಿಸಿ ಗ್ರೀಕ್ ತತ್ವಜ್ಞಾನಿಗಳು ರಫ್ತು ಸರಕುಗಳಲ್ಲವೆಂದು ಪ್ರತ್ಯುತ್ತರ ನೀಡಿದನು.




downloaded from: www.kpscvaani.com

ಬಿಂದುಸಾರನು ಪಶ್ಚಿಮದ ಹೆಲನಿಕ್ ದೊರೆಗಳೊಂದಿಗೆ ಉತ್ತಮ ಬಾಂದವ್ಯ ಹೊಂದಿದ್ದನು. ಬಿಂದುಸಾರನ ಆಸ್ಥಾನಕ್ಕೆ ಈಜಿಪ್ಟನ ದೊರೆ ಟಾಲೆಮಿ ಫಿಲಡೆಲ್‌ಫಿಸನು ತನ್ನನ ರಾಯಭಾರಿಯಾದ ಡಿಯಾನಸ್‌ನನ್ನು ಕಳುಹಿಸಿದ್ದನೆಂದು ಗ್ರೀಕ್ ಬರಹಗಾರ ಪ್ಲೀನೀಯ ಉಲ್ಲೇಖಿಸಿದ್ದಾನೆ.

ಬಿಂದುಸಾರನ ಅಜೀವಿಕ ಧಾರ್ಮಿಕ ಪಂಥವನ್ನು ಪ್ರೋತ್ಸಾಹಿಸಿದನೆಂದು ತಿಳಿದುಬರುತ್ತದೆ. ಅಜೀವಿಕ ಪಂಥದ ಕಾಲಜ್ಞಾನಿಯಾದ ಪಿಂಗಳವಸ್ತು ಬಿಂದುಸಾರನ ಆಸ್ಥಾನದಲ್ಲಿದ್ದನೆಂದು, ಆತ ಅಶೋಕನು ಚಕ್ರವರ್ತಿಯಾಗುವನೆಂದು ಭವಿಷ್ಯ ನುಡಿದಿದ್ದನು.

ಬಿಂದುಸಾರನು 25 ವರ್ಷಗಳ ಕಾಲ ಆಳ್ವಿಕೆ ಮಾಡಿ ಕ್ರಿ.ಪೂ 273ರಲ್ಲಿ ನಿಧನನಾದನು. ಈತನ ಮರಣಾನಂತರ ಬಿಂದುಸಾರನ ಮಕ್ಕಳಲ್ಲಿ ಉತ್ತರಾಧಿಕಾರಕ್ಕಾಗಿ ಹೋರಾಟ ಆರಂಭಗೊಂಡಿತೆಂದು ಕೊನೆಗೆ ಅಶೋಕನು 4 ವರ್ಷಗಳ ನಂತರ ಕ್ರಿ.ಪೂ 273–232ರಲ್ಲಿ ಮೌರ್ಯ ಸಾಮ್ರಾಜ್ಯದ ದೊರೆಯಾಗಿ ಆಳ್ವಿಕೆಗೆ ಬಂದನು.

## ಅಶೋಕ (ಕ್ರಿ.ಪೂ 273–232) :




- ಪುರಾಣಗಳು ಅಶೋಕನನ್ನು 'ಅಶೋಕ ವರ್ಧನ' ಎಂದು ಕರೆದಿವೆ. ವಿ.ಎ. ಸ್ಮಿತ್‌ರವರು ಅಶೋಕವರ್ಧನ ಎಂಬುದು ಆತನ ಹೆಸರಾಗಿತ್ತು ಹಾಗೂ ಪ್ರಿಯದರ್ಶಿ ಎಂಬುದು ಆತನ ಬಿರುದೆಂಬುದಾಗಿ ಅಭಿಪ್ರಾಯಿಸುತ್ತಾರೆ. ಕ್ರಿ.ಶ 150ರ ರುದ್ರದಾಮನ ಗಿರ್‌ನಾರ್ ಶಾಸನವು (ಗುಜರಾತ್) ಈತನನ್ನು ಮೌರ್ಯರ ಅಶೋಕನೆಂದು ತಿಳಿಸಿದೆ.
- ಬಾಬ್ರುಶಾಸನದಲ್ಲಿ ಅಶೋಕನು ಪ್ರಿಯದರ್ಶಿ ರಾಜ ಮಗಧ ಎಂದು ತನ್ನ ಬಗ್ಗೆ ಹೇಳಿಕೊಂಡಿರುತ್ತಾನೆ. ರಾಜಸ್ಥಾನದ ಜೈಪುರ ಬಳಿ ದೊರೆತಿರುವ ಈ ಶಾಸನದಲ್ಲಿ ಅಶೋಕನು ಬೌದ್ಧ ಧರ್ಮಕ್ಕೆ ಮತಾಂತರಗೊಂಡ ಬಗ್ಗೆ ಬೌದ್ಧ ಧರ್ಮದಲ್ಲಿನ ನಂಬಿಕೆ, ದಮ್ಮ & ಸಂಘ ಬಗ್ಗೆ ತಿಳಿದುಬರುತ್ತದೆ.
- ಕ್ರಿ.ಶ 1915ರಲ್ಲಿ ಕರ್ನಾಟಕದ ರಾಯಚೂರಿನ ಬಳಿಯಿರುವ ಮಸ್ಕಿ ಶಾಸನವು ಅಶೋಕನನ್ನು ದೇವನಾಂಪ್ರಿಯ ಅಶೋಖ ಎಂದು ಉಲ್ಲೇಖಿಸಿದೆ. ಅಲ್ಲದೇ ಮದ್ಯಪ್ರದೇಶದ ಗುಜರ್ರಾ ಶಾಸನವು 'ದೇವನಾಂಪ್ರಿಯ ಪ್ರಿಯದರ್ಶನೋ ಆಶೋಕ ರಾಜಸ' ಎಂದು ಅಶೋಕನ ಹೆಸರು & ಬಿರುದುಗಳನ್ನು ಒಳಗೊಂಡಿರುವ ಬಗ್ಗೆ ಉಲ್ಲೇಖಿಸಿದೆ.




downloaded from: www.kpscvaani.com

- ಬಿಂದುಸಾರನ ಮಗನಾದ ಅಶೋಕನು ತಂದೆಯ ಮರಣದ ನಂತರ ಕ್ರಿ.ಪೂ 273ರಲ್ಲಿ ಅಧಿಕಾರಕ್ಕೆ ಬಂದನೆಂದು ಕೆಲವು ವಿದ್ವಾಂಸರು ವಾದಿಸಿದರು. ಮತ್ತೆ ಕೆಲವರು ಬಿಂದುಸಾರನ ಮರಣಾನಂತರ 4 ವರ್ಷಗಳ ಉತ್ತರಾಧಿಕಾರದ ಯುದ್ಧದ ಬಳಿಕ ವಿಜೇತ ಅಶೋಕನು ಪಟ್ಟಕ್ಕೆ ಬಂದನೆಂದು ವಾದಿಸುತ್ತಾರೆ.
- ಅಶೋಕನು ತನ್ನ ತಂದೆ ಬಿಂದುಸಾರನ ಆಡಳಿತಾವಧಿಯಲ್ಲಿ ಮೊದಲಿಗೆ ಉಜ್ಜೈನಿಯ ರಾಜ್ಯಪಾಲನಾಗಿ ನಂತರದಲ್ಲಿ ತಕ್ಷಶಿಲೆಯ ರಾಜ್ಯಪಾಲನಾಗಿ ಕಾರ್ಯನಿರ್ವಹಿಸುತ್ತಿದ್ದನು. ಬೌದ್ಧ ಕೃತಿಗಳಾದ ದೀಪವಂಶ & ಮಹಾವಂಶಗಳ ಅಶೋಕನ ಆರಂಭದ ಜೀವನವನ್ನು ಚಿತ್ರಿಸುತ್ತಾ ಅಶೋಕನು ತನ್ನ 99 ಸಹೋದರರನ್ನು (ಹಿರಿಯ ಸಹೋದರನಾದ ಸುಶೀಮನನ್ನು ಸೇರಿ) ಕೊಂದು ಅಧಿಕಾರಕ್ಕೆ ಬಂದನೆಂದು ತಿಳಿಸುತ್ತದೆ. ತಿಸ್ಸಾ ಎಂಬ ಸಹೋದರನು ಅಶೊಕನನ್ನು ಬೆಂಬಲಿಸಿದನು. ಈತನನ್ನು ಉಪರಾಜ ಪ್ರತಿನಿಧಿಯಾಗಿ ಮಾಡಿ ಸ್ಥಾನಮಾನ ದೊರಕಿಸಿಕೊಟ್ಟನು. ಟಿಬೆಟ್ ಇತಿಹಾಸಕಾರ ತಾರನಾಥನು ಅಶೋಕನು 6 ಸಹೋದರರನ್ನು ಕೊಂದು ಅಧಿಕಾರಕ್ಕೆ ಬಂದನೆಂದು ಅಭಿಪ್ರಾಯಿಸುತ್ತಾನೆ. ಆದರೆ ಇದು ನಂಬಲರ್ಹವಲ್ಲ.
- ಅಶೋಕನು ತನ್ನ 14ನೇ ವರ್ಷದ ಆಡಳಿತದಲ್ಲಿ ಐದನೇ ಶಿಲಾಶಾಸನವನ್ನು ಹೊರಡಿಸಿದ್ದು, ಆ ಶಿಲಾಶಾಸನವು ತನ್ನ ಸಹೋದರ, ಸಹೋದರಿಯರ ಹಾಗೂ ಬಂಧುಗಳ ಕಲ್ಯಾಣವನ್ನು ನೋಡಿಕೊಳ್ಳಲು ಪ್ರತ್ಯೇಕ ವ್ಯವಸ್ಥೆ ಮಾಡಿರುವ ಬಗ್ಗೆ ಉಲ್ಲೇಖವಿದೆ. ಇದು ಬೌದ್ಧ ಸಾಹಿತ್ಯದಲ್ಲಿ ಅಶೋಕನ ಬಗೆಗಿನ ಉಲ್ಲೇಖವನ್ನು ತಿರಸ್ಕರಿಸುವುದು.
- ವಿ.ಎ ಸ್ಮಿತ್, ನೀಲಕಂಠ ಶಾಸ್ತ್ರಿಯವರು ಅಶೋಕನ ಪಟ್ಟಾಭಿಷೇಕವು ಬಿಂದುಸಾರನು ಮೃತನಾದ ನಂತರ ನಾಲ್ಕು ವರ್ಷಗಳ ತರುವಾಯು ಪಾಟಲಿಪುತ್ರದಲ್ಲಿ ವಿದ್ಯುಕ್ತವಾಗಿ ನಡೆಯಿತು ಎಂದು ಅಭಿಪ್ರಾಯಿಸಿರುತ್ತಾರೆ. ಇದಕ್ಕೆ ಅವರು ನೀಡುವ ಕಾರಣವೆಂದರೆ ಬಿಂದುಸಾರನ ನಂತರ ಅವನ ಮಕ್ಕಳಲ್ಲಿ ಉತ್ತರಾಧಿಕಾರಕ್ಕಾಗಿ ನಡೆದ ಹೋರಾಟದಿಂದ ಪಟ್ಟಾಭಿಷೇಕವು ನಾಲ್ಕು ವರ್ಷಗಳ ಕಾಲ ವಿಳಂಭವಾಯಿತು. ಡಾ// ಕೆ.ಪಿ ಜಯಸ್ವಾಲ್‌ರ ಪ್ರಕಾರ ಅಶೋಕನ ಪಟ್ಟಾಭಿಷೇಕಕ್ಕೆ ನಾಲ್ಕು ವರ್ಷಗಳ ಕಾಲ ವಿಳಂಭವಾಗಲು ಕಾರಣವೆಂದರೆ 'ಹಿಂದೂ ಸಂಪ್ರದಾಯದಲ್ಲಿ ರಾಜನ ಪಟ್ಟಾಭಿಷೇಕಕ್ಕೆ 25 ವರ್ಷ ತುಂಬಿರಬೇಕಿದ್ದುದರಿಂದ ಅಶೋಕನು ಆಗ 21 ವರ್ಷದ ಯುವಕನಾಗಿದ್ದನು'. ಅಶೋಕನು ಅಧಿಕಾರಕ್ಕೆ ಬಂದ ಮೇಲೆ ತನ್ನ ಪೂರ್ವಿಕರಂತೆ ಆಕ್ರಮಣ ನೀತಿಯಂತೆ ಅನುಸರಿಸಿದನು. ಹಾಗೂ ವಿದೇಶಿ ರಾಜರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದನು.
- ಬೌದ್ಧ ಅಶೋಕ ವದನದಲ್ಲಿ ಅಶೋಕನ ತಾಯಿ ಸುಭದ್ರಾಂಗಿ ಎಂದು ಉಲ್ಲೇಖಿಸಲ್ಪಟ್ಟಿದೆ. ಸಿಲೋನಿ ವೃತ್ತಾಂತಗಳಲ್ಲಿ ಅಶೋಕನ ತಾಯಿ ಧರ್ಮಾ ಎಂದು ಹೆಸರಿಸಿದೆ.
- ಬೌದ್ಧ ಮಹಾವಂಶದ ಪ್ರಕಾರ ಅಶೋಕನ ಪಟ್ಟದರಾಣಿ ಅಸ್ಸಂಧಿಮಿತ್ತ. ಅಸ್ಸಂಧಿಮಿತ್ತಳ ನಿಧನಾ ನಂತರ ತಿಸ್ಸಾರಿಕಾ/ಕುರುವಕಿಯು ಅಶೋಕನ ಪಟ್ಟದ ರಾಣಿಯಾಗಿ ಸ್ಥಾನ ಪಡೆಯುವಳು. ಈಕೆಯು ಬೋಧಿವೃಕ್ಷ



downloaded from: www.kpscvaani.com

ನಾಶಕ್ಕೆ ಕಾರಣಳಾದವಳು. ಅಲಹಾಬಾದ್ ಸ್ತಂಭ ಶಾಸನದಲ್ಲಿ ಕುರುವಕಿಯ ಬಗ್ಗೆ ಉಲ್ಲೇಖವಿದ್ದು, ಆಕೆಯ ಧಾರ್ಮಿಕ ದಾನ ದತ್ತಿಗಳನ್ನು ವಿವರಿಸುತ್ತದೆ. ಅಲ್ಲದೇ ಆ ಶಾಸನದಲ್ಲಿ ಕುರುವಕಿಯು 'ತಿವಾರ' ಎಂಬ ಯುವರಾಜನ ತಾಯಿ ಎಂದು ಬಣ್ಣಿಸಿದೆ. ಶಾಸನಗಳಲ್ಲಿ ಅಶೋಕನ ಒಬ್ಬ ಪುತ್ರನ ಬಗ್ಗೆ ತಿಳಿಸಿರುವುದು ಕಂಡುಬರುತ್ತದೆ.

- ಕಲ್ಹಣನ ರಾಜತರಂಗಿಣಿಯು ಅಶೋಕನ ಮತ್ತೊಬ್ಬ ಪುತ್ರನಾದ ಜಲುಕಾನ ಬಗ್ಗೆ ತಿಳಿಸುತ್ತದೆ. ದಿವ್ಯ ವದನವು ಪದ್ಮಾವತಿಯನ್ನು (ಕುನಾಲನ ತಾಯಿ) ಅಶೋಕನ ರಾಣಿಯೆಂದು ಉಲ್ಲೇಖಿಸುತ್ತದೆ.
- ಸಂಘಮಿತ್ರ & ಚಾರುಮತಿಯು ಅಶೋಕನ ಪುತ್ರಿಯರು. ಚಾರುಮತಿಯು ನೇಪಾಳದ ಕ್ಷತ್ರಿಯ ರಾಜ ದೇವಪಾಲನನ್ನು ವಿವಾಹವಾಗಿದ್ದಳು.
- ಸಂಪ್ರತಿ (ಕುನಾಲನ ಮಗ) & ದಶರಥರು ಅಶೋಕನ ಮೊಮ್ಮಕ್ಕಳೆಂದು ಉಲ್ಲೇಖಿಸಿದೆ.
- ಅಶೋಕನು ಅಧಿಕಾರಕ್ಕೆ ಬಂದ ನಂತರ ತನ್ನ ಪೂರ್ವಿಕರಂತೆಯೇ ಆಕ್ರಮಣ ನೀತಿಯನ್ನು ಮುಂದುವರೆಸಿದನು. ಆದರೆ ವಿದೇಶಿ ರಾಜರೊಂದಿಗೆ ಉತ್ತಮ ಬಾಂಧವ್ಯವನ್ನು ಆರಂಭಿಸಿದ.

## ಕಳಿಂಗ ಯುದ್ಧ (ಕ್ರಿ. ಪೂ. 261) :

ಅಶೋಕನು ಕ್ರಿ.ಪೂ 261ರಲ್ಲಿ ಅಂದರೆ ತನ್ನ ಆಳ್ವಿಕೆಯ 8ನೇ ವರ್ಷದಲ್ಲಿ ಕಳಿಂಗದ ಮೇಲೆ ಯುದ್ಧ ಮಾಡಿದನು. ಈ ಯುದ್ಧಕ್ಕೆ ಸ್ಪಷ್ಟವಾದ ಕಾರಣ ತಿಳಿದುಬಂದಿಲ್ಲ. ಆದರೂ ಅಶೋಕನ ಪೂರ್ವಿಕರು ಕಳಿಂಗವನ್ನು ಗೆಲ್ಲಲ್ಪಟ್ಟಿರುವುದಿಲ್ಲವೆಂಬ ಅಂಖವನ್ನು ಸ್ವತಃ ಅಶೋಕನೇ ಒಪ್ಪಿಕೊಂಡಿದ್ದಾನೆ. ತನ್ನ ತಂದೆ ಬಿಂದುಸಾರನು ದಕ್ಷಿಣ ಭಾರತದ ಮೇಲೆ ಕೈಗೊಂಡ ದಂಡಯಾತ್ರೆಯು ವಿಫಲವಾಗಿದ್ದು, ಅಶೋಕನು ಕಳಿಂಗವನ್ನು ವಶಪಡಿಸಿಕೊಳ್ಳಲು ಯುದ್ಧ ಮಾಡಿದನೆಂದು ತಿಳಿಯಬಹುದಾಗಿದೆ. ಕಳಿಂಗರು ಅತ್ಯಂತ ಸಾಹಸಿಗರೂ ಹಾಗೂ ಸ್ವತಂತ್ರಪ್ರಿಯರಾಗಿದ್ದರು, ಯುದ್ಧದಲ್ಲಿ ಅಶೋಕನ ವಿರುದ್ದ ಹೋರಾಡಿದರು. ಈ ಯುದ್ಧದಲ್ಲಿ ಅಶೋಕನು ವಿಜಯಶಾಲಿಯಾದನು.

13ನೇ ಬಂಡೆಗಲ್ಲು ಶಾಸನವು ಈ ಯುದ್ಧದಲ್ಲಾದ ಸಾವು ನೋವು ರಕ್ತಪಾತ ಸನ್ನಿವೇಶವು ಅಶೋಕನ ಮನಃಪರಿವರ್ತನೆಗೆ ಕಾರಣವಾಯಿತು ಹಾಗು ಆತನ ರಾಜನೀತಿಯ ಮೇಲೆ ಹೇಗೆ ಪರಿಣಾಮ ಬೀರಿತೆಂಬ ಅಂಶವನ್ನು ವಿವರಿಸುತ್ತದೆ. ಈ ಯುದ್ಧದ ಭೀಕರತೆಯು ಅಶೋಕನ ಮೇಲೆ ಪರಿಣಾಮ ಬೀರಿ 'ದಿಗ್ವಿಜಯಕ್ಕಿಂತ ಧಮ್ಮ ವಿಜಯವೇ ಮೇಲೆಂಬುದಾಗಿ' ಮುಂದೆಂದೂ ಯುದ್ಧ ಮಾಡುವುದಿಲ್ಲವೆಂದೂ ಪ್ರತಿಜ್ಞೆ ಮಾಡಿದನು. ಅವನ ರಾಜ್ಯದಲ್ಲಿ ಬೇರಿ ಘೋಷಣದ ಬದಲು ದಮ್ಮ ಘೋಷ (ಶಾಂತಿ) ಮೊಳಗಲು ಆರಂಭಿಸಿತು.



downloaded from: www.kpscvaani.com

ಕಳಿಂಗ ಯುದ್ಧದ ತರುವಾಯ ಅಶೋಕನು ಉಪಗುಪ್ತನೆಂಬ ಬೌದ್ಧ ಸನ್ಯಾಸಿಯಿಂದ ಪ್ರಭಾವಿತನಾಗಿ ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿದನು. ಹಾಗೂ ಬೌದ್ಧ ಧರ್ಮದ ಬಗ್ಗೆ ಪ್ರಚಾರ ಕೈಗೊಂಡು ಆ ಮೂಲಕ ಬೌದ್ಧ ಧರ್ಮವನ್ನು ಪ್ರೋತ್ಸಾಹಿಸಿದನು ಎಂಬ ಅಂಶವನ್ನು ಬಾಬ್ರಿ ಶಿಲಾಶಾಸನವು ಉಲ್ಲೇಖಿಸುತ್ತದೆ.

ಅಶೋಕನು ಧರ್ಮಯಾತ್ರೆ ಕೈಗೊಂಡು ತನ್ನ ಆಳ್ವಿಕೆಯ 11ನೇ ವರ್ಷದಲ್ಲಿ ಬುದ್ದನಿಗೆ ಜ್ಞಾನೋದಯವಾದ ಬೋದ ಗಯಾದಲ್ಲಿನ ಬೋಧಿವೃಕ್ಷಕ್ಕೆ ಭೇಟಿ ನೀಡಿದನು. ಅಶೋಕನು ತನ್ನ ಆಳ್ವಿಕೆಯ 12ನೇ ವರ್ಷದಲ್ಲಿ ಬಾರಾಬ್ವಾರ್ ಗುಹಾಲಯಗಳನ್ನು ನಿರ್ಮಿಸಿ ಅಜೀವಿಕ ಪಂಥದವರೆಗೆ ದಾನ ನೀಡಿದ್ದನೆಂದು ಹಾಗೂ ಶಾಸನಗಳನ್ನು ಹೊರಡಿಸಿದ್ದನೆರಂದು ತಿಳಿದುಬರುತ್ತದೆ. ತನ್ನನ ಆಳ್ವಿಕೆಯ 21ನೇ ವರ್ಷದಲ್ಲಿ ಬುದ್ದನ ಜನ್ಮಸ್ಥಳವಾದ ಲುಂಬಿಣಿಯನ್ನು ಸಂದರ್ಶಿಸಿ ಆ ಸ್ಥಳದಲ್ಲಿ "ಭಗವಾನ್ ಬುದ್ದನು ಹುಟ್ಟಿದ ಸ್ಥಳ' ಎಂಬುದಾಗಿ ಒಂದು ಸ್ತಂಭ ಶಾಸನವನ್ನು ಕೊರೆಸಿದನು. ಲುಂಬಿನಿ ಗ್ರಾಮಕ್ಕೆ ಭೂಕಂದಾಯವನ್ನು ಕಡಿಮೆ ಮಾಡಿದನು.

ದಮ್ಮದ (ಸಾಮಾಜಿಕ ನೀತಿ ಸಂಹಿತೆ) ತತ್ವಗಳನ್ನು ಪ್ರಚಾರ ಮಾಡಲು ಅಶೋಕನು ತನ್ನ ಆಳ್ವಿಕೆಯ 14ನೇ ವರ್ಷದಲ್ಲಿ ಧರ್ಮ ಮಹಾ ಮಾತ್ರ ಎಂಬ ವಿಶೇಷ ಅಧಿಕಾರಿಗಳನ್ನು ನೇಮಿಸಲು ಆರಂಭಿಸಿದನು. ಇವನ ಅವಧಿಯಲ್ಲಿ ಪಾಟಲೀಪುತ್ರದಲ್ಲಿ ಸಮಾವೇಶಗೊಂಡ 3ನೇ ಬೌದ್ಧ ಸಮ್ಮೇಳನದಲ್ಲಿ ಸಿಲೋನ್, ಬರ್ಮಾ, ಸುಮಾತ್ರ ಮುಂತಾದ ದೇಶಗಳಿಗೆ ಧರ್ಮ ಪ್ರಚಾರಕರನ್ನು ಕಳುಹಿಸಲು ನಿರ್ಧರಿಸಲಾಯಿತು. ಇದರಿಂದ ಅ ದೇಶಗಳಲ್ಲಿ ಬೌದ್ಧ ಧರ್ಮ ಪ್ರಚಾರವಾಯಿತೆಂಬ ಅಂಶವನ್ನು ಬೌದ್ಧ ಸಾಹಿತ್ಯ ಮಹಾವಂಶ ತಿಳಿಸುತ್ತದೆ. ಅಶೋಕನು ಧರ್ಮಪ್ರಚಾರಕರನ್ನು ಅನೇಕ ರಾಜ್ಯಗಳಿಗೆ ಕಳುಹಿಸಿದ್ದನು, ಆಂಧ್ರ, ಬೋಜರ ರಾಜ್ಯ, ಚೋಳ, ಗಾಂಧಾರ, ಕಾಯೋಜ, ಕೇರಳಪುತ್ರ, ನಭಪಂಕ್ತಿ, ಪಾಂಡ್ಯ, ಪರಿಂದ, ತಾಮ್ರಪರ್ಣಿ ಅಲ್ಲದೇ ವಿದೇಶಗಳಿಗೂ ಧರ್ಮಪ್ರಚಾರಕರನ್ನು ಕಳುಹಿಸಿರುವ ಬಗ್ಗೆ ಉಲ್ಲೇಖವಿದೆ. ಅವುಗಳೆಂದರೆ ಗ್ರೀಕ್‌ನ 2ನೇ ಆಂಟಿಯೀಕಸ್‌ನ ಸಿರಿಯಾ, ಈಜಿಪ್ಟ್‌ನ ಟಾಲೆಮಿ ಫಿಲಿಡಲ್ಫಿಸ್ ರಾಜ್ಯ, ಮೆಸಿಡೋನಿಯಾದ ಆಂಟೆಗೋನಸ್ ರಾಜ್ಯ, ಎಪಿರಸ್‌ನ ಅಲೆಗ್ಸಾಂಡರ್ ರಾಜ್ಯ ಇತ್ಯಾದಿ.

## ಅಶೋಕನ ಶಾಸನಗಳು :

ಕರ್ನಾಟಕದಲ್ಲಿ ದೊರಕಿದ ಶಾಸನಗಳಲ್ಲಿ ಅಶೋಕನ ಶಾಸನಗಳೇ ಪ್ರಪ್ರಥಮವಾದವುಗಳ ಕರ್ನಾಟಕದ

1. ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟಿಂಗ ರಾಮೇಶ್ವರಗಳಲ್ಲಿ
2. ರಾಯಚೂರು ಜಿಲ್ಲೆಯ ಮಸ್ಕಿ ಕೊಪ್ಪಳ ಪಾಲ್ಕಿಗೊಂಡ ಮತ್ತು ಗವಿಮಠಗಳಲ್ಲಿ
3. ಬಳ್ಳಾರಿ ಜಿಲ್ಲೆಯ ಉದಂಗೋಳಂ ಮತ್ತು ನಿಟ್ಟೂರುಗಳಲ್ಲಿ
4. ಗುಲ್ಬರ್ಗಾ ಜಿಲ್ಲೆಯ ಅಶೋಕನ 13 ಮತ್ತು 14ನೇ ಬೃಹತ್ ಬಂಡೆಗಲ್ಲು ಶಾಸನಗಳು–ದೊರಕಿವೆ.



downloaded from: www.kpscvaani.com

**ಇವುಗಳಿಂದ :**

- ಮೌರ್ಯ ಸಾಮ್ರಾಜ್ಯದ ದಕ್ಷಿಣದ ಮೇರೆಗಳನ್ನು ಗುರುತಿಸಬಹುದಾಗಿದೆ.
- ದಕ್ಷಿಣದಲ್ಲಿ ಮೌರ್ಯರು ಸುವರ್ಣಗಿರಿ ಮತ್ತು ಬ್ರಹ್ಮಗಿರಿ (ಇಸಿಲಾ) ಪ್ರಾಂತ್ಯಗಳನ್ನು ಹೊಂದಿದ್ದರೆಂದು ತಿಳಿಯಬಹುದು.
- ಮಸ್ಕಿ ಶಾಸನವು ದೊರಕುವ ಪೂರ್ವದಲ್ಲಿ 'ದೇವಾನಂ ಪ್ರಿಯ ಪ್ರಿಯದರ್ಶಿ'ಯೇ ಅಶೋಕ ಎಂದು ಗುರುತಿಸಿರಲಿಲ್ಲ. ಆದರೆ ಮಸ್ಕಿ ಶಾಸನದಲ್ಲಿ 'ದೇವಾನಂ ಪ್ರಿಯ ಪ್ರಿಯದರ್ಶಿ' ಜೊತೆಗೆ ಅಶೋಕ ಎಂದು ಇದೆ. ಹೀಗಾಗಿ 'ದೇವಾನಂ ಪ್ರಿಯ ಪ್ರಿಯದರ್ಶಿ'ಯೇ ಅಶೋಕ ಎಂದು ಇತರೆಡೆ ಸಿಕ್ಕಿದ ಶಾಸನಗಳನ್ನು ಗುರುತಿಸಲಾಯಿತು.
- ಪ್ರಜೆಗಳಲ್ಲಿ ನೈತಿಕ ಪ್ರಜ್ಞೆಯನ್ನು ಬೆಳೆಸುವ ಉಪದೇಶಗಳು ಅಶೋಕನ ಶಾಸನಗಳಲ್ಲಿದ್ದು ಅವನ ವ್ಯಕ್ತಿತ್ವ ನಿರೂಪಣೆಗೆ ಈ ಶಾಸನಗಳು ಸಹಾಯ ಮಾಡುತ್ತವೆ.
- ಅಶೋಕನು ಶಾಸನಗಳ ಭಾಷೆ ಪ್ರಾಕೃತವಾಗಿದ್ದು ಲಿಪಿ ಬ್ರಾಹ್ಮಿಯಾಗಿದೆ.

## ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳು

## ಭಾರತೀಯ ಪುನರುಜ್ಜೀವನ

## 19 ನೇ ಶತಮಾನದ ಸಾಮಾಜಿಕ ಮತ್ತು ಧಾರ್ಮಿಕ ಚಳುವಳಿಗಳು

19 ನೇ ಶತಮಾನದ ಆರಂಭದಲ್ಲಿ ಭಾರತೀಯ ಸಮಾಜವು ನಿಂತ ನೀರಿನಂತೆ ಜಡವಾಗಿತ್ತು. ಜಾತಿಪದ್ಧತಿ, ಅಸ್ಪೃಶ್ಯತೆ, ಶಿಶುಹತ್ಯೆ, ನರಬಲಿ, ಪರದಾ ಪದ್ಧತಿ ಮತ್ತು ಬಾಲ್ಯವಿವಾಹಗಳು ಸಮಾಜವನ್ನು ಅಂಧಕಾರದಲ್ಲಿಟ್ಟಿದದ್ದವು. ಮಾನವ ಅನೇಕ ಮೂಢನಂಬಿಕೆ ಮತ್ತು ಅಂಧಾನುಕರುಣೆಗಳ ಬಲಿಪಶುವಾಗಿದ್ದನು. ಈ ಆಚರಣೆಗಳು ವಿಚಾರಶೂನ್ಯವಾಗಿದ್ದವು. ಕ್ರೈಸ್ತ ಮಿಷನರಿಗಳ ಮತಾಂತರತೆಯಿಂದಾಗಿ ಹಿಂದೂ ಧರ್ಮಕ್ಕೆ ಉಳಿಗಾಲವಿಲ್ಲವಾಯಿತು. ಅಂತಹ ವೇಳೆ ಬ್ರಿಟಿಷರು ಇಂಗ್ಲಿಷ್ ಶಿಕ್ಷಣವನ್ನು ಕರುಣಿಸಿದರು. ಇಂಗ್ಲಿಷ್ ಶಿಕ್ಷಣ ಪಡೆದ ವಿದ್ಯಾವಂತರು, ಬುದ್ಧಿಜೀವಿಗಳು ಸಮಾಜದ ಕೆಡಕುಗಳನ್ನು ಪ್ರಶ್ನಿಸಲಾರಂಭಿಸಿದರು. ಅವರು ಪಾಶ್ಚ್ಯಾತ್ತೀಕರಣದ ಪ್ರಭಾವಕ್ಕೆ ಒಳಗಾಗಿ ವಿಚಾರಶೀಲರಾದರು. ಅವರಲ್ಲಿ ವೈಚಾರಿಕತೆ, ವಿಮರ್ಶಾಜ್ಞಾನ ಬೆಳೆಯಿತು. ಅವರು ಸಮಾಜವನ್ನು ಚಿಕಿತ್ಸಕ ದೃಷ್ಟಿಯಿಂದ ಕಂಡರು. ಕ್ರಿಯಾಶೀಲರಾಗಿ ಕಾರ್ಯ ಪ್ರವೃತ್ತರಾದರು. ಪರಿಣಾಮವಾಗಿ ಸಾಮಾಜಿಕ ಪಿಡುಗುಗಳು ಸಡಿಲಗೊಂಡವು. ಅನಾಚಾರರಗಳು ತಗ್ಗಿದವು. ಸಮಾಜ ಚೈತನ್ಯಶೀಲವಾಗಿ ಪ್ರಗತಿಯತ್ತ ಹೆಜ್ಜೆ ಇಟ್ಟಿತ್ತು. ಇದೆ 19ನೇ ಶತಮಾನದ ಪುನರುಜ್ಜೀವನ ಚಳುವಳಿ. **19ನೇ**



downloaded from: www.kpscvaani.com

**ಶತಮಾನವನ್ನು ಭಾರತ ಇತಿಹಾಸದಲ್ಲಿ ನವೋದಯ ಕಾಲ ಅಥವಾ ಪುನರುಜ್ಜೀವನ ಕಾಲ**ವೆಂದು ಕರೆಯಲಾಗಿದೆ. ಇದು ಭಾರತವನ್ನು ಆಧುನಿಕ ಯುಗದತ್ತ ಒಯ್ದಿತು. ಇಂಗ್ಲಿಷ್ ಶಿಕ್ಷಣ, ಪತ್ರಿಕೆಗಳ ಆರಂಭ, ಇತಿಹಾಸದ ಪುನರುತ್ಥಾನ, ಬುದ್ಧಿಜೀವನಗಳ ಹುಟ್ಟು ಮುಂತಾದವು ಪುನರುಜ್ಜೀವನ ಚಳುವಳಿಗೆ ಕಾರಣವಾದವು. ಕೆ.ಎಮ್. ಫಣೀಕರ್ ಅವರ ಪ್ರಕಾರ "ಭಾರತದ ಇತಿಹಾಸ ಮತ್ತು ಸಂಸ್ಕೃತಿಯನ್ನು ಉತ್ತಮ ಪಥದಲ್ಲಿ ಕೊಂಡೊಯ್ಯಲು ನಿರ್ಧರಿಸಿದ ಕಾಲವೇ ಪುನರುಜ್ಜೀವನ ಕಾಲವಾಗಿದೆ".

## ರಾಜಾರಾಮ್ ಮೋಹನರಾಯ್ (1774–1833)

ಭಾರತೀಯ ಪುನರುಜ್ಜೀವನದ ಪಿತಾಮಹ ".ವೈಚಾರೀಕತೆಯ ಪಿತೃ'. 'ಬ್ರಹ್ಮಸಮಾಜದ ಸ್ಥಾಪಕ, ವಿಚಾರವಾದಿ, ಮಾನವತಾವಾದಿ', 'ಆಸ್ತಿಕವಾದಿ'ಯಾದ ರಾಜಾರಾಮ್ ಮೊಹನರಾಯರು 19ನೇ ಶತಮಾನದ ಪುನರುಜ್ಜೀವನ ಚಳುವಳಿಯ ಆದ್ಯ ಪ್ರವರ್ತಕರು. ರಾಮಾಕಾಂತ್ರಾಯ್‌ಬಂಗಾಳದ ಬರ್ದ್ವಾನ್ ಜಿಲ್ಲೆಯ ರಾಧನಗರದ ಬ್ರಾಹ್ಮಣ ಕುಟುಂಬವಂದರಲ್ಲಿ ಮೇ 22, 1774 ರಂದು ಜನಿಸಿದ್ದರು. ತಂದೆ ರಾಮಾಕಾಂತ್‌ರಾಯ್ (ಭಂಡೋಪಾಧ್ಯಾಯ), ತಾಯಿ ತಾರಣಿದೇವಿ.

## ರಾಜಾರಾಮ್ ಮೊಹನ್‌ರಾಯ್ ಸುಧಾರಣೆಗಳು:

ಸಮಾಜಸುಧಾರಣೆ, ಜನತೆಗೆ ಧರ್ಮದ ನಿಜವಾದ ಅರ್ಥತಿಳಿಯುವಂತೆ ಮಾಡುವುದು ಮತ್ತು ಇಂಗ್ಲಿಷ್ ಶಿಕ್ಷಣಕ್ಕಾಗಿ ಹೋರಾಡುವುದು. ಈ ಮೂರು ಉದ್ದೇಶಗಳನ್ನು ಹೊಂದಿದ್ದ ರಾಜಾರಾಮ್ ಮೋಹನರಾಯರ ಸುಧಾರಣೆಗಳು ಈ ಮುಂದಿನಂತಿವೆ.

1. **ಸಾಮಾಜಿಕ ಸುಧಾರಣೆಗಳು :** ಆಧುನಿಕ ಭಾರತದ ಇತಿಹಾಸದಲ್ಲಿ ಸಮಾಜಸುಧಾರಣೆ ರಾಯರಿಂದಲೆ ಆರಂಭವಾಯಿತ್ತು. ರಾಯರು 19ನೇ ಶತಮಾನದ ಪ್ರಸಿದ್ದ ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಕರು.ಇಂಗ್ಲಿಷ್ ಶಿಕ್ಷಣ ಪಡೆದ ಅವರು ಭಾರತಿಯ ಸಮಾಗವನ್ನು ಪಾಶ್ಚಿಮಾತ್ಯ ವಿಜ್ಞಾನ ಹಾಗೂ ವಿಚಾರದಾರಿಯ ಮೇಲೆ ಸುಧಾರಿಸಲು ಬಯಸಿದ್ದರು. ಅವರು ಸತಿ ಪದ್ದತಿ, ಬಾಲ್ಯ ವಿವಾಹ, ಬಹುಪತ್ನಿತ್ವ, ಶಿಶುಹತ್ಯೆ, ಅಸ್ಪೃಶ್ಯತೆ, ಪರದಪದ್ದತಿ, ಜಾತಿಪದ್ದತಿ, ಪ್ರಾಣಿಬಲಿ, ಮೂರ್ತಿಪೂಜೆಗಳು, ಬಹುಪತ್ನಿತ್ವಗಳ ವಿರುದ್ದ ಸಮರ ಹೂಡಿದ್ದರು ಈ ಕುರಿತು ಲೇಖನಗಳನ್ನು ಪ್ರಕಟಿಸಿದ್ದರು.ಅವುಗಳಿಗೆ ಧರ್ಮ ಶಾಸ್ತ್ರಗಳ ಆಧಾರವಿಲ್ಲವೆಂದು ಸ್ಪಷ್ಟಪಡಿಸಿದರು. ರಾಯಾರು ಮಹಿಳಾವಾದಿಯಾಗಿದ್ದು. ಅವರ ಉದ್ದಾರ ಕುರಿತು ಅನೇಕ ಪ್ರಬಂಧಗಳನ್ನು ಬರೆದರು. ವಿದಾವ ವಿವಾಹ, ಅಂತರ್ಜಾತಿ ವಿವಾಹಗಳು, ಸ್ತ್ರೀ ಶಿಕ್ಷಣಗಳ ಪರಪ್ರಚಾರ ಮಾಡಿದರು. ಅವುಗಳಿಗೆ ಕಾನೂನುಬದ್ದ ಮಾನ್ಯತೆ ಕಲ್ಪಿಸಿದರು.



downloaded from: www.kpscvaani.com

2. **ಸತಿ ಪದ್ದತಿ ನಿಷೇಧ:** ಗಂಡನು ಸತ್ತಲ್ಲಿ ಪತ್ನಿಯಾದವಳು ಗಂಡನೊಡನೆ ಚಿತೆಯಲ್ಲಿ ಬಿದ್ದು ಸಾಯುವುದನ್ನು ಸತಿಸಹಗಮನ ಪದ್ದತಿ ಎನ್ನುತ್ತಾರೆ. ಗಂಡ ಸತ್ತರೆ ಅವನ ಪತ್ನಿಗೆ ಬದುಕುವ ಹಕ್ಕು ಇಲ್ಲವೆಂದು ಅವಳನ್ನು ಬಲವಂತವಾಗಿ ಮತ್ತು ಜೀವಂತವಾಗಿ ಸುಡುವ ಪದ್ದತಿಯಿದು. ಹಿಂದು ಸಂಪ್ರದಾಯದ ಪ್ರಕಾರದ ಅವನ ಪತ್ನಿ ಬದುಕುವ ಹಕ್ಕನ್ನು ಕಳೆದುಕೊಳ್ಳುತ್ತಿದ್ದಳು. ಅವಳನ್ನು ಗಂಡನ ಶವವನ್ನು ಸುಡುತ್ತಿದ್ದ ಬೆಂಕಿಗೆ ನೂಕಿ ಯಮಪುರಿಗೆ ಅಟ್ಟುತ್ತಿದ್ದರು. ಸತ್ತ ವಿಧವೆಗೆ ಶ್ರಾಧ, ಸಂಸ್ಕಾರಗಳನ್ನು ನೇರವೇರಿಸುತ್ತಿದ್ದರು. ಪುರೋಹಿತರಿಗೆ ಅವಳ ಸತಿಪದ್ದತಿ ಬರುಬರುತ್ತಾ ಬಲತ್ಕಾರದ ಪೀಡನೆಯಾಯಿತು. ವಿದವೆಯ ಆಸ್ತಿಯನ್ನು ಕಭಳಿಸಲು ಜೀವಂತರು ಮಾಡುತ್ತಿದ್ದ ಕುತಂತ್ರವಿದು. ಮೇವಾಡದ ರಾಜ ಅಜಿತ್‌ಸಿಂಗ್ ಸತ್ತಾಗ ಅವನ 64 ಜನ ಪತ್ನಿಯರು ಸತಿಸಹಗಮನ ಪದ್ದತಿಯನ್ನು ಅನುಸರಿಸಿದರು. 1815 ರಿಂದ 1828 ರ ನಡುವೆ 8ಸಾವಿರ ಜನ ಸತಿಸಹಗಮನಕ್ಕೆ ಆಹುತಿಯಾದರು. ರಾಯರು ಸತಿಪದ್ದತಿಯ ವಿರುದ್ದ ಬಹಿರಂಗವಾಗಿ ತಿರುಗಿಬಿದ್ದರು. ತನ್ನ ಅಣ್ಣ ಜಗನ್ ಮೋಹನರು ಸತ್ತಾಗ(1811) ಅವನ ಪತ್ನಿ ಅಲೋಕಮಂಜರಿಯನ್ನು ನಗ್ನಗೊಳಿಸಿ ರಾಯರ ಕಣ್ಣೆದುರೇ ಬಲವಂತವಾಗಿ ಸುಡಲಾಯಿತು. ಅವಳ ಆಕ್ರಂದನ ಕೇಳಬಾರದೆಂದು ನಗಾರಿಗಳನ್ನು ಬಾರಿಸಲಾಯಿತ್ತು. ರಾಯರು ಈ ರಾಕ್ಷಸ ಕೃತ್ಯದ ವಿರುದ್ದ ಬಹಿರಂಗವಾಗಿ ತಿರುಗಿಬಿದ್ದರು. ರಾಯರು ಕಲ್ಕತ್ತದಲ್ಲಿ **ಸತಿ ಪದ್ದತಿಯ ವಿರೋಧಿ ಗುಂಪನ್ನು** ಸಂಘಟಿಸಿದ್ದರು.

3. **ಪತ್ರಿಕಾ ಸ್ವಾತಂತ್ರ್ಯ ಹೋರಾಟ:** ವಿಶ್ವ ಮಾನವರಾದ ರಾಯರು ಪತ್ರಿಕಾ ಸ್ವಾತಂತ್ರ್ಯದ ಶ್ರೇಷ್ಠ ಹೋರಾಟಗಾರರಾಗಿದ್ದರು. ಭಾರತೀಯ ಪತ್ರಿಕೋದ್ಯಮದ ಪ್ರರ್ವತಕರಾದ ರಾಯರು ಭಾರತೀಯ ಪತ್ರಿಕಾ ಸ್ವಾತಂತ್ರ್ಯದ ಪರ ಹೋರಾಟ ನಡೆಸಿದರು. 1823ರ ಪತ್ರಿಕಾ ಸ್ವಾತಂತ್ರ್ಯಹರಣ ಕಾಯಿದೆಯನ್ನು ವಿರೋಧಿಸಿದರು ಮತ್ತು ಅದನ್ನು ರದ್ದು ಮಾಡಲು ಸುಪ್ರೀಂಕೋರ್ಟ್ ಮತ್ತು ಪ್ರಿವಿ ಕೌನ್ಸಿಲ್ಗೆ ಮನವಿ ಅರ್ಪಿಸಿದ್ದರು. ಹೀಗಾಗಿ ಲಾರ್ಡ್ ಹೇಸ್ಟಿಂಗ್ಸ್, ಅಡಮ್ಸ್ ಮತ್ತು ಚಾರ್ಲ್ಸ್ ಮೆಟ್‌ಕಾಫ್ರು ಪತ್ರಿಕೆಗಳ ಮೇಲಿನ ನಿರ್ಬಂಧವನ್ನು ರದ್ದುಪಡಿಸಿದರು. ಸ್ವತಃ ರಾಯರು **ಸಂವಾದ ಕೌಮುದಿ**(ಬಂಗಾಲಿ) **ಸಮಾಚಾರ ದರ್ಪಣ, ಮೀರತ್–ಉಲ್–ಅಕ್ಬರ್ (ಪರ್ಶಿಯನ್) ಬ್ರಾಹ್ಮನಿಲ್** ಎಂಬ ಪತ್ರಿಕೆಗಳನ್ನು ಹೊರಡಿಸಿದರು. ರಾಯರು ಪತ್ರಿಕೆಗಳಲ್ಲಿ ಸಾಮಾಜಿಕ ಅನಿಷ್ಟಗಳನ್ನು ಖಂಡಿಸಿದರು. ಭಾರತೀಯರಿಗೆ ಆಡಳಿತದಲ್ಲಿ ಹುದ್ದೆಗಳನ್ನು ಕೊಡುವಂತೆ ವಾದಿಸಿದರು.

4. **ಸ್ತ್ರೀಯರು ಹಕ್ಕುಗಳ ಪ್ರತಿಪಾದನೆ :** ಸ್ತ್ರೀಪರ ವಾದಿಯಾದ ರಾಯರು ಬಹುಪತ್ನಿತ್ವ, ಸತಿ ಪದ್ದತಿ, ಬಾಲ್ಯ ವಿವಾಹಗಳ ವಿರುದ್ದ ಹೋರಾಡಿದರು. ವಿಧವಾ ವಿವಾಹ, ಸ್ತ್ರೀಯರಿಗೆ ಶಿಕ್ಷಣ, ಆಸ್ತಿಯ ಹಕ್ಕು ಇವುಗಳ ಪರ ವಾದಿಸಿದರು. ಸ್ತ್ರೀ–ಪುರುಷರ ನಡುವೆ ಸಮಾನತೆ ಪ್ರತಿಪಾದಿಸಿದರು.



downloaded from: www.kpscvaani.com

5. **ಮೂಢನಂಬಿಕೆಗಳಿಗೆ ವಿರೋಧ:** ರಾಯರು ಪ್ರಾಣಿಬಲಿ, ಮೂರ್ತಿಪೂಜೆ, ಮೂಢನಂಬಿಕೆ, ಕಂದಾಚಾರಗಳನ್ನು ಖಂಡಿಸಿ ಪತ್ರಿಕೆಗಳಿಗೆ ಲೇಖನಗಳನ್ನು ಬರೆದು ವಿಚಾರ ಜಾಗೃತಿ ಮೂಡಿಸಿದರು.

6. **ಆತ್ಮಿಯ ಸಭಾ ಸ್ಥಾಪನೆ** : ಸಮಾಜದ ಕೆಡಕುಗಳನ್ನು ನಿವಾರಿಸಿ ಸಮಾಜದ ಸುಧಾರಣೆಗೆಂದು ರಾಯರು 1814ರಲ್ಲಿ ಕಲ್ಕತದಲ್ಲಿ ಆತ್ಮಿಯ ಸಭಾ ಸ್ಥಾಪಿಸಿದರು.

7. **ನ್ಯಾಯಾಂಗ ಸುಧಾರಣೆಗಳು** : ಆಂಗ್ಲ ನ್ಯಾಯಾಧಿಶರಿಗೆ ಹಿಂದೂ-ಮುಸ್ಲಿಂ ಕಾನೂನುಗಳ ಬಗ್ಗೆ ಅರಿವು ಇರಲಿಲ್ಲ. ಅದೇ ರೀತಿ ಭಾರತೀಯ ಜಡ್ಜ್‌ಗಳಿಗೆ ಆಂಗ್ಲ ಕಾನೂನುಗಳ ಅರಿವು ಇರಲಿಲ್ಲ. ಇದನ್ನು ನಿವಾರಿಸಲು ಅವರಿಬ್ಬರಿಗೂ ಅನುಕೂಲವಾಗುವಂತೆ ರಾಯರು ಜ್ಯೂರಿ ಪದ್ಧತಿ ಜಾರಿಗೆ ತರುವಂತೆ ಒತ್ತಾಯಿಸಿದರು. ಹೀಗಾಗಿ 1827ರಲ್ಲಿ ಜ್ಯೂರಿ ಕಾಯಿದೆ ಪಾಸಾಯಿತ್ತು.

## ಆರ್ಯ ಸಮಾಜ :

### ➢ ಸ್ವಾಮಿ ದಯಾನಂದ ಸರಸ್ವತಿ (1824–1883)

ವೇದಗಳ ಆಧಾರದ ಮೇಲೆ ಹಿಂದೂ ಸಮಾಜವನ್ನು ಶುದ್ದೀಕರಿಸಲು ಪ್ರಯತ್ನಿಸಿದ ಮೊದಲ ರಸಋಷಿ ಸ್ವಾಮಿ ದಯಾನಂದ ಸರಸ್ವತಿ. ಅವರ **1824ರಲ್ಲಿ ಗುಜರಾತಿನ ತಂಕಾರ** ಗ್ರಾಮದ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ತಂದೆ **ಅಂಬಶಂಕರ ತಿವಾರಿ**. ತಾಯಿ **ಅಮೃತಬಾಯಿ**. ದಯಾನಂದರ ಮೂಲ ಹೆಸರು **ಮೂಲ ಶಂಕರ**. ದಯಾನಂದರು ಕಾಶಿಯಲ್ಲಿ ಸಂಸ್ಕೃತವನ್ನು ಕಲಿತು ವೇದಗಳ ಬಗ್ಗೆ ಆಳವಾದ ಜ್ಞಾನ ಸಂಪಾದಿಸಿದರು. **ಗುರು ವಿರಜಾನಂದ**ರಿಂದ ವೇದಾಧ್ಯಯನ ಮಾಡಿ ಅವರಿಂದ ದೀಕ್ಷೆ ಪಡೆದರು. ಅವರ ಕುಟುಂಬದ ನಿರಂತರ ಸಾವುಗಳು ಅವರನ್ನು ಜನನ ಮತ್ತು ಮರಣಗಳ ರಹಸ್ಯ ತಿಳಿಯುವಂತೆ ಮಾಡಿದವು. ಕೊನೆಗೆ ಸನ್ಯಾಸಿಯಾಗಿ ಸಮಾಜ ಸುಧಾರಣೆಯಲ್ಲಿ ತೊಡಗಿದರು. ಅವರ ಗುರು ಮಥರಾದ ಸ್ವಾಮಿ ವಿರಜಾನಂದರು. 15 ವರ್ಷ ದೇಶ ಪರ್ಯಟನೆಯಲ್ಲಿ ತೊಡಗಿ ಸತ್ಯಾನ್ವೇಷಣೆಯಲ್ಲಿ ತೊಡಗಿದರು.

## ದಯಾನಂದರ ಸುಧಾರಣೆಗಳು:

1. **ಆರ್ಯ ಸಮಾಜದ ಸ್ಥಾಪನೆ : ದಯಾನಂದರು ಏಪ್ರಿಲ್ 10, 1875ರಂದು ಬಾಂಬೆಯಲ್ಲಿ ಆರ್ಯ ಸಮಾಜವನ್ನು ಸ್ಥಾಪಸಿದರು.** ಮತ್ತೊಂದು ಶಾಖೆಯನ್ನು **ಲಾಹೋರಿನ**ಲ್ಲಿ ಸ್ಥಾಪಿಸಲಾಯಿತು (1877). ಹಿಂದೂ ಧರ್ಮ ಮತ್ತು ಸಂಸ್ಕೃತಿಯ ಪುನರುತ್ಥಾನ, ಏಕೀಶ್ವರತೆ ಪ್ರತಿಪಾದನೆ, ಮೂರ್ತಿ ಪೂಜೆಯನ್ನು ಖಂಡಿಸುವುದು, ಮೂಢನಂಬಿಕೆ, ಜಾತೀಯತೆಯ ವಿರೋಧ, ವೇದಗಳ ಪಾವಿತ್ರ್ಯತೆ ಉಳಿಸುವುದು,



downloaded from: www.kpscvaani.com

ಸಮಾಜ ಸುಧಾರಣೆ, ರಾಜಕೀಯ ಐಕ್ಯತೆ, ಶಿಕ್ಷಣ ಪ್ರಚಾರ ಇವು ಆರ್ಯ ಸಮಾಜದ ಧ್ಯೇಯಗಳು. ಇದರಡಿಯಲ್ಲಿ ದಯಾನಂದರು ಈ ಕೆಳಕಂಡ ಸುಧಾರಣೆಗಳನ್ನು ಮಾಡಿದರು.

## ಆರ್ಯ ಸಮಾಜದ ತತ್ವಗಳು :

- ದೇವರು ಒಬ್ಬ ಆತ ಸರ್ವವ್ಯಾಪಿ, ನಿಗುರ್ಣ, ನಿರಾಕರ ಪೂಜಾಹರ್ಘನು, ಸಚ್ಚಿದಾನಂದನೂ, ಆನಂದಮಯ, ನೈಜಜ್ಞಾನದ ಮೂಲ.
- ದೇವರು ಜಗತ್ ಸೃಷ್ಟಿಕರ್ತ. ಸತ್ಯ ಮತ್ತು ಜ್ಞಾನಗಳ ಪ್ರತಿರೂಪ. ಅವನು ಶಾಶ್ವತ.
- ವೇದಗಳು ಪವಿತ್ರವಾದವು. ಅವು ಜ್ಞಾನದ ಮೂಲ. ಅವುಗಳ ವಾಚನ, ಪಠನೆ, ಬೋಧನೆ ಪ್ರತಿಯೊಬ್ಬ ಆರ್ಯನ ಆದ್ಯ ಕರ್ತವ್ಯ.
- ಪ್ರಪಂಚವು ಚಿತ್(ಜೀವಾತ್ಮ) ಮತ್ತು ಅಚಿತ್ (ಜಡ ಪ್ರಪಂಚ)ಗಳಿಂದ ಕೂಡಿದೆ. ಅವುಗಳು ದೇವರ ಅಧೀನ.
- ಸಾಮಾಜಿಕವಾಗಿ, ಭೌತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಜಗತ್ತಿಗೆ ಒಳ್ಳೆಯದನ್ನು ಮಾಡುವುದು ನಮ್ಮ ಗುರಿಯಾಗಿರಬೇಕು.
- ಧರ್ಮಕ್ಕಾಗಿ ಮಾಡಿದ್ದೆಲ್ಲವೂ, ಪ್ರೀತಿಯೇ, ಪ್ರೇಮ, ನ್ಯಾಯಪರವೂ ಆಗಿರುತ್ತದೆ.
- ವರ್ಣಾಶ್ರಮ ಧರ್ಮವನ್ನು ಆಯಾ ವ್ಯಕ್ತಿಗಳ ಕರ್ಮ, ಕಾರ್ಯಗುಣ, ಯೋಗ್ಯತೆಗಳಿಂದ ನಿರ್ಧರಿಸಬೇಕೆ ಹೊರತು ವ್ಯಕ್ತಿಯ ಹುಟ್ಟಿನಿಂದಲ್ಲ. ಮೂರ್ತಿಪೂಜೆ ವಿರೋಧಿಸಿದರು.
- ಆಧ್ಯಾತ್ಮಿಕ ಚಿಂತನೆಯ ಕಾರ್ಯಗಳಲ್ಲಿ ಸಮಾಜದ ನಿಯಮಗಳನ್ನು ಪಾಲಿಸಬೇಕು.
- ಸ್ತ್ರೀ ಪುರುಷರು ಸಂತೃಪ್ತಿಯಿಂದ ಕೂಡುವುದೇ ವಿವಾಹ.
- ಯಾತ್ರಾರ್ಥ ಎಂದರೆ ದೇವ ದರ್ಶನ. ದೇವರು ನಿರ್ಗುಣ, ನಿರಾಕಾರ.
- ಕರ್ಮಸಿದ್ಧಾಂತದಲ್ಲಿ ನಂಬಿಕೆ. ಸನ್ಯಾಸ, ಬ್ರಹ್ಮಚರ್ಯಕ್ಕೆ ಬೆಂಬಲ. ವೇದಗಳ ಪಾವಿತ್ರ್ಯತೆ, ಶುದ್ಧಿ ಚಳುವಳಿ, ಸ್ತ್ರೀ–ಪುರುಷರ ಸಮಾನತೆ, ಬಾಲ್ಯವಿವಾಹ, ಬಹುಪತ್ನಿತ್ವ, ಮೂರ್ತಿ ಪೂಜೆಗಳಿಗೆ ವಿರೋಧ ಇವು ಆರ್ಯ ಸಮಾಜದ ಇತರ ತತ್ವಗಳು.

2. **ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು** : ದಯಾನಂದರು ಜಾತಿ ಪದ್ಧತಿಯನ್ನು ಖಾರವಾಗಿ ಖಂಡಿಸಿದರು. ವೇದಗಳ ಕಾಲದಲ್ಲಿ ಜಾತಿಪದ್ಧತಿ ಇಲ್ಲವೆಂದರು. ಅಸ್ಪೃಶ್ಯತೆಯನ್ನು ವಿರೋಧಿಸಿ ಶೂದ್ರರಿಗೂ ಉಪನಯನ ಅವಕಾಶ ಕಲ್ಪಿಸಿದರು. ದಯಾನಂದರು ಮಾನವರೆಲ್ಲರೂ ಸಮಾನರೆಂದು



downloaded from: www.kpscvaani.com

ಸಾರಿದರು. ಅವರು ಬಹುಪತ್ನಿತ್ವ, ಅನಕ್ಷರತೆ, ಪರದಾ ಪದ್ಧತಿ, ಬಾಲ್ಯವಿವಾಹ, ಮೂರ್ತಿ ಪೂಜೆಗಳನ್ನು ಖಂಡಿಸಿದರು. ವಿಧವಾ, ಸ್ತ್ರೀ ಶಿಕ್ಷಣಗಳ ಪರವಾದಿಸಿದರು. ಪ್ರಾಣಿ ದಯೆ ಒತ್ತಿ ಹೇಳಿದರು. ಗೋಹತ್ಯೆ ಖಂಡಿಸಿ **ಗೋಸಂಕ್ಷಣಾ ಚಳುವಳಿಯನ್ನು** ಆರಂಭಿಸಿದರು. ಬ್ರಾಹ್ಮಣರ ಶ್ರೇಷ್ಠತೆಯನ್ನು ಖಂಡಿಸಿದರು. ದಯಾನಂದರು ಸ್ತ್ರೀಯರು ಹಕ್ಕು ಹಾಗೂ ಸ್ಥಾನಮಾನಗಳನ್ನು ಉತ್ತಮಪಡಿಸಲು ಶ್ರಮಿಸಿದರು. ಮೂಢನಂಬಿಕೆ, ಅಂಧಾನುಕರುಣೆಗಳನ್ನು ಹೋಗಲಾಡಿಸಿದರು. ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಮತಾಂತರಕ್ಕೆ ಆರ್ಯ ಸಮಾಜ ತಡೆಗೋಡೆಯಾಯಿತ್ತು. ವ್ಯಕ್ತಿ ಸ್ವಾತಂತ್ರ್ಯವನ್ನು ಗೌರವಿಸಿ ಸ್ತ್ರೀ–ಪುರುಷರ ಸಮಾನತೆಯನ್ನು ಎತ್ತಿ ಹಿಡಿದರು. ಬ್ರಹ್ಮ ಸಮಾಜದಂತೆ ಆರ್ಯ ಸಮಾಜವು ಮೂರ್ತಿ ಪೂಜೆಗೆ ವಿರೋಧವಾಗಿತ್ತು. ವೇದಗಳ ನೈತಿಕ ಮೌಲ್ಯಗಳನ್ನು ಪಾಲಿಸುವಂತೆ ಅವರು ಕರೆ ನೀಡಿದರು. ಸುಧಾರಣೆಗಳಿಗಾಗಿ **'ಪರೋಪಕಾರಣಿ ಸಭಾ'** ಸ್ಥಾಪಿಸಿದರು. ಆರ್ಯ ಸಮಾಜ ಕ್ಷಾಮ ಪರಿಹಾರದಂತಹ ಸಾಮಾಜಿಕ ಕಾರ್ಯಗಳನ್ನು ಕೈಗೊಂಡಿತು. ಬರಗಾಲದ ಕಾಲದಲ್ಲಿ ಪರಿಹಾರ ಶಿಬಿರಗಳನ್ನು ತೆರೆದರು. 1882ರಲ್ಲಿ ಆರ್ಯಸಮಾಜ **ಗೋ ರಕ್ಷಣಾ ಸಂಘ**ವನ್ನು ಸ್ಥಾಪಿಸಿತ್ತು.

## ➢ ರಾಮಕೃಷ್ಣ ಪರಮಹಂಸ (1883–86)

**ನವ ಹಿಂದೂಧರ್ಮದ ಪ್ರವಾಧಿಯಾದ** ರಾಮಕೃಷ್ಣ ಪರಮಹಂಸರು 19ನೇ ಶತಮಾನದ ಖ್ಯಾತ ಆಧ್ಯಾತ್ಮಿಕ ಸಾಧಕರು. ಅವರ ಮೂಲ ಹೆಸರು **ಗಂಗಾಧರ.** ಅವರು ಬಂಗಾಳದ ಹೂಗ್ಲಿ ಬಳಿಯ **'ಕಾಮರ್ ಪುರ'** ಎಂಬ ಗ್ರಾಮದ ಬ್ರಾಹ್ಮಣ ಕುಟುಂದಲ್ಲಿ ಜನಿಸಿದರು. **ತಂದೆ ಕುದಿರಾಂ ಚಟ್ಟೋಪಾಧ್ಯಾಯ, ತಾಯಿ ಚಂದ್ರವಣಿ,** ರಾಮಕೃಷ್ಣರು ಕಲ್ಕತ್ತ ಬಳಿಯ ದಕ್ಷಿಣೇಶ್ವರದ ಕಾಳಿಕಾ ದೇವಾಲಯದ ಅರ್ಚಕರಾಗಿದ್ದರು. ಅವರು ಅನಕ್ಷರಸ್ಥರಾದರೂ ದೇವರ ಧ್ಯಾನದಲ್ಲಿ ತಲ್ಲೀನರಾಗಿ ತೀವ್ರ ಆಧ್ಯಾತ್ಮಿಕತೆಯನ್ನು ರೂಢಿಸಿಕೊಂಡಿದ್ದರು. ದೇವರನ್ನು ಅನನ್ಯ ಭಕ್ತಿಯಿಂದ ಪೂಜಿಸಿದರೆ ಮೋಕ್ಷ ಪಡೆಯಬಹುದೆಂದು ಪ್ರತಿಪಾದಿಸಿದರು.

## ➢ ಸ್ವಾಮಿ ವಿವೇಕಾನಂದ(1863–1902)

ಜಗತ್ತಿಗೆ ಸನಾತನ ಹಿಂದೂ ಧರ್ಮ ಮತ್ತು ಸಂಸ್ಕೃತಿಯ ಶ್ರೇಷ್ಠತೆಯನ್ನು ಮನವರಿಕೆ ಮಾಡಿದ ಮೊಟ್ಟ ಮೊದಲ ಭಾರತದ **'ವೀರಸನ್ಯಾಸಿ', 'ಆಧ್ಯಾತ್ಮಿಕ ದಿವ್ಯಪುರುಷ', 'ಕರ್ಮಯೋಗಿ'** ಸ್ವಾಮಿ ವಿವೇಕಾನಂದರು. ಇವರ ಆರಂಭ ಹೆಸರು **ನರೇಂದ್ರನಾಥ ದತ್ತ.** ತಂದೆ **ವಿಶ್ವನಾಥದತ್ತ.** ಒಬ್ಬ ಪ್ರಸಿದ್ಧ ವಕೀಲರು. ತಾಯಿ **ಭುವನೇಶ್ವರಿದೇವಿ** ಆಧ್ಯಾತ್ಮಿಕ ಸಂಪನ್ನಳು. ನರೇಂದ್ರರು. **ಜನವರಿ 12, 1863ರಂದು ಕಲ್ಕತ್ತದಲ್ಲಿ ಜನಿಸಿದರು.** ಅವರು ಕಲ್ಕತ್ತದ ಮಿಷನ್ ಕಾಲೇಜಿನಲ್ಲಿ ಓದಿ ತತ್ವಶಾಸ್ತ್ರದಲ್ಲಿ ಪದವಿ ಪಡೆದರು ನರೇಂದ್ರರು ಹಿಂದೂ ಧರ್ಮಗ್ರಂಥಗಳನ್ನು ಆಳವಾಗಿ ಅಧ್ಯಾಯನ ಮಾಡಿ ತೀವ್ರ ಆಧ್ಯಾತ್ಮಿಕತೆಯನ್ನು ರೂಢಿಸಿಕೊಂಡರು. ಆಗ ಅವರ ಮನದಲ್ಲಿ ಎದ್ದ 2 ಪ್ರಶ್ನೆಗಳೆಂದರೆ ದೇವರಿದ್ದಾನೆಯೇ? ಹಾಗಾದರೆ ಅವನನ್ನು ಕಾಣಲು ಸಾಧ್ಯವೇ? ಅವನ್ನು ಗುರುಗಳ ಬಳಿ ಇಟ್ಟಾಗ ಗುರುಗಳು



downloaded from: www.kpscvaani.com

ಹೀಗೆಂದರು **'ಜನ ಹೆಣ್ಣು ಹೊನ್ನು ಮಣ್ಣಿಗಾಗಿ ಚಿಂತಿಸುತ್ತಾರೆ. ದೇವರಿಗಾಗಿ ಯಾರು ಹಂಬಲಿಸುತ್ತಾರೋ, ಚಿಂತಿಸುತ್ತಾರೋ ಅವನಲ್ಲಿ ನಂಬಿಕೆ ಇಡುತ್ತಾರೋ ಅವನನ್ನು ಕಂಡೇ ಕಾಣುತ್ತಾರೆ"**ಎಂದರು. ರಾಮಕೃಷ್ಣರು ಹೇಳುತ್ತಾ **"ನೀನು ತಡವಾಗಿ ಬಂದೆಯಾ? ನೀನು ನಾರಾಯಾಣನ ಅವತಾರ. ಮಾನವನನ್ನು ಸಂಕಟದಿಂದ ದೂರತಳ್ಳಲು ಬಂದವನು."** ರಾಮಕೃಷ್ಣರ ವ್ಯಕ್ತಿತ್ವಕ್ಕೆ ನರೇಂದ್ರ ಆಕರ್ಷಿತರಾದರು. ರಾಮಕೃಷ್ಣ ಪರಮಹಂಸ ಶಿಷ್ಯರಾಗಿ ಅವರಿಂದ ಸಕಲ ವಿದ್ಯೆ ಮತ್ತು ಆರ್ಶಿವಾದ ಪಡೆದು ಸನ್ಯಾಸಿಯಾದರು. ರಾಮಕೃಷ್ಣರು ಕಲ್ಕತ್ತದ ದಕ್ಷಿಣೇಶ್ವರ ದೇವಾಲಯದ ಬ್ರಾಹ್ಮಣ ಅರ್ಚಕರು. ಅವರು ಸಂಸ್ಕೃತದಲ್ಲಿ ಪಾಂಡಿತ್ಯ ಹೊಂದಿದ್ದು ಆಧ್ಯಾತ್ಮಿಕ ಉನ್ನತಿ ಪಡೆದವರಾಗಿದ್ದರು. **ಪರಮಹಂಸರ ಶಿಷ್ಯರಲ್ಲಿ ಸ್ವಾಮಿ ವಿವೇಕಾನಂದರು ಅಗ್ರಗಣ್ಯರು.**

ಸರ್ವ ಧರ್ಮ ಸಮನ್ವಯತೆ, ಹಿಂದೂ ಸಂಸ್ಕೃತಿಯ ಪುನರುತ್ಥಾನ, ದೀನದಲಿತರ ಸೇವೆ ಮಠದ ಉದ್ದೇಶವಾಗಿದ್ದವು. ಅವರು ವಿಶ್ವಭ್ರಾತೃತ್ವ, ಏಕೀಶ್ವರತೆ ಮತ್ತು ಸ್ತ್ರೀಶಿಕ್ಷಣದ ಮಹತ್ವವನ್ನು ಎತ್ತಿ ಹಿಡಿದರು. ರಾಮಕೃಷ್ಣ ಮಠದ ಕೆಲವು ತತ್ವಗಳು ಇಂತಿವೆ.

1. ರಾಮಕೃಷ್ಣ ಮಠ ಜಾತಿಪದ್ಧತಿಯನ್ನು ಖಂಡಿಸಿತು. ಮೂಢನಂಭಿಕೆಗಳನ್ನು ಮತ್ತು ಅರ್ಥವಿಲ್ಲದ ಆಚರಣೆಗಳನ್ನು ವಿರೋಧಿಸಿತು. ಅಸ್ಪೃಶ್ಯತೆಯ ವಿರುದ್ಧ ಪ್ರಚಾರ ಮಾಡಿತ್ತು
2. ಸರ್ವ ಧರ್ಮ ಸಮನ್ವಯಯತೆ ಅದರ ಸಾರ, ಜಾತಿ ಮತ್ತು ಧರ್ಮಗಳ ಬೇಧ ಭಾವನೆ ರಾಮಕೃಷ್ಣ ಮಠಕ್ಕೆ ಇಲ್ಲ. ವಿಶ್ವಸೋದರತೆಯನ್ನು ಅದು ಎತ್ತಿ ಹಿಡಿಯಿತು.
3. ದೇವರು ಒಬ್ಬನೇ. ಅಂತಯೇ ಎಲ್ಲಾ ಧರ್ಮಗಳ ಸಾರ ಒಂದೇ. ಅವು ದೇವರನ್ನು ಕಾಣುವ ವಿವಿಧ ಮಾರ್ಗಗಳು. ಸ್ವಾಮಿಗಳು ಏಕೀಶ್ವರವಾದವನ್ನು ಮಂಡಿಸಿದರು. ಪ್ರತಿಯೊಬ್ಬನಲ್ಲೂ ದೇವರು ಅಡಗಿದ್ದಾನೆ. **ಜನಸೇವೆಯೇ ಜನಾರ್ಧನ ಸೇವೆ,** ರಾಮಕೃಷ್ಣ ಮಠ ಅನೇಕ ಶಾಲಾಕಾಲೇಜು, ಅನಾಥಾಲಯ ಮತ್ತು ಆಸ್ಪತ್ರೆಗಳನ್ನು ಸ್ಥಾಪಿಸಿ ದೀನದಲಿತರ ಸೇವೆ ಮಾಡಿತು. ಬರಗಾಲ, ನೆರೆಹಾವಳಿ, ಭೂಕಂಪ, ರೋಗರುಜಿನ ಮತ್ತು ಕ್ಷಾಮಗಳ ಪರಿಹಾರ ಕಾರ್ಯದಲ್ಲಿ ತೊಡಗಿ ಲಕ್ಷಾಂತರ ಜನತೆಯ ಬಾಳಿಗೆ ಆಶಾಕಿರಣವಾಯಿತು. ಮಾನವೀಯತೆ ಅದರ ಗುರಿ. ಅದರ ಜನಪ್ರಿಯತೆಗೆ ಇದೇ ಮುಖ್ಯ ಕಾರಣವಾಯಿತು.
4. ರಾಮಕೃಷ್ಣ ಮಠವು ಭಾರತದ ತತ್ವಜ್ಞಾನ ಮತ್ತು ನಾಗರಿಕತೆಗಳು ಜಗತ್ತಿನಲ್ಲೇ ಶ್ರೇಷ್ಠವೆಂದು ಪರಿಗಣಿಸಿತು. ಪಾಶ್ಚಿಮಾತ್ಯ ಭೌತಿಕ ನಾಗರಿಕತೆಯನ್ನು ಖಂಡಿಸಿತು. ಸ್ವಾಮಿಗಳು **"ಆಧುನಿಕ ವೇದಾಂತ ಪ್ರವಾದಿ"** ಎಂದು ಜಗತ್ ಪ್ರಸಿದ್ಧಿಯಾದರು.
5. ಅದು ವ್ಯಕ್ತಿಯ ಮುಕ್ತಿಗಿಂತ ಸಾಮಾಜಿಕ ಉನ್ನತಿಗೆ ಹೆಚ್ಚಿನ ಗಮನ ಕೊಡುತ್ತದೆ.
6. ಅದು ಸ್ತ್ರೀ ಶಿಕ್ಷಣವನ್ನು ಬಲವಾಗಿ ಸಮರ್ಥಿಸಿತ್ತು. ಮಹಿಳೆಯರ ಉದ್ಧಾರಕ್ಕೆ ಶ್ರಮಿಸಿತ್ತು. ಯಾವ ಸಮಾಜ ಸ್ತ್ರೀಯರು ಗೌರವಿಸುತ್ತದೋ ಅದು ಸಮೃದ್ಧಿಯಾಗುತ್ತದೆ. ಅಲ್ಲಿ ದೇವತೆಗಳು ನೆಲೆಸಿರುತ್ತಾರೆ. ಇದಕ್ಕಾಗಿ



downloaded from: www.kpscvaani.com

ಸ್ವಾಮಿಗಳು ಇಂಗ್ಲಿಷ್ನಲ್ಲಿ **ಪ್ರಬುದ್ಧ ಭಾರತ** ಮತ್ತು **ಉದ್ಬೋದನ** ಎಂಬ ಬಂಗಾಲಿ ಪತ್ರಿಕೆಗಳನ್ನು ಹೊರಡಿಸಿದರು.

7. ಪ್ರಾಚೀನ ವೈದಿಕ ಧರ್ಮ ಹಾಗೂ ಸಂಸ್ಕೃತಿಗಳ ಪುನರುತ್ಥಾನಗೊಳಿಸುವುದು. ಪ್ರಾಚೀನ ಸಂಸ್ಕೃತಿಯ ಬಗ್ಗೆ ಅಭಿಮಾನ ಮೂಡಿಸುವುದು.
8. ಭಾರತೀಯರ ಭೌತಿಕ ಮತ್ತು ಆಧ್ಯಾತ್ಮಿಕ ಉನ್ನತಿ ಸಾಧಿಸುವುದು. ಅಂದರೆ ಆಧ್ಯಾತ್ಮಿಕ ಐಕ್ಯತೆ ಸಾಧಿಸುವುದು.
9. ಹಿಂದೂ ಧರ್ಮ ಮತ್ತು ವೇದಾಂತಕ್ಕೆ ಹೊಸ ರೂಪ ಕೊಡುವುದು.
10. ಬಡತನ, ಅನಕ್ಷರತೆ, ಅಜ್ಞಾನಗಳನ್ನು ತೊಡದುಹಾಕುವುದು. ದೀನ ದಲಿತರ ಸೇವೆ, ಜ್ಞಾನ–ವಿಜ್ಞಾನಗಳನ್ನು ಬೋಧಿಸುವುದು.
11. ವಿವೇಕಾನಂದರ ಇತರ ತತ್ವಗಳೆಂದರೆ ಮಾನವರೆಲ್ಲರೂ ಸರಿಸಮಾನರು. ಮಾನವ ಎಲ್ಲಾ ಪ್ರಾಣಿಗಳಲ್ಲೇ ಶ್ರೇಷ್ಠ.

## ➢ ಮಹಾತ್ಮ ಜ್ಯೋತಿಬಾ ಪುಲೆ(1827–1890) (ಸತ್ಯಶೋಧಕ ಸಮಾಜ):

ಜಾತಿ ವ್ಯವಸ್ಥೆಯಿಂದ ಆಗುತ್ತಿರುವ ಅನ್ಯಾಯಗಳ ವಿರುದ್ಧ ಮೊದಲು ಹೋರಾಡಿದ ಸಮಾಜ ಸುಧಾರಕರೆಂದರೆ **ಜ್ಯೋತಿಬಾ ಪುಲೆ**. ಅವರು ಮಹಾರಾಷ್ಟ್ರದ ಪೂನದಲ್ಲಿ ಮಾಲ ಜಾತಿಯಲ್ಲಿ ಹುಟ್ಟಿದರು. ಅವರು ಮಹಾರಾಷ್ಟ್ರದ ಪ್ರಸಿದ್ದ ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಕರು. ಅವರ ಕುಟುಂಬದವರು ಪೂನಾದ ಪೇಶ್ವೆಗಳಿಗೆ ಹೂವು, ಹೂವಿನ ಹಾರವನ್ನು ಪೂರೈಸುತ್ತಿದ್ದುರಿಂದ ಅವರ ಮನೆತನಕ್ಕೆ ಪುಲೆ ಎಂಬ ಹೆಸರಾಯಿತು. ಉತ್ತಮ ಶಿಕ್ಷಣ ಪಡೆದ ಅವರು ಬುದ್ದ, ಮಹಾವೀರ ವಿವೇಕಾನಂದ, ಜಾರ್ಜ್ ವಾಷಿಂಗ್‌ಟನ್, ಥಾಮಸ್ ಪೈನೆಯಂತಹ ಮಹಾನ್ ವ್ಯಕ್ತಿಗಳ ಜೀವನ ದರ್ಶಗಳಿಂದ ಪ್ರಭಾವಿತರಾಗಿದ್ದರು.

## ಸತ್ಯಶೋಧಕ ಸಮಾಜ –1873 :

ಜ್ಯೋತಿಬಾ ಪುಲೆಯವರು ಬ್ರಾಹ್ಮಣಶಾಹಿಯನ್ನು ಖಂಡಿಸಲು ಸೆ. 24, 1873 ರಲ್ಲಿ **ಸತ್ಯಶೋಧಕ ಸಮಾಜ**ವನ್ನು ಸ್ಥಾಪಿಸಿದರು. ಕೀಳು ಜಾತಿಯವರಿಗೆ ಸಾಮಾಜಿಕ ನ್ಯಾಯ ಒದಗಿಸುವುದು, ಬ್ರಾಹ್ಮಣರ ಶ್ರೇಷ್ಠತೆಯನ್ನು ಖಂಡಿಸುವುದು, ದಲಿತರ ದೇವಾಲಯ ಪ್ರವೇಶ ಮತ್ತು ಶಿಕ್ಷಣ, ಸ್ತ್ರೀಯರ ಉದ್ದಾರ ಸತ್ಯಶೋಧಕ ಸಮಾಜದ ಉದ್ದೇಶಗಳಾಗಿವೆ.


downloaded from: www.kpscvaani.com

## ಪುಲೆಯವರ ಸಾಮಾಜಿಕ ಸುಧಾರಣೆಗಳು:

1. ಬ್ರಾಹ್ಮಣರ ಶ್ರೇಷ್ಠತೆಯನ್ನು ಖಂಡಿಸಿದರು. 1875ರಲ್ಲಿ ಬ್ರಾಹ್ಮಣರ ಶ್ರೇಷ್ಠತೆ ಖಂಡಿಸುತ್ತಾ ಅವರು ಜಗತ್ತಿನ ಜನರನ್ನೆಲ್ಲ ಅಪ್ಲರೆಂದು ಎಣಿಸುವ ಜನ ಎಂದು ಟೀಕಿಸಿದರು. ಬ್ರಾಹ್ಮಣಪುರೋಹಿತರನ್ನು ಬಿಟ್ಟು ಸರಳ ಮದುವೆ ಆಗುವಂತೆ ಕರೆ ನೀಡಿದರು. ಶೂದ್ರ, ಅತಿ ಶೂದ್ರರೆಲ್ಲ ಒಂದಾಗಬೇಕು. ಬ್ರಾಹ್ಮಣರ ಹೊರತು ಉಳಿದವರೆಲ್ಲಾ ಆರ್ಯೇತರ ಮೂಲದವರೆಂದು ಅವರು ಪ್ರತಿಪಾದಿಸಿದರು. ಅಸ್ಪೃಶ್ಯರ ಪರ ಹೋರಾಡಿದರು. ಮೇಲ್ಜಾತಿಯರ ಶ್ರೇಷ್ಠತೆ ಖಂಡಿಸಿದ್ದರು. ಕೀಳು ಜಾತಿಯವರು ಉದ್ಧಾರವಾಗಬೇಕಾದರೆ ಅವರು ಸಾಂಸ್ಕೃತಿಕ ಅಂದರೆ ಮೇಲ್ಜಾತಿಯವರ ರೂಢಿ, ಪದ್ದತಿ ಮತ್ತು ಸಂಪ್ರದಾಯಗಳನ್ನು ರೂಢಿಸಿಕೊಳ್ಳಬೇಕೆಂದು ಕರೆ ನೀಡಿದರು. ಬ್ರಾಹ್ಮಣರೇ ಹೆಚ್ಚಾಗಿದ್ದ ಕಾಂಗ್ರೇಸ್ ಪಕ್ಷವನ್ನು ದೂಷಿಸಿದರು. ವಿಧವಾ ವಿವಾಹ ಪರ ವಾಧಿಸಿದರು. ವಿಧವೆಯರಿಗೆ ಸಹಾಯ ಮಾಡಲು ಒಂದು ಆಶ್ರಮ ಸ್ಥಾಪಿಸಿದರು. ಮಹಾರಾಷ್ಟ್ರದಲ್ಲಿ ಹೀಗೆ ಕೀಳು ಜಾತಿಯವರ ಉದ್ಧಾರಕ್ಕೆ ಪುಲೆ ಶ್ರಮಿಸಿದರು.
2. ಜಾತಿ ಪದ್ದತಿಯನ್ನು ಖಾರವಾಗಿ ಖಂಡಿಸಿದರು. ಅಂತರ್ ಜಾತಿ ವಿವಾಹಗಳಿಗೆ ಪ್ರೋತ್ಸಾಹಿಸಿದರು. ಮಹಾರ್‌ರ ಉದ್ಧಾರಕ್ಕೆ ಶ್ರಮಿಸಿದರು
3. ಶಿಕ್ಷಣ ಹಿಂದುಳಿದವರ ಉದ್ಧಾರಕ್ಕೆ ಮದ್ದು ಎಂದು ಭಾವಿಸಿದ್ದ ಪುಲೆ ಹೆಣ್ಣು ಮಕ್ಕಳಿಗಾಗಿ 1848ರಲ್ಲಿ ಪೂನಾದಲ್ಲಿ ಒಂದು ಶಾಲೆ ತೆರೆದರು. ಈ ಶಾಲೆಯಲ್ಲಿ ಎಲ್ಲಾ ಜಾತಿಯ ಮಕ್ಕಳಿಗೆ ಪ್ರವೇಶ ನೀಡಿದರು. 1848–58 ಅವಧಿಯಲ್ಲಿ ಪುಲೆ 18 ಶಾಲೆಗಳನ್ನು ತೆರೆದರು. ಕೂಲಿ ಕಾರ್ಮಿಕರಿಗಾಗಿ ಸಂಜೆ ಶಾಲೆಗಳನ್ನು ಆರಂಭಿಸಿದರು. ಕೆಳಜಾತಿಯರಿಗಾಗಿ ಗ್ರಾಂಥಲಯಗಳನ್ನು, ವಯಸ್ಕರಿಗಾಗಿ ರಾತ್ರಿ ಶಾಲೆಗಳನ್ನು ತೆರೆದರು.
4. ಪುಲೆ ವಿಧವಾ ವಿವಾಹ ಪರ ವಾದಿಸಿದರು. ಸ್ವತಃ ಅವರೇ ಮುಂದೇ ನಿಂತು ಬೆಳಗಾವಿ (1847), ಪೂನಾ (1860) ರಲ್ಲಿ ವಿಧವೆಯರ ವಿವಾಹವನ್ನು ನೆರವೇರಿಸಿದರು. ವಿಧವೆಯರು ಕೇಶ ಮುಂಡನ ಪದ್ದತಿಯನ್ನು ಖಂಡಿಸಿ ಸರ್ಕಾರದಿಂದ ಅದರ ನಿಷೇಧಕ್ಕೆ ಆಜ್ಞೆ ಮಾಡಿಸಿದರು. ಅನಾಥ ಗರ್ಭವತಿಯ ವಿಧವೆಯ ಪ್ರಸೂತಿಗೆಂದು **ಗುಪ್ತ ಪ್ರಸೂತಿ ಗೃಹ**ವನ್ನು ತೆರೆದಿದ್ದಲ್ಲದೆ ಅವರ ಮಕ್ಕಳ ಪಾಲನೆಗೆಂದು ಒಂದು ಆಶ್ರಮವನ್ನು ಸ್ಥಾಪಿಸಿದರು. ಸ್ವತಃ ಮಕ್ಕಳಿಲ್ಲದ ಪುಲೆ ಆ ಮಕ್ಕಳನ್ನು ತನ್ನ ಸ್ವಂತ ಮಕ್ಕಳಂತೆ ನೋಡಿಕೊಳ್ಳುತ್ತಿದ್ದರು. ಅವರು ಮಹಿಳೆಯರಿಗೆ ಅನಾಥಾಲಯಗಳನ್ನು ತೆರೆದರು.
5. ದಲಿತ ವರ್ಗದಲ್ಲಿ ಮನೆಮಾಡಿದ್ದ ಅಂಧ ಸಂಪ್ರದಾಯಗಳನ್ನು ಖಂಡಿಸಿದರು. ಅವರ ಜಾಗೃತಿಗೆಂದು **ದೀನಬಂಧು** ಎಂಬ ಪತ್ರಿಕೆ ಆರಂಭಿಸಿದರು. ಅಸ್ಪೃಶ್ಯರಿಗೆ ಸಾರ್ವಜನಿಕ ಬಾವಿಗಳಿಂದ ನೀರು ಸೇದುವುದರ ಪರ ಹೋರಾಡಿದರು.
6. ಕೃಷಿಕರ ಪರ ಹೋರಾಡಲು ಕೃಷಿಕರ ಸಂಘ ಕಟ್ಟಿದರು. ಅವರು ಉಳುವವನೇ ಭೂಮಿಯ ಒಡೆಯ ಎಂದು ಸಾರಿದರು. ಅವರು ಅಸ್ಪೃಶ್ಯರಲ್ಲಿ ಮನೆಮಾಡಿದ್ದ ಮದ್ಯಪಾನ ದುಶ್ಚಟವನ್ನು ಖಂಡಿಸಿ ಮದ್ಯಪಾನ ಅಂಗಡಿಗಳನ್ನು ಮುಚ್ಚಲು ಕ್ರಮ ಕೈಗೊಂಡರು.



downloaded from: www.kpscvaani.com

7. ಫುಲೆಯವರು ಸಾರ್ವಜನಿಕ ಸತ್ಯಧರ್ಮ, ಗುಲಾಮಗಿರಿ, ಧರ್ಮತ್ರಿತಿಯಾ ರತ್ನ ಮತ್ತು ಇಷಾರ ಶಿವಾಜಿಯ ಜೀವನ ಎಂಬ ಗ್ರಂಥಗಳನ್ನು ರಚಿಸಿದರು.
8. ಫುಲೆರವರು ಹೆಣ್ಣು ಶಿಶು ಹತ್ಯೆ, ಬಾಲ್ಯ ವಿವಾಹಗಳನ್ನು ಖಂಡಿಸಿದರು. ಗಿರಿಣಿ ಕಾರ್ಮಿಕರ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಶ್ರಮಿಸಿದರು.

## ಸಮಾಜ ಸುಧಾರಣಾ ಆಂದೋಲನಗಳ ಪರಿಣಾಮ:

ಬ್ರಿಟಿಷರ ಆಳ್ವಿಕೆಯ ಅವಧಿಯಲ್ಲಿ ಇಂಗ್ಲೀಷ್ ಶಿಕ್ಷಣ ಹಾಗೂ ಸಾಹಿತ್ಯದ ಪ್ರಭಾವಕ್ಕೆ ಒಳಗಾಗಿದ್ದ ಹಲವು ಭಾರತೀಯ ಚಿಂತನಕಾರರು ಮತ್ತು ಸಮಾಜ ಸುಧಾರಕರು ಹಲವು ಆಂದೋಲನಗಳನ್ನು ಹುಟ್ಟುಹಾಕಿ ಹಿಂದೂ ಧರ್ಮವನ್ನು ಮತ್ತಷ್ಟು ಉದಾರವಾಗಿಸಿದ್ದಲ್ಲದೆ ಜಾತಿಯ ಹಿಡಿತವನ್ನು ಸಡಿಲಿಸಲು ಕಾರಣರಾದರು.

1) **ಬ್ರಹ್ಮ ಸಮಾಜ :** ಕ್ರಿ.ಶ. 1820 ರಲ್ಲಿ ರಾಜಾರಾಮ್ ಮೋಹನರಾಯ್ ರವರಿಂದ ಆರಂಭವಾಗಿ ದೇವೇಂದ್ರನಾಥ್ ಠಾಗೋರ್ ಹಾಗೂ ಕೇಶವಚಂದ್ರಸೇನರಿಂದ ಬಲಗೊಂಡು ಬೆಳೆದ ಬ್ರಹ್ಮ ಸಮಾಜವು ಜಾತಿ–ಜಾತಿಗಳ ನಡುವಿನ ತಡೆಗೋಡೆಗಳನ್ನು ತಾರತಮ್ಯವನ್ನು ಖಂಡಿಸಿತು. ಮೂರ್ತಿಪೂಜೆಯನ್ನು ಯಾಗ–ಯಜ್ಞಾದಿಗಳನ್ನು ಮತ್ತು ಮಿತಿಯಿಲ್ಲದ ಕ್ರಿಯಾವಿಧಿಗಳನ್ನು ಖಂಡಿಸಿತು. ವಿಶ್ವಭ್ರಾತೃತ್ವದ ಸಂದೇಶವನ್ನದು ನೀಡಿತು.
2) **ಪ್ರಾರ್ಥನಾ ಸಮಾಜ** : ಮಹಾರಾಷ್ಟ್ರದಲ್ಲಿ ಆತ್ಮಾರಾಮ ಪಾಂಡುರಂಗ, ನ್ಯಾಯಮೂರ್ತಿ ಎಂ.ಜಿ ರ್‍ಯಾನಡೆ ಮುಂತಾದವರ ನೇತೃತ್ವದಲ್ಲಿ ಆರಂಭಗೊಂಡ ಈ ಸಂಸ್ಥೆಯು ಜಾತಿಪದ್ಧತಿಯು ಹೇರಿದಂತಹ – ಊಟೋಪಚಾರಗಳ ಮೇಲಿನ ನಿರ್ಬಂಧಗಳು, ಅಂತರ್ಜಾತೀಯ ವಿವಾಹ ನಿರ್ಬಂಧಗಳು ವಿಧವಾ ಪುನರ್ವಿವಾಹ ನಿಷೇಧ– ಮುಂತಾದ ನಿಯಮಗಳ ವಿರುದ್ಧ ಜನಜಾಗೃತಿ ಹುಟ್ಟಿಸುವ ಯತ್ನ ನಡೆಸಿತು.
3) **ಆರ್ಯ ಸಮಾಜ** : ಕ್ರಿ.ಶ. 1875 ರಲ್ಲಿ ಸ್ವಾಮಿ ದಯಾನಂದ ಸರಸ್ವತಿಯವರಿಂದ ಸ್ಥಾಪಿತವಾದ ಆರ್ಯಸಮಾಜವು ಹಿಂದೂ ಸಮಾಜವನ್ನು ಪಾಶ್ಚಾತ್ಯ ವೈಚಾರಿಕ ದಾಳಿಯಿಂದ ರಕ್ಷಿಸಲು ಹಾಗೂ ರಾಷ್ಟ್ರೀಯ ಸ್ವಾಭಿಮಾನವನ್ನು ಮೂಡಿಸಲು ಶ್ರಮಿಸಿತು. ಜಾತೀಯತೆಯ ವಿರುದ್ಧ ಸಮುದ್ರ ಪ್ರಯಾಣ ನಿಷೇಧದಂತಹ ಜಾತಿ ನಿಯಮಗಳ ವಿರುದ್ಧ ಧ್ವನಿ ಎತ್ತಿದ ಈ ಸಂಸ್ಥೆಯು "ಶುದ್ಧಿ" ಆಂದೋಲನವನ್ನು ಕೈಗೊಂಡಿತು. ಈ ಆಂದೋಲನದ ಮೂಲಕ ಜಾತಿಯಿಂದ ಬಹಿಷ್ಕಾರಗೊಂಡವರನ್ನು, ಇತರ ಮತಗಳಿಗೆ



downloaded from: www.kpscvaani.com

ಮತಾಂತರಗೊಂಡವರನ್ನು ಹಾಗೂ ಇನ್ನಿತರ ರೀತಿಯಲ್ಲಿ ಪತಿತರಾದವರನ್ನು ಮರಳಿ ಹಿಂದೂಧರ್ಮಕ್ಕೆ ಸೇರಿಸಿಕೊಳ್ಳುವ ಒಂದು ಪಂಥವಾಗಿ ಬೆಳೆದು ಬಂದ ಆರ್ಯ ಸಮಾಜವು ಸಾಮಾಜಿಕ ಸೇವೆಯ ಬಗ್ಗೆಯೂ ವಿಶೇಷ ಒತ್ತುಕೊಟ್ಟಿತು.

4) **ಶ್ರೀ ರಾಮಕೃಷ್ಣ ಮಿಶನ್** : ಕ್ರಿ.ಶ. 1897 ರಲ್ಲಿ, ಸ್ವಾಮಿ ವಿವೇಕಾನಂದ ರಿಂದ ಸ್ಥಾಪಿತವಾದ 'ಶ್ರೀ ರಾಮಕೃಷ್ಣ ಮಿಶನ್' ಸಂಸ್ಥೆಯು ಪೌರ್ವಾತ್ಯ ಹಾಗೂ ಪಾಶ್ಚಾತ್ಯ ವಿಚಾರಗಳ ಸಮನ್ವಯತೆಯನ್ನು ಪ್ರತಿನಿಧಿಸುತ್ತದೆ ಎನ್ನಬಹುದು. ವಿವೇಕಾನಂದರು 'ಕ್ರೈಸ್ತ ಮತ ಮತ್ತು ಇಸ್ಲಾಂ ಮತಗಳ ಆಘಾತಗಳನ್ನು ಎದುರಿಸಲು ಶಕ್ತವಾದ' ಸಂಘಟನೆಯಾಗಿ ಶ್ರೀ ರಾಮಕೃಷ್ಣ ಮಿಶನ್ ಬೆಳೆಯುವಂತೆ ಮಾಡಿದರು. ಧರ್ಮ ಮತ್ತು ಜಾತಿಯ ಹೆಸರಿನಲ್ಲಿ ನಡೆಯುತ್ತಿದ್ದ ಕಂದಾಚಾರಗಳನ್ನು ಮತ್ತು ಎಲ್ಲಾ ಬಗೆಯ ಶೋಷಣೆಯನ್ನು ಅವರು ಖಂಡಿಸಿದರು. ಸ್ತ್ರೀಯರ ಸ್ವಾತಂತ್ರ್ಯ ಹಾಗೂ ಸ್ವಾವಲಂಬನದ ಬಗ್ಗೆಯೂ ಅವರು ವಿಶೇಷ ಒತ್ತುಕೊಟ್ಟರು.

5) **ಇತರ ಸುಧಾರಣಾ ಆಂದೋಲನಗಳು** : ಈ ಮೇಲೆ ಉಲ್ಲೇಖಿಸಿದ ಸುಧಾರಣಾ ಆಂದೋಲನಗಲ್ಲದೆ

- ✓ ಮಹಾತ್ಮಾ ಜ್ಯೋತಿರಾವ್ ಫುಲೇ ಅವರ 'ಸತ್ಯಶೋಧಕ ಸಮಾಜ'
- ✓ ಆ್ಯನಿ ಬೆಸೆಂಟರ 'ಥಿಯೋಸೊಫಿಕಲ್ ಸೊಸೈಟಿ'
- ✓ ಮಹರ್ಷಿ ಅರವಿಂದ ಘೋಷ್ ರವರ 'ಡಿವೈನ್ ಲೈಫ್ ಸೊಸೈಟಿ'

ಮುಂತಾದ ಆಂದೋಲನಗಳೂ ಕೂಡ ಜಾತಿಯ ಕಟ್ಟುಪಾಡುಗಳನ್ನು ಸ್ವಲ್ಪಮಟ್ಟಿಗೆ ಸಡಿಲುಗೊಳಿಸುವಲ್ಲಿ ಇಲ್ಲವೇ ತೊಡೆದುಹಾಕುವುದರಲ್ಲಿ ಸಹಾಯಕವಾದುವು.



downloaded from: www.kpscvaani.com

# ವಿಜಯನಗರದ ಕೊಡುಗೆಗಳು (The Contribution of Vijayanagar )

## 1. ವಿಜಯನಗರದ ಆಡಳಿತ

- ರಾಜಪ್ರಭುತ್ವ
- ಯುವರಾಜ
- ಮಂತ್ರಿ ಮಂಡಲ
- ನ್ಯಾಯಾಂಗದಾಡಳಿತ
- ಸೈನ್ಯದಾಡಳಿತ
- ಭೂಕಂದಾಯ

## 2. ಆರ್ಥಿಕ ಅಭಿವೃದ್ಧಿ

- ಕೃಷಿ
- ಉದ್ಯಮ
- ವ್ಯಾಪಾರ
- ನಾಣ್ಯಗಳು

## 3. ಸಾಮಾಜಿಕ ಜೀವನ

## 4. ಧಾರ್ಮಿಕ ಜೀವನ

- ಜೈನ
- ಇಸ್ಲಾಂ
- ಕ್ರಿಶ್ಚಿಯನ್ ಧರ್ಮಗಳು
- ನವರಾತ್ರಿ ಉತ್ಸವ

## 5. ಸಾಹಿತ್ಯ



downloaded from: www.kpscvaani.com

- ಸಂಸ್ಕೃತ ಸಾಹಿತ್ಯ – ನಾಟಕಗಳು, ಸಂಗೀತ ಗ್ರಂಥಗಳು
- ಕನ್ನಡ ಸಾಹಿತ್ಯ
- ತೆಲಗು ಸಾಹಿತ್ಯ
- ತಮಿಳು ಸಾಹಿತ್ಯ
- ಕಲೆಯ ಬೆಳವಣಿಗೆ
- ವಿದೇಶಿ ಯಾತ್ರಿಕರ ಬರಹಗಳು

## ವಿಜಯನಗರದ ಆಡಳಿತ

ವಿಜಯನಗರದ ಅರಸರು ಹೊಯ್ಸಳರ ಆಡಳಿತವನ್ನು ಅನುಸರಿಸಿದರು ಅವರ ಆಡಳಿತದ ಮುಖ್ಯಾಂಶಗಳನ್ನು ಈ ಕೆಳಗಿನಂತೆ ವಿವರಿಸಬಹುದು:–

## ರಾಜಪ್ರಭುತ್ವ(Kingship)

- ರಾಜನು ಸೈದ್ಧಾಂತಿಕವಾಗಿ ನಿರಂಕುಶನಾಗಿದ್ದನು. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಹಾಗೂ ಸೈನ್ಯದ ಅತ್ಯುಚ್ಛ ಅಧಿಕಾರಿ ರಾಜನೇ ಆಗಿದ್ದನು. ಆದರೆ ಪದ್ಧತಿಗಳು, ಮಂತ್ರಿಮಂಡಲದ ಸಲಹೆಗಳು ಹಾಗೂ ಧರ್ಮಶಾಸ್ತ್ರ ಕಾನೂನುಗಳು ಅವನ ಅಧಿಕಾರವನ್ನು ಮೊಟಕುಗೊಳಿಸುತ್ತಿದ್ದವು.
- ರಾಜನು ಪ್ರಜೆಗಳ ಅಭಿವೃದ್ಧಿಗಾಗಿ ಸದಾ ಕಾರ್ಯನಿರತನಾಗುತ್ತಿದ್ದನು. ರಾಜ ಮತ್ತು ಪ್ರಜೆಗಳ ಸಂಬಂಧ ತಂದೆ ಮಕ್ಕಳ ಸಂಬಂಧದಂತೆ ಇತ್ತು ಎಂದು ಅಲಾಸಾನಿ ಪೆದ್ದಣನು ಹೇಳಿದ್ದಾನೆ. ರಾಜಪ್ರಭುತ್ವವು ವಂಶ ಪಾರಂಪರ್ಯವಾಗಿತ್ತು. ಪಟ್ಟದ ರಾಣಿಯ ಹಿರಿಯ ಮಗನು ಸಾಮಾನ್ಯವಾಗಿ ಸಿಂಹಾಸಕ್ಕೆ ಉತ್ತರಾಧಿಕಾರಿಯಾಗುತ್ತಿದ್ದನು.

1. **ಯುವರಾಜ:–**

- ರಾಜನು ಯುವರಾಜನ್ನು ನೇಮಿಸುವ ಪದ್ಧತಿ ಇತ್ತು. ಸಾಮಾನ್ಯವಾಗಿ ರಾಜನು ತನ್ನ ಹಿರಿಯ ಮಗನನ್ನು ಯುವರಾಜನೆಂದು ನೇಮಿಸುತ್ತಿದ್ದನು. ರಾಜನಿಗೆ ಗಂಡು ಮಕ್ಕಳಿಲ್ಲದಿದ್ದರೆ ಸಹೋದರರನ್ನು ಯುವರಾಜನಾಗಿ ನೇಮಿಸುತ್ತಿದ್ದರು. ಉದಾಹರಣೆಗೆ ಮೊದಲನೆ ಹರಿಹರನು. ತನ್ನ ಸಹೋದರ ಮೊದಲನೇ ಬುಕ್ಕದೇವನನ್ನು ಯುವರಾಜನೆಂದು ನೇಮಿಸಿದನು.




GNANADHARE IAS ACADEMY

downloaded from: www.kpscvaani.com

- ಯುವರಾಜರು, ರಾಜಧಾನಿಯಲ್ಲಿದ್ದು, ರಾಜನಿಗೆ ಆಡಳಿತದಲ್ಲಿ ಹಾಗೂ ಮಿಲಿಟರಿಯಲ್ಲಿ ಸಹಾಯ ಮಾಡುತ್ತಿದ್ದರು. ಇದರಿಂದ ಅವರಿಗೆ, ಸಿಂಹಾಸನಕ್ಕೆ ಬರುವ ವೇಳೆಯಲ್ಲಿ ಆಡಳಿತ ಹಾಗೂ ಮಿಲಿಟರಿಯಲ್ಲಿ ಅನುಭವವು ದೊರೆಯುತ್ತಿತ್ತು.

2. ಮಂತ್ರಿ ಮಂಡಳ:–

- ರಾಜನು ಮಂತ್ರಿಗಳನ್ನು ನೇಮಿಸಿ ಅವರ ಸಹಾಯದಿಂದ ಆಡಳಿತ ನಡೆಸುತ್ತಿದ್ದನು. ಪ್ರಧಾನಿಯನ್ನು 'ಮಹಾಪ್ರಧಾನ' ಇಲ್ಲವೆ 'ಶಿರಾಪ್ರಧಾ' ಎಂದು ಕರೆಯುತ್ತಿದ್ದರು. ಮಂತ್ರಿಗಳು ಮಿಲಿಟರಿ ಹುದ್ದೆಗಳಲ್ಲಿಯೂ ಇರುತ್ತಿದ್ದರು ರಣರಂಗವನ್ನು ಪ್ರವೇಶಿಸಿ ಯುದ್ದವನ್ನೂ ಮಾಡುತ್ತಿದ್ದರು. ಅವರು ಸಾಹಿತ್ಯ ಹಾಗೂ ಕಲೆಗಳ ಅಭಿವೃದ್ಧಿಗೂ ಕಾರಣರಾದರೂ. ರಾಜನು ಸಾಮಾನ್ಯವಾಗಿ ಮಂತ್ರಿ ಮಂಡಳದ ಸಲಹೆಗಳನ್ವಯವೇ ನಡೆಯುತ್ತಿದ್ದನು.
- ಕೃಷ್ಣದೇವರಾಯನ ಪ್ರಧಾನ ಮಂತ್ರಿ ತಿಮ್ಮರಸನು ಒಳ್ಳೆಯ ಉದಾಹರಣೆಯಾಗಿದ್ದಾನೆ. ಕೃಷ್ಣದೇವರಾಯನು ತಿಮ್ಮರಸನಿಗೆ ಅಪ್ಪಾಜಿ ಎಂದೇ ಕರೆಯುತ್ತಿದ್ದನು. ಆಡಳಿತದಲ್ಲಿ ತಿಮ್ಮರಸನ ಪಾತ್ರ ಬಹಳ ಮಹತ್ವದ್ದಾಗಿತ್ತು. ಅದರೆ ಅವನು ಯುದ್ದಗಳ ಬಗ್ಗೆ ಆಸಕ್ತನಾಗಿರಲಿಲ್ಲವೆಂದೂ ರಾಯನು, ಯುದ್ದದ ವಿಷಯಗಳಲ್ಲಿ ತಿಮ್ಮರಸನ ಸಲಹೆಯನ್ನು ಕಡೆಗಣಿಸುತ್ತಿದ್ದನೆಂದೂ ಅಭಿಪ್ರಾಯವಿದೆ. ರಾಯನು ಗಜಪತಿಯ ಮೇಲಿನ ದಂಡಯಾತ್ರೆಯಲ್ಲಿ ಕೊಂಡವೀಡನ್ನು ವಶಪಡಿಸಿಕೊಂಡು, ಅಲ್ಲಿಯ ಆಡಳಿತಕ್ಕೆ ತಿಮ್ಮರಸನನ್ನು ನೇಮಿಸಿದ್ದನ್ನು. ಇಲ್ಲಿ ಸ್ಮರಿಸಿರಿಸಿದಾಗಿದೆ. ಎರಡನೇ ದೇವರಾಯನ ಮಂತ್ರಿ ಲಕ್ಕಣ್ಣ ದಂಡೇಶನು ಸಿಲೋನದ ಮೇಲೆ ನೌಕಾದಾಳಿಯನ್ನು ಕೈಗೊಂಡು ಸಿಲೋನದ ಅರಸನಿಂದ ಕಪ್ಪ ಕಾಣಿಕೆಗಳನ್ನು ಪಡೆದು, ಚಕ್ರವರ್ತಿಗೆ ತಲುಪಿದ ಉದಾಹರಣೆಯಿದೆ.

**ಸೆಕ್ರೆಟರಿಯೇಟ್(ದಿವಾನ್ ಖಾನ):–**

ವಿದೇಶಿ ಯಾತ್ರಿಕರಾದ ನೂನಿಜ್, ರಾಯಭಾರಿ ಅಬ್ದುರ್ ರಜಾಕ್ ಮುಂತಾದವರು ವಿಜಯನಗರದ ಆಡಳಿತದಲ್ಲಿ ಸೆಕ್ರೆಟರಿಯೇಟ್ ಬಗ್ಗೆ ತಿಳಿಸಿದ್ದಾರೆ. ಮುಖ್ಯ ಕಾರ್ಯದರ್ಶಿಗೆ ರಾಯ ಸ್ವಾಮಿ ಎಂದು ಸೆಕ್ರೆಟರಿಗಳಿಗೆ 'ರಾಯಸ'ಗಳೆಂದೂ ಹೇಳುತ್ತಿದ್ದರು.

ವಿಜಯನಗರ ಸಾಮ್ರಾಜ್ಯದ ಆಡಳಿತದಲ್ಲಿ ಈ ಕೆಳಗಿನ ಆಡಳಿತ ಘಟಕಗಳನ್ನು ಅಥವಾ ವಿಭಾಗಗಳು ಇದ್ದವು. ಉದಾಹರಣೆಗೆ:–



downloaded from: www.kpscvaani.com

ಸಾಮ್ರಾಜ್ಯ (Empire)
↓
ಮಂಡಲ (Mandala State)
↓
ವಿಷಯ(Vishayas)
↓
ನಾಡು (ಸೀಮೆ) (Nadus Or Sime)
↓
ಕಂಪಣ(ಸ್ಥಲ) (Kampann or Stala)
↓
ಗ್ರಾಮಗಳು ಮತ್ತು ಪಟ್ಟಣಗಳು

## ಮಂಡಲದ ಆಡಳಿತ:-

- ಪ್ರಾಂತ್ಯಕ್ಕೆ ಮಂಡಲ ಎಂದೂ, ಮಂಡಲದ ಮುಖ್ಯನಿಗೆ ಮಂಡಲೇಶ್ವರ, ಮಹಾ ಮಂಡಲೇಶ್ವರ ಎಂದು ಮುಂತಾಗಿ ಕರೆಯುತ್ತಿದ್ದರು.
- ಸಾಮಾನ್ಯವಾಗಿ, ರಾಜರು, ತಮ್ಮ ಸಹೋದರರನ್ನು, ಮಕ್ಕಳನ್ನು ಇಲ್ಲವೆ ಮಿಲಿಟರಿಯಲ್ಲಿ ಪರಾಕ್ರಮಿಗಳನ್ನು ಮಂಡಲಾಧೀಶ್ವರರೆಂದು ನೇಮಿಸುತ್ತಿದ್ದರು.
- ವಿಜಯನಗರದ ಸ್ಥಾಪಕ, ಮೊದಲನೇ ಹರಿಹರನು ಹೊಯ್ಸಳ ರಾಜ್ಯದ ಉತ್ತರ ಪ್ರದೇಶಗಳಿಗೆ ಮಹಾಮಂಡೇಶ್ವರ ಎಂದು ಮೂರನೆಯ ಬಲ್ಲಾಳನಿಂದ ನೇಮಿಸಲ್ಪಟ್ಟಿದ್ದನು.

**ಮೊದಲನೆ ಹರಿಹರನು** – ತನ್ನ ಸಹೋದರರಾದ :-

- ಕಂಪಣ್ಣನನ್ನು – ಉದಯಗಿರಿ ರಾಜ್ಯಕ್ಕೆ
- ಮಾರಪ್ಪನನ್ನು – ಮಲೆ ರಾಜ್ಯಕ್ಕೆ (ಕೊಂಕಣ ಪ್ರದೇಶ)
- ಮುದ್ದಪ್ಪನನ್ನು – ಮುಳಬಾಗಿಲು ಪ್ರಾಂತ್ಯಕ್ಕೆ– ಪ್ರಾಂತ್ಯಾಧಿಕಾರಿಗಳನ್ನಾಗಿ ನೇಮಿಸಿದ್ದನು.



GNANADHAREIAS ACADEMY
downloaded from: www.kpscvaani.com

**ಒಂದನೆಯ ಬುಕ್ಕರಾಯನು:–**

- ವಿರೂಪಾಕ್ಷನನ್ನು – ಮಲೆ ರಾಜ್ಯಕ್ಕೆ
- ಕಂಪಣ್ಣನನ್ನು – ದಕ್ಷಿಣ ತಮಿಳು ಪ್ರದೇಶಕ್ಕೆ
- ಭಾಸ್ಕರ ಭಾವದೂರನನ್ನು – ಉದಯಗಿರಿ ರಾಜ್ಯಕ್ಕೆ ಗವರ್ನರರನ್ನಾಗಿ ನೇಮಿಸಿದ್ದನು.

ಕೃಷ್ಣದೇವರಾಯನು ಉಮ್ಮತ್ತೂರನ್ನು ಗೆದ್ದು ಇದನ್ನು ಹೊಸ ಪ್ರಾಂತ್ಯವನ್ನಾಗಿ ಮಾಡಿದನು ಸಾಳುವ ಗೋವಿಂದರಾಯನನ್ನು ಈ ಪ್ರಾಂತ್ಯಕ್ಕೆ ಮಾಡಂಲಿಕನನ್ನಾಗಿ ನೇಮಿಸಿದನು. ಅಲ್ಲದೆ ಮೂವರು ಒಂದು ಆಡಳಿತ ಬೋರ್ಡ್‌ನ್ನು ರಚಿಸಿದನು. ಕೆಂಪೇಗೌಡನು ಅವರಲ್ಲೊಬ್ಬನಾಗಿದ್ದನು.

ಹೀಗೆ ಚಕ್ರವರ್ತಿಯು ಮಂಡಲಕ್ಕೆ ಮಂಡಲಾಧಿಕಾರಿಯನ್ನು ನೇಮಿಸುತ್ತಿದ್ದನು. ಮಂಡಲದಲ್ಲಿ ಅವರದೇ ಆದ ರಾಜಧಾನಿಯಿರುತ್ತಿತ್ತು. ಮಂಡಲಾಧಿಕಾರಿಯ ಮುಖ್ಯ ಕರ್ತವ್ಯಗಳು

- ಪ್ರಾಂತ್ಯಗಳಲ್ಲಿ ಶಾಂತಿ ಮತ್ತು ಕಾನೂನು ವ್ಯವಸ್ಥೆಗಳನ್ನು ಕಾಪಾಡಿಕೊಳ್ಳುವುದು
- ತಮ್ಮದೇ ಆದ ಸೈನ್ಯವನ್ನು ರಚಿಸಿಕೊಳ್ಳುವುದು.
- ಯುದ್ಧಗಳಲ್ಲಿ ರಾಜನಿಗೆ ಮಿಲಿಟರಿ ಸಹಾಯ ನೀಡುವುದು. ರಾಜನ ಪರವಾಗಿ ರಣರಂಗ ಪ್ರವೇಶಿಸಿ ಯುದ್ಧ ಮಾಡುವುದು.
- ಕಂದಾಯ ಸಂಗ್ರಹಿಸಿ ಕೇಂದ್ರ ಸರ್ಕಾರಕ್ಕೆ ರವಾನಿಸುವುದು ಮುಂತಾದವುಗಳು.

## ವಿಷಯ:–

- ಪ್ರತಿ ಮಂಡಲವನ್ನು ಅನೇಕ ವಿಷಯಗಳಲ್ಲಿ ವಿಭಾಗಿಸುತ್ತಿದ್ದರು. **ವಿಷಯಪತಿ** ವಿಷಯದ ಮುಖ್ಯಾಧಿಕಾರಿಯಾಗಿದ್ದನು. ವಿಷಯಗಳಲ್ಲಿ ಶಾಂತಿ ಹಾಗೂ ಕಾನೂನು ವ್ಯವಸ್ಥೆ ಕಾಪಾಡಿಕೊಳ್ಳುವುದು ಅವನ ಕರ್ತವ್ಯವಾಗಿತ್ತು.
- ತಮಿಳು ಪ್ರದೇಶದಲ್ಲಿ 'ವಿಷಯ'ವನ್ನು ಕೊಟ್ಟಮ್ ಎಂದು ಕರೆಯುತ್ತಿದ್ದರು.
- ವಿಷಯವನ್ನು ಅನೇಕ ನಾಡುಗಳಲ್ಲಿ ಹಾಗೂ ನಾಡನ್ನು ಅನೇಕ ಕಂಪಣಗಳಲ್ಲಿ ವಿಭಾಗಿಸುತ್ತಿದ್ದರು.

## ಗ್ರಾಮ:

- ಗ್ರಾಮದ ಆಡಳಿತ ಸ್ವಾಯತ್ತ ಅಧಿಕಾರಗಳಿಂದ ಕೂಡಿತ್ತು. ಗ್ರಾಮದಲ್ಲಿ ಗ್ರಾಮಸಭೆಯು ಆಡಳಿತ ನಡೆಸುತ್ತಿತ್ತು. **ಶ್ಯಾನುಭೋಗ ತಳವಾರ** ಮುಂತಾದ ಅಧಿಕಾರಿಗಳೂ ಇದ್ದರು.



downloaded from: www.kpscvaani.com

## ಪಟ್ಟಣದ ಆಡಳಿತ

- **ಪಟ್ಟಣ ಸ್ವಾಮಿ** ಅಥವಾ ಪುರಪಾಲ ಪಟ್ಟಣದ ಆಡಳಿತಗಾರನಾಗಿದ್ದನು. ನಿಗಮ ಸಭೆಯು ಪಟ್ಟಣದಲ್ಲಿ ಇರುತ್ತಿತ್ತು. ಪಾಳೆಗಾರರು ನಗರದ ಹೊರವಲಯದಲ್ಲಿ ರಕ್ಷಣಾಧಿಕಾರಿಗಳಾಗಿದ್ದರು.

## ನ್ಯಾಯಾಂಗದಾಡಳಿತ:

ನ್ಯಾಯಾಂಗಕ್ಕೆ ರಾಜನೇ ಉಚ್ಚ ಅಧಿಕಾರಿಯಾಗಿದ್ದನು. ಗ್ರಾಮ ಮತ್ತು ಪುರ ನ್ಯಾಯಾಲಯಗಳಿಂದ ಮೊಕದ್ದಮೆಗಳು ರಾಜನ ನ್ಯಾಯಾಲಯಕ್ಕೂ ಬರುತ್ತಿದ್ದವು. ಮೊದಲನೇ ಬುಕ್ಕದೇವನ ಕಾಲದಲ್ಲಿ ವೈಷ್ಣವರಿಗೂ ಜೈನರಿಗೂ ಜಗಳವಾಗಿ ಮೊಕದ್ದಮೆ ರಾಜನ ನ್ಯಾಯಾಲಯಕ್ಕೂ ಬಂದಿತು. ಮೊದಲನೆ ಬುಕ್ಕದೇವನು – ವೈಷ್ಣವರೂ ಜೈನರೂ ಒಂದು ಬೇಧವನ್ನರಿಯಲಾಗದು. ಬಹುಸಂಖ್ಯಾಕರಾದ ವೈಷ್ಣವರು, ಅಲ್ಪಸಂಖ್ಯಾಕರಾದ ಜೈನರನ್ನು ರಕ್ಷಿಸಿಬೇಕು ವರಿಷ್ಠ ನ್ಯಾಯಾಲಯದಲ್ಲಿ

- ಪ್ರಾಡ್ವಿವಾಕರು
- ಸಭ್ಯರು ಇದ್ದರು. ಮಾಂಡಲಿಕರು, ಅಮಾತ್ಯರು ಕೂಡ ನ್ಯಾಯ ನಿರ್ಣಯಗಳನ್ನು ನೀಡುತ್ತಿದ್ದರು.

ಪ್ರಮಾಣದ ಮೂಲಕ ವಿಚಾರಣೆ ನಡೆಯುತ್ತಿತ್ತು. ಅಪರಾಧಿಗಳಿಗೆ ದಂಡ ವಿಧಿಸುತ್ತಿದ್ದರು. ಘೋರ ಅಪರಾಧಗಳಿಗೆ ಮರಣ ದಂಡನೆ ನೀಡುತ್ತಿದ್ದರು. ಅಂಗವಿಚ್ಛೇದನ ಶಿಕ್ಷೆಯೂ ರೂಢಿಯಲ್ಲಿತ್ತು.

## ಸೈನ್ಯದ ಆಡಳಿತ:

ವಿಜಯನಗರದಲ್ಲಿ ಸೈನ್ಯದ ಅತ್ಯಂತ ಉಚ್ಚ ಅಧಿಕಾರಿಯು ರಾಜನೇ ಆಗಿದ್ದನು. ರಕ್ಷಣಾ ಜವಾಬ್ದಾರಿಯನ್ನು ಕಂದಾಚಾರ ಇಲಾಖೆಗೆ ನೀಡಲಾಗಿತ್ತು. ದಂಡನಾಯಕ ಈ ವಿಭಾಗದ ಅಧ್ಯಕ್ಷನಾಗಿದ್ದನು.

ವಿಜಯನಗರದ ಸೈನ್ಯವು :– ಅ) ಅಶ್ವಬಲ ಆ) ಗಜಬಲ ಇ) ಫಿರಂಗಿ ಬಲಗಳಿಂದ ಕೂಡಿತ್ತು.

## ಕೃಷ್ಣದೇವರಾಯನ ಕಾಲದಲ್ಲಿ

- ಅರಮನೆ ಕಾವಲುಗಾರರು – 6000
- ಈಟಿಯವರು – 3000
- ಮಾವುತರು – 1300
- ಕಾಸ್ತಾರರು – 300 ಇದ್ದರೆಂದು ತಿಳಿದುಬರುತ್ತದೆ.



downloaded from: www.kpscvaani.com

## ಭೂಕಂದಾಯ:–

- ಭೂಕಂದಾಯವು ರಾಜ್ಯದ ಉತ್ಪನ್ನದ ಮುಖ್ಯ ಮೂಲವಾಗಿತ್ತು. ಕಂದಾಯ ವಸೂಲಿ ಅಠವಣೆ ಎಂಬ ವಿಭಾಗಕ್ಕೆ ಸೇರಿತ್ತು
- ಬೆಳೆಯ ಆರನೆಯ ಒಂದು ಭಾಗವನ್ನು ಭೂ ಕಂದಾಯವೆಂದು ಸಂಗ್ರಹಿಸುತ್ತಿದ್ದರು.
- ಕರಭಾರ ಜನರಿಗೆ ಸಾಮಾನ್ಯವಾಗಿ ಹೊರೆಯಾಗಿರಲಿಲ್ಲ ಅಚ್ಯತರಾಯನ ಕಾಲದಲ್ಲಿ ತೆರಿಗೆಯು ಭಾರವಾಗಿ ಜನರು ವಲಸೆ ಹೋಗಲು ಪ್ರಾರಂಭಿಸಿದ್ದರೆಂಬ ಹೇಳಿಕೆಯಿದೆ.
- ವೃತ್ತಿ ತೆರಿಗೆ ಮುಂತಾದ ಇನ್ನೂ ಅನೇಕ ತೆರಿಗೆಗಳಿದ್ದವು
- ಹೀಗೆ ವಿಜಯನಗರದ ಆಡಳಿತ ಸುವ್ಯವಸ್ಥಿತವಾಗಿತ್ತು. ಎಂದು ಹೇಳಬಹುದು.

## ಆರ್ಥಿಕ ಅಭಿವೃದ್ಧಿ

### 1. ಕೃಷಿ:–

ಕೃಷಿಯು ಜನರ ಮುಖ್ಯ ಉದ್ಯೋಗವಾಗಿತ್ತು. ಕೃಷಿಕರಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲು ಆಡಳಿತವು ವಿಶೇಷ ಲಕ್ಷ್ಯವನ್ನು ವಹಿಸುತ್ತಿತ್ತು. ನಾಗಲಾಪುರದ ಪ್ರವೇಶದ್ವಾರದಲ್ಲಿ ಕೃಷ್ಣದೇವರಾಯನು ನೀರಾವರಿಗಾಗಿ ಸರೋವರವನ್ನು ನಿರ್ಮಿಸಿದನು. ಕೋರಂಗಲದಲ್ಲಿ ಅಣೆಕಟ್ಟು ಕಟ್ಟಿಸಿ, ಕಾಲುವೆಗಳ ಮುಖಾಂತರ ಭೂಮಿಗೆ ನೀರುಣಿಸುವ ವ್ಯವಸ್ಥೆಯನ್ನು ಮಾಡಿದರು. ವಿಜಯನಗರದ ಪಟ್ಟಣ ಪ್ರದೇಶದಲ್ಲಿ ತುರ್ತು ಕಾಲುವೆಯನ್ನು ನಿರ್ಮಿಸಿದ್ದರು.

### 2. ಬೆಳೆಗಳು:

ಅಕ್ಕಿ ಗೋಧಿ, ಜೋಳ, ಹತ್ತಿ, ದ್ವಿದಳ ಧಾನ್ಯಗಳು ಬೇಳೆ ಕಾಳುಗಳು, ಕಬ್ಬು ಮುಂತಾದವುಗಳನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದ್ದರು. ಏಲಕ್ಕಿ ಮೆಣಸು, ಅಡಿಕೆ ತೆಂಗು, ಶುಂಠಿ ಮುಂತಾದವುಗಳನ್ನು ಕೂಡ ಬೆಳೆಯುತ್ತಿದ್ದರು.

### 3. ಉದ್ಯಮಗಳು:–

ವಿಜಯನಗರದ ಆರ್ಥಿಕ ಉನ್ನತಿಗೆ ಉದ್ಯಮಗಳು ಮುಖ್ಯ ಕಾರಣವಾಗಿದ್ದವು. ಗಣಿಗಾರಿಕೆ ಮುಖ್ಯ ಉದ್ಯಮಗಳಲ್ಲಿ ಒಂದಾಗಿತ್ತು. ವಜ್ರಗಳು ಹತ್ತಿ ಬಟ್ಟೆ ಉದ್ಯಮ, ಕಾರ್ಪೆಂಟರಿ, ಸ್ಮಿತಿ ಮುಂತಾದ ಉದ್ಯಮಗಳು ಪ್ರಸಿದ್ಧವಾಗಿದ್ದವು. ಕುಶಲ ಕೈಗಾರಿಕೆಗೆ ಕೂಡ ವಿಜಯನಗರ ಪ್ರಸಿದ್ಧವಾಗಿತ್ತು. ವೀರ ಪಾಂಚಾಲರು ಔಧ್ಯಮಿಕ



downloaded from: www.kpscvaani.com

ಕ್ಷೇತ್ರದಲ್ಲಿ ಮೊದಲ ಸ್ಥಾನದಲ್ಲಿದ್ದರು. ಕುಮ್ಮಾರರು, ಚಿನ್ನ–ಬೆಳ್ಳಿ ಮತ್ತು ಕಟ್ಟಿಗೆಯ ಕೆಲಸಗಾರರು ವೀರ ಪಾಂಚಾಲ ವರ್ಗದ ಶಾಖೆಗಳಾಗಿದ್ದರು.

### 4. ವ್ಯಾಪಾರ:

- ಆಂತರಿಕ ಹಾಗೂ ವಿದೇಶೀ ವ್ಯಾಪಾರಗಳು ವಿಜಯನಗರದ ಆರ್ಥಿಕ ಅಭಿವೃದ್ಧಿಗೆ ಕಾರಣವಾದವು. ಬಂದರುಗಳ ಮುಖಾಂತರ ವಿದೇಶೀ ವ್ಯಾಪಾರಗಳು ನಡೆಯುತ್ತಿದ್ದವು. ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ವಿಜಯನಗರದ ಮಸಾಲೆ ಸಾಮಾನುಗಳು, ತೆಂಗು, ಬೆಲ್ಲ, ಸುಣ್ಣದ ಕಲ್ಲು, ಅಕ್ಕಿ, ಸಕ್ಕರೆ, ಹತ್ತಿಯ ಬಟ್ಟೆಗಳು, ದೊರೆಯುತ್ತಿದ್ದವು. ಪೋರ್ಚುಗೀಸರು ವಿಜಯನಗರದೊಡನೆ ವ್ಯಾಪಾರಿ ಒಪ್ಪಂದಗಳನ್ನು ಮಾಡಿಕೊಂಡು, ಅನೇಕ ಸೌಲಭ್ಯಗಳನ್ನೂ ಪಡೆದಿದ್ದರು. ಪರ್ಶಿಯದಿಂದ ಆನೆಗಳನ್ನು, ಯುರೋಪ ದೇಶಗಳಿಂದ ಶಸ್ತ್ರಾಸ್ತ್ರಗಳನ್ನು ಚೀನದಿಂದ ರೇಶ್ಮೆಯನ್ನು, ಅರೇಬಿಯಾದಿಂದ ಕುದುರೆಗಳನ್ನು ವಿಜಯನಗರವು ಆಯಾತ ಮಾಡಿಕೊಳ್ಳುತ್ತಿತ್ತು. ಅಬಿಸೀನಿಯ, ಅರೇಬಿಯ, ಪರ್ಶಿಯ, ಸಿಲೋನ, ಚೀನ ಮತ್ತು ಯುರೋಪ ದೇಶಗಳ ಸಂಗಡ ವಿಜಯನಗರದ ವ್ಯಾಪಾರ ವ್ಯವಹಾರಗಳು ನಡೆಯುತ್ತಿದ್ದವು.
- ಮುಸಲ್ಮಾನರು, ಮಲಬಾರಿಗಳು, ಚೆಟ್ಟಿಗಳು ಒಳನಾಡಿನ ವ್ಯಾಪರದಲ್ಲಿ ಪ್ರಮುಖ ಪಾತ್ರ ವಹಿಸಿದರು.
- ವಿಜಯನಗರ ಪಟ್ಟಣವು ಉದ್ಯಮಗಳ ಹಾಗೂ ವ್ಯಾಪಾರದ ಪ್ರಮುಖ ಕೇಂದ್ರವಾಯಿತು. ಇಲ್ಲಿ ಕುಶಲ ಕರ್ಮಿಗಳು ಇದ್ದರು. ಶ್ರೀಮಂತವಾದ ಬಾಜಾರಗಳಿದ್ದವು. ಮುತ್ತು, ರತ್ನ, ವ್ರಜ ವೈಢೂರ್ಯ ಮುಂತಾದವುಗಳ ವ್ಯಾಪಾರಿಗಳಿದ್ದರು. ಜಗತ್ತಿನಲ್ಲಿಯೇ ಇದೊಂದು ಸಕಲ ಸಾಮಾಗ್ರಿಗಳೂ ಸಿಗುವ ಅದ್ಭುತ ಪಟ್ಟಣವಾಗಿತ್ತೆಂದು ವಿದೇಶಿ ಯಾತ್ರಿಕರು ಹೇಳಿರುವುದನ್ನು ಇಲ್ಲಿ ಗಮನಿಸಬಹುದು.
- ವಿಜಯನಗರ, ಪೆನುಗೊಂಡ, ಶ್ರೀರಂಗಪಟ್ಟಣ, ಭಟ್ಕಳ, ಅಂಕೋಲಾ ಮುಂತಾದವುಗಳು ಆಂತರಿಕ ವ್ಯಾಪಾರದ ಕೇಂದ್ರಗಳಾಗಿದ್ದವು.
- ಕಾರವಾರ, ಹೊನ್ನಾವರ, ಭಟ್ಕಳ, ಬೈಂದೂರು ಬಾರ್ಕೂರು, ಮಂಗಳೂರು ಮುಂತಾದವುಗಳು ವಿದೇಶೀ ವ್ಯಾಪಾರದ ಬಂದರುಗಳಾಗಿದ್ದವು.

### 5. ನಾಣ್ಯಗಳು

ವರಹ, ವಿಜಯನಗರದ ಮುಖ್ಯ ನಾಣ್ಯವಾಗಿತ್ತು. ಗದ್ಯಾಣ ಮತ್ತು ಪಗೋಡಾ ನಾಣ್ಯಗಳೂ ರೂಢಿಯಲ್ಲಿದ್ದವು ವಿಜಯನಗರದಲ್ಲಿ ಗೋಲ್ಡ್ ಕರೆನ್ಸಿಯಿತ್ತು.



downloaded from: www.kpscvaani.com

## ರಾಜನ ಉತ್ಪನ್ನ ಮೂಲಗಳು

- ಭೂಕಂದಾಯ ಬೆಳೆಯ $^1/_6$ ಭೂಕಂದಾಯವಾಗಿತ್ತು.
- ಮನೆ ತೆರಿಗೆ
- ವೃತ್ತಿ ತೆರಿಗೆ
- ಕಸ್ಟಮ್ಸ್ ಆದಾಯ
- ಮಾರುಕಟ್ಟೆ ತೆರಿಗೆ ಮುಂತಾದವುಗಳು, ರಾಜನ ಉತ್ಪನ್ನದ ಮುಖ್ಯ ಮೂಲಗಳಾಗಿದ್ದವು.

## ಸಾಮಾಜಿಕ ಜೀವನ (Social Life)

### 1. ಜಾತಿ ಪದ್ಧತಿ:

- ಸಮಾಜದಲ್ಲಿ – ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಗಗಳಿದ್ದವು. ಅಲ್ಲದೇ ಅನೇಕ ಉಪವರ್ಗಗಳೂ ಇದ್ದವು.
- ಬ್ರಾಹ್ಮಣರು ವಿವಿಧ ಉದ್ಯೋಗಗಳಲ್ಲಿ ತೊಡಗಿದ್ದರು. ಅಧ್ಯಯನ ಅಧ್ಯಾಪನಗಳಲ್ಲಿದೆ. ವ್ಯಾಪಾರಿಗಳ, ಜಮೀನುದಾರರೂ ಇದ್ದರು. ಬ್ರಾಹ್ಮಣರು ರಾಜಕೀಯ ಪ್ರಭಾವವನ್ನೂ ಹೊಂದಿದ್ದರು. ಮಿಲಿಟರಿ ಸೇವೆಯಲ್ಲಿಯೂ ಬ್ರಾಹ್ಮಣರು ರಾಜನ ಜೊತೆಗೆ ಇರುತ್ತಿದ್ದರು. ರಾಜ ಗುರುಗಳು ಬ್ರಾಹ್ಮಣರಾಗಿದ್ದರು.
- ಸಮಾಜದಲ್ಲಿ ಅಸ್ಪೃಶ್ಯತೆ ಮತ್ತು ಗುಲಾಮಿ ಪದ್ದತಿಗಳೂ ಇದ್ದವು. ಇಟಲಿಯ ವ್ಯಾಪಾರಿ ನಿಕೋಲೋ ಕೊಂಟಿ, ಗುಲಾಮಿ ಪದ್ದತಿಯ ಬಗ್ಗೆ ತಿಳಿಸಿದ್ದಾನೆ.

### 2. ಸ್ತ್ರೀಯರ ಸ್ಥಾನ:

- ಸಮಾಜದ ಸ್ತ್ರೀಯರಿಗೆ ಉನ್ನತ ಸ್ಥಾನವಿತ್ತು. ಅನೇಕರು ವಿದ್ಯಾವಂತರಾಗಿ ಗ್ರಂಥಗಳನ್ನು ರಚಿಸಿದರು. ಕಂಪಣ್ಣನ ರಾಣಿ ಗಂಗಾಂಬಿಕಾ ಮಧುರಾ ವಿಜಯಂ ಎಂಬ ಗ್ರಂಥವನ್ನು ಸಂಸ್ಕೃತದಲ್ಲಿ ರಚಿಸಿದಳು. ತಿರುಮಲಾಂಬಾ ದೇವಿಯು 'ವರದಾಂಬಿಕಾ ಪ್ರಣಯ' ಎಂಬ ಗ್ರಂಥವನ್ನು ರಚಿಸಿದಳು ನೃತ್ಯ ಪ್ರವೀಣೆಯರೂ ಇದ್ದರು. ಕೃಷ್ಣದೇವರಾಯನ ರಾಣಿ ಚೆನ್ನಾದೇವಿ ನೃತ್ಯ ಕಲಾವಿದೆಯಾಗಿದ್ದಳು. ಅವಳು ಸಾರ್ವಜನಿಕ ಸಮಾರಂಭದಲ್ಲಿಯೂ ಭಾಗವಹಿಸುತ್ತಿದ್ದಳು. ಬಾಲ್ಯವಿವಾಹ ರೂಢಿಯಲ್ಲಿತ್ತು. ಸತಿ ಪದ್ಧತಿಯೂ ಇತ್ತು.
- ದೇವದಾಸಿ ಪದ್ದತಿಯಿತ್ತು. ಸ್ತ್ರೀಯರಿಗೆ ವಿವಾಹ ವಿಚ್ಛೇದನ ಅಧಿಕಾರವೂ ಇತ್ತು. ಏಕಪತ್ನಿತ್ವವು ಸಮಾಜದಲ್ಲಿ ಸಾಮಾನ್ಯವಾಗಿತ್ತು. ರಾಜರು, ರಾಜಮನೆತನದವರು ಮತ್ತು ಶ್ರೀಮಂತರಲ್ಲಿ ಬಹುಪತ್ನಿತ್ವವೂ



downloaded from: www.kpscvaani.com

ರೂಢಿಯಲ್ಲಿತ್ತು. ವೇಶ್ಯಾಪದ್ಧತಿ ಕಾನೂನು ಬೆಂಬಲವನ್ನು ಗಳಿಸಿತ್ತು. ಅವರಿಂದಲೂ ತೆರಿಗೆಗಳನ್ನು ಸಂಗ್ರಹಿಸಲಾಗುತ್ತಿತ್ತು.

### 3. ಪೋಷಾಕುಗಳು:–

- ಸ್ತ್ರೀಯರು ಮತ್ತು ಪುರುಷರು ರೇಶ್ಮೆ ಮತ್ತು ಹತ್ತಿ ಬಟ್ಟೆಗಳನ್ನು ಉಪಯೋಗಿಸುತ್ತಿದ್ದರು. ಸ್ತ್ರೀಯರು ಸೀರೆ ಮತ್ತು ರವಿಕೆಗಳನ್ನು ಧರಿಸುತ್ತಿದ್ದರು. ಪುರುಷರು ಧೋತಿ ಮತ್ತು ಅಂಗಿಗಳನ್ನು ತೊಡುತ್ತಿದ್ದರು. ಗಂಡಸರು ತಲೆಗೆ ರುಮಾಲು ಸುತ್ತಿದ್ದರು.

### 4. ಆಭರಣಗಳು:–

- ಪುರುಷರು ಮತ್ತು ಸ್ತ್ರೀಯರು ಆಭರಣ ಪ್ರಿಯರಾಗಿದ್ದರು ಮುತ್ತು, ರತ್ನ, ವಜ್ರ, ವೈಢೂರ್ಯಗಳಿಂದ ಶ್ರೀಮಂತರು ವೈಢೂರ್ಯಗಳಿಂದ ಶ್ರೀಮಂತರು ಆಭರಣ ತಯಾರಿಸುತ್ತಿದ್ದರು. ಆಭರಣ ತಯಾರಿಕೆ ಒಂದು ಮಹತ್ವದ ಉದ್ಯಮವೇ ಆಗಿತ್ತು.

### 5. ವಿನೋದ ವಿಹಾರಗಳು:

- ಸಂಗೀತ ಮತ್ತು ನೃತ್ಯ ಕಾರ್ಯಕ್ರಮಗಳಲ್ಲಿ ಜನರು ಭಾಗವಹಿಸುತ್ತಿದ್ದರು. ಈ ಕಲೆಗಳಿಗೆ ಸಮಾಜದಲ್ಲಿ ಪ್ರೋತ್ಸಾಹವೂ ಇತ್ತು. ಕೃಷ್ಣದೇವರಾಯನ ರಾಣಿ ಚೆನ್ನಾದೇವಿ ನೃತ್ಯ ವಿಶಾರದೆಯಾಗಿ ಸಾರ್ವಜನಿಕ ಕಾರ್ಯಕ್ರಮಗಳನ್ನು ನೀಡುತ್ತಿದ್ದಳು. ಬೇಟೆಯಾಡುವುದು. ಮಲ್ಲ ಯುದ್ಧ ಮುಂತಾದವುಗಳು ಕೂಡ ಇದ್ದವು.

## ಧಾರ್ಮಿಕ ಜೀವನ :

- ವಿಜಯನಗರ ರಾಜ್ಯದ ಸ್ಥಾಪನೆಯು ಹಿಂದೂ ಧರ್ಮದ ರಕ್ಷಣೆ ಮತ್ತು ಹಿಂದೂ ಸಂಸ್ಕೃತಿಯ ರಕ್ಷಣೆಯ ಉದ್ದೇಶಗಳನ್ನು ಹೊಂದಿತ್ತು. ಈ ಅರಸರು ಹಿಂದೂ ಧರ್ಮಕ್ಕೆ ರಾಜಾಶ್ರಯವನ್ನು ನೀಡಿದ್ದರು. ರಾಜರು 'ವೈದಿಕ ಮಾರ್ಗ ಪ್ರವರ್ತಕ' 'ವೈದಿಕ ಮಾರ್ಗ ಪ್ರತಿಷ್ಠಾಪನಾಚಾರ್ಯ' ಮೊದಲಾದ ಬಿರುದುಗಳನ್ನು ಹೊಂದಿದ್ದರು. ಸಾಯಣಾಚಾರ್ಯರು, ಮಾಧವಾಚಾರ್ಯರು, ವಿದ್ಯಾರಣ್ಯರು, ಕ್ರಿಯಾಶಕ್ತಿ ಮೊದಲಾದವರು ರಾಜನಿಗೆ ಹಿಂದೂ ಧರ್ಮದ ಅಭ್ಯುದಯಕ್ಕೆ ಸೂಕ್ತ ಸಲಹೆಗಳನ್ನು ನೀಡಿದರಲ್ಲದೆ ಹಿಂದೂ ಧರ್ಮಶಾಸ್ತ್ರ ಗ್ರಂಥಗಳನ್ನೂ, ಭಾಷ್ಯಗಳನ್ನೂ ಭಾರತೀಯ ಪರಂಪರೆಯ ಆಯುರ್ವೇದ, ಸಂಗೀತ ಮೊದಲಾದವುಗಳ ಕುರಿತು ಗ್ರಂಥಗಳನ್ನು ಬರೆದಿದರು.



downloaded from: www.kpscvaani.com

- ಆದರೆ ಈ ರಾಜರು ಪರಧರ್ಮ ಸಹಿಷ್ಣುಗಳು ಆಗಿದ್ದರು. ಹಿಂದೂ ಧರ್ಮದ ರಕ್ಷಣೆ ಮಾಡುವಾಗ ಇತರ ಧರ್ಮಗಳ ಬೆಳವಣಿಗೆಯ ದಾರಿಯಲ್ಲಿ ಇವರು ಬರಲಿಲ್ಲ.
- ಪ್ರಥಮ ರಾಜವಂಶಿಯರಾದ ಸಂಗಮ ವಂಶದವರು ಶೈವ ಪಂಥದ ಆರಾಧಕರಾಗಿದ್ದರು. ಅವರು ಅದ್ವೈತ ಮಠಗಳಿಗೆ ಭೇಟಿ ನೀಡಿದರು. ಕ್ರಿ.ಶ 1342 ರ ಶೃಂಗೇರಿ ಶಾಸನವು ಮೊದಲನೇ ಹರಿಹರನು, ತನ್ನ ತಮ್ಮಂದಿರು ಮತ್ತು ಕುಟುಂಬದ ಸದಸ್ಯರೊಡನೆ ಶೃಂಗೇರಿಗೆ ಭೇಟಿ ನೀಡಿದ್ದನ್ನು ತಿಳಿಸುತ್ತದೆ.
- ಸಾಳುವ ಮತ್ತು ತುಳುವ ವಂಶದವರು ವೈಷ್ಣವ ಪಂಥೀಯರಾಗಿದ್ದರು. ಅವರು ದ್ವೈತ ಸಿದ್ಧಾಂತವನ್ನು ಮೆಚ್ಚಿದರು. ವ್ಯಾಸತೀರ್ಥರ ಅನುಯಾಯಿಗಳಾಗಿದ್ದರು. ಕನಕದಾಸರು ಮತ್ತು ಪುರಂದರದಾಸರು ಕೃಷ್ಣನ ಮೇಲಿನ ಭಕ್ತಿಯನ್ನು ಭಜನೆಗಳ ಮೂಲಕ ಪ್ರಚಾರ ಮಾಡಿದರು. ಈ ಇಬ್ಬರು ಶ್ರೇಷ್ಠದಾಸರು ಭಕ್ತಿ ಪಂಥವನ್ನು ತಮ್ಮ ಭಜನೆಗೆ ಮೂಲಕ ಬಾಗಿಲಿನಿಂದ ಬಾಗಿಲಿಗೆ ಮುಟ್ಟಿಸಿದರು.
- ಕೃಷ್ಣದೇವರಾಯನು ಉದಯಗಿರಿಯಿಂದ ತಂದ ಬಾಲಕೃಷ್ಣ ಮೂರ್ತಿಯನ್ನು, ದೇವಲಾಯ ಕಟ್ಟಿಸಿ ಪ್ರತಿಷ್ಠಾಪಿಸಿದನು. ಹಜಾರ ರಾಮನ ಗುಡಿಯನ್ನು ಕಟ್ಟಿಸಿದನು. ಹೀಗೆ ವಿಜಯ ನಗರದಲ್ಲಿ ಶೈವ ಮತ್ತು ವೈಷ್ಣವ ಪಂಥಗಳು ಸಮಾನ ಮಹತ್ವವನ್ನು ಪಡೆದವು.

## ಜೈನ ಧರ್ಮ:

- ವಿಜಯನಗರದ ಅರಸರು ಜೈನ ಧರ್ಮಕ್ಕೆ ಉದಾರ ಆಶ್ರಯವನ್ನು ನೀಡಿದರು. ಜೈನರು ಆಡಳಿತ ಮತ್ತು ಮಿಲಿಟರಿಯನ್ನು ಉಚ್ಚ ಹುದ್ದೆಯಲ್ಲಿದ್ದರು. ಬುಕ್ಕರಾಯನ ದಂಡನಾಯಕ ಇರುಗಪ್ಪನು ಜೈನನಾಗಿದ್ದನು. ಜೈನ ವಿದ್ವಾಂಸರಿಗೆ ಅರಸರು ಆಸ್ಥಾನದಲ್ಲಿ ಆಶ್ರಯವನ್ನು ನೀಡಿದರು. ಅವರಿಂದ ಅನೇಕ ಜೈನ ಗ್ರಂಥಗಳೂ ಹೊರಬಂದವು.
- ಸಂಗಮ ವಂಶದ ಮೊದಲನೇ ಬುಕ್ಕದೇವನ ಕಾಲದಲ್ಲಿ ನಡೆದ ಒಂದು ಘಟನೆ ಹಾಗೂ ಅವನು ನೀಡಿ ತೀರ್ಪು ಈ ದಿಸೆಯಲ್ಲಿ ಮಹತ್ವದ್ದಾಗಿದೆ. ಜೈನರಿಗೂ ವೈಷ್ಣವರಿಗೂ ಜಗಳವಾಯಿತಂತೆ. ಜೈನರು ನ್ಯಾಯಾಲಯಕ್ಕೆ ಹೋದರು. ರಾಜನ ನ್ಯಾಯಾಲಯಕ್ಕೆ ಈ ಮೊಕದ್ದಮೆ ಬಂದಿತು. ಆಗ ಬುಕ್ಕದೇವನು ಸದಾ ಸ್ಮರಣೀಯ ತೀರ್ಪನ್ನು ನೀಡಿದನು. ಅವನು "ಜೈನರು ವೈಷ್ಣವರು ರಕ್ಷಿಸತಕ್ಕದ್ದು" ಎಂಬುದು ಅವನು ನೀಡಿದ ತೀರ್ಪು. ಇದು ಅವರ ಧಾರ್ಮಿಕ ನೀತಿಗೆ ಒಂದು ಉದಾರಹಣೆಯಾಗಿದೆ.
- ಎರಡನೇ ದೇವರಾಯನ ಕಾಲದಲ್ಲಿ ಮೂಡಬಿದ್ರಿಯಲ್ಲಿ ಸಾವಿರ ಕಂಬದ ಬಸದಿಯನ್ನು ಕಟ್ಟಲಾಯಿತು ಮತ್ತು ಕಾರ್ಕಳದ ಗೋಮ್ಮಟೇಶ್ವರ ಮೂರ್ತಿಯನ್ನು ಸ್ಥಾಪಿಸಲಾಯಿತು.



downloaded from: www.kpscvaani.com

## ಇಸ್ಲಾಂ ಧರ್ಮ

- ವಿಜಯನಗರ ಸಾಮ್ರಾಜ್ಯ ಸ್ಥಾಪನೆಯೇ, ಮುಸಲ್ಮಾನರ ಆಕ್ರಮಣದಿಂದ ಹಿಂದೂ ಧರ್ಮವನ್ನು ರಕ್ಷಿಸುವುದು. ಆದರೆ ಈ ಅರಸರು ಎಂದು ಇಸ್ಲಾಂ ಧರ್ಮವನ್ನು ದ್ವೇಷಿಸಲಿಲ್ಲ. ಈ ಧರ್ಮದ ಬಗ್ಗೆ ಅನುಚಿತವಾಗಿ ನಡೆದುಕೊಂಡಿಲ್ಲ.
- ಉದಾಹರಣೆಗೆ ಎರಡನೇ ದೇವರಾಯನು ತನ್ನ ಸೈನ್ಯದಲ್ಲಿ ಮುಸಲ್ಮಾನರನ್ನು ಸೇರಿಸಿಕೊಂಡಿದ್ದನ್ನು ಅವನು ಮುಸಲ್ಮಾನರಿಗಾಗಿ ರಾಜಧಾನಿಯಲ್ಲಿ ಒಂದು ಮಸೀದಿಯನ್ನು ಕಟ್ಟಿಸಿದ್ದನು. ಅಲ್ಲದೆ ತನ್ನ ಸಿಂಹಾಸನದ ಮೇಲೆ ಭಗವದ್ಗೀತೆಯ ಮತ್ತು ಕುರಾನಿನ ಪ್ರತಿಗಳನ್ನು ಇಟ್ಟಿದ್ದರು. ಅಂದರೆ ಈ ಧರ್ಮಗಳಿಗೆ ಸಮಾನ ಅವಕಾಶವನ್ನು ಕಲ್ಪಿಸಿದ್ದನು.
- ಅಳಿಯ ರಾಮರಾಯಣ ತನ್ನ ಸೈನ್ಯದಲ್ಲಿ ಇಬ್ಬರು ಸೇನಾಧಿಪತಿಗಳನ್ನು ನೇಮಿಸಿಕೊಂಡಿದ್ದನು.

## ಕ್ರಿಶ್ಚಿಯನ್ ಧರ್ಮ:

- ವಿಜಯನಗರದ ಅರಸರು ಕ್ರಿಶ್ಚಿಯನ್ ಧರ್ಮೀಯರನ್ನು ಉದಾರವಾಗಿ ನೋಡಿದರು. ಗೋವಾ ಬಹಮನಿಯರ ವಶದಲ್ಲಿತ್ತು. ಪೋರ್ಚುಗೀಸರು 1510ರಲ್ಲಿ ಗೋವಾವನ್ನು ವಶಪಡಿಸಿಕೊಂಡರು. ಆಗ ಕೃಷ್ಣದೇವರಾಯನು ಪೋರ್ಚುಗೀಸರಿಗೆ ಶುಭಾಶಯಗಳನ್ನು ಕಳಿಸಿದನು. ಭಟ್ಕಳದಲ್ಲಿ ಕೋಟೆ ಕಟ್ಟಿಸಲು ಪೋರ್ಚುಗೀಸರಿಗೆ ಅನುಮತಿ ನೀಡಿದನು. ಪೋರ್ಚುಗೀಸರು ಅರೇಬಿಯದ ಯುದ್ಧಾಶ್ವಗಳನ್ನು ವಿಜಯನಗರಕ್ಕೆ ಮಾತ್ರ ಪೂರೈಸುವ ಒಪ್ಪಂದ ಮಾಡಿಕೊಳ್ಳಲಾಯಿತು. ಚಂದ್ರಗಿರಿಯಲ್ಲಿ ಪೋರ್ಚುಗೀಸ್ ಮಿಶನರಿಗಳು ಎರಡನೇ ವೆಂಕಟನ ಆಸ್ಥಾನಕ್ಕೆ ಭೇಟಿ ನೀಡಿದಾಗ ಅವನು ಮಿಶನರಿಗಳನ್ನು ಸ್ವಾಗತಿಸಿದ ರೀತಿ ಹೇಗಿತ್ತೆಂದರೆ, ರಾಜನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೇಗಿತ್ತೆಂದರೆ, ರಾಜನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಮಾಡಬಹುದೇನೋ ಎಂದು ಅವರಿಗೆ ಅನಿಸಿತು.
- "ಬಾರ್ಬೋಸಾ ವಿಜಯನಗರಕ್ಕೆ ಬಂದು ಹೋಗುವವರಿಗೆ ತುಂಬಾ ಸ್ವಾತಂತ್ರ್ಯವಿತ್ತು. ಅವರು ತಮ್ಮ ತಮ್ಮ ಧರ್ಮಗಳ ರೀತಿ ನೀತಿಗಳನ್ನು ಅನುಸರಿಸಬಹುದಾಗಿತ್ತು." ಎಂದು ಹೇಳಿದ್ದಾನೆ. ಹೀಗೆ ವಿಜಯನಗರದಲ್ಲಿ ರಾಜರು ಧಾರ್ಮಿಕ ಸಮನ್ವಯ ನೀತಿಯನ್ನು ಅನುಸರಿಸಿದರು.



downloaded from: www.kpscvaani.com

## ವಿಜಯನಗರದಲ್ಲಿ ನವರಾತ್ರಿ ಉತ್ಸವ:

- ವಿಜಯನಗರ ಸಾಮ್ರಾಜ್ಯದಲ್ಲಿ ಅತ್ಯಂತ ವೈಭವದಿಂದ ನಡೆಯುತ್ತಿದ್ದ ನವರಾತ್ರಿ ಉತ್ಸವವನ್ನು ನೋಡಲು ದೇಶದ ನಾನಾ ಭಾಗಗಳಿಂದ ಹಾಗೂ ವಿದೇಶಗಳಿಂದ ಜನರು ಆಗಮಿಸುತ್ತಿರುವ ಡೊಮಿಂಗೂ ಪಾಯಸ್ ತನ್ನ ಬರಹದಲ್ಲಿ ವಿಜಯನಗರದ ನವರಾತ್ರಿ ಉತ್ಸವದ ವಿವರಣೆಯನ್ನು ನೀಡಿದ್ದಾನೆ.
- ನವರಾತ್ರಿ ಉತ್ಸವ ನಡೆಯುವ ವಿಶಾಲವಾದ ಸ್ಥಳದಲ್ಲಿ ಸುಂದರವಾದ ಮಂಟಪವಿರುತ್ತಿತ್ತು. ಮಂಟಪದ ಮಧ್ಯೆ ರತ್ನ ಖಚಿತವಾದ ಸಿಂಹಾಸವಿರುತ್ತಿತ್ತು. ರಾಜನು ಸಿಂಹಾಸನವನ್ನು ಏರಿದೊಡನೆ ಪರಿವಾರದವರು ವಂದಿಸುತ್ತಿದ್ದರು. ದರ್ಬಾರಿನ ಮಲ್ಲರು ರಾಜನ ಮುಂದೆ ನೆಲದಲ್ಲಿ ಕುಳಿತುಕೊಳ್ಳುತ್ತಿದ್ದರು. ಸಾಮಂತರು ಮತ್ತು ಸೇನಾ ಮುಖ್ಯರು ರಾಜನ ಮುಂದೆ ನಿಲ್ಲುತ್ತಿದ್ದರು.
- ಕೃಷ್ಣದೇವರಾಯನ ಪಕ್ಕದಲ್ಲಿ ಮೈಸೂರು ಒಡೆಯರಾದ ಕುಮಾರ ವೀರರು ಕುಳಿತುಕೊಳ್ಳುತ್ತಿದ್ದರು. ಉಳಿದವರು ರಾಜನ ಹಿಂಗಡೆ (ನಂತರ) ಆಸೀನರಾಗಿರುತ್ತಿದ್ದರು.
- ಸಿಂಹಾಸನದ ಸಮೀಪ ಉತ್ತರ ದಿಕ್ಕಿಗೆ ಮುಖವಾಗಿ ರಾಜಮನೆತನದ ದೇವರನ್ನು ಇಡುತ್ತಿದ್ದರು. ರಾಜನ ಮಗ್ಗುಲಲ್ಲಿ ರಾಜ ಚಿಹ್ನೆಯನ್ನು ಖಡ್ಗ ಮತ್ತು ತಾಂಬೂಲಗಳನ್ನು ಹಿಡಿದು ನಿಲ್ಲುತ್ತಿದ್ದರು. ರಾಜನು ಜರತಾರಿ ಪೇಠವನ್ನು ಶುಭ್ರವಾದ ವಸ್ತ್ರಗಳನ್ನು ತೊಟ್ಟು ವಿಧ ವಿಧಗಳ ಆಭರಣಗಳನ್ನು ತೊಡುತ್ತಿದ್ದನು.
- ಸೇನಾಪತಿಗಳು, ದಂಡನಾಯಕರು ಮತ್ತು ಧನುರ್ಧಾರಿಗಳು ಹೊರಗಿನಿಂದ ಬಂದು ರಾಜನಿಗೆ ನಮಸ್ಕರಿಸಿ, ಆಸೀನರಾಗುತ್ತಿದ್ದರು.
- ಅನಂತರ ನರ್ತಕಿಯರಿಂದ ನರ್ತನ ಪ್ರಾರಂಭವಾಗುತ್ತಿತ್ತು. ಆ ಬಳಿಕ ಮಲ್ಲಯುದ್ಧವು ನಡೆಯುತ್ತಿತ್ತು. ರಾತ್ರಿ ಪಂಜುಗಳನ್ನು ಉರಿಸುತ್ತಿದ್ದರು.
- ಇಂದ್ರಜಾಲಕರು, ಮಾಂತ್ರಿಕರು ಮತ್ತು ಅಶ್ವಾರೋಹಿಗಳ ಪ್ರದರ್ಶನಗಳು ನಡೆಯುತ್ತಿದ್ದವು.
- ನಂತರ ರಥಗಳು ಮತ್ತು ಅಶ್ವಾರೋಹಿಗಳು ರಾಜನ ಮುಂದೆ ನಿಲ್ಲುತ್ತಿದ್ದರು. ರಾಣಿಯರು, ದಾಸಿಯರ ಮೂಲಕ ಕುಂಭದಾರತಿಗಳನ್ನು ಬೆಳಗಿಸುತ್ತಿದ್ದರು.
- ನಂತರ ಬೆಳ್ಳಿ ಬೆತ್ತವನ್ನು ಹಿಡಿದು ಬಾರುಕೋಲು ಹಿಡಿದ ಸುಂದರಿಯರು, ಅವರ ಹಿಂದೆ ಸುಂದರಿಯರ ಗುಂಪುಗಳು, ವಾದ್ಯಗಳನ್ನು ನುಡಿಸುತ್ತಿದ್ದರು ನಂತರ ಬಂಗಾರದ ಕೊಡಗಳ ಮೇಲೆ ದೀಪವಿಟ್ಟ ಸುಂದರಿಯರು ಬರುತ್ತಿದ್ದರು. ಅವರು ರಾಜನಿಗೆ, ಪರಿವಾರಕ್ಕೆ ಮತ್ತು ಆನೆ – ಕುದುರೆಗಳಿಗೆ ಆರತಿ ಎತ್ತುತ್ತಿದ್ದರು.
- ಆ ಬಳಿಕ ಆನೆಗಳ ದಳದಿಂದ ರಾಜ ವಂದನೆ ನಡೆಯುತ್ತಿತ್ತು. ರಾಜನು ಒಳನಡೆದ ಮೇಲೆ ಪೀಠದಲ್ಲಿಟ್ಟ ಪ್ರತಿಮೆಯನ್ನು ಒಳಕ್ಕೆ ಒಯ್ದು ರಾಜನು ಪೂಜಿಸುತ್ತಿದ್ದನು. ದೇವನ ಪ್ರೀತ್ಯರ್ಥವಾಗಿ ಕೋಣಗಳನ್ನು ಕುರಿಗಳನ್ನು ಕಡಿಯುತ್ತಿದ್ದರು.



downloaded from: www.kpscvaani.com

- ರಾಜನೂ, ಪರಿವಾರದವರೂ ನವರಾತ್ರಿಯಲ್ಲಿ ಪೂಜೆ ಆಗುವವರೆಗೆ ಬೆಳಗಿನಿಂದಲೂ ಉಪವಾಸ ಇರುತ್ತಿದ್ದರು. ಕೊನೆಯ ದಿನ 250 ಕೋಣಗಳನ್ನು 4500 ಕುರಿಗಳನ್ನು ದೇವತೆಗೆ ಅರ್ಪಿಸುತ್ತಿದ್ದರು.
- ಅನಂತರ ರಾಜರು ರಾಯಭಾರಿಗಳಿಗೆ, ಮಾಂಡಲಿ, ಸೇನಾಪತಿಗಳಿಗೆ, ಮಂತ್ರಿಗಳಿಗೆ ಬೆಲೆ ಬಾಳುವ ಉಡುಗೊರೆಗಳನ್ನು ನೀಡುತ್ತಿದ್ದರು. ಹೀಗೆ ವಿಜಯನಗರದ ನವರಾತ್ರಿ ಉತ್ಸವ ಅಮೋಘವಾಗಿತ್ತು.
- ನವರಾತ್ರಿ ಉತ್ಸವದ ಮೆರವಣಿಗೆಯ ಬಗ್ಗೆ ಡೊಮಿಂಗೊ ಪಾಯಸ್ ಈ ರೀತಿ ಬರೆದಿದ್ದಾನೆ.
- ನವರಾತ್ರಿಯಲ್ಲಿ ಉತ್ಸವವು ಪ್ರತಿದಿನ ಮಧ್ಯಾಹ್ನ ಮೂರು ಗಂಟೆಗೆ ಪ್ರಾರಂಭವಾಗುತ್ತಿತ್ತು. ರಾತ್ರಿಯಲ್ಲಿ ಕಾರ್ಯಕ್ರಮಗಳು ಸಾಂಗವಾಗಿ ನೆರವೇರುತ್ತವೆ. ಎಲ್ಲಾ ಕಡೆಗೂ ಪ್ರಖರವಾಗಿ ಬೆಳಗುವ ದೀಪಗಳಿರುತ್ತಿದ್ದವು. ಅರಸನು ಪೀಠದಲ್ಲಿ ಅಲಂಕರಿಸಿದಾಗ ಆಡಳಿತಗಾರರು. ಸಾಮಂತರು, ಪಾಳಯಗಾರರು ಸಭೆಯಲ್ಲಿ ಕುಳಿತುಕೊಳ್ಳುತ್ತಾರೆ. ಅಸಂಖ್ಯ ಪ್ರಜೆಗಳು ಈ ಉತ್ಸವದಲ್ಲಿ ಭಾಗವಹಿಸುತ್ತಿದ್ದರು.
- ಸಾಂಪ್ರದಾಯಿಕವಾಗಿ ಈ ಉತ್ಸವ ನೃತ್ಯದಿಂದ ಪ್ರಾರಂಭವಾಗುತ್ತದೆ. ಸ್ತ್ರೀಯರ ಆಭರಣಗಳು ವರ್ಣಿಸಲು ಅಸಾಧ್ಯವಾದಷ್ಟು ವೈವಿಧ್ಯತೆಗಳಿಂದ ಕೂಡಿರುತ್ತಿದ್ದವು ಸುಂದರವಾದ ಸ್ತ್ರೀಯರು ಅಲಂಕಾರಗಳಿಂದ ಶೋಭಿಸುತ್ತಿದ್ದರು.
- ನೃತ್ಯದ ನಂತರ ಕುಸ್ತಿ ಕಾಳಗಳು ನಡೆಯುತ್ತಿದ್ದವು. ರಥದ ಮೆರವಣಿಗೆಯ ಹಿಂದೆ ಅರಸನು ಅಶ್ವಾರೂಢನಾಗಿ ಹಿಂಬಾಲಿಸುತ್ತಿದ್ದನು. ಉತ್ಸಾಹ ಭರಿತ ಪ್ರಜೆಗಳು ಈ ಮೆರವಣಿಗೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಎಂದು ಪಾಯಾಸ್ ಬರೆದಿದ್ದಾನೆ.
- ವಿಜಯನಗರದ ಅರಸರು ದಸರಾ ಉತ್ಸವನ್ನು ಇಡೀ ರಾಜ್ಯದ ಉತ್ಸವವನ್ನಾಗಿ ಆಚರಿಸುತ್ತಿದ್ದರು. ಬಿಜಾಪುರದ ಇಸ್ಮಾಯಿಲ್ ಆದಿಲ್‌ಶಹದೊಡನೆ ಯುದ್ದ ಮಾಡುವಾಗ ತನಗೆ ಸಹಾಯ ಮಾಡಿದ ಪೋರ್ಚುಗೀಸರನ್ನು ಕೃಷ್ಣದೇವರಾಯನು ದಸರಾ ಉತ್ಸವದಲ್ಲಿ ಉಡುಗೊರೆ ನೀಡಿ ಸನ್ಮಾನಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.



downloaded from: www.kpscvaani.com

## ಸಂಸ್ಕೃತ ಸಾಹಿತ್ಯ:–

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಸಂಸ್ಕೃತ ಸಾಹಿತ್ಯವು ಅವ್ಯಾಹತವಾಗಿ ಬೆಳೆಯಿತು.

- **ಸಾಯಣಾಚಾರ್ಯರು:** ವೇದಾರ್ಥ ಪ್ರಕಾಶ. ಆಯುರ್ವೇದ ಸುಧಾನಿಧಿ, ಯಜ್ಞತಂತ್ರ ಸುಧಾನಿಧಿ, ಪ್ರಾಯಶ್ಚಿತ್ತ ಮತ್ತು ಪುರುಷಾರ್ಥ ಸುಧಾನಿಧಿ ಮುಂತಾದ ಅನೇಕ ಗ್ರಂಥಗಳನ್ನು ಬರೆದರು.
- **ಗಂಗಾಂಬಿಕ** : ಇವಳು ಕಂಪಣರಾಯನ ಪತ್ನಿ, ತನ್ನ ಪತಿಯ ಮಧುರಾದ ಮೇಲೆ ದಾಳಿ ನಡೆಸಿದಾಗ ಪತಿಯ ಜೊತೆಯಲ್ಲಿಯೇ ಮಧುರಾಕ್ಕೆ ಹೋಗಿ, ಮಧುರಾ ಸುಲ್ತಾನನೊಡನೆ ನಡೆದ ಯುದ್ಧವನ್ನು ಕಣ್ಣಾರೆ ನೋಡಿ 'ಮಧುರಾ ವಿಜಯಂ' ಎಂಬ ಗ್ರಂಥವನ್ನು ಬರೆದಳು ಈ ಗ್ರಂಥವು ವಿಜಯನಗರದ ಪ್ರಾರಂಭಿಕ ಇತಿಹಾಸವನ್ನು ತಿಳಿಯಲು ಮುಖ್ಯ ಆಧಾರ ಗ್ರಂಥವಾಗಿದೆ. ವಿಜಯನಗರ ಸ್ಥಾಪನೆಯ ಬಗ್ಗೆ, ಒಂದನೆ ಹರಿಹರ ಮತ್ತು ಒಂದನೇ ಬುಕ್ಕದೇವನ ಬಗ್ಗೆ ಇವಳು ಬರೆದಳು. ಬುಕ್ಕದೇವನನ್ನು ಪೂರ್ಣಚಂದ್ರನಿಗೆ ಹೋಲಿಸಿದ್ದಾಳೆ.
- **ದಂಡದಿಂಡಿಗ** : ಇವನು ಎರಡನೇ ದೇವರಾಯನ ಆಸ್ಥಾನ ಕವಿಯಾಗಿದ್ದನು. ಇವನು 'ಮಹಾನಾಟಕ ಸುಧಾನಿಧಿ' ಎಂಬ ಗ್ರಂಥವನ್ನು ಬರೆದನು.
- **ವಾಮನಭಟ್ಟ** : ಇವನು ಒಂದನೆಯ ಹರಿಹರನ ಕಾಲದಲ್ಲಿ 'ವೇಮಭೂಪಾಲ ಚರಿತೆ'ಯನ್ನು ಬರೆದನು.
- **ರಾಜನಾಥ ಡಿಂಡಿಮ:** ಇವನು ಸಾಳುವ ನರಸಿಂಹನ ಆಸ್ಥಾನ ಕವಿಯಾಗಿದ್ದನು. 'ಸಾಳುವಾಭ್ಯುದಯಂ' ಎಂಬ ಗ್ರಂಥವನ್ನು ಬರೆದನು. ಇದು ಐತಿಹಾಸಿಕ ಗ್ರಂಥವಾಗಿದ್ದು ಸಾಳುವ ವಂಶದ ಚರಿತ್ರೆಯನ್ನು ತಿಳಿಯಲು ಆಧಾರ ಗ್ರಂಥವಾಗಿದೆ.
- **ಗೋವಿಂದ ದೀಕ್ಷಿತ** : ಇವನು ಸಾಹಿತ್ಯ ಸುಧಾ ಎಂಬ ಗ್ರಂಥವನ್ನು ಬರೆದನು. ಈ ಗ್ರಂಥವು ತಂಜಾಪೂರು ಅರಸರ ಚರಿತ್ರೆಯನ್ನು ತಿಳಿಸುತ್ತದೆ.
    - ಯಜ್ಞ ನಾರಾಯಣನು 'ಸಾಹಿತ್ಯ ರತ್ನಾಕರ'ವನ್ನು ರಚಿಸಿದನು.
    - **ವಿದ್ಯಾರಣ್ಯರು** 'ಶಂಕರ ವಿಜಯ' ವನ್ನು ಬರೆದರು.
    - **ಇಮ್ಮಡಿ ದೇವರಾಯ** : ಎರಡನೆ ದೇವರಾಯನು ಸ್ವತಃ ವಿದ್ವಾಂಸನಾಗಿದ್ದನು. ಇವರು 'ರತಿರತ್ನ ಪ್ರದೀಪಿಕಾ'ವನ್ನು ಬರೆದನು.
    - **ವಿದ್ಯಾನಾಥ** : ಇವನು ಇನ್ನೊಬ್ಬ ಶ್ರೇಷ್ಠ ವಿದ್ವಾಂಸನಾಗಿದ್ದು
        - ಬಾಲಭಾರತ
        - ಕೃಷ್ಣಚರಿತ



downloaded from: www.kpscvaani.com

GNANADHARE IAS ACADEMY

- ರಾಜಧಾನಿಚರಿತ
- ವಿರೂಪಾಕ್ಷ ವಸಂತೋತ್ಸವಗಳನ್ನು ಬರೆದನು.

o **ಕೃಷ್ಣದೇವರಾಯ:** ಚಕ್ರವರ್ತಿ ಕೃಷ್ಣದೇವರಾಯನು ಘನ ವಿದ್ವಾಂಸನಾಗಿದ್ದನು. ಅವನು ಸಂಸ್ಕೃತದಲ್ಲಿ

- ಮದಾಲಸ ಚರಿತ
- ಸತ್ಯವಧೂ ಪರಿಣಯ
- ಸಕಲ ಕಥಾಸಾರ ಸಂಗ್ರಹ
- ಜ್ಞಾನ ಚಿಂತಾಮಣಿಗಳನ್ನು ಬರೆದನು.

o ಗೋಪತಿಪ್ಪನು 'ಕಾವ್ಯಾಲಂಕಾರ ಕಾಮಧೇನು' ಬರೆದನು ಹೀಗೆ ಇನ್ನು ಅನೇಕ ವಿದ್ವಾಂಸರು ತಮ್ಮ ಕೃತಿಗಳನ್ನು ರಚಿಸಿದರು.

- **ಸಂಸ್ಕೃತ ನಾಟಕಗಳು:**
  ಸಂಸ್ಕೃತದಲ್ಲಿ ಅನೇಕ ನಾಡಕಗಳು ಬರೆಯಲ್ಪಟ್ಟವು.
  1. ವಾಮನ ಭಟ್ಟನು;–
     i. ಶೃಂಗಾರ ಭೂಷಣ ಬಾಣ
     ii. ಪಾರ್ವತೀ ಪರಿಣಯ
     iii. ಕನಕಲೇಖಾಗಳನ್ನು ಬರೆದನು.
  2. **ವಿರೂಪಾಕ್ಷನು**
     i. ನಾರಾಯಣ ವಿಲಾಸ
     ii. ಉನ್ಮತ್ತ ರಾಘವಗಳನ್ನು ಬರೆದನು.
  3. ಕುಮಾರ ಡಿಂಡಿಮ– ದಕ್ಷ ಯಜ್ಞವನ್ನು
  4. ಶ್ರೀನಿವಾಸ ದೀಕ್ಷಿತ – ಭಾಮಿನಿ ಪರಿಣಯಗಳನ್ನು ಬರೆದರು.
- **ಸಂಗೀತ ಗ್ರಂಥಗಳು**
  1. ವಿದ್ಯಾರಣ್ಯರು –ಸಂಗೀತಸಾರವನ್ನು
  2. ಗೋಪತಿಪ್ಪ – ತಾಳದೀಪಿಕಾವನ್ನು
  3. ದೇವಣ್ಣಚಾರ್ಯ – ಸಂಗೀತ ಸರ್ವೋದಯವನ್ನು
  4. ಲಕ್ಷ್ಮೀನಾರಾಯಣ – ಸಂಗೀತ ಸರ್ವೋದಯವನ್ನು
  5. ರಾಮಾದಿತ್ಯ – ಸ್ವರ – ಮೇಳ ಕಲಾನಿಧಿಯನ್ನು ಬರೆದರು.



downloaded from: www.kpscvaani.com

ಹೀಗೆ ವಿಜಯನಗರದ ಕಾಲವು ಸಂಸ್ಕೃತ ಸಾಹಿತ್ಯದ ಸುಗ್ಗಿಯೇ ಆಯಿತು.

## ಕನ್ನಡ ಸಾಹಿತ್ಯ

ವಿಜಯನಗರದ ಕಾಲದಲ್ಲಿ ಕನ್ನಡ ಗ್ರಂಥಗಳೂ ದೊಡ್ಡ ಪ್ರಮಾಣದಲ್ಲಿ ಹೊರಬಂದವು ಕೆಲವೇ ಕೆಲವು ಉದಾಹರಣೆಗಳನ್ನು ಮಾತ್ರ ಇಲ್ಲಿ ನೀಡಲಾಗಿದೆ.

- **ಮಂಗರಾಜ:** ಇವನು ಖಗೇಂದ್ರಮಣಿ ದರ್ಪಣವನ್ನು ಬರೆದನು.
- **ಜೈನಮಧುರ ಕವಿ:** ಇವನು ಎರಡನೇ ದೇವರಾಯನ ಆಸ್ಥಾನದಲ್ಲಿದ್ದನು. 'ಧರ್ಮನಾಥ ಪುರಾಣ'ವನ್ನು ಬರೆದನು.
- **ದೇವರಾಜ:** ಸಾಂಗತ್ಯ ಕಾವ್ಯವನ್ನು ಬರೆದನು. ಇವನ 'ಸೊಬಗಿನ ಸೋನೆ' ಪ್ರಸಿದ್ಧವಾಗಿದೆ.
- **ಲಕ್ಕಣ್ಣ ದಂಡೇಶ:** ಇವನು ಮಂತ್ರಿಯಾಗಿದ್ದನು 'ಶಿವತತ್ವ ಚಿಂತಾಮಣಿ'ಯನ್ನು ಬರೆದನು.
- **ಚಾಮರಸ:** ಪ್ರಭುಲಿಂಗಲೀಲೆ ಇವನ ಪ್ರಸಿದ್ದ ಗ್ರಂಥವಾಗಿದೆ.
- **ಮಲ್ಲಣಾರ್ಯ:** 'ವೀರಶೈವ ಚರಿತಾಮೃತ'ವನ್ನು ರಚಿಸಿದನು.
- **ನಂಜುಂಡ ಕವಿ:** ಇವನು ಕುಮಾರ ರಾಮನ ಕಥೆಯನ್ನು ಬರೆದನು. ಈ ಗ್ರಂಥವು ವಿಜಯನಗರ ರಾಜ್ಯಸ್ಥಾಪಕರ ಮೂಲವನ್ನು ಚರ್ಚಿಸಲು ಸಹಾಯಕವಾಗಿದೆ.
- **ವ್ಯಾಸರಾಯರು:** ಕೀರ್ತನೆಗಳನ್ನು ಬರೆದರು.
- **ಕನಕದಾಸರು :** ಭಕ್ತಿ ಪಂಥವನ್ನು ಬೆಳೆಸಿದರು. ಶ್ರೀ ಕೃಷ್ಣನ ಮೇಲಿನ ಅನನ್ಯ ಭಕ್ತಿಯೇ ಮೋಕ್ಷ ಸಾಧನೆಗೆ ದಾರಿಯೆಂದು ಅನೇಕ ಗ್ರಂಥಗಳಲ್ಲಿ ಪ್ರಚುರ ಪಡಿಸಿದರು. ಅವರು
  1) ಹರಿಭಕ್ತ ಸಾರ, 2) ರಾಮಧ್ಯಾನ ಚರಿತ 3) ನಳ ಚರಿತ್ರೆ 4) ಮೋಹನ ತರಂಗಿಣಿಗಳನ್ನು ಬರೆದರು.
- **ಬೀಮಕವಿ:** ಬಸವ ಪುರಾಣವನ್ನು ರಚಿಸಿದನು.
- **ಎರಡನೇ ಮಂಗರಸ :** ಅಭಿನವ ನಿಘಂಟನ್ನು ರಚಿಸಿದನು.
- **ಆಯತವರ್ಮ:** ಕನ್ನಡರತ್ನ ಕರಂಡಕವನ್ನು ರಚಿಸಿದನು.
- **ಭಾಸ್ಕರ :** ಜೀವಂಧರ ಚರಿತವನ್ನು ಬರೆದರು.
- ಕುಮಾರವ್ಯಾಸನು ಗದುಗಿನ ಭಾರತವನ್ನು ಬರೆದನು. ಇದು ಕನ್ನಡದಲ್ಲಿ ಅತ್ಯಂತ ಜನಪ್ರಿಯ ಗ್ರಂಥವಾಗಿದೆ.
- ಶ್ರೀಪಾದರಾಯರು ಸಾಳ್ವನರಸಿಂಹನ ಕಾಲದವರಾಗಿದ್ದರು. ಅವರು ಅನೇಕ ಕೀರ್ತನೆಗಳನ್ನು ಬರೆದರು.



downloaded from: www.kpscvaani.com

- ಎಮ್ಮೆ ಬಸವನು ಕಾಲಜ್ಞಾನ ಕೃತಿಯನ್ನು ರಚಿಸಿದನು.
- **ರತ್ನಾಕರವರ್ಣಿ:** ಭರತೇಶ ವೈಭವ ಎಂಬ ಗ್ರಂಥವನ್ನು ಬರೆದು ಪ್ರಸಿದ್ಧನಾದನು.
- ವಾದಿರಾಜರು ಉಗಾಭೋಗಗಳನ್ನು ಬರೆದರು.

## ತೆಲಗು ಸಾಹಿತ್ಯ

ತೆಲಗು ಪ್ರದೇಶಕ್ಕೂ ವಿಜಯನಗರಕ್ಕೂ ನಿಕಟವಾದ ಸಂಬಂಧವಿತ್ತು. ಕೃಷ್ಣದೇವರಾಯನ ಆಸ್ಥಾನದಲ್ಲಿ:–

- ಅಲಾಸಾನಿ ಪೆದ್ದಣ
- ತೆನ್ನಾಲಿ ರಾಮಕೃಷ್ಣ
- ತಿಮ್ಮಣ ಕವಿ
- ರಾಮಭದ್ರ
- ದೂರ್ಜಟಿ,
- ಸೂರಣ್ಣ
- ಮಲ್ಲಣ್ಣ
- ರಾಮರಾಜ ಭೂಷಣ–ಎಂಬ ಎಂಟು ಮಂದಿ ವಿದ್ವಾಂಸರಿಗೆ ಅಷ್ಟದಿಗ್ಗಜಗಳು ಎಂಬ ಹೆಸರಿತ್ತು.

- o **ಶ್ರೀನಾಥ:** ಇವನು ತೆಲಗು ಕವಿಯಾಗಿದ್ದನು. ವಿಜಯನಗರದ ಎರಡನೇ ದೇವರಾಯನ ಆಸ್ಥಾನದಲ್ಲಿದ್ದನು. ಕವಿ ಚಕ್ರವರ್ತಿ ಎಂಬ ಬಿರುದು ಅವನಿಗಿತ್ತು. ರಾಜನು ಈ ಕವಿಗೆ ಕನಕಾಭಿಷೇಕ ಮಾಡಿ ಗೌರವಿಸಿದನು.
- o **ಕೃಷ್ಣದೇವರಾಯ:** ಕೃಷ್ಣದೇವರಾಯನು ತೆಲಗು ಭಾಷೆಯಲ್ಲಿ ಕೂಡ ಉದ್ದಾಮ ಪಂಡಿತನಾಗಿದ್ದನು 'ಅಮುಕ್ತ ಮೌಲ್ಯದ' ಎಂಬ ತೆಲಗು ಕೃತಿಯನ್ನು ಅವನು ರಚಿಸಿದನು. ಇದು ರಾಜನೀತಿ ಶಾಸ್ತ್ರದ ಕೃತಿಯಾಗಿದೆ.
- o **ಅಲಸಾನಿ ಪೆದ್ದಣ:** ಇವನು ಕೃಷ್ಣದೇವರಾಯನ ಆಸ್ಥಾನ ಕವಿಯಾಗಿದ್ದನು. ಇವನಿಗೆ 'ಆಂಧ್ರ ಕವಿ ಪಿತಾಮಹ' ಎಂಬ ಬಿರುದು ಇತ್ತು. ಇವನು 'ಮನುಚರಿತಮು' ಎಂಬ ಗ್ರಂಥವನ್ನು ಬರೆದನು.
- o **ತೆನಾಲಿ ರಾಮಕೃಷ್ಣ:** ಇವನು ಹಾಸ್ಯ ಕವಿಯಾಗಿದ್ದನು. ಉದ್ಭಟಾಚಾರ್ಯ ಚರಿತಂ ಮತ್ತು 'ಪಾಂಡುರಂಗ ಮಹಾತ್ಮಂ' ಎಂಬ ಗ್ರಥಗಳನ್ನು ಬರೆದನು.
- o **ತಿಮ್ಮಣ್ಣನು:** ಇವನು ಪಾರಿಜಾತಾಪರಣಂ ಎಂಬ ಗ್ರಂಥವನ್ನು ಬರೆದನು.

GNANADHARE IAS ACADEMY



downloaded from: www.kpscvaani.com

- **ರಾಮಭದ್ರ :** ಇವನು 'ರಾಧಾಮಾಧವಂ' ಬರೆದನು.
- **ದೂರ್ಜಟಿ :** ಕಾಳಹಸ್ತಿ ಶತಕವನ್ನು ಬರೆದನು.
- **ಪಿಂಗಳಿ ಸೂರಣ್ಣ :** ಕಾಲಪೂರ್ಣೋದಯಂ ಗ್ರಂಥವನ್ನು ಬರೆದನು.
- **ರಾಮರಾಜ ಭೂಷಣ:** ವಸುಚರಿತಂ ಎಂಬ ಗ್ರಂಥವನ್ನು ಬರೆದನು.

ಹೀಗೆ ವಿಜಯನಗರದ ಕಾಲದಲ್ಲಿ ತೆಲುಗು ಸಾಹಿತ್ಯವೂ ಬೆಳೆಯಿತು.

## ತಮಿಳು ಸಾಹಿತ್ಯ

ಕೃಷ್ಣದೇವರಾಯನ ಆಸ್ಥಾನದಲ್ಲಿ ತಮಿಳು ಕವಿಗಳೂ ಇದ್ದರು.

1. ಕುಮಾರ ಸರಸ್ವತಿಯು ರಾಯ ಮತ್ತು ಜಗನ್ಮೋಹಿನಿ ವಿವಾಹದ ಕುರಿತು ಬರೆದನು.
2. ಮಂಡಲಪುರುಷ
3. ಜ್ಞಾನಪ್ರಕಾಶ
4. ಹರಿಹರ–ಎಂಬ ತಮಿಳು ಕವಿಗಳು ಇದ್ದರು.

ಈ ರೀತಿಯಲ್ಲಿ, ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಸಂಸ್ಕೃತ, ಕನ್ನಡ, ತೆಲಗು ಭಾಷೆಗಳಲ್ಲಿ ಅನೇಕ ಕೃತಿಗಳು ಬಂದವು.

## ಕಲೆಯ ಬೆಳವಣಿಗೆ

ವಿಜಯನಗರ ಶೈಲಿಯ ಲಕ್ಷಣಗಳು:

- ವಿಜಯನಗರದ ಶಿಲ್ಪಿಗಳು ತಮ್ಮ ಕಲಾಕೃತಿಗಳಲ್ಲಿ ಹಾಗೂ ದೇವಾಲಯಗಳ ನಿರ್ಮಾಣದಲ್ಲಿ ಚಾಲುಕ್ಯ, ಪಲ್ಲವ, ಚೋಳ ಮತ್ತು ಹೊಯ್ಸಳ ಶೈಲಿಗಳ ಅನೇಕ ಅಂಶಗಳನ್ನು ಅಳವಡಿಸಿಕೊಂಡಿದ್ದರು.
- ವಿಜಯನಗರದ ದೇವಾಲಯ ಶಿಲ್ಪದಲ್ಲಿ ದ್ರಾವಿಡ ಶೈಲಿಯ ಮುಂದುವರಿದ ಲಕ್ಷಣಗಳನ್ನು ಕಾಣಬಹುದು. ಈ ಕಾಲದ ದೇವಾಲಯಗಳ ಕಂಬಗಳಲ್ಲಿ ಮತ್ತು ಚಾಚು ಪೀಠಗಳಲ್ಲಿ ಸೌಂದರ್ಯ ಮತ್ತು ಸಂಕೀರ್ಣತೆಯನ್ನು ಕಾಣಬಹುದು. ಕಂಬಗಳಲ್ಲಿ ಮೂರು ವಿಧಗಳನ್ನು ವಿದ್ವಾಂಸರು ಗುರುತಿಸಿದ್ದಾರೆ.
  - ಕಂಬಗಳನ್ನು ಕಡೆದು, ಅವುಗಳಲ್ಲಿ ಚಿಕ್ಕ ಚಿಕ್ಕ ಕಂಬಗಳನ್ನು ಮತ್ತೆ ಕೊರೆದು ಅಲಂಕರಿಸುವುದು ಒಂದು ರೀತಿ ಕುದುರೆಯ ಅಥವಾ ಇತರ ಪ್ರಾಣಿಗಳ ಆಕಾರದಲ್ಲಿ ಕಂಬಗಳನ್ನು ಕಂಡರಿಸಿ, ಅದರ ಸುತ್ತ ಸುಂದರವಾದ ಕೆತ್ತನೆಗಳನ್ನು ಕೊರೆಯುವುದು ಇನ್ನೊಂದು ರೀತಿ.
  - ಚಿಕ್ಕ ಚಿಕ್ಕ ಗೋಪುರಗಳು ಆಕಾರದಲ್ಲ ಕಂಬಗಳನ್ನು ಕೆತ್ತಿ ಮುಂದುವರಿಸಿಕೊಂಡು ಹೋಗುವುದು ಮತ್ತೊಂದು ರೀತಿ.



downloaded from: www.kpscvaani.com

- ಎಂಟು ಅಥವಾ ಹದಿನಾರು ಮೂಲೆಗಳುಳ್ಳ ಕಂಬಗಳೂ ಇದ್ದವು. ಈ ಎಲ್ಲಾ ಕಂಬಗಳಲ್ಲಿ 1. ಬೋದಿಗೆಗಳು, 2. ಚಾಚು ಪೀಠಗಳು, 3. ಅವುಗಳ ಮೇಲೆ ಅಲಂಕಾರಗಳು ಇವೆ.
- ಚಾಚು ಪೀಠದ ತುದಿಗಳು ಕಮಲದ ಮೊಗ್ಗಿನ ಹಾಗೆ ಕಾಣುವುದು. ಇದು ವಿಜಯನಗರ ದೇವಾಲಯ ಶಿಲ್ಪಕ್ಕೆ ವಿಶಿಷ್ಟ ಮೆರುಗನ್ನು ನೀಡಿದೆ.
- ವಿಜಯನಗರದ ಬಹುತೇಕ ದೇವಾಲಯಗಳ ಹೆಬ್ಬಾಗಿಲಿನಲ್ಲಿ ಎತ್ತರವಾದ ಗೋಪುರವನ್ನು ನಿರ್ಮಿಸಿದರು. ಇದಕ್ಕೆ 'ರಾಯಗೋಪುರ' ಎಂದು ಹೆಸರಿಟ್ಟರು. ಇದು ವಿಜಯನಗರ ಶೈಲಿಯ ಇನ್ನೊಂದು ಲಕ್ಷಣವಾಗಿದೆ.
- ಕಲ್ಯಾಣ ಮಂಟಪವನ್ನು ನಿರ್ಮಿಸಿದ್ದು ಕೂಡ ವಿಜಯನಗರ ಶೈಲಿಯ ಲಕ್ಷಣವಾಗಿದೆ.
- ಮುಖ್ಯ ಪುರಷದೇವತೆಯ ವಿಗ್ರಹಕ್ಕೆ ಉಪಗೋಪುರಗಳನ್ನು ನಿರ್ಮಿಸುವುದು ಕೂಡ ವಿಜಯನಗರದ ಶೈಲಿಯೇ ಆಗಿದೆ.

## ಶೃಂಗೇರಿಯ ವಿದ್ಯಾಶಂಕರ ದೇವಾಲಯ

1. ಹೊಯ್ಸಳ – ದ್ರಾವಿಡ ಶೈಲಿಗಳ ಸಂಗಮ: ವಿದ್ಯಾಶಂಕರ ದೇವಾಲಯವು ಹೊಯ್ಸಳ ಶೈಲಿ ಮತ್ತು ದ್ರಾವಿಡ ಶೈಲಿಗಳ ಸಂಗಮವಾಗಿದೆ. ಉದಾರಹಣೆಗೆ:–
   - ಈ ದೇವಾಲಯದ ಒಳಭಾಗದ ರಚನೆಯಲ್ಲಿ:
   - ಗರ್ಭಗೃಹದ ಸುತ್ತ ಇರುವ ಪ್ರದಕ್ಷಿಣಾ ಪಥಗಳು
   - ಕಂಬಗಳು
   - ಛಾವಣಿಯನ್ನು ಹೊತ್ತಿರುವ ಚಾಚು ಪೀಠಗಳು.
   - ಹಗ್ಗದ ಆಕಾರದ ಸೂರುಗಲ್ಲುಗಳು – ಇವು ದ್ರಾವಿಡ ಶೈಲಿಯ ಲಕ್ಷಣಗಳಾಗಿವೆ.

- ಈ ದೇವಾಲಯದ ಹೊರಭಾಗದಲ್ಲಿ
  - ಗೋಡೆಗಳು
  - ಶಿಖರದ ಸ್ವರೂಪ
  - ವೇದಿಕೆಗಳು ಹೊಯ್ಸಳ ಶೈಲಿಯಲ್ಲಿವೆ.

2. ಮುಂಭಾಗದ ಮಂಟಪದಲ್ಲಿ 12 ಕಂಬಗಳಿವೆ. ಅವುಗಳ ಮೇಲೆ 12 ರಾಶಿಯ ಅಧಿಪತಿಗಳು ಮತ್ತು ಸೂರ್ಯನು ಚಿತ್ರಗಳಿವೆ
3. ಮಕರ ಸಂಕ್ರಮಣದಲ್ಲಿ ಸೂರ್ಯನ ಕಿರಣವು ಈ ಕಂಬಗಳ ಮೇಲೆ ಬೀಳುವುದು ವಾಸ್ತುಶಿಲ್ಪದ ಒಂದು ಅದ್ಭುತವಾಗಿದೆ.



downloaded from: www.kpscvaani.com

4. ಈ ದೇವಾಲಯದ ರಚನೆಯಲ್ಲಿ ಬೆಣಚುಗಲ್ಲುಗಳನ್ನು ಉಪಯೋಗಿಸಿದ್ದಾರೆ.
5. ಗೋಡೆಗಳ ಮೇಲೆ ಅಲಂಕಾರಿಕ ಪಟ್ಟಿಗಳಿವೆ. ಪ್ರತಿ ಪಟ್ಟಿಯಲ್ಲಿ ಆನೆ, ಕುದುರೆ. ಸಿಂಹ ಮುಂತಾದ ಶಿಲ್ಪಗಳಿವೆ.
6. ಗೋಡೆಗಳ ಮೇಲೆ ವಿಷ್ಣುವಿನ ದಶಾವತಾರಗಳನ್ನು ಮತ್ತು ಶಿವಲೀಲೆಗಳನ್ನು ಸುಂದರವಾಗಿ ಕೆತ್ತಿದ್ದಾರೆ.
7. ವ್ಯಾಸರು ಮತ್ತು ಶಂಕರರ ವಿಗ್ರಹಗಳಿವೆ
8. ಇಲ್ಲಿಯ ವಿದ್ಯಾಶಂಕರ ಮೂರ್ತಿ ಭವ್ಯವಾಗಿದೆ

## ಪಂಪಾ ವಿರೂಪಾಕ್ಷ ದೇವಾಲಯ

- ಪಂಪ ವಿರೂಪಾಕ್ಷ ದೇವಾಲಯವು ಪ್ರಾಚೀನವಾದುದು. ದೇವಾಲಯದ ಕಟ್ಟಡ ವಿಜಯ ನಗರಕ್ಕಿಂತ ಬಹಳ ಮೊದಲೇ ಕಟ್ಟಿದ್ದು. ವಿಜಯನಗರದ ಅರಸರು ಈ ದೇವಾಲಯವನ್ನು ವಿಸ್ತರಿಸಿದರು. ಕೃಷ್ಣದೇವರಾಯನು, ಸಿಂಹಾಸನಾರೋಹಣದ ನೆನಪಿಗೆ ಒಂದು ಗೋಪುರವನ್ನೂ ಒಂದು ರಂಗ ಮಂಟಪವನ್ನು ಕಟ್ಟಿಸಿದನು.
- ಈ ದೇವಾಲಯದ ಗರ್ಭಗೃಹದ ಎದುರಿಗೆ ಎತ್ತರವಾದ ಗೋಪುರವಿದೆ. ಒಳಾಂಗಣದಲ್ಲಿ ಗರ್ಭಗುಡಿ, ಅಲ್ಲದೆ ಭುವನೇಶ್ವರಿ, ಪಾತಾಳೇಶ್ವರಿ, ದುರ್ಗಿ ಮತ್ತು ಗಣಪತಿ ಗುಡಿಗಳಿವೆ.
- ನವರಂಗ ಮುಖಮಂಟಪ ಮತ್ತು ಮಹಾಮಂಟಪಗಳಿವೆ. ಮುಖ ಮಂಟಪದ ಮುಂದೆ ದ್ವಾರಪಾಲಕ ವಿಗ್ರಹಗಳಿವೆ.

## ವಿಜಯ ವಿಠಲಸ್ವಾಮಿ ದೇವಲಾಯ

- ಕ್ರಿ.ಶ 1513 ರಲ್ಲಿ ಕೃಷ್ಣದೇವರಾಯನ ಕಾಲದಲ್ಲಿ ಈ ದೇವಾಲಯದ ರಚನೆ ಪ್ರಾರಂಭವಾಯಿತು. ಈ ದೇವಾಲಯ ವಿಶಾಲವಾದ ಅಂಗಳದ ಮಧ್ಯದಲ್ಲಿದೆ ಅಂಗಳದ ಸುತ್ತ ಮೂರು ಸಾಲುಗಳಲ್ಲಿ ಮಂಟಪಗಳಿವೆ. ಮೂರು ದಿಕ್ಕಿನಲ್ಲಿ ಮೂರು ಗೋಪುರ ದ್ವಾರಗಳಿವೆ. ಸಂಪೂರ್ಣ ಬೆಣಚುಗಲ್ಲಿನಿಂದ ಈ ದೇವಾಲಯ ನಿರ್ಮಿತವಾಗಿದೆ. ಇದು ದ್ರಾವಿಡ ಶೈಲಿಯ ಕಟ್ಟಡವಾಗಿದೆ. ಈ ಕಟ್ಟಡದ ಉದ್ದ 235 ಅಡಿಗಳಷ್ಟು ಇದೆ.



downloaded from: www.kpscvaani.com

## ಮುಖಮಂಟಪ:–

- ಮೂರು ದಿಕ್ಕಿಗೆ ಮೂರು ಬಾಗಿಲುಗಳಿವೆ. ಇವುಗಳ ಎರಡೂ ಕಡೆ ಕಲ್ಲಿನ ಆನೆಗಳು ನಿಂತಿವೆ. 56 ಕಂಬಗಳಿವೆ. ಪ್ರತಿ ಕಂಬವೂ ಕೆತ್ತನೆಯಿಂದ ಕೂಡಿದೆ. ಪ್ರಾಣಿಗಳ ಕೆತ್ತನೆಗಳಿವೆ. ಬೋದಿಗೆಗಳು, ಚಾಚು ಪೀಠಗಳು ಅಲಂಕೃತವಾಗಿವೆ. ಮೇಲ್ಛಾವಣಿಯ ಒಳಭಾಗದಲ್ಲಿ ಕಮಲವನ್ನು ಸುಂದರವಾಗಿ ಕೆತ್ತಿದ್ದಾರೆ.

## ರಂಗಮಂಟಪ:–

- ರಂಗಮಂಟಪದಲ್ಲಿ 16 ಕಂಬಗಳಿವೆ. ಇಲ್ಲಿಯ ಅಲಂಕಾರದ ಗೂಡುಗಳು ದ್ರಾವಿಡ ಶೈಲಿಯದಾಗಿದೆ.

## ಕಲ್ಯಾಣ ಮಂಟಪ:–

- ಈ ದೇವಲಾಯದ ಕಲ್ಯಾಣ ಮಂಟಪ ವಿಶಿಷ್ಟ ರೀತಿಯದಾಗಿದೆ.

## ಕಲ್ಲಿನ ರಥ:–

- ಈ ದೇವಾಲಯದಲ್ಲಿ ಇರುವ ಕಲ್ಲಿನ ರಥ ಬಹಳ ಪ್ರಸಿದ್ದವಾಗಿದೆ. ಬೆಣಚುಗಲ್ಲಿನಿಂದ ಈ ರಥವನ್ನು ಕತ್ತಿದಿದ್ದಾರೆ. ಗಾಲಿಗಳು ಮರದ ಗಾಲಿಗಳಂತೆ ತಿರುಗುತ್ತವೆ.

## ಹಜಾರ ರಾಮಸ್ವಾಮಿ ದೇವಾಲಯ

- ಕೃಷ್ಣದೇವರಾಯನ ಕಾಲದಲ್ಲಿ ಈ ದೇವಾಲಯದ ನಿರ್ಮಾಣವಾಯಿತು.
- ದ್ವಾರಮಂಟಪ, ರಂಗಮಂಟಪಗಳಿವೆ. ಕಂಬಗಳು ಕೆತ್ತನೆಯಿಂದ ಅಲಂಕೃತವಾಗಿವೆ. ವಿಮಾನ ಆಕರ್ಷಕವಾಗಿದೆ. ಗರ್ಭಗೃಹದ ಮೇಲೆ ಪಿರಾಮಿಡ್ ಆಕಾರದ ಶಿಖರವಿದೆ.
- ಗೋಡೆಗಳು ಅಲಂಕಾರ ಪಟ್ಟಿಕೆಗಳಿಂದ ತುಂಬಿವೆ. ನೃತ್ಯದ ಬಗೆ ಬಗೆಯ ಭಂಗಿಯ ಸ್ತ್ರೀ ವಿಗ್ರಹಗಳಿವೆ. ಗೋಡೆಗಳಲ್ಲಿ ರಾಮಾಯಣ ಮತ್ತು ಮಹಾಭಾರತಗಳ ಅನೇಕ ದೃಶ್ಯಗಳ ಕೆತ್ತನೆಗಳಿವೆ. ಸುಬ್ರಹ್ಮಣ್ಯ ಗಣೇಶ ಮೊದಲಾದ ಶಿಲ್ಪಗಳಿವೆ.



downloaded from: www.kpscvaani.com

## ಮಹಾನವಮಿ ದಿಬ್ಬ:–

- 1513ರಲ್ಲಿ ಉದಯಗಿರಿ ವಿಜಯದಿಂದ ಹಿಂತಿರುಗಿದ ಮೇಲೆ ಕೃಷ್ಣ ದೇವರಾಯನು ಮಹಾನವಮಿ ದಿಬ್ಬವನ್ನು ರಚಿಸಿದನು.

## ಇತರ ದೇವಾಲಯಗಳು:

- ಗಾಣಗಿತ್ತಿ ದೇವಾಲಯ
- ಕೋದಂಡ ಸ್ವಾಮಿ ದೇವಾಲಯ
- ರಘನಾಥ ಸ್ವಾಮಿ ದೇವಾಲಯ – ಮುಂತಾದ ಅನೇಕ ದೇವಾಲಯಗಳಿವೆ.

## ಮಂಟಪಗಳು:–

- ಪುರಂದರ ಮಂಟಪ ಮೊದಲಾದ ಅನೇಕ ಮಂಟಪಗಳಿವೆ.

## ವಿಗ್ರಹಗಳು:–

- ಕಡಲೆಕಾಳು ಗಣೇಶ
- ಸಾಸುವೆ ಗಣೇಶ
- ಉಗ್ರ ನರಸಿಂಹ
- ಬಡವಿಲಿಂಗ – ಮೊದಲಾದ ಭವ್ಯ ಮತ್ತು ಬೃಹತ್ ಆಕಾರದ ವಿಗ್ರಹಗಳು ಈ ಕಾಲದಲ್ಲಿ ನಿರ್ಮಾಣಗೊಂಡವು

ವಿಜಯನಗರದ ಕಾಲದಲ್ಲಿಯೇ ಕಾರ್ಕಳದ ಗೋಮಟೇಶ್ವರ ಮೂರ್ತಿ ಮತ್ತು ವೇಣೂರಿನ ಗೋಮಟೇಶ್ವರ ಮೂರ್ತಿಗಳ ರಚನೆಗಳಾದವು.


GNANADHARE IAS ACADEMY
downloaded from: www.kpscvaani.com

## ವಿದೇಶೀ ಯಾತ್ರಿಕರ ಬರಹಗಳು

ವಿಜಯನಗರದ ಸಾಮ್ರಾಜ್ಯಕ್ಕೆ ಅನೇಕ ವಿದೇಶೀ ಪ್ರವಾಸಿಗರು. ವ್ಯಾಪಾರಿಗಳು ಮತ್ತು ರಾಯಭಾರಿಗಳು ಭೇಟಿ ನೀಡಿದರು ಅವರು ತಾವು ಕಂಡಿದ್ದನ್ನು ಮತ್ತು ಕೇಳಿದ್ದನ್ನು ಬರಹರೂಪದಲ್ಲಿ ಬಿಟ್ಟು ಹೋಗಿದ್ದಾರೆ. ವಿದೇಶೀ ಯಾತ್ರಿಕರ ಬರಹಗಳು ವಿಜಯನಗರದ ಇತಿಹಾಸವನ್ನು ತಿಳಿಯಲು ಒಂದು ಮುಖ್ಯ ಆಧಾರವೂ ಆಗಿದೆ.

## 1.ಡೊಮಿಂಗೋ ಪಾಯಸ್ (Domingo Paes):

ಡೊಮಿಂಗೋ ಪಾಯಸ್ ಪೋರ್ಚುಗಾಲದವನು. ಇವನು ಕ್ರಿ.ಶ 1521–22ರಲ್ಲಿ ವಿಜಯನಗರ ಪಟ್ಟಣಕ್ಕೆ ಬಂದಿದ್ದನು. ಇವನು ತನ್ನ ಬರಹದಲ್ಲಿ ಕೃಷ್ಣದೇವರಾಯನ ಸಾಧನೆಗಳ ಬಗ್ಗೆ ಹೇಳಿದ್ದಾನೆ. ಪಟ್ಟಣದ ಬಗ್ಗೆ ಹೇಳುತ್ತ ಜಗತ್ತಿನಲ್ಲಿಯೇ ಉತ್ತಮ ಸರಕುಗಳಿಂದ ಕೂಡಿದ ಪಟ್ಟಣ ಇದಾಗಿದೆ. ಅಕ್ಕಿ, ಗೋಧಿ, ಕಾಳು ಕಡಿಗಳು, ಬಾರ್ಲಿ, ತೊಗರಿ ಮುಂತಾದ ಧಾನ್ಯಗಳಿಂದ ಈ ಪಟ್ಟಣವು ತುಂಬಿ ಹೋಗಿದೆ. ಮಾರುಕಟ್ಟೆಗಳಲ್ಲಿ ಭಾರೀ ಪ್ರಮಾಣದಲ್ಲಿ ಗೂಳಿಗಳು ಸಿಗುತ್ತವೆ ಎಂದು ಇವನು ಬರೆದಿದ್ದಾನೆ.

ವಿಜಯನಗರದ ನವರಾತ್ರಿ ಉತ್ಸವದ ಬಗ್ಗೆ ವಿವರವಾಗಿ ಇವನು ಬರೆದಿದ್ದಾನೆ. ವಿಜಯ ನಗರದಲ್ಲಿ ಅಸಂಖ್ಯ ಪ್ರಜೆಗಳು ವಾಸಿಸುತ್ತಿದ್ದಾರೆ. ನಗರದ ಮಧ್ಯೆ ಸುತ್ತುವರಿದ ಗೋಡೆಗಳ ಮಧ್ಯೆ ಅರಮನೆಯಿದೆ ಎಂದು ಇವನು ಬರೆದಿದ್ದಾನೆ. ಅರಸನು ವಿದೇಶೀಯರ ಬಗ್ಗೆ ಗೌರವ ಭಾವನೆ ಹೊಂದಿದ್ದಾನೆ. ಗಜಪತಿ ಅರಸನು ಸೋತು ತನ್ನ ಮಗಳನ್ನು ಕೃಷ್ಣದೇವರಾಯನಿಗೆ ಮದುವೆ ಮಾಡಿ ಕೊಟ್ಟನೆಂದೂ ಇವನ ಬರಹವು ತಿಳಿಸುತ್ತದೆ. ಅರಸನು ಅನ್ಯಾಯವಾಗಿ ಯಾರನ್ನೂ ಶಿಕ್ಷಿಸುತ್ತಿರಲಿಲ್ಲ. ಎಂದು ಹೇಳಿದ್ದಾನೆ. (ಇವನು ನೀಡಿದ ನವರಾತ್ರಿ ಉತ್ಸವದ ವಿವರಣೆಯನ್ನು ಈಗಾಗಲೇ ನೀಡಲಾಗಿದೆ)

## 2.ಡ್ಯುರಾಡೋ ಬಾರ್ಬೋಸಾ

ಬಾರ್ಬೋಸಾ ಪೋರ್ಚುಗೀಸ್ ಪ್ರವಾಸಿಯಾಗಿದ್ದನು. ಕ್ರಿ.ಶ 1516ರಲ್ಲಿ ವಿಜಯ ನಗರಕ್ಕೆ ಭೇಟಿ ನೀಡಿದನು. ವಿಜಯನಗರದ ವಿವರವಾದ ವರ್ಣನೆಯನ್ನು ಇವನು ತನ್ನ ಬರಹದಲ್ಲಿ ನೀಡಿದ್ದಾನೆ.

ವಿಜಯನಗರವು ಜನದಟ್ಟಣೆಯುಳ್ಳ ಪಟ್ಟಣ, ದೇಶದಲ್ಲಿಯೇ ಪ್ರಸಿದ್ಧವಾದ ಪಟ್ಟಣ, ಚೀನಾ ದೇಶದ ಮತ್ತು ಅಲೆಗ್ಸಾಂಡ್ರಿಯದ ರೇಶ್ಮೆ, ಮಲಭಾರದ ಕರ್ಪೂರ, ಮೆಣಸಿನ ಕಾಳು, ಗಂಧದ ಸಾಮಾನುಗಳು, ಪೇಗುವಿನ ವೈಢೂರ್ಯಗಳು ಇಲ್ಲಿ ಸದಾಕಾಲ ಸಿಗುತ್ತವೆ ಎಂದು ಅವನು ತಿಳಿಸಿದ್ದಾನೆ.



downloaded from: www.kpscvaani.com

## 3.ನೂನಿಜ್

ಇವನು ಪೋರ್ಚುಗಾಲದ ಕುದುರೆ ವ್ಯಾಪಾರಿಯಾಗಿದ್ದನು ಕ್ರಿ.ಶ 1535 ರಿಂದ 1537ರವರೆಗೆ ಇವನು ವಿಜಯನಗರದಲ್ಲಿದ್ದನು. ಇವನು ಅಚ್ಯುತರಾಯನ ಕಾಲದಲ್ಲಿ ನಡೆದ ಆಂತರಿಕ ಯುದ್ದದ ಬಗ್ಗೆ ಹೇಳಿದ್ದಾನೆ. ಕೃಷ್ಣದೇವರಾಯನ ಮಗ ತಿರುಮಲನಿಗೆ ವಿಷಪ್ರಾಶನ ನಡೆದ ಘಟನೆಯನ್ನು ಇವನು ಹೇಳಿದ್ದಾನೆ. ರಾಯನು ಸಾಲುವ ತಿಮ್ಮರಸನನ್ನೂ, ತಿಮ್ಮ ದಂಡನಾಯಕನನ್ನೂ ಸೆರೆಯಲ್ಲಿಟ್ಟ ಸಂಗತಿಯನ್ನು ಇವನು ಬರೆದಿದ್ದಾನೆ. ತಿಮ್ಮ ದಂಡ ನಾಯಕನು ದಂಗೆಯೆದ್ದ ಸಂಗತಿಯನ್ನು ಇವನು ತನ್ನ ಬರಹದಲ್ಲಿ ನಮೂದಿಸಿದ್ದಾನೆ. ವಿಜಯನಗರದ ಬಗ್ಗೆ 23 ಅಧ್ಯಾಯಗಳಲ್ಲಿ ಒಂದು ಗ್ರಂಥವನ್ನು ರಚಿಸಿದ್ದಾನೆ.

## 4.ಅಬ್ದುಲ್ ರಜಾಕ್

ಇವನು ಪರ್ಶಿಯಾದ ರಾಯಭಾರಿಯಾಗಿ ಎರಡನೇ ದೇವರಾಯನ ಕಾಲದಲ್ಲಿ ವಿಜಯ ನಗರದ ಆಸ್ಥಾನದಲ್ಲಿದ್ದನು. ಎರಡನೇ ದೇವರಾಯನ ಬಗ್ಗೆ ಹೇಳುತ್ತ ಹಿಂದುಸ್ಥಾನದಲ್ಲಿ ಇವನಿಗಿಂತ ಹೆಚ್ಚು ಶ್ರೇಷ್ಠ ದೊರೆಗಳನ್ನು ಹುಡುಕುವುದು ಅಸಾಧ್ಯ, ರಾಜನ ಖಜಾನೆ ಯಾವಾಗಲೂ ತುಂಬಿ ತುಳುಕುತ್ತಿತ್ತು ಎಂದು ಇವನು ಹೇಳಿದ್ದಾನೆ. ಇಲ್ಲಿ ಪರ್ವತಾಕಾರದ ಸಾವಿರಗಟ್ಟಲೆ ಆನೆಗಳು ಇದ್ದವೆಂದು ಅವನು ಬರೆದಿದ್ದಾನೆ. ರಾಜಧಾನಿಯ ಬಗ್ಗೆ ಹೇಳುತ್ತ ರಾಜಧಾನಿಯು ಏಳು ಸುತ್ತಿನ ಕೋಟೆಯೊಳಗೆ ಇತ್ತು ಎಂದು ಹೇಳಿದ್ದಾನೆ.

ವಿಜಯನಗರದ ಪಟ್ಟಣದ ಬಗ್ಗೆ ಹೇಳುತ್ತ, ತನ್ನ ಕಣ್ಣು ಇಂಥ ಪಟ್ಟಣಗಳನ್ನು ಹಿಂದೆ ನೋಡಿರಲಿಲ್ಲ. ಮುಂದೆ ನೋಡುವುದೂ ಅಸಾಧ್ಯ ಎಂದು ಹೊಗಳಿದ್ದಾನೆ. ಪ್ರಪಂಚದಲ್ಲಿ ಇದಕ್ಕೆ ಸಮಾನವಾದ ಪಟ್ಟಣವು ಬೇರೊಂದಿಲ್ಲ. ಬಾಜಾರಗಳು ಅಗಲವಾಗಿಯೂ ಉದ್ದವಾಗಿಯೂ ಇವೆ. ಗುಲಾಬಿ ಹೂವುಗಳು ಎಲ್ಲೆಲ್ಲೂ ಸಿಗುತ್ತದೆ. ಎಂದು ಹೇಳಿದ ಇವನು ಈ ಜನರು ಗುಲಾಬಿ ಹೂವಿನ ಪ್ರಿಯರು ಎಂದು ತಿಳಿಸಿದ್ದಾನೆ.

ಪ್ರತಿ ವೃತ್ತಿಗಳಿಗೆ ಸಂಬಂಧಿಸಿದ ಪ್ರತಿ ವರ್ಗದವರೂ ಬಾಜಾರಿನಲ್ಲಿ ಅಂಗಡಿಗಳನ್ನು ಹೊಂದಿದ್ದಾರೆ. ರತ್ನಗಳು ಇಲ್ಲಿ ಸಾರ್ವಜನಿಕ ರಸ್ತೆಗಳಲ್ಲಿ ರಾಶಿರಾಶಿಯಾಗಿ ಸಿಗುತ್ತದೆ. ಮುತ್ತು. ರತ್ನ ವೈಢೂರ್ಯಗಳು ಇಲ್ಲಿ ಹೇರಳವಾಗಿ ಸಿಗುತ್ತವೆ ಎಂದು ಹೇಳಿದ್ದಾನೆ.

ಈ ರಾಜ್ಯವು ಜನದಟ್ಟಣೆಯಿಂದ ತುಂಬಿದೆ. ಅದನ್ನು ವರ್ಣಿಸುವುದೇ ಅಸಾಧ್ಯ, ಎಂಬುದು ಇವನ ಅಭಿಪ್ರಾಯ.

ಮೇಲ್ವರ್ಗದವರು, ಕೆಳವರ್ಗದವರು, ಬಾಜಾರದಲ್ಲಿ ಕಸಕಡ್ಡಿಗಳನ್ನು ಸ್ವಚ್ಛಗೊಳಿಸುವವರು ಕೂಡ ಕಿವಿ, ಕುತ್ತಿಗೆ, ತೋಳು ಮತ್ತು ಬೆರಳಿಗೆ ಆಭರಣಗಳನ್ನು ತೊಡುತ್ತಾರೆ ಎಂದು ಮುಂತಾಗಿ ವಿಜಯನಗರದ ವೈಭವವನ್ನು ಇವನು ವರ್ಣಿಸಿದ್ದಾನೆ.



downloaded from: www.kpscvaani.com

## 5. ನಿಕೊಲೊ ಕೊಂಟಿ

ಇವನು ಇಟಲಿ ದೇಶದವನಾಗಿದ್ದನು ಕ್ರಿ. ಶ 1420–21 ರಲ್ಲಿ ವಿಜಯನಗರಕ್ಕೆ ಬಂದನು. ವಿಜಯನಗರ ರಾಜಧಾನಿಯ ಸುತ್ತಳತೆ 60 ಮೈಲು. ಶಸ್ತ್ರಾಸ್ತ್ರಗಳನ್ನು ಹಿಡಿದು ಯುದ್ದ ಮಾಡುವ 90,000 ಯೋಧರು ರಾಜಧಾನಿಯ ರಕ್ಷಣೆಗೆ ಇರುವರೆಂದು ಅವನು ತನ್ನ ಬರಹದಲ್ಲಿ ನಮೂದಿಸಿದ್ದಾನೆ. ಈ ರಾಜನು (ಎರಡನೇ ದೇವರಾಯ) ಭಾರತದ ಚಕ್ರವರ್ತಿಗಳಲ್ಲಿಯೇ ಶ್ರೇಷ್ಠನೆಂದು ಇವನು ತಿಳಿಸಿದ್ದಾನೆ. ಕೊಂಟಿಯು ರಾಜನ ಆಸ್ಥಾನ ಮತ್ತು ವಿಜಯನಗರ ಪಟ್ಟಣದ ಬಗ್ಗೆ ವಿವರಗಳನ್ನು ನೀಡಿದ್ದಾನೆ.

## ಮೈಸೂರಿನ ಒಡೆಯರು (ಕ್ರಿ.ಶ 1399–1947) :

- ರಾಜಧಾನಿ – ಹದಿನಾಡು, ಶ್ರೀರಂಗ ಪಟ್ಟಣ, ನಂತರ ಮೈಸೂರು
- ಸ್ಥಾಪಕ – ಯದುರಾಯ & ಕೃಷ್ಣರಾಯರು.
- ಲಾಂಛನ – ಗಂಡಬೇರುಂಡ
- ನಾಣ್ಯಗಳು – ಹೊನ್ನು, ಪಗೋಡ, ರೂಪಾಯಿ
- ಮೈಸೂರಿನ ಪ್ರಾಚೀನ ಹೆಸರು – ಮಹಿಷ ಮಂಡಲ ಅಥವಾ ಮಹಿಷ ಪುರ.
- ಸುಮಾರು 500 ವರ್ಷಗಳ ನಡೆದ ಒಡೆಯರ ಆಳ್ವಿಕೆಯಲ್ಲಿ 25 ಜನ ಒಡೆಯರು ಆಳ್ವಿಕೆ ನಡೆಸಿದ್ದರೆ, ಒಡೆಯರ ಆಳ್ವಿಕೆಯನ್ನು ಪ್ರಾರಂಭಿಸಿದ ಯದುರಾಯ & ಕೃಷ್ಣರಾಯರನ್ನು ವಿಜಯ & ಕೃಷ್ಣ ಎಂಬ ಹೆಸರಿನಿಂದಲೂ ಗುರುತಿಸಲಾಗಿದೆ.

### ರಾಜ ಒಡೆಯರ್ (ಕ್ರಿ.ಶ 1578–1617) :

- ಇವರನ್ನು ಮೈಸೂರಿನ ಮೊದಲ ಐತಿಹಾಸಿಕ ಒಡೆಯರ್ & ಮೊದಲ ಸ್ವತಂತ್ರ ಒಡೆಯರ್ & ಒಡೆಯರ ಆಳ್ವಿಕೆಯ ನಿಜವಾದ ಸ್ಥಾಪಕ ಎಂದು ಕರೆಯಲಾಗಿದೆ,
- ಇವರು 1610ರಲ್ಲಿ ವಿಜಯನಗರದ ಅರಸ 2ನೇ ವೆಂಕಟನ ರಾಜ್ಯಪಾಲ ಶ್ರೀ ರಂಗರಾಯನನ್ನು ಸೋಲಿಸಿ ರಾಜಧಾನಿಯನ್ನು ಹದಿನಾಡಿನಿಂದ ಶ್ರೀರಂಗಪಟ್ಟಣಕ್ಕೆ ವರ್ಗಾಯಿಸಿದನು. (ಶ್ರೀ ರಂಗನ ಪತ್ನಿ ಮಾಲಂಗಿ ರಂಗಮ್ಮ [ಅಲಮೇಲಮ್ಮ] ತನ್ನ ಒಡವೆ ರಕ್ಷಿಸಿಕೊಳ್ಳಲು ಕಾವೇರಿ ಮಾಲಂಗಿಯಲ್ಲಿ ಬಿದ್ದು 'ತಲಕಾಡು – ಮರಳಾಗಲೀ, ಮಾಲಂಗಿ ಮಡುವಾಗಲೀ, ಮೈಸೂರು ಒಡೆಯರಿಗೆ ಮಕ್ಕಳಾಗದಿರಲಿ' ಎಂದು ಶಪಿಸಿ ಆತ್ಮಹತ್ಯೆ ಮಾಡಿಕೊಂಡಳು).



downloaded from: www.kpscvaani.com

- ರಾಜ ಒಡೆಯರ್ ದಳವಾಯಿ ಪದ್ದತಿಯನ್ನು ಜಾರಿಗೆ ತಂದವರು.
- ಇವರು 1610ರಲ್ಲಿ ಮೈಸೂರು ದಸರಾ ಅಥವಾ ನವರಾತ್ರಿ ಹಬ್ಬವನ್ನು ಆಚರಣೆಗೆ ತಂದರು.
- ಇವರನ್ನು ಆಧುನಿಕ ಮೈಸೂರು ರಾಜ್ಯದ ಮೊದಲ ನಿರ್ಮಾಪಕನೆಂದು ಕರೆಯಲಾಗಿದೆ.

## 6ನೇ ಚಾಮರಾಜ ಒಡೆಯರು (ಕ್ರಿ.ಶ 1617–1637) :

- ಕವಿಯಾದ ಇವರು ಶ್ರೀ ಚಾಮರಾಜೋಕ್ತಿ ವಿಲಾಸವನ್ನು ಬರೆದನು.

## ಇಮ್ಮಡಿ ಒಡೆಯರ್ (ಕ್ರಿ.ಶ. 1637–1638) :

- ದಳವಾಯಿ ವಿಕ್ರಮರಾಯ ಕೊಲೆ ಮಾಡಿದ.

## ಕಂಠೀರವ ನರಸರಾಜ ಒಡೆಯರ್ (ಕ್ರಿ.ಶ 1638–1659) :

- ಪರಾಕ್ರಮಿಯಾದ ಈತ ತಿರುಚನಾಪಲ್ಲಿಯ ಜಗಜೆಟ್ಟಿಯನ್ನು ಸೋಲಿಸಿ, ರಣಧೀರ ಎಂಬ ಬಿರುದನ್ನು ಪಡೆದನು.
- ಇವರು ಕಂಠೀರಾಯ ಪಣ ಎಂಬ ನಾಣ್ಯವನ್ನು ಟಂಕಿಸಿದನು.

## ದೊಡ್ಡ ದೇವರಾಜ ಒಡೆಯರ್ (ಕ್ರಿ.ಶ 1659–1672) :

- ಬಿರುದುಗಳು – ಮೂರು ಮನ್ನೆಯರ ಗಂಡ, ಹಿಂದೂರಾಯ ಸೂತ್ರಾಣ, ರಾಯ ಭಯಂಕರ
- ಇವರು ಮೈಸೂರು ಚಾಮುಂಡಿ ಬೆಟ್ಟಕ್ಕೆ 1000 ಮೆಟ್ಟಿಲುಗಳನ್ನು ಹಾಕಿಸಿದರು.
- ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ನಂದಿ ವಿಗ್ರಹವನ್ನು ಸ್ಥಾಪಿಸಿದರು.
- ಇವರ ಆಶ್ರಯದಲ್ಲಿ ಚಾಮಯ್ಯ ದೊಡ್ಡ ದೇವರಾಜ ಸಾಂಗತ್ಯವನ್ನು ಬರೆದನು.



downloaded from: www.kpscvaani.com

## ಚಿಕ್ಕದೇವರಾಜ ಒಡೆಯರ್ (ಕ್ರಿ.ಶ 1673–1704) :

- ಇವರ ಬಿರುದುಗಳು :

| ಬಿರುದು | ನೀಡಿದವರು |
|---|---|
| 1. ರಾಜ ಜಗದೇವ (ಅಲಂಗೀರ) (1699ರಲ್ಲಿ ತನ್ನ ಮಂತ್ರಿ ಲಿಂಗಣ್ಣಯ್ಯರನ್ನು ಕಾಣಿಕೆಗಳೊಂದಿಗೆ ಆಸ್ಥಾನಕ್ಕೆ ಕಳುಹಿಸಿದವರ ಪ್ರಯುಕ್ತ ಈ ಬಿರುದು ಪ್ರಾಪ್ತವಾಯಿತು) | ಔರಂಗಜೇಬ |
| 2. ಅಪ್ರತಿಮ ವೀರ | ಶಿವಾಜಿ |
| 3. ನವಕೋಟಿ ನಾರಾಯಣ | ಖಜಾನೆಯಲ್ಲಿ 9 ಕೋಟಿ ಉಳಿಕೆ ಮಾಡಿದ್ದಕ್ಕೆ |
| 4. ಮಹಾರಾಷ್ಟ್ರ ಭೂಪಾಲಜಾಲರೀಪು | ಶಿವಾಜಿಯನ್ನು ಸೋಲಿಸಿದ್ದಕ್ಕೆ |
| 5. ಕರ್ನಾಟಕ ಚಕ್ರವರ್ತಿ | |
| 6. ತೆಂಕಣ ರಾಜ | |
| 7. ವೈಷ್ಣವ ಮತ ಪ್ರವರ್ತಕ | |
| 8. ಪ್ರೌಢ ಪ್ರತಾಪ | |

- ಮೈಸೂರಿನಲ್ಲಿ ಪ್ರಥಮ ಬಾರಿಗೆ ಅಂಚೆ & ಪೋಲೀಸ್ ಪದ್ದತಿಗಳನ್ನು ಜಾರಿಗೆ ತಂದನು.
- ಚಿಕ್ಕ ದೇವರಾಜರು ಮೊಗಲರ ಮಾದರಿಯಲ್ಲಿ 18 ಇಲಾಖೆಗಳನ್ನು ಹೊಂದಿದ ಅಠಾರ ಕಛೇರಿಗಳನ್ನು ಸ್ಥಾಪಿಸಿದರು.
- 1687ರಲ್ಲಿ ಬೆಂಗಳೂರನ್ನು ಮೊಗಲ್ ರಾಜ ಖಾಸಿಂಖಾನ್‌ನಿಂದ 3 ಲಕ್ಷ ವರಹಗಳಿಗೆ ಕೊಂಡುಕೊಂಡನು.



- ರೆವಿನ್ಯೂ ಪದ್ದತಿ : ಇವರು ನೀರಾವರಿ ಸೌಲಭ್ಯಕ್ಕಾಗಿ ಕಾವೇರಿ ನದಿಗೆ ಅಡ್ಡಲಾಗಿ 2 ನಾಲೆಗಳನ್ನು ನಿರ್ಮಿಸಿದನು. ಚಿಕ್ಕ ದೇವರಾಜ ನಾಲೆ, ದೊಡ್ಡ ದೇವರಾಜ ನಾಲೆ & ಶ್ರವಣಬೆಳಗೊಳದ ಕೆರೆಗಳನ್ನು ಕಟ್ಟಿಸಿದರು.



downloaded from: www.kpscvaani.com

- ಬಾರ್ಬಲೊತಿ ಪದ್ದತಿ : ಇದರಲ್ಲಿ 12 ಜನ ವೃತ್ತಿಕುಶಲಕರ್ಮಿಗಳಿದ್ದರು. ಅದರಲ್ಲಿ ಪಟೇಲ, ಕುಂಬಾರ, ಕಮ್ಮಾರ, ಅಗಸ, ಕ್ಷೌರಿಕ, ಅಕ್ಕಸಾಲಿಗ, ಜೋಯಿಸ, ಬಡಗಿ, ನೀರಗಂಟಿ, ತಳವಾರ, ತೋಟಿಗ & ಶಾನುಭೋಗರು.
- ಸಾಹಿತ್ಯ ಪೋಷಕ & ಸ್ವತಃ ವಿದ್ವಾಂಸರಾಗಿದ್ದ ಇವರು ಹಲವು ಕೃತಿಗಳನ್ನು ರಚಿಸಿದ್ದಾರೆ. ಅವುಗಳೆಂದರೆ : ಚಿಕ್ಕದೇವರಾಜ ಭಿನ್ನಪಂ, ಶೇಷಧರ್ಮ, ಗೀತಗೋಪಾಲ, ಭಾಗವತ.

ಸಂಚಿಹೊನ್ನಮ್ಮ – ಹದಿಬದೆಯ ಧರ್ಮ
ಶೃಂಗಾರಮ್ಮ – ಪದ್ಮಿಣಿ ಕಲ್ಯಾಣ
ಸಿಂಗಾರಾರ್ಯ – ಮಿತ್ರವಿಂದ ಗೋವಿಂದ (ಕನ್ನಡದ ಮೊದಲ

ಮಂತ್ರಿ ತಿರುಮಲಾಚಾರ್ಯ – ಚಿಕ್ಕದೇವರಾಕ ವಂಶಾವಳಿ
ಚಿಕ್ಕದೇವರಾಜ ವಿಜಯ – ಚಿಕ್ಕದೇವರಾಜ ಶತಕ & ಅಪ್ರತಿಮ ವೀರ ಚರಿತೆ

- ಚಿಕ್ಕದೇವರಾಜರ ಆರಾಧ್ಯ ದೈವ – ಮೇಲುಕೋಟೆ ಚೆಲುವ ನಾರಾಯಣ.
- ಬೆಂಗಳೂರಿನಲ್ಲಿ ಕೋಟೆ ವೆಂಕಟರಮಣ ದೇವಾಲಯ.
- ಶ್ರವಣ ಬೆಳಗೊಳದ ಬಾಹುಬಲಿಯ ಮಹಾಮಸ್ತಾಭಿಷೇಕವನ್ನು ನಡೆಸಿಕೊಟ್ಟರು.

## ನಂತರದ ಒಡೆಯರು :

- ನಂತರದ ಒಡೆಯರು ದುರ್ಬಲರಾದ್ದರಿಂದ ದಳವಾಯಿಗಳಾದ ನಂಜರಾಜಯ್ಯ & ದೇವರಾಜಯ್ಯ ಸರ್ವಾಧಿಕಾರಿಗಳಾದರು.
- ನಂತರ ಬಂದ 2ನೇ ಕೃಷ್ಣರಾಜರು ದುರ್ಬಲರಾದರು. ಈ ಸಮಯದಲ್ಲಿ ಹೈದರಾಲಿ ದಳವಾಯಿಗಳು & ಒಡೆಯರ ದುರ್ಬಲತೆಯನ್ನು ಲಾಭ ಪಡೆದು ಮುಸ್ಲಿಂ ಪ್ರಭುತ್ವವನ್ನು ಸ್ಥಾಪಿಸಿದರು.



downloaded from: www.kpscvaani.com

## ಹೈದರಾಲಿ (ಕ್ರಿ.ಶ 1761–1782) :



ಹೈದರ್ ಅಲಿಯು ಕೋಲಾರ ಜಿಲ್ಲೆಯ ಬೂದೀಕೋಟ ಎಂಬಲ್ಲಿ ಕ್ರಿ.ಶ. 1722 ರಲ್ಲಿ ಜನಿಸಿದನು. ಹೈದರನ ತಂದೆ ಪತ್ತೆ ಮಹಮ್ಮದ್ ಸಿರಾ ನವಾಬನ ಸೈನ್ಯದಲ್ಲಿ ಸೈನಿಕನಾಗಿ ಸೇವೆ ಸಲ್ಲಿಸುತ್ತಿದ್ದನು. ದೊಡ್ಡಬಳ್ಳಾಪುರದ ನವಾಬ ಹಾಗೂ ಸಿರಾದ ನವಾಬರ ಮಧ್ಯೆ ಯುದ್ಧ ನಡೆಯಿತು ಯುದ್ದದಲ್ಲಿ ಹೈದರನ ತಂದೆ ಫತೆ ಮಹಮ್ಮದ್ ಮಡಿದನು.

ಹೈದರ್ ಆಲಿಯು ಹೈದರ್ ಸಾಹೇಬ್ ಎಂಬ ಸಂಬಂಧಿಗಳ ಆಶ್ರಯದಲ್ಲಿ ಬೆಳೆದನು ಅವನಿಗೆ ಬಾಲ್ಯದಲ್ಲಿ ಓದು ಬರಹಗಳ ಶಿಕ್ಷಣವೇ ದೊರೆಯಲಿಲ್ಲ ಅವನು ನಿರಕ್ಷರಿಯಾಗಿದ್ದನು ಎಂಬ ಅಭಿಪ್ರಾಯವು ಇದೆ.

ಹೈದರ್ ಅಲಿ ಕುಶಾಗ್ರ ಬುದ್ದಿಯವನೂ. ಆಕಾಂಕ್ಷಿಯೂ ಆಗಿದ್ದನು. ಅವನು ಮೈಸೂರಿನ ಸೈನ್ಯದಲ್ಲಿ ಸೈನಿಕನಾಗಿ ಸೇರಿಕೊಂಡನು.

### ಇನ್ನೂರು ಸೈನಿಕರ ಮೇಲಾಧಿಕಾರಿ.

ಮೈಸೂರಿನ ಸೈನ್ಯ ಕ್ರಿ.ಶ 1749 ರಲ್ಲ ದೇವನ ಹಳ್ಳಿಯ ಮೇಲೆ ಮುತ್ತಿಗೆ ಹಾಕಿತು ಹೈದರನು ತನ್ನ ಅಪ್ರತಿಮ ಶೌರ್ಯವನ್ನು ಈ ಯುದ್ದದಲ್ಲಿ ತೋರಿಸಿದನು. ಈ ಘಟನೆಯು ಅವನ ಉಜ್ವಲ ಭವಿಷ್ಯಕ್ಕೆ ಕಾರಣವಾಯಿತು. ಮೈಸೂರಿನ ದಳವಾಯಿಯಾಗಿದ್ದ ನಂಜರಾಜನು ಹೈದರನ ಪ್ರಮಾಣಿಕತೆಗೆ ಮೆಚ್ಚಿ ಅವನ ಯುದ್ದ ಕೌಶಲ್ಯವನ್ನು ಹೊಗಳುತ್ತ ಅವನನ್ನು 200 ಸೈನಿಕರ ಮೇಲಾಧಿಕಾರಿಯಾಗಿ ನೇಮಿಸಿದನು.

### ಹೈದರಾಬಾದಿನಲ್ಲಿ ಹೈದರಾಲಿ

ಕ್ರಿ.ಶ 1750ರಲ್ಲಿ ಹೈದರಾಬಾದಿನಲ್ಲಿ ಸಿಂಹಾಸನಕ್ಕಾಗಿ ನಾಸಿರ್ ಜಂಗ್ ಮತ್ತು ಮುಜಾಫರ್ ಜಂಗ್ ಅವರ ಮಧ್ಯೆ ಆಂತರಿಕ ಕಲಹವು ಪ್ರಾರಂಭವಾಯಿತು.

ದಳವಾಯಿ ನಂಜರಾಜನು ಮೈಸೂರಿನ ಸೈನ್ಯವನ್ನು ಹೈದರ ಅಲಿಯ ನೇತೃತ್ವದಲ್ಲಿ ನಿಜಾಮ ನಾಸೀರ್ ಜಂಗನ ಪರವಾಗಿ ಕಳಿಸಿದನು. ಆದರೆ ಹೈದರಾಬಾದ ರಾಜಧಾನಿಯಲ್ಲಿ ನಾಸಿರ್‌ಜಂಗ್‌ನ ಕೊಲೆಯಾಯಿತು. ಗೊಂದಲದ ಪರಿಸ್ಥಿತಿ ನಿರ್ಮಾಣವಾಯಿತ. ಹೈದರ್ ಆಲಿಯು ಈ ಸಂದರ್ಭದಲ್ಲಿ ನಿಜಾಮನ ಖಜಾನೆಯನ್ನು ಲೂಟಿ ಮಾಡಿದನು. ಎರಡು ಒಂಟೆಗಳ ಮೇಲೆ ಬಂಗಾರದ ನಾಣ್ಯಗಳನ್ನು ಹೇರಿಕೊಂಡು ಮೈಸೂರಿಗೆ ಬಂದನು. ಮಹತ್ವಾಕಾಂಕ್ಷಿಯಾದ ಹೈದರನಿಗೆ ಈ ಸಂಪತ್ತು ಸೈನ್ಯದ ನವೀಕರಣಕ್ಕೆ ದೊರಕಿದಂತಾಯಿತು.



downloaded from: www.kpscvaani.com

## ತ್ರಿಚನಾಪಳ್ಳಿಯಲ್ಲಿ ಸೋಲು

ಕ್ರಿ.ಶ 1751 ರಲ್ಲಿ ದಳವಾಯಿ ನಂಜರಾಜನು ತ್ರಿಚನಾಪಳ್ಳಿಯ ಮೇಲೆ ದಾಳಿ ಮಾಡಿದನು. ಹೈದರ ಅಲಿಯು ಮೈಸೂರು ಸೇನೆಯ ನೇತೃತ್ವ ವಹಿಸಿ ಶೂರತನದಿಂದ ಕಾದಾಡಿದನು. ಆದರೆ ಅವನಿಗೆ ಸೋಲುಂಟಾಯಿತು.

## ದಿಂಡಿಗಲ್ ಫೌಜದಾರ:-

ತ್ರಿಚನಾ ಪಳ್ಳಿಯಲ್ಲಿ ಸೋಲಾದರೂ, ಹೈದರ ಆಲಿಯ ಭವಿಷ್ಯಕ್ಕೆ ಚ್ಯುತಿ ಬರಲಿಲ್ಲ ದಳವಾಯಿ ನಂಜರಾಜನು ಹೈದರನ ಯುದ್ಧ ಕೌಶಲ್ಯವನ್ನು ಮೆಚ್ಚಿದ್ದನು.

ನಂಜರಾಜನು ಹೈದರಾಲಿಯನ್ನು ಕ್ರಿ.ಶ 1750ರಲ್ಲಿ ದಿಂಡಿಗಲ್ಲಿನ ಪೌಜಾದಾರನನ್ನಾಗಿ ನೇಮಿಸಿದನು. ತ್ರಿಚನಾಪಳ್ಳಿಯ ಯುದ್ದದಲ್ಲಿ ಹೈದರಾಲಿಯು ಪಾಶ್ಚಾತ್ಯ ಮಾದರಿಯ ಯುದ್ಧ ಕೌಶಲ್ಯವನ್ನು ಅರಿತುಕೊಂಡಿದ್ದನು. ಫೌಜ್‌ದಾರನಾಗಿ ಸೈನ್ಯ ಸಿದ್ದತೆಗೆ ಅವನಿಗೆ ಒಳ್ಳೆಯ ಸಂದರ್ಭವೂ ದೊರೆಯಿತು. ಹೈದರನು ತನ್ನ ಸೈನ್ಯವನ್ನು ಬಲಪಡಿಸಿಕೊಂಡನು.

## ಮರಾಠರ ಸೋಲು:-

ಕ್ರಿ.ಶ 1758 ರಲ್ಲಿ ಮೈಸೂರು ರಾಜನಿಂದ ತಮಗೆ ಬರಬೇಕಾಗಿದ್ದ ಕಪ್ಪ ಕಾಣಿಕೆಗಳು ಬರಲಿಲ್ಲವೆಂಬ ಕಾರಣ ಮುಂದೆ ಮಾಡಿ ಮರಾಠರು ಮೈಸೂರಿನ ಮೇಲೆ ದಾಳಿ ಮಾಡಿದರು.

ಹೈದರಾಲಿಯು ಮರಾಠರನ್ನು ಸೋಲಿಸಿದನು. ಮೈಸೂರು ರಾಜನು ಈ ಹಿಂದೆ ಬೆಂಗಳೂರನ್ನು ಮರಾಠರಿಗೆ ನೀಡಬೇಕಾಗಿದ್ದ ಹಣಕ್ಕಾಗಿ ನೀಡಿದ್ದನು. ಈಗ ಹೈದರ ಆಲಿಯು ಬೆಂಗಳೂರನ್ನು ಪುನಃ ವಶಪಡಿಸಿಕೊಂಡನು. ಇದರಿಂದ ಸಂಪ್ರೀತನಾದ ರಾಜನು ಹೈದರ್ ಆಲಿಗೆ ನವಾಬ್ ಹೈದರ್ ಅಲಿಖಾನ್ ಬಹದ್ದೂರ್ ಎಂಬ ಬಿರುದನ್ನು ನೀಡಿ ಸನ್ಮಾನಿಸಿದನು.

## ಕಾರ್ಯಕರ್ತನಾಗಿ ಹೈದರಾಲಿ:-

ದಳವಾಯಿ ನಂಜರಾಜನ ಎಡೆಬಿಡದ ಯುದ್ದಗಳಿಂದಾಗಿ ಮೈಸೂರು ರಾಜ್ಯದ ಖಜಾನೆಯು ಬರಿದಾಯಿತು. ಆಗ ಎರಡನೆ ಕೃಷ್ಣರಾಜ ಒಡೆಯರು ರಾಜರಾಗಿದ್ದರು. ಸೈನಿಕರಿಗೆ ವೇತನವನ್ನು ನೀಡಲು ಕೂಡ ಹಣವಿರಲಿಲ್ಲ ಸೈನಿಕರು ದಂಗೆಯೇಳುವ ಲಕ್ಷಣಗಳು ಗೋಚರಿಸಿದವು. ಹೈದರನು ತನ್ನ ಸ್ವಂತ ಹಣವನ್ನು ನೀಡಿ. ಸೈನಿಕರು ದಂಗೆಯೇಳದಂತೆ ನೋಡಿಕೊಂಡನು.



downloaded from: www.kpscvaani.com

ನಂಜರಾಜನು ನಿವೃತ್ತನಾದನು. ಹೈದರಾಲಿಯೇ ದಳವಾಯಿಯ ಅಧಿಕಾರಗಳನ್ನೂ ಚಲಾಯಿಸಿ ತೊಡಗಿದನು. ಹೈದರಾಲಿಯು ಎರಡನೆ ಕೃಷ್ಣರಾಜನನ್ನು ಬದಿಗೊತ್ತಿ ತಾನೇ ಕಾರ್ಯಕರ್ತನಾಗಿ ಅಧಿಕಾರಗಳನ್ನು ತನ್ನಲ್ಲಿ ಕೇಂದ್ರೀಕರಿಸಿಕೊಂಡನು. ಅವನೇ ನಿಜವಾದ ಆಡಳಿತಗಾರನೂ ಆದನು. ಹೀಗೆ ಸಾಮಾನ್ಯ ಸೈನಿಕನಾಗಿ ತನ್ನ ಜೀವನವನ್ನು ಪ್ರಾರಂಭಿಸಿದ ಹೈದರ ಅಲಿಯು ತಾನೇ ಮೈಸೂರಿನ ಸುಲ್ತಾನನೂ ಆದನು.

## ಹೈದರನ ಯುದ್ಧಗಳು – ರಾಜ್ಯವಿಸ್ತಾರ

ಹೈದರ ಅಲಿಯು ಮೈಸೂರಿನ ಅಧಿಕಾರಗಳನ್ನು ತನ್ನಲ್ಲಿ ಕೇಂದ್ರಿಕರಿಸಿಕೊಂಡು ಯುದ್ಧಗಳನ್ನು ಪ್ರಾರಂಭಿಸಿದನು.

- 1562 ರಲ್ಲಿ ಅವನು ಸಿರಾದ ಮೇಲೆ ದಾಳಿ ಮಾಡಿ ಸಿರಾವನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡನು.
- 1563 ರಲ್ಲಿ ಕೆಳದಿಯಲ್ಲಿ ಸಿಂಹಾಸನಕ್ಕಾಗಿ ಆಂತರಿಕ ದಂಗೆಯ ಪ್ರಾರಂಭವಾಗಿತ್ತು. ಇದೇ ಸಮಯದಲ್ಲಿ ಹೈದರನು ಕೆಳದಿಯ ಮೇಲೆ ದಾಳಿ ಮಾಡಿ ವಿಜಯಿಯಾದನು ಕೆಳದಿಯನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಇದರಿಂದ ಪಶ್ಚಿಮ ಕರಾವಳಿಯ ಪ್ರದೇಶವೂ ಮೈಸೂರಿಗೆ ಸೇರಿದಂತಾಯಿತು
- ಹೈದರ ಅಲಿಯು ತುಂಗಭದ್ರೆಯ ಉತ್ತರದಲ್ಲಿ ಸವಣೂರು ನವಾಬನನ್ನು ಬೀಳಗಿ ಸ್ವಾದಿಗಳನ್ನು ವಶಪಡಿಸಿಕೊಂಡನು.
- 1762 ರಲ್ಲಿ ಅವನು ಕೊಡಗಿನ ಮೇಲೆ ದಾಳಿ ಮಾಡಿದನು ಮತ್ತು ಈ ಪ್ರಾಂತವನ್ನೇ ವಶಪಡಿಸಿಕೊಂಡನು.
- ಗುತ್ತಿಯಲ್ಲಿ ಮರಾಠರ ಘೋರ್ಪಡೆಯನ್ನು ಸೋಲಿಸಿ ಗುತ್ತಿಯನ್ನು ಆಕ್ರಮಿಸಿದನು.
- ಚಿತ್ರದುರ್ಗದ ಮೇಲೆ ದಾಳಿ ಮಾಡಿದನು. (1779) ಚಿತ್ರದುರ್ಗದಲ್ಲಿ ಮದಕರಿ ನಾಯಕನು ಯುದ್ಧದಲ್ಲಿ ಸೋತನು. ಚಿತ್ರದುರ್ಗವನ್ನು ಹೈದರಾಲಿ ಮೈಸೂರಿಗೆ ಸೇರಿಸಿಕೊಂಡನು.

## ಕೇರಳದ ಮೇಲೆ ದಾಳಿ

- ಕೇರಳದ ನಾಯರ್ ಜನಾಂಗವು ಹೈದರ ಅಲಿಯ ಸೈನ್ಯವನ್ನು ಬಹಳವಾಗಿ ವಿರೋಧಿಸಿತು. ಕೊನೆಗೂ ಹೈದರನು ಗೆದ್ದನು.
- ಇಲ್ಲಿಯ ಅರಸನು ಝಮೊರಿನ್, ಹೈದರ್ ಅಲಿಗೆ ಕಪ್ಪಕಾಣಿಕೆಗಳನ್ನು ನೀಡಿದನು. ಹೈದರನು ಇನ್ನೂ ಮುಂದಕ್ಕೆ ಸಾಗಿ–ಪಾಲಘಾಟ್, ಕೊಟ್ಟಾಯಂ, ತಿರುವಾಂಕೂರು ಕೋಚೀನ್‌ಗಳನ್ನು ಗೆದ್ದನು.



downloaded from: www.kpscvaani.com

## ಮರಾಠರ ದಾಳಿ–ಹೈದರನ ಸೋಲು:

ಮರಾಠರು ಮೈಸೂರಿನ ಮೇಲೆ ಮೂರು ಬಾರಿ ಮುತ್ತಿಗೆ ಹಾಕಿದರು.

- 1765 ರಲ್ಲಿ
- 1766 ರಲ್ಲಿ ಹಾಗೂ
- 1771 ರಲ್ಲಿ ಹೀಗೆ ಮೂರು ಬಾರಿ ದಾಳಿ ಮಾಡಿದರು. ಈ ಯುದ್ದಗಳಲ್ಲಿ ಹೈದರ್ ಅಲಿ ಸೋತನು ಪರಿಣಾಮವಾಗಿ
    - ಹೈದರಾಲಿ ಮರಾಠರಿಗೆ ಕಪ್ಪ ಕಾಣಿಕೆಗಳನ್ನು ನೀಡಿದನು.
    - ಗುತ್ತಿಯನ್ನು ಮರಾಠರಿಗೆ ತಿರುಗಿ ನೀಡಬೇಕಾಯಿತು.
    - ತುಂಗಭದ್ರಾ ಉತ್ತರಕ್ಕೆ ತಾನು ಗೆದ್ದ ಪ್ರದೇಶಗಳನ್ನು ವಾಪಸು ನೀಡಿದನು.

ಮಾಧವರಾವ್ ಪೇಶ್ವಾ ಮರಣ ಹೊಂದಿದ ಮೇಲೆ ಮರಾಠರ ರಾಜಧಾನಿಯಲ್ಲಿ ಗೊಂದಲವು ಪ್ರಾರಂಭವಾಯಿತು. ಹೈದರಾಲಿಯು ಈ ಸಂದರ್ಭದ ಉಪಯೋಗವನ್ನು ಪಡೆದು.

- ಸವಣೂರು
- ಕಡಪ ಮತ್ತು
- ಕರ್ನೂಲುಗಳನ್ನು ಗೆದ್ದನು.

## ಹೈದರ ಅಲಿ ಮತ್ತು ಇಂಗ್ಲೀಷರು

ಹೈದರ್ ಅಲಿಯು ಇಂಗ್ಲೀಷರ ಕಡುವೈರಿಯಾಗಿದ್ದನು. ಹೈದರ್ ಅಲಿಯ ಕಾಲದಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೆ ವಾರನ್ ಹೇಸ್ಟಿಂಗ್ಸ್ ಗವರ್ನರ್ ಜನರಲ್ ಆಗಿದ್ದನು ಅವನ ಕಾಲದಲ್ಲಿ ಮೈಸೂರು ರಾಜ್ಯವು ಎರಡು ಬಾರಿ ಇಂಗ್ಲೀಷರೊಡನೆ ಯುದ್ದ ಮಾಡಬೇಕಾಯಿತು. ಹೈದರ ಅಲಿಗೂ ಇಂಗ್ಲೀಷರಿಗೂ ವೈಷಮ್ಯಕ್ಕೆ ಹಲವು ಕಾರಣಗಳಿದ್ದವು.

- ಹೈದರಾಲಿ ಸ್ವತಂತ್ರ ಮನೋವೃತ್ತಿಯ ದೇಶಾಭಿಮಾನಿಯಾಗಿದ್ದನು ಬ್ರಿಟಿಷರ್ ಭಾರತದಲ್ಲಿ ರಾಜ್ಯ ವಿಸ್ತಾರಕ್ಕೆ ತೊಡಗಿದ್ದರು. ಸಹಜವಾಗಿಯೇ ಬ್ರಿಟಿಷರು ಸ್ವತಂತ್ರ ಮನೋವೃತ್ತಿಯವರನ್ನು ಸಹಿಸುತ್ತಿರಲಿಲ್ಲ.
- ಹೈದ್ರಾಬಾದ್ ನಿಜಾಮನು ಮೈಸೂರಿನ ವಿರುದ್ದ ಬ್ರಿಟಿಷರೊಡನೆ ಒಪ್ಪಂದ ಮಾಡಿಕೊಂಡಿದ್ದನು. ಹೈದ್ರಾಬಾದ್ ನಿಜಾಮನಿಗೂ ಹೈದರ ಅಲಿಗೂ ವೈರತ್ವವಿತ್ತು. ಅಂದರೆ ವೈರಿಯ ಮಿತ್ರನು ಮಿತ್ರನಾಗಲು ಸಾಧ್ಯವೇ ಇರಲಿಲ್ಲ.



GNANADHARE IAS ACADEMY
downloaded from: www.kpscvaani.com

- ಇಂಗ್ಲೀಷರು ಮದ್ರಾಸವನ್ನು ತಮ್ಮ ನೆಲೆಯನ್ನಾಗಿ ಮಾಡಿಕೊಂಡಿದ್ದರು. ಹೈದರಾಲಿಯು ಕೇರಳದ ಬಹುತೇಕ ಪ್ರದೇಶಗಳನ್ನು ಆಕ್ರಮಿಸಿದನು. ಇದರಿಂದ ಬ್ರಿಟಿಷರಿಗೆ ಹೈದರನ ಭಯವು ಹೆಚ್ಚಾಯಿತು.
- ಭಾರತದಲ್ಲಿ ಮತ್ತು ಯುರೋಪ ಖಂಡದಲ್ಲಿ ಇಂಗ್ಲೀಷರು ಮತ್ತು ಫ್ರೆಂಚರು ಪರಸ್ಪರ ವೈರಿಗಳಾಗಿದ್ದರು. ಹೈದರಾಲಿಯು ಫ್ರೆಂಚರೊಡನೆ ಸ್ನೇಹವನ್ನು ವರ್ಧಿಸಿಕೊಂಡನು ಅವರಿಂದ ಶಸ್ತ್ರಾಸ್ತ್ರಗಳನ್ನೂ ಪಡೆಯುತ್ತಿದ್ದನು. ಅಷ್ಟೇ ಅಲ್ಲ, ಫ್ರೆಂಚ್ ಸೇನಾಧಿಪತಿಗಳು ಹೈದರನ ಸೈನ್ಯಕ್ಕೆ ಪಾಶ್ಚಾತ್ಯ ರೀತಿಯಲ್ಲಿ ತರಬೇತಿ ನೀಡುತ್ತಿದ್ದರು.

ಈ ಎಲ್ಲಾ ಕಾರಣಗಳಿಂದ ಹೈದರ ಅಲಿಗೂ, ಬ್ರಿಟಿಷರಿಗೂ ಪರಸ್ಪರ ದ್ವೇಷವಿತ್ತು. ಬ್ರಿಟಿಷರು ಹೈದರನ ವಿರುದ್ಧ ಭಾರತೀಯ ರಾಜರನ್ನೇ ಎತ್ತಿ ಕಟ್ಟಲು ಪ್ರಯತ್ನಿಸಿ ಸಫಲರೂ ಆದರು. ಕೊನೆಗೆ ಅವರೇ ವಿಜಯಶಾಲಿಗಳೂ ಆದರು.

## ಮೊದಲನೆ ಆಂಗ್ಲೋ ಮೈಸೂರು ಯುದ್ದ(1767–69)

- ಇಂಗ್ಲೀಷರು ಹೈದರ್ ಅಲಿಯ ವಿರುದ್ದ ಭಾರತೀಯ ರಾಜರೇ ಆದ ಮರಾಠರೊಡನೆ ಹಾಗೂ ಹೈದ್ರಾಬಾದದ ನಿಜಾಮನೊಡನೆ ಒಪ್ಪಂದ ಮಾಡಿಕೊಂಡರು ಇವಿರೀರ್ವರೂ ಹೈದರ್ ಅಲಿಯ ವಿರುದ್ದ ನಿಲ್ಲಬೇಕಾಯಿತು.
- ಆದರೆ ಹೈದರ್ ಅಲಿ ತನ್ನ ರಾಜಕೀಯ, ಬುದ್ದಿತನವನ್ನು ಇಲ್ಲಿ ಉಪಯೋಗಿಗಳ ಮರಾಠರನ್ನೂ ಮತ್ತು ನಿಜಾಮನನ್ನೂ ಬ್ರಿಟಿಷರಿಂದ ಬೇರ್ಪಡಿಸಿದನು. ರಣರಂಗದಲ್ಲಿ ಬ್ರಿಟಿಷರೊಬ್ಬರೇ ಹೈದರನ ಸೈನ್ಯದೊಡನೆ ಹೋರಾಡಬೇಕಾಯಿತು. ಕ್ರಿ.ಶ 1769ರಲ್ಲಿ ಹೈದರನ ಸೈನ್ಯವು ಬ್ರಿಟಿಷರನ್ನು ಸೋಲಿಸಿತು.
- ಬ್ರಿಟಿಷರು ಒಪ್ಪಂದಕ್ಕೆ ಮುಂದಾದರು ಮದ್ರಾಸ್ ಒಪ್ಪಂದವು ನಡೆಯಿತು.

## ಮದ್ರಾಸ್ ಒಪ್ಪಂದ

- ಯಾವುದೇ ಮೂರನೆಯ ಶಕ್ತಿಯ ಮೈಸೂರಿನ ಮೇಲೆ ದಾಳಿ ಮಾಡಿದರೆ ಇಂಗ್ಲೀಷರು ಹೈದರಾಲಿಗೆ ಸೈನಿಕ ಸಹಾಯವನ್ನು ಮಾಡಬೇಕು.
- ಅದರಂತೆ ಯಾವುದೇ ಮೂರನೆಯ ಶಕ್ತಿಯ ಇಂಗ್ಲೀಷರ ಮೇಲೆ ದಾಳಿ ಮಾಡಿದರೆ ಹೈದರಾಲಿಯು ಇಂಗ್ಲೀಷರಿಗೆ ಸೈನಿಕ ಸಹಾಯ ಮಾಡಬೇಕು – ಇದು ಒಪ್ಪಂದದ ಮುಖ್ಯಾಂಶವಾಗಿತ್ತು. ಇಲ್ಲಿ ಹೈದರಾಲಿಯ ರಾಜಕೀಯ ಮುಂದೋರಣೆಯು ತಿಳಿಯುತ್ತದೆ. ಅವನಿಗೆ ಮರಾಠರು ವೈರಿಗಳಾಗಿದ್ದರು.



downloaded from: www.kpscvaani.com

ಅವರು ಮೈಸೂರಿನ ಮೇಲೆ ಯುದ್ದ ಮಾಡುವುದನ್ನು ಹೈದರನು ಮುಂದಾಗಿಯೇ ಊಹಿಸಿದ್ದನು ಒಪ್ಪಂದದ ಪ್ರಕಾರ ಇಂಗ್ಲೀಷರು ಅವನ ಸಹಾಯಕ್ಕೆ ಬರಬೇಕಾಗಿತ್ತು.

### ದುರ್ಬಲರಾದ ಒಡೆಯರು

- ಕ್ರಿ.ಶ 1766 ರಲ್ಲಿ ಎರಡನೆಯ ಕೃಷ್ಣರಾಜ ಒಡೆಯರು ಮರಣ ಹೊಂದಿದ್ದರು. ನಂತರ ಅವರ ಮಗ ನಂಜರಾಜ ಒಡೆಯರು ಸಿಂಹಾಸನಕ್ಕೆ ಬಂದರು. ಹೈದರಾಲಿಯು ಒಡೆಯರ ಆಸ್ತಿಪಾಸ್ತಿಗಳನ್ನು ಅರಮನೆ ಸಹಿತ ತನ್ನ ವಶಕ್ಕೆ ತೆಗೆದುಕೊಂಡನು. ನಂಜರಾಜ ಒಡೆಯರ ಹೈದರನ ಕೈದಿಯಂತೆಯೇ ಆದರು.
- ಕ್ರಿ.ಶ 1770 ರಲ್ಲಿ ನಂಜರಾಜ ಒಡೆಯರು ಮರಣ ಹೊಂದಿದರು ಎಂಟನೆಯ ಚಾಮರಾಜ ಒಡೆಯರು ಸಿಂಹಾಸನಕ್ಕೆ ಬಂದರು. ಅವರು 6 ವರ್ಷಗಳವರೆಗೆ ಸಿಂಹಾಸನದಲ್ಲಿದ್ದರು. ಅವರು ಅತ್ಯಂತ ದುರ್ಬಲ ಅರಸರಾಗಿದ್ದರು.
- ಕ್ರಿ.ಶ 1776 ರಲ್ಲಿ 9ನೇ ಚಾಮರಾಜ ಒಡೆಯರು ಸಿಂಹಾಸನಕ್ಕೆ ಬಂದರು

## ಎರಡನೆ ಆಂಗ್ಲೋ ಮೈಸೂರು ಯುದ್ದ (1780–84)

### ಕಾರಣಗಳು

- 1769ರಲ್ಲಿ ಹೈದರ ಮತ್ತು ಇಂಗ್ಲೀಷರ ನಡುವೆ ಮದ್ರಾಸ್ ಒಪ್ಪಂದವು ನಡೆದು ಪರಸ್ಪರ ಮೇಲೆ ಮೂರನೆ ಶಕ್ತಿ ಯುದ್ದ ಘೋಷಿಸಿದರೆ ಅವರಿಗೆ ಸೈನಿಕ ಸಹಾಯ ಮಾಡಬೇಕು ಎಂಬುದಕ್ಕೆ ಇಬ್ಬರೂ ಸಹಿ ಹಾಕಿದ್ದರು.
- 1769ರಲ್ಲಿಯೇ ಮರಾಠರು ಮೈಸೂರಿನ ಮೇಲೆ ದಾಳಿ ಮಾಡಿದರು ಒಪ್ಪಂದದ ಪ್ರಕಾರ ಹೈದರಾಲಿಯು ಇಂಗ್ಲೀಷರ ಸಹಾಯವನ್ನು ಕೇಳಿದನು. ಅದರೆ ಇಂಗ್ಲೀಷರು ಸಹಾಯ ಮಾಡಲೇ ಇಲ್ಲ.
- ಇದರಿಂದ ಹೈದರನು ಕೋಪಗೊಂಡನು ಇದು ಎರಡನೆ ಆಂಗ್ಲೋ ಮೈಸೂರು ಯುದ್ದಕ್ಕೆ ಒಂದು ಕಾರಣವಾಯಿತು.
- ಫ್ರೆಂಚರು ಭಾರತದಲ್ಲಿ ಪಾಂಡಿಚೇರಿಯನ್ನು ತಮ್ಮ ವಸಾಹತುವನ್ನಾಗಿ ಮಾಡಿದ್ದರು. ಪಾಂಡಿಚೇರಿಯ ಸಮೀಪದ ಮಾಹೆ ಎಂಬಲ್ಲಿ ಫ್ರೆಂಚರ ಶಸ್ತ್ರಾಸ್ತ್ರ ತಯಾರಿಕೆಯ ಕಾರ್ಖಾನೆಯಿತ್ತು. ಅರು ಹೈದರಾಲಿಗೆ ಮಾಹೆಯಿಂದ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದ್ದರು.



downloaded from: www.kpscvaani.com

- ಇಂಗ್ಲೀಷರಿಗೂ ಫ್ರೆಂಚರಿಗೂ, ಯುರೋಪದಲ್ಲಿ ಅಂತೆಯೇ ಭಾರತದಲ್ಲಿ ಪರಸ್ಪರ ದ್ವೇಷವಿತ್ತು. ಇಂಗ್ಲೀಷರು ಫ್ರೆಂಚರ ಪಾಂಡಿಚೇರಿಯನ್ನು ಗೆದ್ದರು ಬ್ರಿಷರ ಸೈನ್ಯವು ಪಾಂಡಿಚೇರಿಯಿಂದ ಮಾಹೆಯತ್ತ ಸಾಗಿತು.
- ಹೈದರನು, ಬ್ರಿಟಿಷರು, ಮಾಹೆಯ ಮೇಲೆ ದಾಳಿ ಮಾಡಲು ವಿರೋಧಿಸಿದನು. ಬ್ರಿಟಿಷರು ಅವನ ವಿರೋಧವನ್ನು ಲೆಕ್ಕಿಸದೆ ಮಾಹೆಯ ಮೇಲೆ ದಾಳಿ ಮಾಡಿ ಮಾಹೆಯನ್ನು ವಶಪಡಿಸಿಕೊಂಡರು.

## ಯುದ್ದದ ಗತಿ:–

ಹೈದರಾಲಿಯು 1780ರಲ್ಲಿ ಬ್ರಿಟಿಷರ ಮೇಲೆ ಯುದ್ದವನ್ನು ಘೋಷಿಸಿದನು. ಪ್ರಾರಂಭದಲ್ಲಿ ಹೈದರನಿಗೆ ವಿಜಯವು ದೊರೆಯಿತು ಅವನು ಪೊಲಿಲೂರ ಕಾಳಗದಲ್ಲಿ ಬ್ರಿಟಿಷರನ್ನು ಸೋಲಿಸಿದನು ಆರ್ಕಾಟವನ್ನು ವಶಪಡಿಸಿಕೊಂಡನು.

- 1781 ರಲ್ಲಿ
    - ಪೊಲಿಂಗೂರು ಮತ್ತು
    - ಪೋರ್ಟಿನೋವೋ–ಗಳಲ್ಲಿ ಹೈದರಾಲಿ ಮತ್ತು ಇಂಗ್ಲೀಷರ ನಡುವೆ ಯುದ್ದಗಳು ನಡೆದವು.
- 1782 ರಲ್ಲಿ
    - ತಂಜಾವೂರು ಕದನ ಮತ್ತು
    - ಅನ್ನಾ ಗುಡಿ ಕದನ–ಗಳು ನಡೆದವು ಈ ಕದನಗಳಲ್ಲಿ ಇಂಗ್ಲೀಷರಿಗಾಗಲಿ ಹೈದರನಿಗಾಗಲಿ ಸ್ಪಷ್ಟವಾದ ವಿಜಯಗಳು ದೊರಕಿಲಿಲ್ಲ.
- 1782 ರಲ್ಲಿ
    - ನರಸಿಂಗರಾಯ ಪಟ್ಟಣದಲ್ಲಿ ಹೈದರ ಮತ್ತು ಇಂಗ್ಲೀಷರ ನಡುವೆ ಯುದ್ದವು ನಡೆಯಿತು. ಹೈದರನು ಕ್ಯಾನ್ಸರ್‌ನಿಂದ ನರಳುತ್ತಿದ್ದನು ಅವನು ಮರಣ ಹೊಂದಿದನು.
    - ಅನಂತರ ಹೈದರನ ಮಗ ಟಿಪ್ಪು ಸುಲ್ತಾನನು ಯುದ್ದವನ್ನು ಮುಂದುವರಿಸಿದನು. ಅದರೆ ಬ್ರಿಟಿಷರು ಮತ್ತು ಟಿಪ್ಪು ಸುಲ್ತಾನ ಇಬ್ಬರೂ ಯುದ್ದವನ್ನು ಕೊನೆಗೊಳಿಸಲು ಇಚ್ಚಿಸುತ್ತಿದ್ದರು. ಕ್ರಿ.ಶ 1784ರಲ್ಲಿ ಟಿಪ್ಪು ಸುಲ್ತಾನ ಮತ್ತು ಇಂಗ್ಲೀಷರ ಮಧ್ಯೆ ಮಂಗಳೂರು ಒಪ್ಪಂದವು ನಡೆಯಿತು.



downloaded from: www.kpscvaani.com

## ಟಿಪ್ಪು ಸುಲ್ತಾನ (ಕ್ರಿ.ಶ 1753–1799) :



- ಜನನ – 1753 ನವೆಂಬರ್ 23, ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ.
- ಮೊದಲ ಹೆಸರು – ಫಾತೇ ಅಲಿಖಾನ್ ಅಥವಾ ಟಿಪ್ಪು ಸಾಹೆಬ್
- ತಾಯಿ – ಫಕೀರುನ್ನೀಸಾ (ಫಾತೀಮಾ ಬೇಗಂ)
- 1783 ಮೇ 4ರಂದು ಬಾದಷಹ (ಚಕ್ರವರ್ತಿ) ಎಂಬ ಬಿರುದನ್ನು ಧರಿಸಿ ಪಟ್ಟಾಭಿಷಕ್ತನಾದನು.

### ಹೈದರಾಲಿಗೆ ಸಹಾಯ:

ಟಿಪ್ಪು ಸುಲ್ತಾನನು ತನ್ನ ತಂದೆ ಹೈದರಾಲಿಗೆ ಯುದ್ದಗಳಲ್ಲಿ ಹಾಗೂ ಆಡಳಿತದಲ್ಲಿ ಸಹಾಯ ಮಾಡಿದನು.

**ಉದಾಹರಣೆಗೆ:–**

- ಕ್ರಿ.ಶ 1766 ರಲ್ಲಿ ಹೈದರಾಲಿಯು ಪಾಲಂ ಪಾಳಯಗಾರನೊಡನೆ ಹೋರಾಡುವಾಗ ಟಿಪ್ಪು ಈ ಯುದ್ದದಲ್ಲಿ ಭಾಗವಹಿಸಿ ಶೂರತನದಿಂದ ಕಾದಾಡಿದನು.
- ಮೊದಲನೆ ಆಂಗ್ಲೋ ಮೈಸೂರು ಯುದ್ದದಲ್ಲಿ ಭಾಗವಹಿಸಿ ತನ್ನ ಸೈನ್ಯವನ್ನು ಮದ್ರಾಸದವರೆಗೂ ಒಯ್ದನು
- ಮದ್ರಾಸ ಒಪ್ಪಂದದ ಸಮಯದಲ್ಲಿ ಟಿಪ್ಪು ಹೈದರನೊಡನೆ ಇದ್ದನು.
- ಎರಡನೇ ಮೈಸೂರು ಯುದ್ದವನ್ನು ಹೈದರನ ಮರಣದ ನಂತರ ಮುಂದುವರಿಸಿದನು.
- **ಸಿಂಹಾಸನಾರೋಹಣ** : ಹೈದರಾಲಿಯ ಮರಣದ ನಂತರ, ಡಿಸೆಂಬರ್ 29 1782ರಲ್ಲಿ ಟಿಪ್ಪು ಸಿಂಹಾಸನವನ್ನೇರಿದನು. ನವಾಬ್ ಟಿಪ್ಪು ಸುಲ್ತಾನ್ ಬಹಾದ್ದೂರ್ ಎಂಬ ಬಿರುದನ್ನು ಧರಿಸಿದನು.

### ಎರಡನೇ ಆಂಗ್ಲೋ ಮೈಸೂರು ಯುದ್ದ: (1780–84)

- ಹೈದರಾಲಿಯ ಮರಣದ ನಂತರ ಟಿಪ್ಪು ಸುಲ್ತಾನನು ಎರಡನೇ ಆಂಗ್ಲೋ ಮೈಸೂರು ಯುದ್ದವನ್ನು ಮುಂದುವರಿಸಿದನು.



downloaded from: www.kpscvaani.com

- ಕ್ರಿ.ಶ 1783 ರಲ್ಲಿ ಸುಲ್ತಾನನು. ವಾಂಡಿವಾಶ್ ಕದನದಲ್ಲಿ ಬ್ರಿಟಿಷರನ್ನು ಸೋಲಿಸಿದನು. ಆದರೆ ಬಿದ್ನೂರು ಮತ್ತು ಮಂಗಳೂರುಗಳನ್ನು ಕಳೆದುಕೊಂಡನು.
- ಫ್ರೆಂಚರು ಅವನ ಮಿತ್ರರಾಗಿ ಅವನಿಗೆ ಯುದ್ಧದಲ್ಲಿ ಸಹಾಯ ಮಾಡುತ್ತಿದ್ದರು. ಅಮೇರಿಕದ ಸ್ವಾತಂತ್ರ್ಯ ಯುದ್ಧದ ಕೊನೆಯಲ್ಲಿ 1783 ರಲ್ಲಿ ಬ್ರಿಟಿಷರು ಮತ್ತು ಫ್ರೆಂಚರ ನಡುವೆ ವರ್ಸೇಲಿ ಒಪ್ಪಂದವು ನಡೆಯಿತು ಈ ಒಪ್ಪಂದದ ಪ್ರಕಾರ, ಫ್ರೆಂಚರು ಟಿಪ್ಪು ಸುಲ್ತಾನನಿಗೆ ಸಹಾಯ ಮಾಡುವುದನ್ನು ನಿಲ್ಲಿಸಿದರು.
- ಇಂಗ್ಲೀಷರೂ ಭಾರತದಲ್ಲಿ ಯುದ್ಧ ನಿಲುಗಡೆಯನ್ನು ಬಯಸಿದ್ದರು. ಸುಲ್ತಾನನೂ ಅದನ್ನೇ ಬಯಸಿದ್ದನು. ಪರಿಣಾಮವಾಗಿ ಕ್ರಿ.ಶ 1784 ರಲ್ಲಿ ಮಂಗಳೂರು ಒಪ್ಪಂದವು ನಡೆಯಿತು.

## ಮಂಗಳೂರು ಒಪ್ಪಂದ(1784):

- ಮಾರ್ಚ್ 11, 1784 ರಲ್ಲಿ ಬ್ರಿಟಿಷರು ಮತ್ತು ಟಿಪ್ಪು ಸುಲ್ತಾನ ಇವರ ಮಧ್ಯೆ ಮಂಗಳೂರು ಒಪ್ಪಂದವು ನಡೆಯಿತು.
- ಇಂಗ್ಲೀಷರು ಮತ್ತು ಸುಲ್ತಾನ ಇಬ್ಬರೂ ಯುದ್ಧ ಕೈದಿಗಳನ್ನು ಬಿಡುಗಡೆಗೊಳಿಸಬೇಕು.
- ಸುಲ್ತಾನನಾಗಲಿ, ಇಂಗ್ಲೀಷರಾಗಲಿ, ಪರಸ್ಪರರ ವೈರಿಗಳಿಗೆ ಗುಪ್ತವಾಗಿ ಇಲ್ಲವೆ ನೇರವಾಗಿ ಸಹಾಯ ಮಾಡಬಾರದು ಎಂಬುದು ಈ ಒಪ್ಪಂದದ ಸಾರಾಂಶವಾಗಿತ್ತು. ಈ ಒಪ್ಪಂದದಿಂದ ಸುಲ್ತಾನನ ಘನತೆ ಹೆಚ್ಚಿತು.

## ಮೈಸೂರು ಮರಾಠಾ ಯುದ್ಧ (1786–87) ಕಾರಣಗಳು :

ಟಿಪ್ಪು ಸುಲ್ತಾನನು ಇಂಗ್ಲೀಷರೊಡನೆ ಯುದ್ಧ ಮಾಡುತ್ತಿರುವಾಗ ಅವನ ಕೆಲವು ಸಾಮಂತರು ಸ್ವತಂತ್ರಗೊಳ್ಳಲು ಪ್ರಯತ್ನಿಸಿದರು. ಅಂಥವರಲ್ಲಿ ನರಗುಂದದ ವೆಂಕಟರಾವ್ ಭಾವೆ ಒಬ್ಬನಾಗಿದ್ದನು. ಅವನು ಮೈಸೂರಿಗೆ ಸಲ್ಲಿಸಬೇಕಾದ ವಾರ್ಷಿಕ ಕಾಣಿಕೆಗಳನ್ನು ಸಲ್ಲಿಸಿರಲಿಲ್ಲ. ಇದರಿಂದ ಸಿಟ್ಟಿಗೆದ್ದ ಸುಲ್ತಾನನು ನರಗುಂದದ ದೇಸಾಯಿಗೆ ಎಚ್ಚರಿಕೆ ನೀಡಿದನು. ಸುಲ್ತಾನನಿಗೆ ಅಂಜಿದ ದೇಸಾಯಿ ಮರಾಠರ ಆಶ್ರಯವನ್ನು ಪಡೆದನು. ಇದು ಮೈಸೂರು ಮರಾಠಾ ಯುದ್ಧಕ್ಕೆ ಕಾರಣವಾಯಿತು.

## ಯುದ್ಧ:

- ಟಿಪ್ಪು ಸುಲ್ತಾನನು ಮರಾಠ ಸೈನ್ಯವನ್ನು ಸೋಲಿಸಿದನು. ಮನೋಲಿ, ರಾಮದುರ್ಗ, ನರಗುಂದ ಕಿತ್ತೂರು ಖಾನಪುರ, ದೊಡ್ಡವಾಡ ಮತ್ತು ಜಂಬೋಲೆ ಕೋಟೆಗಳನ್ನು ವಶಪಡಿಸಿಕೊಂಡನು



downloaded from: www.kpscvaani.com

- ಮರಾಠರ ನಾನಾ ಫಡಣ್‌ವಿಸ್ ಹೈದ್ರಾಬಾದದ ನಿಜಾಮನೊಡನೆ ಒಪ್ಪಂದ ಮಾಡಿಕೊಂಡು ಉತ್ತರ ಮೈಸೂರು ಪ್ರದೇಶಗಳ ಮೇಲೆ ದಾಳಿ ಮಾಡಿದನು. ನಾನಾ ಫಡಣವಿಸ್–ನರಗುಂದ ಕಿತ್ತೂರು ಸವಣೂರು, ಗದಗ, ಶಿರಹಟ್ಟಿ ಮತ್ತು ಹಳೆ ಹುಬ್ಬಳ್ಳಿಗಳನ್ನು ವಶಪಡಿಸಿಕೊಂಡನು.
- ಟಿಪ್ಪು ಸುಲ್ತಾನನು ಸುಂಟರಗಾಳಿಯಂತೆ ಎರಗಿ ಕ್ರಿ.ಶ 1787 ರಲ್ಲಿ ನಿಜಾಮನಿಂದ ಅದೋನಿಯನ್ನು ಹಾಗೂ ಬಹದ್ದೂರ್ ಬಂದ್‌ಗಳನ್ನು ವಶಪಡಿಸಿಕೊಂಡನು.
- ರಾಯಚೂರು, ದೋಅಬ್ ಪ್ರದೇಶಗಳಲ್ಲಿ ಯುದ್ದವನ್ನು ಮುಂದುವರಿಸಿದ ಸುಲ್ತಾನನು ತಾನು ಕಳೆದುಕೊಂಡ ಪ್ರದೇಶಗಳನ್ನು ವಾಪಸ್ ಪಡೆದನು.

## ಗಜೇಂದ್ರಗಡ ಒಪ್ಪಂದ(1787)

- ಮರಾಠರು ಮತ್ತು ಸುಲ್ತಾನರ ಮಧ್ಯೆ ಕ್ರಿ.ಶ 1787 ರಲ್ಲಿ ಗಜೇಂದ್ರಗಡ ಒಪ್ಪಂದವು ನಡೆಯಿತು. ಈ ಒಪ್ಪಂದದ ಪ್ರಕಾರ – ತುಂಗಭದ್ರಾ ಮತ್ತು ಕೃಷ್ಣ ನದಿಗಳ ನಡುವಿನ ಪ್ರದೇಶಗಳಿಗಾಗಿ ಸುಲ್ತಾನನು ಮರಾಠರಿಗೆ 12 ಲಕ್ಷ ರೂ. ಪರಿಹಾರ ನೀಡಿದನು. ಈ ಯುದ್ಧದ ಗೆಲುವಿನಿಂದ ಟಿಪ್ಪುವಿನ ಘನತೆ ಇನ್ನೂ ಹೆಚ್ಚಿತು.

## ಮೂರನೆ ಆಂಗ್ಲೋ ಮೈಸೂರು ಯುದ್ದ(ಕ್ರಿ.ಶ 1790–1792) :

ಲಾರ್ಡ್ ಕಾರ್ನವಾಲೀಸನು ಭಾರತದಲ್ಲಿ ಬ್ರಿಟಿಷ ಈಸ್ಟ್ ಇಂಡಿಯಾ ಕಂಪನಿಯ ಗವರ್ನರ್ ಜನರಲ್ ಆಗಿದ್ದನು. ಅವನು ಕ್ರಿ.ಶ 1790 ರಲ್ಲಿ ಮೂರನೇ ಆಂಗ್ಲೋ ಮೈಸೂರು ಯುದ್ದಕ್ಕೆ ಕಾರಣನಾದನು.

### ಕಾರಣಗಳು:

- ಟಿಪ್ಪು ಸುಲ್ತಾನನು ಮರಾಠರೊಡನೆ ಯುದ್ದದಲ್ಲಿ ಗಳಿಸಿದ ವಿಜಯ ಹಾಗೂ ಅವನ ರಾಜ್ಯ ವಿಸ್ತಾರಗಳಿಂದ ಬ್ರಿಟಿಷರು ಭಯಪಟ್ಟರು.
- ಟಿಪ್ಪು ಸುಲ್ತಾನನು ಇಂಗ್ಲೀಷರ ವೈರಿಗಳಾದ ಫ್ರೆಂಚರೊಡನೆ ಸ್ನೇಹವನ್ನು ಬೆಳೆಸಿಕೊಂಡನು. ಫ್ರೆಂಚರಿಂದ ಸುಲ್ತಾನನು ಸೈನ್ಯ ಸಹಾಯವನ್ನೂ, ಪಡೆಯುತ್ತಿದ್ದನು. ಫ್ರೆಂಚ್ ಸೇನಾಧಿಪತಿಗಳನ್ನು ನೇಮಿಸಿ ತನ್ನ ಸೈನಿಕರಿಗೆ ಪಾಶ್ಚಾತ್ಯ ಮಾದರಿಯ ತರಬೇತಿಯನ್ನು ಕೊಡಿಸುತ್ತಿದ್ದನು. ಇದರಿಂದ ಬ್ರಿಟಿಷರು ಸಹಜವಾಗಿಯೇ ಸುಲ್ತಾನನ ವಿರುದ್ಧ ನಿಂತರು.



downloaded from: www.kpscvaani.com

- ಬ್ರಿಟಿಷರಿಗೆ ಸುಲ್ತಾನನೊಡನೆ ಯುದ್ದದ ಅವಶ್ಯಕತೆಯಿತ್ತು. ಏಕೆಂದರೆ ಸುಲ್ತಾನನು ಭಾರತದಲ್ಲಿ ಬ್ರಿಟಿಷರ ರಾಜ್ಯ ವಿಸ್ತಾರಕ್ಕೆ ತೊಡಕಾಗಿದ್ದನು. ಸ್ವಾತಂತ್ರ್ಯ ಮನೋವೃತ್ತಿಯನ್ನು ಹೊಂದಿದ ಯಾರನ್ನೇ ಆದರೂ ಲಾರ್ಡ್ ಕಾರ್ನವಾಲೀಸ್ ನಂತಹ ಸಾಮ್ರಾಜ್ಯವಾದಿಗಳು ಸಹಿಸುತ್ತಿರಲಿಲ್ಲ.
- ಟಿಪ್ಪು ಸುಲ್ತಾನನಿಗೂ ಇಂಗ್ಲೀಷರ ಮೇಲೆ ಯುದ್ದದ ಅವಶ್ಯಕತೆಯಿತ್ತು. ಏಕೆಂದರೆ ಅವನು ಬ್ರಿಟಿಷರನ್ನು ಭಾರತದಿಂದಲೇ ಓಡಿಸುವ ಉದ್ದೇಶವನ್ನು ಹೊಂದಿದ್ದನು.
- ಇಂಗ್ಲೀಷರ ಮಿತ್ರನಾದ ತ್ರಾವಣಕೋರದ ರಾಜನ ಮೇಲೆ ಟಿಪ್ಪು ಸುಲ್ತಾನನು ಯುದ್ದಕ್ಕೆ ಹೋದನು ಇದನ್ನೇ ನೆಪವಾಗಿಟ್ಟುಕೊಂಡು, ಟಿಪ್ಪುವಿನ ವಿರುದ್ಧ ಇಂಗ್ಲೀಷರು ಯುದ್ದವನ್ನು ಘೋಷಿಸಿದರು.

## ಕಾರ್ನವಾಲೀಸನ ವ್ಯೂಹ:–

- ಕಾರ್ನ ವಾಲೀಸನು ಟಿಪ್ಪು ಸುಲ್ತಾನದ ವಿರುದ್ಧ ದೇಶೀಯ ರಾಜರ ಒಂದು ವ್ಯೂಹವನ್ನೇ ರಚಿಸಿದನು.
- ಮರಾಠರ ರಾಜಧಾನಿಯಲ್ಲಿ ಬ್ರಿಟಿಷ ಪ್ರತಿನಿಧಿಯೊಬ್ಬನನ್ನು ನೇಮಿಸಿದ್ದರು. ಕಾರ್ನವಾಲೀಸನು ಈ ಪ್ರತಿನಿಧಿಗೆ ಟಿಪ್ಪುವಿನ ವಿರುದ್ಧ ಯುದ್ಧ ಹೂಡಲು ಮರಾಠರನ್ನು ಪ್ರಚೋದಿಸಬೇಕೆಂದು ತಿಳಿಸಿದನು. ಅದಕ್ಕಾಗಿ ಅವರೊಡನೆ ಒಂದು ಒಪ್ಪಂದವನ್ನು ಕೂಡ ಮಾಡಿಕೊಳ್ಳಬೇಕೆಂದು ತಿಳಿಸಿದನು. ಅದಕ್ಕಾಗಿ ಅವರೊಡನೆ ಒಂದು ಒಪ್ಪಂದವನ್ನು ಕೂಡ ಮಾಡಿಕೊಳ್ಳಬೇಕೆಂದು ತಿಳಿಸಿದನು.
- ಮರಾಠರು ಟಿಪ್ಪು ಸುಲ್ತಾನನ ವಿರುದ್ಧ ಯುದ್ದಕ್ಕೆ ಒಪ್ಪಿದರು ಮತ್ತು ಬ್ರಿಟಿಷರಿಗೆ ಸಕ್ರಿಯವಾಗಿ ಸಹಾಯ ಮಾಡುವುದಾಗಿಯೂ ತಿಳಿಸಿದರು. ಬ್ರಿಟಿಷರು ಈ ಯುದ್ಧದಲ್ಲಿ ಗೆದ್ದ ಅರ್ಧ ಪ್ರದೇಶವನ್ನು ಮರಾಠರಿಗೆ ನೀಡಲು ಒಪ್ಪಿದರು. ಹೀಗೆ ಕಾರ್ನವಾಲೀಸನು ಮರಾಠರ ಬೆಂಬಲವನ್ನು ಪಡೆದನು.
- ಕಾರ್ನವಾಲೀಸನು ಹೈದರಾಬಾದದ ನಿಜಾಮನೊಡನೆ ಕೂಡ ಒಂದು ಒಪ್ಪಂದವನ್ನು ಮಾಡಿಕೊಂಡನು. ನಿಜಾಮನೂ ಸುಲ್ತಾನನ ವಿರುದ್ದ ಯುದ್ದಕ್ಕೆ ಸಿದ್ದನಾದನು.

## ಏಕಾಂಗಿಯಾದ ಸುಲ್ತಾನ

- ಬ್ರಿಟಿಷರ ಈ ವ್ಯೂಹವನ್ನು ಅರಿತ ಸುಲ್ತಾನನು ಮರಾಠರು ಮತ್ತು ನಿಜಾಮನ ಮನವೊಲಿಸಲು ವಿಫಲನಾದನು. ಅವನು ಫ್ರೆಂಚರ ಸಹಾಯವನ್ನು ಕೇಳಿದನು. ಆದರೆ ಫ್ರಾನ್ಸವು ಸುಲ್ತಾನನಿಗೆ ಬ್ರಿಟಿಷರ ವಿರುದ್ಧ ಸಹಾಯವನ್ನು ನೀಡುವ ಸ್ಥಿತಿಯಲ್ಲಿರಲಿಲ್ಲ, 1789ರಲ್ಲಿ ಫ್ರಾನ್ಸ್‌ನಲ್ಲಿ ಮಹಾಕ್ರಾಂತಿಯೊಂದು ಜರುಗಿತ್ತು.



downloaded from: www.kpscvaani.com

- ಸುಲ್ತಾನನು ಟರ್ಕಿ ದೇಶಕ್ಕೆ ಪರ್ಶಿಯ ದೇಶಕ್ಕೆ ಸಹಾಯಕ್ಕಾಗಿ ರಾಯಬಾರಿಯನ್ನು ಕಳಿಸಿದನು. ಆದರೆ ಅವರಿಂದಲೂ ಯಾವ ಸಹಾಯವೂ ದೊರಕಲಿಲ್ಲ. ಸುಲ್ತಾನನು ಏಕಾಂಗಿಯಾಗಿ ಬ್ರಿಟಿಷರು ಮತ್ತು ಅವರ ಮಿತ್ರಕೂಟಗಳೊಡನೆ ಹೋರಾಡಬೇಕಾಯಿತು.

## ಯುದ್ದ

- ಟಿಪ್ಪು ಸುಲ್ತಾನನು ತ್ರಾವಣಕೋರದ ರಾಜನ ಮೇಲೆ ಯುದ್ದವನ್ನು ಸಾರಿದನು. ಇಂಗ್ಲೀಷರು ತ್ರಾವಣ ಕೋರದ ರಾಜನ ಪರವಾಗಿ ಯುದ್ಧ ರಂಗವನ್ನು ಪ್ರವೇಶಿಸಿದರು. ಹೀಗೆ ಮೂರನೆ ಮೈಸೂರು ಯುದ್ದವು 1790 ರಲ್ಲಿ ಪ್ರಾರಂಭವಾಯಿತು.
- ಈ ಯುದ್ದದಲ್ಲಿ ಸ್ವತಃ ಗವರ್ನರ್ ಜನರಲ್ ಕಾರ್ನವಾಲೀಸನು ಬ್ರಿಟಿಷ್ ಸೈನ್ಯದ ನೇತೃತ್ವವನ್ನು ವಹಿಸಿದನು. ಕ್ರಿ.ಶ 1791ರಲ್ಲಿ ಅವನು ಶ್ರೀರಂಗ ಪಟ್ಟಣದವರೆಗೂ ಬಂದನು. ಟಿಪ್ಪುವಿನ ಅಪ್ರತಿಮ ಹೋರಾಟ ಅವನನ್ನು ವಾಪಸ್ ಹೋಗುವಂತೆ ಮಾಡಿತು.
- ಕ್ರಿ.ಶ 1792 ರಲ್ಲಿ ಕಾರ್ನವಾಲೀಸನು ಮುಂಬೈ ಪ್ರಾಂತ್ಯದ ಬ್ರಿಟಿಷ್ ಸೈನ್ಯವನ್ನು ಕರೆಸಿಕೊಂಡನು. ನಿಜಾಮನ ಸೈನ್ಯ ಮತ್ತು ಮರಾಠರ ಸೈನ್ಯವು ಬ್ರಿಟಿಷರ ಸಹಾಯಕ್ಕೆ ಬಂದವು.
- ಹೀಗೆ ಬ್ರಿಟಿಷರ ಸೈನ್ಯ, ನಿಜಾಮನ ಸೈನ್ಯ ಮತ್ತು ಮರಾಠರ ಸೈನ್ಯ ಈ ಮೂರು ಸೈನ್ಯಗಳ ಮುಂದೆ ಸುಲ್ತಾನನ ಸೈನ್ಯ ಹೋರಾಡಬೇಕಾಯಿತು. ವೈರಿಗಳು ಶ್ರೀರಂಗ ಪಟ್ಟಣವನ್ನು ಪ್ರವೇಶಿಸುವ ಸಮಯದಲ್ಲಿ ಸುಲ್ತಾನನು ಒಪ್ಪಂದಕ್ಕಾಗಿ ಕೇಳಿಕೊಂಡನು 1792 ರಲ್ಲಿ ಶ್ರೀರಂಗಪಟ್ಟಣ ಒಪ್ಪಂದವಾಯಿತು.

## ಶ್ರೀರಂಗಪಟ್ಟಣ ಒಪ್ಪಂದ (1792)

ಶ್ರೀರಂಗ ಪಟ್ಟಣದ ಒಪ್ಪಂದದ ಮುಖ್ಯಾಂಶಗಳು ಹೀಗಿವೆ:-

- ಟಿಪ್ಪು ಸುಲ್ತಾನನು ವಿಜೇತರಿಗೆ ತನ್ನ ರಾಜ್ಯದ ಅರ್ಧ ಭಾಗವನ್ನು ನೀಡಿದನು.
- ಸುಲ್ತಾನನು ವಿಜೇತರಿಗೆ 3 ಲಕ್ಷ ಪೌಂಡ್ಸಗಳನ್ನು ಮೂರು ಕಂತುಗಳಲ್ಲಿ ಯುದ್ದದ ವೆಚ್ಚವೆಂದು ನೀಡಲು ಒಪ್ಪಿದನು.
- ಯುದ್ದದ ವೆಚ್ಚವನ್ನು ಪೂರ್ಣವಾಗಿ ನೀಡುವವರೆಗೆ ಸುಲ್ತಾನನ ಇಬ್ಬರು ಮಕ್ಕಳನ್ನು ಬ್ರಟಿಷರಲ್ಲಿ ಒತ್ತೆ ಇಡಬೇಕಾಯಿತು.
- ಯುದ್ದ ಕೈದಿಗಳನ್ನು ಸುಲ್ತಾನನು ಬಿಡುಗಡೆ ಮಾಡಿದನು.



downloaded from: www.kpscvaani.com

- ಸುಲ್ತಾನನು ನೀಡಿದ ತನ್ನ ಅರ್ಧರಾಜ್ಯವನ್ನು ವಿಜೇತರಾದ ಬ್ರಿಟಿಷರು, ಮರಾಠರು ಹಾಗೂ ನಿಜಾಮ ಇವರು ಹಂಚಿಕೊಂಡರು. ಬ್ರಿಟಿಷರು ಮಲಬಾರ ಮತ್ತು ಕೂರ್ಗ್ ಪ್ರದೇಶಗಳನ್ನು ಪಡೆದರು.
- ಮರಾಠರು ಮತ್ತು ನಿಜಾಮ ತಮ್ಮ ತಮ್ಮ ರಾಜ್ಯಗಳಿಗೆ ಹೊಂದಿಕೊಂಡಿರುವ ಸುಲ್ತಾನನ ಪ್ರದೇಶಗಳನ್ನು ಆಕ್ರಮಿಸಿದರು.

## ನಾಲ್ಕನೆ ಆಂಗ್ಲೋ ಮೈಸೂರು ಯುದ್ಧ (1798–99) :

### ಕಾರಣಗಳು :

- ಲಾರ್ಡ್ ವೆಲ್ಲೆಸ್ಲಿಯ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಗವರ್ನರ್ ಜನರಲ್ ಆಗಿದ್ದನು. ಟಿಪ್ಪು ಸುಲ್ತಾನನನ್ನು ಕೊನೆಗೊಳಿಸುವುದೇ ಅವನ ಉದ್ದೇಶವಾಗಿತ್ತು.
- ಲಾರ್ಡ್ ವೆಲ್ಲೆಸಿಯು, ಯಾವುದೇ ಪೂರ್ವ ಕರಾರುಗಳು ಇಲ್ಲದೆ ತನಗೆ ಸಂಪೂರ್ಣವಾಗಿ ಶರಣಾಗಬೇಕು ಹಾಗೂ ಸಹಾಯಕ ಸೈನ್ಯ ಪದ್ಧತಿಯನ್ನು ಮೈಸೂರು ರಾಜ್ಯದಲ್ಲಿ ಸ್ವೀಕರಿಸಬೇಕು ಎಂದು ಆದೇಶಿಸಿದನು. ಆದರೆ ಸುಲ್ತಾನನು ಅವುಗಳನ್ನು ನಿರಾಕರಿಸಿದನು. ಇದು ಯುದ್ದಕ್ಕೆ ಕಾರಣವಾಯಿತು.

### ಏಕಾಂಗಿಯಾದ ಸುಲ್ತಾನ:

- ಸುಲ್ತಾನನು ಫ್ರಾನ್ಸದ ನೆಪೋಲಿಯನ್ ಬೋನಾಪಾರ್ಟೆ, ಅಫಘಾನಿಸ್ತಾನದ ಅಮೀರ ಹಾಗೂ ಟರ್ಕಿಯ ಸುಲ್ತಾನರನ್ನು ಸಹಾಯಕ್ಕಾಗಿ ಯಾಚಿಸಿದನು. ಆದರೆ ಅವನಿಗೆ ಯಾರ ಸಹಾಯವೂ ಸಕಾಲದಲ್ಲಿ ದೊರೆಯಲಿಲ್ಲ.
- ಲಾರ್ಡ್ ವೆಲ್ಲೆಸ್ಲಿಯು, ಸುಲ್ತಾನನು ಇತರ ದೇಶೀಯ ಅರಸರಿಂದ ದೂರವಾಗುವಂತೆ ಮಾಡಿದನು. ಅವನು ಮರಾಠರು ಮತ್ತು ನಿಜಾಮ – ಅವರೊಡನೆ ಒಪ್ಪಂದ ಮಾಡಿಕೊಂಡನು.
- ಹ್ಯಾರಿಸ್ ಇಂಗ್ಲೀಷರ ಸೈನ್ಯದ ನೇತೃತ್ವವನ್ನು ವಹಿಸಿದ್ದನು. ಯುದ್ದ ಪ್ರಾರಂಭವಾಗಿ ಒಂದು ತಾಸಿನೊಳಗೆ ಶ್ರೀರಂಗ ಪಟ್ಟಣವನ್ನು ವೈರಿಗಳು ಆಕ್ರಮಿಸಿದರು. ಸುಲ್ತಾನನು ಯುದ್ದವನ್ನು ಮಾಡುತ್ತಲೇ ಮರಣ ಹೊಂದಿದನು.



downloaded from: www.kpscvaani.com

## ಆಧುನಿಕ ಮೈಸೂರು ರಾಜ್ಯ :

### ಮುಮ್ಮಡಿ ಕೃಷ್ಣರಾಜ ಒಡೆಯ್ (1799–1831)



- 1798 ರಾಣಿ ಅಮ್ಮಣಿಯವರು ಬ್ರಿಟಿಷರಿಂದ ನೆರವಿನ ಒಪ್ಪಂದ ಪಡೆದರು (ಜನರಲ್ ಹ್ಯಾರಿಸ್‌ನೊಂದಿಗೆ)
- 1799 ಮೇ 4 ಟಿಪ್ಪುವಿನ ಮರಣದ ನಂತರ ಗವರ್ನರ್ ಜನರಲ್ ವೆಲ್ಲಸ್ಲಿ ಒಡೆಯರ ಮನೆತನವನ್ನು ಪುನರ್ ಸ್ಥಾಪಿಸಿದನು.
- ಮುಮ್ಮಡಿ ಕೃಷ್ಣರಾಜ ಒಡೆಯರ್ ಅಪ್ರಾಪ್ತ ಬಾಲಕನಾಗಿದ್ದರಿಂದ ಆಡಳಿತ ನೋಡಿಕೊಳ್ಳಲು ರಾಜ ಪ್ರತಿನಿಧಿ ಸಮಿತಿ ಸ್ಥಾಪನೆ
- ರಾಜಪ್ರತಿನಿಧಿ ಸಮಿತಿ ಸದಸ್ಯರು – ರಾಜಮಾತೆ ಲಕ್ಷ್ಮಿ ಅಮ್ಮಣ್ಣಿ, ದಿವಾನ್ ಪೂರ್ಣಯ್ಯ ಕರ್ನಲ್ ಬ್ಯಾರಿಕ್ಲೋಸ್.
- 1799 ಜೂನ್ 30 ಪಟ್ಟಾಭಿಷೇಕ
- 1799–1811 ರವರೆಗೆ ಪ್ರಥಮ ದಿವಾನರಾಗಿ ಪೂರ್ಣಯ್ಯ ನೇಮಕ
- ಸಂಸ್ಥಾನದ ಪ್ರಥಮ ಬ್ರಿಟಿಷ್ ರೆಸಿಡೆಂಟ್ ಆಗಿ ಕರ್ನಲ್ ಬ್ಯಾರಿಕ್ಲೋಸ್ ನೇಮಕ
- 1799 ಜೂನ್ 8 ಸಹಾಯಕ ಸೈನ್ಯ ಪದ್ದತಿಗೆ ಸಹ (ಶ್ರೀರಂಗಪಟ್ಟಣ ಒಂಪ್ಪದ ಪ್ರಕಾರ)
- 1811–1831 ಒಡೆಯರ ನೇರ ಆಳ್ವಿಕೆ.
- ಶಿವನ ಸಮುದ್ರದ ಬಳಿ ಕಾವೇರಿ ನದಿಗೆ ಸೇತುವೆ ನಿರ್ಮಾಣ
- 1816–17 ಮತ್ತು 1823–24 ಬರಗಾಲ ಮತ್ತು ಕ್ಷಾಮಗಳು
- 1831– ನಗರ / ಬಿದನೂರು ರೈತರದಂಗೆ – ಕುಂಸಿಯ ಸಾದರಮಲ್ಲ / ಬೂದಿ ಬಸಪ್ಪನಿಂದ
- (ಸಹಾಯಕ ಸೈನ್ಯ ಒಪ್ಪಂದದ ಅನ್ವಯ) ರಾಜ್ಯದ ಆಡಳಿತ ವಿಫಲವಾದ್ದರಿಂದ ಒಡೆಯರನ್ನು ಪದಚ್ಯುತಿ ಮಾಡಿ ಲಾರ್ಡ್ ವಿಲಿಯಂ ಬೆಂಟಿಂಕ್ ಕಮಿಷನರ್ ಆಳ್ವಿಕೆ ಜಾರಿಗೆ ತಂದ.
- 1831 ಅಕ್ಟೋಬರ್ 19, ಕಮಿಷನರ್ ಆಳ್ವಿಕೆ ಜಾರಿ



downloaded from: www.kpscvaani.com

- ಮುಮ್ಮಡಿ ಕೃಷ್ಣರಾಜ ಒಡೆಯರ್ ಬಹುಭಾಷಾ ಪಂಡಿತರು ಇವರ ಕೃತಿಗಳ ಕೃಷ್ಣ ಕಥಾಪುಷ್ಪ ಮಂಜರಿ, ರಾಮಾಯಣ ಕಥಾ ಪುಷ್ಪ ಮಂಜರಿ, ಚಾಮುಂಡಿ ಮಂಗಳ ಮಾಲಿಕಾ, ಶ್ರೀ ತತ್ವನಿಧಿ, ಕೌತಕ ನಿಧಿ ವತ್ಸರಾಜ ಕಥೆ, ಕೃಷ್ಣ ಕಥಾ ಸಾರಸಂಗ್ರಹ ಮತ್ತು ದೇವಿಮಹತ್ವ ಸಪ್ತಶತಿ, ಸಿರಿನಂಜುಂಡ ಶತಕ ಮುಂತಾದವು.

## ಆಸ್ಥಾನ ವಿದ್ವಾಂಸರು ಮತ್ತು ಅವರ ಕೃತಿಗಳು

- ಕೆಂಪುನಾರಾಯಣ – ಮುದ್ರಾಮಂಜೂಷ
- ಶ್ರೀನಿವಾಸಕವಿ ಕೃಷ್ಣರಾಜ – ಜಯೋತ್ಕರ್ಷ ಕೃಷ್ಣರಾಜ ಸುಭೋದಯ
- ಅಳಿಯ ಲಿಂಗರಾಜ – ನರಪತಿ ಚರಿತೆ
- ದೇವಚಂದ್ರ – ರಾಜಾವಳಿ ಕಥೆ
- ರಾಮಕೃಷ್ಣಶಾಸ್ತ್ರೀ – ಭುವನ ಪ್ರದೀಪಿಕಾ
- ಬಸವಪ್ಪಶಾಸ್ತ್ರೀ (ಅಭಿನವ ಕಾಳಿದಾಸ) – ಶಾಕುಂತಲ ನಾಟಕ, ರತ್ನಾವಳಿ, ವಿಕ್ರಮೋರ್ವಶಿಯ,
    - ನೀತಿಕರ್ತ, ಮಾಲತಿ ಮಾಧವವನ್ನು ಕನ್ನಡಕ್ಕೆ ಅನುವಾದ
- ಸಂಗೀತ ವಿದ್ವಾಂಸರು – ಸದಾಶಿವರಾವ್, ವೆಂಕಟ ಸುಬ್ಬಯ್ಯ ಮತ್ತು ಚಿಕ್ಕರಾಮಪ್ಪ
    - ಜಗನ್ಮೋಹನ ಅರಮನೆ ನಿರ್ಮಾಣ
- ನಂಜನಗೂಡಿನ ನಂಜುಂಡೇಶ್ವರ ದೇವಸ್ಥಾನದ ಮಹಾಗೋಪುರ ಮತ್ತು ಚಾಮುಂಡೇಶ್ವರಿ ದೇವಾಲಯದ ಗೋಪುರ ನಿರ್ಮಾಣ
- 1867 ರಲ್ಲಿ ದತ್ತುಪುತ್ರ ಸ್ವೀಕಾರಕ್ಕೆ ಅನುಮತಿ ಮತ್ತು ದತ್ತು ಪುತ್ರನಿಗೆ 18 ವರ್ಷ ತುಂಬಿದಾಗ ರಾಜ್ಯವನ್ನು ಹಿಂತಿರುಗಿಸುವ ಭರವಸೆ.(ಗ.ಜ ಲಾರ್ಡ್ ಲಾರೆನ್ಸ್‌ನಿಂದ) ಅದರಂತೆ 1881 ಮಾರ್ಚಿ

## ಕ್ರಿ.ಶ 1831–1881ವರೆಗೆ ಬ್ರಿಟಿಷ್ ಕಮೀಷನರ್‌ಗಳ ಆಡಳಿತ :

- ಆರಂಭದಲ್ಲಿ ಒಬ್ಬ ಸೀನಿಯರ್ ಕಮೀಷನರ್ & ಜೂನಿಯರ್ ಕಮೀಷನರ್ ಆಳ್ವಿಕೆ ನಡೆಸುತ್ತಿದ್ದರು
- ಮೊದಲ ಸೀನಿಯರ್ ಕಮೀಷನರ್ ಕರ್ನಲ್ ಜೆ.ಬ್ರಿಗ್ಸ್
- ಜೂನಿಯರ್ ಕಮೀಷನರ್ ಲೂಷಿಂಗ್ ಟನ್ ಎಂಬುವವರು.



downloaded from: www.kpscvaani.com

## ಮಾರ್ಕ್ ಕಬ್ಬನ್ (ಕ್ರಿ.ಶ 1834–1861) :

- ಇವರು ರಾಜಧಾನಿಯನ್ನು ಮೈಸೂರಿನಿಂದ ಬೆಂಗಳೂರಿಗೆ ವರ್ಗಾಯಿಸಿದರು.
- ಆಡಳಿತದ ಮಿತವ್ಯಯದ ದೃಷ್ಠಿಯಿಂದ 6–4ಕ್ಕೆ ಇಳಿಸಲಾಯಿತು.
- ಆಡಳಿತದ ಸುಲಭೀಕರಣದ ದೃಷ್ಠಿಯಿಂದ ಅಠಾರ ಕಚೇರಿಯ ಬದಲು 9 ಕಚೇರಿಯನ್ನಾಗಿಸಿದರು. ಇವನು ಕ್ರಿ.ಶ 1859ರಲ್ಲಿ ಕರ್ನಾಟಕದ ಬೆಂಗಳೂರಿನಿಂದ ತಮಿಳುನಾಡಿನ ಜೋಲಾರಪೇಟೆಗೆ ರೈಲು ಸಂಪರ್ಕ ಆರಂಭಿಸಿದರು.
- ಇವರ ಆಡಳಿತವನ್ನು ಮೈಸೂರಿನ ಪ್ರಗತಿಯ ಇತಿಹಾಸದಲ್ಲಿ ಪರಿವರ್ತನೆಯ ಕಾಲ ಎಂದು ಕರೆಯಲಾಗಿದೆ.

## ಲೂಯಿ ಬೆನ್ಥಾಮ್ ಬೌರಿಂಗ್ (ಕ್ರಿ.ಶ 1861–1870) :

- ಇವನು ಹಿಂದೂ ಮಾದರಿಯ ಆಡಳಿತ ವ್ಯವಸ್ಥೆಗಳನ್ನು ಕಿತ್ತೊಗೆದು ಬ್ರಿಟಿಷ್ ಮಾದರಿಯ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತಂದನು.
- ಇವನು ಆಡಳಿತ ವಿಭಾಗಗಳನ್ನು 4–3ಕ್ಕೆ ಇಳಿಸಿದನು.
- ಅಠಾರ ಕಛೇರಿಯನ್ನು ಟಿಪ್ಪು ಪ್ಯಾಲೇಸ್‌ನಿಂದ ಈಗಿನ ಹೈಕೋರ್ಟಿಗೆ ಸ್ಥಳಾಂತರಿಸಿದನು.
- ಕೆಂಗಲ ಹನುಮಂತರಾಯರು ಪ್ರಥಮ ಬಾರಿಗೆ ಐ.ಪಿ.ಸಿ (ಇಂಡಿಯನ್ ಪೀನಲ್ ಕೋಡ್) ಭಾರತದ ದಂಡ ಸಂಹಿತೆಯನ್ನು & ಸಿ.ಆರ್.ಪಿ.ಸಿ ಜಾರಿಗೊಳಿಸಿದರು.
- 1864ರಲ್ಲಿ ರಿಜಿಸ್ಟರ್ ಆ್ಯಕ್ಟ್ ಪ್ರಕಾರ ಎಲ್ಲಾ ಕಾಗದ ಪತ್ರಗಳನ್ನು ನೊಂದಾಯಿಸಬೇಕೆಂಬ ಕಾನೂನು ಜಾರಿಗೊಳಿಸಿದನು.
- ಬಜೆಟ್ ಪದ್ದತಿಯನ್ನು ಜಾರಿಗೊಳಿಸಿದನು
- ಹಳೆಯ ಕಂದಾಚಾರದ ಸೈನ್ಯವನ್ನು ರದ್ದು ಮಾಡಿ ಹೊಸ ಪೋಲಿಸ್ ನೀತಿ ನಿಯಮಗಳನ್ನು ಜಾರಿಗೆ ತಂದನು.
- 1864ರಲ್ಲಿ ಸೆಂಟ್ರಲ್ ಕಾಲೇಜ್ ಸ್ಥಾಪಿಸಿದನು.
- ಜಿ.ಎಲ್.ರೈಸ್‌ರವರು ಹೋಬಳಿಗಳಲ್ಲಿ ಎಜುಕೆಷನ್ ಸಿಸ್ಟಮ್ ಪ್ರಾರಂಭಿಸಿದರು.
- ಮಾರ್ಕ್ ಕಬ್ಬನ್‌ರವರ ನೆನಪಿಗಾಗಿ ಬೆಂಗಳೂರಿನಲ್ಲಿ ಕಬ್ಬನ ಪಾರ್ಕ್ ನಿರ್ಮಿಸಿದರು.
- ಸ್ವತಃ ವಿದ್ವಾಂಸರಾದ ಇವರು 'ದಿ ರೂಲರ್ಸ್ ಆಫ್ ಇಂಡಿಯಾ' ಎಂಬ ಪುಸ್ತಕ ಬರೆದಿದ್ದಾರೆ.



downloaded from: www.kpscvaani.com

- ಇವರ ಪತ್ನಿ ಲೇಡಿ ಬೌರಿಂಗ್ 'ಈಸ್ಟರ್ನ್ ಎಕ್ಸಪೀರಿಯನ್ಸ್' ಎಂಬ ಪುಸ್ತಕವನ್ನು ರಚಿಸಿದ್ದಾರೆ.
- ಇವನ ನಂತರ ರಿಚರ್ಡ್ ಮೀಟ್ (ಕ್ರಿ.ಶ. 1870–1875), ಸಿ.ಬಿ ಸ್ಯಾಂಡರ್ಸ್ (ಕ್ರಿ.ಶ 1875–1878), ಜೆ.ಡಿ ಗೋರ್ಡಾನ್ (ಕ್ರಿ.ಶ 1878–1881) ಎಂಬ ಕಮೀಷನರ್‌ಗಳು ಆಡಳಿತ ನಿರ್ವಹಿಸಿದರು.
- ಜೆ.ಡಿ ಗೋರ್ಡನ್ 1881ರಲ್ಲಿ ವೈಸರಾಯ್ ರಿಫನ್ ಆದೇಶದ ಮೇರೆಗೆ ಮೈಸೂರು ರಾಜ್ಯದ ಅಧಿಕಾರ ಮತ್ತೆ ಒಡೆಯರಿಗೆ ನೀಡಲಾಯಿತು.

## ಒಡೆಯರಿಗೆ ಅಧಿಕಾರ ವರ್ಗಾವಣೆ (ಕ್ರಿ.ಶ. 1881) :–

### 10ನೇ ಚಾಮರಾಜ ಒಡೆಯರ್ (1881–1894)

- 1868 ಸೆಪ್ಟೆಂಬರ್ 30 ಪಟ್ಟಾಭಿಷೇಕ (ಅಪ್ರಾಪ್ತ ಬಾಲಕ)
- ಕರ್ನಲ್ ಹೈನ್ಸ್ ಮತ್ತು ಕರ್ನಲ್ ಮಾಲ್‌ಸನ್ ಪೋಷಣೆಯಲ್ಲಿ ಬೆಳೆವಣಿಗೆ.
- 1875–76 ತೀವ್ರಕ್ಷಾಮ, ಗವರ್ನರ್ ಜನರಲ್ ಲಾರ್ಡ್ ಲಿಟ್ಟನ್ ಮೈಸೂರಿಗೆ ಭೇಟಿ.
- 1878ರಲ್ಲಿ ಜೆ.ಡಿ. ಗೋರ್ಡನ್ ಕಮಿಷನರ್ ಆಗಿ ನೇಮಕ
- 1881 ಮಾರ್ಚ 25 ಅಧಿಕಾರವನ್ನು ಬ್ರಿಟಿಷರಿಂದ ಪಡೆದರು.
- 1881ರಲ್ಲಿ ಜೆ.ಡಿ. ಗೋರ್ಡನ್ ರೆಸಿಡೆಂಟ್ ಆಗಿ ಅಧಿಕಾರ (ಕೊಡಗಿನ ಮುಖ್ಯ ಕಮಿಷನರ್ ಆಗಿಯೂ ಆಡಳಿತ)
- 1881–83 ರಲ್ಲಿ ಸಿ.ರಂಗಾಚಾರ್ಲು ದಿವಾನರಾಗಿ ನೇಮಕ
- ಇವರ ಕಾಲದ ದಿವಾನರುಗಳು – ರಂಗಾಚಾರ್ಲು ಮತ್ತು ಶೇಷಾದ್ರಿ ಅಯ್ಯರ್
- 1894 ಡಿ.28 ಡಿಫ್ತೀರಿಯಾ ರೋಗಕ್ಕೆ ತುತ್ತಾಗಿ ಕಲ್ಕತ್ತಾದಲ್ಲಿ ಸಾವು.



downloaded from: www.kpscvaani.com

## ನಾಲ್ವಡಿ ಕೃಷ್ಣರಾಜ ಒಡೆಯರ್(1902–1940)



- 1895ರಲ್ಲಿ ಫೆಬ್ರವರಿ 1ರಂದು ಪಟ್ಟಾಭಿಷೇಕ(ಅಪ್ರಾಪ್ತ ಭಾಲಕ)
- ರಾಜಪ್ರತಿನಿಧಿಯಾಗಿ ಮಹಾರಾಣಿ ಕೆಂಪನಂಜಮ್ಮಣಿ ವಾಣಿವಿಲಾಸ ಸನ್ನಿದಾನದವರು ಆಳ್ವಿಕೆ.(1895–1902)
- 1897 ಫೇಬ್ರವರಿ– ಸಹೋದರಿ ವಿವಾಹದ ಸಂದರ್ಭದಲ್ಲಿ ಮರದ ಅರಮನೆ ಬೆಂಕಿಗೆ ಆಹುತಿ, ಇಂದಿನ ಅರಮನೆ ನಿರ್ಮಾಣ ಕೆಲಸ ಆರಂಭ.
- 1900 ಜೂನ್ 6, ಕಾಥೇವಾಡ ಸಂಸ್ಥಾನದ ರಾಣಾಸಾಹೇಬ ಶ್ರೀ ವಿನಯಸಿಂಹರ ಪುತ್ರಿ ಪ್ರತಾಪ ಕುಮಾರಿದೇವಿಯೊಂದಿಗೆ ವಿವಾಹ.
- 1901ರಲ್ಲಿ ಮಹಾರಾಣಿ ಕೆಂಪನಂಜಮ್ಮಣ್ಣಿ ನಿಧನ.
- 1902 ಆಗಸ್ಟ್ 8, ವೈಸರಾಯ್ ಲಾರ್ಡ್‌ಕರ್ಜನ್ ಸಮ್ಮುಖದಲ್ಲಿ ನೇರ ಅಧಿಕಾರ ಸ್ವೀಕಾರ (ಜಗನ್ಮೋಹನ ಅರಮನೆಯಲ್ಲಿ)
- 1902 ಜನವರಿ ಇಂಗ್ಲೆಂಡಿನ ಅರಸ 7ನೇ ಎಡ್ವರ್ಡ್‌ನ ಕಿರೀಟ ಧಾರಣೆ ಸಂದರ್ಭ (ದಿಲ್ಲಿಯಲ್ಲಿ) ನಡೆದ ಸಮಾರಂಭಕ್ಕೆ ಭೇಟಿ.
- ಅಪಾರ ಜ್ಞಾನ ಹೊಂದಿದ್ದ ಇವರನ್ನು ಗಾಂಧಿಜಿಯರವರು ರಾಜಋಷಿ ಅಥವಾ ರಾಜಶ್ರೀ ಎಂದಿದ್ದರು
- ಇವರ ಕಾಲದಲ್ಲಿ ಮೈಸೂರು ಅರಮನೆಯನ್ನು ರಾಜಾ ರವಿವರ್ಮರ ಚಿತ್ರಗಳಿಂದ ಅಲಂಕರಿಸಲಾಗಿತ್ತು.

## ಇವರ ಆಳ್ವಿಕೆಯ ಕಾಲದಲ್ಲಿನ ದಿವಾನರುಗಳು.

- ಇವರ ಕಾಲ– ಮೈಸೂರು ಸಂಸ್ಥಾನದ ಸುವರ್ಣಯುಗ
- ದೇಶದಲ್ಲೇ ಮಾದರಿ ರಾಜ್ಯವಾಗಿ ನಿರ್ಮಾಣ
- ಗಾಂದೀಜಿ ಹರಿಜನ ಪತ್ರಿಕೆಯಲ್ಲಿ ಇವರ ಕಾಲವನ್ನು ರಾಮರಾಜ್ಯ ಎಂದು ವರ್ಣಿಸಿದರು. ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರನ್ನು 'ರಾಜರ್ಷಿ' (ರಾಜಋಷಿ) ಎಂದು ಕರೆದರು.
- ಬ್ರಿಟಿಷ್ ಸರ್ಕಾರದಿಂದ ಗ್ರಾಂಡ್ ಕಮಾಂಡರ್ ಆಫ್ ಇಂಡಿಯನ್ ಎಂಪೇರ್ ಬಿರುದು(ಉಅಖಇ)
- 1940 ರಲ್ಲಿ ನಿಧನ.



downloaded from: www.kpscvaani.com

## ಜಯಚಾಮರಾಜ ಒಡೆಯರು(1940–1947)

- ಕೊನೆಯ ಮತ್ತು 25ನೆಯ ಒಡೆಯರು
- 1940 ಸೆಪ್ಟೆಂಬರ್ 8ರಂದು 23 ನೇ ವಯಸ್ಸಿನಲ್ಲಿ ಅಧಿಕಾರ ಸ್ವೀಕಾರ.
- ಇವರ ಆಳ್ವಿಕೆಯ ಕಾಲದ ದಿವಾನರುಗಳು – ನ್ಯಾಪತಿ ಮಾಧವರಾವ್ (1941–1946) ಮತ್ತು ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ (1946–47/49)
- 1938 ರಲ್ಲಿ ರಾಜಕುಮಾರಿ ಸತ್ಯಪ್ರೇಮ ಕುಮಾರಿ ದೇವಿಯೊಡನೆ ವಿವಾಹ
- 1942ರಲ್ಲಿ ರಾಜಕುಮಾರಿ ತ್ರಿಪುರ ಸುಂದರಮ್ಮಣ್ಣಿಯೊಡನೆ ಎರಡನೇ ವಿವಾಹ.
- ಕಾಶಿ ವಿಶ್ವವಿದ್ಯಾಲಯದಲ್ಲಿ ಎಲ್.ಎಲ್.ಬಿ. ಪದವಿ.
- ಲಂಡನ್ನಿನ ಗಿಲ್ಡ್‌ಹಾಲ್ ಸ್ಕೂಲ್‌ಆಫ್ ಮ್ಯೂಸಿಕ್ ಸಂಸ್ಥೆಯಿಂದ ಲೈಸನ್ಷಿಯೇಟ್ ಸಂಗೀತ ಪದವಿ.
- ಉಅಋ & ಉಅಃ ಬಿರುದುಗಳು ಪ್ರಾಪ್ತ
- ಮೈಸೂರಿನಲ್ಲಿ ಸ್ವಾತಂತ್ರ್ಯ ಮತ್ತು ಜವಾಬ್ದಾರಿ ಸರ್ಕಾರಕ್ಕಾಗಿ ಚಳುವಳಿ ತೀವ್ರ ಸ್ವರೂಪ ಪಡೆಯಿತು.
- 1947 ಸೆಪ್ಟೆಂಬರ್ 7ರಂದು ಜವಾಬ್ದಾರಿ ಸರ್ಕಾರ ಸ್ಥಾಪಿಸುವುದಾಗಿ ಘೋಷಣೆ.
- 1947 ಸೆಪ್ಟೆಂಬರ್ 1/4 ಅರಮನೆ ಸತ್ಯಾಗ್ರಹ /ಮೈಸೂರು ಚಲೋ ಚಳುವಳಿ ಆರಂಭ.
- 1947 ಅಕ್ಟೋಬರ್ 24 ಜವಾಬ್ದಾರಿ ಸರ್ಕಾರ ಅಸ್ತಿತ್ವ ಮತ್ತು ಕೆ.ಸಿ.ರೆಡ್ಡಿ ನೇತೃತ್ವದಲ್ಲಿ ಹೊಸ ಮಂತ್ರಿಮಂಡಲ ರಚನೆ.
- ಮೈಸೂರು ಸಂಸ್ಥಾನದ ಪ್ರಥಮ ರಾಜ ಪ್ರಮುಖರಾದರು. (ರಾಜ್ಯ ಪಾಲ) 1956ರಲ್ಲಿ ಮಹಾರಾಜ ಪದವಿ ರದ್ದು.
- 1963 ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡ್ ವಿ. ವಿ. ಯಿಂದ ಡಿ. ಲಿಟ್ ಪದವಿ.
- 1973 ನವೆಂಬರ್ 1, ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾದಾಗ ಹಂಪೆಯಲ್ಲಿನ ಸಮಾರಂಭದಲ್ಲಿ ಜ್ಯೋತಿ ಬೆಳಗಿದರು.
- ಸ್ವತಃ ಕವಿ ವಿದ್ವಾಂಸ ಮತ್ತು ಪಾಶ್ಚಾತ್ಯ ಸಂಗೀತದಲ್ಲಿ ವಿಶೇಷ ಆಸಕ್ತಿ ಹೊಂದಿದ್ದರು.



downloaded from: www.kpscvaani.com

## ಕಮಿಷನರ್ ಆಳ್ವಿಕೆ ಮುಕ್ತಾಯ

### ಕಮಿಷನರುಗಳು (1831 ಅಕ್ಟೋಬರ್ 19 ರಿಂದ 1881 ಮಾರ್ಚ್ 25)

### ಮಾರ್ಕ್ ಕಬ್ಬನ್ (1834–1861)

- ಪ್ರಥಮ ಚೀಫ್ ಕಮಿಷನರ್
- ಮೈಸೂರಿನಿಂದ ಬೆಂಗಳೂರಿಗೆ ರಾಜಧಾನಿ ವರ್ಗಾವಣೆ
- ಬೆಂಗಳೂರಿನ ಟಿಪ್ಪು ಅರಮನೆಯಲ್ಲಿ ಕಾರ್ಯಾಲಯ (ಸಚಿವಾಲಯ) ಆರಂಭ
- ಆಡಳಿತದ ಅನುಕೂಲಕ್ಕಾಗಿ ಮೈಸೂರು ರಾಜ್ಯವನ್ನು 4 ಭಾಗಗಳಾಗಿ ವಿಂಗಡನೆ
  - ಬೆಂಗಳೂರು
  - ಚಿತ್ರದುರ್ಗ
  - ಅಷ್ಟಗ್ರಾಮ (ಮೈಸೂರು ಜಿಲ್ಲೆ)
  - ಹೈದರ್‌ನಗರ (ಬಿದನೂರು)
- ಹಳೆಯ ಅಠಾರ ಕಛೇರಿ ಬದಲು 9 ಇಲಾಖೆಗಳ ಸ್ಥಾಪನೆ
  - ಕಂದಾಯ ಇಲಾಖೆ
  - ಪೊಲೀಸ್ ಇಲಾಖೆ
  - ಅಂಚೆ ಇಲಾಖೆ
  - ಸವಾರ್ ಇಲಾಖೆ(ಅಶ್ವಪಡೆ)
  - ಬಾರ್ ಇಲಾಖೆ (ಕಾಲಾಳುಪಡೆ)
  - ಮರಾಮೆತ್ ಇಲಾಖೆ (ಲೋಕೋಪಯೋಗಿ)
  - ಆರೋಗ್ಯ ಇಲಾಖೆ
  - ಪಸುಸಂಗೋಪನಾ ಇಲಾಖೆ (ಅಮೃತಮಹಲ್)
  - ನ್ಯಾಯಾಡಳಿತ ಮತ್ತು ಶಿಕ್ಷಣ ಇಲಾಖೆ
- ನ್ಯಾಯಾಡಳಿತಕ್ಕಾಗಿ ನಾಲ್ಕು ಸೂಪರಿಂಡೆಂಡೆಂಟ್ ಕೋರ್ಟ್‌ಗಳನ್ನು 8 ಸದರ್ ಮುನ್ಸಿಪಲ್ ಕೋರ್ಟ್‌ಗಳು 85 ತಾಲ್ಲೂಕು ನ್ಯಾಯಾಲಯಗಳು, ಒಂದು ಹುಜೂರ್ ಅದಾಲತ್ ನ್ಯಾಯಾಲಯ ಸ್ಥಾಪನೆಯಾಯಿತು.
- 1853–ಬೆಂಗಳೂರು ಮೈಸೂರು ನಡುವೆ ಟೆಲಿಗ್ರಾಫ್ ಸಂಪರ್ಕ




downloaded from: www.kpscvaani.com

- 1856–59 ರಾಜ್ಯದಲ್ಲಿ ಪ್ರಥಮ ಬಾರಿಗೆ ಜೋಲಾರಪೇಟೆ ಮತ್ತು ಬೆಂಗಳೂರು ಮಧ್ಯೆ ರೈಲ್ವೆ ಮಾರ್ಗ ಸ್ಥಾಪನೆ
- 1856 ಗವರ್ನರ್ ಡಾಲ್‌ಹೌಸಿ, ಸಂಸ್ಥಾನಕ್ಕೆ ಭೇಟಿ ಇವರ ಸಲಹೆ ಮೇರೆಗೆ ಜುಡಿಷಿಯಲ್ ಕಮಿಷನರ್ ಸ್ಥಾಪನೆ.
- ಬತಾಯಿ ಪದ್ದತಿ (ನಗದು ಮತ್ತು ಧಾನ್ಯ ರೂಪದಲ್ಲಿ ಕಂದಾಯ ಪಾವತಿ) ರದ್ದು ಮಾಡಿ ನಗದು ರೂಪದ ರೈತ್ವಾರಿ ಪದ್ದತಿ ಜಾರಿಗೆ ತರಲಾಯಿತು.
- 1861 ಅನಾರೋಗ್ಯದಿಂದಾಗಿ ಸ್ವದೇಶಕ್ಕೆ ಪಯಣ ಮಾರ್ಗಮಧ್ಯದಲ್ಲೇ ಸೂಯಜ್ ಕಾಲುವೆಯ ಸಯ್ಯದ್ ಬಂದರಿನಲ್ಲಿ ನಿಧನ
- ಹಳೆಯ ಪಗೋಡ (ವರಹಾ) ಗಳ ಬದಲಿಗೆ ಬ್ರಿಟಿಷನ್ ಹೊಸಬೆಳ್ಳಿ ರೂಪಾಯಿಗಳನ್ನು 1854ರಲ್ಲಿ ಚಲಾವಣೆ.
- ಹಳೆಯ ದುಷ್ಟ ಪದ್ಧತಿ 'ಸಮಯಾಚಾರ'ವನ್ನು ಕಬ್ಬನು 1834ರಲ್ಲಿ ಪ್ರತಿಬಂಧಿಸಿದನು. (ವ್ಯಭಿಚಾರ ಮಾಡುವ ಸ್ತ್ರೀಯರನ್ನು ಸರ್ಕಾರವೇ ಹರಾಜು ಮಾಡಿ ಬಂದ ಹಣವನ್ನು ಸರ್ಕಾರದ ಖಜಾನೆಗೆ ಜಮಾ ಮಾಡುವುದಕ್ಕೆ ಸಮಯಾಚಾರ ಪದ್ಧತಿ ಎನ್ನುವರು)
- 1851 ರಲ್ಲಿ ಟ್ರಿನಿಟಿ ಚರ್ಚ್ ಸ್ಥಾಪನೆ.

## ಎಲ್.ಬಿ. ಬೌರಿಂಗ್ (1862 –1870)

- ಆಡಳಿತ ವಿಭಾಗಗಳನ್ನು 4 ರಿಂದ 3ಕ್ಕೆ ಇಳಿಸಿದ. ಅವುಗಳೆಂದರೆ.
    - ಅಷ್ಟಗ್ರಾಮ (ಮೈಸೂರು)
    - ನಂದಿದುರ್ಗ
    - ಹೈದರ್‌ನಗರ
- ಈ ವಿಭಾಗಗಳನ್ನು 8 ಜಿಲ್ಲೆಗಳಾಗಿ ವಿಂಗಡಣೆ, ಪ್ರತಿ ವಿಭಾಗಕ್ಕೂ ಒಬ್ಬ ಸೂಪರಿಂಡೆಂಡೆಂಟ್ ಮತ್ತು ಪ್ರತಿ ಜಿಲ್ಲೆಗೊಬ್ಬ ಉಪ ಸೂಪರಿಂಡೆಂಡೆಂಟ್ ಮತ್ತು ಸಹಾಯಕ ಸೂಪರಿಟೆಂಡೆಂಟ್ ನೇಮಕ.
- 1872 ಪೊಲೀಸ್ ಕಾಯ್ದೆ ಜಾರಿ ಮಾಡಿ ಪೋಲಿಸರಿಗೆ ಸಮವಸ್ತ್ರ ನೀಡಲಾಯಿತು.
- ಮದ್ರಾಸಿನ ಮಾದರಿಯಲ್ಲಿ ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಸುಧಾರಣೆ ಮಾಡಲಾಯಿತು. ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ (ಆಖಉ) ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ (ಖಉಕ) ಮತ್ತು ಜಿಲ್ಲೆಗಳಿಗೆ ಪೊಲೀಸ್ ಸೂಪರಿಟೆಂಡೆಂಟ್ (ಖಔ) ಹುದ್ದೆಗಳನ್ನು ಸೃಷ್ಟಿಸಿಲಾಯಿತು.



downloaded from: www.kpscvaani.com

- 1803ರಲ್ಲಿ ಬೆಂಗಳೂರಿನಲ್ಲಿ ಕೇಂದ್ರ ಕಾರಾಗೃಹ ಸ್ಥಾಪನೆ
- 1861 ಶಿಕ್ಷಕರ ತರಭೇತಿಗೆ ನಾರ್ಮಲ್ ಶಾಲೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು.
- 1864 ಬೆಂಗಳೂರು ಸೆಂಟ್ರಲ್ ಕಾಲೇಜ್ ಮತ್ತು ಬೆಂಗಳೂರು ಮ್ಯೂಸಿಯಂ ಸ್ಥಾಪನೆ.
- 1868–64 ಬೆಂಗಳೂರಿನಲ್ಲಿ ಹೈಕೊರ್ಟ್ (ಅಠಾರ ಕಛೇರಿ) ಸ್ಥಾಪನೆ. ಟಿಪ್ಪುವಿನ ಅರಮನೆಯಿಂದ ಇಲ್ಲಿಗೆ ಕಾರ್ಯಾಲಯ ವರ್ಗಾಯಿಸಲಾಯಿತು.
- ಸರ್ಕಾರಿ ಮುದ್ರಣಾಲಯ ಸ್ಥಾಪನೆ(1866)
- 1868 / 63 ಭೂಮಾಪನ ಮತ್ತು ಕಂದಾಯ ಇಲಾಖೆಗಳಲ್ಲಿ ಸಂಪೂರ್ಣ ಸುಧಾರಣೆ.
- ರೆವಿನ್ಯೂ ಸರ್ವೆ ಅಂಡ್ ಸೆಟ್ಲ್‌ಮೆಂಟ್ ಅಧಿಕಾರಿ ನೇಮಕ.
- 1863 ದತ್ತಿ ಭೂಮಿ ಅಭಿವೃದ್ಧಿಗಾಗಿ ಇನಾಂ ಕಮಿಷನ್ ನೇಮಕ
- 1864–ರಿಜಿಸ್ಟ್ರೇಷನ್ ಕಾಯ್ದೆ ಜಾರಿ ಮಾಡಿ ಎಲ್ಲಾ ಆಸ್ತಿ, ಪತ್ರ ವ್ಯವಹಾರಗಳನ್ನು ಕಡ್ಡಾಯವಾಗಿ ನೊಂದಾಯಿಸಲಾಯಿತು. ಅದಕ್ಕಾಗಿ ಪ್ರತಿ ತಾಲ್ಲೋಕಿನ ನೊಂದಣಿ ಕಛೇರಿ ಸ್ಥಾಪನೆ ರಿಜಿಸ್ಟಾರ್, ಸಬ್ ರಿಜಿಸ್ಟಾರ್ ಮತ್ತು ಡಿಪ್ಯುಟಿ ರಿಜಿಸ್ಟಾರ್‌ಗಳ ನೇಮಕ ಶುಲ್ಕ ರದ್ದು ಮಾಡಿ ಸ್ಟಾಂಪ್ ಪೇಪರ್ ಬಳಕೆ ಜಾರಿಗೆ ತರಲಾಯಿತು.
- 1862–ಭಾರತ ದಂಡ ಸಂಹಿತೆ (ಇಂಡಿಯನ್ ಪೀನಲ್ ಕೋಡ್) ಮತ್ತು ಕೋಡ್ ಆಫ್ ಕ್ರಿಮಿನಲ್ ಪ್ರೊಸಿಜರ್ ಜಾರಿಗೆ ತರಲಾಯಿತು.
- 1863ರಲ್ಲಿ ಮೈಸೂರು ಕ್ರಮಬದ್ಧ ಪ್ರಾಂತ್ಯವಾಗಿ ರಚನೆ.
- ಶಿಕ್ಷಣದ ಅಭಿವೃದ್ಧಿಗೆ ಸೆಂಟ್ರಲ್ ಎಜುಕೇಷನ್ ಏಜೆನ್ಸಿ ಸ್ಥಾಪನೆ, ಹಾಲಿಫಾಕ್ಸ್ ವರದಿಯ ಶಿಫಾರಸ್ಸಿನ ಮೇರೆಗೆ 'ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ' ಸ್ಥಾಪಿಸಲಾಯಿತು. 1868 ರಲ್ಲಿ ಬಿ.ಎಲ್.ರೈಸ್ ಯೋಜನೆಯಂತೆ ಹೋಬಳಿಗೊಂದು ಶಾಲೆ ಯೋಜನೆ ಜಾರಿಗೆ ತರಲಾಯಿತು.
- 1866 ರಲ್ಲಿ ಬೆಂಗಳೂರಿನಲ್ಲಿ ಬೌರಿಂಗ್ ಆಸ್ಪತ್ರೆ ಮತ್ತು ಬೌರಿಂಗ್ ಇನ್‌ಸ್ಟಿಟ್ಯೂಟ್ ಸ್ಥಾಪನೆ.
- 1864ರಲ್ಲಿ ನಿರ್ಮಾಣದ ಬಂಗಾರಪೇಟೆಗೆ ಇವನ ಹೆಸರಲ್ಲಿ ಬೌರಿಂಗ್ ಪೇಟೆ ಎಂದು ನಾಮಕರಣ ಮಾಡಲಾಯಿತು.
- 1867 ರಲ್ಲಿ ಬ್ರಿಟಿಷ್ ಸರ್ಕಾರದಿಂದ ಸಿ.ಎಸ್.ಐ ಪ್ರಶಸ್ತಿ
- ಇವನ ಕಾಲದಲ್ಲಿ (1867) ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಮೈಸೂರು ರಾಜ್ಯವನ್ನು ಹಿಂತಿರುಗಿಸುವ ಭರವಸೆಯನ್ನು ನೀಡಲಾಯಿತು.



downloaded from: www.kpscvaani.com

- 1868 ಸೆಪ್ಟೆಂಬರ್ 23 ರಂದು 10ನೇ ಚಾಮರಾಜ ಒಡೆಯರಿಗೆ ಪಟ್ಟಾಭೀಷೇಕ ಸಮಾರಂಭ
- ಬೆಂಗಳೂರಿನಲ್ಲಿ ಮಾರ್ಕ್ ಕಬ್ಬನ್ ನೆನಪಿಗಾಗಿ ಕಬ್ಬನ್ ಪಾರ್ಕ್ ನಿರ್ಮಿಸಿದ
- ಸ್ವತಃ ವಿದ್ವಾಂಸನಾದ ಈತನ ಕೃತಿ 'ರೂಲರ್ಸ್ ಆಫ್ ಇಂಡಿಯಾ' (ಹೈದರಾಲಿ ಮತ್ತು ಟಿಪ್ಪು ಇತಿಹಾಸ ಕುರಿತು)
- ಪತ್ನಿ – ಲೇಡಿ ಬೌರಿಂಗ್ ಕೃತಿ ಈಸ್ಟರ್ನ್ ಎಕ್ಸ್‌ಪೀರಿಯನ್ಸ್ (ಆತ್ಮಕಥೆ)
- 1868 ರಲ್ಲಿ ಬೆಂಗಳೂರಿನ ಕಂಟೋನ್ಮೆಂಟ್ ಪ್ರದೇಶದಲ್ಲಿ ಗ್ಯಾಸ್‌ನಿಂದ ಉರಿಯುವ ಬೀದಿ ದೀಪ ಹಾಕಲಾಯಿತು.
- 1866ರಲ್ಲಿ ಮೈಸೂರು ಸಂಸ್ಥಾನದಲ್ಲಿ ಬಾರೀ ಕ್ಷಾಮ ತಲೆದೊರಿ ನಗರಕ್ಕೆ ವಲಸೆ ಪ್ರಮಾಣ ಅಧಿಕವಾಯಿತು.
- 1870ರಲ್ಲಿ ಬೆಂಗಳೂರಿನಲ್ಲಿ ಬ್ರಹ್ಮ ಸಮಾಜ ಸ್ಥಾಪನೆ.
- ಬ್ರಹ್ಮ ಸಮಾಜದ ಪ್ರಭಾವದಿಂದ ಆರಂಭಿಸುವ ಶಾಲೆ (ರಾವ್ ಬಹದ್ದೂರ್ ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರ್) ಯ ಆರಂಭದ ವರ್ಷಗಳಲ್ಲಿ ಬಿಪಿನ್ ಚಂದ್ರಪಾಲ್‌ರವರು ಪ್ರಾಂಶುಪಾಲರಾಗಿದ್ದರು.
- 1870 ರಲ್ಲಿ ಹುದ್ದೆಗೆ ರಾಜೀನಾಮೆ.
- ಬೌರಿಂಗ್ ನಂತರದ ಕಮಿಷನರುಗಳು ರಿಚರ್ಡ್ ಮೀಡ್ (1870–75) ಸಿ.ಬಿ ಸಾಂಡರ್ಸ್ (1875–78) ಮತ್ತು ಜೆ.ಡಿ ಗೋರ್ಡನ್ (1878–1881)
- 1881 ಮಾರ್ಚ್ 25–10ನೇ ಚಾಮರಾಜ ಒಡೆಯರಿಗೆ ಅಧಿಕಾರ ಹಸ್ತಾಂತರ ಕಮಿಷನರ್ ಆಳ್ವಿಕೆ ಮುಕ್ತಾಯ ಮತ್ತು ದಿವಾನರುಗಳ ಆಳ್ವಿಕೆ ಮುಂದುವರಿಕೆ.
- 1876–78ರಲ್ಲಿ ಮೈಸೂರು ಸಂಸ್ಥಾನದಲ್ಲಿ ಧಾತ – ಈಶ್ವರ ಸಂವತ್ಸರಗಳ ಕ್ಷಾಮದಲ್ಲಿ ಮೈಸೂರು ರಾಜ್ಯದಲ್ಲಿ 9 ಲಕ್ಷ ಜನರು ಸಾವಿಗೀಡಾದರು.
- ಚಾರ್ಲ್ ಎಲಿಯಟ್‌ನನ್ನು ಕ್ಷಾಮ ಕಮಿಷನರ್ ಆಗಿ ನೇಮಿಲಾಯಿತು.



downloaded from: www.kpscvaani.com

## ದಿವಾನರುಗಳು

### ದಿವಾನ್ ಪೂರ್ಣಯ್ಯ: (1799–1811)

- ಮೈಸೂರು ಸಂಸ್ಥಾನದ ಪ್ರಥಮ ದಿವಾನ
- ಹೈದರಾಲಿ ಮತ್ತು ಟಿಪ್ಪುವಿನ ಕಾಲದಲ್ಲಿ ಆಡಳಿತದಲ್ಲಿ ಸೇವೆ
- ಟಿಪ್ಪುವಿನ ಹಣಕಾಸಿನ ಮಂತ್ರಿಯಾಗಿ ಸೇವೆ
- ಇವರ ಕಾಲದಲ್ಲಿ ಪ್ರಮುಖ ದಂಗೆಗಳು
    - 1799 ದೋಂಡಿಯ ವಾಘನ ದಂಗೆ
    - 1805 ಐನೂರು ಪಾಳೇಗಾರನ ದಂಗೆ
    - 1805 ವೈನಾಡು ದಂಗೆ
    - 1805 ಚಿತ್ತೂರು ದಂಗೆ
    - 1806 ವೆಲ್ಲೂರು ದಂಗೆ
- 1799 ರಲ್ಲಿ ಮೈಸೂರು ಸಂಸ್ಥಾನದ ವಿಸ್ತೀರ್ಣ 46,400 ಚ.ಕಿ.ಮೀ ಮತ್ತು 22 ಲಕ್ಷ ಜನಸಂಖ್ಯೆ
- ಆಂತರಿಕ ಶಾಂತಿಗಾಗಿ ಕಂದಾಚಾರ ಸೈನ್ಯಪಡೆ ರಚನೆ. (ಪ್ರತಿ ಕುಟುಂಬದಿಂದ ಒಬ್ಬೊಬ್ಬ ಸದಸ್ಯರು ಸೈನ್ಯಕ್ಕೆ ಕಡ್ಡಾಯ)
- ರೈತರಿಂದ ರೂಪುಗೊಂಡ ಕಂದಾಚಾರ ಪಡೆಯು ಪೊಲೀಸ್ ಅಧಿಕಾರಿಗಳಿಗೆ ಅಧೀನರಾಗಿ, ನೆರವು ನೀಡಬೇಕಿತ್ತು.
- ಶ್ರೀರಂಗಪಟ್ಟಣದಿಂದ ಮೈಸೂರಿಗೆ ರಾಜಧಾನಿ ವರ್ಗಾವಣೆ ಮಾಡಲಾಯಿತು.
- 1801 ರಲ್ಲಿ ಸಂಪಂಗಿ ಕೆರೆ ನಿರ್ಮಾಣ
- ಶ್ರೀರಂಗಪಟ್ಟಣದಲ್ಲಿ ಕಾವೇರಿ ನದಿಗೆ ಸೇತುವೆ (ವೆಲ್ಲಸ್ಲಿ ಸೇತುವೆ)
- 1799–1810 ರಲ್ಲಿ ಅವಧಿಯಲ್ಲಿ ಮಾರ್ಕ್ವಿಸ್ ವೆಲ್ಲಸ್ಲಿ ಆದೇಶದಂತೆ ಕರ್ನಲ್ ಮೆಕಂಜಿಯು ಮೈಸೂರು ರಾಜ್ಯದಲ್ಲಿ ನಕ್ಷೆ ಅಳೆಯುವ ಕಾರ್ಯವನ್ನು ಕೈಗೊಂಡ.
- 1808ರಲ್ಲಿ ಮೈಸೂರು ರಾಜ್ಯದ ನಿಖರವಾದ ನಕ್ಷೆ ತಯಾರು.
- ಪ್ರತ್ಯೇಕ ನ್ಯಾಯಾಂಗ ಇಲಾಖೆ ಸ್ಥಾಪನೆ 1825 ರಲ್ಲಿ ಅದಾಲತ್ ನ್ಯಾಯಾಲಯಗಳು ಆಸ್ತಿತ್ವಕ್ಕೆ.




downloaded from: www.kpscvaani.com

## ಇವರ ಕಾಲದ ಬ್ರಿಟಿಷ್ ರೆಸಿಡೆಂಟ್‌ಗಳು:

- ಕರ್ನಲ್ ಬ್ಯಾರಿಕ್ಲೋಸ್
- ಜೆ.ಎಚ್. ಪೈಲ್
- ಜೋಸೈವೆಬ್
- ಸರ್ ಜಾನ್‌ಮಾಲ್‌ಕಾಂ
- ಕರ್ನಲ್ ವಿಲ್ಕ್ಸ್
- ಅರ್ಥರ್ ಹೆಚ್. ಕೋಲ್
- ಲಕ್ಷ್ಮಣ ತೀರ್ಥ ನದಿಗೆ ಸಾಗರಕಟ್ಟೆ ಸಮೀಪ ಅಣೆಕಟ್ಟು.
- ಕೃಷಿ ಅಭಿವೃದ್ಧಿಗೆ ರೈತರಿಗೆ ತತ್ಕಾಲದ ಸಾಲ ನೀಡಿದ
- 1811 ರಲ್ಲಿ ದಿವಾನ ಹುದ್ದೆಯಿಂದ ನಿವೃತ್ತಿ ಮತ್ತು ಯಳಂದೂರನ್ನು ಜಹಾಂಗಿರಿಯಿಂದ ಪಡೆದರು.
- ದಿವಾನ್ ಪೂರ್ಣಯ್ಯನವರು 1812 ಮಾರ್ಚ್ 17, ನಿಧನ ಕಾರ್ಯದಕ್ಷ, ಶ್ರೇಷ್ಠ ರಾಜಕಾರಣಪಟು ಎಂದು ಅರ್ಥರ್ ವೆಲ್ಲಸ್ಲಿಯಿಂದ ಗುಣವಾಗಿದೆ.

## ಸಿ. ರಂಗಾಚಾರ್ಲು (1881–1883)



- ರಾಜ್ಯ ಪುನರ್ದಾನದ ನಂತರ ಅಧಿಕಾರ ವಹಿಸಿಕೊಂಡ ಮೊದಲ ದಿವಾನರು
- 1881 ಅಕ್ಟೋಬರ್ 7 ದೇಶದಲ್ಲೇ ಪ್ರಥಮ ಬಾರಿಗೆ ಪ್ರಜಾಪ್ರತಿನಿಧಿ ಸಭೆ ಸ್ಥಾಪನೆ (144 ಸದಸ್ಯರು)
- 1881 ರಲ್ಲಿ ಮೈಸೂರಿನಲ್ಲಿ ಮಹಾರಾಣಿ ಬಾಲಕಿಯರ ಪ್ರೌಢಶಾಲೆ ಸ್ಥಾಪನೆ.
- ನರಸಿಂಹ ಅಯ್ಯಂಗಾರ್‌ರವರು ಹೆಣ್ಣುಮಕ್ಕಳಿಗೆ ಶಾಲೆಗಳನ್ನು ತೆರೆದರು.
- 1882 ರಲ್ಲಿ ಬೆಂಗಳೂರು ಮೈಸೂರು ರೈಲ್ವೆ ಮಾರ್ಗ ಸ್ಥಾಪನೆ
- 1881ರಲ್ಲಿ ಜಾನ್ ಟೇಲರ್ ಅಂಡ್ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡು ಕೋಲಾರದಲ್ಲಿ ಚಿನ್ನದ ಗಣಿ ಕೆಲಸ ಆರಂಭಿಸಿದರು.



GNANADHARE IAS ACADEMY
downloaded from: www.kpscvaani.com

- ಇವರ ದಕ್ಷತೆಗೆ ಬ್ರಿಟಿಷ್ ಸರ್ಕಾರ ಸಿ.ಐ.ಇ ಬಿರುದು ನೀಡಿ ಗೌರವಿಸಿತು.
- ಆಂಗ್ಲರಿಗಾಗಿ – ಬೆಂಗಳೂರಿನಲ್ಲಿ 400 ಎಕರೆ ಪ್ರದೇಶ ನೀಡಲಾಯಿತು. ಅದೇ ಇಂದಿನ ವೈಟ್‌ಫೀಲ್ಡ್.

## ಕೆ. ಶೇಷಾದ್ರಿ ಅಯ್ಯರ್ (1883–1901)



- 1886 ರಲ್ಲಿ ಕೃಷಿ ಮತ್ತು ಅಂಕಿ ಸಂಖ್ಯೆಗಳ ನಿರ್ದೇಶನಾಲಯ.
- 1888 ರಲ್ಲಿ ಪ್ರಥಮ ಬಾರಿಗೆ ಮೈಸೂರಿನಲ್ಲಿ ಕೃಷಿ ಮತ್ತು ಕೈಗಾರಿಕಾ ಮತ್ತು ವಸ್ತು ಪ್ರದರ್ಶನವನ್ನು ನಡೆಸಲಾಯಿತು (ಇದು ಇಂದಿನ ದಸರಾ ಮತ್ತು ಪ್ರದರ್ಶನಕ್ಕೆ ಕಾರಣವಾಯಿತು)
- 1889 ರಲ್ಲಿ ಮೈಸೂರು ಅಂಚೆ ವ್ಯವಸ್ಥೆಯನ್ನು ಬ್ರಿಟಿಷ್ ಅಂಚೆ ಪದ್ಧತಿಯೊಡನೆ ವಿಲೀನ
- 1889ರಲ್ಲಿ ಗುಬ್ಬಿ, ಹರಿಹರ, ಹಿಂದೂಪುರದವರೆಗೆ ರೈಲ್ವೆ ವಿಸ್ತರಣೆ ಹಾಗೂ ಬೀರೂರು, ಶಿವಮೊಗ್ಗ ರೈಲ್ವೆ
- 1890 ರಲ್ಲಿ ಬಿ. ಎಲ್ ರೈಸ್ ನೇತೃತ್ವದಲ್ಲಿ ಪ್ರಾಚ್ಯ ಸಂಶೋಧನಾ ಇಲಾಖೆ ಸ್ಥಾಪನೆ
- 1891 ರಲ್ಲಿ ಮೈಸೂರು ನಂಜನಗೂಡು ಮಾರ್ಗ ನಿರ್ಮಾಣ
- ದಕ್ಷಿಣ ಮರಾಠ ಕಂಪನಿಗೆ ಮೈಸೂರು ರೈಲ್ವೆಯ ಹಸ್ತಾಂತರ
- 1894ರಲ್ಲಿ ಕೃಷಿ ಬ್ಯಾಂಕ್ ಯೋಜನೆ ಜಾರಿ
- 1894 ರಲ್ಲಿ ಬ್ರೂಸ್‌ಫ್ರೂಟ್ ನೇತೃತ್ವದಲ್ಲಿ ಭೂಗರ್ಭ ಸರ್ವೇಕ್ಷಣಾ ಇಲಾಖೆ ಸ್ಥಾಪನೆ
- 1894 ರಲ್ಲಿ ಮೈಸೂರು ಬಾಲ್ಯ ವಿವಾಹ ನಿಷೇಧ ಕಾಯ್ದೆ ಜಾರಿಗೆ.
- 1887 ರಲ್ಲಿ ಕರ್ನಾಟಕ ಭಾಷೋಜ್ಜೀವಿನಿ ಸಭಾ ಸ್ಥಾಪನೆ.
- ಬೆಂಗಳೂರಿನಲ್ಲಿ ಆರ್ಯಬಾಲಿಕಾ ಪಾಠಶಾಲೆ, ತುಮಕೂರಿನಲ್ಲಿ 'ದಿ ಎಂಪ್ರೆಸ್ ಗರ್ಲ್ಸ್ ಹೈಸ್ಕೂಲ್ ಸ್ಥಾಪನೆ(1897 ವಿಕ್ಟೋರಿಯಾ ರಾಣಿಯ ವಜ್ರಮಹೋತ್ಸವ ಜ್ಞಾಪಕಾರ್ಥ)
- 1901 ರಲ್ಲಿ ಮೈಸೂರಿನ ಬಾಲಕಿಯರ ಹೈಸ್ಕೂಲ್ ಮಹಾರಾಣಿ ಕಾಲೇಜಾಗಿ ಪರಿವರ್ತನೆ
- ಬೆಂಗಳೂರಿನಲ್ಲಿ ವಿಕ್ಟೋರಿಯಾ ಆಸ್ಪತ್ರೆ ಸ್ಥಾಪನೆ



downloaded from: www.kpscvaani.com

- 1886 ರಲ್ಲಿ ಮಿಷನರಿಗಳಿಂದ ಮಾರ್ಥಾಸ್ ಆಸ್ಪತ್ರೆ ಆರಂಭ
- ಬೆಂಗಳೂರಿನ ಅಕ್ಕಿಪೇಟೆ, ಬಳೇಪೇಟೆಯಲ್ಲಿ ಪ್ಲೇಗ್ ಹರಡಿದ್ದ ಕಾರಣ ಮಲ್ಲೇಶ್ವರಂ ಮತ್ತು ಚಾಮರಾಜಪೇಟೆ ಹೊಸ ಬಡಾವಣೆಗಳು ರಚನೆ (1898)
- 1890 ರಲ್ಲಿ ಮೈಸೂರಿನಲ್ಲಿ ಓರಿಯಂಟಲ್ ಲೈಬ್ರರಿ (ಪ್ರಾಚ್ಯ ಗ್ರಂಥಾಲಯ ಸ್ಥಾಪನೆ)
- ಸ್ವಾಮಿ ವಿವೇಕಾನಂದರು ಚಿಕಾಗೋ ಸಮಾವೇಶದಲ್ಲಿ ಪಾಲ್ಗೊಳ್ಳಲು ಕಾರಣರಾದವರಲ್ಲಿ ಇವರು ಪ್ರಮುಖರು.
- ಮೈಸೂರಿನಲ್ಲಿ ಚಾಮರಾಜೇಂದ್ರ ಪ್ರಾಣಿ ಸಂಗ್ರಹಾಲಯ ಸ್ಥಾಪನೆ
- ಭೂವ್ಯಾಜ್ಯಗಳಿಗಾಗಿ ಲ್ಯಾಂಡ್ ರೆವಿನ್ಯೂ ಟ್ರಿಬ್ಯುನಲ್ ಸ್ಥಾಪನೆ
- ಮೈಸೂರು ರಾಜ್ಯ ನೌಕರರಿಗೆ ಜೀವ ವಿಮಾ ಯೋಜನೆ ಜಾರಿಗೆ
- 1891 ರಲ್ಲಿ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆ ಆರಂಭ.

**ಇವರ ಕಾಲದಲ್ಲಿ ಜಾರಿಗೆ ಬಂದ ಪ್ರಮುಖ ಕಾಯ್ದೆಗಳು**

- ಮೈಸೂರು ಸಿವಿಲ್ ನ್ಯಾಯಾಲಯ ಕಾಯ್ದೆ – 1883
- ಮೈಸೂರು ಮುಖ್ಯ ನ್ಯಾಯಾಲಯ ಕಾಯ್ದೆ – 1884
- ಮೈಸೂರು ಭೂಕಂದಾಯ ಕಾಯ್ದೆ – 1888
- ಮೈಸೂರು ಶಸ್ತ್ರಾಸ್ತ್ರ ನಿಯಂತ್ರಣ ಕಾಯ್ದೆ – 1894
- ಮೈಸೂರು ಶಿಶುವಿವಾಹ ನಿಷೇದ ಕಾಯ್ದೆ – 1894
- ಮೈಸೂರು ರೈಲ್ವೆ ಕಾಯ್ದೆ – 1894
- 1897 ರಲ್ಲಿ ಮೈಸೂರು ಅರಮನೆ ನಿರ್ಮಾಣ ಕಾರ್ಯ ಆರಂಭ.
- 1897–98 ಚಿತ್ರದುರ್ಗದಲ್ಲಿ ಮಾರಿಕಣಿವೆ ಅಣೆಕಟ್ಟಿನ ನಿರ್ಮಾಣ ಕಾರ್ಯ ಆರಂಭ (ವಾಣಿವಿಲಾಸ ಸಾಗರ)
- 1896ರಲ್ಲಿ ಹೆಸರಘಟ್ಟ ಜಲಾಶಯದಿಂದ ಕೊಳವೆ ಮೂಲಕ ನಗರಕ್ಕೆ ಕುಡಿಯುವ ನೀರು ಪೂರೈಕೆ
- 1899–00 ಶಿವಸಮುದ್ರ ಜಲವಿದ್ಯುತ್ ಕೇಂದ್ರ ಸ್ಥಾಪನೆ (ಏಷ್ಯಾದಲ್ಲೇ ಮೊದಲ ವಿದ್ಯುತ್ ಸ್ಥಾವರ)
- 1901 ರಲ್ಲಿ ನಿವೃತ್ತಿ, ಬ್ರಿಟಿಷರಿಂದ ಸಿಐಇ ಬಿರುದು.



downloaded from: www.kpscvaani.com

## ಪಿ.ಎನ್. ಕೃಷ್ಣಮೂರ್ತಿ (1901–1906)

- ದಿವಾನ್ ಪೂರ್ಣಯ್ಯನವರ ಮೊಮ್ಮಗ
- 1902ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸಿಂಹಾಸನಾರೋಹಣ
- ಸಹಕಾರ ಬ್ಯಾಂಕ್ ಸಹಕಾರಿ ಸಂಘಗಳು ಸ್ಥಾಪನೆ
- 1905ರಲ್ಲಿ ಬೆಂಗಳೂರಿನಲ್ಲಿ ಟಾಟ (ಭಾರತೀಯರು) ವಿಜ್ಞಾನ ಸಂಸ್ಥೆ ಸ್ಥಾಪನೆ
- 1905ರಲ್ಲಿ ಬೆಂಗಳೂರಿಗೆ ವಿದ್ಯುತ್ (ದೇಶದಲ್ಲೇ ಮೊದಲ ನಗರ)
- 1906ರಲ್ಲಿ ಒಕ್ಕಲಿಗರ ಸಂಘ ಸ್ಥಾಪನೆ

## ವಿ.ಪಿ. ಮಾಧವರಾಯ (1906–1909)

- 1907 ವಿಧಾನಪರಿಷತ್ ಸ್ಥಾಪನೆ (ನ್ಯಾಯ ವಿಧೇಕ ಸಭೆ) ಸ್ಥಾಪನೆ.
- 1908 ರಲ್ಲಿ ನ್ಯೂಸ್ ಪೇಪರ್ಸ್ ರೆಗ್ಯುಲೇಷನ್ ಕಾಯ್ದೆ ಜಾರಿ ಮಾಡಿ ಪತ್ರಿಕಾ ಸ್ವಾತಂತ್ರ್ಯ ಮುಟ್ಟುಗೋಲು ಹಾಕಿ ಜನಪ್ರಿಯತೆ ಕಳೆದುಕೊಂಡರು.

## ಟಿ. ಆನಂದರಾವ್ (1909–1912)

- ಮೈಸೂರು ಆರ್ಥಿಕ ಸಮ್ಮೇಳನ ಪ್ರಾರಂಭ
- ಕನ್ನಂಬಾಡಿ (ಕೆ.ಆರ್.ಎಸ್) ನಿರ್ಮಾಣ ಕಾರ್ಯ ಆರಂಭ (1911)
- ಮೈಸೂರಿನ ಅರಮನೆ ನಿರ್ಮಾಣಕಾರ್ಯ ಪೂರ್ಣ (1912)
- ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಗಾಜಿನ ಮನೆ ನಿರ್ಮಾಣ (ಇಂಗ್ಲೆಂಡಿನ ಪ್ರಿನ್ಸ್ ಅಲ್ಬರ್ಟ್ ಬೆಂಗಳೂರಿಗೆ ಭೇಟಿ ನೀಡಿದ ನೆನಪಿಗಾಗಿ)
- ಮೈಸೂರು ಅರಸೀಕೆರೆ ರೈಲ್ವೆ ಮಾರ್ಗ ಆರಂಭ



downloaded from: www.kpscvaani.com

## ಸರ್.ಎಂ. ವಿಶ್ವೇಶ್ವರಯ್ಯ (1912–1918)



- ಆಧುನಿಕ ಭಾರತದ ಪ್ರಮುಖ ನಿರ್ಮಾತೃಗಳಲ್ಲಿ ಒಬ್ಬರು.
- ಬೆಂಗಳೂರು ಜಿಲ್ಲೆ ಚಿಕ್ಕಬಳ್ಳಾಪುರ ತಾಲ್ಲೂಕಿನ ಮುದ್ದೇನಹಳ್ಳಿಯಲ್ಲಿ 1861ರಲ್ಲಿ ಶ್ರೀನಿವಾಸ ಶಾಸ್ತ್ರಿ & ವೆಂಕಟಲಕ್ಷ್ಮಮ್ಮನವರ ಮಗನಾಗಿ ಜನನ.
- ಸಟ್ಲೇಜ್ ನದಿಯ ಬಗ್ಗಡದ ನೀರನ್ನು ಸಕ್ಕೂರ್ ಗ್ರಾಮದ ನಾಗರೀಕತೆಗೆ ಶುದ್ಧ ಸಿಹಿ ನೀರನ್ನಾಗಿ ಪರಿವರ್ತಿಸಿದರು.
- ನೀರಾವರಿಯಲ್ಲಿ ಬ್ಲಾಕ್ ಪದ್ಧತಿಯನ್ನು ಜಾರಿಗೆ ತಂದರು.
- ಇವರು ಯೋಜಿಸಿದ ಸ್ವಯಂ ಚಾಲಿತ ಕಮಟ ಪ್ರಪಂಚದ ಮೆಚ್ಚುಗೆ ಪಡೆದಿದೆ. ಖಡಕ್‌ವಾಸ್ಲಾ ಸರೋವರ, ಮೈಸೂರಿನ ಕೆ.ಆರ್.ಎಸ್, ಗ್ವಾಲಿಯರ್‌ನ ತೆಹರ್ ಅಣೆಕಟ್ಟೆಗೆ ಇವುಗಳನ್ನು ಜೋಡಿಸಲಾಗಿದೆ.
- 1909ರಲ್ಲಿ ಮೈಸೂರಿನ ಕನ್ನಂಬಾಡಿ ಅಣೆಕಟ್ಟು ಇದು ಮಂಡ್ಯ ಜಿಲ್ಲೆಯಲ್ಲಿದೆ. ಪ್ರಥಮ ಬಾರಿಗೆ ದೇಶಿಯಾ ಗಾರೆಯಿಂದ ನಿರ್ಮಿಸಿದ ಕಟ್ಟಡ ಇದಾಗಿದ್ದು 124 ಅಡಿ ಎತ್ತರವಿದೆ. ಒಟ್ಟು 136 ಗೇಟ್‌ಗಳಿವೆ.
- ಪುಣೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂಜಿನಿಯರಿಂಗ್ ಮಾಡಿದ ಇವರು ಜೂನಿಯರ್ ಇಂಜಿನಿಯರ್ ಆಗಿ ಬಾಂಬೆ ಪ್ರೆಸಿಡೆನ್ಸಿಯಲ್ಲಿ ಮೊದಲಿಗೆ ಸೇರಿದರು.
- 1909ರಲ್ಲಿ ಮೈಸೂರಿನ ಚೀಫ್ ಇಂಜಿನಿಯರಾಗಿದ್ದ ಇವರು 1912ರಲ್ಲಿ ಮೈಸೂರಿನ ದಿವಾನರಾಗಿ ನೇಮಕಗೊಂಡರು.
- 1915ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು.
- 1916ರಲ್ಲಿ ಮೈಸೂರು ಬ್ಯಾಂಕ್ ಸ್ಥಾಪಿಸಿ 1916ರಲ್ಲಿ ಮೈಸೂರು ವಿಶ್ವವಿದ್ಯಾಲಯ ಸ್ಥಾಪಿಸಿದರು. ಇದರ ಪ್ರಥಮ ಉಪಕುಲಪತಿಯಾಗಿ ಹೆಚ್.ವಿ. ನಂಜುಂಡಯ್ಯ ನೇಮಕ.
- ಬೆಂಗಳೂರಿನಲ್ಲಿ ಪಾಲಿಟೆಕ್ನಿಕ್ ತಾಂತ್ರಿಕ ಶಾಲೆ (ಇದು ಏಷ್ಯಾದಲ್ಲೇ ದೊಡ್ಡದು) & ಸರ್ಕಾರಿ ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಿದರು.
- ಹೆಬ್ಬಾಳದಲ್ಲಿ 1916ರಲ್ಲಿ ಕೃಷಿ ವಿಶ್ವ ವಿದ್ಯಾಲಯದ ಸ್ಥಾಪನೆ.



downloaded from: www.kpscvaani.com

- ರೇಷ್ಮೆ ಬೆಳೆಯ ಅಧ್ಯಯನಕ್ಕಾಗಿ ಚೆನ್ನಪಟ್ಟಣಗಳ ಬಳಿ ಒಂದು ಸಿಲ್ಕ್ ರಿಸರ್ಚ್ (ಸಂಶೋಧನಾ ಕೇಂದ್ರ) ಸ್ಥಾಪನೆ.
- ಇವರೇ ಭದ್ರಾವತಿ ಎಂಬ ಕೈಗರಿಕಾ ನಗರದ ನಿರ್ಮಾಪಕರಾಗಿರುವರು.
- ಭದ್ರಾವತಿಯ ವಿ.ಐ.ಎಸ್.ಎಲ್ (ವಿಶ್ವೇಶ್ವರಯ್ಯ ಅಂಡ್ ಸ್ಟೀಲ್ ಲಿಮಿಟೆಡ್)ನ್ನು ಹಿರಾಚಂದ್ & ವಾಲಾ ಚಂದ್‌ರವರು ಇವರ ಹೆಸರಿನಲ್ಲಿ ನಿರ್ಮಿಸಿದ್ದಾರೆ.
- ವಿಶ್ವೇಶ್ವರಯ್ಯನವರು ಕೈಗಾರೀಕರಣ ಇಲ್ಲವೇ ವಿನಾಶ ಎಂದು ಕರೆಕೊಟ್ಟರು.
- ಮೈಸೂರು ಚೇಂಬರ್ಸ್ ಆಫ್ ಕಾಮರ್ಸ್.
- ಸೆಂಚುರಿಕ್ಲಬ್ ಬೆಂಗಳೂರು ಕಾಸ್ಮೋ ಪಾಲಿಟನ್ ಕ್ಲಬ್ ಮೈಸೂರು ಇವುಗಳ ಸ್ಥಾಪಕರಾಗಿದ್ದಾರೆ.
- ಮೈಸೂರು ಸ್ಯಾಂಡಲ್ ಸೋಪ್, ಮೈಸೂರ್ ಸಿಲ್ಕ್, ಮೈಸೂರು ಕಬ್ಬಿಣ & ಉಕ್ಕಿನ ಕಾರ್ಖಾನೆ ಸ್ಥಾಪಿಸಿದ್ದಾರೆ.

## ಬಿರುದುಗಳು :

- ಕ್ರಿ.ಶ 1955ರಲ್ಲಿ ಭಾರತ ಸರ್ಕಾರ "ಭಾರತ ರತ್ನ", ಬ್ರಿಟಿಷ್ ಸರ್ಕಾರ "ಸರ್" ಪದವಿ ಪ್ರಧಾನ ಮಾಡಿದೆ.
- ಬ್ರಿಟಿಷ್‌ರಿಂದ ಕೈಸರ್ ಇ ಹಿಂದ್ (ಬ್ರಿಟಿಷ್ ವಸಾಹತು ಈಜಿಪ್ಟ್‌ನ ಎಡನ್ ನೀರು & ಒಳಚರಂಡಿ ವ್ಯವಸ್ಥೆ ಮಾಡಿದ್ದಕ್ಕಾಗಿ).

## ಸ್ಥಾಪನೆಯಾದ ಪ್ರಮುಖ ಕೈಗಾರಿಕೆಗಳು

- ಬೆಂಗಳೂರಿನಲ್ಲಿ ಸಾಬೂನು ಕಾರ್ಖಾನೆ, ಲೋಹದ ಕಾರ್ಖಾನೆ, ಸೀಸ ಹದಮಾಡುವ ಕಾರ್ಖಾನೆ
- ಕೇಂದ್ರಿಯ ಕೈಗಾರಿಕಾ ವರ್ಕ್‌ಪಾಪ್
- ಮೈಸೂರು ಗಂಧದೆಣ್ಣೆ ಕಾರ್ಖಾನೆ ಇತ್ಯಾಧಿ
- 1914–18ರ ಮೊದಲ ಮಹಾಯುದ್ಧ ಸಂದರ್ಭದಲ್ಲಿ 50 ಲಕ್ಷ ಧನಸಹಾಯ ಮತ್ತು ಮೈಸೂರು ಸೇವೆಯಲ್ಲಿ ಬ್ರಿಟಿಷರ ನೆರವಿಗೆ ಕಳುಹಿಸಲಾಯಿತು.
- ಅವರು ನೀಡಿದ ಆರ್ಥಿಕ ಮಂತ್ರ 'ಕೈಗಾರಿಕೀಕರಣ ಇಲ್ಲವೆ ವಿನಾಶ'
- ವಾಣಿಜ್ಯ ಕೈಗಾರಿಕೆಗಳ ಸಮಸ್ಯೆಗಳ ಪರಿಹಾರಕ್ಕೆ ಮೈಸೂರು ಛೇಂಬರ್ ಆಫ್ ಕಾಮರ್ಸ್ ಮತ್ತು ಇಂಡಿಯನ್ ಛೇಂಬರ್ಸ್ ಆಫ್ ಕಾಮರ್ಸ್ ಸ್ಥಾಪನೆ.



downloaded from: www.kpscvaani.com

## ರಚಿಸಿದ ಕೃತಿಗಳು

- ಪ್ಲಾನ್‌ಡ್ ಎಕಾನಮಿ ಫಾರ್ ಇಂಡಿಯಾ
- ರಿ ಕನ್‌ಸ್ಟ್ರಂಕ್ಟಿಂಗ್ ಇಂಡಿಯಾ
- ಎ ವಿಜನ್ ಆಫ್ ಪ್ರಾಸ್ಪರನ್ ಮೈಸೂರು
- ರ್‍ಯಾಪಿಡ್ ಡೆವಲಪ್‌ಮೆಂಟ್ ಆಫ್ ಇಂಡಸ್ಟ್ರೀಸ್
- ಮೆಮಾಯಿರ್ಸ್ ಆಫ್ ಮೈ ವರ್ಕಿಂಗ್‌ಲೈಫ್ (ಆತ್ಮ ಚರಿತ್ರೆ)
- 1917 ರಲ್ಲಿ ಜಸ್ಟೀಸ್ ಲೆಸ್ಲಿ ಮಿಲ್ಲರ್ ಕಮಿಟಿ ಪ್ರಥಮ ಹಿಂದುಳಿದ ವರ್ಗಗಳ ಆಯೋಗದ ರಚನೆ (ಮೀಸಲಾತಿಗೆ ಶಿಫಾರಸ್ಸು)
- ಮೀಸಲಾತಿ ವಿರೋಧಿಸಿ ದಿವಾನಗಿರಿಗೆ ರಾಜೀನಾಮೆ (1918)
- ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಅಧ್ಯಕ್ಷರಾಗಿ ನೇಮಕ (1923)
- 1949ರಲ್ಲಿ ಭಾರತೀಯ ವಿಜ್ಞಾನ ಮಂದಿರದ ಅಧ್ಯಕ್ಷರಾಗಿ ನೇಮಕ (1923)
- ಪ್ರಶಸ್ತಿಗಳು ಕೈಸರ್ –ಏ–ಹಿಂದ್ ಕೆ.ಸಿಐ ಸರ್ ಪದವಿ 1955 ರಲ್ಲಿ ಭಾರತರತ್ನ
- 1962 ಏಪ್ರಿಲ್ 14 ಮರಣ
- ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಬೆಂಗಳೂರಿಗೆ ನೀರು ಪೂರೈಕೆ ಯೋಜನೆ
- 1940 ರಲ್ಲಿ ಬೆಂಗಳೂರಿನಲ್ಲಿ ಹೆಚ್. ಎ.ಎಲ್ ಕಾರ್ಖಾನೆ ಸ್ಥಾಪನೆ.

## ದಿವಾನ್ ಕಾಂತರಾಜ್ ಅರಸ್ (1918–22)

- ಪ್ರಥಮ ಬ್ರಾಹ್ಮಣೇಥರ ದಿವಾನರು ಅಥವಾ ಪ್ರಥಮ ಹಿಂದುಳಿದ ವರ್ಗಗಳ ದಿವಾನರು
- ಹಿಂದುಳಿದ ವರ್ಗಗಳ ಹಿತರಕ್ಷಕ ಎಂಬ ಬಿರುದು.
- ಹಿಂದುಳಿದ ವರ್ಗದವರಿಗೆ ಸರ್ಕಾರಿ ಹುದ್ದೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯತೆ ನೀಡಲಾಯಿತು.
- ಅಪೆಕ್ಸ್ ಬ್ಯಾಂಕ್ ಸ್ಥಾಪನೆ
- ಬಜೇಂದ್ರನಾಥ್ ಸೀಲ್ ಅಧ್ಯಕ್ಷತೆಯಲ್ಲಿ ಮೈಸೂರು ರಾಜ್ಯಾಂಗ ಸುಧಾರಣ ಸಮಿತಿ ರಚನೆ.



downloaded from: www.kpscvaani.com

## ದಿವಾನ್ ಮಿರ್ಜಾ ಇಸ್ಮಾಯಿಲ್ (1926–1941)



- 1927 ರಲ್ಲಿ ಮೈಸೂರು ಮತ್ತು ಬೆಂಗಳೂರು ಆಕಾಶವಾಣಿ ಕೇಂದ್ರಗಳ ಸ್ಥಾಪನೆ
- 1927 ರಲ್ಲಿ ವೈಸ್ರಾಯ್ ಲಾರ್ಡ್ ಇರ್ವಿನ್ ಮೈಸೂರಿಗೆ ಆಗಮನ
- 1927 ರಲ್ಲಿ ಮೈಸೂರು ಜಿಲ್ಲಾ ಬೋರ್ಡ್ ಅಧಿನಿಯಮ ಜಾರಿ
- 1927 ರಲ್ಲಿ ಮೈಸೂರಿಗೆ ಗಾಂಧಿ ಆಗಮನ ಬೆಂಗಳೂರಿನ ನಂದಿ ಬೆಟ್ಟದಲ್ಲಿ ವಿಶ್ರಾಂತಿ
- 1927 ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಸಿಂಹಾಸನಾರೋಹಣದ ರಜತ ಮಹೋತ್ಸವ
- 1928 ರಲ್ಲಿ ಬೆಂಗಳೂರಿನ ಸುಲ್ತಾನ್ ಪೇಟೆಯಲ್ಲಿ ಗಣಪತಿ ಗಲಭೆಗಳು
- 1930–32 ರಲ್ಲಿ ಲಂಡನ್ನಿನ ದುಂಡುಮೇಜಿನ ಸಮ್ಮೇಳನದಲ್ಲಿ ದಕ್ಷಿಣ ರಾಜ್ಯಗಳ ಪ್ರತಿನಿಧಿಯಾಗಿ ಭೇಟಿ
- ಇವರ ಕಾಲ ಸ್ವಾತಂತ್ರ್ಯ ಚಳವಳಿಯ ತೀವ್ರ ಸ್ವರೂಪದ ಕಾಲ
- 1938 ಏಪ್ರಿಲ್ 11 ಶಿವಪುರ ಧ್ವಜ ಸತ್ಯಾಗ್ರಹ
- 1939 ರಲ್ಲಿ ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹ (ಮೈಸೂರು) ನಡೆಯಿತು.

### ಸ್ಥಾಪಿತ ಕೈಗಾರಿಕೆಗಳು

1. ಭದ್ರಾವತಿ ಕಾಗದ ಮತ್ತು ಸಿಮೆಂಟ್ ಕಾರ್ಖಾನೆ
2. ಬೆಂಗಳೂರಿನ ಪಿಂಗಾಣಿ ಮತ್ತು ಗಾಜು ಕಾರ್ಖಾನೆ
3. ಬೆಂಗಳೂರು ವಿಮಾನ ಕಾರ್ಖಾನೆ (ಹೆಚ್.ಎ.ಎಲ್)
4. ಶಿವಮೊಗ್ಗ–ಬೆಂಕಿಪಟ್ಟಣ ಕಾರ್ಖಾನೆ
5. ಬೆಳಗೊಳದ ರಾಸಾಯನಿಕ ಮತ್ತು ಗೊಬ್ಬರ ಕಾರ್ಖಾನೆ
6. ನಂಜನಗೂಡಿನ ಬದನವಾಳಿನ ಖಾದಿ ಉತ್ಪನ್ನ ಕೇಂದ್ರ
7. ಮೈಸೂರಿನ ಕೃಷ್ಣರಾಜೇಂದ್ರ ಮಿಲ್, ವಿದ್ಯುತ್ ಉಪಕರಣ ಕಾರ್ಖಾನೆ
8. ಮೈಸೂರು ಹಾಸ ಕೃಷಿ ಉಪಕರಣ ಕಾರ್ಖಾನೆ



GNANADHARE IAS AC
downloaded from: www.kpscvaani.com

9. ಮಂಡ್ಯ ಸಕ್ಕರೆ ಕಾರ್ಖಾನೆ ಮುಂತಾದವುಗಳು

- ಭಾರತದಲ್ಲೇ ಪ್ರಥಮ ಬಾರಿಗೆ ಗ್ರಾಮೀಣ ವಿದ್ಯುತ್ ಯೋಜನೆ ಜಾರಿಗೆ, 180 ಗ್ರಾಮಗಳು ವಿದ್ಯುತ್ ಸೌಲಭ್ಯ ಪಡೆದವು
- ಕನ್ನಡ ಸಾಹಿತ್ಯ ಪರಿಷತ್ತಿಗೆ ನಿವೇಶನ ನೀಡಿಕೆ.
- ಕಾವೇರಿ ನದಿಗೆ ಇರ್ವಿನ್ ನಾಲೆ ನಿರ್ಮಾಣ (ಇಂದಿನ ಹೆಸರು ವಿಶ್ವೇಶ್ವರಯ್ಯ ನಾಲೆ)\
- ಬೆಂಗಳೂರಿನಲ್ಲಿ ನಿಮ್ಹಾನ್ಸ್, ಮೈಸೂರಿನ ವಾಣಿವಿಲಾಸ ಹೆರಿಗೆ ಆಸ್ಪತ್ರೆ, ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆ, ಕೋಲಾರದ ನರಸಿಂಹರಾಜ ಆಸ್ಪತ್ರೆ, ಗೌರಿಬಿದನೂರು ಸರ್ಕಾರಿ ಆಸ್ಪತ್ರೆಗಳ ಸ್ಥಾಪಿತವಾದುವು.
- ಬೆಂಗಳೂರಿನ ಜಕ್ಕೂರು ವಿಮಾನ ನಿಲ್ದಾಣ ಸ್ಥಾಪನೆ
- ಜೋಗದ ಬಳಿ ಶರಾವತಿ ನದಿಗೆ ಜಲವಿದ್ಯುತ್ ಕೇಂದ್ರ ಸ್ಥಾಪನೆ
- ಜಗತ್ಪ್ರಸಿದ್ಧ ಬೃಂದಾವನ ನಿರ್ಮಾಣ
- 1941 ರಲ್ಲಿ ದಿವಾನ್ ಹುದ್ದೆಗೆ ನಿವೃತ್ತಿ ನಂತರ ಜೈಪುರದ ದಿವಾನರುಗಳು
- ಜೈಪುರದಲ್ಲಿ ಪಿಲಾನಿ ಶಿಕ್ಷಣ ಸಂಸ್ಥೆ ಸ್ಥಾಪನೆ ನಂತರ ಹೈದರಾಬಾದಿನ ದಿವಾನರಾಗಿ ಸೇವೆ.
- ಮಿರ್ಜಾ ಇಸ್ಮಾಯಿಲ್ 1959 ರಲ್ಲಿ ನಿಧನ
- ಬ್ರಿಟಿಷರಿಂದ ಸರ್ ಪದವಿ ಮತ್ತು ಕೆ.ಸಿ.ಐ.ಇ ಬಿರುದು.
- ಮಹಾರಾಜರಿಂದ ಅಮೀನ್-ಉಲ್-ಮುಲ್ ಬಿರುದು.

## ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ :

- ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಯ ವಿರುದ್ಧ ಹೋರಾಡಿದವರಲ್ಲಿ ಮೊದಲಿಗರೆಂದರೆ ಹೈದರಾಲಿ & ನಂತರದಲ್ಲಿ ಟಿಪ್ಪುಸುಲ್ತಾನ.
- ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟವನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು.
  - ಸಶಸ್ತ್ರ ಬಂಡಾಯ 1800 – 1885ವರೆಗೆ
  - ಸ್ವಾತಂತ್ರ್ಯ ಹೋರಾಟ 1885 – 1947ವರೆಗೆ



downloaded from: www.kpscvaani.com

## ದೋಂಡಿಯಾ ವಾಘ (ಕ್ರಿ.ಶ 1800) :

- ಇವನು ಚನ್ನಗಿರಿಯ ಮರಾಠನಾಗಿದ್ದು ಹೈದರಾಲಿ & ಟಿಪ್ಪುವಿನ ಸೈನ್ಯದಲ್ಲಿ ಸೇವೆ ಸಲ್ಲಿಸಿದ್ದನು.
- ಟಿಪ್ಪು ಅವನನ್ನು ಮುಸ್ಲಿಂ ಮತಕ್ಕೆ ಮತಾಂತರಿಸಲು ಬಂಧಿಸಿದನು.
- ಟಿಪ್ಪುವಿನ ಮರಣ ನಂತರ ಬಿಡುಗಡೆ ಹೊಂದಿದ ಈತ ಶಿಕಾರಿಪುರ ಹಾಗೂ ಬದನೂರು ರಾಜನೆಂದು ಘೋಷಿಸಿಕೊಂಡನು.
- ಕ್ರಿ.ಶ 1800ರಲ್ಲಿ ತಮಿಳುನಾಡಿನ ಫ್ರೆಂಚರು, ಸೊಲ್ಲಾಪುರ ಹಾಗೂ ಆನೆಗೊಂದಿಯ ರಾಜರುಗಳ ಸಹಾಯ ಪಡೆದು ಬ್ರಿಟಿಷರ ವಿರುದ್ಧ ಕ್ರಾಂತಿ ಆರಂಭಿಸಿದ.
- ಆದರೆ ಅರ್ಥರ್ ನೇತೃತ್ವದಲ್ಲಿ ಬಂದ ಅಪಾರವಾದ ಬ್ರಿಟಿಷ್ ಸೈನ್ಯ ಈತನನ್ನು 1800 ಸೆಪ್ಟಂಬರ್ 10ರಂದು ಕೀನಗಲ್ ಎಂಬಲ್ಲಿ ಕೊಂದರು.

## ಸಿಂದಗಿ (ಕ್ರಿ.ಶ 1824) :

- ನಾಯಕತ್ವ ದಿವಾಕರ ದೀಕ್ಷಿತ್ ಬಾಲಾಜಿ ದೇಶಪಾಂಡೆ ಇತ್ಯಾದಿ ವಿರುದ್ಧ ಬ್ರಿಟಿಷರು (ಕಲೆಕ್ಟರ್ ಸ್ಟೀಮನ್ ಸನ್)

## ಕಿತ್ತೂರು ದಂಗೆ (ಕ್ರಿ.ಶ 1824) :




- ಉತ್ತರ ಭಾರತದಲ್ಲಿ ಝಾನ್ಸಿರಾಣಿ ಬ್ರಿಟಿಷರ ವಿರುದ್ಧ ಹೋರಾಟ ಆರಂಭಿಸುವುದಕ್ಕಿಂತ ಮುಂಚೆಯೇ ಕರ್ನಾಟಕದಲ್ಲಿ ರಾಣಿ ಚೆನ್ನಮ್ಮ ಬ್ರಿಟಿಷರ ವಿರುದ್ಧ ರಣಕಹಳೆ ಊದಿದ್ದಳು.
- ರಾಣಿಚೆನ್ನಮ್ಮ ದತ್ತು ಪುತ್ರ ಸ್ವೀಕರಿಸುವುದನ್ನು ಧಾರವಾಡದ ಬ್ರಿಟಿಷ್ ಕಲೆಕ್ಟರ್ ಥ್ಯಾಕರೆ ವಿರೋಧಿಸಿದ್ದು ಕಿತ್ತೂರಿನ ದಂಗೆಗೆ ಪ್ರಮುಖ ಕಾರಣ.
- 1824ರಲ್ಲಿ ನಡೆದ ಯುದ್ಧದಲ್ಲಿ ರಾಣಿ ಚೆನ್ನಮ್ಮ ಬ್ರಿಟಿಷರಿಗೆ ಸೆರೆಸಿಕ್ಕು ಅವಳನ್ನು ಬೈಲುಹೊಂಗಲದ ಕಾರಾಗೃಹದಲ್ಲಿ ಬಂಧಿಸಲಾಗಿ, 1829ರಲ್ಲಿ ನಿಧನಳಾದಳು.
- ಮಲ್ಲಪ್ಪ & ವೆಂಕಟಪ್ಪ ಎಂಬುವವರು ರಾಜದ್ರೋಹಿಗಳಾಗಿದ್ದರು.



downloaded from: www.kpscvaani.com

## ಸಂಗೊಳ್ಳಿ ರಾಯಣ್ಣ (ಕ್ರಿ.ಶ 1829–1830) :



- ಕಿತ್ತೂರಿನ ಹೋರಾಟ : ರಾಣಿ ಚೆನ್ನಮ್ಮಳ ಬಲಗೈ ಬಂಟನಾಗಿದ್ದ ರಾಯಣ್ಣನು ಶಿವಲಿಂಗಪ್ಪನ (ದತ್ತುಪುತ್ರ) ರಕ್ಷಕನಾಗಿ ನಿಂತು ಹೋರಾಟವನ್ನು ಆರಂಭಿಸಿದನು.
- ಅಂತ್ಯದಲ್ಲಿ ಬ್ರಿಟಿಷರ ವಂಚನೆಯಿಂದ ಸೆರೆ ಸಿಕ್ಕು 1831ರಲ್ಲಿ ಗಲ್ಲು ಶಿಕ್ಷೆಗೆ ಗುರಿಯಾದನು.

## ನಗರ ದಂಗೆ ಅಥವಾ ಬಿದನೂರು ದಂಗೆ (ಕ್ರಿ.ಶ 1830–1831) :

- ಸಾದರ ಮಲ್ಲ ಅಥವಾ ಬೂದಿ ಬಸಪ್ಪ ನೇತೃತ್ವದಲ್ಲಿ ಶಿವಮೊಗ್ಗದಲ್ಲಿ ಮೈಸೂರಿನ ದುರಾಡಳಿತ ವಿರುದ್ಧ ಕ್ರಾಂತಿ ಸಂಭವಿಸಿತ್ತು. (ಈತನನ್ನು ಕೆಳದಿ ಅರಸು ಮನೆತನಕ್ಕೆ ಸೇರಿದವನೆಂದು ಹೇಳಲಾಗಿದೆ)
- ಕಾರಣ ಕಂದಾಯ ವಸೂಲಿಯಲ್ಲಿನ ಅಮಾನವೀಯತೆ.
- ಮುಮ್ಮಡಿ ಕೃಷ್ಣರಾಜ ಒಡೆಯರು & ಬ್ರಿಟಿಷರೊಡಗೂಡಿ ಬೂದಿ ಬಸಪ್ಪನನ್ನು ಸೋಲಿಸಿ ಗಲ್ಲಿಗೇರಿಸಲಾಯಿತು.

## ಕೊಡಗಿನ ಬಂಡಾಯ (ಕ್ರಿ.ಶ 1834–1837) :

- ಕ್ರಿ.ಶ 1834ರಲ್ಲಿ ಬ್ರಿಟಿಷ್ ಕಂಪನಿಯು ಕೊಡಗನ್ನು ವಶಪಡಿಸಿಕೊಂಡು ಚಿಕ್ಕವೀರರಾಜನನ್ನು ಪದಚ್ಯುತಿಗೊಳಿಸಲಾಯಿತು.
- ಕಲ್ಯಾಣ ಸ್ವಾಮಿ, ಅಪರಂಪರೆ ಸ್ವಾಮಿ & ಪುಟ್ಟ ಬಸಪ್ಪ ಈ ದಂಗೆಗಳನ್ನು ಪ್ರಾರಂಭಿಸಿದರು.
- ಬ್ರಿಟಿಷರು ಈ ದಂಗೆಗಳನ್ನು ಹತ್ತಿಕ್ಕಿ ಕಲ್ಯಾಣ ಸ್ವಾಮಿಯ ಶಿರಚ್ಛೇದ ಮಾಡಿದರು.
- ಅಪರಂಪರೆ ಸ್ವಾಮಿಯನ್ನು ಬಂಧಿಸಿದರು.
- ತಿಲಕರು 1916ರಲ್ಲಿ ಹೋಂ ರೂಲ್ ಲೀಗ್ ಚಳುವಳಿಯನ್ನು ಪ್ರಾರಂಭಿಸಿದರು. ಮೊದಲ ಹೋಂ ರೂಲ್ ಚಳುವಳಿ ಸಭೆ ಬೆಳಗಾಂನಲ್ಲಿ ನಡೆಯಿತು.
- 1920ರ ಅಸಹಾಕಾರ ಚಳುವಳಿಯನ್ನು ಗಾಂಧೀಜಿ ಪ್ರಾರಂಭಿಸಿದರು. ಕರ್ನಾಟಕದಿಂದ ಈ ಚಳುವಳಿಯಲ್ಲಿ ಭಾಗವಹಿಸಿದವರು : ಕಾರ್ನಾಡ್ ಸದಾಶಿವರಾವ್, ಆಲೂರು ವೆಂಕಟರಾವ್,



downloaded from: www.kpscvaani.com

ಆರ್.ಆರ್.ದಿವಾಕರ್, ಟಿ.ಎಸ್.ನಾಯಕ, ಗಂಗಾಧರರಾವ್, ದೇಶಪಾಂಡೆ. ವೀರಪ್ಪವಾಲಿ, ಎನ್.ಎಸ್. ಹರ್ಡಿಕರ್.

- ಎನ್.ಎಸ್. ಹರ್ಡಿಕರ್‌ರವರು "ಹಿಂದೂಸ್ಥಾನಿ ಸೇವಾದಳ"ವನ್ನು ಧಾರವಾಡದಲ್ಲಿ (ಹುಬ್ಬಳ್ಳಿ)ಯಲ್ಲಿ ಸ್ಥಾಪಿಸಿದರು.
- ಬೆಂಗಳೂರಿನಲ್ಲಿ ಗಂಗಾಧರ್ ರಾವ್ ದೇಶಪಾಂಡೆ "ಚರಕ ಸಂಘದ ಕರ್ನಾಟಕ ಶಾಖೆಯನ್ನು" ಸ್ಥಾಪಿಸಿದರು.
- 1920ರಲ್ಲಿ ಜರುಗಿದ ನಾಗಪುರ ಅದಿವೇಶನದಲ್ಲಿ "ಕರ್ನಾಟಕ ಪ್ರದೇಶ ಕಾಂಗ್ರೆಸ್' ಸಮಿತಿಯನ್ನು ಸ್ಥಾಪಿಸಲಾಯಿತು.
- ಇದರ ಮೊದಲ ಅಧಿವೇಶನ ಕರ್ನಾಟಕ ಕೇಸರಿ/ಸಿಂಹ ಎಂದೇ ಹೆಸರಾದ ಗಂಗಾಧರ ರಾವ್ ದೇಶಪಾಂಡೆಯವರು ವಹಿಸಿದರು.
- ಕರ್ನಾಟಕ ಸ್ಟೇಟ್ ಪೊಲಿಟಿಕಲ್ ಕಾನ್‌ಫರೆನ್ಸ್ 1920 ಮಾಧವ ರಾವ್ ಇದರ ಅಧ್ಯಕ್ಷರು.
- ಜಯರಾಮಚಾರ್ಯ ಕೊಪ್ಪಳ ಇವರು ಹರಿಕಥೆ ಮೂಲಕ ಜನರನ್ನು ಸ್ವಾತಂತ್ರ್ಯ ಸಂಗ್ರಾಮದೆಡೆಗೆ ಸೆಳೆದರು.
- ಉತ್ತರ ಕರ್ನಾಟಕದಲ್ಲಿ "ಚೌಡನಾಯಕ" ಇವರು ಕರ್ನಾಟಕದ ಮೊದಲ ರಾಜಕೀಯ ಬಂದಿ.
- ಆಲೂರು ವೆಂಕಟರಾವ್ ಇವರು "ನ್ಯಾಷನಲ್ ಸ್ಕೂಲ್ ಆಫ್ ಧಾರವಾಡ"ನ್ನು ಸ್ಥಾಪಿಸಿದ್ದಾರೆ. ಇವರನ್ನು "ಕರ್ನಾಟಕದ ಕುಲ ಪುರೋಹಿತ" ಎನ್ನುತ್ತಾರೆ. ಇವರ ಪುಸ್ತಕ "ಕರ್ನಾಟಕದ ಗತ ವೈಭವ".
- 1921–22ರಲ್ಲಿ ಮೈಸೂರು ಕಾಂಗ್ರೆಸ್ ಕಮಿಟಿ ಜಸ್ಟೀಸ್ ಸೆಟ್ಲೂರು ಅಧ್ಯಕ್ಷತೆಯಲ್ಲಿ ಸ್ಥಾಪಿಸಿದರು.

## 1924ರ ಬೆಳಗಾಂ ಕಾಂಗ್ರೆಸ್ ಅಧಿವೇಶನ :

- ಇದರ ಅಧ್ಯಕ್ಷತೆಯನ್ನು ಗಾಂಧೀಜಿಯವರು ವಹಿಸಿದ್ದು, ಇದು ಅವರು ಅಧ್ಯಕ್ಷತೆ ವಹಿಸಿದ್ದ ಏಕೈಕ ಮಹತ್ವದ ಸಭೆಯಾಗಿದೆ.



downloaded from: www.kpscvaani.com

## ಬೆಳಗಾಂ ಅಧಿವೇಶನದಲ್ಲಿ ಭಾಗವಹಿಸಿದ ಕರ್ನಾಟಕದ ನಾಯಕರು :

- ಹರ್ಡೇಕರ್ ಮಂಜಪ್ಪ, ಪಿ.ಆರ್.ರಾಮಯ್ಯ, ಗಂಗಾಧರರಾವ್ ದೇಶಪಾಂಡೆ, ಕಮಲಾದೇವಿ ಚಟ್ಟೋಪಾಧ್ಯಾಯ, ಡಿ.ಕೆ.ಭಾರದ್ವಾಜ, ಯಶೋಧರ ದಾಸಪ್ಪ, ಗೌರಮ್ಮ, ಬಳ್ಳಾರಿ ಸಿದ್ಧಮ್ಮ.
- 1929 ವೀರಕೇಸರಿ ಸೀತಾರಾಮಶಾಸ್ತ್ರಿ ಮೊದಲ ಮೈಸೂರು ಸ್ವಾತಂತ್ರ್ಯ ಹೋರಾಟಗಾರ.

## ಕಾನೂನು ಭಂಗ ಚಳುವಳಿ (ಕ್ರಿ.ಶ 1930) :

- 1930 ಮಾರ್ಚ್ 12ರಂದು ಗಾಂಧೀಜಿ ದಂಡಿ ಯಾತ್ರೆ ಪ್ರಾರಂಭಿಸಿದರು. ಇದರಲ್ಲಿ ಭಾಗವಹಿಸಿದ ಏಕೈಕ ಕನ್ನಡಿಗರೆಂದರೆ ಮೈಲಾರ ಮಹದೇವಪ್ಪ".
- ಕರ್ನಾಟಕದಲ್ಲಿ ದಂಡಿ ಚಳುವಳಿಯ ಪ್ರಭಾವವಾಗಿ ಅನೇಕ ಕಡೆ ನಾಯಕರ ನೇತೃತ್ವದ ಹೋರಾಟ ಪಟ್ಟಿ.
  - ಅಂಕೋಲ – ಎಂ. ಪಿ. ನಾಡಕರ್ಣಿ
  - ಬಿಜಾಪುರ – ಆರ್. ಆರ್. ದಿವಾಕರ
  - ಮಂಗಳೂರು – ಕಾರ್ನಾಡ್ ಸದಾಶಿವರಾವ್
  - ಗುಳವಾಡಿ – ಹನುಮಂತರಾವ್ ಕೌಜಲಗಿ
  - ಉತ್ತರ ಕರ್ನಾಟಕ – ತಿಮ್ಮಪ್ಪ ನಾಯಕ

## ಬಾದಾಮಿ ದಂಗೆ (ಕ್ರಿ.ಶ 1841) :

- ಬಾದಾಮಿಯಲ್ಲಿ ನರಸಿಂಗ ದತ್ತಾತ್ರೇಯ ಪೇಟ್ಕರ್ ವಿರುದ್ಧ ದಂಗೆಯೆದ್ದನು.

## ಕೊಪ್ಪಳ ದಂಗೆ (ಕ್ರಿ.ಶ 1819ರಲ್ಲಿ ನಾಯಕ ವೀರಪ್ಪ) :

- ಉದಯಗಿರಿ ದಂಗೆ : ನಾಯಕರು ಶಿವಲಿಂಗಪ್ಪ ತಿರುಮಲರಾಯ ಮೇಘಶಾಮ 1820 ಜನರಲ್ ಸದರಲ್ಯಾಂಡ್ ಈ ದಂಗೆ ಅಡಗಿಸಿದನು.

GNANADHARE IAS ACADEMY



downloaded from: www.kpscvaani.com

## ಕರ್ನಾಟಕದಲ್ಲಿ ಸಿಪಾಯಿದಂಗೆ ಅಥವಾ 1857ರ ದಂಗೆಯ ಪ್ರಭಾವ :

- ಹಲಗೇರಿಯ ಬೇಡರ ದಂಗೆ : ಉತ್ತರ ಕಾರ್ನಾಟಕದಲ್ಲಿ ವಾಸಿಸುತ್ತಿದ್ದ ಇವರು ಬ್ರಿಟಿಷರು 1857ರಲ್ಲಿ ಜಾರಿಗೆ ತಂದ ಶಸ್ತ್ರಾಸ್ತ್ರ ಕಾಯಿದೆಯನ್ನು ಜಾರಿಗೆ ತಂದಿದ್ದು ಈ ದಂಗೆಗೆ ಕಾರಣವಾಯಿತು.
- ಅಂತಿಮವಾಗಿ ಬೇಡರು ತಮ್ಮ ಮನೆಗೆ ತಾವೇ ಬೆಂಕಿ ಇಟ್ಟುಕೊಂಡು ಪ್ರಾಣತ್ಯಾಗ ಮಾಡಿದರು.

## ಸುರಪುರದ ವೆಂಕಟಪ್ಪ ನಾಯಕನ ದಂಗೆ :

- ಬ್ರಿಟಿಷ್ ಅಧಿಕಾರಿಯಾದ ಪಾಲ್ ಹೌಸಿಯು ಗುಲ್ಬರ್ಗ ಜಿಲ್ಲೆಯ ಸುರಪುರದಲ್ಲಿ ತನ್ನ ಒಬ್ಬ ಏಜೆಂಟ್‌ನನ್ನು ಇಟ್ಟುಕೊಳ್ಳುವಂತೆ ಹೇಳಿದನ್ನು ವಿರೋಧಿಸಿ ಈ ದಂಗೆಯನ್ನು ಆರಂಭಿಸಿದನು.
- ವೆಂಕಟಪ್ಪ ನಾಯಕನು 1857ರ ದಂಗೆಯಿಂದ ಸ್ಫೂರ್ತಿಗೊಂಡು ಈತ ನಾನಾ ಸಾಹೇಬ, ತಾತ್ಯಾಟೋಪಿ ಮುಂತಾದವರ ಸಂಪರ್ಕ ಇಟ್ಟುಕೊಂಡಿದ್ದ.
- ಕೊನೆಗೆ ಬ್ರಿಟಿಷರಿಂದ ಸೋತು ಆತ್ಮಹತ್ಯೆ ಮಾಡಿಕೊಂಡನು.

## ನರಗುಂದದ ಭಾಸ್ಕರರಾವ್ (ಕ್ರಿ.ಶ 1858) :

- ಡಾಲ್ ಹೌಸಿಯ ದತ್ತು ಪುತ್ರನಿಗೆ ಹಕ್ಕಿಲ್ಲ ಎಂಬ ನೀತಿಯ ವಿರುದ್ಧ ಹಗೆಕಾರಿದ್ದ ಇವನು 1857ರ ದಂಗೆಯಿಂದ ಸ್ಫೂರ್ತಿಗೊಂಡು ದಂಗೆ ಆರಂಭಿಸಿದನು. ಬ್ರಿಟಿಷರು ಇವನನ್ನು ಬಂಧಿಸಿ ಮರಣದಂಡನೆಗೆ ಗುರಿಪಡಿಸಿದರು.

## ಕರ್ನಾಟಕದಲ್ಲಿ 1885ರ ನಂತರ ಸ್ವಾತಂತ್ರ್ಯ ಚಳುವಳಿ :

- 1885ರಲ್ಲಿ ಸ್ಥಾಪಿತವಾದ ಅಖಿಲ ಭಾರತ ಕಾಂಗ್ರೆಸ್ ಮುಂಬೈನಲ್ಲಿ ನಡೆಸಿದ ಪ್ರಥಮ ಅಧಿವೇಶನದಲ್ಲಿ ಕರ್ನಾಟಕದ ಅನೇಕ ಪ್ರತಿನಿಧಿಗಳು ಪಾಲ್ಗೊಂಡಿದ್ದರು.
- 1900ರಲ್ಲಿ ಲಾಹೋರ್‌ನಲ್ಲಿ ನಡೆದ ಅಧಿವೇಶನಕ್ಕೆ ಕನ್ನಡಿಗರಾದ ಕಾರವಾರದ ನಾರಾಯಣ್ ಚಂದಾವರ್ಕರ್‌ನ್ನು ಅಧ್ಯಕ್ಷರಾಗಿ ಮಾಡಲಾಯಿತು. (ಇವರು ಮುಂಬೈನ ಪ್ರಥಮ ಅಧಿವೇಶನದಲ್ಲಿ ಭಾಗವಹಿಸಿದರು)



downloaded from: www.kpscvaani.com

- ಕರ್ನಾಟಕ ಉತ್ತರ ಭಾಗವು ಆಗ ಮುಂಬೈ ಪ್ರಾಂತ್ಯಕ್ಕೆ ಸೇರಿದ್ದು ಅಲ್ಲಿ ತಿಲಕರ ಸ್ಫೂರ್ತಿಯುತ ಭಾಷಣ "ದಿ ಮರಾತ" & "ಕೇಸರಿ" ಎಂಬ ಪತ್ರಿಕೆಗಳು ಆ ಪ್ರದೇಶದ ಜನರಲ್ಲಿ ರಾಷ್ಟ್ರೀಯುತ ಭಾವನೆಯನ್ನು ಮೂಡಿಸಿದ್ದು, ಅವು ಕನ್ನಡಿಗರ ಮೇಲೂ ಪ್ರಭಾವ ಬೀರಿದವು.
- ತಿಕಲರ ಪ್ರಭಾವದಿಂದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಪ್ರಮುಖ ಕನ್ನಡಿಗರೆಂದರೆ : ಆಲೂರು ವೆಂಕಟರಾವ್, ಮುದವೀಡು ಕೃಷ್ಣರಾವ್, ಕಡಪ ರಾಘವೇಂದ್ರ ರಾವ್, ನಾರಾಯಣ್ ಕರಿಕುದರಿ, ಅನಂತರಾವ್ ದ್ಯಾಬಡೆ.
- 1916ರಲ್ಲಿ ಧಾರವಾಡದಲ್ಲಿ ಆಲೂರು ವೆಂಕಟರಾಯರಿಂದ ಸ್ಥಾಪಿಸಲ್ಪಟ್ಟ ಕರ್ನಾಟಕ ಸಭಾ ಥಿಯೋಸೋಫಿಕಲ್ ಸೊಸೈಟಿ ರಾಮಕೃಷ್ಣ ಮಿಷನ್ ಆರ್ಯ ಸಮಾಜ ಮುಂತಾದವು ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಕ ಶಕ್ತಿಯಾಗಿ ಬೆಳೆದವು.
- 1905ರಲ್ಲಿ ಸ್ವದೇಶಿ ಚಳುವಳಿಯಲ್ಲಿ ಭಾಗವಹಿಸಿ ವಿದೇಶಿವಸ್ತುಗಳನ್ನು ಬಹಿಷ್ಕರಿಸಿ ಅನೇಕ ರಾಷ್ಟ್ರೀಯ ಶಾಲೆ ಆರಂಭಿಸಿದರು.

## ಸೂರತ್ ಒಡಕು (ಕ್ರಿ.ಶ 1907) :

- 1907ರಲ್ಲಿ ಸೂರತ್ ಕಾಂಗ್ರೆಸ್ ಅಧಿವೇಶನದಲ್ಲಿ ಕಾಂಗ್ರೆಸ್ ಇಬ್ಭಾಗವಾದಾಗ ಅನೇಕ ಕನ್ನಡಿಗರಾದ ಆಲೂರು ವೆಂಕಟರಾವ್, ಹೊಸಕೇರಿ, ಶ್ರೀನಿವಾಸ್‌ರಾವ್ ಕೌಜಲಗಿ, ಗೋವಿಂದರಾವ್ ಯಾಳಗಿ, ಗಂಗಾಧರರಾವ್ ದೇಶಪಾಂಡೆ ಭಾಗವಹಿಸಿದರು.
- ಗೋವಿಂದರಾವ್ ಯಾಳಗಿ & ಹನುಮಂತರಾವ್ ದೇಶಪಾಂಡೆಯವರು ಬೆಳಗಾಂನಲ್ಲಿ "ಮ್ಯಾಜಿನಿ ಕ್ಲಬ್' ಎಂಬ ಕ್ರಾಂತಿಕಾರಿ ಗುಪ್ತ ಸಂಸ್ಥೆಯೊಂದನ್ನು ಪ್ರಾರಂಭಿಸಿದರು.



downloaded from: www.kpscvaani.com

## ಭಾರತ ಬಿಟ್ಟು ತೊಲಗಿ ಅಥವಾ ಕ್ವಿಟ್ ಇಂಡಿಯಾ ಚಳುವಳಿ (ಕ್ರಿ.ಶ 1942):

- 1942 ಆಗಸ್ಟ್ 8 ಕಾಂಗ್ರೆಸ್ ಕ್ವಿಟ್ ಇಂಡಿಯಾ ಚಳುವಳಿಯನ್ನು ಪ್ರಾರಂಭಿಸಿದ್ದು ಈ ಚಳುವಳಿ ಕರ್ನಾಟಕದಲ್ಲಿ ತೀವ್ರವಾಗಿ ಹರಡಿತು.
- ಗಾಂಧೀಜಿಯ ಆಪ್ತ ಕಾರ್ಯದರ್ಶಿಗಳಾದ ಕಾಲೇಕರ್ & ಮಶ್ರೂವಾಲಾರವರು 'ಹರಿಜನ' ಪತ್ರಿಕೆಯಲ್ಲಿ ಸರ್ಕಾರದ ಆಡಳಿತ ಯಂತ್ರ ಕುಸಿದು ಬೀಳುವಂತೆ ಮಾಡಲು ಕರೆಕೊಟ್ಟರು. ಇದರ ಪ್ರಯುಕ್ತ ಹಲವಾರು ಧ್ವಂಸ, ಲೂಟಿ, ಪಿಕೇಟಿಂಗ್ ನಂತಹ ಹಿಂಸಾಕೃತ್ಯಗಳು ನಡೆದವು.




- 1943ರಂದು ತಿಮ್ಮನ ಗೌಡ ಮೆಣಸಿನ ಹಾಲ್‌ಗೆ ಬಾಂಬ್ ಹಾಕಲು ಹೋಗಿ ಸತ್ತನು.
- 1943ರ ಏಪ್ರಿಲ್‌ರಂದು ಮೈಲಾರ ಮಹದೇವಪ್ಪ ಧಾರವಾಡದಲ್ಲಿ ಸರ್ಕಾರದ ಶಿಜರಿ ಲೂಟಿ ಮಾಡುವಾಗ ಬ್ರಿಟಿಷರ ಗುಂಡಿಗೆ ಸತ್ತನು. ಕರ್ನಾಟಕ ಕ್ವಿಟ್ ಇಂಡಿಯಾ ಚಳುವಳಿಯ ಕ್ರಿಯಾ ಸಮಿತಿಯ ಅಧ್ಯಕ್ಷರು.
- 1942–43ರ ಅವಧಿಯಲ್ಲಿ ಒಟ್ಟು ಸುಮಾರು 7 ಸಾವಿರ ಮಂದಿ ಕನ್ನಡಿಗರು ಸೆರೆಮನೆ ಸೇರಿದರು.

## 1943 ಈಸೂರು ದುರಂತ (ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕು – ಚೌರಚೌರಿ) :

- ಗಾಂಧೀಜಿಯವರು ಮಾಡು ಇಲ್ಲವೇ ಮಡಿ ಕರೆಗೆ ಒಗ್ಗೊಟ್ಟು ಜನರು 1942 ಸೆಪ್ಟಂಬರ್ 26ರಂದು "ನಾವು ಸ್ವತಂತ್ರರು" ಎಂದು ಘೋಷಿಸಿಕೊಂಡು ಊರಿನ ವೀರಭದ್ರೇಶ್ವರ ದೇವಸ್ಥಾನದ ಬಳಿ ತ್ರಿವರ್ಣ ಧ್ವಜ ಹಾರಿಸಿದರು. ನಂತರ ನಡೆದ ಗೋಲಿಬಾರ್‌ನಲ್ಲಿ ಹಲವು ಜನ ಮರಣ ಹೊಂದಿದರು. 5 ಜನರಿಗೆ ಮರಣದಂಡನೆ ವಿಧಿಸಿದರು. ಅವರನ್ನು ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ನೇಣುಹಾಕಲಾಯಿತು.
- ಕರ ನಿರಾಕರಣೆ ಚಳುವಳಿ : ಕರ ನಿರಾಕರಣೆ ಚಳುವಳಿಯ ಕಾನೂನು ಭಂಗ ಚಳುವಳಿಯ ಒಂದು ಭಾಗವಾಗಿತ್ತು. ಇದು ಗುಜರಾತಿನ ಬಾರ್ದೋಲಿಯಲ್ಲಿ ನಡೆದ ಕರ ನಿರಾಕರಣೆ ಚಳುವಳಿಯಂತೆ



downloaded from: www.kpscvaani.com

ಕರ್ನಾಟಕದ ಪ್ರಮುಖ 4 ಸ್ಥಳಗಳಲ್ಲಿ ನಡೆಯಿತು. ಹಿರೇಕೆರೂರು (ಹಾವೇರಿ), ಅಂಕೋಲ, ಸಿರಸಿ, ಸಿದ್ದಾಪುರ.

- 1932 ಜನವರಿ 26ನ್ನು ಅಖಿಲ ಕರ್ನಾಟಕ ಸತ್ಯಾಗ್ರಹ ದಿನವನ್ನಾಗಿ ಆಚರಿಸಲಾಯಿತು.
- 1927ರಲ್ಲಿ ಗಾಂಧಿ ಮೈಸೂರಿಗೆ ಭೇಟಿ ಕೊಟ್ಟು ಸುಮಾರು 4 ತಿಂಗಳು ನಂದಿಬೆಟ್ಟದಲ್ಲಿ ಇದ್ದರು. ಆ ಸಮಯದಲ್ಲಿ ಮೈಸೂರು ಮಾದರಿ ರಾಜ್ಯ ಅಥವಾ ಆಧುನಿಕ ರಾಜ್ಯ ಎಂದು ಹೇಳಿದ್ದರು.

## ಶಿವಪುರ ಧ್ವಜ ಸತ್ಯಾಗ್ರಹ & ಅಧಿವೇಶನ 1938 :

- ಮೊದಲ ಮೈಸೂರು ಕಾಂಗ್ರೆಸ್ ಅಧಿವೇಶನವು ಮದ್ದೂರು ತಾಲ್ಲೂಕು ಶಿವಪುರದಲ್ಲಿ 1938ರ ಏಪ್ರಿಲ್‌ನಲ್ಲಿ ನಡೆಯಿತು.
- ಟಿ. ಸಿದ್ದಲಿಂಗಯ್ಯನವರು ಇದರ ಅಧ್ಯಕ್ಷತೆಯನ್ನು ವಹಿಸಿದ್ದರು.
- ಸರ್ಕಾರದ ವಿರುದ್ಧ ಧ್ವಜಾರೋಹಣ ನಡೆಸುವುದು ನಿಷಿದ್ಧವಾಗಿದ್ದರೂ ಅದನ್ನು ಧಿಕ್ಕರಿಸಿ ಈ ಅಧಿವೇಶನದಲ್ಲಿ 25 ಸಾವಿರ ಜನ ಭಾಗವಹಿಸಿ ಕಾಂಗ್ರೆಸ್ ಧ್ವಜ ಹಾರಿಸಲಾಯಿತು.
- ಪ್ರಮುಖ ನಾಯಕರು : ಟಿ. ಸಿದ್ಧಲಿಂಗಯ್ಯ, ಕೆ.ಸಿ ರೆಡ್ಡಿ, ಕೆ.ಟಿ.ಭಾಷ್ಯಾಂ, ಹೆಚ್.ಸಿ.ದಾಸಪ್ಪ, ಯಶೋದರಮ್ಮ ದಾಸಪ್ಪ, ಬಳ್ಳಾರಿ ಸಿದ್ದಮ್ಮ, ಇತ್ಯಾದಿ. ಎಂ.ಎನ್ ಜೋಯಿಸನು ಇಲ್ಲಿ ಬಾವುಟ ಹಾರಿಸಿದನು.
- ಪ್ರಸ್ತುತ ಶಿವಪುರದಲ್ಲಿ ಸತ್ಯಾಗ್ರಹ ಸೌಧ ಇದೆ.

## 1938 ವಿದುರಾಶ್ವಥ ದುರಂತ :

- ಗೌರಿಬಿದನೂರು ಬಳಿಯ ವಿದುರಾಶ್ವಥದಲ್ಲಿ ಕಾಂಗ್ರೆಸ್ ವಾರ್ಷಿಕ ಜಾತ್ರೆಯ ಪ್ರಯುಕ್ತ ಧ್ವಜ ಮೆರವಣಿಗೆಯನ್ನು ನಡೆಸಲು ನಿರ್ಧರಿಸಿತು.
- ಕಾಂಗ್ರೆಸ್ ಮೆರವಣಿಗೆ ಕೈಗೊಂಡ ಸರ್ಕಾರ ಗುಂಪನ್ನು ಚದುರಿಸಲು ಕೈಗೊಂಡ ಲಾಠಿಪ್ರಹಾರ & ಗುಂಡು ಹಾರಿಸಿದ್ದರಿಂದ 35 ಜನ ಸತ್ತರು.



downloaded from: www.kpscvaani.com

## ಮೈಸೂರು ಚಲೋ ಚಳುವಳಿ :

- 1947 ಆಗಸ್ಟ್ 15ರಂದು ಭಾರತಕ್ಕೆ ಸ್ವಾತಂತ್ರ್ಯ ಬಂದಿತಾದರೂ ದೇಶೀಯ ಸಂಸ್ಥಾನಗಳಿಗೆ ಬರಲಿಲ್ಲ.
- 1947 ಆಗಸ್ಟ್ 15ರಂದು ಮೈಸೂರಿನಲ್ಲಿ ತ್ರಿವರ್ಣ ಧ್ವಜ ಹಾರಿಸಲು ಅವಕಾಶ ನೀಡಲಿಲ್ಲ. ಆದ್ದರಿಂದ ಮೈಸೂರಿನಲ್ಲಿ "ಮೈಸೂರು ಚಲೋ ಅಥವಾ ಅರಮನೆ ಸತ್ಯಾಗ್ರಹವನ್ನು" ಪ್ರಾರಂಭಿಸಲಾಯಿತು.
- ಈ ಚಳುವಳಿಯು ಬೆಂಗಳೂರಿನಿಂದ ಪ್ರಾರಂಭವಾಯಿತು. ಇದರ ನಾಯಕರೆಂದರೆ ಕೆ.ಸಿ.ರೆಡ್ಡಿ, ಕೆ.ಟಿ.ಭಾಷ್ಯಾಂ. ಎಸ್.ನಿಜಲಿಂಗಪ್ಪ, ಟಿ.ಸಿದ್ದಲಿಂಗಯ್ಯ, ಹೆಚ್.ಸಿ.ದಾಸಪ್ಪ.
- 1947 ಅಕ್ಟೋಬರ್ 24ರಂದು ಕೆ.ಸಿ. ರೆಡ್ಡಿಯವರ ನೇತೃತ್ವದಲ್ಲಿ ಜವಾಬ್ದಾರಿ ಸರ್ಕಾರ ರಚನೆಯಾಯಿತು.

## ಕರ್ನಾಟಕದ ಏಕೀಕರಣ

### 1. ಏಕೀಕರಣದ ಅವಶ್ಯಕತೆ:

ಕರ್ನಾಟಕದ ಏಕೀಕರಣ ಒಂದು ಅವಶ್ಯವೂ,ಅನಿವಾರ್ಯವೂ ಆಗಿತ್ತು. ಕನ್ನಡ ಮಾತನಾಡುವ ಜನರು ಸುಮಾರು 20 ಬೇರೆ ಬೇರೆ ಭಾಗಗಳಲ್ಲಿ ಹಂಚಿ ಹೋಗಿದ್ದರು. ಇದ್ದರಿಂದ ಕನ್ನಡ ಭಾಷೆಯ ಮೇಲೆ ಹಾಗೂ ಕನ್ನಡಿಗರ ಆರ್ಥಿಕ ಜೀವನ, ಸಾಂಸ್ಕೃತಿಕ ಜೀವನ ಮತ್ತು ರಾಜಕೀಯ ಜೀವನದ ಮೇಲೆ ವ್ಯತಿರಿಕ್ತ ಪರಿಣಾಮವುಂಟಾಗಿತ್ತು.

### 2. ರಾಜಕಿಯವಾಗಿ ಏಕೀಕರಣದ ಅವಶ್ಯಕತೆ :

ರಾಜಕೀಯವಾಗಿ ಕನ್ನಡಿಗರಿಗೆ ತೀರಾ ಅನ್ಯಾಯವಾಗಿತ್ತು. ಕೇಂದ್ರೀಯ ಶಾಸಕಾಂಗ ಸಬೆಯಲ್ಲಿ ಕೇವಲ ಒಬ್ಬರು ಮಾತ್ರ ಕನ್ನಡ ಮಾತಾನಾಡುವ ಸದಸ್ಯರಿದ್ದರು. ಅವರು ಆಗ ಸುಮಾರು 68 ಲಕ್ಷ ಕನ್ನಡಿಗರ ಪ್ರತಿನಿದಿಯಾಗಿದ್ದರು. ಅದರೆ ಬೇರೆ ಬೇರೆ ಭಾಷೆಗಳ ಸ್ಥಿತಿ ತೀರಾ ಭಿನ್ನವಾಗಿತ್ತು. ಉದಾಹರಣೆಗೆ ಮಲಯಾಳಿ, ಸಿಂಧಿ ಮುಂತಾದ ಸಭೆಯಲ್ಲಿ ಮಲಯಾಳಿ ಭಾಷೆಯನ್ನು ಪ್ರತಿನಿಧಿಸುವ ನಾಲ್ಕು ಸದಸ್ಯರು, ಹಾಗೂ ಸಿಂಧಿ ಬಾಷೆಯಲ್ಲಿ ಮಾತಾನಾಡುವ ಆರು ಪ್ರತಿನಿಧಿಗಳು ಇದ್ದರು. ಅಂದರೆ ಕೇಂದ್ರೀಯ ಶಾಸಕಾಂಗ ಸಭೆಯಲ್ಲಿ ಕನ್ನಡಿಗರಿಗೆ ಧ್ವನಿಯೆ ಇರಲಿಲ್ಲ.



downloaded from: www.kpscvaani.com

## 3. ಆರ್ಥಿಕ ಜೀವನದ ಮೇಲೆ ಪರಿಣಾಮಗಳು :

ಕರ್ನಾಟಕದ ಪ್ರದೇಶಗಳು ಬೇರೆ ಬೇರೆ ಭಾಷೆಗಳನ್ನು ಆಡುವ ಬೇರೆ ರಾಜ್ಯಗಳಲ್ಲಿ ಹಂಚಿ ಹೋಗಿದ್ದವು. ಇದ್ದರಿಂದ ಕನ್ನಡ ಪ್ರದೇಶಗಳ ಅಲ್ಲಿಯ ಪ್ರಾಂತೀಯ ಸರ್ಕಾರಗಳು ಯಾವುದೇ ಕ್ರಮಗಳನ್ನು ಕೈಗೊಂಡಿರಲಿಲ್ಲ. ಈ ಕನ್ನಡ ಪ್ರದೇಶಗಳ ಉತ್ಪನ್ನಗಳನ್ನು ಅವರು ಉಪಯೋಗಿಸಿಕೊಂಡರೂ, ಅಲ್ಲಿಯ ಜನರ ಅಭಿವೃದ್ಧಿಗೆ ಅವರು ಪ್ರಯತ್ನಿಸಲೇ ಇಲ್ಲ.

## ಭಾಷೆಯ ಹಿನ್ನಡೆ :

- **ಮುಂಬೈ ಪ್ರಾಂತ್ಯ** : ಉತ್ತರ ಕನ್ನಡ, ಧಾರವಾಡ, ಬಿಜಾಪುರ, ಬೆಳಗಾವಿ ಮತ್ತು ಸೊಲ್ಲಾಪುರದ ಅನೇಕ ತಾಲ್ಲೂಕುಗಳು ಮುಂಬೈ ಪ್ರೆಸಿಡೆನ್ಸಿಯಲ್ಲಿದ್ದವು. ಇಲ್ಲಿಯ ಭಾಷೆ ಮರಾಠಿ, ಇಲ್ಲಿ ವಾಸಿಸುವ ಕನ್ನಡಿಗರು ಜೀವನೋಪಾಯಕ್ಕಾಗಿ ಮರಾಠಿ ಭಾಷೆಯನ್ನು ಕಲಿಯುವುದು ಅಗತ್ಯವಾಯಿತು. ಶಾಲೆಗಳಲ್ಲಿ ಮಾಧ್ಯಮವು ಮರಾಠಿಯೇ ಆಗಿತ್ತು. ಕನ್ನಡ ಮಾಧ್ಯಮದ ಶಾಲೆಗಳನ್ನು ಅಲ್ಲಿಯ ಸರಕಾರ ತೆರೆಯುತ್ತಲೇ ಇರಲಿಲ್ಲ. ಹೀಗಾಗಿ ಕನ್ನಡಿಗರ ಮಕ್ಕಳಿಗೆ ಮರಾಠಿ ಕಡ್ಡಾಯವೇ ಆಯಿತು.
- **ಹೈದ್ರಾಬಾದ್ ಪ್ರಾಂತ್ಯದಲ್ಲಿ** : ಅದರಂತೆ ಹೈದ್ರಾಬಾದ್ ಪ್ರಾಂತ್ಯದಲ್ಲಿ ಗುಲ್ಬರ್ಗ, ಬೀದರ, ರಾಯಚೂರು ಜಿಲ್ಲೆಗಳಿದ್ದವು. ಇಲ್ಲಿಯ ಕನ್ನಡಿಗರಿಗೆ ಉರ್ದು ಭಾಷೆ ಕಲಿಯುವುದು ಅನಿವಾರ್ಯವಾಯಿತು.
- **ಮದ್ರಾಸ ಪ್ರೆಸಿಡೆನ್ಸಿಯಲ್ಲಿ** : ಮದ್ರಾಸ ಪ್ರೆಸಿಡೆನ್ಸಿಯಲ್ಲಿ, ದಕ್ಷಿಣ ಕನ್ನಡ, ಬಳ್ಳಾರಿ, ಕೊಳ್ಳೇಗಾಲ, ಹೊಸೂರು ಮುಂತಾದ ಪ್ರದೇಶಗಳದ್ದವು. ಅಲ್ಲಿಯ ಕನ್ನಡಿಗರಿಗೆ ತಮಿಳು ಭಾಷೆ ಕಡ್ಡಾಯವಾದಂತಾಯಿತು.

### ಪರಿಣಾಮಗಳು :

- ಕನ್ನಡ ಮಾತನಾಡುವ ಜನ ಹರಿದು ಹಂಚಿ ಹೋಗಿದ್ದರು. ಇದರಿಂದ ಕನ್ನಡ ಭಾಷೆ ಸೊರಗಿತು.
- ಕ್ರಿ.ಶ. 1565 ರಲ್ಲಿ ರಕ್ಕಸತಂಗಡಗಿ ಕಾಳಗದಲ್ಲಿ ವಿಜಯನಗರದ ಸೋಲು ಕರ್ನಾಟಕದ ವಿಘಟನೆಗೆ ನಾಂದಿಯಾಯಿತು.
- ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಮರಣದ ಬಳಿಕ ಕರ್ನಾಟಕದ ಪ್ರದೇಶಗಳು ಇನ್ನಷ್ಟು ಕತ್ತರಿ ಪ್ರಯೋಗಕ್ಕೆ ಒಳಗಾಯಿತು.



downloaded from: www.kpscvaani.com

- 19ನೇ ಶತಮಾನದಲ್ಲಿ ಮೈಸೂರಿನ ಹೊರತು, ಕನ್ನಡನಾಡಿನ ಇತರ ಪ್ರದೇಶಗಳು ಕರ್ನಾಟಕದ ಕೈತಪ್ಪಿದವು.
- ಹೈದ್ರಾಬಾದ್‌ನ ನಿಜಾಮನ ಅಂಕಿತಕ್ಕೆ ಒಳಗಾದ ಕರ್ನಾಟಕದ ಕೆಲವು ಪ್ರದೇಶಗಳು ಬ್ರಿಟಿಷರ ಪಾಲಾದವು.
- ಈ ಎಲ್ಲಾ ಕಾರಣಗಳಿಂದ ಕನ್ನಡ ಭಾಷೆ ಮತ್ತು ಸಾಹಿತ್ಯ ಸೊರಗಿತು. ಕನ್ನಡ ನೆಲಕ್ಕೆ, ಕನ್ನಡ ಸಂಸ್ಕೃತಿಗೆ ಅಪಾಯಗಳುಂಟಾದವು. ಆದ್ದರಿಂದ ಕನ್ನಡ ಭಾಷೆಯ ಬೆಳೆವಣಿಗೆಗೆ, ಸಂಸ್ಕೃತಿಯ ಬೆಳೆವಣಿಗೆಗೆ. ನೆಲದ ರಕ್ಷಣೆಗೆ ಕರ್ನಾಟಕ ಏಕೀಕರಣ ಅವಶ್ಯವಾಯಿತು.
- ಕ್ರಿ.ಶ. 1885 ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಸ್ಥಾಪನೆಯಾಯಿತು. ಭಾಷಾವಾರು ಪ್ರಾಂತ್ಯಗಳ ರಚನೆಯ ಅವಶ್ಯಕತೆಯನ್ನು ಕಾಂಗ್ರೆಸ್ ಮುಖಂಡರು ಅರಿತರು. ಧಾರವಾಡ ಮತ್ತು ಬೆಂಗಳೂರುಗಳಲ್ಲಿ ಏಕೀಕರಣದ ಕರೆಗಳು ಕೇಳಿ ಬಂದವು.

**ಬೆನಗಲ್ ರಾಮರಾಯರ ಕರೆ :** ಕ್ರಿ.ಶ. 1903 ರಲ್ಲಿ ಧಾರವಾಡದಲ್ಲಿ ಬೃಹತ್ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಬೆನಗಲ್ ರಾಮಾರಾಯರು ಕರ್ನಾಟಕದ ಏಕೀಕರಣಕ್ಕೆ ಸ್ಪಷ್ಟವಾದ ಕರೆಯನ್ನು ನೀಡಿದರು.

**ನ್ಯಾಯಮೂರ್ತಿ ಸೆಟ್ಲೂರ್ ಕರೆ :** ಕ್ರಿ. ಶ. 1906ರಲ್ಲಿ ಧಾರವಾಡದಲ್ಲಿ ನ್ಯಾಯಮೂರ್ತಿ ಸೆಟ್ಲೂರ್ ಅವರು ಕರ್ನಾಟಕದ ಏಕೀಕರಣದ ಅವಶ್ಯಕತೆಯನ್ನು ಜನರಿಗೆ ಮನದಟ್ಟು ಮಾಡಿ ಕೊಟ್ಟರು.

**ಕಾಂಗ್ರೇಸ್ ಸಮ್ಮೇಳನದಲ್ಲಿ :**

ಕ್ರಿ. ಶ. 1902 ರಲ್ಲಿ ಗಾಂಧೀಜಿಯವರು ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ಮುಖಂಡರಾದರು. ಅನೇಕ ಕಾಂಗ್ರೇಸ್ ಸಮ್ಮೇಳನಗಳಲ್ಲಿ ಕರ್ನಾಟಕ ಏಕೀಕರಣ, ಭಾಷಾವಾರು ಪ್ರಾಂತ್ಯಗಳ ರಚನೆ ಮುಂತಾದ ವಿಷಯಗಳು ಚರ್ಚೆಗೆ ಬಂದವು.



downloaded from: www.kpscvaani.com

## ಭಾರತದ ರಾಷ್ಟ್ರೀಯ ಕಾಂಗ್ರೇಸ್ ಹಾಗೂ ಕರ್ನಾಟಕ ಏಕೀಕರಣ ಆಂದೋಲನ:–

ಭಾರತಕ್ಕೆ ಸ್ವಾತಂತ್ರ್ಯ ಸಿಗುವ ಮೊದಲೇ ಕರ್ನಾಟಕ ಏಕೀಕರಣ ಆಂದೋಲನ ಪ್ರಾರಂಭವಾಗಿ, ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನಗಳಲ್ಲಿ ಕರ್ನಾಟಕದ ಧುರೀಣರು ಈ ಪ್ರಶ್ನೆಯನ್ನು ಚರ್ಚಿಸಿದರು. ಸ್ವಾತಂತ್ರ್ಯಸಿಗುವ ಮೊದಲು ಅನೇಕ ರಾಷ್ಟ್ರಮಟ್ಟದ ಧುರೀಣರು ಕೂಡ ಕರ್ನಾಟಕ ಏಕೀಕರಣಕ್ಕೆ ಸಹಮತ ವ್ಯಕ್ತಪಡಿಸಿದ್ದರು. ಆದರೆ ಸ್ವಾತಂತ್ರ್ಯ ದೊರಕಿದ ಮೇಲೆ ಈ ಪ್ರಶ್ನೆ ಇನ್ನೂ ಜಟಿಲವಾಯಿತು. ಈ ಕುರಿತು ಅನೇಕ ಕಮಿಟಿಗಳು, ಆಯೋಗಗಳು ನೇಮಕಗೊಂಡವು. ಕೆಲವು ಆಯೋಗಗಳು ಕರ್ನಾಟಕದ ಏಕೀಕರಣ ಪ್ರಶ್ನೆಯನ್ನು ತಿರಸ್ಕರಿಸಿದ್ದೂ, ಉಂಟು. ರಾಜ್ಯಗಳ ಪುನರ್ವಿಂಗಡಣೆಯ ಕಾಲದಲ್ಲಿ ನವ ಮೈಸೂರು ರಾಜ್ಯದ ಉದಯವಾಯಿತು (1956) ಈ ಸಂದರ್ಭದಲ್ಲಿ ಕರ್ನಾಟಕವು ಕಳೆದುಕೊಂಡ ಕೆಲವು ಪ್ರದೇಶಗಳು ನವ ಮೈಸೂರು ರಾಜ್ಯದಲ್ಲಿ ಸೇರಿದವು. ಅವುಗಳ ಸಂಕ್ಷಿಪ್ತ ಅವಲೋಕನವನ್ನು ಮಾಡೋಣ;

### 1. ಕರ್ನಾಟಕ ಪ್ರಾಂತ್ಯ ರಚನೆಗೆ ಬೇಡಿಕೆ :

ಕ್ರಿ.ಶ. 1920ರಲ್ಲಿ, ಧಾರವಾಡದಲ್ಲಿ ಅಖಿಲ ಕರ್ನಾಟಕ ರಾಜಕೀಯ ಕಾನ್ಫರೆನ್ಸ್ ನಡೆಯಿತು. ಆಗ ಮೈಸೂರು ಸಂಸ್ಥಾನದ ದಿವಾನರಾಗಿದ್ದ ವಿ.ಪಿ. ಮಾಧವರಾಯರು ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದಾರೆ. ಕರ್ನಾಟಕದ ಮುಖಂಡರು ಈ ಸಭೆಯಲ್ಲಿ ಕರ್ನಾಟಕ ಪ್ರಾಂತ್ಯ ರಚನೆಯ ಅವಶ್ಯಕತೆಯನ್ನು ಪ್ರತಿಪಾದಿಸಿದರು.

### 2. ನಾಗಪುರ ಕಾಂಗ್ರೇಸ್ ಅಧಿವೇಶನ (1920) :

ಧಾರಾವಾಡದಲ್ಲಿ 1920 ರಲ್ಲಿ ನಡೆದ ಅಖಿಲ ಕರ್ನಾಟಕ ರಾಜಕೀಯ ಕಾನ್ಫರೆನ್ಸ್‌ನಲ್ಲಿ, ನಾಗಾಪುರಕ್ಕೆ ಕರ್ನಾಟಕದ ಪ್ರತಿನಿಧಿಗಳು ಹೆಚ್ಚಿನ ಪ್ರಮಾಣದಲ್ಲಿ ಹೋಗಬೇಕೆಂದು ನಿರ್ಧರಿಸಿದ್ದರು. ಅದರಂತೆ 1920 ರಲ್ಲಿ ನಡೆದ ನಾಗಪುರದ ಕಾಂಗ್ರೆಸ್ ಅಧಿವೇಶನಕ್ಕೆ ಕರ್ನಾಟಕದಿಂದ 800 ಕಾಂಗ್ರೆಸ್ ಸದಸ್ಯರು ಹೋಗಿದ್ದರು. ಇದೊಂದು ದಾಖಲೆಯೂ ಹೌದು. ಈ ಅಧಿವೇಶನದಲ್ಲಿ ಕರ್ನಾಟಕದ ಸದಸ್ಯರು, ಸಮಸ್ತ ಕರ್ನಾಟಕಕ್ಕೆ ಅನ್ವಯವಾಗುವಂತೆ ಒಂದು ಸಂಯುಕ್ತ ಪ್ರಾದೇಶಿಕ ಕಾಂಗ್ರೆಸ್ ರಚನೆಯನ್ನು ಅನುಮೋದಿಸಬೇಕೆಂದು ತಮ್ಮ ಬೇಡಿಕೆಯನ್ನು ಮುಂದಿಟ್ಟರು.

ಅವರ ಬೇಡಿಕೆಗೆ ಬೆಂಬಲವೂ ದೊರೆಯಿತು ಮತ್ತು ಅನುಮತಿಯೂ ದೊರೆಯಿತು. ಈ ಅಧಿವೇಶನದಲ್ಲಿಯೇ ಕರ್ನಾಟಕ ಪ್ರಾದೇಶಿಕ ಕಾಗ್ರೆಸ್ ಕಮೀಟಿ (ಕೆ.ಪಿ.ಸಿ.ಸಿ.)ರಚನೆಯಾಯಿತು. ಕರ್ನಾಟಕದ ಸಿಂಹ ಎಂದೇ ಹೆಸರಾದ ಗಂಗಾಧರ ರಾವ್ ದೇಶಪಾಂಡೆ ಕೆ.ಪಿ.ಸಿ.ಸಿ.ಯ ಪ್ರಥಮ ಅಧ್ಯಕ್ಷರಾದರು.ಕರ್ನಾಟಕ ಏಕೀಕರಣ ಆಂದೋಲನದಲ್ಲಿ ಇದು ಪ್ರಥಮ ವಿಜಯವಾಗಿತ್ತು.



downloaded from: www.kpscvaani.com

## 3. ಬೆಳಗಾವಿಯ ಕಾಂಗ್ರೆಸ್ ಅಧಿವೇಶನ (1924) :

ಕ್ರಿ. ಶ. 1924 ರಲ್ಲಿ ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಮಹಾತ್ಮಾ ಗಾಂಧೀಜಿಯವರು ಈ ಆಧಿವೇಶನದ ಅಧ್ಯಕ್ಷರಾಗಿದ್ದರು. ಕರ್ನಾಟಕದ ಏಕೀಕರಣದ ಇತಿಹಾಸದಲ್ಲಿ ಈ ಸಮ್ಮೇಳನ ಮಹತ್ವವನ್ನು ಪಡೆದಿದೆ. ಈ ಸಮ್ಮೇಳನದಲ್ಲಿ ಹುಯಿಲಗೋಳ ನಾರಾಯಣರಾಯರು 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಗೀತೆಯನ್ನು ಓದಿದರು. ಸಮ್ಮೇಳನದಲ್ಲಿ ಈ ಗೀತೆ ಅತ್ಯಂತ ಪ್ರಭಾವವನ್ನು ಬೀರಿತು. ಕನ್ನಡಿಗರಿಗೆ ರೋಮಾಂಚನವಾಯಿತು. ವೀಣೆ ಶೇಷಣ್ಣನವರು ವೀಣಾವಾದನ ನಡೆಸಿ ಜನರನ್ನು ರಂಜಿಸಿದರು. ಬೆಳಗಾವಿಯ ಕಾಂಗ್ರೆಸ್ ಅಧಿವೇಶನ ಸ್ಥಳಕ್ಕೆ 'ವಿಜಯನಗರ' ಎಂದು ಹೆಸರಿಟ್ಟಿದ್ದರು. ವಿಜಯನಗರ ಸಾಮ್ರಾಜ್ಯದ ವೈಭವವನ್ನು ಕಾಂಗ್ರೆಸ್ ಸದಸ್ಯರು ಅರಿಯಲು ಇದರಿಂದ ಅನುಕೂಲವಾಯಿತು. ಕರ್ನಾಟಕದ ಜನತೆ ಇದರಿಂದ ಉತ್ತೇಜನಗೊಂಡರು.

## 4. ಕರ್ನಾಟಕ ಏಕೀಕರಣ ಪರಿಷತ್ತಿನ ಪ್ರಥಮ ಸಭೆ(1924) :

ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆದ ಸ್ಥಳದಲ್ಲಿಯೇ ಅಧಿವೇಶನ ಮುಗಿದ ಬಳಿಕ ಕರ್ನಾಟಕ ಏಕೀಕರಣ ಪರಿಷತ್ತಿನ ಪ್ರಪ್ರಥಮ ಸಭೆ ನಡೆಯಿತು. ಸರ್ ಸಿದ್ದಪ್ಪ ಕಂಬಳಿಯವರು ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಅನಂತರದಲ್ಲಿ ಕರ್ನಾಟಕ ಬೇರೆ ಬೇರೆ ಭಾಗಗಳಲ್ಲಿ ಕರ್ನಾಟಕ ಏಕೀಕರಣ ಪರಿಷತ್ತಿನ ಸಭೆಗಳು ನಡೆದವು ಮತ್ತು ಏಕೀಕರಣ ನಿರ್ಣಯಗಳನ್ನು ಪಾಸು ಮಾಡಿದವು.

## 5. ಮುಂಬೈನಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ(1927):

ಕ್ರಿ. ಶ 1927 ರಲ್ಲಿ ಮುಂಬೈನಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ನಡೆಯಿತು. ಈ ಸಭೆಯಲ್ಲಿ ಭಾಷಾವಾರು ತಳಹದಿಯ ಮೇಲೆ ಕರ್ನಾಟಕ ರಾಜ್ಯದ ನಿರ್ಮಾಣವಾಗಬೇಕೆಂಬ ಠರಾವನ್ನು ಪಾಸು ಮಾಡಲಾಯಿತು.

## 6. ನೆಹರು ಕಮೀಟಿ ವರದಿ :

ಕ್ರಿ. ಶ.1928ರಲ್ಲಿ, ಭಾಷಾವಾರು ಪ್ರಾಂತ್ಯ ರಚನೆಯ ಬಗ್ಗೆ ವರದಿ ನೀಡಲು ನೆಹರು ಕಮೀಟಿಯನ್ನು ನೇಮಿಸಲಾಯಿತು. ಈ ಕಮೀಟಿಯು, ಭಾಷೆಯ ತಳಹದಿಯ ಮೇಲೆ ಪ್ರಾಂತ್ಯಗಳ ರಚನೆಯಾಗಬೇಕೆಂದು ಸ್ಪಷ್ಟವಾದ ವರದಿಯನ್ನು ನೀಡಿತು.



downloaded from: www.kpscvaani.com

## 7. ಸೈಮನ್ ಆಯೋಗದ ವರದಿ :

1929ರಲ್ಲಿ ಸೈಮನ್ ಕಮಿಶನ್ ಭಾರತಕ್ಕೆ ಬಂದಿತು. ಕ್ರಾಂಗ್ರೆಸ್, ಈ ಆಯೋಗವನ್ನು ತಿರಸ್ಕರಿಸಿತ್ತು. ಆದರೂ ಸೈಮನ್ ಭಾರತದುದ್ದಕ್ಕೂ ಸಂಚರಿಸಿದರು. ಆನರ ಅಹವಾಲುಗಳನ್ನು ಕೇಳಿದರು. ಕೊನೆಗೆ ಭಾರತೀಯ ರಾಜ್ಯಗಳ ಗಡಿಗಳನ್ನು ಪುನಃವಿಮರ್ಶಿಸಿ ನವೀಕರಣಕ್ಕೆ ಅವರು ಸಲಹೆ ನೀಡಿದರು.

## 8. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಠರಾವು :

ಕ್ರಿ. ಶ.1938 ರಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಭಾಷಾವಾರು ಪ್ರಾಂತ್ಯ ರಚನೆಯ ಬಗ್ಗೆ ದೀರ್ಘವಾಗಿ ಚರ್ಚಿಸಿ, ದೇಶಕ್ಕೆ ಸ್ವಾತಂತ್ರ್ಯ ದೊರೆತ ಕೂಡಲೇ ಭಾಷಾವಾರು ಪ್ರಾಂತ್ಯ ರಚನೆಯನ್ನು ಕೈಗೆತ್ತಿಕೊಳ್ಳುವುದಾಗಿ ಆಶ್ವಾಸನೆ ನೀಡಿತು ಮತ್ತು ಠರಾವನ್ನು ಕೂಡ ಪಾಸು ಮಾಡಿತು.

## 9. ಗಾಂಧೀಜಿಯವರ ಅಭಿಪ್ರಾಯ:

ಮಹಾತ್ಮಾ ಗಾಂಧೀಜಿಯವರು, ಕರ್ನಾಟಕ ಪ್ರಾಂತ ರಚನೆಯನ್ನು ಯಾರೂ ತಡೆಯಲಾರರು ಎಂದು ಹೇಳಿದರಲ್ಲದೆ, ಈ ಪ್ರಾಂತ್ಯ ರಚನೆಯನ್ನು ತಾವು ಅನುಮೋದಿಸುವುದಾಗಿ ಹೇಳಿದರು.

## 10. ಪಟೇಲ್ ಆಶ್ವಾಸನೆ :

ಕ್ರಿ. ಶ.1944 ರಲ್ಲಿ ಕರ್ನಾಟಕ ಏಕೀಕರಣ ಪರಿಷತ್ತು ಮುಂಬೈನಲ್ಲಿ ಸಭೆ ನಡೆಸಿತು. ಜೆ.ಬಿ.ಖೇರ್ ಅಧ್ಯಕ್ಷತೆಯನ್ನು ವಹಿಸಿದ್ದರು. ಸರದಾರವಲ್ಲಭ ಭಾಯಿ ಪಟೇಲರು ಕರ್ನಾಟಕ ಏಕೀಕರಣ ಪರಿಷತ್ತಿನ ಮುಂಬೈ ಸಭೆಯನ್ನು ಉದ್ಘಾಟಿಸಿದರು. ಕರ್ನಾಟಕದ ಅನೇಕ ಪ್ರದೇಶಗಳು ಬೇರೆ ಬೇರೆ ರಾಜ್ಯಗಳಲ್ಲಿ ಸೇರಿದ್ದು, ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿ ಹಾಗೂ ಕನ್ನಡಿಗರ ಆರ್ಥಿಕ ಜೀವನದ ಮೇಲೆ ವಿಪರೀತ ಪರಿಣಾಮವನ್ನುಂಟು ಮಾಡಿದೆ ಎಂಬುದನ್ನು ವಲ್ಲಭಭಾಯಿ ಪಟೇಲರೂ ಒಪ್ಪಿಕೊಂಡರು. ದೇಶವು ಸ್ವತಂತ್ರಗೊಂಡ ಕೂಡಲೇ ಭಾಷಾವಾರು ಪ್ರಾಂತ್ಯ ರಚನೆಯನ್ನು ಕೈಗೆತ್ತಿಕೊಂಡು, ಕರ್ನಾಟಕಕ್ಕೆ ಆದ ಅನ್ಯಾಯವನ್ನು ಸರಿಪಡಿಸಲಾಗುವುದೆಂದು. ಭರವಸೆ ನೀಡಿದರು.

## 11. ಕರ್ನಾಟಕ ಏಕೀಕರಣ ಸಮಿತಿ ಸಭೆಗಳು :

ಕರ್ನಾಟಕ ಏಕೀಕರಣ ಸಮಿತಿಯು ಅಲ್ಲಲ್ಲಿ ಸಭೆಗಳನ್ನು ನಡೆಸಿತು. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿಯೂ ಕರ್ನಾಟಕ ಏಕೀಕರಣ ಸಮಿತಿ ಸಭೆ ನಡೆಸಿತು. ಮುಂಬೈ ಹಾಗೂ ಮದ್ರಾಸ ಪ್ರಾದೇಶಿಕ ಸಮಿತಿಗಳು, ಕರ್ನಾಟಕದ ಏಕೀಕರಣವನ್ನು ಬೆಂಬಲಿಸಿದವು ಕರ್ನಾಟಕ ಏಕೀಕರಣ ಸಮಿತಿಯ ಕಾರ್ಯದರ್ಶಿಗಳಾಗಿ ಅಂದಾನಪ್ಪ ದೊಡ್ಡಮೇಟಿ ಮತ್ತು ಶ್ರೀನಿವಾಸರಾವ್ ಮಂಗಳವೇಡ ಅವರು



downloaded from: www.kpscvaani.com

ನೇಮಕಗೊಂಡರು. ಹೀಗೆ ಮೈಸೂರು ಕಾಂಗ್ರೆಸ್ ಪಕ್ಷವು ಸ್ವಾತಂತ್ರ್ಯ ಪೂರ್ವದಿಂದಲೂ ಕರ್ನಾಟಕ ಏಕೀಕರಣಕ್ಕೆ ಹೋರಾಟಗಳನ್ನು ನಡೆಸಿತು.

## ಸ್ವಾತಂತ್ರ್ಯ ಹಾಗೂ ಏಕೀಕರಣ

1. **ಕಾಸರಗೋಡಿನಲ್ಲಿ ಕರ್ನಾಟಕ ಏಕೀಕರಣ ಸಮ್ಮೇಳನ** :ಕ್ರಿ.ಶ. 1947ರಲ್ಲಿ ಕರ್ನಾಟಕ ಏಕೀಕರಣ ಸಮ್ಮೇಳನದ ನಡೆಯಿತು. ಖ್ಯಾತ ಸ್ವಾತಂತ್ರ್ಯಹೋರಾಟಗಾರರಾದ ರಂಗನಾಥ ದಿವಾಕರರು ಸಮ್ಮೇಳನದ ಅಧ್ಯಕ್ಷರಾಗಿದ್ದರು. ಭಾರತವು ಸ್ವಾತಂತ್ರ್ಯ ಹೊಂದಿದರೂ ಕರ್ನಾಟಕ ಏಕೀಕರಣ ಕೈಗೂಡಲಿಲ್ಲವೆಂದು ಅವರ ಅಸಮಾಧಾನ ವ್ಯಕ್ತಿಪಡಿಸುತ್ತ ಏಕೀಕರಣಕ್ಕಾಗಿ ಸರಕಾರವನ್ನು ಒತ್ತಾಯಿಸಿದರು.

2. **ಧಾರ್ ಕಮೀಟಿ** : ಕೇಂದ್ರ ಸರ್ಕಾರವು 1948ರಲ್ಲಿ ಎಸ್.ಕೆ.ಧಾರ್ ಅವರ ಅಧ್ಯಕ್ಷತೆಯಲ್ಲಿ ಒಂದು ಕಮೀಟಿಯನ್ನು ನೇಮಿಸಿದರು. ಸ್ವತಂತ್ರ್ಯ ಭಾರತದಲ್ಲಿ ರಾಜ್ಯಗಳ ಪುನರ್ವಿಂಗಡಣೆಯ ಕೇಳಿಕೊಳ್ಳಲಾಗಿತ್ತು. ಆದರೆ ಈ ಕಮೀಟಿಯು ಭಾಷಾವಾರ ಪ್ರಾಂತ್ಯ ರಚನೆಯನ್ನೇ ವಿರೋಧಿಸಿತು. ಇದ್ದರಿಂದ ಅಸಮಾಧಾನಗೊಂಡು ಕರ್ನಾಟಕದ ಜನರು, ತಮ್ಮ ಧ್ಯೇಯಗಳನ್ನು ಸಾಧಿಸಿಕೊಳ್ಳಲು ಚಳುವಳಿ ಮಾರ್ಗವನ್ನು ಹಿಡಿದರು.

3. **ಜೆ.ವಿ.ಪಿ.ಕಮೀಟಿ**: ಆ ಬಳಿಕ ಕೇಂದ್ರ ಸರಕಾರವು ಜೆ.ವಿ.ಪಿ.ಕಮೀಟಿಯನ್ನು ನೇಮಿಸಿತು. ಈ ಕಮೀಟಿಯ ಉದ್ದೇಶ ಕೂಡ ಭಾಷಾವಾರು ಪ್ರಾಂತ್ಯ ರಚನೆಯ ಬಗ್ಗೆ ಸಲಹೆ ಸಲಹೆಗಳನ್ನು ಸರಕಾರಕ್ಕೆ ನೀಡುವುದಾಗಿತ್ತು.

ಈ ಕಮೀಟಿಯಲ್ಲಿ ಜವಹರಲಾಲ ನೆಹರು (ಜೆ) ವಲ್ಲಭಭಾಯಿ ಪಟೇಲರು (ವಿ) ಮತ್ತು ಪಟ್ಟಾಭಿ ಸೀತಾರಾಮಯ್ಯನವರು(ಪಿ) ಸದಸ್ಯರಾಗಿದ್ದರು.

ಈ ಕಮೀಟಿಯು ಭಾಷೆಯ ಆಧಾರದ ಮೇಲೆ, ತೆಲಗು ಮಾತನಾಡುವ ಪ್ರದೇಶ ಸಹಿತ ಆಂಧ್ರ ಪ್ರದೇಶ ಪ್ರಾಂತ್ಯ ರಚನೆಗೆ ಅನುಮೋದಿಸಿತು. ಆದರೆ ಇತರ ಪ್ರಾಂತ್ಯಗಳ ರಚನೆಯ ಬಗ್ಗೆ ಕಮೀಟಿ ಏನನ್ನೂ ಸೂಚಿಸಲಿಲ್ಲ. ಇದರಿಂದ ಕರ್ನಾಟಕದ ಜನತೆಗೆ ಭ್ರಮ ನಿರಸನವಾದದಂತಾಯಿತು. ಕೇವಲ ಆಂದೋಲನದಿಂದ ಮಾತ್ರ ತಾವು ಗುರಿ ಮುಟ್ಟಬಹುದೆಂಬ ನಿರ್ಣಯಕ್ಕೆ ಅವರು ಬಂದರು.



downloaded from: www.kpscvaani.com

4. **ಅಖಿಲ ಭಾರತ ಕಾಂಗ್ರೆಸ್ ಸಮಾವೇಶ (1951):** 1951 ರಲ್ಲಿ ಬೆಂಗಳೂರಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಮೀಟಿಯ ಸಮಾವೇಶ ನಡೆಯಿತು. ಕರ್ನಾಟಕ ಏಕೀಕರಣಕ್ಕೆ ಸರ್ಕಾರವು ವಿಳಂಬಿಸುವುದನ್ನು ಸ್ಪಷ್ಟವಾಗಿ ಈ ಅಧಿವೇಶನದಲ್ಲಿ ಖಂಡಿಸಲಾಯಿತು. ಕನ್ನಡಿಗರು ಉಗ್ರ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು.ಈ ಕುರಿತು ವಿಚಾರಸುವುದಾಗಿ ಸರಕಾರ ಆಶ್ವಾಸನೆಯನ್ನು ನೀಡಿತು.

5. **ಕರ್ನಾಟಕ ಏಕೀಕರಣ ಸಂಘ** : ರಾಜಕೀಯವಾಗಿ ಕರ್ನಾಟಕ ಏಕೀಕರಣಕ್ಕೆ ಹೋರಾಟ ನಡೆಸುವ ಅವಶ್ಯಕತೆಯನ್ನು ಕಂಡ ಇಲ್ಲಿಯ ಧುರೀಣರು ರಾಜಕೀಯ ಪಕ್ಷದ ರಚನೆಗೆ ಹಾಕಲಾಯಿತು. ಈ ಪಕ್ಷವು ಚುನಾವಣಾ ಕಣಕ್ಕೂ ಇಳಿಯಿತು.

6. **ಪೊಟ್ಟಿಶ್ರೀರಾಮುಲು ನಿಧನ** : ಜೆ.ವಿ.ಪಿ. ಕಮೀಟಿಯು ಆಂಧ್ರಪ್ರದೇಶ ಪ್ರಾಂತ್ಯ ರಚನೆಗೆ ಸೂಚನೆ ನೀಡಿತ್ತಷ್ಟೆ. ಅದರೆ ಸರಕಾರ ಈ ಪ್ರಶ್ನೆಯನ್ನು ವಿಳಂಬಿಸಿತು. ಇದರಿಂದ ಆಂದ್ರದ ಜನರು ಅಸಮಾಧಾನಗೊಂಡರು.

- ಪೊಟ್ಟಿ ಶ್ರೀರಾಮುಲು ಎನ್ನುವವರು ಆಂಧ್ರಪ್ರದೇಶ ರಚನೆಗಾಗಿ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಅವರ ಅನ್ನ ಸತ್ಯಾಗ್ರಹ 53 ದಿನಗಳವರೆಗೆ ನಡೆಯಿತು.
- ಅವರು ಈ ಸತ್ಯಾಗ್ರಹ ನಡೆಸುತ್ತಿರುವಾಗಲೇ ನಿಧನರಾದರು. ಆಂಧ್ರದಲ್ಲಿ ಗಂಭೀರ ವಾತಾವಾರಣವುಂಟಾಯಿತು.
- ಹಿಂಸಾ ಘಟನೆಗಳು ನಡೆದವು. ಕೇಂದ್ರ ಸರ್ಕಾರ ಆಂಧ್ರ ರಾಜ್ಯ ರಚನೆಗಾಗಿ ಮುಂದಾಯಿತು.
- ಕ್ರಿ. ಶ. 1953ರಲ್ಲಿ ಭಾಷಾವಾರು ಪ್ರಾಂತ್ಯ ರಚನೆಯ ಆಧಾರದ ಮೇಲೆ ಈ ರಾಜ್ಯ ಅಸ್ತಿತ್ವಕ್ಕೆ ಬಂದಿತು.
- ಈ ಸಂದರ್ಭದಲ್ಲಿ ವಾಂಛೂ ಕಮೀಟಿಯ ಸಲಹೆಯಿಂತೆ ಬಳ್ಳಾರಿ ಜಿಲ್ಲೆಯು ಮೈಸೂರು ರಾಜ್ಯಕ್ಕೆ ಸೇರಿತು. ಆದರೆ ರಾರ್ಯದುರ್ಗ, ಆದವಾನಿ ಮತ್ತು ಆಲೂರು ಪ್ರದೇಶಗಳನ್ನು ಆಂಧ್ರ ಪ್ರದೇಶಕ್ಕೆ ನೀಡಿದರು.

7. **ಅಖಿಲ ಕರ್ನಾಟಕ ಪ್ರಾಂತ ರಚನಾ ಸಮ್ಮೇಳನ** : ಕ್ರಿ.ಶ. 1952ರಲ್ಲಿ ಅಖಿಲ ಕರ್ನಾಟಕ ಪ್ರಾಂತ ರಚನಾ ಸಮ್ಮೇಳನವು 2 ಠರಾವುಗಳನ್ನು ಪಾಸು ಮಾಡಿತು.

   - ಕರ್ನಾಟಕ ಪ್ರಾಂತ್ಯ ರಚನೆಯಾಗಬೇಕು.
   - ಮೈಸೂರು ಮಹಾರಾಜರನ್ನೇ ಕರ್ನಾಟಕ ಪ್ರಾಂತ್ಯದ ರಾಜಪ್ರಾಮುಖರನ್ನಾಗಿ ನೇಮಿಸಬೇಕು.

ಈ ಸಮ್ಮೇಳನದ ನಿರ್ಣಯವು ಒಂದು ಅಡಿ ಮುಂದೆ ಇಟ್ಟಂತಾಯಿತು.



downloaded from: www.kpscvaani.com

8. **ಕರ್ನಾಟಕದಲ್ಲಿ ಉಪವಾಸ ಸತ್ಯಾಗ್ರಹ(1953)** :ಕರ್ನಾಟಕದಲ್ಲಿಯೂ, ಆಂಧ್ರದಂತೆ ಉಪವಾಸ ಸತ್ಯಾಗ್ರಹ ಪ್ರಾರಭಿಸಿದ್ದರಿಂದ ಆಂದೋಲನಕ್ಕೆ ಇನ್ನಷ್ಟು ತೀವ್ರ ಸ್ವರೂಪ ಬಂದಿತು. ಶ್ರೀ ಅಂದಾನಪ್ಪ ದೊಡ್ಡ ಮೇಟಿಯವರು ಧಾರವಾಡ ಜಿಲ್ಲೆಯ ಜಕ್ಕಲಿ ಎಂಬ ಗ್ರಾಮದಲ್ಲಿ ಆಮರಣ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಅದರಂತೆ ಶಂಕರಗೌಡ ಪಾಟೀಲರು ಕೂಡ ಉಪವಾಸ ಸತ್ಯಾಗ್ರಹವನ್ನು ಕೈಗೊಂಡರು.

9. **ಹೈದ್ರಾಬಾದ ಕಾಂಗ್ರೆಸ್ ಅಧಿವೇಶನ (1953):** ಕ್ರಿ.ಶ. 1953 ರಲ್ಲಿ ಹೈದ್ರಾಬಾದದಲ್ಲಿ ಅಖಿಲ ಭಾರತ ಭಾರತ ಕಾಂಗ್ರೆಸ್ ಅಧಿವೇಶವು ನಡೆಯಿತು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರಚನೆಯ ಅವಶ್ಯಕತೆಯನ್ನು ಕಾಂಗ್ರೆಸ್ಸಿಗರಿಗೆ ಮನವರಿಕೆ ಮಾಡಿಕೊಡಲಾಯಿತು. ಈ ಸಮಯದಲ್ಲಿಯೇ ಅಂದಾನಪ್ಪ ದೊಡ್ಡಮೇಟಿ ಹಾಗೂ ಶಂಕರಗೌಡ ಪಾಟೀಲರು ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದ್ದರು.

10. **ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು** :ದಾವಣಗೆರೆಯಲ್ಲಿ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತನ್ನು ಸ್ಥಾಪಿಸಲಾಯಿತು. ಕೆ.ಆರ್. ಕಾರಂತರು ಈ ಪರಿಷತ್ತಿನ ಅಧ್ಯಕ್ಷರಾಗಿ ಜನಜಾಗೃತಿಗೆ ಪ್ರಯತ್ನಿಸಿದರು.

11. **ಚುನಾವಣಾ ಪರಿಣಾಮಗಳು** : ಹುಬ್ಬಳ್ಳಿ ಮತದಾರ ಕ್ಷೇತ್ರದಿಂದ ಮುಂಬೈ ವಿಧಾನ ಸಭೆಗೆ ಉಪಚುನಾವಣೆ ನಡೆಯಿತು. ಕರ್ನಾಟಕ ರಾಜ್ಯ ರಚನೆಯ ಪ್ರಣಾಳಿಕೆಯಲ್ಲಿ ಘೋಷಿಸಿದ ಅಭ್ಯರ್ಥಿ ವಿಜಯ ಸಾಧಿಸಿದರು. ಅಂದಾನಪ್ಪ ದೊಡ್ಡ ಮೇಟಿಯವರು ತಮ್ಮ ವಿಧಾನ ಸಭಾ ಸದ್ಯಸತ್ವಕ್ಕೆ ರಾಜೀನಾಮೆ ನೀಡಿದರು. ಅಲ್ಲಿನ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸೋತನು. ಈ ಪರಿಣಾಮ ಕರ್ನಾಟಕದ ಜನತೆಯ ಸ್ಪಷ್ಟವಾದ ನಿಲುವನ್ನು ವ್ಯಕ್ತ ಪಡಿಸಿತು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಅಭಿಪ್ರಾಯ ಚುನಾವಣೆಯಲ್ಲಿ ವ್ಯಕ್ತವಾಗುದರಿಂದ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಈ ಕುರಿತು ಚಿಂತನೆ ನಡೆಸಲೇ ಬೇಕಾಯಿತು.

12. **1952 ರ ಸಾರ್ವತ್ರಿಕ ಚುನಾವಣೆ :** 1952 ರಲ್ಲಿ ಸ್ವತಂತ್ರ್ಯ ಭಾರತದಲ್ಲಿ ಪ್ರಪ್ರಥಮ ಸಾರ್ವತ್ರಿಕ ಚುನಾವಣೆ ನಡೆಯಿತು. ಉಪಚುನಾವಣೆಯ ಪರಿಣಾಮಗಳಿಂದ ಅನುಭವ ಪಡೆದ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಈ ಚುನಾವಣೆಯ ಪ್ರಣಾಳಿಕೆಯಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯನ್ನೂ ಸೇರಿತು. ಕರ್ನಾಟಕದಲ್ಲಿ ಕೂಡ ಕಾಂಗ್ರೆಸ್ ಅಭ್ಯರ್ಥಿಗಳು ವಿಜಯ ಗಳಿಸಿದರು. ಕೇಂದ್ರದಲ್ಲಿ ಪುನಃ ಕಾಂಗ್ರೆಸ್ ಪಕ್ಷ



downloaded from: www.kpscvaani.com

ಸರಕಾರವನ್ನು ರಚಿಸಿತು. ಇದರಿಂದ ಕೇಂದ್ರ ಸರ್ಕಾರವು, ಪ್ರಜಾಭಿಪ್ರಾಯಕ್ಕೆ ಮನ್ನಣೆ ನೀಡಲೇಬೇಕಾಯಿತು ಮತ್ತು ಕರ್ನಾಟಕ ರಾಜ್ಯ ರಚನೆ ಕುರಿತು ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುವುದು ಕೇಂದ್ರ ಸರಕಾರಕ್ಕೆ ಅನಿವಾರ್ಯವೂ ಆಯಿತು.

**13.ಫಜಲ್ ಅಲಿ ಕಮಿಷನ್ (1953)** :ಸಾರ್ವತ್ರಿಕ ಚುನಾವಣೆಯ ಮೂರನೆಯ ವರ್ಷವೇ (1953) ಕೇಂದ್ರ ಸರ್ಕಾರವು ರಾಜ್ಯ ಪುನರ್ವಿಂಗಂಡಣಾ ಸಮಿತಿಯನ್ನು ರಚಿಸಿತು. ಈ ಸಮಿತಿಯ ಮುಖ್ಯಸ್ಥರು ಫಜಲ್ ಅಲಿಯವರಾಗಿದ್ದರು. ಆದ್ದರಿಂದ ಈ ಸಮಿತಿಗೆ ಫಜಲ್ ಅಲಿ ಕಮಿಷನ್ ಎಂದೂ ಹೇಳುತ್ತಾರೆ.

## 14.ಮಹಾಜನ ಆಯೋಗ (1965):

**ಆಯೋಗದ ನೇಮಕದ ಹಿನ್ನೆಲೆ** :ಮೈಸೂರು ಮತ್ತು ಮಹಾರಾಷ್ಟ್ರಗಳ ನಡುವೆ ಗಡಿತಂಟೆಯು ಪ್ರಾರಂಭವಾಯಿತು. 1961ರಲ್ಲಿ ಮಹಾರಾಷ್ಟ್ರ ರಾಜ್ಯ ನಿರ್ಮಾಣವಾದಾಗಿಂದಲೂ ಈ ಎರಡು ರಾಜ್ಯಗಳ ನಡುವೆ ಗಡಿತಂಟೆ ಜೀವಂತವಾಗಿಯೇ ಇದೆ.

## ಆಯೋಗದ ಸಂಚಾರ

ಕ್ರಿ.ಶ. 1967ರಲ್ಲಿ ನ್ಯಾಯಮೂರ್ತಿ ಮಹಾಜನರು ಕಾರವಾರ, ಬೆಳಗಾವಿ, ಬೆಂಗಳೂರು, ಗುಲ್ಬರ್ಗಾ ಮತ್ತು ಮಂಗಳೂರುಗಳಿಗೆ ಬೇಟಿ ನೀಡಿದರು. ದೆಲ್ಲಿ ಮತ್ತು ಊಟಿಗಳಲ್ಲಿ ರಾಜ್ಯ ಸರಕಾರಗಳಲ್ಲಿ ರಾಜ್ಯ ಸರಕಾರಗಳ ವಾದಗಳನ್ನು ಆಲಿಸಿದರು. ಕೇರಳ ಸರಕಾರವು ಯಾವುದೇ ಮನವಿಯನ್ನು ಅರ್ಪಿಸಲು ನಿರಾಕರಿಸಿತು.

## ವರದಿಯ ಮುಖ್ಯಾಂತಶಗಳು

ನ್ಯಾಯಮೂರ್ತಿ ಮಹಾಜನರು, 1967ರ ನವಂಬರ್ ತಿಂಗಳಿನಲ್ಲಿ 196 ಪುಟಗಳ ದೀರ್ಘ ವರದಿಯನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸಿದರು. ಈವರದಿಯ ಮುಖ್ಯಾಂಶಗಳು ಹೀಗಿವೆ.

- ಮಹಾರಾಷ್ಟ್ರವು ಬೆಳಗಾವಿ ಪಟ್ಟಣವು ತನ್ನದೆಂದು ವಾದಿತ್ತು. ಆದರೆ ಈ ಪಟ್ಟಣದಲ್ಲಿ ಮರಾಠಿ ಮಾತನಾಡುವವರ ಸಂಖ್ಯೆ ಶೇ. 46 ಇದ್ದು ಕನ್ನಡ ಮಾತನಾಡುವವರ ಸಂಖ್ಯೆ ಹೆಚ್ಚಿಗೆ ಇರುವುದರಿಂದ, ಬೆಳಗಾವಿ ಮೈಸೂರು ರಾಜ್ಯಕ್ಕೆ ಸೇರಬೇಕು.



downloaded from: www.kpscvaani.com

- ಖಾನಾಪುರ ತಾಲ್ಲೂಕಿನಲ್ಲಿ ಮಹಾರಾಷ್ಟ್ರ ಸರ್ಕಾರ 206 ಗ್ರಾಮಗಳು ತನ್ನದೆಂದು ಆಯೋಗದ ಮುಂದೆ ಅಹವಾಲು ಮಂಡಿಸಿತ್ತು. ಅವುಗಳಲ್ಲಿ 152 ಗ್ರಾಮಗಳು ಮಹಾರಾಷ್ಟ್ರಕ್ಕೆ ಹಾಗೂ ಇನ್ನುಳಿದ 54 ಗ್ರಾಮಗಳು ಮೈಸೂರು ರಾಜ್ಯಕ್ಕೆ ಸೇರತಕ್ಕದ್ದೆಂದು ಆಯೋಗ ಶಿಫಾರಸ್ ಮಾಡಿತು.
- ಬೆಳಗಾವಿ ತಾಲ್ಲೂಕಿನ 84 ಗ್ರಾಮಗಳನ್ನು ಮಹಾರಾಷ್ಟ್ರ ಸರ್ಕಾರ ಕೇಳಿತು. ಅವುಗಳಲ್ಲಿ 42 ಗ್ರಾಮಗಳು ಮಾತ್ರ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಆಯೋಗ ನಿರ್ಣಯಿತು.
- ಚಿಕ್ಕೋಡಿ ತಾಲ್ಲೂಕಿನ ನಿಪ್ಪಾಣಿ ಪಟ್ಟಣ ಸಹಿತಿ 42 ಗ್ರಾಮಗಳನ್ನು ಮಹಾರಾಷ್ಟ್ರ ತನ್ನದೆಂದು ವಾದಿಸಿತ್ತು. ಅವುಗಳಲ್ಲಿ 9 ಗ್ರಾಮಗಳು ಮೈಸೂರು ರಾಜ್ಯಕ್ಕೆ ಸೇರ ಬೇಕೆಂದೂ, ಉಳಿದ 33 ಗ್ರಾಮಗಳು ನಿಪ್ಪಾಣಿ ಪಟ್ಟಣ ಸಹಿತ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಆಯೋಗ ಸ್ಪಷ್ಟಪಡಿಸಿತು.
- ಬೀದರ ಜಿಲ್ಲೆಯ 1446 ಹಳ್ಳಿಗಳನ್ನು ಮಹಾರಾಷ್ಟ್ರ ಸರಕಾರ ಕೇಳಿತ್ತು. ಆದರೆ ಆಯೋಗ ಈ ಬೇಡಿಕೆಯನ್ನೇ ನಿರಾಕರಿಸಿ ತೀರ್ಪನ್ನು ನೀಡಿತು.
- ಕೊಂಕಣಿ ಭಾಷೆ ಮರಾಠಿಯ ಒಂದು ಭಾಗವೆಂದೂ, ಕೊಂಕಣಿ ಮಾತನಾಡುವ ಜನಸಂಖ್ಯೆ ಅಧಿಕವಾಗಿರುವ ಕಾರವಾರ ತನಗೆ ಸೇರಬೇಕೆಂದು ಆಯೋಗದ ಮುಂದೆ ಮಹಾರಾಷ್ಟ್ರ ಸರಕಾರ ವಾದಿಸಿದರೂ, ಆಯೋಗ ಈ ಬೇಡಿಕೆಯನ್ನು ನಿರಾಕರಿಸಿತು.
- ಕೇರಳ ರಾಜ್ಯದಿಂದ, ಕನ್ನಡ ಮಾತನಾಡುವ ಜನಸಂಖ್ಯೆಯೇ ಅಧಿಕವಾಗಿರುವ ಕಾಸರಗೋಡು, ಕುಂಬ್ಳೆ ಹಾಗೂ ಮಂಜೇಶ್ವರಗಳು ಮೈಸೂರಿಗೆ ಸೇರಬೇಕೆಂದು ಆಯೋಗ ತಿಳಿಸಿತು.
- ಚಂದ್ರಗಿರಿ ಹಾಗೂ ಪಯಸ್ವಿನಿ ನದಿ ಮೈಸೂರು ಮತ್ತು ಕೇರಳ ರಾಜ್ಯಗಳ ಗಡಿಯೆಂದು ಆಯೋಗ ಗುರುತಿಸಿತು.
- ಹೀಗೆ ನ್ಯಾಯಮೂರ್ತಿ ಮಹಾಜನರ, ತಮ್ಮ ನಿರ್ಣಯಗಳನ್ನು ಕೇಂದ್ರ ಸರಕಾರಕ್ಕೆ ವರದಿಯ ರೂಪದಲ್ಲಿ ನೀಡಿದರು.

## ಬಹುಮನಿ ರಾಜ್ಯ(1347–1527):

ಉತ್ತರ ಭಾರತಕ್ಕೆ ಸೀಮಿತವಾಗಿದ್ದು ಮಗಮದೀಯರ ಆಳ್ವಿಕೆ ಮಧ್ಯಯುಗದಲ್ಲಿ ಕರ್ನಾಟಕದಲ್ಲೂ ವಿಸ್ತರಿಸಿತು. ಇಲ್ಲಿ ಸುಮಾರು ಮೂರು ಶತಮಾನಗಳಿಗೂ ಹೆಚ್ಚು ಕಾಲದ ಬಹುಮನಿ ಮತ್ತು ಇತರ ಮಹಮದೀಯರ ಆಳ್ವಿಕೆ ಅನೇಕ ಅಂಶಗಳಲ್ಲಿ ಗಮನಾರ್ಹವಾಗಿದೆ. ವಿಜಯನಗರ ಸಾಮ್ರಾಜ್ಯದ ಸಮಕಾಲೀನವಾದ ಈ ಬಹುಮನಿ ರಾಜ್ಯ 1347 ರಲ್ಲಿ ಅಸ್ತಿತ್ವಕ್ಕೆ ಬಂದಿತು. ಸು.180 ವರ್ಷಗಳು ವಿಜಯನಗರದ ಪ್ರತಿಸ್ಪರ್ಧಿಯಾಗಿ ನಿಂತು ಅಮದಿನ ರಾಜಕೀಯದಲ್ಲಿ ಪ್ರಮುಖ ಪಾತ್ರವಹಿಸಿದ್ದಿತು. ತಮ್ಮ ಆಳ್ವಿಕೆಗೊಳಪಟ್ಟ ಪ್ರದೇಶಗಳಲ್ಲಿ ಕಲೆ ಮತ್ತು ಸಂಸ್ಕೃತಿಯ ಮೇಲೂ ಬಹುಮನಿಯರು ಪ್ರಭಾವ ಬೀರಿದರು.



downloaded from: www.kpscvaani.com

## ಪ್ರಧಾನಿ ಮಹಮದ್ ಗವಾನ್:

ಇವನು ಪರ್ಶಿಯಾದ ಗಿಲಾನ್ ರಾಜ್ಯದ ಗವಾನ್ ಇಂಬ ಗ್ರಾಮದಲ್ಲಿ 1405 ರಲ್ಲಿ ಜನಿಸಿದನು. ಗಿಲಾನ್ ರಾಜ್ಯದ ಮಂತ್ರಿ ಷಂಶುದ್ದೀನ್ ಇವನ ಚಿಕ್ಕಪ್ಪನಾಗಿದ್ದ. ವಿದ್ವಾಂಸರು ಮನೆತನಕ್ಕೆ ಸೇರಿದ ಗವಾನ್ ರಾಜಕೀಯ ಹಿನ್ನಲೆ ಕೂಡ ಉಳ್ಳವನಾಗ್ಗಿದ್ದನು.

ಇವನು ಅನನ್ಯ ಸೂಫಿ ಪಂಥೀಯನಾಗಿದ್ದನು.ಗಿಲಾನಿನಲ್ಲಿ ರಾಜಕೀಯ ಕ್ಷೋಭೆ ಉಂಟಾದಾಗ ಗಿಲಾನ್ ರಾಜ್ಯವನ್ನು ತೊರೆದ ಗವಾನ್ ಚಿಕ್ಕಪ್ಪನೊಂದಿಗೆ ಮಕ್ಕಾ ಸೇರಿದನು. ಆ ಸಮಯದಲ್ಲಿ ಪರ್ಷಿಯಾದ ಮುಜೀಬಲ್ ಕಿರ್ಮಾನಿ ಎಂಬ ಸೂಫಿ ಸಂತನು ಬೀದರನಲ್ಲಿ ನೆಲಸಿ ಪ್ರಸಿದ್ಧನಾಗಿದ್ದನು. ಇವನನ್ನು ಕಾಣುವ ಉದ್ದೇಶದಿಂದ ಬೀದರ್‌ಗೆ ಬಂದ ಗವಾನ್ ತನ್ನ ವಿದ್ವತ್ತು, ಸುಸಂಸ್ಕೃತ ವರ್ತನೆ ಮತ್ತು ಪ್ರಾಮಾಣಿಕತೆಯಿಂದಾಗಿ ಬಹುಮನಿ ಸುಲ್ತಾನ 2 ನೇ ಅಲ್ಲಾವುದ್ದೀನನ ಗಮನವನ್ನು ಸೆಳೆದನು. ನಂತರ ಸುಲ್ತಾನನ ಪ್ರಧಾನ ಮಂತ್ರಿಯಾಗಿ ನಿಯುಕ್ತನಾದನು. ಮುಂದೆ ಹುಮಾಯೂನನ ಆಳ್ವಿಕೆಯಲ್ಲಿ ನಿಷ್ಠಾವಂತ ಮಂತ್ರಿಯಾಗಿ ದಕ್ಷತೆಯಿಂದ ಕರ್ಯನಿರ್ವಹಿಸಿದ. ಹುಮಾಯೂನನ ತರುವಾಯ ಪಟ್ಟಕ್ಕೆ ಏರಿದ .ಎಂಟು ವರ್ಷಗಳ ನಿಜಾಂ ಷಾ ನ ಕಾಲದಲ್ಲಿ ಪೂರ್ಣ ರಾಜ್ಯಾಡಳಿತ ಹೊರೆ ಗವಾನನ ಮೇಲೆ ಬಿದ್ದಿತು. ಒಟ್ಟಿನಲ್ಲಿ ಎರಡನೇ ಅಲಾ-ಉದ್-ದೀನ್, ನಿಜಾಂಷಾ, ಮೂರನೇ ಮಹಮದ್‌ರ ಕಾಲದಲ್ಲೂ ಇವನು ಪ್ರಧಾನ ಮಂತ್ರಿಯಾಗಿದ್ದನು. ನಿಜಾಂಷಾನ ಆಳ್ವಕೆಯ್ಲಲಿ ಬೀದರನ ಮೇಲೆ ದಂಡೆತ್ತಿ ಬಂದ ಮಾಳ್ವದ ಸುಲ್ತಾನನನ್ನು ಹೊಡೆದೋಡಿಸಿದ ಕೀರ್ತಿ ಗವಾನನಿಗೆ ಸೇರುವಂತಹುದು. ಇವನು ಮತ್ತೊಂದು ಮಹತ್ಸಾಧನೆಯೆಂದರೆ ವಿಜಯನಗರದ ವಶವಿದ್ದ ಗೋವೆಯನ್ನು ಸ್ವಾದೀನಪಡಿಸಿಕೊಂಡದು. ಇನ್ನೂ ಅನೇಕ ಪ್ರಾಂತ್ಯಗಳನ್ನು ಗೆದ್ದು ಬಹುಮನಿ ರಾಜ್ಯಕ್ಕೆ ಸೇರಿಸಿಕೊಂಡು ಗವಾನ ಕಂಚಿಯವರೆಗೂ ತನ್ನ ದಂಡಯಾತ್ರೆಯನ್ನು ಮುಂದುವರಿಸಿದ.

1469 ರಲ್ಲಿ ದಕ್ಷಿಣ ಕೊಂಕಣದ ರಾಜ ಸಂಗಮೇಶ್ವರನಿಂದ ಖೇಲ್ನ ಕೋಟೆಯನ್ನು ವಶಪಡಿಸಿಕೊಂಡು. ಬೆಳಗಾಮಿನ ರಾಜನ ದಂಗೆಯನ್ನು ಯಶಸ್ವಿಯಾಗಿ ಅಡಗಿಸಿದ. ಒರಿಸ್ಸಾದ ದಂಗೆಯನ್ನು ಅಡಗಿಸಿ ಅಲ್ಲಿ ದೇವಾಲಯಗಳನ್ನು ನೆಲಸಮ ಗೊಳಿಸಿ 'ಘಜಿ' ಎಂಬ ಬಿರುದು ತಳೆದ.

ಮಹಮದ್ ಗವಾನನ ಧರ್ಮ, ಸಾಹಿತ್ಯ, ವೈದ್ಯಕೀಯ, ಗಣಿತ, ಹಾಸ್ಯ, ಪತ್ರ ವ್ಯವಹಾರ ಮೊದಲಾದ ವಿಷಯಗಳನ್ನು ಕುರಿತು ಹಲವಾರು ಗ್ರಂಥಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಮುಖ್ಯವಾದುವು: ಮನ್ಜಿರುಲ್-ಇನ್-ಷಾ, ರಿಯಾಜೆ-ಉಲ್-ಇನ್ ಷಾ, ಇತ್ಯಾದಿ

ಭೂಮಿಯ ಗುಣಮಟ್ಟ ಮತ್ತು ಅದರ ವಿಸ್ತೀರ್ಣದ ಆಧಾರದ ಮೇಲೆ ಕಂದಾಯ ವಸೂಲಿಯನ್ನು ಜಾರಿಗೆ ತಂದನು. ವಿದ್ಯಾಬಿವೃದ್ದಿಗಾಗಿ ಬೀದರ್ ಎಂಬಲ್ಲಿ "ಗವಾನನ ಮದ್ರಸಾ"ಎಂಬ ಕಾಲೇಜನ್ನು ಸ್ವಂತ ಹಣದಿಂದ ಸ್ಥಾಪಿಸಿ ಅಲ್ಲಿ ಒಂದು ಗ್ರಂಥಾಲಯವನ್ನೂ ವ್ಯವಸ್ಥೆಗೊಳಿಸಿದನು. 1470 ರಲ್ಲಿ ಬೀದರ್‌ಗೆ ಭೇಟಿ ನೀಡಿದ್ದ ರಷ್ಯಾದ ಪ್ರವಾಸಿ ನಿಕಿಟಿನ್ ಬಹುಸಂಖ್ಯಾತರ ಸ್ಥಿತಿ ಸಂಕಟದಲ್ಲಿದ್ದರೂ ಬೀದರ್‌ನ ಸಂಪತ್ತು ಮತ್ತು ವೈಭವವನ್ನು ಕುರಿತ 'ಮಹಮದೀಯ ಹಿಂದೂಸ್ಥಾನದ ಪ್ರಮುಖ ಪಟ್ಟಣ' ಎಂಬುದಾಗಿ ಹೊಗಳಿದ್ದಾನೆ.


downloaded from: www.kpscvaani.com

**ಸೂಫಿ ತತ್ವ:**

ಬಿಜಾಪುರದ ಸೂಫಿ ಪರಂಪರೆಯಲ್ಲಿ ಮೂರು ಪಂಗಡಗಳನ್ನು ಕಾಣಬಹುದು. 1.ಚಿಸ್ತಿ 2.ಖಾದಿ 3.ಷತ್ತಾನಿ. ಇವರು ಮೆಕ್ಕಾ, ಬಾಗ್ದಾದ್, ಮುಲ್ತಾನ್–ಗುಜರಾತ್, ದೆಹಲಿ, ಆಗ್ರಾ, ಗ್ವಾಲಿಯರ್, ಗುಜರಾತ್ ಪ್ರಾಂತ್ಯಗಳಿಂದ 17 ನೇ ಶತಮಾನದಲ್ಲಿ ವಲಸೆ ಬಂದವರಾಗಿದ್ದಾರೆ. ಅವರಲ್ಲಿ ಪ್ರಮುಖರಾದವರು –ಷೇಕ್ ಅಬ್ದುಲ್ ಲತೀಫ್, ಷೇಕ್ ಅಬ್ದುಲ್ ರಜಾಕ್, ಷೇಕ್ ಹಸನ್ ಖಾದ್ರಿ, ಷೇಕ್ ಹಸನ್ ಪೀರ್.

ಬಿಜಾಪುರಕ್ಕೆ ಸೂಫಿ ಸಂತರು ಅಧಿಕ ಸಂಖ್ಯೆಯಲ್ಲಿ ಬಂದದ್ದು ಸುಲ್ತಾನ ಜಗದ್ಗುರು ಬಾದ್ ಷಾ ಎಂದು ಪ್ರಸಿದ್ದನಾಗಿದ್ದ 2 ನೇ ಇಬ್ರಾಹಿಮನ ಕಾಲದಲ್ಲಿ. 17 ನೇ ಶತಮಾನದ ಕೊನೆಯ ಭಾಗದಲ್ಲಿ ಅನೇಕ ಪವಾಡಗಳಿಂದ ಖ್ಯಾತನಾದ ಸೋಫಿ ಸಂತನೆಂದರೆ ಷೇಕ್ ಅಮೀನುದೀನ್. ವಾರ್ಷಿಕವಾಗಿ ಇವರ ಹೆಸರಿನಲ್ಲಿ ನಡೆಯುವ ಉರಸ್ ಅಥವಾ ಜಾತ್ರೆಯಲ್ಲಿ ಹಿಂದೂ–ಮುಸ್ಲಿಂರುಭೇದ ಭಾವವಿವಿಲ್ಲದೆ ಇಂದೂ ಭಾಗವಹಿಸುತ್ತಿದ್ದಾರೆ.

ಸಂತ ಅಮೀನುದ್ದೀನರ ಹೆಸರನ್ನು ಉಚ್ಚರಿಸಿ 2 ಅಡಿಗೂ ಹೆಚ್ಚು ದಪ್ಪದ ಕಲ್ಲು ಗುಂಡುಗಳನ್ನು ಎರಡು ಬೆರಳುಗಳಿಂದ ಎತ್ತುವುದನ್ನು ಇಂದಿಗೂ ನೋಡಬಹುದು. ಇದು ಅವರು ಪವಾಡಪುರುಷರಾಗಿದ್ದರೆಂಬುದಕ್ಕೆ ಕುರುಹಾಗಿದೆ ಎನ್ನುತ್ತಾರೆ ಅಲ್ಲಿನ ಜನ. ಜನಸಾಮಾನ್ಯರು ಅವರ ಕೃಪೆಯಿಂದ ಹರಕೆಗಳನ್ನು ಈಡೇರಿಸಿಕೊಳ್ಳುತ್ತಿದ್ದಾರೆ. ಬಿಜಾಪುರದ ಬಳಿಯ ಷಾಪುರದ ಮತ್ತೊಬ್ಬ ಸೂಪಿಸಂತ ಟೀಪುಮಸ್ತಾನ್ ಔಲಿಯ 1725 ರಲ್ಲಿ ಆರ್ಕಾಟಿಗೆ ಹೋಗಿ ನೆಲಸಿದರು. ಇವರ ಕೃಪೆಯಿಂದ ಹೈದರ್ ಅಲಿಗೆ ಟಿಪ್ಪು ಜನಿಸಿದನೆಂದು ಹೇಳಲಾಗಿದೆ.



downloaded from: www.kpscvaani.com

# ಭಾರತದ ಇತಿಹಾಸ

## ➢ ಭಾರತದಲ್ಲಿ ಶಿಲಾಯುಗ ಸಂಸ್ಕೃತಿ :–

ಆದಿಮಾನವನ ವಿಕಾಸವನ್ನು ಆತನು ಬಳಸಿದ ವಸ್ತುಗಳ ಅಥವಾ ಸಲಕರಣೆಗಳ ಲಕ್ಷಣಗಳ ಆಧಾರದ ಮೇಲೆ ಪ್ರಮುಖವಾಗಿ ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ.

1. **ಶಿಲಾಯುಗ** (**Stone Age Culture**) :
   - ಹಳೆ ಶಿಲಾಯುಗ (ಕ್ರಿ.ಪೂ. 9000ರವರೆಗೆ)
   - ಮಧ್ಯ ಶಿಲಾಯುಗ (ಕ್ರಿ.ಪೂ. 9000–4000ರವರೆಗೆ)
   - ನೂತನ ಶಿಲಾಯುಗ (ಕ್ರಿ.ಪೂ. 4000–1800ರವರೆಗೆ)

2. **ಲೋಹಯುಗ** (**Metal Age Culture**) :
   - ಚಾಲ್ಕೋಲಿಥಿಕ್ ಯುಗ (ಕ್ರಿ.ಪೂ. 1800–1000ರವರೆಗೆ)
   - ಕಬ್ಬಿಣ ಯುಗ (ಕ್ರಿ.ಪೂ. 1000 ನಂತರ)

### 1. ಶಿಲಾಯುಗ ಸಂಸ್ಕೃತಿ :

#### ✓ ಹಳೆ ಶಿಲಾಯುಗ :

- ಈ ಹಳೆಯ ಶಿಲಾಯುಗವು ಮಧ್ಯ–ಹಿಮಯುಗದಲ್ಲಿ ಆರಂಭವಾಯಿತು. ಈ ಹಂತದ ಆದಿಮಾನವನು ಆಹಾರೋತ್ಪಾದಕನಾಗಿರದೆ ಆಹಾರ ಸಂಗ್ರಹಕನಾಗಿದ್ದನು. ಅಂದರೆ ಆಹಾರ ಸಂಗ್ರಹಣೆ & ಬೇಟೆಯಿಂದ ಇವನು ಜೀವನ ಸಾಗಿಸುತ್ತಿದ್ದನು.
- ಪ್ಯಾಲಿಯೋಥಿಕ್ ಎಂಬುದು ಗ್ರೀಕ್ ಪದ. ಲಿಥಿಕ್ ಎಂದರೆ ಕಲ್ಲು/ಶಿಲೆ (ಅಂದರೆ ಹಳೆಯ ಶಿಲಾಯುಗ ಎಂಬ ಅರ್ಥ ನೀಡುತ್ತದೆ). ಈ ಪದವನ್ನು ಮೊಟ್ಟ ಮೊದಲ ಬಾರಿಗೆ ಕ್ರಿ.ಶ 1865ರಲ್ಲಿ ಜಾನ್ ಲುಬಾಕ್ ಎಂಬ ಸಂಶೋಧಕ ಬಳಕೆ ಮಾಡಿದನು.
- ಈ ಯುಗದಲ್ಲಿ ಮಾನವನು ಪ್ರಾಣಿಯಂತೆ ಜೀವನ ನಡೆಸುತ್ತಿದ್ದು, ಬೇಟೆಗಾಗಿ ಒರಟಾದ ಕಚ್ಚಾ ಶಿಲಾ ಆಯುಧಗಳನ್ನು ಬಳಸುತ್ತಿದ್ದನು. ಸಾಮಾನ್ಯವಾಗಿ ಬೆಣಚುಕಲ್ಲಿನ ಆಯುಧಗಳನ್ನು ಬಳಸುತ್ತಿದ್ದರಿಂದ "ಬೆಣಚು ಕಲ್ಲಿನ ಮಾನವ" (Quartzite Man) ಎಂಬುದಾಗಿ ವಿದ್ವಾಂಸರು ಅಭಿಪ್ರಾಯಿಸಿರುವರು.

GNANADHARE IAS ACADEMY



downloaded from: www.kpscvaani.com

- ಈ ಯುಗದ ಮಾನವರು ಸ್ವಾಭಾವಿಕವಾಗಿ ನೀರು ದೊರಕುವಲ್ಲಿ ವಾಸಿಸುತ್ತಿದ್ದು, ಸ್ಥಿರ ವಸತಿ ನಿರ್ಮಾಣದ ಬಗ್ಗೆ ಅರಿವಿರಲಿಲ್ಲ. ಗುಹೆಗಳಲ್ಲಿ ಅಥವಾ ಮರದ ಪೊಟರೆಗಳಲ್ಲಿ ವಾಸಿಸುತ್ತಿದ್ದರು. ಬೆಂಕಿಯ ಉಪಯೋಗ ತಿಳಿದಿರಲಿಲ್ಲ. ಆದಿಮಾನವನ ಜೀವನ ವಿಧಾನವು ಪ್ರಾಣಿ ಜೀವನದಿಂದ ಸ್ವಲ್ಪಮಟ್ಟಿಗೆ ಭಿನ್ನವಾಗಿದ್ದು ಅನಾಗರಿಕ ಜೀವನ ವಿಧಾನದಂತೆಂದು ತಿಳಿಯಬಹುದು.
- ಭಾರತದ ಹಳೆಯ ಶಿಲಾಯುಗ ಸಂಸ್ಕೃತಿಯನ್ನು ಮೂರು ವಿಧಗಳಾಗಿ ವಿಂಗಡಿಸಬಹುದು.
  - ಆದಿ ಹಳೆಯ ಶಿಲಾಯುಗ (Lower Palarolithic Stage)
  - ಮಧ್ಯ ಹಳೆಯ ಶಿಲಾಯುಗ (Middle Palarolithic Stage)
  - ಅಂತ್ಯ ಹಳೆಯ ಶಿಲಾಯುಗ (Upper Palarolithic Stage)

| ಕಾಲ | ಕಚ್ಚಾಶಿಲಾ ಆಯುಧಗಳ ಮಾದರಿ | ಶಿಲಾಯುಧಗಳು ದೊರೆತ ಸ್ಥಳ |
|---|---|---|
| ಆದಿ ಹಳೆಯ ಶಿಲಾಯುಗ | ಕೈಕೊಡಲಿ, ಬರ್ಜಿ<br>ಈ ಆಯುಧಗಳನ್ನು ಬೆಣಚು ಕಲ್ಲಿನಿಂದ, ಕ್ವಾರ್ಟ್ & ಬೆಸಾಲ್ಟ್‌ಗಳಿಂದ ತಯಾರಿಸಲಾಗುತ್ತಿತ್ತು | ಸಿಂಧೂ, ಸರಸ್ವತಿ, ಬ್ರಹ್ಮಪುತ್ರ & ಗಂಗಾ ನದಿ ಬಯಲಿನ ಪ್ರದೇಶಗಳನ್ನು ಹೊರತು ಪಡಿಸಿ, ಭಾರತದ ಬಹುತೇಕ ಪ್ರದೇಶಗಳಲ್ಲಿ ಈ ಯುಗದ ಆಯುಧಗಳು ದೊರೆತಿವೆ.<br>ಕಾಶ್ಮೀರ – ಪಹಲ್‌ಗಮ್ ಕಣಿವೆ (ಶಿಮ್ಲಾ ಕಣಿವೆ)<br>ಉತ್ತರ ಪ್ರದೇಶ – ಬೆಲಾನನ್ ಕಣಿವೆ<br>ಮಧ್ಯಪ್ರದೇಶ – ಬಿಂಬೆಟ್ಕಾ, ಅಧಮ್‌ಘರ್ (ಹೊಸ್ನಾಬಾದ್ ಜಿಲ್ಲೆ)<br>ರಾಜಸ್ಥಾನ – ಸಿಂಗೀತಾಲವ್ (ನಾಘೂರ್ ಜಿಲ್ಲೆ) (ಬಿರಾಚ್ ಕಣಿವೆ)<br>ಮಹಾರಾಷ್ಟ್ರ – ನೆವಾಸ (ಅಹಮದ್‌ನಗರ ಜಿಲ್ಲೆ)<br>ಕರ್ನಾಟಕ – ಹುಣಸಗಿ (ಗುಲ್ಬರ್ಗಾ ಜಿಲ್ಲೆ) (ಮಲಪ್ರಭಾ & ಘಟಪ್ರಭಾ ಕಣಿವೆ)<br>ತಮಿಳುನಾಡು – ಅಥಿರಂಪಕಂ<br>ಛೋಟಾ ನಾಗಪುರ, ಒರಿಸ್ಸಾ, ಪಶ್ಚಿಮ ಬಂಗಾಳ |
| ಮಧ್ಯ ಹಳೆಯ ಶಿಲಾಯುಗ | ವಿವಿಧ ಗಾತ್ರದ ಅಗಲವುಳ್ಳ ನೀಲವಾದ ಚಕ್ಕೆಗಳ ಮಾದರಿ ಆಯುಧಗಳು | ಬಿಂಬೆಟ್ಕಾ (ಮಧ್ಯಪ್ರದೇಶ), ನೆವಾಸ (ಮಹಾರಾಷ್ಟ್ರ), ಪುಷ್ಕರ್, ರೋಹಿರ್ (ಸಿಂಧ್ ಪ್ರಾಂತ್ಯ), ಸಾಮ್ನಾಪುರ (ನರ್ಮದಾ ಕಣಿವೆ) |
| ಅಂತ್ಯ ಹಳೆಯ | ಈಗಿನ ಕಾಲದ ಆಯುಧ | ರಾಜಸ್ತಾನ, ಗಂಗಾ & ಬೆಲಾನ್ ಕಣಿವೆ ಪ್ರದೇಶ, |



downloaded from: www.kpscvaani.com

| | | |
|---|---|---|
| ಶಿಲಾಯುಗ | ತಯಾರಿಕೆಯಲ್ಲಿ ಮಹತ್ತರ ಬದಲಾವಣೆ ಹೊಂದಿದ್ದು ವಿವಿಧ ಗಾತ್ರದ ಆಯುಧಗಳ ಎರಡು ಬದಿಯು ಹರಿತವಾಗಿರುತ್ತಿದ್ದವು. | ಮಧ್ಯ ಹಾಗೂ ಪಶ್ಚಿಮ ಭಾರತ, ಗುಜರಾತ್, ಆಂಧ್ರಪ್ರದೇಶ, ಕರ್ನಾಟಕ |

### ✓ ಮಧ್ಯ ಶಿಲಾಯುಗ :

- ಇದು ಹಳೆಯ ಶಿಲಾಯುಗಕ್ಕೂ, ನೂತನ ಶಿಲಾಯುಗಕ್ಕೂ ನಡುವಿನ ಅವಧಿಯಾಗಿದ್ದು, ಈ ಕಾಲದಲ್ಲಿ ಆದಿಮಾನವನ ನಾಗರಿಕತೆ ಸ್ವಲ್ಪಮಟ್ಟಿಗೆ ವಿಕಸಿತಗೊಂಡಿತು.
- ಈ ಯುಗದಲ್ಲಿ ಮಾನವನು ಸಣ್ಣ ಗಾತ್ರದ ಹಾಗೂ ತೀಕ್ಷ್ಣವಾದ ಕಲ್ಲಿನ ಆಯುಧಗಳನ್ನು ಬಳಸುತ್ತಿದ್ದುದರಿಂದ ಈ ಅವಧಿಯನ್ನು ಮೈಕ್ರೋಲಿಥಿಕ್/ಸೂಕ್ಷ್ಮ ಶಿಲಾಯುಗವೆಂದು ಕರೆಯುತ್ತಾರೆ.
- ಹಳೆಯ ಶಿಲಾಯುಗದ ಮಾನವನಂತೆ ಈ ಕಾಲದಲ್ಲಿ ಬೆಣಚು ಕಲ್ಲಿನಿಂದ ಮಾಡಿದ ಶಿಲಾಯುಧಗಳನ್ನು ಬಳಸದೇ ಕ್ಯಾಲ್ಸೆಡೆನಿ (ಪ್ರಶಸ್ತ ಶಿಲೆ) ಸಿಲಿಕೇಟ್ ಶಿಲೆಗಳನ್ನು ಬಳಕೆ ಮಾಡಲಾಗುತ್ತಿತ್ತು.
- ವಿವಿಧ ಗಾತ್ರದ, ಚಿಕ್ಕದಾದ ಆಕಾರದ ಆಯುಧಗಳನ್ನು ತಯಾರಿಸಿ ಆಯುಧಗಳಿಗೆ ರಂಧ್ರಗಳನ್ನು ಕೊರೆದು ಮರದ ಹಾಗೂ ಮೂಳೆಗಳ ಹಿಡಿಕೆಗಳನ್ನು ಜೋಡಿಸಿ ಉಪಯೋಗಿಸುತ್ತಿದದ್ದು ಕಂಡುಬರುತ್ತದೆ. ಆಯುಧಗಳ ಎರಡು ಬದಿ ಹರಿತವಾಗಿರುತ್ತಿದ್ದವು. (ಕಲ್ಲಿನ ಕೊಡಲಿ).
- ಮಧ್ಯಶಿಲಾಯುಗದ ಮಾನವನಿಗೆ ಬೇಟೆಯಾಡಲು, ಮೀನು ಹಿಡಿಯಲು, ಕಾಡಿನ ಆಹಾರ ಸಂಗ್ರಹಣೆಗಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಹೋಗುವುದು ತಿಳಿದಿದ್ದು, ಈ ಯುಗದ ಅಂತ್ಯದಲ್ಲಿ ಕೃಷಿ & ಪಶುಸಂಗೋಪನೆ ಆರಂಭವಾಯಿತು.
- ಮಧ್ಯ ಶಿಲಾಯುಗದ ಮಾನವನ ನೆಲೆಸುವಿಕೆಯ ಪ್ರಮುಖ ಪ್ರದೇಶಗಳೆಂದರೆ
  - ರಾಜಸ್ಥಾನ – ಬೋಗಾರ್ ಪ್ರದೇಶ
  - ಗುಜರಾತ್ –ಲಂಘನಾಜ್ ಪ್ರದೇಶ
  - ಉತ್ತರ ಪ್ರದೇಶ – ಸರಯ್‌ನ ಹರ್ ರೈ, ಚೋಪಾನಿ ಮಾಡೋಂ ಮಹಮದಾ & ಧಮ್‌ಧಮಾ
  - ಮಧ್ಯಪ್ರದೇಶ –ಬಿಂಬೆಟ್ಕಾ & ಅದಮ್‌ಘರ್
- ಈ ಕಾಲದಲ್ಲಿ ಮಾನವನಿಗೆ ಗುಹಾಂತರ ಚಿತ್ರ ಕಲೆಯ ಬಗ್ಗೆ ತಿಳಿದಿರುವುದು ಕಂಡುಬಂದಿದೆ. ಪ್ರಮುಖವಾಗಿ ಮಾನವನ, ಮಾನವ & ಪ್ರಾಣಿಗಳ ಚಿತ್ರಗಳನ್ನು, ಬೇಟೆಯಾಡುವ ಚಿತ್ರಗಳನ್ನು, ದೊಡ್ಡ



downloaded from: www.kpscvaani.com

ಪ್ರಾಣಿಯನ್ನು ಅನೇಕ ಜನರು ಒಟ್ಟಾಗಿ ಬೇಟೆಯಾಡುವ ದೃಶ್ಯಗಳು ಕಂಡುಬರುತ್ತದೆ. ಈ ಗುಹಾಂತರ ಚಿತ್ರಕಲೆ(Rock Art)ಯು ಪ್ರಮುಖವಾಗಿ ಚಾರ್‌ಗಲ್ (ವಾಯುವ್ಯ ಪಾಕಿಸ್ತಾನ), ಕುಮಾನ್ ಗಿರಿ ಪ್ರದೇಶಗಳಲ್ಲಿ ಮುಹರಾನಪಹಾರ್ (ಉತ್ತರ ಪ್ರದೇಶ), ಬಿಂಬೆಟ್ಕಾ, ಅದಮ್‌ಘರ್, ಲಕ್ಕಾಜೂರ್ (ಮಧ್ಯ ಪ್ರದೇಶ), ಕಪ್ಪಗಲ್ಲು (ಕರ್ನಾಟಕ) ಕಂಡುಬರುತ್ತದೆ.

## ಮಧ್ಯ ಶಿಲಾಯುಗದ ನಿವೇಶನಗಳು

✓ **ನೂತನ ಶಿಲಾಯುಗ :**

| ಪ್ರಮುಖ ನಿವೇಶನಗಳು | ರಾಜ್ಯಗಳು |
|---|---|
| ಅದಮ್‌ಘರ್ | ಮಧ್ಯಪ್ರದೇಶ |
| ತಿಲ್‌ವಾರಾ | ರಾಜಸ್ತಾನ |
| ಹತ್ತ್ಕುಂಭ | ಮಹಾರಾಷ್ಟ್ರ |
| ಪಂಚಮದೀ | ಮಧ್ಯಪ್ರದೇಶ |
| ಸಂಗನಕಲ್ಲು | ಕರ್ನಾಟಕ |
| ಲಂಘನಾಜ್ | ಗುಜರಾತ್ |
| ಬಗೋರ್ | ರಾಜಸ್ತಾನ್ |
| ಧಮ್‌ಧಮಾ | ಉತ್ತರಪ್ರದೇಶ |
| ಬಿಂಬೆಟ್ಕಾ | ಮಧ್ಯಪ್ರದೇಶ |
| ಗೇರಿಗುಂಡಮಂ | ಆಂಧ್ರಪ್ರದೇಶ |

- ಈ ಹಂತದಲ್ಲಿ ಶಿಲಾಯುಗದ ಮಾನವರು ತಮ್ಮ ಪೂರ್ವಿಕರಿಗಿಂತ ಹೆಚ್ಚು ಹೊಳಪಾದ, ಹರಿತವಾದ, ಅತಿ ಸೂಕ್ಷ್ಮವಾದ ಕಲ್ಲಿನ ಆಯುಧಗಳನ್ನು ಬೇಟೆಗಾಗಿ ಬಳಸಲು ಆರಂಭಿಸಿದರು.
- ನಿಯೋಲಿಥಿಕ್ ಎಂಬುದು ಗ್ರೀಕ್ ಪದ. ಇದು ನೂತನ ಶಿಲೆ ಎಂಬ ಅರ್ಥ ನೀಡುತ್ತದೆ. ಈ ಕಾಲದಲ್ಲಿ ಮಾನವನು ಬಳಸುವ ಆಯುಧಗಳನ್ನು ಮಾತ್ರವಲ್ಲದೆ ಇಡೀ ಜೀವನ ಸ್ವರೂಪದಲ್ಲಿಯೇ ವಿಕಾಸ ಹೊಂದಿರುವುದು ಕಂಡುಬರುತ್ತದೆ. ಆದುದರಿಂದ ನೂತನ/ನವ ಶಿಲಾಯುಗ ಎಂದು ಕರೆಯುವರು.
- ಈ ಅವಧಿಯಲ್ಲಿ ಮಾನವನು ಕೃಷಿ, ಪಶುಸಂಗೋಪನೆಯಲ್ಲಿ ಹೆಚ್ಚು ಪ್ರಗತಿ ಸಾಧಿಸಿ ಅವುಗಳನ್ನೇ ತಮ್ಮ ಜೀವನಾಧಾರವನ್ನಾಗಿಸಿಕೊಂಡಿರುವುದು ತಿಳಿದುಬರುತ್ತದೆ. ಆಹಾರಕ್ಕಾಗಿ ಅಲೆಯುವುದರ ಬದಲು ಆಹಾರ ಉತ್ಪಾದಿಸಲು ಭೂಮಿಯನ್ನು ಉಳುವುದು, ಧಾನ್ಯಗಳಾದ ಗೋಧಿ, ಭತ್ತ, ಹುರಳಿ, ರಾಗಿ, ಬಾರ್ಲಿ ಇತ್ಯಾದಿಗಳನ್ನು ಬೆಳೆಯಲಾರಂಭಿಸಿದರು. ಹಸು, ಕುರಿ, ಹೋರಿ, ಮೇಕೆ ಇತ್ಯಾದಿಗಳು ಪ್ರಮುಖ ಸಾಕು



downloaded from: www.kpscvaani.com

ಪ್ರಾಣಿಗಳಿದ್ದವು. ಮೊಟ್ಟ ಮೊದಲಿಗೆ ಕ್ರಿ.ಪೂ. 7000ರಲ್ಲಿ ಭಾರತದಲ್ಲಿ ಭತ್ತವನ್ನು ಬೆಳೆಯಲಾರಂಭಿಸಿದ ಬಗ್ಗೆ ಬೆಲಾನ್ ಕಣಿವೆಯ ಕೋಲ್‌ಡಿವಾದಲ್ಲಿ ಮಾಹಿತಿ ದೊರಕಿದೆ.

- ನೂತನ ಶಿಲಾಯುಗದ ಮಾನವನಿಗೆ ಬೆಂಕಿಯ ಉಪಯೋಗ ತಿಳಿದಿತ್ತು. ಹಾಗೂ ಕುಂಬಾರ ಚಕ್ರದಿಂದ ಮಡಿಕೆಗಳನ್ನು ತಯಾರಿಸುವುದನ್ನು ತಿಳಿದಿದ್ದನು. ಈ ಮಡಿಕೆಗಳು ವಿವಿಧ ಆಕೃತಿಯಲ್ಲಿದ್ದು ಅವುಗಳ ಮೇಲೆ ಹೂ, ಎಲೆ, ಬಳ್ಳಿಗಳ ಚಿತ್ರ ಬಿಡಿಸಿರುವುದನ್ನು ಕಾಣಬಹುದು. ಈ ಕಾಲದ ದೊರೆತಿರುವ ಮಡಿಕೆಗಳು ಕಪ್ಪು, ಕೆಂಪು ಹಾಗೂ ಬೂದು ಬಣ್ಣದ ಮಡಿಕೆಗಳಾಗಿವೆ.
- ದಕ್ಷಿಣ ಭಾರತದಲ್ಲಿನ ನವಶಿಲಾಯುಗದ ಜನರ ಮುಖ್ಯ ಕಸುಬು ಕೃಷಿಯಾಗಿರದೆ ಪಶುಸಂಗೋಪನೆಯಾಗಿತ್ತು. ದಕ್ಷಿಣ ಭಾರತದ ನವಶಿಲಾಯುಗದ ಜನರು ಒಂದೆಡೆ ಸಂಗ್ರಹಿತವಾದ ಪಶುಗಳ ಸಗಣಿಯ ರಾಶಿಗೆ ಬೆಂಕಿ ಇಡುತ್ತಿದ್ದರು. ಆದ್ದರಿಂದ ದಕ್ಷಿಣ ಭಾರತದ ನವ ಶಿಲಾಯುಗದ ನಿವೇಶನಗಳ ಉತ್ಖನನದ ಸಮಯದಲ್ಲಿ ಅಲ್ಲಲ್ಲಿ ಬೂದಿ ದಿಬ್ಬಗಳು ದೊರೆತಿವೆ.

| ನವ ಶಿಲಾಯುಗದ ನಿವೇಶನಗಳು | |
|---|---|
| **ಪ್ರಮುಖ ನಿವೇಶನಗಳು** | **ರಾಜ್ಯಗಳು** |
| ಬುರ್ಜ್‌ಹೊಂ | ಕಾಶ್ಮೀರ |
| ಗುಫ್ರಾಕಲ್ | ಕಾಶ್ಮೀರ |
| ಮೆಹ್ರಾಘರ್ | ಬಲೂಚಿಸ್ತಾನ |
| ಕಲ್ಲಿ ಗುಲ್ ಮಹಮದ್ | ಬಲೂಚಿಸ್ತಾನ |
| ಮಹಾಘರ್ | ಉತ್ತರಪ್ರದೇಶ |
| ಬೆರಾಂದ್ | ಬಿಹಾರ |
| ಬ್ರಹ್ಮಗಿರಿ | ಕರ್ನಾಟಕ |
| ಸಂಗನಕಲ್ಲು | ಕರ್ನಾಟಕ |
| ಕುಪ್ಪಗಲ್ಲು | ಕರ್ನಾಟಕ |
| ಉತ್ತನೂರು | ಕರ್ನಾಟಕ |
| ನಾಗಾರ್ಜುನಕೊಂಡ | ಆಂಧ್ರಪ್ರದೇಶ |
| ಪಿಕ್ಲಿಹಾಳ | ಆಂಧ್ರಪ್ರದೇಶ |
| ಪಯ್ಯಂಪಳ್ಳಿ | ಆಂಧ್ರಪ್ರದೇಶ, ಕರ್ನಾಟಕ |
| ಚೇಚಾರ್ | ತಮಿಳುನಾಡು |
| ತೆಕ್ಕಲುಕೋಟೆ | ಕರ್ನಾಟಕ |
| ನರಸೀಪುರ | ಕರ್ನಾಟಕ |



downloaded from: www.kpscvaani.com

## 2. ಲೋಹಯುಗ :

ಲೋಹಯುಗವನ್ನು ಪ್ರಮುಖ ಎರಡು ವಿಭಾಗಗಳನ್ನಾಗಿ ವಿಂಗಡಿಸಬಹುದು

1. ಚಾಲ್ಕೊಲಿಥಿಕ್ ಯುಗ (ಕ್ರಿ.ಪೂ 1800–1000ವರೆಗೆ)
2. ಕಬ್ಬಿಣದ ಯುಗ (ಕ್ರಿ.ಪೂ 1000 ನಂತರ)

### ✓ ಚಾಲ್ಕೊಲಿಥಿಕ್ ಯುಗ (ನವಶಿಲಾ – ತಾಮ್ರ ಶಿಲಾಯುಗ)

- ಲೋಹ & ಶಿಲೆಗಳನ್ನು ಬಳಸುತ್ತಿದ್ದ ಸಂಸ್ಕೃತಿಯೊಂದು ಭಾರತದಲ್ಲಿ ನೂತನ ಶಿಲಾಯುಗದ ಅಂತ್ಯದ ವೇಳೆಗೆ ಬೆಳಕಿಗೆ ಬಂದಿತು. ಇದನ್ನು ನವಶಿಲಾ–ತಾಮ್ರಶಿಲಾಯುಗ (ಚಾಲ್ಕೊಲಿಥಿಕ್ ಸಂಸ್ಕೃತಿ) ಎಂದು ಕರೆಯಲಾಗಿದೆ. ಚಾಲ್ಕೊಲಿಥಿಕ್ ಎಂದರೆ ತಾಮ್ರ & ಕಲ್ಲು ಎಂದರ್ಥ.
- ಈ ಸಂಸ್ಕೃತಿಯ ಹಂತದಲ್ಲೇ ಮಾನವನು ಕಲ್ಲಿನ ಆಯುಧಗಳ ಜೊತೆಗೆ ತಾಮ್ರದ ಆಯುಧಗಳನ್ನು ಬಳಸುತ್ತಿದ್ದನು. ಆದ್ದರಿಂದ ಈ ಅವಧಿಯನ್ನು 'ತಾಮ್ರ–ಶಿಲಾ ಸಂಸ್ಕೃತಿ' ಯುಗವೆಂದು ಕರೆಯುತ್ತಾರೆ.
- ಚಾಲ್ಕೊಲಿಥಿಕ್ ಯುಗದ ಜನರು ವಿವಿಧ ರೀತಿಯ ಬಣ್ಣದ ಚಿತ್ರಗಳಿಂದ ಕೂಡಿದ ಮಡಿಕೆಗಳನ್ನು ತಯಾರಿಸಿ ಬಳಸುತ್ತಿದ್ದರು. ಅವುಗಳಲ್ಲಿ ಕಪ್ಪು & ಕೆಂಪು ವರ್ಣದ ಮಡಿಕೆಗಳು ಪ್ರಮುಖವಾದವು.
- ಇ ಜನರ ಮುಖ್ಯ ಕಸುಬು ಕೃಷಿ & ಪಶುಸಂಗೋಪನೆ, ಮೀನು ಹಿಡಿಯುವುದು. ಇವರು ಭತ್ತ, ಗೋಧಿ, ಬಾರ್ಲಿ ಹಾಗೂ ದ್ವಿದಳ ಧಾನ್ಯಗಳನ್ನು ಬೆಳೆಯುತ್ತಿದ್ದರು. ಬೆಳೆದ ಧಾನ್ಯಗಳ ಸಂಗ್ರಹಣೆ ಮಾಡುವುದು ಸಹಾ ತಿಳಿದಿತ್ತು. ಬಾರ್ಲಿ & ಗೋಧಿಯನ್ನು ಮಾಳ್ವ ಪ್ರಸ್ಥಭೂಮಿ ಪ್ರದೇಶದಲ್ಲಿ, ಭತ್ತವನ್ನು ಇನಾಂಗಾವ್ & ಆಹಾರ್ ಪ್ರದೇಶಗಳಲ್ಲಿ ಹಸಿರುಕಾಳು ಬಾಜ್ರ ಮುಂತಾದವುಗಳನ್ನು ಬೆಳೆಯುತ್ತಿದ್ದ ಬಗ್ಗೆ ಸಾಕ್ಷ್ಯಾದಾರಗಳು ದೊರೆತಿವೆ.

### ವಿವಿಧ ಶವಸಂಸ್ಕಾರ ಪದ್ದತಿ :

- ಮಹಾರಾಷ್ಟ್ರ –ಶವವನ್ನು ದಕ್ಷಿಣಾಭಿಮುಖವಾಗಿ ಹೂಳುತ್ತಿದ್ದರು.
- ದಕ್ಷಿಣ ಭಾರತ –ಶವವನ್ನು ಪೂರ್ವ–ಪಶ್ಚಿಮಾಭಿಮುಖವಾಗಿ ಹೂಳುತ್ತಿದ್ದರು.
- ಪಶ್ಚಿಮ ಭಾರತ –ಸಂಪೂರ್ಣವಾಗಿ ವಿಸ್ತರಿಸಿ ಹೂಳುತ್ತಿದ್ದರು.
- ಪೂರ್ವಭಾರತ –ಆಂಶಿಕಾವಾಗಿ ಹೂಳುತ್ತಿದ್ದರು.




downloaded from: www.kpscvaani.com

### ✓ ಕಬ್ಬಿಣದ ಯುಗ :

- ಮಾನವನ ಇತಿಹಾಸದಲ್ಲಿ ಕಬ್ಬಿಣದ ಉಪಯೋಗ ಒಂದು ಮಹತ್ವದ ಮೈಲಿಗಲ್ಲು. ಉತ್ತರ ಭಾರತದಲ್ಲಿ ತಾಮ್ರ ಯುಗದ ನಂತರ ಕಬ್ಬಿಣ ಯುಗ ಆರಂಭವಾಯಿತು. ದಕ್ಷಿಣ ಭಾರತದಲ್ಲಿ ನವ ಶಿಲಾಯುಗದ ತರುವಾಯು ಕಬ್ಬಿಣದ ಯುಗ ಆರಂಭವಾಯಿತು.
- ಅಕ್ರೂಂಜಿಖೇರ ಎಂಬ ಸ್ಥಳದಲ್ಲಿ ಕಬ್ಬಿಣ ಯುಗದ ಆರಂಭ ಕಾಲದ ಉಪಕರಣಗಳು ಲಭ್ಯ.
- ಕಬ್ಬಿಣದ ಉಪಕರಣಗಳು ಪ್ರಮುಖವಾಗಿ ದೊರೆತ ನಿವೇಶನಗಳೆಂದರೆ – ತಮಿಳುನಾಡಿನ ತಿನ್ನವೇಲಿ ಜಿಲ್ಲೆಯ ಅದಿಚ್ಚನಲ್ಲೂರು, ಚಂಗಲ್‌ಪೇಟೆ ಜಿಲ್ಲೆ ಪೆಂಬರೂರು ಹಾಗೂ ತಾಳ್ಳೇರಿ ಪ್ರದೇಶಗಳು.

## ➢ ಸಿಂಧೂ ಬಯಲಿನ ನಾಗರಿಕತೆ ಅಥವಾ ಹರಪ್ಪಾ ನಾಗರಿಕತೆ :–

ಭಾರತದ ಇತಿಹಾಸವು ಆರ್ಯರ ಆಗಮನದೊಂದಿಗೆ ಪ್ರಾರಂಭವಾಯಿತು ಎಂದು ಭಾವಿಸಲಾಗಿದೆ. ಆದರೆ ಕ್ರಿ.ಶ 1912ರಲ್ಲಿ ದಯಾರಾಂ ಸಹಾನಿರವರು ಸಿಂಧೂ ಬಯಲಿನ ಹರಪ್ಪ ನೆಲೆಯನ್ನು ಶೋಧಿಸುವ ಮೂಲಕ ಭಾರತದ ಇತಿಹಾಸವು ಮತ್ತೆ 1500 ವರ್ಷಗಳ ಹಿಂದಕ್ಕೆ ಹೋಗುವಂತಾಯಿತು. ಈ ನಾಗರಿಕತೆಯ ಅವಶೇಷಗಳಾದ ಸುಟ್ಟ ಇಟ್ಟಿಗೆಗಳನ್ನು 1856ರಲ್ಲಿ ಲಾಹೋರ್ ರೈಲು ಮಾರ್ಗ ನಿರ್ಮಿಸಲು ಉಪಯೋಗಿಸಲಾಗಿದ್ದು, ಇಂಜಿನಿಯರಿಂಗ್ ಸಂಸ್ಥೆಯ ಬ್ರಿಟಿಷ್ ಗುತ್ತಿಗೆದಾರರಾದ ಜಾನ್ & ವಿಲಿಯಂ ಬ್ರನ್‌ಲೋರವರ ಕಾರ್ಯಾಚರಣೆಯ ವೇಳೆಯಲ್ಲಿ ಗೋಚರಿಸಿದವು.




ಅಲೆಕ್ಸಾಂಡರ್ ಕನ್ನಿಂಗ್ ಹ್ಯಾಮ್‌ನು ಕ್ರಿ.ಶ 1862ರಲ್ಲಿ ಪಶ್ಚಿಮ ಪಂಜಾಬ್‌ನಲ್ಲಿ ಶೋಧನೆ ಕೈಗೊಂಡನು. ಕ್ರಿ.ಶ 1906ರಲ್ಲಿ ಪ್ರಾಕ್ತನ ಇಲಾಖೆ ಸ್ಥಾಪನೆಗೊಂಡ ಬಳಿಕ ಅದರ ಪ್ರಥಮ ಡೈರೆಕ್ಟರ್ ಆದ ಸರ್ ಜಾನ್ ಮಾರ್ಷಲ್‌ನು ಕ್ರಿ.ಶ 1921/22ರಲ್ಲಿ ಬೌದ್ಧ ಸ್ಥೂಪಗಳ ಸಂಶೋಧನೆಗೆ ಯೋಜನೆ ರೂಪಿಸಿದರು. ಕ್ರಿ.ಶ 1921ರಲ್ಲಿ ಆರ್. ಡಿ. ಬ್ಯಾನರ್ಜಿಯವರು ಮೆಹೆಂಜೋದಾರೋ ನೆಲೆಯನ್ನು ಭೂ ಉತ್ಖನನ ಮಾಡಿ ಸಂಶೋಧಿಸಿದರು.




downloaded from: www.kpscvaani.com

ಹರಪ್ಪಾ & ಮೆಹೆಜೋಂದಾರೋಗಳ ಸಂಶೋಧನೆಯಲ್ಲಿ ದೊರೆತ ಅವಶೇಷಗಳ ಆಧಾರದ ಮೇಲೆ 1924ರಲ್ಲಿ ಸರ್ ಜಾನ್ ಮಾರ್ಷಲ್‌ನು ಸಂಶೋಧನಾ ಪ್ರಬಂಧವನ್ನು ಬರೆದು 'ಇಲಸ್ಟ್ರೇಟೆಡ್' ಲಂಡನ್ ನ್ಯೂಸ್ ಎಂಬ ಪತ್ರಿಕೆಗಳನ್ನು ಪ್ರಕಟಿಸುವ ಮೂಲಕ ಸಿಂಧೂ ನಾಗರಿಕತೆಯ ಬಗ್ಗೆ ಆಧುನಿಕ ಜಗತ್ತಿಗೆ ತಿಳಿಯಿತು.

## ಹರಪ್ಪಾ ನಾಗರಿಕತೆಯ ವ್ಯಾಪ್ತಿ :

ಹರಪ್ಪಾ ನಾಗರಿಕತೆಯು 12,50,000 ಚ.ಕಿ.ಮೀ ವ್ಯಾಪ್ತಿಯ ಪ್ರದೇಶದಲ್ಲಿ ಹರಡಿದ್ದು, ಇವರೆಗೆ 1400ಕ್ಕೂ ಹೆಚ್ಚು ನಿವೇಶನಗಳು ಅಸ್ತಿತ್ವದಲ್ಲಿರುವುದು ಕಂಡುಬಂದಿದೆ.

- ಪಶ್ಚಿಮ – ದಕ್ಷಿಣ ಬಲೂಚಿಸ್ತಾನದ ಸುಕ್ತಜಂಡರ್
- ಪೂರ್ವ – ಅಲಂಗೀಪುರ್ (ಉತ್ತರ ಪ್ರದೇಶದ ಮೀರತ್)
- ಉತ್ತರ – ಮಾಂಡ (ಕಾಶ್ಮೀರದ ಅಕನೂರ್ ಜಿಲ್ಲೆ)
- ದಕ್ಷಿಣ – ದೈಮಾಬಾದ್ (ಮಹಾರಾಷ್ಟ್ರದ ಅಹಮದ್‌ನಗರ ಜಿಲ್ಲೆ)
- ಪೂರ್ವ–ಪಶ್ಚಿಮ – 1600 ಕಿ.ಮೀ
- ಉತ್ತರ–ದಕ್ಷಿಣ – 1400 ಕಿ.ಮೀ

## ವಿವಿಧ ಪ್ರದೇಶದಲ್ಲಿ ಕಂಡುಬರುವ ಸಿಂಧೂನಾಗರಿಕತೆಯ ಸ್ಥಳಗಳು :

- ಸಿಂಧ್ – ಮೆಹೆಂಜೋದಾರೋ, ಅಮ್ರಿ, ಕೋಟ್‌ದಿಜಿ, ರಹಮನ್‌ದೇರೆ, ಚುಹನೋದಾರೋ, ಅಲ್ಲಾಹದಿನೋ
- ಬಲೂಚಿಸ್ತಾನ – ಮನ್‌ದೀಘಕ್, ಸೊರುಟಗೈ
- ಗುಜರಾತ್ –ಧೋಲವೀರ, ಲೋಥಾಲ್, ಸುರ್ಕೊಟಡಾ, ಭಗವ್ರತ, ರಂಗಪೂರ್, ರೋಡ್‌ದಿಜಿ, ದಾಬರ್‌ಕೋಟ್, ದೇಸಲ್‌ಪುರ್
- ಪಶ್ಚಿಮ ಬಂಗಾಳ – ಹರಪ್ಪಾ, ಜಲ್ಲೈಪುರ, ಘನೇರಿವಾಲ, ರಹಮನ್‌ದೇರಿ.
- ಉತ್ತರಪ್ರದೇಶ –ಅಲಂಗೀಪುರ್
- ಹರಿಯಾಣ –ಬನವಾಲಿ, ರಾಖೀಘರ್, ಭಗವಾನ್‌ಪುರ್
- ಪಂಜಾಬ್ – ರೋಪಾರ್
- ಜಮ್ಮು & ಕಾಶ್ಮೀರ – ಮಾಂಡ



downloaded from: www.kpscvaani.com

- ಮಹಾರಾಷ್ಟ್ರ – ದೈಮಾಬಾದ್

## ಪ್ರಮುಖ ಉತ್ಖನನಗಳು :

| ವರ್ಷ | ಸ್ಥಳ | ಉತ್ಖನಕಾರರು | ಪ್ರಸ್ತುತ ಇರುವ ಪ್ರದೇಶ |
|---|---|---|---|
| 1921 | ಹರಪ್ಪಾ | ದಯಾರಾಂ ಸಾಹ್ನೀ | ಪಾಕಿಸ್ತಾನದ ರಾವಿ ನದಿಯ ಬಳಿಯಿದೆ |
| 1922 | ಮೆಹೆಂಜೋದಾರೋ | ಆರ್.ಡಿ. ಬ್ಯಾನರ್ಜಿ | ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿದೆ |
| 1928 | ಸೂಕ್ತಜೆಂಡಾರೋ | ಆರ್.ಎಲ್. ಸ್ಟೈನ್ | ಬಲೂಚಿಸ್ತಾನದ ದಸ್ತ್‌ನದಿ ದಂಡೆ ಮೇಲಿದೆ. |
| 1931 | ಚಾನ್ಹುದಾರೋ | ಎನ್.ಜಿ. ಮಂಜುದಾರ್ | ಪಾಕ್‌ನ ಸಿಂಧ್ ಪ್ರಾಂತ್ಯದಲ್ಲಿದೆ |
| 1935 | ಅಮ್ರಿ | ಎನ್.ಜಿ. ಮಂಜುದಾರ್ | ಪಾಕ್‌ನ ಸಿಂಧ್ ಪ್ರಾಂತ್ಯದಲ್ಲಿದೆ |
| 1953 | ರಂಗಪೂರ್ | ಎಂ.ಎಸ್. ವ್ಯಾಟ್ಸ್ | ಅಹಮದಾಬಾದ್ ಗುಜರಾತ್‌ನಲ್ಲಿದೆ |
| 1953 | ಕಾಲಿಬಂಗನ್ | ಎ.ಎನ್.ಘೋಷ್ & ಬಿ.ಬಿ. ವತ್ಸ | ರಾಜಸ್ತಾನದ ಘಗ್ಗಾರ್ ನದಿ ದಂಡೆ ಮೇಲಿದೆ. |
| 1955–56 | ರೂಪಾರ್ | ವೈ.ಡಿ. ಶರ್ಮಾ | ಪಂಜಾಬ್‌ನ ಸಟ್ಲೇಜ್ ನದಿ ದಂಡೆ ಮೇಲಿದೆ. |
| 1957 | ಲೋಥಾಲ್ | ಎಸ್.ಆರ್. ರಾವ್ | ಗುಜರಾತಿನ ಭೋಗವ ನದಿ ಬಳಿಯಿದೆ. |
| 1955 | ಕೊಟ್‌ದಿಜ | ಫಜಲ್ ಅಹಮದ್‌ಖಾನ್ | ಸಿಂಧ್ (ಪಾಕಿಸ್ತಾನ) |
| 1990–91 | ಧೋಲವೀರ | ಆರ್.ಎಸ್. ಬಸ್ತ್ & ಜೆ.ಪಿ. ಜೋಷಿ | ಗುಜರಾತ್ |
| 1970–72 | ಸುರ್ಕೊಟಡಾ | ಜೆ.ಪಿ. ಜೋಷಿ | ಗುಜರಾತ್‌ನ ಕಛ್ ಬಳಿಯಿದೆ. |
| 1973–74 | ಬನವಾಲಿ | ಆರ್.ಎಸ್. ಬಿಸ್ತ್ | ಹರಿಯಾಣದ ಹಿಸ್ಸಾರ್ ಜಿಲ್ಲೆಯಲ್ಲಿದೆ. |
| 1958–59 | ಅಲಂಗೀಪುರ್ | ವೈ.ಡಿ. ಶರ್ಮಾ | ಉತ್ತರಪ್ರದೇಶದ ಮೀರತ್‌ನಲ್ಲಿದೆ. |
| 1974 | ಮುಂಡಿಘಕ್, ರೋಜ್ ಡಿ | ಜೆ.ಎಂ. ಕ್ಯಾಸಲ್, ಪಾಂಡ್ಯ & ಧಾಕಿ | ಸೌರಾಷ್ಟ್ರದಲ್ಲಿನ ರಾಜ್‌ಕೊಟ್ ಬಳಿಯ ಬಾಥರ್ ನದಿಯ ದಂಡೆಯ ಮೇಲಿದೆ |



downloaded from: www.kpscvaani.com

## ಧಾರ್ಮಿಕ ಪದ್ಧತಿ :

ಸಿಂಧೂ ಬಯಲಿನಲ್ಲಿ ದೊರೆತಿರುವ ಮುದ್ರೆಗಳ ಮೇಲಿನ ಚಿತ್ರಗಳು, ಕಲ್ಲಿನ ವಿಗ್ರಹಗಳು, ಯಜ್ಞಕುಂಡಗಳು ಇತ್ಯಾದಿಗಳಿಂದ ಅವರ ಧಾರ್ಮಿಕ ನಂಬಿಕೆ & ಆಚಾರ ವಿಚಾರಗಳನ್ನು ತಿಳಿಯಲು ಸಹಕಾರಿಯಾಗಿದೆ. ಸಿಂಧೂ ಜನರು ಬಹು ದೇವತಾರಾಧಕರಾಗಿದ್ದರು. ಪ್ರಸ್ತುತ ಹಿಂದೂ ಧರ್ಮದ ಅನೇಕ ಲಕ್ಷಣಗಳನ್ನು ಸಿಂಧೂ ನಾಗರಿಕತೆಯ ಜನರ ಧರ್ಮ ಒಳಗೊಂಡಿತ್ತು.

## ಪ್ರಮುಖ ಸ್ತ್ರೀ ದೇವತೆ :

- ಉತ್ಖನನದ ಸಂದರ್ಭದಲ್ಲಿ ಅತ್ಯಧಿಕ ಸಂಖ್ಯೆಯ ಸ್ತ್ರೀ ಮೂರ್ತಿಗಳು ದೊರಕಿವೆ. ಆದ್ದರಿಂದ ಮಾತೃ ದೇವತೆಗಳ ಆರಾಧನೆ ಅಲ್ಲಿನ ಬಹು ಸಂಖ್ಯಾತರ ಧಾರ್ಮಿಕ ನಂಬುಗೆಯಾಗಿತ್ತೆಂದು ತಿಳಿದು ಬರುತ್ತದೆ. ಭೂಮಿಯನ್ನು ಜನನಿ, ಮಾತೃ ಎಂದು ಪೂಜಿಸುತ್ತಿದ್ದರು. ಹರಪ್ಪಾದಲ್ಲಿ ದೊರೆತ ಒಂದು ಮುದ್ರೆಯಲ್ಲಿ ಸ್ತ್ರೀಯ ಚಿತ್ತವಿದ್ದು, ಸ್ತ್ರೀಯ ಗರ್ಭದಿಂದ ಒಂದು ಸಸ್ಯ ಹೊರಬಂದಿದೆ. ಮುದ್ರೆಯ ಗುರುತಿನ ಹಿಂಭಾಗದಲ್ಲಿ ಚಾಕುವನ್ನು ಹಿಡಿದ ಮನುಷ್ಯನ ಚಿತ್ರವಿದೆ.

## ಪ್ರಮುಖ ಪುರುಷ ದೇವತೆ :

- ಮೆಹೆಂಜೋದಾರೋವಿನ ಮುದ್ರೆಗಳ ಮೇಲೆ ಪುರುಷ ದೇವತೆಯ ಚಿತ್ರಗಳಿದ್ದು ಇದನ್ನು ಪಶುಪತಿ ಮಹಾದೇವ (ಶಿವ) ಎಂದು ಗುರುತಿಸಲಾಗಿದೆ. ಈ ಪುರುಷ ದೇವತೆಯೂ ಮೂರು ಮುಖ ಹೊಂದಿದ್ದು, ಕಾಲುಮಣೆಯ ಮೇಲೆ ಯೋಗಿ ಮುದ್ರೆಯಲ್ಲಿ ಕುಳಿತಿರುವಂತೆ ಚಿತ್ರಿಸಲಾಗಿದೆ. ಈ ದೇವತೆಯು ತ್ರಿಶೂಲಾಕಾರದ ಕೊಂಬುಳ್ಳ ತೊಡುಗೆಗಳನ್ನು ಧರಿಸಿದ್ದು ಸಿಂಹಾಸನದ ಬಲಭಾಗಕ್ಕೆ ಆನೆ & ಹುಲಿ, ಎಡಭಾಗಕ್ಕೆ ಖಡ್ಗಮೃಗ & ಎಮ್ಮೆ ಹಾಗೂ ಪೀಠಗಳ ಕೆಳಗೆ ಎರಡು ಜಿಂಕೆಗಳಿಂದ ಸುತ್ತುವರೆಯಲ್ಪಟ್ಟಿದೆ.
- ಶಿವನನ್ನು ಲಿಂಗದ ರೂಪದಲ್ಲಿ ಆರಾಧಿಸಲಾಗುತ್ತಿತ್ತು, ಕಾಲಿಬಂಗನ್‌ನಲ್ಲಿ ದೊರೆತಿರುವ ಟೆರಾಕೋಟಾ ಮಾದರಿ ಶಿವನ ಲಿಂಗಗಳು ಇದಕ್ಕೆ ನಿದರ್ಶನವಾಗಿದೆ.
- ಸಿಂಧೂ ಜನರು ಪ್ರಾಣಿ ಹಾಗೂ ವೃಕ್ಷಾರಾಧಾಕರಾಗಿದ್ದರು. ಅರಳಿ ಮರ, ಬೇವಿನ ಮರಗಳನ್ನು ಪೂಜಿಸುತ್ತಿದ್ದರು. ಸರ್ಪ ಪೂಜೆಯನ್ನು ಮಾಡುತ್ತಿದ್ದರೆಂದು ನಂಬಲಾಗಿದೆ. ಡುಬ್ಬದ ಗೂಳಿಯ ಆರಾಧನೆ ಪ್ರಚಲಿತದಲ್ಲಿತ್ತು. ಈ ವೃಕ್ಷಾರಾಧನೆಗೆ ಅತ್ಯುತ್ತಮ ನಿದರ್ಶನವೆಂದರೆ ಮೆಹೆಂಜೋದಾರೋದಲ್ಲಿ ದೊರೆತ ಮುದ್ರೆಯಲ್ಲಿ ಅರಳಿ ಮರದ ಎರಡು ರೆಂಬೆಗಳ ಮಧ್ಯೆ ದೇವತೆಯ ಕೊಂಬುಳ್ಳ ಚಿತ್ರವಿದ್ದು ಅದರ ಬಲಕ್ಕೆ ಮಂಡಿಯೂರಿ ಕುಳಿತು ಬೇಡುತ್ತಿರುವ ವ್ಯಕ್ತಿಯ ಚಿತ್ರವಿದೆ.



GNANADHARE IAS ACADEMY
downloaded from: www.kpscvaani.com

- ಸಿಂಧೂ ಜನರು ದೆವ್ವ, ಭೂತಗಳ ಮೇಲೆ ನಂಬಿಕೆಯಿಟ್ಟಿದ್ದರು. ದುಷ್ಟ ಶಕ್ತಿಗಳ ನಿಗ್ರಹಕ್ಕಾಗಿ ಯಂತ್ರಗಳನ್ನು ಬಳಸುತ್ತಿದ್ದರು. ಸ್ವಸ್ತಿಕ್ ಗುರುತು ಶುಭವೆಂದು ಪರಿಗಣಿಸಿದ್ದರು. ವಿಗ್ರಹಾರಾದನೆ ಪ್ರಚಲಿತದಲ್ಲಿದ್ದರೂ ದೇವಸ್ಥಾನಗಳ ನಿರ್ಮಾಣ ಕಂಡುಬರುವುದಿಲ್ಲ.
- ಸಿಂಧೂ ನಾಗರಿಕತೆಯ ನೆಲೆಗಳಲ್ಲಿ ವ್ಯಾಪಕವಾಗಿ ಯಜ್ಞ ಕುಂಡಗಳು ದೊರೆತಿವೆ. ಇದರಿಂದ ಅಗ್ನಿ ಪೂಜೆಯು ದೇವರಾತಾಧನೆಯಲ್ಲಿ ಪ್ರಮುಖ ಪಾತ್ರ ವಹಿಸಿತ್ತೆಂದು ತಿಳಿಯಬಹುದಾಗಿದೆ. ಕಾಲಿಬಂಗನ್, ಲೋಥಾಲ್ & ಬನವಾಲಿ ಪ್ರದೇಶಗಳ ಶೋಧನೆಯಲ್ಲಿ ಇಟ್ಟಿಗೆಯಿಂದ ಕಟ್ಟಿದ ಆಯತಾಕಾರದ ಯಜ್ಞಕುಂಡಗಳು ದೊರೆತಿವೆ.
- ಹರಪ್ಪಾ ಸಂಸ್ಕೃತಿಯಲ್ಲಿ ಯೋಗ ಪದ್ದತಿಯು ಪ್ರಚಲಿತದಲ್ಲಿತ್ತೆಂದು ಅಲ್ಲಿ ದೊರೆತ ಟೆರಾಕೊಟಾ ಮುದ್ರೆಗಳ ಮೇಲಿನ ಯೋಗಾಸನದ ವಿವಿಧ ಭಂಗಿಗಳ ಚಿತ್ರಗಳಿಂದ ತಿಳಿದು ಬಂದಿದೆ.

## ಶವಸಂಸ್ಕಾರ ಪದ್ದತಿ :

ಸಿಂಧೂ ಸಂಸ್ಕೃತಿಯ ಶವಸಂಸ್ಕಾರ ಬಗ್ಗೆ ಉತ್ಖನನದ ನೆಲೆಗಳಲ್ಲಿ ದೊರೆತಿರುವ ಅಸ್ಥಿಪಂಜರ, ತಲೆ ಬುರುಡೆಗಳು ತಿಳಿಸುತ್ತವೆ. ಮಾರ್ಟಿಮರ್ ವಿಲ್ಲರ್‌ರವರು ಇವರ ಶವ ಸಂಸ್ಕಾರ ಪದ್ದತಿಯೆಂದರೆ ಹೂಳುವುದು ಎಂದು ಅಭಿಪ್ರಾಯಿಸುತ್ತಾರೆ. ಸಿಂಧೂ ಜನರು ಮೂರು ರೀತಿಯ ಶವಸಂಸ್ಕಾರ ಪದ್ದತಿಯನ್ನು ಅನುಸರಿಸುತ್ತಿದ್ದರು. ಅವುಗಳೆಂದರೆ

1. **ಹೂಳುವ ಪದ್ದತಿ** : ಮೃತ ದೇಹವನ್ನು ಉತ್ತರ–ದಕ್ಷಿಣವಾಗಿ ಉತ್ತರಕ್ಕೆ ತಲೆಯಿಡುವಂತೆ ಸಮಾಧಿಯಲ್ಲಿ ವಿವಿಧ ವಸ್ತುಗಳನ್ನು ಇಟ್ಟು (ಆಹಾರ ಧಾನ್ಯ, ಆಭರಣಗಳು) ಶವವನ್ನು ಭೂಮಿಯಲ್ಲಿ ಹೂಳುತ್ತಿದ್ದರು.
2. **ಅರೆ ಹೂಳುವ ಪದ್ದತಿ** : ಶವವನ್ನು ನಿರ್ಜನ ಪ್ರದೇಶದಲ್ಲಿ ಇಟ್ಟು ಪ್ರಾಣಿ, ಪಕ್ಷಿ ತಿಂದ ಬಳಿಕ ಅಸ್ಥಿ & ತಲೆಬುರುಡೆಯನ್ನು ಸಂಗ್ರಹಿಸಿ ಕುಂಭದಲ್ಲಿ ಆಹಾರ ಧಾನ್ಯ, ಮಣಿ, ದಂತದ ವಸ್ತುಗಳೊಂದಿಗೆ ಹೂಳುತ್ತಿದ್ದರು.
3. **ಸುಡುವ ಪದ್ದತಿ** : ಶವಗಳನ್ನು ಸುಟ್ಟು ಉಳಿದ ಅಸ್ಥಿಗಳನ್ನು ಕುಂಭಗಳಲ್ಲೇ ಶೇಖರಿಸಿಟ್ಟು ಹೂಳುತ್ತಿದ್ದರು.

- **ಮೊಹೆಂಜೋದಾರೋ** : ಮೇಲಿನ ಮೂರೂ ರೀತಿಯ ಶವಸಂಸ್ಕಾರ ಪದ್ದತಿಗಳು ಕಂಡುಬಂದಿದೆ.
- **ಕಾಲಿಬಂಗನ್** : ಆಯತಾಕಾರ ಹಾಗೂ ವೃತ್ತಾಕಾರದ ಶವದ ಪೆಟ್ಟಿಗೆಯಲ್ಲಿಟ್ಟು ಸಮಾಧಿ ಮಾಡುವ ಪದ್ದತಿ ಕಂಡುಬರುತ್ತದೆ.
- **ಲೋಥಾಲ್** : ಎರಡು ಬಾರಿ ಶವಸಂಸ್ಕಾರ ಮಾಡಿರುವ ಬಗ್ಗೆ ಅವಶೇಷಗಳು ದೊರೆತಿವೆ.
- **ಹರಪ್ಪಾ** : ಪೂರ್ವ–ಪಶ್ಚಿಮಾಭಿಮುಖವಾಗಿ ಶವಗಳನ್ನು ಇಟ್ಟು ಹೂಳುವ ಪದ್ದತಿ.



downloaded from: www.kpscvaani.com

## ಸಿಂಧೂ ನಾಗರಿಕತೆಯ ಕಲೆ :

- ಸಿಂಧೂ ನಾಗರಿಕತೆಯು ಉತ್ಖನನದ ವೇಳೆ ಸುಮಾರು 2000ಕ್ಕೂ ಹೆಚ್ಚು ಮುದ್ರೆಗಳು ಹಾಗೂ ಟೆರಾಕೊಟಾದ ವಸ್ತುಗಳು ಕಲ್ಲು & ಲೋಹದಿಂದ ತಯಾರಿಸಿದ ವಸ್ತುಗಳು ದೊರೆತಿವೆ.
- ಟೆರ್ರಾಕೋಟಾಗಳಿಂದ ನಿರ್ಮಿಸಿದ ಮುದ್ರೆಗಳ ಮೇಲೆ ಪ್ರಾಣಿ, ಪಕ್ಷಿಗಳ ಹಾಗೂ ಮಾನವನ ಚಿತ್ರಗಳನ್ನು ಬಿಡಿಸಲಾಗಿದೆ. ಇವುಗಳಲ್ಲಿ ನಾಯಿ, ಆನೆ, ಹುಲಿ, ಮೇಕೆ, ಆಕಳು, ಕೋತಿ ಕಂಡುಬಂದಿದೆ. ಬಹುತೇಕ ಮುದ್ರೆಗಳ ಮೇಲೆ ಡುಬ್ಬದ ಗೂಳಿಯ ಚಿತ್ರಗಳಿವೆ. ಮುದ್ರೆಗಳ & ಮಡಿಕೆಗಳ ಮೇಲಿನ ಚಿತ್ರವು ಸಿಂಧೂ ಜನರ ಕಲಾವಂತಿಕೆಗೆ ಉತ್ತಮ ಸಾಕ್ಷಿಯಾಗಿದೆ.
- ಮೆಹೆಂಜೋದಾರೋವಿನಲ್ಲಿ ಯೋಗಿಯ ಮೂರ್ತಿಯು ದೊರೆತಿದ್ದು, ಹರಪ್ಪದಲ್ಲಿ ಕೂಡ  ಎರಡು ಚಿಕ್ಕ ಚಿಕ್ಕ ಯೋಗಿಯ ಮೂರ್ತಿಗಳು ಸಹಾ ದೊರೆತಿವೆ. ಈ ಮೂರ್ತಿಯ ಮೂಲಕ ಅಲ್ಲಿನ ಜನಾಂಗೀಯ ಲಕ್ಷಣಗಳನ್ನು ತಿಳಿಯಬಹುದಾಗಿದೆ.



- ಸಿಂಧೂ ಜನರು ಅಪರೂಪವಾಗಿ ಕಂಚನ್ನು ಬಳಸುತ್ತಿದ್ದು ಈ ಲೋಹದಿಂದ ಮನುಷ್ಯನ ಹಾಗೂ ಪ್ರಾಣಿಗಳ ಮೂಳೆಯಲ್ಲಿ ಮೂರ್ತಿಯನ್ನು ತಯಾರಿಸುತ್ತಿದ್ದರು. ಮೆಹೆಂಜೋದಾರೋವಿನಲ್ಲಿ 11.5 ಸೆ.ಮೀ ಎತ್ತರದ ಕಂಚಿನ ನೃತ್ಯದ ಭಂಗಿಯ ಸ್ತ್ರೀಯ ಪ್ರತಿಮೆ ದೊರೆತಿದೆ. ಈ ಪ್ರತಿಮೆಯು ಅತ್ಯಂತ ಭಾವಪೂರ್ಣವಾಗಿದ್ದು ಅಗಲವಾದ ಕಣ್ಣುಗಳು, ಚಪ್ಪಟೆ ಮೂಗು, ದಟ್ಟವಾದ ಕೂದಲು ಹೊಂದಿರುವ ಜುಟ್ಟು ಕಟ್ಟಿರುವುದು. ಓರೆಯಾಗಿರುವ ತಲೆ, ಎಡಗಾಲು & ಬಲಗೈಗಳ ಸ್ಥಿತಿಯನ್ನು ನೋಡಿದಾಗ ನರ್ತನದ ಭಂಗಿಯೆಂದು ತಿಳಿಯಬಹುದು. ಎಡತೋಳು ಬಳೆಯಿಂದ ಮುಚ್ಚಿರುವುದು, ಎಡಗಾಲು ಪಾದದ ಭಾಗ ಮುರಿದು ಹೋಗಿರುವುದು. ಈ ಕಂಚಿನ ಪ್ರತಿಮೆಯನ್ನು ಸಿಂಧೂ ಜನರ ಲೋಹ ಜ್ಞಾನ, ಕೇಶವಿನ್ಯಾಸಕ್ಕೆ ಉತ್ತಮ ನಿದರ್ಶನ. ಮುಖಚರ್ಯೆಯಿಂದ ಮೂಲ ನಿವಾಸಿಗಳ ಬಗ್ಗೆ ತಿಳಿಯಲು ಸಹಕಾರಿಯಾಗುತ್ತದೆ.
- ಸಾಮಾನ್ಯವಾಗಿ ಚೌಕಾಕಾರದ ಮುದ್ರೆಗಳು ಲಿಪಿ & ಆಕೃತಿಗಳೆರಡನ್ನೂ ಹೊಂದಿದ್ದರೆ, ಆಯಾತಾಕಾರದ ಮುದ್ರೆಗಳು ಕೇವಲ ಲಿಪಿಯನ್ನು ಮಾತ್ರ ಒಳಗೊಂಡಿರುತ್ತದೆ. ಗಡ್ಡದಾರಿಯ ತಲೆ ಮನುಷ್ಯನ ಪ್ರತಿಮೆಯು ಮೆಹೆಂಜೊದಾರೋವಿನಲ್ಲಿ ದೊರೆತಿದೆ.



downloaded from: www.kpscvaani.com

## ಸಿಂಧೂ ನಾಗರೀಕತೆಯ ಪ್ರಮುಖ ನಿವೇಶನಗಳ ವೈಶಿಷ್ಯತೆಗಳು :

### 1. ಹರಪ್ಪಾ (ಪಂಜಾಬ್, ಪಾಕಿಸ್ತಾನ) :

- ಇದು ಮೊದಲ ಉತ್ಖನನವಾದ ಸಿಂಧೂ ನಾಗರಿಕತೆಯ ನಗರವಾಗಿದ್ದರಿಂದ ಹರಪ್ಪಾ ನಾಗರಿಕತೆ ಎಂದು ಹೆಸರು ಬಂದಿದೆ.
- ಇದು ರಾವಿ ನದಿಯ ಮೇಲಿರುವ ಪಂಜಾಬ್‌ನ (ಪಾಕಿಸ್ತಾನ) ಮಾಂಟೆಗೊಮರಿ ಜಿಲ್ಲೆಯಲ್ಲಿದೆ.
- 1921ರಲ್ಲಿ ದಯಾರಾಂ ಸಾಹ್ನಿರವರು ಮೊದಲು ಸಂಶೋಧಿಸಿದರು. ನಂತರ 1923–24ರಲ್ಲಿ ಎಂ.ಎಸ್ ವತ್ಸ, ಕೆ.ಎನ್. ದೀಕ್ಷಿತ್, 1940ರಲ್ಲಿ ವ್ಯಾಟ್ಸ್ & 1962ರಲ್ಲಿ ವೀಲ್ಹರ್ ಮುಂತಾದವರು ಸಂಶೋಧನೆಯನ್ನು ಮುಂದುವರಿಸಿದರು.
- ಋಗ್ವೇದದಲ್ಲಿ ಈ ನಗರವನ್ನು 'ಹರಿಪ್ರಿಯಾ' ಎಂದು ಕರೆಯಲಾಗಿದೆ.
- ಉತ್ತಮವಾದ ನಗರ ಯೋಜನೆಯನ್ನು ಇಲ್ಲಿ ಕಾಣಬಹುದಾಗಿದೆ & ಇಲ್ಲಿನ ಕಟ್ಟಡಗಳು ಸುಟ್ಟ ಇಟ್ಟಿಗೆಗಳಿಂದ ನಿರ್ಮಿತವಾಗಿದೆ. ಕೋಟೆಯ ಕೆಳ ಪ್ರದೇಶದಲ್ಲಿ ಸಾಲು ಕೋಣೆಯ ಕೊಠಡಿಯ ನಿರ್ಮಾಣ ಕಂಡುಬಂದಿದೆ. ಇವುಗಳು ಕಾರ್ಮಿಕರ ಮನೆಗಳಿರಬಹುದೆಂದು ಊಹಿಸಲಾಗಿದೆ.
- ಹರಪ್ಪಾದಲ್ಲಿ ಕೆಂಪು ಮರಳು ಕಲ್ಲಿನ ಪುರುಷ ನಗ್ನ ರೂಪದ ಶಿರಭಾಗದ ಪ್ರತಿಮೆ ದೊರೆತಿದೆ. ಹರಪ್ಪಾ ನಗರವನ್ನು ಕೆಲವು ವಿದ್ವಾಂಸರು 'ಗೇಟ್ ವೇ ಸಿಟಿ' ಎಂದು ಕರೆದಿದ್ದಾರೆ.
- ಹರಪ್ಪಾದಲ್ಲಿ ಕಲ್ಲಿನ ಶಿವಲಿಂಗ, ಕಲ್ಲಿನ ನೃತ್ಯ ಭಂಗಿಯ ನಗ್ನ ಸ್ತ್ರೀಯ ಪ್ರತಿಮೆ, ನಾಯಿ ಜಿಂಕೆಯನ್ನು ಅಟ್ಟಿಸಿಕೊಂಡು ಹೋಗುತ್ತಿರುವ ದೃಶ್ಯ ಕಂಚಿನದ್ದು, ತಾಮ್ರದ ಅಳತೆ ಪಟ್ಟಿ & ಕನ್ನಡಿ, ಮರದ ಉಪಕರಣದಲ್ಲಿ ಗೋಧಿ & ಬಾರ್ಲಿಯ ಕುರುಹು ದೊರೆತಿದೆ.
- ಹರಪ್ಪಾದಲ್ಲಿ ಎರಡು ರೀತಿಯ ಶವಸಂಸ್ಕಾರ ಪದ್ದರಿ ಜಾರಿಯಲ್ಲಿತ್ತು.
  - ಆರ್ 37 ಮಾದರಿ ಸಮಾಧಿ
  - ಹೆಚ್ ಮಾದರಿ ಸಮಾಧಿ
- ಹರಪ್ಪಾದಲ್ಲಿ ಬೃಹತ್ ಅಳತೆಯ (169 ಅಡಿ 35 ಅಡಿ ಎತ್ತರವಾದ) ಧಾನ್ಯಗಳನ್ನು ಸಂಗ್ರಹಿಸುವ ಬೃಹತ್ ಕಣಜವಿರುವುದು ಕಂಡುಬಂದಿದೆ. ಒಂದೊಂದು ಸಾಲಿನಲ್ಲಿ 6ರಂತೆ ಎರಡು ಸಾಲುಗಳಲ್ಲಿ ಒಟ್ಟು 12 ಉಗ್ರಾಣಗಳಿದ್ದು ಮಧ್ಯೆ ಅಂತರವಿದೆ. ಇವುಗಳನ್ನು ಸುಟ್ಟ ಇಟ್ಟಿಗೆ ಹಾಗೂ ಮಣ್ಣಿನ ಗಾರೆಯನ್ನು ಬಳಸಿ ಕಟ್ಟಲಾಗಿದ್ದು ಎತ್ತರದ ವೇದಿಕೆಯ ಮೇಲಿದೆ. ಉಗ್ರಾಣಗಳ ಜಾಗದಲ್ಲಿ ಗೋಧಿ & ಬಾರ್ಲಿ ಧಾನ್ಯಗಳು ದೊರೆತಿವೆ.



downloaded from: www.kpscvaani.com

## 2. ಮೆಹೆಂಜೊದಾರೂ (ಸಿಂಧ್) :

- ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ಲರ್ಕಾನಾ ಜಿಲ್ಲೆಯಲ್ಲಿದೆ.
- ಸಿಂಧೂ ನಾಗರಿಕತೆಯಲ್ಲೇ ಅತ್ಯಂತ ವಿಸ್ತಾರವಾದ, ದೊಡ್ಡದಾದ ನಿವೇಶನವಾಗಿದ್ದು ಇದನ್ನು 1922ರಲ್ಲಿ ರಖಿನ್ ದಾಸ್ ಬ್ಯಾನರ್ಜಿ ಶೋಧಿಸಿದರು.
- ಇದರ ಹೆಚ್ಚಿನ ಸಂಶೋಧನೆಗಾಗಿ 1927–31ರವರೆಗೆ ಜಾನ್ ಮಾರ್ಷಲ್, ಇ.ಜೆ.ಹೆಚ್. ಮ್ಯಾಕ್, 1950ರಲ್ಲಿ ಮಾರ್ಟಿಮ್ ವೀಲ್ಹರ್, 1964–66ರವರೆಗೆ ಜಾರ್ಜ್ ಎಫ್ ಡೇಲ್ಸ್‌ರವರು ಉತ್ಖನನ ಕೈಗೊಂಡರು.
- ಸಿಂಧಿ ಭಾಷೆಯಲ್ಲಿ ಮೆಹೆಂಜೋದಾರೋ ಎಂದರೆ 'ಮಡಿದವನ ದಿಬ್ಬ' ಎಂದರ್ಥ.
- ಇಲ್ಲಿ ಅನುಸರಿಸುವ ನಗರ ಯೋಜನೆಯನ್ನು 'ಗ್ರೀಡ್ ಮಾದರಿ' ಎಂದು ಕರೆಯುವರು.
- ಮೆಹೆಂಜೊದರೋವಿನಲ್ಲಿ ಸಿಂಧೂ ಜನರಿಂದ ನಿರ್ಮಿಸಲ್ಪಟ್ಟ ಅತ್ಯಂತ ಸುಂದರವಾದ ಸಾರ್ವಜನಿಕ ಕಟ್ಟಡವೆಂದರೆ ಬೃಹತ್ ಸಾರ್ವಜನಿಕ ಈಜುಕೊಳ. ಇದನ್ನು ಸುಟ್ಟ ಇಟ್ಟಿಗೆಗಳಿಂದ ನಿರ್ಮಿಸಲಾಗಿದ್ದು, 55 ಮೀಟರ್ ಉದ್ದ, 33 ಮೀಟರ್ ಅಗಲವಾದ ಒಂದು ಅಂಗಳದ ಮಧ್ಯದಲ್ಲಿದೆ. ಇದನ್ನು ಜಾನ್ ಮಾರ್ಷಲ್‌ರವರು ಸಂಶೋಧಿಸಿದರು. ಪ್ರಾಂಗಣದ ಮಧ್ಯಭಾಗದಲ್ಲಿ ಉತ್ತರ–ದಕ್ಷಿಣವಾಗಿ 11.8 ಮೀ. ಹಾಗೂ ಪೂರ್ವ–ಪಶ್ಚಿಮವಾಗಿ 7.01 ಮೀ & 2.43 ಮೀ. ಆಳವಾದ ಈಜುಕೊಳವಿದ್ದು, ಎರಡು ಕಡೆಯಿಂದ ಇಳಿಜಾರಾಗಿ ಮೆಟ್ಟಿಲುಗಳು ಕಂಡುಬಂದಿದೆ. ಕೊಳದ ನೀರಿನ ನೈರ್ಮಲ್ಯತೆಗೆ ಗಮನ ಕೊಡಲಾಗಿದ್ದು, ಕೊಳಕ್ಕೆ ಸಮೀಪವಿರುವ ಬಾವಿಯಿಂದ ನೀರನ್ನು ಹರಿಸುವ & ಮಲಿನ ನೀರು ಕೊಳದಿಂದ ಹೊರ ಹೊಗುವಂತ ವ್ಯವಸ್ಥೆ ಮಾಡಲಾಗಿತ್ತು. ಕೊಳದ ನೀರು ಸೋರಿ ಹೋಗದಂತೆ ತಡೆಗಟ್ಟಲು, ಜಿಪ್ಸಂ & ಸುಣ್ಣವನ್ನು ಬಳಸುತ್ತಿದ್ದರು. ಸ್ನಾನ ಕೊಳದ ಉತ್ತರದಲ್ಲಿ ಎರಡು ಸಾಲುಗಳ 8 ಚಿಕ್ಕ ಸ್ನಾನದ ಕೋಣೆಗಳಿದ್ದು, ಈ ಕೋಣೆಯ ಮಹಡಿಯ ಮೇಲೆ ಹೋಗಲು ಮೆಟ್ಟಿಲಿನ ವ್ಯವಸ್ಥೆ ಮಾಡಲಾಗಿತ್ತು. ಮಾಕ್ಕೆಯವರು ಪುರೋಹಿತರು ಈ ಸ್ನಾನದ ಕೊಳವೆಗಳನ್ನು ಬಳಸುತ್ತಿದ್ದಿರಬಹುದೆಂದು ಅಭಿಪ್ರಾಯ ಪಡುತ್ತಾರೆ.
- ಇಲ್ಲಿ ದೊರೆತಿರುವ ಅವಶೇಷಗಳೆಂದರೆ ಆಡಳಿತ ಕಛೇರಿಯಂತಿರುವ ಆಯತಾಕಾರದ ಅಂತಸ್ತಿನ ಬೃಹತ್ ಸಂಭಾಗಣ, ಬೃಹತ್ ಕಣಜ/ಉಗ್ರಾಣ, ಕಂಚಿನ ನರ್ತಕಿಯ ವಿಗ್ರಹ, ಮಣ್ಣಿನ ಮುದ್ರೆಯ ಮೇಲೆ ಚಿತ್ರಿಸಿರುವ ಭಾರತೀಯ ಹಡಗಿನ ಚಿತ್ರದ ಗುರುತು, ಹತ್ತಿ ಬಟ್ಟೆಯ ಚೂರು, ಗಡ್ಡವುಳ್ಳ ಮನುಷ್ಯನ (ಪುರೋಹಿತ) ಪ್ರತಿಮೆ, ಪಶುಪತಿ ಮಹಾದೇವನ ಚಿತ್ರಿರುವ ಮುದ್ರಿಕೆ, ಮಾತೃದೇವತೆ ಚಿತ್ರವಿರುವ ಮುದ್ರಿಕೆಗಳು, ಚದುರಾಂಗದಾಟದ ದಾಳಗಳು ಇತ್ಯಾದಿ.



downloaded from: www.kpscvaani.com

- ಮೆಹೆಂಜೋದಾರೋವಿನಲ್ಲಿ ದೊರೆತ ಮತ್ತೊಂದು ಪ್ರಮುಖ ಸಾರ್ವಜನಿಕ ಕಟ್ಟಡವೆಂದರೆ ಬೃಹತ್ ಉಗ್ರಾಣ/ಕಣಜ. ಇದು ಕೋಟೆಯ ಪ್ರದೇಶದೊಳಗೆ ಇರುವುದು. ಈ ಉಗ್ರಾಣವು 45.71 ಮೀ. ಉದ್ದ & 15.23 ಮೀ ಅಗಲವಾಗಿದೆ. ಇದರಲ್ಲಿ 27 ವಿಭಾಗಗಳಿದ್ದು, ಧಾನ್ಯಗಳ ಮೂಟೆಗಳನ್ನು ಸಂಗ್ರಹಿಸಲು ಹಾಗೂ ಸಾಗಿಸಲು ಅನುಕೂಲವಾಗುವಂತೆ ವೇದಿಕೆ ಹಾಗೂ ಓಣಿಯನ್ನು ನಿರ್ಮಿಸಿರುವುದು ಕಂಡುಬರುತ್ತದೆ.

## 3. ಧೋಲವೀರ :

- ಇದು ಸಿಂಧೂ ನಾಗರಿಕತೆಯ ವಿಶಾಲವಾದ & ಇತ್ತಿಚಿಗೆ ಉತ್ಖನನಗೊಂಡ ನಗರ ನಿವೇಶನ. ಇದು ಗುಜರಾತ್‌ನ ಕಛ್ ಪ್ರದೇಶದಲ್ಲಿದೆ. ಇದನ್ನು 1990–91ರಲ್ಲಿ ಆರ್.ಎಸ್. ಬಿಸ್ತ್ ರವರು ಶೋಧಿಸಿದರು.
- ಇತರ ಸಿಂಧೂ ನಾಗರಿಕತೆಯ ನಗರಗಳು ಎರಡು ಭಾಗಗಳಾಗಿ ವಿಭಜಿತವಾಗಿದ್ದರೆ, ಇಲ್ಲಿ ಮಾತ್ರ ನಗರ ಮೂರು ವಿಭಾಗಗಳಾಗಿ ವಿಭಜಿಸಲಾಗಿದೆ. ಎರಡು ಭಾಗಗಳನ್ನು ಭದ್ರವಾದ ಕೋಟೆಯಿಂದ ನಿರ್ಮಿಸಲಾಗಿದೆ.
- ಈ ನಿವೇಶನದಲ್ಲಿ ನೀರಾವರಿಗಾಗಿ ಬಳಸುತ್ತಿದ್ದ ಜಲಾಶಯದ ಗುರುತು ಕಂಡುಬಂದಿದೆ & ಬೃಹತ್ ಶಾಸನ ಮಾದರಿ ದೊರೆತಿದೆ.

## 4. ಲೋಥಾಲ್ :

- ಇದು ಗುಜರಾತ್‌ನ ಭೋಗವ ನದಿ ದಂಡೆ ಮೇಲೆ ಕ್ಯಾಂಬೆ ಕೊಲ್ಲಿ ಬಳಿಯಿದೆ. 1957ರಲ್ಲಿ ಎಸ್.ಆರ್. ರಾವ್‌ರವರು ಶೋಧಿಸಿದರು.
- ಇದು ಪ್ರಸಿದ್ಧ ಹಡಗು ಕಟ್ಟೆ & ಬಂದರು ಆಗಿದ್ದಿತ್ತು.
- ಇಲ್ಲಿ ಮಣಿ ತಯಾರಿಕಾ ಕಾರ್ಖಾನೆ, ಭತ್ತದ ಹೊಟ್ಟು, ಯಜ್ಞ ಕುಂಡಗಳು, ಚದುರಂಗ, ಅಳತೆಪಟ್ಟಿ, ಹಡಗಿನ, ಕುದುರೆಯ ಟೆರ್ರಾಕೋಟಾ ಮಾದರಿ, ಪೈಂಟೆಡ್ ಜಾರ್ ದೊರೆತಿವೆ.
- ಈ ನಗರ ಸಿಂಧೂ ನಾಗರಿಕತೆಯ ಸಾಗರೋತ್ತರ ವ್ಯಾಪಾರದ ಹೆಬ್ಬಾಗಿಲಾಗಿತ್ತು. ಹತ್ತಿ ವ್ಯಾಪಾರ ಕೇಂದ್ರವಾಗಿದ್ದರಿಂದ ಇದನ್ನು ಸಿಂಧೂ ನಾಗರಿಕತೆಯ ಮ್ಯಾಂಚೆಸ್ಟರ್ ಎಂದು ಕರೆಯುವರು.
- ಎರಡು ಶವಗಳನ್ನು ಒಂದೇ ಸಮಾಧಿಯಲ್ಲಿ ಹೂಳಿರುವುದು ಕಂಡುಬಂದಿದೆ. ಇದು ಸತಿ ಪದ್ಧತಿಯನ್ನು ನೆನಪಿಸುವುದು.



downloaded from: www.kpscvaani.com

## 5. ಕಾಲಿಬಂಗನ್ (ರಾಜಸ್ತಾನ್) :

- ಕಾಲಿಬಂಗನ್ ಎಂದರೆ 'ಕಪ್ಪು ಬಳೆ' ಎಂದರ್ಥ.
- ಇದು ಸರಸ್ವತಿ (ಘಗ್ಗರ್) ನದಿಯ ದಂಡೆಯ ಮೇಲಿದ್ದು, 1953ರಲ್ಲಿ ಎ.ಘೋಷ್‌ರವರು ಶೋಧಿಸಿದರು. ನಂತರ ಬಿ.ಬಿ.ಲಾಲ್ & ಥಾಪರ್‌ರವರು ಹೆಚ್ಚಿನ ಸಂಶೋಧನೆ ಕೈಗೊಂಡರು.
- ಇದು ಪೂರ್ವ ಹರಪ್ಪಾ & ಹರಪ್ಪಾ ಸಂಸ್ಕೃತಿಯ ನಗರವಾಗಿತ್ತು.
- ಇಲ್ಲಿ ಉಳುಮೆ ಮಾಡಲ್ಪಟ್ಟ ಬಯಲು ಹಾಗೂ ನೇಗಿಲಿನ ಉಕ್ಕು ಸಾಲಿನ ಕುರುಹು ಕಂಡುಬಂದಿದೆ.
- ಇಲ್ಲಿ ದೊರೆತಿರುವ ಇತರ ಅವಶೇಷಗಳೆಂದರೆ ಕುಂಡಗಳು, ಗೋಳಾಕಾರದ ಮುದ್ರೆಗಳು, ಪ್ರತಿ ಮನೆಯಲ್ಲೂ ಬಾವಿಯನ್ನು ಹೊಂದಿರುವುದು, ಒಂಟೆಯ ಮೂಳೆಗಳು ಎತ್ತಿನ ಬಂಡಿಯ ಗಾಲಿಗಳು ದೊರೆತಿವೆ.

## 6. ಚನ್ಹುದಾರೋ (ಸಿಂಧ್) :

- ಇದು ಪಾಕಿಸ್ತಾನದ ಸಿಂಧ್‌ನ ಲರ್ಕಾನಾ ಜಿಲ್ಲೆಯ ಸಿಂಧೂ ನದಿಯ ದಂಡೆಯ ಮೇಲಿದೆ. 1931ರಲ್ಲಿ ಎನ್.ಜಿ. ಮಂಜುದಾರ್‌ರವರು ಉತ್ಖನನ ಮಾಡಿದರು.
- ಸಿಂಧೂ  ನಾಗರಿಕತೆಯ ನಗರಗಳೆಲ್ಲೆಲ್ಲ ಕೋಟೆಯಿರದ ಏಕೈಕ ನಗರ ಇದಾಗಿದೆ.
- ಇದೊಂದು ಪ್ರಮುಖ ಮಣಿ ತಯಾರಿಕಾ ಕೇಂದ್ರವಾಗಿತ್ತು. ಉತ್ಖನನದ ವೇಳೆ ಸಮುದ್ರದ ಚಿಪ್ಪಿನಿಂದ ತಯಾರಿಸಿದ ಆಭರಣಗಳು ಮಣಿ ತಯಾರಿಕಾ ವಸ್ತುಗಳು, ಲೋಹದ ವಸ್ತುಗಳು ದೊರೆತಿವೆ.
- ಪ್ರಮುಖ ಅವಶೇಷವೆಂದರೆ ಮಣಿ ತಯಾರಿಕಾ ಕಾರ್ಯಗಾರ & ಮಸಿ ಕುಡಿಕೆ ದೊರೆತಿವೆ.

## 7. ರೋಪಾರ್ (ಪಂಜಾಬ್) :

- ಇದು ಭಾರತದ ಪಂಜಾಬ್‌ನ ಅಂಬಾಲ ಜಿಲ್ಲೆಯಲ್ಲಿನ ಸಟ್ಲೇಜ್ ನದಿಯ ದಂಡೆ ಮೇಲಿದೆ.
- 1953–55ರಲ್ಲಿ ವೈ.ಡಿ ಶರ್ಮಾರಿಂದ ಶೋಧಿಸಲ್ಪಟ್ಟಿತ್ತು. ಇದು ಸ್ವಾತಂತ್ರ್ಯ ನಂತರ ಸಂಶೋಧಿಸಿದ ಮೊದಲ ನಿವೇಶನವಾಗಿದೆ.
- ಇದು ಹರಪ್ಪಾ & ಹರಪ್ಪೋತ್ತರ ನಾಗರಿಕತೆಗೆ ಒಳಪಟ್ಟಿತ್ತು.
- ಇಲ್ಲಿನ ಕಟ್ಟಡಗಳನ್ನು ಕಲ್ಲು & ಮಣ್ಣಿನ ಗಾರೆಯಿಂದ ನಿರ್ಮಿಸಲಾಗಿದೆ.
- ಇಲ್ಲಿ ದೊರೆತಿರುವ ಪ್ರಮುಖ ಅವಶೇಷಗಳೆಂದರೆ ಮನುಷ್ಯನ ಶವದ ಜೊತೆ ನಾಯಿಯ ಅವಶೇಷ ದೊರೆತಿರುವುದು.



downloaded from: www.kpscvaani.com

**8. ರಾಖೀಘರ್ (ಹರಿಯಾಣ) :**

- ಇದು ಹರಿಯಾಣದ ಹಿಸ್ಸಾರ್ ಜಿಲ್ಲೆಯಲ್ಲಿದ್ದು, ರಫೀಕ್ ಮೊಘಲ್‌ರವರು ಈ ನಿವೇಶನವನ್ನು ಸಂಶೋಧಿಸಿದರು.

**9. ಬನವಾಲಿ :**

- ಇದು ಹರಿಯಾಣದ ಹಿಸ್ಸಾರ್ ಜಿಲ್ಲೆಯಲ್ಲಿದೆ. 1973–74ರಲ್ಲಿ ಆರ್.ಎಸ್.ಬಿಸ್ತರ್‌ರವರಿಂದ ಶೋಧಿಸಲ್ಪಟ್ಟಿತು.
- ಇಲ್ಲಿ ಪೂರ್ವ ಹರಪ್ಪ & ಹರಪ್ಪೋತ್ತರ ಸಂಸ್ಕೃತಿಯ ಲಕ್ಷಣಗಳು ಕಂಡುಬಂದಿದೆ,
- ಈ ನಿವೇಶನಗಳಲ್ಲಿ ಕಂಡುಬರುವ ನೆಲೆಯು ಅಂಡಾಕಾರವಾಗಿದ್ದು, ಒಳಚರಂಡಿ ವ್ಯವಸ್ಥೆ ವ್ಯವಸ್ಥಿತವಾಗಿ ಇಲ್ಲದಿರುವುದು ಕಂಡುಬಂದಿದೆ.

**10.ಸೂಕ್ತಜೆಂಡರ್ :**

- ಇದು ಬಲೂಚಿಸ್ತಾನದ ಗಸ್ತ್ ನದಿಯ ದಂಡೆಯ ಮೇಲಿದೆ. 1927ರಲ್ಲಿ ಆರ್.ಎಲ್.ಸ್ಟೈನ್‌ರವರು & 1962ರಲ್ಲಿ ಜಿ.ಡೇಲ್ಸ್ & ಆರ್.ಎಲ್.ಸ್ಟೈನ್‌ರವರು ಶೋಧಿಸಿದರು.
- ಇದು ಪಶ್ಚಿಮ ಕರಾವಳಿಯ ನಿವೇಶನವಾಗಿದ್ದು, ಬ್ಯಾಬಿಲೋನಿಯಾದೊಂದಿಗೆ ಪ್ರಮುಖ ವ್ಯಾಪಾರ ಸಂಪರ್ಕ ಕೇಂದ್ರವಾಗಿತ್ತು.

**11. ಸುರ್ಕೊಟಡಾ (ಗುಜರಾತ್) :**

- ಇದು ಕಛ್ ಪ್ರಾಂತ್ಯದ ಭುಜ್ ಬಳಿಯಿದೆ. 1972ರಲ್ಲಿ ಜಿ.ಜೋಷಿಯವರು ಸಂಶೋಧನೆ ಕೈಗೊಂಡರು.
- ಇಲ್ಲಿ ಕೋಟೆಯ ಪ್ರದೇಶ ಹಾಗೂ ಅದರ ಕೆಳಗಿನ ಪ್ರದೇಶವನ್ನು ಕಲ್ಲುಗೋಡೆಗಳಿಂದ ನಿರ್ಮಿಸಿರುವುದು ಕಂಡುಬಂದಿದೆ.
- ಇಲ್ಲಿ ಸಿಂಧೂ ಜನರಿಗೆ ತಿಳಿದಿರದ ಪ್ರಾಣಿಯೆಂದು ಭಾವಿಸಲಾದ ಕುದುರೆಯ ಮೂಳೆಯ ಗುರುತು ದೊರೆತಿದೆ.



downloaded from: www.kpscvaani.com

### 12.ಅಮ್ರಿ :

- ಸಿಂಧ್ ಪ್ರಾಂತ್ಯದ ಇಂಡಸ್ ನದಿಯ ದಂಡೆಯ ಮೇಲಿದೆ.
- 1935ರಲ್ಲಿ ಎನ್.ಜಿ. ಮಜುಂದಾರ್‌ರವರು ಶೋಧಿಸಿದರು.

### 13.ರಂಗಪೂರ್ :

- ಗುಜರಾತ್‌ನಲ್ಲಿದೆ.
- 1953ರಲ್ಲಿ ಎಂ.ಎಸ್. ವ್ಯಾಟ್ಸ್‌ರವರು ಶೋಧಿಸಿದರು.
- ಈ ಸ್ಥಳದಲ್ಲಿ ಭತ್ತ (ಅಕ್ಕಿ)ದ ಗುರುತು ದೊರೆತಿದೆ.
- ಇಲ್ಲಿ ಪೂರ್ವ ಹರಪ್ಪಾ & ಹರಪ್ಪೋತ್ತರ ಸಂಸ್ಕೃತಿಯ ಲಕ್ಷಣಗಳು ಕಂಡುಬಂದಿದೆ.

### 14.ಆಲಂಗೀಪುರ್ (ಉತ್ತರ ಪ್ರದೇಶ) :

ಇದು ಉತ್ತರ ಪ್ರದೇಶ ಭಾಗಕ್ಕಿದೆ. ಇದು ಹರಪ್ಪ ನಾಗರೀಕತೆಯ ಪೂರ್ವಭಾಗದ ನಿವೇಶನವಾಗಿದ್ದು ಇದು ನಾಗರಿಕತೆಯ ಕೊನೆಯ ಹಂತದ ಲಕ್ಷಣಗಳನ್ನು ಪ್ರತಿನಿಧಿಸುವ ನಿವೇಶನವಾಗಿದೆ.

GNANADHARE IAS ACADEMY



downloaded from: www.kpscvaani.com

## ➢ ಹೊಸ ಧರ್ಮಗಳ ಉದಯ (ಕ್ರಿ.ಪೂ 600–400) :–

### ಭಾರತದ ಧರ್ಮಗಳ ಬೆಳವಣಿಗೆ

ಜೈನ ಮತ್ತು ಬೌದ್ಧ ಧರ್ಮಗಳ ಹುಟ್ಟಿಗೆ ಕಾರಣಗಳು:

1. **ವೇದ ಧರ್ಮದಲ್ಲಾದ ಬದಲಾವಣೆಗಳು:** ಬರುಬರುತ್ತಾ ವೈದಿಕ ಧರ್ಮದ ಮತಾಚರಣೆಗಳು, ಸಂಸ್ಕಾರಗಳು, ಕಠಿಣವೂ, ಸಂಕೀರ್ಣವೂ, ದುಬಾರಿಯಾದವು ಅವನ್ನು ಆಚರಿಸುವುದು ಶ್ರೀಸಾಮಾನ್ಯರಿಗೆ ಕಷ್ಟವಾಯಿತು.
2. **ದುಬಾರಿ ಯಜ್ಞ–ಯಾಗಾದಿಗಳು:** ವೆಚ್ಚದಾಯಕವಾದ ವೈದಿಕ ಯಜ್ಞ–ಯಾಗಾದಿಗಳು ಪ್ರಾಣಿ ಸಂಪತ್ತನ್ನು ನಾಶಪಡಿಸುದವು. ಶ್ರೀಸಾಮಾನ್ಯರಿಗೆ ಅವನ್ನು ಆಚರಿಸುವುದು ಕಷ್ಟವಾಗಿದ್ದಿತು.
3. **ಮಂತ್ರ–ತಂತ್ರಗಳಲ್ಲಿ ನಂಬಿಕೆ:** ವೈದಿಕ ಮತದಲ್ಲಿ ಕಾಣಿಸಿಕೊಂಡ ಅಂಧ ಮಂತ್ರ–ತಂತ್ರಗಳು ಪ್ರಜ್ಞಾವಂತರನ್ನು ಕೆರಳಿಸಿದವು.
4. **ಬ್ರಾಹ್ಮಣರ ಶ್ರೇಷ್ಠತೆ:** ಜಾತಿ ಪದ್ಧತಿ, ವರ್ಣಪದ್ಧತಿಗಳ ಅಸಮಾನತೆಗೆ ಮೂಲ ಕಾರಣರಾದ ಬ್ರಾಹ್ಮಣರು ತಮ್ಮ ಉತ್ತಮಗಾರಿಕೆಯನ್ನು ಪ್ರತಿಪಾದಿಸಿಕೊಂಡು ವೇದ ಧರ್ಮ ತಮ್ಮ ಸ್ವತ್ತು ಎಂದು ಹೇಳಿಕೊಂಡು ಧರ್ಮದ ಹೆಸರಿನಲ್ಲಿ ಶ್ರೀಸಾಮಾನ್ಯರನ್ನು ಶೋಷಿಸುತ್ತಿದ್ದರು.
5. **ಜಾತಿ ಪದ್ಧತಿ:** ಹುಟ್ಟು ಆಧಾರಿತ ಜಾತಿ ಅಥವಾ ವರ್ಣ ಪದ್ಧತಿ ಹಿಂದೂ ಧರ್ಮಕ್ಕೆ ಅಂಟಿದ್ದ ದೊಡ್ಡ ಕಳಂಕ. ಅದು ಎಲ್ಲಾ ಸಮಾನತೆಗೆ ಮೂಲ ಕಾರಣವಾಗಿತ್ತು. ಜಾತಿ ಪದ್ಧತಿ ಮೋಕ್ಷ ಸಾಧನೆಗೆ ಅಡ್ಡಿಯಾಗಿತ್ತು. ಶೂದ್ರರಿಗೆ, ಅಸ್ಪೃಶ್ಯರಿಗೆ ವೇದ ಮಂತ್ರಗಳನ್ನು ಪಠಿಸುವ ಹಕ್ಕು ಇರಲಿಲ್ಲ. ಶೂದ್ರರು ಮೇಲ್ಜಾತಿಯ ತುಳಿತಕ್ಕೆ ಒಳಗಾಗಿದ್ದರು.
6. **ದುಬಾರಿ ಧರ್ಮ:** ಮತಾಚರಣೆಗಳಿಗೆ ವೈದಿಕ ಧರ್ಮ ಜನ ಸಾಮಾನ್ಯರಿಗೆ ಎಟುಕದೆ ಹೋಗಿ ಅವರು ಸರಳ ಧರ್ಮದತ್ತ ನೋಡತೊಡಗಿದರು.
7. **ಕಠಿಣ ಭಾಷೆ:** ಸಂಸ್ಕೃತದಲ್ಲಿ ವೈದಿಕ ಧರ್ಮ ಮತ್ತು ಅದರ ಮತಗ್ರಂಥಗಳು ಶ್ರೀಸಾಮಾನ್ಯರಿಗೆ ಅರ್ಥವಾಗುತ್ತಿರಲಿಲ್ಲ. ಸಂಸ್ಕೃತ ಬ್ರಾಹ್ಮಣರ ಭಾಷೆಯಾಗಿತ್ತು.
8. **ಮುಕ್ತಿ ಸಾಧನೆಯ ಮಾರ್ಗಗಳು:** ಮುಕ್ತಿ ಸಾಧನೆಗೆ ವೇದ ಧರ್ಮ ಕರ್ಮ, ತಪಸ್ಸು ಜ್ಞಾನ ಮಾರ್ಗಗಳಂತಹ ಹಲವು ಮಾರ್ಗಗಳನ್ನು ಬೋಧಿಸುತ್ತಾ ಜನರ ದಿಕ್ಕು ತಪ್ಪಿಸಿತು. ಅವರು ಯಾವ ಮಾರ್ಗ ಆಚರಿಸಬೇಕೆಂದು ತೋಚದೆ ಗೊಂದಲಕ್ಕೀಡಾದರು.
9. **ಬ್ರಾಹ್ಮಣ ಮತ್ತು ಕ್ಷತ್ರಿಯರ ನಡುವೆ ದ್ವೇಷ:** ವರ್ಣ ಧರ್ಮದ ಮೊದಲ ಸ್ಥಾನದಲ್ಲಿದ್ದ ಬ್ರಾಹ್ಮಣರು ತಾವು ಕ್ಷತ್ರಿಯರಿಗಿಂತ ಶ್ರೇಷ್ಠರೆಂದು ಜಂಭ ಪಡುತ್ತಿದ್ದರು. ಅವರ ಶ್ರೇಷ್ಠತೆಯನ್ನು ಮುರಿಯಲು ಕ್ಷತ್ರಿಯರು ಅವೈದಿಕ ಧರ್ಮಗಳ ಸ್ಥಾಪಕರನ್ನು ಬೆಂಬಲಿಸಿದರು.



downloaded from: www.kpscvaani.com

10. **ಕೃಷಿ ಕ್ರಾಂತಿ:** ಕ್ರಿ.ಪೂ 600 ರಲ್ಲಿ ಕೃಷಿಯಲ್ಲಿ ಕಬ್ಬಿಣದ ಆಯುಧಗಳು ಬಳಕೆಗೆ ಬಂದಿತು. ಅದು ಕೃಷಿಯಲ್ಲಿ ಕ್ರಾಂತಿ ತಂದಿತು. ಗಂಗಾಬಯಲಿನಲ್ಲಿ ಅರಣ್ಯ ಕಡಿದು ಕೃಷಿಗೆ ಭೂಮಿ ಒದಗಿಸಿಕೊಂಡರು. ಅವರಿಗೆ ಪಶು ಸಂಪತ್ತು ಅತ್ಯಗತ್ಯವಾಗಿತ್ತು. ಆದರೆ ಯಜ್ಞಗಳಿಗೆ ಪಶುಗಳನ್ನು ಬಲಿ ಕೊಡುತ್ತಿದ್ದುದರಿಂದ ಅದು ಕ್ಷೀಣಿಸಿತು. ಇದನ್ನು ಖಂಡಿಸಿ ಅವೈದಿಕ ಧರ್ಮಗಳಿಗೆ ಬೆಂಬಲ ನೀಡಿದರು.
11. **ಪ್ರಬಲ ರಾಜಸತ್ತೆಯ ಉಗಮ:** ಮಗಧ ಸಾಮ್ರಾಜ್ಯದ ಏಳಿಗೆ ಬ್ರಾಹ್ಮಣರ ಪ್ರಭಾವ ಕುಗ್ಗಿಸಿತು.

## ನಗರೀಕರಣ:

ತ್ವರಿತ ನಗರೀಕರಣದಿಂದಾಗಿ ನೈತಿಕತೆ ಅದೋಗತಿಗೆ ಇಳಿದು ಅದನ್ನು ಸುಧಾರಿಸಲು ಹೊಸ ಧರ್ಮಗಳು ಹುಟ್ಟಿದವು. ಅತಿಯಾದ ಪ್ರಾಣಿಬಲಿ, ವ್ಯಾಪಾರಿ ವರ್ಗಗಳ ಉದಯ, ಕಬ್ಬಿಣ ಆಯುಧಗಳ ಬಳಕೆಯಿಂದಾದ ಕೃಷಿ ಕ್ರಾಂತಿ ಪಂಚ್‌ಮಾರ್ಕಿನ ನಾಣ್ಯಗಳು ಚಲಾವಣೆಗೆ ಬಂದಿದ್ದು – ಇವು ಸಹ ನೂತನ ಧರ್ಮಗಳ ಏಳಿಗೆಗೆ ಸಹಾಯಕವಾದವು.

## ಜೈನ ಧರ್ಮ :



- ಜೈನ ಧರ್ಮ ಸ್ಥಾಪಕ– ವರ್ಧಮಾನ ಮಹಾವೀರ (ಕ್ರಿ.ಪೂ 540–468)
- ಜನನ– ಕ್ರಿ.ಪೂ / 59
- ತಂದೆ, ತಾಯಿ – ಸಿದ್ಧಾರ್ಥ, ತ್ರಿಶಲಾ
- ಹೆಂಡತಿ – ಯಶೋಧಾ
- 30ನೇ ವಯಸ್ಸಿನಲ್ಲಿ ಸಂಸಾರ ತ್ಯಾಗ
- 12 ವರ್ಷಗಳ ಕಾಲ ನಗ್ನ ತಪಸ್ಸು ತಪ್ಪಸ್ಸಿನ 13ನೇ ವರ್ಷದಲ್ಲಿ ಜೃಂಬಿಕ ಗ್ರಾಮದ ಬಳಿಯಿರುವ ಋಜುಪಾಲಕಾ ನದಿ ದಂಡೆಯ ಮೇಲೆ 43ನೇ ವಯಸ್ಸಿನಲ್ಲಿ "ಕೇವಲ ಜ್ಞಾನ" ಪಡೆದನು (ಜ್ಞಾನಪರಾಕಾಷ್ಠೆ)
- ಕ್ರಿ.ಪೂ 527ರಲ್ಲಿ ತನ್ನ 72ನೇ ವಯಸ್ಸಿನಲ್ಲಿ – ರಾಜಗೃಹದ ಬಳಿಯ "ಪಾವಾ" ಎಂಬಲ್ಲಿ ನಿಧನ.





downloaded from: www.kpscvaani.com

## ಜೈನಧರ್ಮದ ಪ್ರಮುಖ ತತ್ವಗಳು

- ಅಹಿಂಸಾ
- ಸತ್ಯ
- ಆಸ್ತೇಯ (ಕಳ್ಳತನ ಮಾಡದಿರುವುದು)
- ಅಪರಿಗ್ರಹ (ಸಂಪತ್ತಿನ ವ್ಯಾಮೋಹ ತ್ಯಜಿಸುವುದು)
- ಬ್ರಹ್ಮಚರ್ಯ

(ಮೇಲಿನ ನಾಲ್ಕು 23ನೇ ತೀರ್ಥಂಕರನಾದ ಪಾರ್ಶ್ವನಾಥನವು, ಕೊನೆಯ ಬ್ರಹ್ಮಚರ್ಯ ತತ್ವವನ್ನು ಮಹಾವೀರ ಬೋಧಿಸಿದನು)

## ಜೈನ ತ್ರಿರತ್ನಗಳು

- ಸಂಯಕ್ ದರ್ಶನ
- ಸಂಯಕ್ ಜ್ಞಾನ
- ಸಂಯಕ್ ಚಾರಿತ್ರ್ಯ

## ಜೈನಧರ್ಮದ 24 ತೀರ್ಥಂಕರರು

1. ಆದಿನಾಥ (ವೃಷಭದೇವ)
2. ಅಜಿತನಾಥ
3. ಸಂಭವನಾಥ
4. ಅಭಿನಂದ
5. ಸಮತಿನಾಥ
6. ವಿಮಳನಾಥ
7. ಅನಂತನಾಥ
8. ಧರ್ಮನಾಥ
9. ಸುವಿದಿನಾಥ
10. ಶಾಂತಿನಾಥ
11. ಕುಂತನಾಥ
12. ಪದ್ಮಪ್ರಭ
13. ಸುಪಾರ್ಶ್ವನಾಥ
14. ಚಂದ್ರಪ್ರಭ
15. ಶೀತಳನಾಥ
16. ಶ್ರೇಯಾಂಶನಾಥ
17. ವಾಸುಪೂಜ್ಯ
18. ಅರನಾಥ
19. ಮಲ್ಲಿನಾಥ
20. ಮನುಸುವ್ರತೆ
21. ನಮಿನಾಥ
22. ನೇಮಿನಾಥ
23. ಪಾರ್ಶ್ವನಾಥ
24. ವರ್ಧಮಾನಮಹಾವೀರ



downloaded from: www.kpscvaani.com

## ಜೈನಧರ್ಮ ಪೋಷಿಸಿದ ರಾಜರು

- ಅಜಾತ ಶತ್ರು
- ಬಿಂಬಸಾರ
- ಚಂದ್ರಗುಪ್ತ ಮೌರ್ಯ
- ಸಂಪ್ರಾತಿ ಚಂದ್ರಗುಪ್ತ (ಅಶೋಕನ ಮೊಮ್ಮಗ)
- ಕಳಿಂಗದ ರಾಜ ಖಾರವೇಲ
- ಅಮೋಘವರ್ಷ ನೃಪತುಂಗ (ರಾಷ್ಟ್ರಕೂಟ ದೊರೆ)
- ದ್ವಾರಸಮುದ್ರದ ಹೊಯ್ಸಳರು

## ಜೈನ ಮಹಾಸಭೆಗಳು

- ಮೊದಲ ಜೈನ ಮಹಾಸಭೆ ಪಾಟಲೀಪುತ್ರದಲ್ಲಿ ಕ್ರಿ.ಪೂ 300ರಲ್ಲಿ ಜೈನಯತಿ– ಸ್ಥೂಲಭದ್ರನ ಅಧ್ಯಕ್ಷತೆಯಲ್ಲಿ, (ದ್ವಾದಶಾಂಶಗಳ ರಚನೆ)
- ಎರಡನೇ ಜೈನ ಮಹಾಸಭೆ ಕ್ರಿ.ಶ 512ರಲ್ಲಿ ಗುಜರಾತಿನ ವಲ್ಲಭಿಯಲ್ಲಿ, ದೇವರ್ಧಿ ಕಶ್ಮಶರ್ಮದ ಅಧ್ಯಕ್ಷತೆಯಲ್ಲಿ ನಡೆಯಿತು

## ಜೈನ ಪಂಥಗಳು / ಜೈನ ಪಂಗಡಗಳು

- ಶ್ವೇತಾಂಬರರು: 23ನೇ ತೀರ್ಥಂಕರನಾದ ಪಾರ್ಶ್ವನಾಥನ ಅನುಯಾಯಿಗಳು ಬಿಳಿಯ ವಸ್ತ್ರವನ್ನು ಧರಿಸುತ್ತಿದ್ದರು
- ದಿಗಂಬರರು: ಮಹಾವೀರನ ಅನುಯಾಯಿಗಳನ್ನು ದಿಗಂಬರರು ಎನ್ನುವರು. ಅಂದರೆ ವಸ್ತ್ರವನ್ನು ಧರಿಸುವ ಅನುಯಾಯಿಗಳು.

(ಮಹಾವೀರ ಕಾಲವಾದ 200 ವರ್ಷಗಳ ನಂತರ ಮಗದದಲ್ಲಿ ಭೀಕರ ಬರಗಾಲ ಉಂಟಾದಾಗ ಅನೇಕ ಜೈನರು ಮತ್ತು ಮೌರ್ಯ ಸಾಮ್ರಾಜ್ಯ ಸ್ಥಾಪಕ ಚಂದ್ರಗುಪ್ತ ಮೌರ್ಯ ಭದ್ರಬಾಹುವಿನೊಂದಿಗೆ ದಕ್ಷಿಣಕ್ಕೆ ಬಂದು ಕಾಥವ ಪುರಿ ಅಥವಾ ಶ್ರವಣಬೆಳಗೊಳದಲ್ಲಿ ನೆಲಸಿ ಧರ್ಮ ಪ್ರಸಾರ ಮಾಡಿದರು. ಇನ್ನುಳಿದ ಜೈನರು (ಸ್ಥಳಬಾಹುವಿನ ನೇತೃತ್ವದಲ್ಲಿ) ಮಗದದಲ್ಲೇ ಉಳಿದರು. ಬರಗಾಲ ಮುಕ್ತಾಯವಾದ ಮೇಲೆ ದಕ್ಷಿಣದ ಜೈನರು ಉತ್ತರದ ಮಗದಕ್ಕೆ ಹೋದಾಗ ಅಲ್ಲಿ ನಡೆದ ಜೈನ ಸಮ್ಮೇಳನದಲ್ಲಿ ಅವರಿಬ್ಬರ ನಡುವೆ ಮತಭೇದ ತಲೆದೋರಿತು.




downloaded from: www.kpscvaani.com

ಪರಿಣಾಮ ಕಠಿಣ ವ್ರತಾಚಾರಿಗಳಾದ ದಕ್ಷಿಣದ ಮಹಾವೀರನ ಅನುಯಾಯಿಗಳು ದಿಗಂಬರರಾಗಿ ಉಳಿದರು. ಬಿಳಿಯ ವಸ್ತ್ರಧಾರಿಗಳಾದ ಪಾರ್ಶ್ವನಾಥನ ಅನುಯಾಯಿಗಳು ಶ್ವೇತಾಂಬರರಾಗಿ ಉಳಿದರು)

## ಜೈನಧರ್ಮದ 2 ಉಪ ಪಂಗಡಗಳು:

1. ಥೇರಾ ಪಂಥಿಗಳು – ಜೈನಧರ್ಮದ ಪವಿತ್ರ ಕೃತಿ ಆಗಮಗಳನ್ನು ಪೂಜಿಸುತ್ತಿದ್ದರು.
2. ಸಮ ಇಯಾಗಳು – ದಿಂಗಬರ ಪಂಗಡದಲ್ಲಿನ ಮೂರ್ತಿ ಪೂಜಕರು

## ಮುಖ್ಯಾಂಶಗಳು

- ಜೈನರನ್ನು ನಿಗ್ರಂಥರೆಂದು ಬೌದ್ಧರು ಕರೆಯುತ್ತಿದ್ದರು.
- ಜೈನಧರ್ಮ (ಮಹಾವೀರ) ದೇವರ ಅಸ್ತಿತ್ವವನ್ನು ಒಪ್ಪಿಕೊಂಡಿತ್ತಾದರೂ ದೇವರು ಜನರಿಗಿಂತ ದೊಡ್ಡವರಾಗಿರಲಿಲ್ಲ.
- ಜೈನಧರ್ಮ ವರ್ಣವ್ಯವಸ್ಥೆಯನ್ನು ತಿರಸ್ಕರಿಸಲಿಲ್ಲ – ಮಾನವನು ತನ್ನ ಪೂರ್ವ ಜನ್ಮದ ಕರ್ಮಗಳ ಅನುಸಾರ ಮೇಲು–ಕೀಳು ವರ್ಣದಲ್ಲಿ ಜನಿಸುತ್ತಾನೆ. ಎಂದು ಜೈನರು ನಂಬಿದ್ದರು. ಆದರೂ ಜಾತಿವ್ಯವಸ್ಥೆಯನ್ನು ವಿರೋಧಿಸಿತು.
- ತಪಶ್ಚರ್ಯ ದೇಹ ದಂಡನೆಗೆ ಜೈನಧರ್ಮ ಹೆಚ್ಚು ಒತ್ತು ನೀಡಿತು.
- ಗಿಡಮರಗಳಿಗೂ ಜೀವವಿದೆ ಎಂದು ಭಾವಿಸಿದ ಜೈನಧರ್ಮ ಅವುಗಳನ್ನು ಹಿಂಸಿಸುವುದನ್ನು ನಿಷೇಧಿಸಿತು. ಅದಕ್ಕಾಗಿ ಜೈನರು ಕೃಷಿಕಸುಬು ಬಿಟ್ಟು ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿದರು.
- ತಾವು ಉಸಿರಾಡುವ ಗಾಳಿಯ ಮೂಲಕ ಕ್ರಿಮಿಕೀಟಗಳು ಸಾಯುತ್ತವೆ. ಎಂಬ ಕಾರಣಕ್ಕಾಗಿ ಬಾಯಿಗೆ ಬಟ್ಟೆಯನ್ನು ಕಟ್ಟಿಕೊಳ್ಳುತ್ತಿದ್ದರು.
- ಮಹಾವೀರನ ನಿಷ್ಠ 11 ಮಂದಿ ಅನುಯಾಯಿಗಳನ್ನು “ಗಾಂಧಾರರು” ಎನ್ನಲಾಗುತ್ತಿತ್ತು.
- ಮಹಾವೀರನಿಂದ ಸ್ಥಾಪಿತವಾದ ಜೈನಸಂಘದಲ್ಲಿ ಸ್ತ್ರೀಯರಿಗೂ ಪ್ರವೇಶ ಅವಕಾಶವಿತ್ತು.
- ಜೈನದರ್ಮದಲ್ಲಿ – ಸರ್ಮಿಣಿ ಮತ್ತು ಸರವಿಕರು ಎಂಬ ಎರಡು ಗುಂಪಿನ ಸ್ತ್ರೀ ಸದಸ್ಯರಿದ್ದರು.
- ಸ್ತ್ರೀ ಜೈನ ಸನ್ಯಾಸಿನಿಯರು ಮಹಾವೀರನ ಸಂಬಂಧಿ “ಕಂಡನಾ”ಳ ನೇತೃತ್ವದಲ್ಲಿದ್ದರು.
- ಮಹಾವೀರನ ಮರಣದ ನಂತರ ಜೈನಸಂಘದ ಮುಖ್ಯಸ್ಥನಾದವನು ಸುಧರ್ಮ ನಂತರ ಜಂಬೂ ಎಂಬುವವನು ಮುಖ್ಯಸ್ಥನಾದ.



downloaded from: www.kpscvaani.com

- ಭದ್ರಬಾಹು, ಶಂಭೂತ ವಿಜಯ ಮತ್ತು ಸ್ಥೂಲ ಭದ್ರಬಾಹು ನಂತರದ ಕಾಲದಲ್ಲಿ ಜೈನ ಸಂಘದ ಮುಖ್ಯಸ್ಥರಾಗಿದ್ದರು.
- ಕರ್ನಾಟಕದಲ್ಲಿ ಜೈನಧರ್ಮ ಹರಡಲು ಕಾರಣ ಭದ್ರಬಾಹು ಮತ್ತು ಚಂದ್ರಗುಪ್ತ ಮೌರ್ಯ
- ಜೈನಧರ್ಮದ ಪ್ರಮುಖ ಕೊಡುಗೆಯೆಂದರೆ – ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ ಕಾರಣವಾದುದು. ಜನಸಾಮಾನ್ಯರ ಭಾಷೆಯಾದ ಅರ್ಧಮಾಗಧಿಯಲ್ಲಿ ಧರ್ಮ ಪ್ರಚಾರ ಮಾಡಲಾಯಿತು. ಹಾಗೂ ಜೈನ ಸಾಹಿತ್ಯವು ದೇಶೀಯ ಭಾಷೆಗಳಾದ ಹಿಂದಿ, ಗುಜರಾತಿ, ಮರಾಠಿ, ತಮಿಳು, ಕನ್ನಡ ಭಾಷೆಗಳಲ್ಲಿ ಬೆಳೆಯಲ್ಪಟ್ಟು ಪ್ರಾದೇಶಿಕ ಭಾಷೆಗಳು ಬೆಳೆಯಲು ಸಹಾಯಕವಾಯಿತು.
- ಕಲೆ ಮತ್ತು ವಾಸ್ತುಶಿಲ್ಪಕ್ಕೆ ಜೈನರ ಕೊಡುಗೆ ಅಪಾರವಾದುದು. ಒರಿಸ್ಸಾದ ಹಾಥಿಗುಂಪಾ ಗುಂಹಾಂತರ ದೇವಾಲಯಗಳು ಉದಯಗಿರಿ ಬೆಟ್ಟಗಳ ಹುಲಿಗುಹೆ, ಎಲ್ಲೋರದ ಇಂದ್ರಸಭಾ, ಶ್ರವಣಬೆಳಗೊಳದ ಗೊಮ್ಮಟ ಮೂರ್ತಿ, ಬುಂದೇಲ್‌ಖಂಡದ ಖುಜರಾಹೋ ಇತ್ಯಾದಿ ಜೈನರ ವಾಸ್ತುಶಿಲ್ಪ ಕೊಡುಗೆಗಳು
- ಶತ್ರುಂಜಯ, ಅಭುಪರ್ವತ (ಮೌಂಟ್ ಅಬು) ಗೋಕರ್ಣ, ಶ್ರವಣಬೆಳಗೊಳ ಪ್ರಸಿದ್ದ ಜೈನ ಯಾತ್ರಾ ಸ್ಥಳಗಳು.
- ಕನ್ನಡದ ಪಂಪ, ರನ್ನ, ಪೊನ್ನ, ಜನ್ನ, ಪ್ರಭಾನಂದಿ, ವಿದ್ಯಾನಂದಿ, ಜಿನಸೇನ, ಅಜಿತಸೇನಾಚಾರ್ಯ, ಗುಣಭದ್ರ ಮೊದಲಾದವರು ಜೈನ ಕವಿಗಳಾಗಿದ್ದರು.



downloaded from: www.kpscvaani.com

## ಬೌದ್ಧ ದರ್ಮ



- ಬೌದ್ಧ ಧರ್ಮ ಸ್ಥಾಪಕ – ಗೌತಮ ಬುದ್ಧ
- ಮೊದಲ ಹೆಸರು – ಸಿದ್ಧಾರ್ಥ
- ತಂದೆ – ಶುದ್ದೋದನ – ಕಪಿಲ ವಸ್ತುವಿನ ಶಾಕ್ಯ ಕುಲಕ್ಕೆ ಸೇರಿದವನು
- ತಾಯಿ – ಮಾಯಾದೇವಿ – ಶಾಕ್ಯ ಪ್ರಾಂತ್ಯದಲ್ಲಿನ ದೇವದಹ ಪಟ್ಟಣದ ರಾಜಕುಮಾರಿ
- ಹೆಂಡತಿ ಯಶೋಧರಾ (ಸೋದರ ಮಾವನ ಮಗಳು)
- ಮಗ – ರಾಹುಲ
- ಚಿಕ್ಕಮ್ಮ – (ಮಲತಾಯಿ) ಮಹಾಪ್ರಜಾಪತಿ ಗೌತಮಿ
- ಸೇವಕ – ಚೆನ್ನ
- ಕುದುರೆ – ಕಂತಕ
- ತನ್ನ 29ನೇ ವಯಸ್ಸಿನಲ್ಲಿ ಸಂಸಾರ ತ್ಯಾಗ – (ಮಹಾ ಪರಿತ್ಯಾಗ)
- ಗೌತಮ ಬುದ್ದನು ಮೊದಲ ಗುರು – ವೈಶಾಲಿಯ ಆದಾರ ಕಲಮನಿಂದ ಸಾಂಖ್ಯ ಸಿದ್ದಾಂತದ ಬಗ್ಗೆ ಪರಿಚಯ.
- ರಾಜಗೃಹದ ಉದ್ರಕ ಎಂಬ ಗುರುವಿನಿಂದ ಧ್ಯಾನಕ್ಕೆ ಬೇಕಾದ ಏಕಾಗ್ರಚಿತ್ತತೆ ಕಲಿತನು.
- ಗಯಾ ಬಳಿಯ ಉರುವಿಲ್ವದಲ್ಲಿ – ಕಠಿಣ ತಪಸ್ಸು ಪ್ರಯೋಜನವಾಗಲಿಲ್ಲ
- ಲೀಲಾಜನ / ನೈರಂಜನಾ ನದಿ ದಂಡೆಯ ಮೇಲೆ ಬೋದಗಯಾ ಬಳಿ ಅಶ್ವತ್ಥ ವೃಕ್ಷದ ಕೆಳಗೆ ಜ್ಞಾನ ಮಗ್ನನಾಗಿದ್ದಾಗ ವೈಶಾಖ ಶುದ್ಧ ಪೂರ್ಣಿಮೆಯಂದು ಜ್ಞಾನೋದಯವಾಯಿತು. ಅಂದಿನಿಂದ ಬುದ್ಧ ತಥಾಗತ ಅಂದರೆ ಸತ್ಯವನ್ನು ಅರಿತವಾದ ಈ ಸ್ಥಳ ಬೋದಗಯಾ ಆಯಿತು. ಆ ಅರಳೀವೃಕ್ಷ ಬೋಧಿವೃಕ್ಷ ಎಂಬ ಹೆಸರು ಪಡೆಯಿತು.





downloaded from: www.kpscvaani.com

- ಬುದ್ಧನು ಪ್ರಥಮ ಬಾರಿಗೆ ತನ್ನ 5 ಮಂದಿ ಶಿಷ್ಯಂದಿರಿಗೆ ಬೋಧಿಸಿದ್ದು ವಾರಣಾಸಿಯ ಸಾರನಾಥದಲ್ಲಿ, ಅವರುಗಳೆಂದರೆ ಕೊಂಡಣ್ಣ, ಏಪ್ಪು ಭವ್ವಾಜಿ, ಅಸ್ಸಾಜಿ ಮಹಾನಾಮ.
- ಬುದ್ಧ – ಜನಸಾಮಾನ್ಯರ ಭಾಷೆಯಾದ "ಪಾಳಿ"ಯಲ್ಲಿ ಬೋಧಿಸಿದೆ.
- ಬುದ್ದನ ಪ್ರಸಿದ್ಧ ಶಿಷ್ಯಂದಿರು – ಮೊಘಲನ (ಮಾಯಾ ವಿದ್ಯೆ ಪ್ರವೀಣ), ಆನಂದ (ಧರ್ಮದಲ್ಲಿ ನಿಪುಣ) ಅನಿರುದ್ಧ, ಉಪಾಲಿ (ಕ್ಷೌರಿಕ) ಮಹಾಕಶ್ಯಪ (ಕಠೋರ ತಪಸ್ವಿ) ಮಹಾ ಪಜ್ಜಯನ, ಮಹಾತಪ್ಪಿನ ಸಾರಿಪುತ್ರ ಮುಂತಾದವರ.
- ಬುದ್ದನ ಸಾಮಾನ್ಯ ಶಿಷ್ಯರಲ್ಲಿ ಅತ್ಯಂತ ಪ್ರಸಿದ್ದನಾದವನು – ಶ್ರೀಮಂತ ವ್ಯಾಪರಿ, ಅನಾಥ ಪಿಂಡಕ.
- ವಿಶಾಲ ಮತ್ತೊಬ್ಬ ಪ್ರಸಿದ್ಧ ಶ್ರಾವಸ್ಥಿಯಲ್ಲಿನ ಶಿಷ್ಯೆ ಈಕೆ ತನ್ನ ಮಾವ ಮಿಗಾರ ಎಂಬುವನನ್ನು ಬೌದ್ಧ ಧರ್ಮಕ್ಕೆ ಮತಾಂತರಿಸಿದಳು.
- ತನ್ನ 80ನೇ ವಯಸ್ಸಿನಲ್ಲಿ – ಉತ್ತರ ಪ್ರದೇಶದ ಗೋರಕ್ಪುರದ ಕುಶೀನಗರ / ಕುಶೀನಾರದಲ್ಲಿ ನಿಧನ (ನಿರ್ವಾಣ)

## ಗೌತಮ ಬುದ್ದನ ನಾಲ್ಕು ಸತ್ಯಗಳು (ತತ್ವಗಳು)

- ಜೀವನವು ದುಃಖಮಯ
- ಆಸೆ, ಲೋಭವೇ ದುಃಖಕ್ಕೆ ಕಾರಣ
- ಆಸೆ, ಲೋಭ ತೊರೆದರೆ ದುಃಖದ ನಿವಾರಣೆಯಾಗುತ್ತದೆ.
- ಆಸೆ, ಲೋಭ ತೊರೆಯಲು ಅಷ್ಟಾಂಗ ಮಾರ್ಗಗಳನ್ನು ಅನುಸರಿಸಬೇಕು.

## ಅಷ್ಟಾಂಗ ಮಾರ್ಗಗಳು (ಮಧ್ಯಮ ಮಾರ್ಗಗಳು)

- ಒಳ್ಳೆಯ ಯೋಚನೆ
- ಒಳ್ಳೆಯ ಮಾತು
- ಉತ್ತಮ ಜೀವನ
- ಉತ್ತಮ ವಿಚಾರಗಳ ನೆನಪು
- ಒಳ್ಳೆಯ ನಂಬಿಕೆ
- ಒಳ್ಳೆಯ ಪ್ರಯತ್ನ



downloaded from: www.kpscvaani.com

- ಯೋಗ್ಯ ರೀತಿಯ ಧ್ಯಾನ
- ಉತ್ತಮ ನಡತೆ

## ಬೌದ್ಧ ಧರ್ಮ ಪೋಷಿಸಿದ ಪ್ರಮುಖ ರಾಜರು

- ಬಿಂಬಸಾರ
- ಅಜಾತಶತ್ರು
- ಪ್ರಸೇನಜಿತ್(ಕೋಸಲ)
- ಅಶೋಕ
- ಕಾನಿಷ್ಕ
- ಹರ್ಷವರ್ಧನ ಮೊದಲಾದವರು

## ಮೊದಲನೇ ಬೌದ್ಧ ಸಮ್ಮೇಳನ

- ಬುದ್ದನ ನಿಧನಾನಂತರ ಕ್ರಿ.ಪೂ 487ರಲ್ಲಿ ರಾಜಗೃಹದಲ್ಲಿ ನಡೆಯಿತು.
- ದೇಶ ವಿದೇಶಗಳಿಂದ ಸುಮಾರು 500 ಬೌದ್ಧ ಸನ್ಯಾಸಿಗಳು ಭಾಗವಹಿಸಿದ್ದರು.
- ಆನಂದ, ಉಪಾಲಿ, ಸುಬಂಧು ಮೊದಲಾದ ಬುದ್ದನ ಶಿಷ್ಯಂದಿರು ಭಾಗವಹಿಸಿದ್ದರು.
- ಮಹಾ ಕಟ್ಟಡ ಅಧ್ಯಕ್ಷತೆಯಲ್ಲಿ ನಡೆಯಿತು.
- ಈ ಸಮ್ಮೇಳನದ ಉದ್ದೇಶ ಬುದ್ದನ ಉಪದೇಶಗಳನ್ನು ಸಂಕಲಿಸುವುದಾಗಿತ್ತು.
- ಸುತ್ತ ಪೀಟಕ ಮತ್ತು ವಿನಯ ಪೀಟಕಗಳು ಸಂಕಲನ ಆರಂಭವಾಯಿತು.

## 2ನೇ ಬೌದ್ಧ ಧರ್ಮ ಸಮ್ಮೇಳನ

- ಕ್ರಿ.ಪೂ 387ರಲ್ಲಿ ಮಗದದ ವೈಶಾಲಿಯಲ್ಲಿ ರೇವತರ ಅಧ್ಯಕ್ಷತೆಯಲ್ಲಿ ನಡೆಯಿತು.
- ವೈಶಾಲಿಯ ಸನ್ಯಾಸಿಗಳು ವಿನಯ ಪೀಟಕದಲ್ಲಿನ 10 ಅಂಶಗಳ ನಿಯಮಗಳ ಸಡಿಲಿಕೆಗೆ ಅಗ್ರಹಿಸಿದರು. ಆದರೆ ಕೆಲವರು ಇದನ್ನು ವಿರೋಧಿಸಿದರು. ಪರಿಣಾಮ ಬೌದ್ಧ ಸಂಘವು ಮೊದಲ ಬಾರಿಗೆ ಮಹಾಸಂಘಿಕರು (ನಿಯಮಗಳ ಸಡಿಲಿಕೆಗೆ ಆಗ್ರಹಿಸಿದವರು) ಮತ್ತು ಸ್ಥವಿರವಾದಿಗಳು (ಸಡಿಲಿಕೆ ವಿರೋಧಿಸಿದವರು) ಎಂದು ವಿಭಾಗವಾಯಿತು.


GNANADHARE IAS ACADEMY
downloaded from: www.kpscvaani.com

## 3ನೇ ಬೌದ್ಧ ಧರ್ಮ ಸಮ್ಮೇಳನ

- ಅಶೋಕನ ಆಶ್ರಯದಲ್ಲಿ ಪಾಟಲೀಪುತ್ರದಲ್ಲಿ ಕ್ರಿ.ಪೂ 234ರಲ್ಲಿ ನಡೆಯಿತು.
- ಬೌದ್ಧ ಧರ್ಮದ ವಿವಿಧ ಪಂಥಗಳಲ್ಲಿ ಏಕತೆ ತರುವ ಉದ್ದೇಶದಿಂದ ನಡೆಸಲಾಯಿತು.
- ಇದರ ಅಧ್ಯಕ್ಷ ಮೊಗ್ಗಲಿ ರಚಿತವಾಯಿತು.
- ಅಭಿದಮ್ಮ ಪೀಟಕ ರಚಿತವಾಯಿತು.

## 4ನೇ ಬೌದ್ಧ ಧರ್ಮ ಸಮ್ಮೇಳನ

- ಕ್ರಿ.ಶ 1ನೇ ಶತಮಾನದಲ್ಲಿ ಕಾನಿಷ್ಕನ ಕಾಲದಲ್ಲಿ ಕಾಶ್ಮೀರದ ಶ್ರೀನಗರದ ಬಳಿ ಕುಂಡಲಿವನದಲ್ಲಿ ನಡೆಯಿತು.
- ಉದ್ದೇಶ – ಕಾಶ್ಮೀರ ಮತ್ತು ಗಾಂಧಾರದ ಸರ್ವಸ್ಥಿವಾದಿಗಳ ಗುರುಗಳಲ್ಲಿದ್ದ ಭಿನ್ನಾಭಿಪ್ರಾಯಗಳನ್ನು ಚರ್ಚಿಸಲು ಸೇರಿದ್ದಿತು.
- ಹೀನಯಾನ ಮತ್ತು ಮಹಾಯಾನ ಎಂಬ ಎರಡು ಪಂಥಗಳಾಗಿ ಬೌದ್ಧ ಧರ್ಮ ವಿಭಜನೆಯಾಯಿತು.
- ತ್ರಿಪಿಟಕಗಳ ಮೇಲೆ ಮಹಾವಿಭಾಷ ಅಥವಾ ಮಹಾಭಾಷ್ಯ ರಚಿಸಲಾಯಿತು.

## ಬೌದ್ಧ ಧರ್ಮದ 2 ಪಂಥಗಳು

**1. ಹೀನಯಾನ**

- ಬುದ್ಧನು ಬೋಧಿಸಿದ ತತ್ವಗಳನ್ನು ಚಾಚು ತಪ್ಪದೆ ಪಾಲಿಸಿಕೊಂಡು ಹೋಗುತ್ತಿದ್ದ ಪಂಥ.
- ಬುದ್ಧನನ್ನು ವಿಗ್ರಹ ರೂಪದಲ್ಲಿ ಆರಾಧಿಸುತ್ತಿರಲಿಲ್ಲ. ಬದಲಾಗಿ ಬುದ್ಧನ ಅವಶೇಷಗಳನ್ನು ಮಾತ್ರ ಪೂಜಿಸುತ್ತಿದ್ದರು.
- ಪಾಳಿಯ ಹೀನಯಾನಿಗಳ ಪ್ರಧಾನ ಭಾಷೆಯಾಗಿತ್ತು.

**2. ಮಹಾಯಾನ:**

- ಇವರು ಬುದ್ಧನನ್ನು ದೇವರೆಂದು ಪರಿಗಣಿಸಿ ವಿಗ್ರಹ ರೂಪದಲ್ಲಿ ಪೂಜಿಸಲಾರಂಭಿಸಿದರು.
- ಕಾನಿಷ್ಕನ ಕಾಲದಲ್ಲಿ ಈ ಪಂಥ ಜನಪ್ರಿಯವಾಯಿತು.



downloaded from: www.kpscvaani.com

- ಮಹಾಯಾನಿಗಳು ಪಾಳಿ ಭಾಷೆಗೆ ಬದಲು ಸಂಸ್ಕೃತದಲ್ಲಿ ಕೃತಿ ರಚಿಸಿದರು.

## ಸಂಘಟಕರು:–

- ಅಜಾತಶತ್ರು (1ನೇ ಬೌದ್ದ ಧರ್ಮದ ಸಮ್ಮೇಳನ)
- ಕಾಲಾಶೋಕ (2ನೇ ಬೌದ್ಧ ಧರ್ಮದ ಸಮ್ಮೇಳನ)
- ಅಶೋಕ (3ನೇ ಬೌದ್ಧ ಧರ್ಮದ ಸಮ್ಮೇಳನ)
- ಕಾನಿಷ್ಕ (4ನೇ ಬೌದ್ಧ ಧರ್ಮದ ಸಮ್ಮೇಳನ)

## ಇತರೆ ಅಂಶಗಳು

- ಬೌದ್ಧ ಧರ್ಮ (ಗೌತಮಬುದ್ದ) ದೇವರ ಅಸ್ತಿತ್ವದ ಬಗ್ಗೆ ಏನನ್ನೂ ಹೇಳಿಲ್ಲ.
- ಬೌದ್ಧ ಧರ್ಮ ಪುನರ್ ಜನ್ಮದಲ್ಲಿ ನಂಬಿಕೆ ಇಟ್ಟಿತ್ತು.
- ಅಶೋಕನು ಬೌದ್ಧ ಧರ್ಮದ ಸಾರಾಂಶಗಳನ್ನು ಶಿಲಾಶಾಸನಗಳಲ್ಲಿ ಕೆತ್ತಿಸಿ, ದೇಶದ ವಿವಿಧ ಮೂಲೆಗಳಲ್ಲಿ ನಡೆಸಿದ್ದರಿಂದ ದೇಶಾದ್ಯಂತ ಈ ಧರ್ಮವು ಹಬ್ಬಿತು. ಹಾಗೆಯೇ ವಿದೇಶಗಳಲ್ಲಿ ಹಬ್ಬಲು ಅಶೋಕ ಕಾರಣಕರ್ತನಾದ.
- ಕಾನಿಷ್ಕನ ಕಾಲದಲ್ಲಿ ಈ ಧರ್ಮವಾಯುವ್ಯ ಭಾರತ, ಅಫ್‌ಘಾನಿಸ್ಥಾನದಲ್ಲಿ ಪ್ರಸಾರವಾಯಿತು.
- ಕಾಶ್ಯಪ ಮಾತಂಗನು ಬೌದ್ಧ ಗ್ರಂಥಗಳನ್ನು ಚೀನಿ ಭಾಷೆಗೆ ಭಾಷಾಂತರಿಸುವುದರ ಮೂಲಕ ಕ್ರಿ.ಶ 1ನೇ ಶತಮಾನದಲ್ಲಿ ಚೀನಾದಲ್ಲಿ ಬೌದ್ಧ ಧರ್ಮ ಪ್ರಸಾರವಾಗಲು ಕಾರಣವಾದನು.
- ಕ್ರಿ.ಶ.6ನೇ ಶತಮಾನದಲ್ಲಿ ಜಪಾನ್ ಮತ್ತು ಕ್ರಿ.ಶ 7ನೇ ಶತಮಾನದಲ್ಲಿ ಟಿಬೆಟ್‌ಗೆ ಬೌದ್ಧ ಮತ ಪ್ರಸಾರವಾಯಿತು.
- ನಳಂದ ವಿಕ್ರಮಶೀಲ, ಓದಂತಪುರಿ ಇವು ಬೌದ್ಧ ವಿವಿಗಳು.
- ಸರ್ ಎಡ್ವಿನ್ ಅರ್ನಾಲ್ಡ್‌ರವರು ಬುದ್ದನನ್ನು “ಏಷ್ಯಾದ ಜ್ಯೋತಿ” ಎಂದು ವರ್ಣಿಸಿದ್ದಾರೆ.


downloaded from: www.kpscvaani.com

## ಮಹಾಜನ ಪದಗಳು ಮತ್ತು ಗಣರಾಜ್ಯಗಳು

### 16 ಮಹಾಜನ ಪದಗಳು ಮತ್ತು ಅವುಗಳ ರಾಜಧಾನಿಗಳು

- ಕಾಶಿ–ಬನಾರಸ್ (ವಾರಣಾಸಿ)
- ಕೋಸಲ – ಅಯೋಧ್ಯೆ ನಂತರ ಶ್ರಾವಸ್ಥಿ
- ಅಂಗ–ಚಂಪಾ
- ಮಗಧ–ಗಿರಿವಜ್ರ / ರಾಜಗೃಹ ನಂತರ ಪಾಟಲಿಪುತ್ರ
- ಮಲ್ಲ – (ಮಾಳವ) – ಕುಶಿನಾರ ಮತ್ತು ಪವ
- ವೃಜ್ಜಿ (ವಜ್ಜಿ) – ವೈಶಾಲಿ
- ಚೇದಿ – ಸುಕ್ತಿಮತಿ
- ವತ್ಸ (ವಮ್ಸ)– ಕೋಸಂಬಿ
- ಕುರು – ಇಂದ್ರಪ್ರಸ್ಥ
- ಪಾಂಚಾಲ – ಕಾಂಪಿಲ್ಯ
- ಮತ್ಸ್ಯ – ವಿರಾಟನಗರ
- ಶುರಸೇನಿ – ಮಥುರ
- ಅಸ್ಮಾಕ – ಪೊತಾಲಿ / ಪೊತಾನ್
- ಆವಂತಿ – ಉಜ್ಜೇಯಿನಿ ಮತ್ತು ಮಹಿಸ್ಮತಿ
- ಗಾಂಧಾರ – ತಕ್ಷಶಿಲ
- ಕಾಂಬೋಜ – ರಾಜಪುರ

### ಬೌದ್ಧ ಸಾಹಿತ್ಯದಲ್ಲಿ ಕಂಡುಬರುವ 10 ಗಣರಾಜ್ಯಗಳು

- ಕಪಿಲವಸ್ತುವಿನ ಶಾಕ್ಯರು
- ಪವದ ಮಲ್ಲರು
- ವಸಾಲಿಯ ನಾಯರು / ಜ್ಞಾತ್ರಿಕರು
- ಮಿಥಿಲದ ವಿದೇಹರು



GNANADHARE IAS ACADEMY
downloaded from: www.kpscvaani.com

- ಹುಸಿನಾರದ ಮಲ್ಲರು
- ಸಮ ಸುಮಾ ಬೆಟ್ಟಗಳ ಭಗ್ಗರು
- ಕೆಸಪಟ್ಟದ ಕೆಳಮಾರುಗಳು
- ವೈಶಾಲಿಯ ಲಿಚ್ಛವಿಗಳು
- ಅಲ್ಲಕಪ್ಪದ ಬುಲ್ಲಿಯರು
- ಪಿಪ್ಪಲಿವನದ ಮೌರ್ಯರು

## ಯೇಸುಕ್ರಿಸ್ತ ಮತ್ತು ಕ್ರೈಸ್ತಮತ

ಇಂದು ಜಗತ್ತಿನಲ್ಲಿ ವ್ಯಾಪಕವಾಗಿ ಪ್ರಚಲಿತವಾಗಿರುವ ಮತಗಳಲ್ಲಿ ಕ್ರೈಸ್ತ ಮತ್ತು ಇಸ್ಲಾಂ ಮತಗಳನ್ನು ಹೆಸರಿಸಬಹುದು. ಇವುಗಳೆರಡರ ಮೂಲವು ಯಹೂದಿ ಮತ. (ಜುಡೇಯಿಸ್ಟ್)ದಿಂದ ಮೂಡಿದ್ದು, ಜೈಬಲಿನ 'ಹಳೆಯ ಒಡಂಬಡಿಕೆ (ಓಲ್ಡ್ ಟೆಸ್ಟ್‌ಮೆಂಟ್) ಕ್ರೈಸ್ತರಿಗೂ ಮುಸಲ್ಮಾನರಿಗೂ ಮಾನ್ಯವಾದ ಪವಿತ್ರ ಗ್ರಂಥ

ಯಹೂದಿಗಳ ಜುಡೀಯ (ಇಂದಿನ ಇಸ್ರೇಲ್) ನಲ್ಲಿ ಕ್ರಿ.ಪೂ 1000 ಕ್ಕೂ ಹಿಂದಿನಿಂದ ನೆಲೆ ಅವರ ಪ್ರಸಿದ್ಧ ಅರಸ ಡೇವಿಡ (ದಾವುದ) ಜೆರುಸಲೆಂ ಅನ್ನು ರಾಜಧಾನಿಯಾಗಿ ಮಾಡಿಕೊಂಡು ತನ್ನ ಆಡಳಿತ ಆರಂಭಿಸಿದ, ಅನೇಕ ಪ್ರವಾದಿಗಳು ಬೋಧಿಸಿದಂತೆ ಅವರು ಯಾವೆ(ಯಹೋವ) ಎಂಬ ಒಬ್ಬರೇ ದೇವರನ್ನು ನಂಬಿದವರು ಮೂರ್ತಿಪೂಜೆಯನ್ನು ಖಂಡಿಸಿದವರು. ಹತ್ತು ಆದೇ (ಟೆನ್ ಕಮಾಂಡ್‌ಮೆಂಟ್ಸ್) ಗಳೆಂಬ ತತ್ವಗಳಲ್ಲಿ ಅವರ ಧರ್ಮ ಅಡಕವಾಗಿದೆ. 'ಹಳೆಯ ಒಡಂಬಡಿಕೆ'ಯ 39 ಪುಸ್ತಕಗಳಲ್ಲಿ ಅವರ ಪ್ರವಾದಿಗಳ ಜೀವನ ವಿವರ, ಬೋಧನೆ ಹಾಗೂ ಧಾರ್ಮಿಕ ಅನುಭವಗಳನ್ನು ವಿವರಿಸಲಾಗಿದೆ. ಅಬ್ರಹಾಂ (ಇಬ್ರಾಹಿಂ) ಮೋಸೆಸ್ (ಮೂಸ) ಐಸಾಯ ಮುಂತಾದ ಗಣ್ಯ ನಾಯಕರ ಸಾಧನೆಗೆ ವಿವರ ಅದರಲ್ಲಿದೆ. ಮುಸಲ್ಮಾನರೂ ಕೂಡ ಇವರನ್ನು ತಮ್ಮ ಪೂರ್ವಜರೆಂದು ನಂಬುತ್ತಾರೆ. (ಕಂಸದಲ್ಲಿ ಕೊಟ್ಟದ್ದು ಅರೆಬಿಕ್ ಹೆಸರುಗಳು)

### ಯೇಸುವಿನ ಜೀವನ:

ಇಂಥ ಹಿನ್ನೆಲೆಯಲ್ಲಿ ಯಹೂದಿ ಕುಟುಂಬ ಒಂದರಲ್ಲಿ ಯೇಸು (ಜೀಸಸ್) ಜುಡೀಯದ ಬೆತ್ಲಹಂ ಎಂಬಲ್ಲಿ ಮೇರಿಯ ಮಗನಾಗಿ ಜನಿಸಿದರು. ಅವರ ಆರಂಭದ ಜೀವನದ ಬಗ್ಗೆ ವಿವರಗಳು ತಿಳಿಯದು "ದೇವಪುತ್ರರು ನಿನ್ನ ಹೊಟ್ಟೆಯಲ್ಲಿ ಅವತರಿಸುವರು" ಎಂದು ಮೇರಿಗೆ ದೇವದೂತ ಗೇಬ್ರಿಯಲ್ ತಿಳಿಸಿದರೆಂದು ನಂಬಿಕೆ. ಕ್ರಿಸ್ತಶಕ (ಎ.ಡಿ. ಅನ್ನೊಡೊಮಿನಿ) ದೇವರ ವರ್ಷ 30 ರಿಂದ 33 ನಡುವೆ ಅವರು ತಮ್ಮ ಭೋದನೆಗಳನ್ನು ನಡೆಸಿದರು. ಅದರೆ ಬಹುಶಃ ಅವರು ಜನಿಸಿದ್ದು ಕ್ರಿ.ಪೂ 4 ರಲ್ಲಿ ಈಗಿನ ಎಣಿಕೆಯ ಕ್ರಿಸ್ತಶಕ ಅವರ ಜನ್ಮದಿಂದ ಆರಂಭವಾಯಿತೆಂದು ನಂಬಿಕೆ ಕ್ರಿಸ್ತ ಶಕೆ (ಎ.ಡಿ) ಯ ಹಿಂದಿನದನ್ನು ಬಿಫೋರ್ ಕ್ರೈಸ್ಟ್



downloaded from: www.kpscvaani.com

(ಬಿ.ಸಿ) ಕ್ರಿಸ್ತ ಪೂರ್ವ ಎಂದು ಹೇಳುತ್ತೇವೆ ಅನೇಕ ಪವಾಡಗಳನ್ನು ಯೇಸು ನಡೆಸಿದರೆಂದು ಹೇಳಲಾಗುತ್ತದೆ. ಅವರು ನೀರನ್ನು ದ್ರಾಕ್ಷಾಮಧ್ಯವಾಗಿ ಪರಿವರ್ತಿಸಿದರು. ಅನೇಕರ ರೋಗ, ವಿಕಲಾಂಗತೆಗಳನ್ನು ನಿವಾರಿಸಿದರು, ಐದು ರೊಟ್ಟಿಗಳಿಂದ 5000 ಜನ ಉಂಡು ತೇಗುವಂತೆ ಮಾಡಿದರು. ಕ್ರೈಸ್ಟ್ ಎಂಬ ಪದದ ಅರ್ಥ 'ಉದ್ದಾರಕ' (ಹೀಬ್ರೂ ಭಾಷೆಯ 'ಮೆಸ್ಸಿಯ') ಗ್ರೀಕ್ ಭಾಷೆಯ ಕ್ರಿಸ್ತೋಸ್ ನಿಂದ ಅದು ಬಂದಿದೆ.

## ಬೋಧನೆಗಳು:

ಯಹೂದಿಗಳ "ಹತ್ತು ಆದೇಶ"ಗಳಿಗನುಗುಣವಾಗಿ ಯೇಸುವಿನ ಬೋಧನೆಗಳಿದ್ದವು. ಹಿಂಸೆಯನ್ನು ಅವರು ಖಂಡಿಸಿದರು. ಸ್ವಾರ್ಥಪರತೆಯನ್ನು ವಿರೋಧಿಸಿದರು. ಇತರರಿಗೆ ಸೇವೆ ಮಾಡುವ ಪ್ರತಿಯೊಬ್ಬರ ಕರ್ತವ್ಯವನ್ನು ಒತ್ತಿ ಹೇಳಿದರು. ಮಾನವರು ತಮ್ಮ ಪಾಪಗಳಿಗೆ ಪಶ್ಚಾತ್ತಾಪಪಟ್ಟು ಹೊಸ ಶುದ್ಧಜೀವನ ಆರಂಭಿಸಬೇಕೆಂದು ಬೋಧಿಸಿದರು. ಈ ಭೂಮಿಯಲ್ಲಿ ದೇವರ ರಾಜ್ಯ ಸ್ಥಾಪನೆಯಾಗಲು ಇಂಥ ಪಾಪಗಳಿಂದ ಬಿಡುಗಡೆ ಅವಶ್ಯವೆಂದು ಅವರು ತಿಳಿಸಿದರು. ದೇವರು ಎಲ್ಲರ ತಂದೆಯೆಂದು ವಿವರಿಸಿದರು. ದೇವರನ್ನು ಜನರಿಗೆ ಇಷ್ಟೊಂದು ಹತ್ತಿರಕ್ಕೆ ತಂದ ವಿಚಾರ ಯಹೂದಿಯರಿಗೆ ತೀರ ಹೊಸ ಸಂಗತಿ ಯಹೂದಿ ಜಾತಿಗೆ ಬಾಹಿರವಾದ (ಹೊರದೊಡಲ್ಪಟ್ಟ) 'ಜಂಟೈಲ್' ಎಂಬ ಜನರಿಗೆ ಹಾಗೂ ಮಹಿಳೆಯರಿಗೆ ಅವರೂ ಅವರ ಶಿಷ್ಯರೂ ನೆರವಾದರು.

ಯೇಸುವಿನ ಈ ವರ್ತನೆ ಹಾಗೂ ದೇವರನ್ನು ತಂದೆಯೆಂದು ಕರೆದ ರೀತಿ ಯಹೂದಿಯರ ವಿರೋಧಕ್ಕೆ ಕಾರಣವಾಗಿತ್ತು. ಮಹಿಳೆಯರ ಬಗ್ಗೆ ಅವರು ತೋರಿದ ಗೌರವ ಮತ್ತು 'ಸಮರಿಟನ್'ರೆಂಬ ಒಂದು ಅಲ್ಪಸಂಖ್ಯಾತರ ವರ್ಗಕ್ಕೆ ಅವರು ತೋರಿದ ಅನುಕಂಪ ಯಹೂದಿಯರ ಸಿಟ್ಟಿಗೆ ಕಾರಣವಾಯಿತು. 'ಸಮರಿಟನ್'ರನ್ನು ಯಹೂದಿಗಳು ತಿರಸ್ಕಾರದಿಂದ ಕಾಣುತ್ತಿದ್ದರು. ಗ್ಯಾಲೀಲಿ , ಜುಡೀಯಗಳಲ್ಲಿ ಅವರ ಅನುಯಾಯಿಗಳು ಹೆಚ್ಚಿದಂತೆ ಶತ್ರುಗಳೂ ಹೆಚ್ಚಿದರು.

ಬೋಧಕರಾಗಿ ಕಾಲಕ್ರಮೇಣ ಅವರು ಜೆರುಸಲೆಂಗೆ ತೆರಳಿದರು. 'ದೇವರರಾಜ್ಯ'ದ ಬಗ್ಗೆ ಮಾತನಾಡುವ ಈ ವ್ಯಕ್ತಿ ತಮಗೆ ರೋಮನ್ ಆಡಳಿತದಿಂದ ರಾಜಕೀಯ ಮುಕ್ತಿ ನೀಡುವನೆಂದು ಅಲ್ಲಿನ ಯಹೂದಿಗಳು ಭಾವಿಸಿ ಅವನನ್ನು ಸ್ವಾಗತಿಸಿದರು. ಆಗ ಅವರ ವಾಸದ ನಾಡಾದ ಪ್ಯಾಲೆಸ್ಟೈನ್ ರೋಮನ್ನರ ಸಾಮ್ರಾಜ್ಯದ ವಶದಲ್ಲಿ ಇತ್ತು. ಆದರೆ ಯೇಸುವಿನ 'ರಾಜ್ಯ'ದ ಕಲ್ಪನೆ ಇ'ಲ್ಲವೆಂದು ತಿಳಿದಾಗ ಅವರು ಯೇಸುವನ್ನು ವಿರೋಧಿಸಿದರು. ರೋಮನ್ ಅಧಿಕಾರಿಗಳು ಅವರನ್ನು ಬಂಧಿಸುವಂತೆ ಮಾಡಿದರು. ಅವರು ದೈವದ್ರೋಹಿ ಎಂದು ದೂರಿದರು. ಯೇಸುವನ್ನು ಮರಣದಂಡನೆಗೆ ಒಳಪಡಿಸಿ ಇಬ್ಬರು ಕಳ್ಳರ ಮಧ್ಯದಲ್ಲಿ 'ಶಿಲುಬೆ'ಯ ಮೇಲೆ ಶಿಕ್ಷಿಸುವ ದಂಡನೆ ನೀಡಿದರು. ಈ ಶಿಕ್ಷೆಗಾಗಿ ಯೇಸು ಪ್ರತಿಭಟನೆ ತೋರಲಿಲ್ಲ ಶಿಕ್ಷಿಸುವವರನ್ನು ಕ್ಷಮಿಸೆಂದು ದೇವರನ್ನು ಪ್ರಾರ್ಥಿಸಿದರು.



downloaded from: www.kpscvaani.com

## ಕ್ರೈಸ್ತ ಮತಪ್ರಸಾರ:–

ಶಿಲುಬೆಯ ಮೇಲೆ ಮರಣ ಹೊಂದಿದ ಯೇಸುವನ್ನು ಸಮಾಧಿ ಮಾಡಿದರು. ಆದರೆ ಮೂರು ದಿನಗಳ ನಂತರ ಕಂಡಾಗ ಅವರ ದೇಹ ಸಮಾಧಿಯಲ್ಲಿ ಇರಲಿಲ್ಲ. ಯೇಸುವಿನ ಪುನರುತ್ಥಾನವಾಯಿತೆಂದೂ ಎಷ್ಟೋ ಶಿಷ್ಯರಿಗೆ ಅವರು ಮತ್ತೆ ಕಾಣಿಸಿಕೊಂಡರೆಂದೂ ಅನೇಕರು ನಂಬಿದ್ದರು. ಅವನ ಬೋಧನೆಗಳನ್ನು ಪ್ರಚಾರ ಮಾಡಲು ಪ್ರೇರಣೆ ಪಡೆದರು. ಪ್ಯಾಲೆಸ್ಟೈನ್‌ನಲ್ಲಿನ ಯಹೂದಿಗಳು ಹೊಸಧರ್ಮಕ್ಕೆ ಅಷ್ಟಾಗಿ ಸೇರದಿದ್ದರೂ. ಗ್ರೀಸ್‌ನ ಪ್ರಭಾವಕ್ಕೆ ಒಳಗಾದ ಏಷ್ಯಾಮೈನರ್ ಮತ್ತು ಗ್ರೀಸ್‌ನಲ್ಲಿದ್ದ ಯಹೂದಿಗಳು ಹೊಸಮತವನ್ನು ಸ್ವೀಕರಿಸಿದರು. ಅವರ 12 ಶಿಷ್ಯರಲ್ಲಿ ಒಬ್ಬನಾದ ಪೀಟರ್ ರಾಜಧಾನಿ ರೋಮ್‌ಗೆ ಹೋಗಿ ಅಲ್ಲಿ ಮರಣದಂಡನೆಗೆ ಒಳಗಾದನು.

ಮುಂದೆ ಕಟ್ಟಾ ಯಹೂದಿಯಾದ ಪೌಲ್ ಎಂಬಾತ ಕೆಲವು ಪವಾಡಗಳಿಂದಾಗಿ ಯೇಸುವಿನ ಭಕ್ತನಾದನೆಂದು ನಂಬಿಕೆ. ಈ ಕ್ರೈಸ್ತ ಮತವನ್ನು ಉತ್ಸಾಹದಿಂದ ಪ್ರಚಾರ ಮಾಡಿದರು. ಯಹೂದಿಗಳಲ್ಲದವರನ್ನೂ ಹೊಸಮತಕ್ಕೆ ಸೇರಿಸಿದರು. ಯೇಸುವು ದೇವರಪುತ್ರರಾಗಿದ್ದು ಮಾನವರ ಪಾಪಗಳ ನಿವಾರಣೆಗಾಗಿ ಪ್ರಾಣತೆತ್ತರೆಂದು ಪೌಲ್ ಬೋಧಿಸಿದರು. ದೀರ್ಘಕಾಲ ರೋಮ್‌ನಲ್ಲಿ ಪ್ರಚಾರ ಮಾಡಿದ ಪೌಲ್ ಕೂಡ ಮರಣದಂಡನೆಗೆ ಒಳಗಾದರು(ಕ್ರಿ.ಶ 65) ಆದರೆ ರೋಮನ್ ಸಾಮ್ರಾಜ್ಯದ ಎಲ್ಲೆಡೆ ಕ್ರೈಸ್ತ ಸಮುದಾಯಗಳು ಕಾಣಿಸಿಕೊಂಡಿದ್ದವು ರೋಮನ್ ಸಾಮ್ರಾಜ್ಯ ಕ್ರೈಸ್ತ ಮತೀಯರನ್ನು ರೀತಿಯಲ್ಲಿ ಹಿಂಸೆಗೆ ಒಳಪಡಿಸಿತು.

ಆದರೆ ಕ್ರಿ.ಶ 311 ರಲ್ಲಿ ರೋಮನ್ ಸಾಮ್ರಾಟ ಕಾನ್‌ಸ್ಟಂಟೈನ್ ತಾನೇ ಈ ಕ್ರಿಸ್ತಮತ ಸ್ವೀಕರಿಸಿದ. ಇದನ್ನು ಇಡೀ ಸಾಮ್ರಾಜ್ಯದ ಮತವೆಂದು ಮರುವರ್ಷ ಸಾರಿದ ರೋಮನ್ ನಗರವು ಕ್ರಿಶ್ಚಿಯನ್ನರ ಕೇಂದ್ರವಾಗಿ ಪೋಪರು ಅವರ ಶ್ರೇಷ್ಠ ಗುರು ಮತ್ತು ನಾಯಕರಾದರು.

ಮ್ಯಾಥ್ಯು, ಮಾರ್ಕ್, ಲೂಕ್ ಮತ್ತು ಜಾನ್ ಎಂಬ ಕ್ರಿಸ್ತಾನುಯಾಯಿಗಳು ಬರೆದ ಪುಸ್ತಕಗಳನ್ನು ಸುವಾರ್ತೆ ಎಂದು ಕರೆಯಲ್ಪಟ್ಟು, ಇವುಗಳೊಟ್ಟಿಗೆ ಪ್ರಥಮ ಕ್ರೈಸ್ತರು ಬರೆದ ಪತ್ರಗಳು 'ಹೊಸ ಒಡಂಬಡಿಕೆ' ಎಂಬ ಬೈಬಲಿನ ಭಾಗವಾಯಿತು.

ಕ್ರೈಸ್ತ ಮತದ ಪ್ರಚಾರಕ ಬ್ರಹ್ಮಚಾರಿಗಳು ಯುರೋಪ್‌ನಲ್ಲೆಲ್ಲ ಈ ಧರ್ಮವನ್ನು ಬಲಗೊಳಿಸಿದರು. ಶಿಕ್ಷಣ ರೋಗಪರಿಹಾರ (ವೈದ್ಯಕೀಯ) ಸೇವೆಗಳಲ್ಲಿ ದುಡಿದರು. ದೀನರ, ಬಡವರ ಸೇವೆಯಿಂದ ತಮ್ಮ ಮತವನ್ನು ಹರಡಿದರು. ರೋಮನ್ ಸಾಮ್ರಾಜ್ಯದ ನಾಶಕ್ಕೆ ಕಾರಣರಾದ ಕ್ರೂರ ಬರ್ಬರ ಜನಾಂಗಗಳನ್ನು ಮತಾಂತರಿಸಿದರು. ರೋಮನ್ ಸಾಮ್ರಾಜ್ಯ ನಾಶವಾದರೂ ಕ್ರೈಸ್ತ ಧರ್ಮ ಮತ್ತು ಲ್ಯಾಟಿನ್ ಭಾಷೆ ಯೂರೋಪಿನ ಸಾಂಸ್ಕೃತಿ ಐಕ್ಯತೆ ಕಾರಣವಾಯಿತು. ಪೋಪ್ ಕ್ರೈಸ್ತ ಜಗತ್ತಿನ ಮುಖಸ್ಥರೆನಿಸಿದರು. ಯೂರೋಪಿನ ದೇಶದ ರಾಜರೆಲ್ಲ ಪೋಪರಿಗೆ ತಲೆಬಾಗುತ್ತಿದ್ದರು. ಆರ್ಚ್ ಬಿಷಪ್, ಮತ್ತು ಪ್ರತೀ ಚರ್ಚ್(ದೇವಾಲಯ)ನ ಯಾಚಕರ (ಪಾದ್ರಿ) ಆಡಳಿತಕ್ಕೆ ಒಳಗೊಂಡ ಧರ್ಮಕ್ಷೇತ್ರಗಳಿಂದ ಚರ್ಚ್‌ನ ಪ್ರಭಾವ ವ್ಯಾಪಿಸಿತು.

ಎರಡು ಸಂಪ್ರದಾಯದ ರೋಮನ್ ಸಾಮ್ರಾಜ್ಯ ಒಡೆದು ಕಾನ್ಸ್‌ಟಾಂಟಿನೋಪಲ್ ಕೇಂದ್ರವಾಗಿದ್ದ ಪೂರ್ವದ ರೋಮನ್ ಸಾಮ್ರಾಜ್ಯ ಐದನೆಯ ಶತಮಾನದಿಂದ ರೂಪುತಾಳಿತು. ಕಾನ್ಸ್‌ಟಾಂಟಿನೋಪಲ್‌ನಲ್ಲಿ



downloaded from: www.kpscvaani.com

'ಪೆಟ್ರಿಯಾರ್ಕ್ ಎಂಬ ಆ ಭಾಗದ ಚರ್ಚ್‌ನ ಮುಖ್ಯಸ್ಥರಿದ್ದರು. ಕ್ರಿ.ಶ. 1054 ರಲ್ಲಿ ಪೋಪ್ ಮತ್ತು ಪೆಟ್ರಿಯಾರ್ಕ್‌ರಲ್ಲಿ ಭಿನ್ನಾಭಿಪ್ರಾಯ ತೋರಿ ಚರ್ಚ್‌ನಲ್ಲೂ ಒಡಕಾಯಿತು. ರೋಮ್‌ನಲ್ಲಿ ಇರುವ ಚರ್ಚ್ ರೋಮನ್ ಕ್ಯಾಥಲಿಕ್ ಎನಿಸಿತು. (ಕ್ಯಾಥಲಿಕ್ ಎಂದರೆ ಸರ್ವಮಾನ್ಯ ಎಂದು ಅರ್ಥ) ಪೂರ್ವದ ಭಾಗದ ಚರ್ಚ್ ಅರ್ಥಡಾಕ್ಸ್ (ಎಂದರೆ ಸಾಂಪ್ರದಯಿಕ) ಎಂದು ಪರಿಚಿತವಾಯಿತು.

ಕ್ರಿಸ್ತಮತದಲ್ಲಿ ವಿವಿಧ ಸನ್ಯಾಸಿ ಪಂಥಗಳು ಉದವಾಗಿ ಯುರೋಪ್‌ನಲ್ಲಿ ಅವುಗಳು ಸ್ಥಾಪಿಸಿದ ಆಶ್ರಮಗಳು ಜ್ಞಾನಾರ್ಜನೆ, ಕಲೆ ಶಿಕ್ಷಣ, ಋಗ್ಣಸೇವೆ ಮುಂತಾದ ಚಟುವಟಿಕೆಗಳ ಕೇಂದ್ರಗಳಾದವು ಇವುಗಳಲ್ಲಿ ಸಂತ ಬೆನೆಡಿಕ್ಟ್ ಆರಂಭಿಸಿದ ಬೆನೆಡಿಕ್ಟಿಯನ್ ಸನ್ಯಾಸಿ ಪಂಥ ಮೊದಲನೆಯದು. ಫ್ರಾನ್ಸಿಸ್ಕನ್, ಡೊಮಿನಿಕನ್, ಕಾರ್ಮೆಲೈಟ್ಸ್ ಇವೆಲ್ಲ ಮುಂದೆ ಬಂದ ಇನ್ನೂ ಕೆಲವು ಪಂಥಗಳು, ಪೋಪರಿಗೆ ವಿಧೇಯರಾಗಿ ಈ ಪಂಥದ ಸನ್ಯಾಸಿಗಳು ಮತಪ್ರಸಾರ, ಸೇವಾಕಾರ್ಯಗಳಲ್ಲಿ ತೊಡಗಿದರು. ಇದೇ ರೀತಿ ಸನ್ಯಾಸಿಯರ ಪ್ರತ್ಯೇಕ ಪಂಥಗಳು ಬೆಳೆದವು ಕ್ರಿಸ್ತಮತ ಜಗತ್ತಿನಲ್ಲಿ ಅತೀ ಹೆಚ್ಚು ಅನುಯಾಯಿಗಳನ್ನು ಹೊಂದಿದೆ. ಸುಂದರ ಭವ್ಯ ಚರ್ಚ್‌ಗಳ ರಚನೆ, ಯೇಸುವಿನ ಜೀವನದ ಮೂರ್ತಿ ಮತ್ತು ವರ್ಣ ಚಿತ್ರಗಳಿಂದ ಅವುಗಳ ಅಲಂಕರಣ, ಚರ್ಚ್‌ನ ಸಂಗೀತ ಇವುಗಳಿಂದ ಅಪಾರ ಸಾಂಸ್ಕೃತಿಕ ಸಾಧನೆ ಈ ಮತದಿಂದ ಆಯಿತು.

ಕ್ರೈಸ್ತರಲ್ಲಿ ಮುಂದೆ ವಿಭಜನೆಯಾಗಿ 'ಪ್ರಾಟೆಸ್ಟೆಂಟ್' ಪಂಥ ಉದಿಸಿತು. ಈ ಎರಡು ಪಂಥಗಳ ನಡುವಿನ ವೈಷಮ್ಯಗಳಿಂದ ಯುರೋಪ್‌ನಲ್ಲಿ ಅನೇಕ ಯುದ್ದಗಳು ರಕ್ತಪಾತಗಳೂ ಆದವು. ಈ ಬಗ್ಗೆ ಮುಂದೆ ತಿಳಿಯುವಿರಿ.

## ಮೊಹಮ್ಮದ್ ಪೈಗಂಬರರು ಮತ್ತು ಇಸ್ಲಾಂಮತ

ಅರೇಬೀಯಾದ ಪವಿತ್ರ ಮೆಕ್ಕಾ ನಗರದಲ್ಲಿ ಜನಿಸಿದ ಮೊಹಮ್ಮದ್ ಪೈಗಂಬರರು ಇಸ್ಲಾಂನ ಪ್ರವರ್ತಕರು. ಅವರೇ ತಮ್ಮ ಕೊನೆಯ ಪ್ರವಾದಿಯೆಂದು ಮುಸಲ್ಮಾನರು ನಂಬುತ್ತಾರೆ. ಹಳೆಯ ಒಡಂಬಡಿಕೆಯಲ್ಲಿ ಉಲ್ಲೇಖಿತವಾದ ಇಬ್ರಾಹಿಂ (ಅಬ್ರಹಾಂ) ನ ಇಬ್ಬರು ಪತ್ನಿಯರಲ್ಲಿ ಹಿರಿಯ ಪತ್ನಿ ಸಾರಾಳ ಮಗ ಐಸಾಕ್‌ನ ವಂಶಜರು ಯಹೂದಿಗಳೆಂದೂ ಕಿರಿಯ ಪತ್ನಿ ಹಾಜರಾಳ ಮಗ ಇಸ್ಮಾಯಿಲ್‌ನ ವಂಶಸ್ಥರು ಅರಬ್ಬರೆಂದೂ ಕಥನಗಳಿವೆ. ಈ ಇಬ್ರಾಹಿಂ ಮತ್ತು ಇಸ್ಮಾಯಿಲರು ಮೆಕ್ಕಾದಲ್ಲಿರುವ ಪವಿತ್ರ ಕಾಬಾದ ರಚನೆ ಮಾಡಿದರೆಂದು ನಂಬಿಕೆ.

ಅರೇಬಿಯಾ ಒಂದು ವಿಶಾಲವಾದ ಪ್ರದೇಶ, ಮಳೆಯಿಲ್ಲದೆ ಕೃಷಿಗೆ ಅಲ್ಲಿ ಅನುಕೂಲವಿಲ್ಲ. ವ್ಯಾಪರವು ಈ ಅರಬ್ ಭಾಷಿಕರ ಕಸುಬಾಗಿ ಬೆಳೆದು ಸಾಗರೋತ್ತರ ವಾಣಿಜ್ಯದ ಕಡೆ ಗಮನವಿತ್ತರು. ಅವರಲ್ಲಿ ಅನೇಕ ಪಂಗಡಗಳಿದ್ದು, ಅವರಲ್ಲಿ ಐಕ್ಯವಿರಲಿಲ್ಲ. ಸದಾ ಪರಸ್ಪರ ಹೋರಾಟದಲ್ಲಿ ಕಾಲ ಕಳೆಯುತ್ತಿದ್ದರು. ಅರಬ್ಬೀ ಭಾಷೆ ಮತ್ತು ಮೆಕ್ಕಾದ ಪುಣ್ಯಕ್ಷೇತ್ರ ಅವರನ್ನು ಒಗ್ಗೂಡಿಸುವ ಸಾಧನಗಳು ಆದರೆ ವ್ಯಾಪಾರ ಕೇಂದ್ರವೂ ಆಗಿದ್ದ ಈ ಯಾತ್ರಾಸ್ಥಳವು ಒಂದು ಕಾಲದಲ್ಲಿ ಅನೀತಿಯ ಅಗರವಾಗಿತ್ತು. 'ಹಳೆಯ ಒಡಂಬಡಿಕೆ'ಯಲ್ಲಿ ಹೇಳಿರುವ ದೇವರು ಒಬ್ಬನೇ, ಅವನು ನಿರಾಕಾರ ಎಂಬ ಕಲ್ಪನೆ ಕಣ್ಮರೆಯಾಗಿತ್ತು. ಅನೇಕ ಮೂರ್ತಿಗಳು ಕಾಬಾದಲ್ಲಿ



downloaded from: www.kpscvaani.com

ಪ್ರತಿಷ್ಠಿತವಾಗಿದ್ದವು. ಇವು ಬಹು ದೇವತಾಕಲ್ಪನೆಗೂ ದಾರಿ ಮಾಡಿಕೊಟ್ಟಿದ್ದವು. ಯಹೂದಿಗಳು ಹಿಂದಿನಿಂದ ನಂಬಿದ್ದ ಏಕೇಶ್ವರವಾದ ಹಾಗೂ ಮೂರ್ತಿ ಪೂಜೆಯ ಖಂಡನೆಗೆ ಇದು ವಿರುದ್ಧವಾಗಿತ್ತು. ಅನೈಕ್ಯತೆ ಮೂಢ ಧಾರ್ಮಿಕ ನಂಬಿಕೆಗಳು ಮುಂತಾದವುಗಳ ವಿರುದ್ಧ ಪ್ರವಾದಿ(ಪೈಗಂಬರ್) ಮೊಹಮ್ಮದ್ (ಹೊಗಳಿಕೆ ಅರ್ಹರು ಎಂದು ಅರ್ಥ) ಹೋರಾಡಿದರು.

**ಮೊಹಮ್ಮದ(ದ್) ರ ಜೀವನ:**

ಕುರೇಶ್ ಎಂಬ ಪಂಗಡದಲ್ಲಿ ಮೆಕ್ಕಾದಲ್ಲಿ ಮೊಹಮ್ಮದರು ಹುಟ್ಟಿದರು (ಕ್ರಿ.ಶ 570) ಅವರ ತಾಯಿ ಅಮೀನಾ ಗರ್ಭಿಣಿಯಿದ್ದಾಗಲೇ ತಂದೆ ತೀರಿಕೊಂಡಿದ್ದರಿಂದ ಮೊಹಮ್ಮದರ ಬಾಲ್ಯ ಕಷ್ಟದ್ದಾಗಿತ್ತು. ಮೊಹಮ್ಮದರು 20ನೇಯ ವರ್ಷದಿಂದ ತಮ್ಮ ಚಿಕ್ಕಪ್ಪನ ವ್ಯಾಪಾರಿ ಕ್ಯಾರವಾನ್‌ಗಳ (ತಂಡಗಳ) ಜೊತೆ ತಿರುಗಾಡಿ ಅಪಾರ ಅನುಭವ ಪಡೆದರು. ಸಿರಿಯಾದಲ್ಲಿ ಅವರಿಗೆ ಕ್ರೈಸ್ತಧರ್ಮದ ಪರಿಚಯವಾಯಿತು. ಅವರ ಶುದ್ದ ಪ್ರಾಮಾಣಿಕ ಜೀವನದಿಂದ ತಾರುಣ್ಯದ ದಿನಗಳಲ್ಲೇ 'ಅಮೀನ್ ಅಥವಾ ವಿಶ್ವಾಸಪಾತ್ರ ಎಂಬ ಹೆಸರು ಪಡೆದರು. ಖದೀಜಾ ಎಂಬ ಶ್ರೀಮಂತ ವ್ಯಾಪಾರಿ ವಿಧವೆ ಇವರನ್ನು ತಮ್ಮಲ್ಲಿ ನೌಕರಿಗೆ ನೇಮಿಸಿಕೊಂಡಳು ಮೊಹಮ್ಮದರ ದಕ್ಷ ಪ್ರಾಮಾಣಿಕ ವ್ಯವಹಾರಗಳನ್ನು ಮೆಚ್ಚಿದ ಖದೀಜಾ ಅವರನ್ನು ಪತಿಯಾಗಿ ಸ್ವೀಕರಿಸಿದಳು.

ತಮ್ಮ ಚಿಕ್ಕಪ್ಪನ ಮಗ ಅಲಿಯನ್ನನು ಮಗನಂತೆ ಸಾಕಿ ತಮ್ಮ ಪುತ್ರಿ ಫಾತಿಮಾಳನ್ನು ಅವನಿಗೆ ಮದುವೆ ಮಾಡಿಕೊಟ್ಟರು. ಅಲಿ ಮುಂದೆ ಅವರ ಗಣ್ಯ ಅನುಯಾಯಿಯಾದ.

ಹೆಚ್ಚು ಔಪಚಾರಿಕ ಶಿಕ್ಷಣ ಪಡೆಯದಿದ್ದ ಮೊಹಮ್ಮದರು ಜೀವನವೆಂಬ ಶಾಲೆಯಲ್ಲಿ ಅನುಭವಿಗಳಾಗಿದ್ದರು. ತಮ್ಮ 40ನೆಯ ವಯಸ್ಸಿನಿಂದ ಅವರು ಅಂತರ್ಮುಖಿಗಳಾಗಿ ಧ್ಯಾನಮಗ್ನರಾಗತೊಡಗಿದರು.

ರಂಜಾನ್ ಎಂಬ ಪವಿತ್ರ ಮಾಸದಲ್ಲಿ ಗವಿಯೊಂದರಲ್ಲಿ ಧ್ಯಾನಮಗ್ನರಾಗಿದ್ದಾಗ ದೇವದೂತ ಗೇಬ್ರಿಯಲ್ (ಜಿಬ್ರೈಲ್) ಅವರಿಗೆ ದಿವ್ಯ ವಿಚಾರಗಳ ಸಂದೇಶವನ್ನು ನೀಡಿದನೆಂದು ಹೇಳುತ್ತಾರೆ. ಈ ವಿಚಾರಗಳೇ ಇಸ್ಲಾಂ ಧರ್ಮದ ತಳಹದಿಯಾಗಿ ಅವರ ಪತ್ನಿ ಖದೀಜಾ, ಗೆಳೆಯ ಅಬುಬಕರ್ ಮತ್ತು ಅಲಿ ಅವರ ಪ್ರಥಮ ಅನುಯಾಯಿಗಳಾದರು. ಈ ರೀತಿ ದೇವದೂತನ ದರ್ಶನ ಮತ್ತೆ ಮತ್ತೆ ಆಗಿ 'ಕುರ್‌ಆನ್' ಪವಿತ್ರ ಗ್ರಂಥದಲ್ಲಿ ಪ್ರಕಟವಾದ ವಿಚಾರಗಳನ್ನು ಅವರಿಗೆ ಆತನು ಸ್ಪಷ್ಟವಾಗಿ ತಿಳಿಸಿದನು. ಅದನ್ನು ಮುಂದೆ ಅವರು ಬರೆಸಿಟ್ಟರು.

ತಮ್ಮ ಧರ್ಮವನ್ನು ಆರಂಭದಲ್ಲಿ ಅವರು ಸೀಮಿತವಾಗಿ ಉಪದೇಶಿಸಿದರಾದರೂ ಕಾಲಕ್ರಮದಲ್ಲಿ ಅವರಿಗೆ ಹೆಚ್ಚು ಜನ ಅನುಯಾಯಿಗಳಾದರು. ಬಡವರು, ಗುಲಾಮರು ಅವರ ಬೋಧನೆಗಳನ್ನು ಕೇಳಲು ಅವರ ಮನೆಗೆ ಮುಗಿ ಬಿದ್ದರು. ಆಗ ಅಸ್ತಿತ್ವದಲ್ಲಿ ಇದ್ದ ಧಾರ್ಮಿಕ ನಂಬಿಕೆಗಳನ್ನು ಅವರು ಟೀಕಿಸಿದ್ದರಿಂದ ಕಾಬಾದ ರಕ್ಷಕರೂ ಅವರ ಮೇಲೆ ಕ್ರೋಧಗೊಂಡರು.

ವಿರೋಧಿಗಳಿಂದ ಮೊಹಮ್ಮದರಿಗೆ ಜೀವನಭಯವಿದ್ದುದರಿಂದ ಅವರು ಮೆಕ್ಕಾದಿಂದ ಯಾತ್ರಿಬ್ ನಗರಕ್ಕೆ ವಲಸೆ ಹೋದರು ಈ ವಲಸೆ 'ಅಲ್ ಹಿಜಿರಾ ಎಂಬ ಕ್ರಿಶ 622 ಕ್ಕೆ ಸಮನಾದ ಹೊಸ ಸಂವತ್ಸರಕ್ಕೆ ನಾಂದಿ ಆಯಿತು. ಯಾತ್ರಭ್‌ನ ಜನ ಮೊಹಮ್ಮದರಿಗೆ ಸ್ವಾಗತ ನೀಡಿ ಅವರ ಧರ್ಮವನ್ನು ಸ್ವೀಕರಿಸಿದರು. ಯಾತ್ರಿಬ್‌ನ ಆಡಳಿತವನ್ನು ಅವರಿಗೆ ಒಪ್ಪಿಸಿದರು. ಆ ಊರಿಗೆ 'ಮದೀನಾ' (ಪ್ರವಾದಿಯ ನಗರ) ಎಂದು ಹೆಸರಾಯಿತು ಕ್ರಿ.ಶ



downloaded from: www.kpscvaani.com

630 ರಲ್ಲಿ ಮೊಹಮ್ಮದರು ಮೆಕ್ಕಾವನ್ನು ಗೆದ್ದು ತನ್ನ ಶತ್ರುಗಳಾಗಿದ್ದವರಿಗೆಲ್ಲ ಕ್ಷಮೆ ಇತ್ತರು. ಕಾಬಾದಲ್ಲಿ ಇದ್ದ ಮೂರ್ತಿಗಳನ್ನು ನಾಶ ಮಾಡಿದರು. ಊರಲ್ಲಿದ್ದ ಮದ್ಯದ ಅಂಗಡಿ, ವೇಶ್ಯಾವಾಟಿಕೆಗಳನ್ನು ಮುಚ್ಚಿಸಿದರು. ಕ್ರಿಶ 632 ರಲ್ಲಿ ಅವರು ಕಣ್ಮರೆಯಾದಾಗ ಇಡೀ ಅರಬಸ್ತಾನ ಅವರ ಧರ್ಮದ ಅನುಯಾಯಿಯಾಗಿತ್ತು.

ಇಂದು ಜಗತ್ತಿನಲ್ಲಿ ವ್ಯಾಪಕವಾಗಿ ಪ್ರಚಲಿತವಾಗಿರುವ ಮತಗಳಲ್ಲಿ ಕ್ರೈಸ್ತ ಮತ್ತು ಇಸ್ಲಾಂ ಮತಗಳನ್ನು ಹೆಸರಿಸಬಹುದು. ಇವುಗಳೆರಡರ ಮೂಲವು ಯಹೂದಿ ಮತ. (ಜುಡೇಯಿಸ್ಟ್)ದಿಂದ ಮೂಡಿದ್ದು, ಜೈಬಲಿನ 'ಹಳೆಯ ಒಡಂಬಡಿಕೆ (ಓಲ್ಡ್ ಟೆಸ್ಟ್‌ಮೆಂಟ್) ಕ್ರೈಸ್ತರಿಗೂ ಮುಸಲ್ಮಾನರಿಗೂ ಮಾನ್ಯವಾದ ಪವಿತ್ರ ಗ್ರಂಥ.

ಯಹೂದಿಗಳ ಜುಡೀಯ (ಇಂದಿನ ಇಸ್ರೇಲ್) ನಲ್ಲಿ ಕ್ರಿ.ಪೂ 1000 ಕ್ಕೂ ಹಿಂದಿನಿಂದ ನೆಲೆ ಅವರ ಪ್ರಸಿದ್ದ ಅರಸ ಡೇವಿಡ (ದಾವುದ) ಜೆರುಸಲೆಂ ಅನ್ನು ರಾಜಧಾನಿಯಾಗಿ ಮಾಡಿಕೊಂಡು ತನ್ನ ಆಡಳಿತ ಆರಂಭಿಸಿದ, ಅನೇಕ ಪ್ರವಾದಿಗಳು ಬೋಧಿಸಿದಂತೆ ಅವರು ಯಾವೆ(ಯಹೋವ) ಎಂಬ ಒಬ್ಬರೇ ದೇವರನ್ನು ನಂಬಿದವರು ಮೂರ್ತಿಪೂಜೆಯನ್ನು ಖಂಡಿಸಿದವರು. ಹತ್ತು ಆದೇ (ಟೆನ್ ಕಮಾಂಡ್‌ಮೆಂಟ್ಸ್) ಗಳೆಂಬ ತತ್ವಗಳಲ್ಲಿ ಅವರ ಧರ್ಮ ಅಡಕವಾಗಿದೆ. 'ಹಳೆಯ ಒಡಂಬಡಿಕೆ'ಯ 39 ಪುಸ್ತಕಗಳಲ್ಲಿ ಅವರ ಪ್ರವಾದಿಗಳ ಜೀವನ ವಿವರ, ಬೋಧನೆ ಹಾಗೂ ಧಾರ್ಮಿಕ ಅನುಭವಗಳನ್ನು ವಿವರಿಸಲಾಗಿದೆ. ಅಬ್ರಹಾಂ (ಇಬ್ರಾಹಿಂ) ಮೋಸೆಸ್ (ಮೂಸ) ಏಸಾಯ ಮುಂತಾದ ಗಣ್ಯ ನಾಯಕರ ಸಾಧನೆಗೆ ವಿವರ ಅದರಲ್ಲಿದೆ. ಮುಸಲ್ಮಾನರೂ ಕೂಡ ಇವರನ್ನು ತಮ್ಮ ಪೂರ್ವಜರೆಂದು ನಂಬುತ್ತಾರೆ. (ಕಂಸದಲ್ಲಿ ಕೊಟ್ಟದ್ದು ಅರೆಬಿಕ್ ಹೆಸರುಗಳು)

## ಗುರುನಾನಕ್ ಮತ್ತು ಏಕದೇವೋಪಾಸನೆ(1496–1539) : ತಲವಾಂಡಿ

ಮಧ್ಯಯುಗದ ಭಕ್ತಿ ಚಳುವಳಿಯ ಕೆಲವು ಪ್ರವರ್ತಕರು ನಾನಾ ದೇವರುಗಳ ಉಪಾಸನೆಯನ್ನು ತಿರಸ್ಕರಿಸಿ ಏಕದೇವೋಪಾಸನೆಯನ್ನು ಪ್ರಚುರಪಡಿಸಿದರು. ಅವರಲ್ಲಿ ಯಶಸ್ವಿಯಾದವರಲ್ಲಿ ಸಿಖ್ ಧರ್ಮ ಸಂಸ್ಥಾಪಕರಾದ ಗುರುನಾನಕ್ ಪ್ರಮುಖರು.

ಗುರುನಾನಕರು ಕಬೀರರ ಸಮಕಾಲೀನರು, ಪಂಜಾಬಿನ ರಾವಿ ನದಿ ದಂಡೆಯ ಮೇಲಿದ್ದ ತಲವಾಂಡಿ ಗ್ರಾಮದಲ್ಲಿ ಕ್ರಿ.ಶ 1469ರ ಕಾರ್ತಿಕ ಪೊರ್ಣಿಮೆಯಂದು(ಏಪ್ರಿಲ್ ಹದಿನೈದು) ಜನಿಸಿದರು. ಹಿಂದೂ ಕ್ಷತ್ರಿಯ ಬೇಡಿ ಮನೆತನದ ಮೆಹತ್ ಕೌಲ(ಕಲ್ಯಾಣ ಚಂದ್ ಬೇಡಿ) ಮತ್ತು ತೃಪ್ತಬಾಯಿ ಇವರ ತಂದೆತಾಯಿಗಳು. ಬಾಲ್ಯದಲ್ಲಿ ನಾನಕರಿಗೆ ಹಿಂದಿ ಸಂಸ್ಕೃತ, ಪರ್ಷಿಯ, ಪ್ರಾಕೃತ ಮುಂತಾದ ಭಾಷೆಗಳಲ್ಲಿ ಶಿಕ್ಷಣ ದೊರೆಯಿತು. ಆಗಾಗ್ಗೆ ನಾನಕ್ ಬಹುದೂರ ಹೋಗಿ ಒಬ್ಬರೇ ಕುಳಿತು ಧ್ಯಾನ ಮಗ್ನರಾಗುತ್ತಿದ್ದರು. ಅಷ್ಟರಲ್ಲೇ ಗುರುನಾನಕರ ಹೃದಯದಲ್ಲಿ ಒಂದು ಮಹದಾಕಾಂಕ್ಷೆ ಬಲಗೊಳ್ಳುತ್ತಿದ್ದಿತು. ಇಸ್ಲಾಂ ಮತ್ತು ಹಿಂದೂ ಧರ್ಮಗಳ ಪರಸ್ಪರ ಸಂಘರ್ಷ, ಪುರೋಹಿತವರ್ಗ ನಡೆಸುತ್ತಿದ್ದ ಶೋಷಣೆ, ದೀನದಲಿತರು, ಅಸಹಾಯಕರು ಮುಂತಾದವರ ಕ್ಲಿಷ್ಟಪರಿಸ್ಥಿತಿ ನಾನಕರನ್ನು ಸಿಖ್ ಮತೋದ್ಧಾರ ಮಾಡುವಂತೆ ಪ್ರಚೋದಿಸಿತು.

ಮಗನನ್ನು ವಿದ್ಯಾವಂತನ್ನಾಗಿ ಮಾಡಿ ನೌಕರಿಗೆ ಕಳುಹಿಸಬೇಕೆಂಬುದು ಮೆಹ್ತಕೌಲರ ಉದ್ದೇಶವಾಗಿತ್ತು. ಆದರೆ ನಾನಕರ ಆಧ್ಯಾತ್ಮಿಕ ಚಿಂತನಗೆ ಅದು ಬಹುದೂರ. ಅಲೌಕಿಕದಲ್ಲ ಚಿಂತಿಸುತ್ತಿದ್ದ ಮಗನಿಗೆ ಲೌಕಿಕಜ್ಞಾನ



downloaded from: www.kpscvaani.com

ತುಂಬಲು ಸುಲಖನಿ (ಸುಲಕ್ಷಣಾದೇವಿ) ಎಂಬ ಕನ್ಯೆಯೊಡನೆ ಚಿಕ್ಕ ವಯಸ್ಸಿನಲ್ಲೆ ವಿವಾಹ ಮಾಡಿದರು. ಎರಡು ಮಕ್ಕಳ ತಂದೆಯಾದರೂ ನಾನಕರಿಗೆ ಪೂರ್ಣ ಒಲವು ಆಧ್ಯಾತ್ಮದ ಕಡೆ. ಮಗನ ಜೀವನೋಪಾಯವನ್ನು ಯೋಚಿಸಿದ ತಂದೆ ಅವನಿಂದ ನೌಕರಿಯಾಗಲಿ, ವ್ಯಾಪರವಾಗಲಿ ಸಾಧ್ಯವಾಗದುದನ್ನು ಅರಿತು ವ್ಯವಸಾಯವನ್ನಾದರೂ ಮಾಡು ಎಂದರು. ಆಗ ನಾನಕರು ಈ ರೀತಿ ನುಡಿದಿದ್ದಾರೆ–"ನನ್ನ ದೇಹವೇ ಒಂದು ಹೊಲ, ಮನಸ್ಸೇ ಹೊಲವನ್ನು ಉಳುವವವ, ವಿನಯವೆಂಬ ನೀರುಣಿಸಿ ದೈವೀಸತ್ವದ ಬೀಜ ಬಿತ್ತಿದಾಗ, ನಾನು ಪಡೆಯುವ ಬೆಳೆ ನನಗೆ, ನನ್ನ ಕುಟುಂಬಕ್ಕಷ್ಟೇ ಅಲ್ಲ, ಇಡೀ ಪ್ರಪಂಚಕ್ಕೆ ಸಾಕಾಗುತ್ತದೆ. ಈ ಹೊಲದ ಒಡೆಯ ಪರಮಾತ್ಮ, ನಾನು ಅವನ ಗೇಣಿದಾರ, ನನಗೆ ಅನಾವೃಷ್ಟಿಗಳ ಭಯವಿಲ್ಲ, ನಾನು ಬೇಡಿದಷ್ಟನ್ನು ಅವನು ಕೊಡುತ್ತಾನೆ, ಹೆಚ್ಚಿಲ್ಲ ಕಡಿಮೆಯಿಲ್ಲ."

ಕೊನೆಗೂ ತಂದೆಯ ಒತ್ತಾಯದ ಮೇರೆಗೆ ನಾನಕ್ ಚಂದ್‌ಬೇಡಿ ನವಾಬನಲ್ಲಿ ಪಡಿತರ ಕೊಡುವ ಅಧಿಕಾರಿಯಾಗಿ(ಸುಲ್ತಾನಪುರ) ವೃತ್ತಿ ಆರಂಭಿಸಿದರು. ದಾರಿಯಲ್ಲಿ ಬಡವರ, ದಲಿತರ ಕಷ್ಟವನ್ನು ನೋಡುತ್ತಿದ್ದ ನಾನಕ್ ತಮ್ಮ ಸಂಬಳವನ್ನೆಲ್ಲ ಅವರಲ್ಲಿ ಹಂಚಿ ಮನೆಗೆ ಬರುತ್ತಿದ್ದರು. ಸಂಜೆ ದೇವರ ಸ್ತೋತ್ರಗಳನ್ನು ರಚಿಸಿ ಹಾಡುತ್ತ ಅನೇಕ ಜನರನ್ನು ಆಕರ್ಷಿಸುತ್ತಿದ್ದರು.

ಒಮ್ಮೆ ನಾನಕರು ಎಂದಿನಂತೆ ಬೆಳಗ್ಗೆ ಮೆಮ್ಯಾನ್ ನದಿಯಲ್ಲಿ ಸ್ನಾನ ಮುಗಿಸಿದರು. ಅನಂತರ ಸಮೀಪದಲ್ಲಿದ್ದ ಗುಹೆಯನ್ನು ಪ್ರವೇಶಿಸಿ ಕೂಡಲೇ ಸಮಾಧಿ ಮಗ್ನರಾದರು. ಮುಂದೆ ಮೂರು ದಿನಗಳ ಬಳಿಕ "ಅಲ್ಲಿ ನಿಜವಾದ ಹಿಂದೂವು ಇಲ್ಲ, ನಿಜವಾದ ಮುಸ್ಲಿಮನೂ ಇಲ್ಲ" ಎಂದು ಕೂಗಿಕೊಂಡು ಹೊರಗೆ ಬಂದರಂತೆ, ಅವರಿಗೆ **ಸಮಾಧಿಸ್ಥಿತಿಯಲ್ಲಿ ಹೊಳೆದದ್ದು ಏಕದೇವೋಪಾಸನೆ ಮತ್ತು ವಿಶ್ವಭ್ರಾತೃತ್ವ ತತ್ವ.**

## ವಿಶ್ವಭ್ರಾತೃತ್ವ ತತ್ವ:-

ಒಮ್ಮೆ ಗುರುನಾನಕರು ಹರಿದ್ವಾರದಲ್ಲಿದ್ದಾಗ ಅನೇಕರು ಗಂಗಾನದಿಯ ದಂಡೆಯ ಮೇಲೆ ನಿಂತು ಪೂರ್ವದಿಕ್ಕಿಗೆ ಮುಖಮಾಡಿ ನದಿಯ ನೀರನ್ನು ಬೊಗಸೆಯನ್ನು ಚೆಲ್ಲುತ್ತಿದ್ದುದನ್ನು (ಪ್ರೋಕ್ಷಣೆ) ವೀಕ್ಷಿಸಿದರು. ಅನಂತರ ಈ ರೀತಿ ಮಾಡುವುದೇಕೆಂದು ಅವರನ್ನು ವಿಚಾರಿಸಿದಾಗ "ಪರಲೋಕದಲ್ಲಿ ನಮ್ಮ ಹಿರಿಯರಿದ್ದಾರೆ, ಅವರಿಗೆ ಇದು ಮುಟ್ಟಿ ಅವರ ಆತ್ಮಕ್ಕೆ ಶಾಂತಿ ಸಿಗುತ್ತದೆ" ಎಂಬ ಉತ್ತರ ಪಡೆದ ಅವರು ನಕ್ಕರು. ನಂತರ ತಾವೂ ಪಶ್ಚಿಮ ದಿಕ್ಕಿನತ್ತ ನೀರು ಚೆಲ್ಲಲಾರಂಭಿಸಿದಂತೆ. ಈ ರೀತಿ ನಾನಕರು ಮಾಡಿದ್ದನ್ನು ಅಲ್ಲೇ ನಿಂತು ನೋಡುತ್ತಿದ್ದ ಅವರು ಕೇಳಿದಾಗ ನಾನಕರು ಈ ರೀತಿ ಉತ್ತರಿಸಿದರಂತೆ.

"ನಾನು ಪಶ್ಚಿಮ ಭಾರತದಿಂದ ಬಂದವನು. ನನ್ನ ಹುಟ್ಟೂರಲ್ಲಿ ನನ್ನದೊಂದು ಹೊಲವಿದೆ. ನಾನು ಇತ್ತ ಬಂದ ಮೇಲೆ ಅಲ್ಲಿ ಸಾಕಷ್ಟು ಮಳೆಯಾಗಿದೆಯೋ ಇಲ್ಲವೋ, ಈ ನೀರಾದರೂ ಮುಟ್ಟಲೆಂದು ಚೆಲ್ಲುತ್ತಿದ್ದೇನೆ" ಇದನ್ನು ಕೇಳಿದ ವ್ಯಕ್ತಿಗಳು "ನಿನಗೆಲ್ಲೋ ಹುಚ್ಚು; ನೀನು ಇಲ್ಲಿ ಚೆಲ್ಲಿದ ನೀರು ದೂರದ ನಿನ್ನ ಹೊಲ ಮುಟ್ಟುವುದೇ?" ಎಂದಾಗ ನಾನಕರು "ನೀವು ಇಲ್ಲಿ ಚೆಲ್ಲಿದ ನೀರು ಬೇರೊಂದು ಲೋಕದಲ್ಲಿರುವ ನಿಮ್ಮ ಹಿರಿಯರಿಗೆ ಮುಟ್ಟುವುದಾದರೆ ನಾನು ಚೆಲ್ಲಿದ ನೀರು ಇದೇ ಲೋಕದಲ್ಲರುವ ನಮ್ಮ ಹೊಲಕ್ಕೇಕೆ



downloaded from: www.kpscvaani.com

ಮುಟ್ಟಬಾರದು?" ಎಂದು ಪ್ರಶ್ನಿಸಿದಾಗ ತಮ್ಮ ಮೂಢ ನಂಬಿಕೆಯ ತಪ್ಪಿನ ಅರಿವಾದ ಜನ ಗುರುನಾನಕರ ಶಿಷ್ಯರಾದರು. ಹೀಗೆ ಜನರ ರೀತಿ ನೀತಿಗಳನ್ನು ತಿದ್ದುವಲ್ಲಿ ನಾನಕರು ಬಳಸಿದ ಸರಳಸೂತ್ರ ಬಹು ಪರಿಣಾಮಕಾರಿಯಾಗಿದ್ದಿತ್ತು. ಭಾರತಾದ್ಯಂತ ಪ್ರವಾಸ ಮಾಡಿದ ನಾನಕರು, ಮಕ್ಕಾ, ಮದೀನ, ಬಾಗ್‌ದಾದ್, ಟಿಬೆಟ್, ಸಿಂಹಳ ಮುಂತಾದ ದೇಶಗಳಿಗೂ ಭೇಟಿ ನೀಡಿದ್ದರು.

ಪ್ರವಾಸ ಕಾಲದಲ್ಲಿ **ಸದಾ ಇವರೊಡನೆ ಇದ್ದವನು ಹಾಡುಗಾರ ಬಾಯಿ ಮರ್ಧಾನ**. ತಮ್ಮ ಜೀವಮಾನದಲ್ಲಿ ಪಶ್ಚಿಮ ಏಷ್ಯಾ, ಮಧ್ಯ ಏಷ್ಯಾ, ದಕ್ಷಿಣ ಏಷ್ಯಾದ ಸೂಫಿ ಮತ್ತು ಹಿಂದೂ ಕ್ಷೇತ್ರಗಳನ್ನು ಸಂದರ್ಶಿಸಿ ನಿರಾಕಾರ ನಿರ್ಗುಣ ಪರಮಾತ್ಮನ ಉಪಾಸನೆಯನ್ನು ಪ್ರಚುರಗೊಳಿಸಿದರು. ಈ ಸಮಯದಲ್ಲೆ ಕಬೀರರ ಭಕ್ತಿ ಗೀತೆಗಳು, ಮರಾಠಿ ಸಂತ ನಾಮದೇವನ ಅಭಂಗ ಇವರ ಮೇಲೆ ಪ್ರಭಾವ ಬೀರಿದವು. ತಮ್ಮ ಕಡೆಯ ದಿನಗಳಲ್ಲಿ ನಾನಕರು ಪಂಜಾಬ್, ಮುಲ್ತಾನ್, ಪೇಶಾವರ್ ಭಾಗಗಳಲ್ಲಿ ಪ್ರವಾಸ ಕೈಗೊಂಡು ಶ್ರೀಮಾನ್ಯರ ಮೌಢ್ಯಗಳನ್ನು ಹೋಗಲಾಡಿಸುತ್ತ **ಏಕದೇವೋಪಾಸನೆ ಹಾಗೂ ವಿಶ್ವಭ್ರಾತೃತ್ವ ತತ್ವವನ್ನು ಬೋಧಿಸಿದರು**. ಮೇಲಾಗಿ ಹಿಂದೂ-ಮುಸ್ಲಿಮರಲ್ಲಿ ಮತ್ತು ಷಿಯಾ-ಸುನ್ನಿ ಇವರುಗಳ ನಡುವಿನ ದ್ವೇಷ ಭಾವನೆಗಳನ್ನು ಹೊರದೂಡಲು ಯತ್ನಿಸಿದರು. ಸೂಫಿಗಳ ಖಾನ್‌ಖಾಗಳ ಮಾದರಿಯಲ್ಲಿ ಸಿಖ್ ಮಠಗಳನ್ನು ಸ್ಥಾಪಿಸಿದರು.

ಸಮಾಜಸೇವೆ, ಅನಾಥ ಮಕ್ಕಳ ಪಾಲನೆ, ಏಕದೇವೋಪಾಸನೆ ಮತ್ತು ಭ್ರಾತೃತ್ವ ಬೆಳೆಸುವುದು ಇವುಗಳ ಉದ್ದೇಶವಾಗಿದ್ದಿತು. ತಮ್ಮ ಅಂತ್ಯ ಸಮೀಪಿಸುತ್ತಿರುವುದನ್ನು ಮನಗಂಡ ನಾನಕರು ಲಿಹನ ಎಂಬುವವನನ್ನು ಗುರು ಅಂಗದ ಎಂಬ ಹೆಸರಿನಲ್ಲಿ ತನ್ನ ಉತ್ತರಾಧಿಕಾರಿಯಾಗಿ ನಿಯಮಿಸಿದರು. ನಂತರ 1539ರಲ್ಲಿ ಕರ್ತಾರಪುರ ಎಂಬಲ್ಲಿ (ಲಾಹೋರ್ ಬಳಿ) ಗುರುನಾನಕರು ಕೊನೆಯುಸಿರೆಳೆದರು.

ಏಕದೇವೋಪಾಸನೆಯ ಕಟ್ಟ ಪ್ರತಿಪಾದಕರಲ್ಲಿ ಗುರುನಾನಕ್ ಎದ್ದು ಕಾಣುವ ಧರ್ಮ ದೀಪಕರಾಗಿದ್ದಾರೆ. ಅವರ ಪ್ರಕಾರ ದೈವನಿಗೆ ಯಾವ ರೂಪವಾಗಲೀ, ಯಾವ ಹೆಸರಾಗಲೀ, ಯಾವ ಸಂಸಾರವಾಗಲೀ, ಯಾವ ಭೌತಿಕ ಅಸ್ತಿತ್ವವಾಗಲೀ ಇಲ್ಲ. ಅವನು ನಿರಾಕಾರನೂ, ನಿರ್ಗುಣನೂ ಆಗಿದ್ದಾನೆ. ಆದ್ದರಿಂದ ಅವನಿಗೆ ಹುಟ್ಟು ಸಾವು, ಜಾತಿ, ಮತ ಇಲ್ಲ ಮೇಲಾಗಿ ಊಹಾತೀತನು ಹಾಗೂ ವರ್ಣನಾತೀತನೂ ಆಗಿದ್ದಾನೆ. ಆದಿಯೂ, ಅಂತ್ಯವೂ ಇಲ್ಲದ ಅನಂತವಾಗಿದ್ದು ಸರ್ವಾಂತರ್ಯಾಮಿಯಾಗಿದ್ದಾನೆ. ಅವನು ಪರಮಾತ್ಮನಾಗಿದ್ದು ಜೀವಾತ್ಮರಲ್ಲಿ ಅವ್ಯಕ್ತನಾಗಿದ್ದಾನೆ. ಅಂದರೆ ಇದ್ದೂ ಕೂಡ ಅಗೋಚರನಾಗಿದ್ದಾನೆ. ವಿಶ್ವದ ಎಲ್ಲಾ ಸೃಷ್ಟಿ, ಸ್ಥಿತಿ, ಲಯಕರ್ತನಾಗಿದ್ದಾನೆ. ಎಲ್ಲ ಚರಾಚರ ಜೀವಿಗಳಿಗೂ ಜೀವದಾತನಾಗಿದ್ದಾನೆ. ಸರ್ವಶಕ್ತಿಗಳ ಮೂಲ ಆಧಾರನೂ ಅವನೇ ಆಗಿದ್ದಾನೆ. ಇಡೀ ಬೆಳಕೇ ಅವನ ಸ್ವರೂಪವಾಗಿದೆ. ಜ್ಯೋತಿ ಪರಂಜೋತಿಯನ್ನು ಸೇರಿದಂತೆ ಜೀವಾತ್ಮನು (Individual Soul) ಪ್ರೀತಿ ಮತ್ತು ಭಕ್ತಿ ಮಾರ್ಗದಿಂದ ಪರಮಾತ್ಮನಲ್ಲಿ ಒಂದಾಗುತ್ತದೆ.

ನಾನಕರ ಮತ್ತೊಂದು ನಿಲುವು ಪರಮಾತ್ಮನ ನಿರಾಕಾರ ಉಪಾಸನೆಯಾಗಿದೆ. ಇವರು ಷೇಕ್ ಫರೀದ್ ಮತ್ತು ಕಬೀರ್ ಮೊದಲಾದ ಸೂಫಿ ಸಂತರ ಪ್ರಭಾವದಲ್ಲಿ ವಿಗ್ರಹಾರಾಧನೆಯನ್ನು ಖಂಡಿಸಿ ಅದನ್ನು ತನ್ನ ಶಿಷ್ಯರಲ್ಲಿ ಆಚರಣೆಗೆ ತಂದರು. ನಾನಕರು ದೇವಾಲಯಗಳ ಬದಲು ಪ್ರಾರ್ಥನಾ ಮಂದಿರಗಳನ್ನು ಕಟ್ಟಿಸಿದರು. ಅವುಗಳಲ್ಲಿ ವಿಗ್ರಹಗಳಿಗೆ ಅವಕಾಶವಿರಲಿಲ್ಲ. ಈ ಪ್ರಾರ್ಥನಾ ಮಂದಿರಗಳಲ್ಲಿ ನಾನಕ್, ಕಬೀರ್, ನಾಮ್‌ದೇವ್



downloaded from: www.kpscvaani.com

ಮತ್ತು ಇತರರ ಭಕ್ತಿಗೀತೆಗಳನ್ನು ಜಪಿಸಿಲಾಗುತ್ತಿದ್ದಿತು. ಕ್ರಮೇಣ **ಇವುಗಳನ್ನು ಗುರುದ್ವಾರಗಳೆಂದು** ಕರೆಯಲಾಯಿತು. ಸಿಖ್ ಧರ್ಮದಲ್ಲಿ ಗುರು ಎಂದರೆ ಒಬ್ಬ ವ್ಯಕ್ತಿಯಲ್ಲ. ನಾನಕರ ಪ್ರಕಾರ **ದೇವರ ದಿವ್ಯ ವಾಣಿಯನ್ನು ಗುರುವೆಂದು** ಪರಿಗಣಿಸಲಾಗಿದೆ. ಏಕೆಂದರೆ ಆ ದಿವ್ಯವಾಣಿ ವ್ಯಕ್ತಿಯ ಮೂಲಕ ಬರುತ್ತಿದ್ದುದರಿಂದ ದಿವ್ಯವಾಣಿಯ ವ್ಯಕ್ತಿಯನ್ನು ಗುರುವೆಂದು ಪರಿಗಣಿಸಿಲಾಯಿತು.

ದೇವರನ್ನು ವಿವಿಧ ಗುಣಗಳಿಗನುಸಾರವಾಗಿ ವಿವಿಧ ಹೆಸರುಗಳಿಂದ ಕರೆಯಲಾಯಿತು. ಉದಾ: ನಿರಂಕಾರ ಅಥವಾ ನಿರಾಕಾರ, ಅಕಾಲ (ಕಾಲಾತೀತ), ಅಲಕ್ (ಶಬ್ದಾತೀತ ಅಥವ ವಾಕ್ಯಾತೀತ: ಃಞಿಟಿಜ ಖಾಜಚಿಭಿ) ಅಪಾರಸು (ಮೇರೆ ಅಥವ ಇತಿಮಿತಿಗಲ್ಲದವ), ಸತ್(ಸತ್ಯ), ಪಿತಾ(ತಂದೆ), ಪ್ರೀತಮ್(ಪ್ರಿಯನಾದವನು) ಇತ್ಯಾದಿ. ಸೂಫಿಗಳು ಮತ್ತು ಸಂತರ ಪ್ರಭಾವದಲ್ಲಿ ಗುರುನಾನಕ್ ದೈವನನ್ನು ಅಲ್ಲಾ: ಖುದಾ, ರಬ್, ರಾಮ, ಗೋವಿಂದ, ಹರಿ, ಹರ, ಮುರಾರಿ ಇತ್ಯಾದಿ ಹೆಸರುಗಳಿಂದಲೂ ಸಂಬೋಧಿಸಿದ್ದರು. ದೇವರ ವಾಣಿಯನ್ನು ಪಂಜಾಬಿ ಭಾಷೆಯಲ್ಲಿ ಗುರುಕಾಶಬದ್ ಎಂದೂ ಕರೆದರು. ನಾಮ್–ಸಿಮರಾನ್ ಎಂಬ ಪದವನ್ನು ದೇವರ ಸ್ಮರಣೆಗೆ ಬಳಸಲಾಗಿದೆ. ನಾಮ್–ಜಪನ್ ಎಂಬ ಪದವನ್ನು ದೇವರನಾಮ ಜಪಿಸಲು ಬಳಸಲಾಗುತ್ತದೆ. ಹುಕುಂ ಎಂಬ ಪದವನ್ನು ದೇವರು ಹಾಗೂ ದೇವರ ಆಜ್ಞೆಗೆ ಬಳಸಲಾಗಿದೆ.

ಹೀಗಾಗಿ ಗುರುನಾನಕ್ ಶಂಕರಾಚಾರ್ಯರಿಂದ ನಿರಾಕಾರ ನಿರ್ಗುಣ ತತ್ವಗಳನ್ನೂ, ಸೂಫಿಗಳಿಂದ ಏಕದೇವೋಪಾಸನೆಯನ್ನು ಸ್ವೀಕರಿಸಿ ತಮ್ಮ ಗುರು ಪಂಥ ಅಥವಾ ಸಿಖ್ ಪಂಥವನ್ನು ಪ್ರಚಾರ ಮಾಡಿದರು.

## ಏಕದೇವೋಪಾಸನೆಯ ಸಿಖ್ ಧರ್ಮ ಪ್ರಚಾರ

ಗುರುನಾನಕ್ ಹೆಚ್ಚು ಕಾಲ ಪಂಜಾಬ್ ಪ್ರಾಂತ್ಯದಲ್ಲಿ ನೆಲಸಿದ್ದ ಕಾರಣ ಸಿಖ್ ಧರ್ಮ ಅಲ್ಲಿ ಬಲವಾಗಿ ಬೇರೂರಿತು. ಅವರು ಎಸಗಿದ ಹಲವು ಪವಾಡಗಳು ಅವರ ಜನಪ್ರಿಯತೆಯನ್ನು ಹೆಚ್ಚಿಸಿದುವು. ಆರಂಭದಲ್ಲಿ ಇವರ ಧರ್ಮವನ್ನು ಗುರು ಮತ ಅಥವಾ ಗುರು ಪಂಥ ಎಂದು ಕರೆಯಲಾಗಿದ್ದಿತು. ಶಿಷ್ಯರನ್ನು **ಪಂಜಾಬಿ ಭಾಷೆಯಲ್ಲಿ ಸೀಖರೆಂದು ಕರೆಯುತ್ತಾರೆ**. ಹಾಗಾಗಿ ಗುರುನಾನಕರು ಬೋಧಿಸಿದ ಧರ್ಮ ಸಿಖ್ ಧರ್ಮವಾಯಿತು.

ತನ್ನನ್ನು ಗುರುನಾನಕರು ದೇವರ ದೂತನೆಂದೂ, ದೇವರ ಮಗನೆಂದೂ ಕರೆದುಕೊಂಡಿದ್ದಾರೆ. ಸೂಫಿಗಳು ನಂಬುವಂತೆ ನಾನಕರು, ಗುರುವಾದವನು ತನ್ನ ಶಿಷ್ಯರಿಗೆ ತನ್ನೆಲ್ಲ ದಿವ್ಯಜ್ಞಾನ ಹಾಗೂ ಶಕ್ತಿಯನ್ನು ಧಾರೆಯೆರೆಯಬಹುದೆಂದು ನಂಬಿದ್ದರು.

ಸಿಖ್ ಪರಂಪರೆಯಲ್ಲಿ ಹತ್ತು ಗುರುಗಳು ಹಾದು ಹೋಗಿದ್ದಾರೆ (1539–1708). ಅವರಲ್ಲಿ ಪ್ರಮುಖರಾದವರು ಗುರು ಅಂಗದ್, ಗುರು ಅಮರದಾಸ್, ಗುರು ಅರ್ಜುನ್, ಗುರು ಗೋವಿಂದ ಸಿಂಗ್ ಇತರರು. ಇವರ ಕಾಲದಲ್ಲಿ ಸಿಖ್ ಧರ್ಮ ಬಿಹಾರ್, ಮಹಾರಾಷ್ಟ್ರ, ಕರ್ನಾಟಕ ಮೊದಲಾದ ಕಡೆ ಪ್ರಚಾರಗೊಂಡಿತು. ದೊರೆ ರಣಜಿತ್ ಸಿಂಗ್‌ನ ಕಾಲದಲ್ಲಿ ಸಿಖ್ ಧರ್ಮಕ್ಕೆ ರಾಜಾಶ್ರಯ ದೊರೆಯಿತು. ಇಂದು ಭಾರತದಲ್ಲಿ ಸಿಖ್ಖರು ಎರಡು ಕೋಟಿಗೂ ಹೆಚ್ಚಿದ್ದಾರೆ. ವಿದೇಶಗಳಲ್ಲೂ ಅವರು ಗಣನೀಯ ಸಂಖ್ಯೆಯಲ್ಲಿದ್ದಾರೆ.



downloaded from: www.kpscvaani.com

## ಆದಿ ಗ್ರಂಥ ಅಥವಾ ಗುರು ಗ್ರಂಥ ಸಾಹಿಬ್(1604) :–

ಇದು ಸಿಖ್ಖರ ಪವಿತ್ರ ಧರ್ಮ ಗ್ರಂಥ. ಗುರು ಅರ್ಜುನ್‌ದೇವ್ (1581–1606) ರ ಕಾಲದಲ್ಲಿ ಸಿಖ್ ಧರ್ಮದ ಬೆಳವಣಿಗೆಗೆ ಅಪಾರ ಪ್ರೋತ್ಸಾಹ ದೊರಕಿತು. ಇವರ ಸಮಕಾಲೀನನಾದ ಮೊಗಲ್ ಚಕ್ರವರ್ತಿ ಅಕ್ಬರ್ ಇವರನ್ನು ಗೌರವಿಸುತ್ತಿದ್ದನು. ಸಿಖ್ಖರಿಗೆ ತಮ್ಮ ಧರ್ಮಶಾಲೆಗೊಂದು ಪವಿತ್ರ ಗ್ರಂಥದ ಅವಶ್ಯಕತೆಯನ್ನು ಮನಗಂಡ ಗುರು ಅರ್ಜುನ್‌ದೇವ್ ಹಿಂದೂ ಮತ್ತು ಸೂಫಿ ಸಂತರ ತತ್ವ ಪದಗಳು ಹಾಗೂ ಭಕ್ತಿ ಗೀತೆಗಳನ್ನು ಸಂಗ್ರಹಿಸಿದರು. ಅವುಗಳಲ್ಲಿ ಗುರುನಾನಕ್, ಕಬೀರ್, ಷೇಕ್ ಫರೀದ್, ಸಂತ ನಾಮ್‌ದೇವ್, ಮೀರಾಬಾಯಿ ರಾಯ್‌ದಾಸ್, ಚೈತನ್ಯ ಮೊದಲಾದವರ ವಚನಗಳನ್ನು 1604ರಲ್ಲಿ ಕ್ರೋಢೀಕರಿಸಿ ‘ಆದಿ ಗ್ರಂಥ’ ತಮ್ಮ ಧರ್ಮದ ಪವಿತ್ರ ಗ್ರಂಥವೆಂದು ಪ್ರಚಾರಕ್ಕೆ ತಂದರು. ಅನಂತರದ ದಿನಗಳಲ್ಲಿ ಸಿಖ್ಖರ ಈ ಆದಿ ಗ್ರಂಥವನ್ನು **‘ಗುರುಗ್ರಂಥ ಸಾಹಿಬ್’** ಎಂದು ಕರೆಯಲಾಗಿದೆ. ಗ್ರಂಥ ಸಂಗ್ರಹವಾಗಲಾಗಿ ಸಿಖ್ ಧರ್ಮ ಹರಡಲು ಹೆಚ್ಚು ಆಕರ್ಷಣೆ ಉಂಟಾಯಿತು. ಧನಿಕರು, ವರ್ತಕರು (ಕತ್ರೀಸ್) ರೈತರು (ಜಾತ್ಸ್) ಮೊದಲಾದವರು ಗ್ರಂಥ ಪ್ರಚಾರ, ಗುರುದ್ವಾರ ನಿರ್ಮಾಣ ಮೊದಲಾದ ಕಾರ್ಯಗಳಿಗೆ ತಮ್ಮ ಸಂಪತ್ತನ್ನು ಧಾರೆಯೆರೆದರು.

## ಹಿಂದೂ–ಮುಸ್ಲಿಂ ಭ್ರಾತೃತ್ವ:–

ಸಿಖ್ ಧರ್ಮದ ಪ್ರಭಾವದಿಂದಾಗಿ ಹಿಂದೂ–ಮುಸ್ಲಿಮರದಲ್ಲಿ ಭಾವೈಕ್ಯತೆ 16 ಮತ್ತು 17ನೇ ಶತಮಾನಗಳಲ್ಲಿ ಗಮನಾರ್ಹವಾಗಿದ್ದಿತು. ದುರದೃಷ್ಟವಶಾತ್ 9ನೇ ಗುರು ಗುರುತೇಜ ಬಹದ್ದೂರ್ 1675ರಲ್ಲಿ ಔರಂಗಜೇಬನಿಂದ ಮರಣದಂಡನೆಗೆ ಈಡಾಗಲಾಗಿ **ಈ ಹಿಂದಿದ್ದ ಭ್ರಾತೃತ್ವಕ್ಕೆ ಧಕ್ಕೆಯುಂಟಾಯಿತು.**

ಹತ್ತನೇ ಗುರು ಗೋವಿಂದ್ ಸಿಂಗ್ ಕಾಲದಲ್ಲಿ (1675–1708) ಸಿಖ್ ಧರ್ಮ ಮತ್ತಷ್ಟು ಪ್ರಾಬಲ್ಯಕ್ಕೆ ಬಂದಿತು. ಇವರ ಕಾಲದಲ್ಲಿ ಸ್ಥಾಪನೆಗೊಂಡ **‘ಖಾಲ್ಸಾ ಪಂಥ’** (ಪರಿಶುದ್ಧ ಪಂಥ : ಕಾಔಜ ಖಾಖಿಣ) ಸಿಖ್ಖರನ್ನು ವೀರ ಕ್ಷತ್ರಿಯರನ್ನಾಗಿ ರೂಪಿಸಿತು. ಅದುವರೆಗೆ ಸಾಧು ಸಂತರ ಮತ್ತು ಸೂಫಿ ಸಂತರ ಧರ್ಮವಾಗಿದ್ದು ಅದು ಮುಂದೆ ತಮ್ಮ ಗುರುಗಳ ಹಂತಕಾರ ವಿರುದ್ಧ ಸಿಡಿದೆದ್ದ ವೀರ ಕ್ಷತ್ರಿಯ (ಒಟಖಾಚಿಟಣ) ಜನಾಂಗವಾಗಿ ರೂಪುಗೊಂಡಿತು. ಎರಡು ಎದುರುಬದಲಾದ ಖಡ್ಗಗಳ ಚಿತ್ರವೇ ಈ ಧರ್ಮದ ಲಾಂಛನವಾಗಿದೆ. ಗುರು ಗೋವಿಂದಸಿಂಗ್ ನಂತರ ಸಿಖ್ಖರಲ್ಲಿ ಗುರು ಪರಂಪರೆ ಕೊನೆಗೊಂಡಿತು. ಅನಂತರ ಅವರ ‘ಗುರು ಗ್ರಂಥ’ವೇ ಎಲ್ಲ ಸಿಖ್ಖರಿಗೂ ಮಾರ್ಗದರ್ಶಿಯಾಗಿದೆ.



downloaded from: www.kpscvaani.com

## ➢ ಮಹಾಜನಪದಗಳು & ಗಣರಾಜ್ಯಗಳ ಯುಗ (ಕ್ರಿ.ಪೂ 600–321):–

ಕ್ರಿ.ಪೂ 6ನೇ ಶತಮಾನದಲ್ಲಿ ಉತ್ತರ ಭಾರತದಲ್ಲಿ ಮಹಾಜನಪದ ಹಾಗು ಗಣರಾಜ್ಯಗಳೆಂಬ ರಾಜಕೀಯ ಸಂಘಟನೆಯ ಅಸ್ತಿತ್ವ ಏರ್ಪಟ್ಟಿತ್ತು. ಕಬ್ಬಿಣದ ಬಳಕೆಯಿಂದಾಗಿ ಕೃಷಿ, ವಾಣಿಜ್ಯ, ಕಂದಾಯ ಸಂಗ್ರಹಣೆ, ಸೇನಾ ತಂತ್ರಜ್ಞಾನಗಳು ಅಧಿಕವಾಗಿ ವೈದಿಕ ಕಾಲದ ಸಣ್ಣ ಜನಪದಗಳು (ರಾಜ್ಯಗಳು) ಮಹಾಜನಪದಗಳೆಂಬ ದೊಡ್ಡ/ವಿಶಾಲ ರಾಜ್ಯಗಳಾಗಿ ಏಳಿಗೆಗೆ ಬಂದವು. ಬುದ್ಧನ ಕಾಲದಲ್ಲಿ ಮಹಾಜನಪದಗಳೆಂದು ಕರೆಯುವ ವಿಶಾಲ ರಾಜ್ಯಗಳನ್ನು ಕಾಣುತ್ತೇವೆ.

### 16 ಮಹಾಜನಪದಗಳು :

**ಮಹಾಜನಪದಗಳು ರಾಜಧಾನಿ**

1. ಅಂಗ
2. ಮಗಧ
3. ವಜ್ಜಿ
4. ಮಲ್ಲ
5. ಕಾಶಿ
6. ಕೋಸಲ ಶ್ರಾವಸ್ತಿ / ಸಾಕೇತ
7. ವತ್ಸ
8. ಚೇದಿ
9. ಕುರು
10. ಪಾಂಚಾಲ ಅಚಿಚಿತ್ರ / ಕಂಪಿಲ
11. ಸುರಸೇನಿ ಮಥುರಾ
12. ಮತ್ಸ್ಯ
13. ಆವಂತಿ
14. ಅಸ್ಮಾಕ
15. ಗಾಂಧಾರ ತಕ್ಷಶಿಲಾ & ಪುಷ್ಕಳಾವತಿ
16. ಕಾಂಬೋಜ ರಾಜಪುರ

### 1. ಕಾಶಿ (ವಾರಣಾಸಿ) :

ಕಾಶಿ ಅತ್ಯಂತ ಪ್ರಬಲವಾದ ಮಹಾಜನಪದವೂ ಹಾಗೂ ಮೊದಲು ಪ್ರವರ್ಧಮಾನಕ್ಕೆ ಬಂದ ಮಹಾಜನಪದವಾಗಿದೆ. ಇದರ ರಾಜಧಾನಿ ವಾರಣಾಸಿ. ಈ ಕಾಶಿಯು ಹತ್ತಿ ಬಟ್ಟೆಗಳ ತಯಾರಿಕೆ ಹಾಗೂ ಕುದುರೆ ವ್ಯಾಪಾರದ ಮಾರುಕಟ್ಟೆಯಾಗಿದ್ದಿತು. ಕಾಶಿಯ ರಾಜರು ಕೋಸಲದ ಮೇಲೆ ಅನೇಕ ಬಾರಿ ದಾಳಿ ನಡೆಸಿದ್ದರು. ಕಾಶಿಯ ಮೇಲೆ ಅಕ್ಕಪಕ್ಕದ ರಾಜ್ಯಗಳು ಆಕ್ರಮಣ ಮಾಡುತ್ತಿದ್ದವು. ಕೊನೆಗೆ ಈ ರಾಜ್ಯವನ್ನು ಮಗಧದ ರಾಜ ಆಜಾತಶತ್ರು ವಶಪಡಿಸಿಕೊಂಡನು.



downloaded from: www.kpscvaani.com

## 2. ಕೋಸಲಾ (ಆಯೋಧ್ಯಾ) :

ಕೋಸಲಾವು ಈಗಿನ ಫೈಜಾಬಾದ್, ಗೊಂಡಾ ಹಾಗೂ ಬಹರಿಚೀ ಜಿಲ್ಲೆಗಳನ್ನು ಒಳಗೊಂಡಿತ್ತು. ಶ್ರಾವಸ್ತಿ ಇದರ ರಾಜಧಾನಿ. ಆಯೋಧ್ಯವು ಕೋಸಲದ ಒಂದು ಪ್ರಮುಖ ಪಟ್ಟಣವಾಗಿತ್ತು. ಅಯೋಧ್ಯಾ, ಸಾಕೇತ. ಶ್ರಾವಸ್ತಿ ಮುಂತಾದ ಪಟ್ಟಣಗಳು ಅತ್ಯಂತ ಸಂಪದ್ಭರಿತವಾದ ವಾಣಿಜ್ಯ ಕೇಂದ್ರಗಳಾಗಿದ್ದವು. ಕೋಸಲವನ್ನು ಆಳ್ವಿಕೆ ಮಾಡಿದ ಪ್ರಖ್ಯಾತ ದೊರೆ ಪ್ರಸೇನಜಿತ. ಈತ ಬಿಂದುಸಾರ & ಅಜಾತಶತ್ರುವಿನ ಸಮಕಾಲೀನ. ಬುದ್ಧನ ಸಮಕಾಲೀನನಾದ ಈತ ಮಗಧದ ಅಜಾತ ಶತ್ರುವಿನೊಂದಿಗೆ ಉತ್ತಮ ಸಂಬಂಧವನ್ನು ಹೊಂದಿರಲಿಲ್ಲ. ಪ್ರಸೇನಜಿತನ ಸಹೋದರಿಯನ್ನು ಬಿಂಬಸಾರ (ಮಗಧದ ದೊರೆ)ನಿಗೆ ವಿವಾಹ ಮಾಡಲಾಯಿತು. ಕಾಶಿಯನ್ನು ವರದಕ್ಷಿಣೆಯಾಗಿ ಆಕೆಗೆ ನೀಡಲಾಯಿತು. ನಂತರ ಕಾಶಿಯನ್ನು ಪ್ರಸೇನಜಿತನು ವಶಪಡಿಸಿಕೊಂಡನು. ಪ್ರಸೇನಜಿತನು ತನ್ನ ಮಗಳಾದ ವಜ್ಜೀರಾಳನ್ನು ಅಜಾತಶತ್ರುವಿಗೆ ವಿವಾಹ ಮಾಡಿ ಸಂಬಂಧ ಬೆಳೆಸಿದನು. ಕಾಶಿ ರಾಜ್ಯವನ್ನು ಮಗಳಿಗೆ ಉಡುಗೊರೆಯಾಗಿ ನೀಡಿದನು. ಪ್ರಸೇನಜಿತನ ಮರಣಾನಂತರ ಅಜಾತ ಶತ್ರುವು ಕೋಸಲವನ್ನು ಮಗಧ ರಾಜ್ಯದಲ್ಲಿ ವಿಲೀನಗೊಳಿಸಿದನು.

## 3. ಅಂಗ (ಪೂರ್ವ ಬಿಹಾರ್) :

ಈ ಅಂಗ ರಾಜ್ಯವು ಈಗಿನ ಪೂರ್ವ ಬಿಹಾರ್ ಜಿಲ್ಲೆಗಳಾದ ಮಾಂಗ್ಯಾರ್ & ಬಾಗಲ್‌ಪುರಗಳನ್ನು ಒಳಗೊಂಡಿದೆ. ಇದರ ರಾಜಧಾನಿ ಚಂಪಾ. ಈ ಅಂಗ ರಾಜ್ಯವು ಗೌತಮ ಬುದ್ಧನ ಅಂತ್ಯದವರೆಗೆ ಇದ್ದ ಜನಪದಗಳಲ್ಲಿ ಒಂದಾಗಿತ್ತು. ಇದರ ರಾಜಧಾನಿ ಚಂಪಾವು ಪ್ರಮುಖ ವಿದೇಶಿ ವಾಣಿಜ್ಯ ಕೇಂದ್ರವಾಗಿದ್ದಿತ್ತು. ಇದನ್ನು ಕ್ರಿ.ಪೂ 6ನೇ ಶತಮಾನದ ಮಧ್ಯ ಭಾಗದಲ್ಲಿ ಬಿಂಬಸಾರನು ಮಗಧದಲ್ಲಿ ಸೇರಿಸಿಕೊಂಡನು.

## 4. ಮಗಧ (ದಕ್ಷಿಣ ಬಿಹಾರ್) :

ಈ ಮಗಧ ರಾಜ್ಯವು ಈಗಿನ ಬಿಹಾರ್‌ನ ಪಾಟ್ನಾ, ಗಯಾ ಹಾಗೂ ಷಹಾಬಾದ್ ಜಿಲ್ಲೆಗಳನ್ನು ಒಳಗೊಂಡಿದೆ. ಇದರ ರಾಜಧಾನಿ ಮೊದಲು ಗಿರಿವ್ರಜ (ರಾಜಗೃಹ) ನಂತರ ಕ್ರಿ.ಪೂ 5ನೇ ಶತಮಾನದಲ್ಲಿ ಪಾಟಲೀಪುತ್ರಕ್ಕೆ ಬದಲಾಯಿತು. ಈ ರಾಜ್ಯದ ಸಂಸ್ಥಾಪಕರು ಜರಾಸಂಧ & ಬೃಹದ್ರಥರೆಂದು ಕೆಲವು ವೃತ್ತಾಂಶಗಳು ತಿಳಿಸುತ್ತವೆಯಾದರೂ ಮಗಧದ ನಿಜವಾದ ನಿರ್ಮಾಪಕರು ಬಿಂಬಸಾರ & ಅಜಾತಶತ್ರು. ಬಿಂಬಸಾರನು ಗೌತಮಬುದ್ಧನ ಕಾಲದಲ್ಲಿ ಮಗಧವನ್ನು ಆಳ್ವಿಕೆ ಮಾಡುತ್ತಿದ್ದನು. ನಂತರದಲ್ಲಿ ಅಜಾತಶತ್ರುವು ಮಗಧವನ್ನು ಆಳ್ವಿಕೆ ಮಾಡಿದನು. ಇವನ ಆಳ್ವಿಕೆಯ ಅವಧಿಯಲ್ಲಿ ಮಗಧವು ಅತ್ಯಂತ ಪ್ರಬಲ ರಾಜ್ಯವಾಗಿ ಏಳಿಗೆ ಹೊಂದಿತು.



downloaded from: www.kpscvaani.com

## 5. ವಜ್ಜಿ (ಉತ್ತರ ಬಿಹಾರ) :

ವಜ್ಜಿ ಅಥವಾ ವೃಜ್ಜಿ ಗಣರಾಜ್ಯವು ಬಿಹಾರದ ಗಂಗಾ ನದಿಯ ಉತ್ತರ ಭಾಗದಲ್ಲಿ ಏಳಿಗೆಗೆ ಬಂದಿತು. ಇದು ಬಿಹಾರದ ವೈಶಾಲಿ ಜಿಲ್ಲೆಯಲ್ಲಿದೆ. ಈ ರಾಜ್ಯವು ಲಿಚ್ಛವಿ, ವಿದೇಹ, ಜ್ಞಾತ್ರಿಕಗಳೆಂಬ ಬುಡಕಟ್ಟುಗಳನ್ನು ಒಳಗೊಂಡ ಗಣರಾಜ್ಯವಾಗಿತ್ತು. ವಿದೇಹದ ರಾಜಧಾನಿ ಮಿಥಿಲಾ, ಲಿಚ್ಛವಿಗಳ ಕೇಂದ್ರ ಸ್ಥಾನ ವೈಶಾಲಿಯಾಗಿತ್ತು. ಮಹಾವೀರನ ತಂದೆ ಸಿದ್ದಾರ್ಥನು ಜ್ಞಾತ್ರಿಕ ಪಂಗಡಕ್ಕೆ ಸೇರಿದ್ದನು. ವೈಶಾಲಿಯು ಈ ವೃಜ್ಜಿ ರಾಜ್ಯಕ್ಕೆ ರಾಜಧಾನಿಯಾಗಿತ್ತು. ಕೊನೆಗೆ ಮಗಧದ ಅಜಾತಶತ್ರು ಈ ರಾಜ್ಯವನ್ನು ಆಕ್ರಮಿಸಿಕೊಂಡನು.

## 6. ಮಲ್ಲ (ಗೋರಖ್‌ಪುರ) :

ಈ ರಾಜ್ಯವು ಒಂದು ಗಣರಾಜ್ಯವಾಗಿದ್ದು, ಈಗಿನ ಉತ್ತರ ಪ್ರದೇಶದ ದಿಯೋರಾ, ಬಸ್ತಿ, ಗೋರಖ್‌ಪುರ ಹಾಗೂ ಸಿದ್ದಾರ್ಥ ನಗರಗಳನ್ನು ಒಳಗೊಂಡಿದೆ. ಇದರ ಅವಳಿ ರಾಜಧಾನಿಗಳೆಂದರೆ ಪಾವಪುರಿ ಹಾಗೂ ಕುಶೀನಗರ. ಗೌತಮ ಬುದ್ದನು ಮಲ್ಲ ರಾಜ್ಯದ ಕುಶೀ ನಗರದಲ್ಲಿ ಕೊನೆಯುಸಿರೆಳೆದನು.

ಅಲೆಕ್ಸಾಂಡರನು ಭಾರತದ ಮೇಲೆ ದಾಳಿ ಮಾಡಿದಾಗ ಮಲ್ಲ ಗಣರಾಜ್ಯ ಅಸ್ತಿತ್ವಲ್ಲಿತೆಂದು ಹೇಳಲಾಗಿದೆ. ಕೊನೆಗೆ ಈ ರಾಜ್ಯವನ್ನು ಮಗಧದಲ್ಲಿ ವಿಲೀನಗೊಳಿಸಲಾಯಿತು.

## 7. ಚೇಧಿ (ನರ್ಮದಾ ನದಿ ಪಾತ್ರ) :

ಚೇಧಿ ರಾಜ್ಯವು ಈಗಿನ ಬುಂದೇಲ್‌ಖಂಡ್ ಪ್ರದೇಶವನ್ನು ಒಳಗೊಂಡಿದೆ. ಇದರ ರಾಜಧಾನಿ ಸೂಕ್ತಿಮತಿ. ಚೇದಿರಾಜ್ಯವು ಕಾಶಿ & ಮತ್ಸ್ಯ ರಾಜ್ಯಗಳೊಂದಿಗೆ ಉತ್ತಮ ಸಂಬಂಧ ಹೊಂದಿತ್ತು. ಹಾಥಿಗುಂಪಾ ಶಾಸನವು ಕಳಿಂಗ ರಾಜ್ಯ ಸ್ಥಾಪನೆ ಮಾಡಿದ ಚೇದಿಗಳ ಒಂದು ಪಂಗಡ ಅತ್ಯಂತ ಪ್ರಾಚೀನವಾದುದೆಂದು ತಿಳಿಸುತ್ತದೆ.

## 8. ವತ್ಸ (ಅಲಹಾಬಾದ್) :

ಈ ರಾಜ್ಯವು ಈಗಿನ ಉತ್ತರಪ್ರದೇಶದ ಯಮುನಾ ನದಿ ದಂಡೆಯ ಅಲಹಾಬಾದ್, ಮಿರ್ಜಾಪುರ ಜಿಲ್ಲೆಗಳನ್ನು ಒಳಗೊಂಡಿದೆ. ಇದರ ರಾಜಧಾನಿ ಕೋಸಾಂಬಿ. ಕ್ರಿ.ಪೂ 6ನೆ ಶತಮಾನದ ಅತ್ಯಂತ ಪ್ರಬಲವಾದ ಕೇಂದ್ರವಾಗಿತ್ತು. ಗೌತಮ ಬುದ್ಧನ ಕಾಲದಲ್ಲಿ ವತ್ಸ ರಾಜ್ಯವನ್ನು 'ಉದಯನ' ಎಂಬ ರಾಜನು ಆಳ್ವಿಕೆ ಮಾಡುತ್ತಿದ್ದನು. ಈ ಉದಯನನು ಬೌದ್ಧ ಧರ್ಮದ ಅನುಯಾಯಿಯಾಗಿದ್ದನು.

ಅವಂತಿಯ ಪ್ರದ್ಯೋತ ಹಾಗೂ ಉದಯನನ ನಡುವೆ ಆಗಾಗ್ಗೆ ಯುದ್ಧ ನಡೆಯುತ್ತಿತ್ತು. ಪ್ರದ್ಯೋತನು ಉದಯನನ್ನು ಸೆರೆ ಹಿಡಿದನು. ಪ್ರದ್ಯೋತನ ಮಗಳನ್ನು ಉದಯನನು ವಿವಾಹವಾದನು. ಉದಯನನ ಮರಣಾನಂತರ ಈ ರಾಜ್ಯವು ಮಗಧದೊಂದಿಗೆ ಸೇರಿಹೋಯಿತು.



downloaded from: www.kpscvaani.com

### 9. ಕುರು (ಮೀರತ್–ದೆಹಲಿ) :

ಈ ಕುರು ರಾಜ್ಯವು ಈಗಿನ ಹರಿಯಾಣ & ದೆಹಲಿ ಪ್ರದೇಶಗಳನ್ನು ಒಳಗೊಂಡಿದೆ. ಇದರ ರಾಜಧಾನಿ ಇಂದ್ರಪ್ರಸ್ಥ / ಹಸ್ತಿಮಾಪುರ (ದೆಹಲಿ) ಪಾಳಿ ಗ್ರಂಥಗಳ ಪ್ರಕಾರ ಕುರು ರಾಜ್ಯದ ರಾಜರು ಯುಧಿಷ್ಟಿರ ಗೋತ್ರಕ್ಕೆ ಸೇರಿಚವರು ಎಂದು ತಿಳಿಸುತ್ತದೆ.

### 10.ಪಾಂಚಾಲ (ಉತ್ತರ ಪ್ರದೇಶ) :

ಪಾಂಚಾಲ ರಾಜ್ಯವು ಉತ್ತರ ಪ್ರದೇಶದ ಪಶ್ಚಿಮ ಭಾಗ ರೋಹಿಲ್‌ಖಂಡ್ & ಮಧ್ಯ ದೋ–ಅಬ್ ಪ್ರದೇಶಗಳನ್ನು ಒಳಗೊಂಡಿದೆ. ಇದರ ರಾಜಧಾನಿ ಅಚಿಚಿತ್ರ/ಕಂಪಿಲಾ. ಪ್ರಾಚೀನ ಗ್ರಂಥಗಳ ಪಾಂಚಾಲವು ಉತ್ತರ ಪಾಂಚಾಲ ಹಾಗೂ ದಕ್ಷಿಣ ಪಾಂಚಾಲ ರಾಜ್ಯಗಳೆಂಬ ಎರಡು ವಿಭಾಗಗಳನ್ನು ಹೊಂದಿದ್ದು, ಉತ್ತರ ಪಾಂಚಾಲದ ರಾಜಧಾನಿ ಅಚಿಚಿತ್ರ ಹಾಗು ದಕ್ಷಿಣದ ಪಾಂಚಾಲದ ರಾಜಧಾನಿ ಕಾಂಪಿಲ್ಯ/ಕಂಪಿಲ ಎಂದು ತಿಳಿಸುತ್ತದೆ.

### 11. ಮತ್ಸ್ಯ (ಜೈಪುರ) :

ಮತ್ಸ್ಯ ರಾಜ್ಯವು ಈಗಿನ ರಾಜಸ್ಥಾನ್ ಅಲ್ವಾರ್, ಭಗತ್‌ಪುರ & ಜೈಪುರ ಪ್ರದೇಶಗಳನ್ನು ಒಳಗೊಂಡಿದೆ. ಇದರ ರಾಜಧಾನಿ ವಿರಾಟನಗರ. ಇದನ್ನು ಚೇದಿ ದೊರೆಗಳು ಮೊದಲು ವಶಪಡಿಸಿಕೊಂಡರು. ನಂತರ ಮಗಧದಲ್ಲಿ ಸೇರಿಹೊಯಿತು.

### 12.ಸುರಸೇನಿ (ಮಥುರಾ) :

ಈ ರಾಜ್ಯವು ಈಗಿನ ಬ್ರಿಜಮಂಡಲಾ ಪ್ರದೇಶಗಳನ್ನು ಒಳಗೊಂಡಿದೆ. ಇದರ ರಾಜಧಾನಿ ಮಥುರಾ. ಇದು ಯಮುನಾ ನದಿಯ ದಂಡೆಯ ಮೇಲಿದೆ. ಇದು ಗಣರಾಜ್ಯ ಮಾದರಿಯ ರಾಜ್ಯವನ್ನು ಹೊಂದಿತ್ತು. ಇದರ ಅರಸನಾದ ಅವಂತಿಪುತ್ರನು ಬುದ್ಧನ ಶಿಷ್ಯನಾಗಿದ್ದನು. ಗ್ರೀಕ್ ಬರವಣಿಗೆಗಳಲ್ಲಿ ಈ ರಾಜ್ಯದ ಉಲ್ಲೇಖವಿದ್ದು, 'ಸೌರ ಸೇನಾಯ್' ಎಂದು ಕರೆಯಲ್ಪಡುತ್ತಿದ್ದರು. ಕೊನೆಗೆ ಮಗಧವು ಈ ರಾಜ್ಯವನ್ನು ವಶಪಡಿಸಿಕೊಂಡಿತು.

### 13.ಅಸ್ಮಾಕ್ (ಗೋದಾವರಿ ಪ್ರದೇಶ) :

ಈ ರಾಜ್ಯವು ಗೋದಾವರಿ & ನರ್ಮದಾ ನಡುವಿನ ಪ್ರದೇಶವನ್ನು ಒಳಗೊಂಡಿದೆ. ಇದರ ರಾಜಧಾನಿ ಪಾಟ್ನಾ. ಇದು ಭಾರತದ ದಕ್ಷಿಣದ ಭಾಗಕ್ಕೆ ಸೇರಿದ ಮಹಾನಜಪದವಾಗಿದ್ದು, ಈ ರಾಜ್ಯವನ್ನು ಇಕ್ವಾ್ವಕು ಕ್ಷತ್ರಿಯನು ಆಳುತ್ತಿದ್ದನು. ಕೊನೆಗೆ ಇದನನ್ನು ಆವಂತಿ ರಾಜ್ಯವು ವಶಪಡಿಸಿಕೊಂಡಿತು.



downloaded from: www.kpscvaani.com

### 14.ಆವಂತಿ (ಮಾಳ್ವ) :

ಈ ರಾಜ್ಯವು ಮಧ್ಯಪ್ರದೇಶದ ಮಾಳ್ವ ಪ್ರದೇಶವನ್ನು ಒಳಗೊಂಡಿದೆ. ಇದರ ರಾಜಧಾನಿ ಉಜ್ಜಯಿನಿ ಹಾಗೂ ಮಹಿಷ್‌ಮತಿ. ಚಂದ್ರಪ್ರದ್ಯೋತ ರಾಜನು ಆವಂತಿ ರಾಜ್ಯದ ಅತ್ಯಂತ ಪ್ರಖ್ಯಾತ ದೊರೆಯಾಗಿದ್ದನು. ಈತ ಗೌತಮ ಬುದ್ಧ ಹಾಗೂ ಮಹಾವೀರನ ಸಮಕಾಲೀನ. ಆವಂತಿಯು ಬೌದ್ಧ ಧರ್ಮದ ಪ್ರಮುಖ ಕೇಂದ್ರವಾಗಿತ್ತು ಹಾಗೂ ಈತ ಬೌದ್ಧ ಧರ್ಮದ ಅನುಯಾಯಿಯಾಗಿದ್ದನು. ಕೊನೆಗೆ ಆವಂತಿಯು ಮಗಧ ಸಾಮ್ರಾಜ್ಯದಲ್ಲಿ ವಿಲೀನಗೊಂಡಿತು.

### 15.ಗಾಂಧಾರ (ಪೇಶಾವರ & ರಾವಲ್ಪಿಂಡಿ) :

ಈ ಮಹಾಜನಪದವು ಭಾರತದ ವಾಯುವ್ಯ ಗಡಿ ಪ್ರದೇಶವನ್ನು ಒಳಗೊಂಡಿದೆ. ತಕ್ಷಶಿಲಾ ಇದರ ರಾಜಧಾನಿಯಾಗಿತು. ಇದು ಪ್ರಾಚೀನ ಭಾರತದ ಪ್ರಮುಖ ವಿದ್ಯಾಕೇಂದ್ರವಾಗಿತ್ತು. ಕ್ರಿ.ಪೂ. 6ನೇ ಶತಮಾನದ ವೇಳೆಗೆ ಗಾಂಧಾರವನ್ನು ದೊರೆ ಡೇರಿಯಸ್‌ನು ವಶಪಡಿಸಿಕೊಂಡನು.

### 16.ಕಾಂಬೋಜ (ವಾಯುವ್ಯಯ ಭಾರತ) :

ಈ ರಾಜ್ಯವು ಈಗಿನ ಪಾಕಿಸ್ತಾನದ ಹಜಾರ ಜಿಲ್ಲೆಯ ಪ್ರದೇಶಗಳನ್ನು ಒಳಗೊಂಡಿದೆ. ಇದು ಗಾಂಧಾರ ಮಹಾಜನಪದದ ಸಮೀಪದ ವಾಯುವ್ಯ ಭಾರತದ ಪ್ರದೇಶಗಳನ್ನು ಒಳಗೊಂಡಿದೆ. ಇದರ ರಾಜಧಾನಿ ರಾಜಪುರ. ಗಾಂಧಾರ & ಕಾಂಬೋಜಗಳ ನಡುವೆ ಉತ್ತಮ ಸಂಬಂಧವಿದ್ದಿತು.

## ಮಹಾಜನಪದಗಳಲ್ಲಿ ಪ್ರಮುಖ ಮಹಾಮಾತ್ರರು (ಅಧಿಕಾರಿಗಳು) :

- ರಾಜ – ದೊರೆ / ಅರಸ
- ಉಪರಾಜ – ಯುವರಾಜ
- ಸೇನಾಪತಿ – ಸೈನ್ಯದ ಮುಖ್ಯಸ್ಥ
- ಭಂಡಾಗರಿಕಾ – ಖಜಾಂಚಿ
- ಅಮ್ಮಚ್ಚಾ – ಅಮಾತ್ಯರು
- ಸರ್ವರ್ಥಕ – ಸಾಮಾನ್ಯ ವಿಷಯಗಳ ಮೇಲ್ವಿಚಾರಕ
- ವ್ಯವಹಾರಿಕ – ನ್ಯಾಯದ ಮಂತ್ರಿ
- ಸೇನಾ ನಾಯಕ – ಸೈನ್ಯದ ಮೇಲ್ವಿಚಾರಕ



downloaded from: www.kpscvaani.com

- ದ್ರೋಣಾಮಾಪಕಾರ – ಕಂದಾಯ ಮಂತ್ರಿ

## ➢ ವಿಶ್ವ ಯುದ್ಧಗಳು ಮತ್ತು ಅಂತರಾಷ್ಟ್ರೀಯ ಸಂಘಟನೆಗಳು :–

ಎರಡು ವಿಶ್ವ ಯುದ್ಧಗಳಿಗೆ ಸಂಕೀರ್ಣವಾದ ಭೌಗೋಳಿಕ ರಾಜಕೀಯ, ಸಾಂಸ್ಕೃತಿಕ ಹಾಗೂ ಬೌದ್ಧಿಕ ಹಿನ್ನೆಲೆಗಳು ಇದ್ದವು. 15ನೇ ಶತಮಾನದ ಭೌಗೋಳಿಕ ಅನ್ವೇಷಣೆ ಯುರೋಪಿನ ಹಾಗೂ ವಿಶ್ವದ ಬೇರೆ ಬೇರೆ ಭಾಗಗಳ ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿಗಳ ಮೇಲೆ ಗಾಢವಾದ ಪರಿಣಾಮ ಬೀರಿತು. ಮುಖ್ಯವಾಗಿ ಈ ಅನ್ವೇಷಣೆಗಳಿಂದ ಪ್ರಪಂಚದ ವಿವಿಧ ದೇಶಗಳಿಗೆ ಹೊಸ ಜಲ ಹಾಗೂ ಭೂಮಾರ್ಗಗಳು ತೆರೆದುಕೊಂಡವು. ಅವು ದೇಶಗಳ ನಡುವಿನ ಬಲಿಷ್ಠ ವ್ಯಾಪಾರ ಸಂಬಂಧ & ಮುಕ್ತ ಚಲನೆಯನ್ನು ಬೆಳೆಸಿದವು. ಇದರ ಪರಿಣಾಮವಾಗಿ ಯುರೋಪಿಯನ್ ದೇಶಗಳ ಮಧ್ಯೆ ವಸಾಹತುಗಳ ಸಂಪತ್ತು ಹಾಗೂ ಒಡೆತನಕ್ಕಾಗಿ ತೀವ್ರ ಪೈಪೋಟಿ ಪ್ರಾರಂಭವಾಯಿತು.

ಪುನರುಜ್ಜೀವನವು ಆಧುನಿಕ ಚಿಂತನೆ & ವಿಜ್ಞಾನ, ಜಾತ್ಯಾತೀತತೆ ಮುಂತಾದವುಗಳ ಬೆಳವಣಿಗೆಗೆ ನಾಂದಿಯಾಯಿತು. ಪ್ರಜಾಪ್ರಭುತ್ವ, ಜಾತ್ಯಾತೀತತೆ, ಸಮಾಜವಾದ, ಸಮತಾವಾದದಂತಹ ಹೊಸ ರಾಜಕೀಯ ಚಿಂತನೆಗಳು ಪ್ರಪಂಚದಾದ್ಯಂತ ಜನಪ್ರಿಯತೆಯನ್ನು ಪಡೆದವು.

ಅದೇ ರೀತಿಯಾಗಿ ಮತಸುಧಾರಣಾ ಚಳುವಳಿಯು ರಾಜ್ಯದ ಮೇಲಿನ ಧರ್ಮದ ಹಿಡಿತವನ್ನು ದುರ್ಬಲಗೊಳಿಸಿತು. ಪೋಪನ ಅಧಿಕಾರವು ನಿಧಾನವಾಗಿ ರಾಜ್ಯದ ಮೇಲೆ ತನ್ನ ಹಿಡಿತವನ್ನು ಕಳೆದುಕೊಂಡಿತು. ರಾಜ ಪ್ರಭುತ್ವ, ರಾಷ್ಟ್ರೀಯತೆಯ ವಿಚಾರಧಾರೆಗಳು & ಪ್ರಜಾ ಪ್ರಭುತ್ವ ಬಲಗೊಂಡವು. ಜನರು ಹೆಚ್ಚಿನ ಬೌದ್ಧಿಕ ಸ್ವತಂತ್ರವನ್ನು ಅನುಭವಿಸತೊಡಗಿದ್ದರ ಪರಿಣಾಮವಾಗಿ ವಿಜ್ಞಾನ & ಇತರೆ ಬೌದ್ಧಿಕ ಕ್ಷೇತ್ರಗಳಲ್ಲಿ ತೀವ್ರತರ ಬೆಳವಣಿಗೆಯಾಯಿತು.

ಅಮೇರಿಕಾದ ಸ್ವಾತಂತ್ರ್ಯ ಸಂಗ್ರಾಮ & ಫ್ರೆಂಚ್ ಕ್ರಾಂತಿಯೂ ಕೂಡಾ ವಿಶ್ವ ಯುದ್ಧಕ್ಕೆ ತಮ್ಮದೇ ಆದ ಹಿನ್ನಲೆಯನ್ನು ಒದಗಿಸಿದವು. ಈ ಕ್ರಾಂತಿಗಳು ರಾಷ್ಟ್ರೀಯತೆಯ ತತ್ವ ಹಾಗೂ ಪ್ರಜಾ ಪ್ರಭುತ್ವದ ಸಿದ್ಧಾಂತಗಳನ್ನು ಎತ್ತಿ ಹಿಡಿದವು & ಜನಪ್ರಿಯಗೊಳಿಸಿದವು. ಈ ಕ್ರಾಂತಿಯ ಸ್ಫೂರ್ತಿ ಯುರೋಪಿನ ಇತರೆ ರಾಷ್ಟ್ರಗಳಿಗೂ ಹರಡಿತು. ನೆಪೋಲಿಯನ್ನನ ಯುಗ ರಾಷ್ಟ್ರೀಯತೆಯನ್ನು ಒಡಿದೆಬ್ಬಿಸಿತು. ಜನರು ತಮ್ಮ ಮೊದಲ ನಿಷ್ಠೆಯನ್ನು ದೇಶಕ್ಕೆ ತೋರಿದರು. ಈ ರಾಷ್ಟ್ರೀಯತೆಯ ಸ್ಫೂರ್ತಿಯಿಂದಾಗಿ ಅನೇಕ ಯುದ್ಧಗಳು ನಡೆದು ಅದರ ಪರಿಣಾಮವಾಗಿ ರಾಷ್ಟ್ರೀಯ ಏಕತೆಗೆ ಕಾರಣವಾಯಿತು.

1815–1914ರವರೆಗೆ ಇಟಲಿ ಹಾಗೂ ಜರ್ಮನಿಯಂತಹ ಅನೇಕ ಹೊಸ ದೇಶಗಳ ಉದಯಕ್ಕೆ ಕಾರಣವಾಯಿತು. ಇದೇ ಸಮಯದಲ್ಲಿ ಮತ ಸುಧಾರಣಾ ಚಳುವಳಿಯ ಪರಿಣಾಮ & ವೈಜ್ಞಾನಿಕ ವೆಳವಣಿಗೆಯಿಂದಾಗಿ ಯುರೋಪಿನ ಜನರು ತೀವ್ರಗತಿಯಲ್ಲಿ ಮುಂದುವರೆದು ಆಧುನಿಕತೆಯತ್ತ ಸಾಗಿದರು. ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಯುರೋಪಿನ ಸಂಪತ್ತು ಬಹು ದೊಡ್ಡ ಪ್ರಮಾನದಲ್ಲಿ ಹೆಚ್ಚಿತು. ಅವರು



downloaded from: www.kpscvaani.com

ಜಗತ್ತಿನ ವಿವಿಧ ಭಾಗಗಳಲ್ಲಿ ವಸಾಹತುವನ್ನು ಸ್ಥಾಪಿಸುವಲ್ಲಿಯೂ ಯಶಸ್ವಿಯಾದರು. ಆದರೆ ಅವರು ಪ್ರಾಂತೀಯ ಹಾಗು ಇತರ ವಿವಾದಗಳನ್ನು ನೆರೆಯ ದೇಶಗಳೊಂದಿಗೆ ಶಾಂತಿಯುತವಾಗಿ ಬಗೆಹರಿಸುವ ಕಲೆಯನ್ನು ಕಲಿತಿರಲಿಲ್ಲ. ಇದರ ಪರಿಣಾಮವಾಗಿ ವಿಶ್ವಶಾಂತಿ ಹದಗೆಟ್ಟು 20ನೇ ಶತಮಾನದ ಮೊದಲಾರ್ಧ ಎರಡು ವಿಶ್ವ ಯುದ್ಧಗಳಿಗೆ ಸಾಕ್ಷಿಯಾಯಿತು. ಯುರೋಪಿನ ಅನೇಕ ದೇಶಗಳು & ಜಗತ್ತಿನ ಇತರೆ ದೇಶಗಳು ಇದರಲ್ಲಿ ಭಾಗವಹಿಸಿದ್ದವು. ಈ ಯುದ್ಧಗಳು ಜಗತ್ತು ಹಿಂದೆಂದೂ ಕಾಣದಂತಹ ಘೋರ ವಿನಾಶ ಹಾಗು ಅಪಾರ ಜೀವಹಾನಿಗೆ ಕಾರಣವಾದವು. ಈ ಯುದ್ಧಗಳು ಒಂದನೇ & ಎರಡನೇ ವಿಶ್ವ ಯುದ್ಧಗಳೆಂದು ಗುರುತಿಸಲ್ಪಡುತ್ತವೆ.

## ಮೊದಲನೇ ಜಾಗತಿಕ ಯುದ್ಧ (1914–1918) :

ಮೊದಲ ಜಾಗತಿಕ ಯುದ್ಧವು ಆಧುನಿಕ ಪ್ರಪಂಚದ ಇತಿಹಾಸದಲ್ಲಿ ಅತ್ಯಂತ ಮಹಾನ್ ದೀರ್ಘಾವಧಿಯ & ವಿನಾಶಕಾರಿ ಘಟನೆಯಾಗಿದೆ. ಜಗತ್ತಿನಲ್ಲೇ ಮೊದಲ ಬಾರಿಗೆ ಯುರೋಪ್ ಹಾಗೂ ಪ್ರಪಂಚದ ಇತರ ಭಾಗದ ಅನೇಕ ದೇಶಗಳು ಭಾಗವಹಿಸಿದ್ದ ಮೊದಲ ಯುದ್ಧವಾಗಿದ್ದು ಪ್ರತ್ಯಕ್ಷವಾಗಿ & ಪರೋಕ್ಷವಾಗಿ ಹಾನಿಗೊಳಗಾದವು. ಇದು ಹಿಂದೆ ನಡೆದ ಯಾವುದೇ ಯುದ್ಧಕ್ಕಿಂತ ಹೆಚ್ಚಿನ ಜೀವಹಾನಿ ಹಾಗೂ ಆಸ್ತಿಪಾಸ್ತಿಗಳ ನಷ್ಟಕ್ಕೆ ಕಾರಣವಾಯಿತು. ಮೊದಲ ಜಾಗತಿಕ ಯುದ್ಧವು 1914ರಲ್ಲಿ ಪ್ರಾರಂಭವಾಯಿತು 1918ರಲ್ಲಿ ಕೊನೆಗೊಂಡಿತು. ಇದು ಮೊದಲ ಯುರೋಪಿನಲ್ಲಿ ಆರಂಭವಾಗಿ ಪ್ರಪಂಚದ ಅನೇಕ ರಾಷ್ಟ್ರಗಳಿಗೆ ಹರಡಿತು. ಇದು 20ನೇ ಶತಮಾನದ ಸುಸಂಟಿತ & ಶಸ್ತ್ರಸಜ್ಜಿತ ರಾಷ್ಟ್ರಗಳ ನಡುವಿನ ಮೊದಲ ಸಂಘರ್ಷವಾಗಿತ್ತು. ಆದ್ದರಿಂದ ಇದನ್ನು ಜಾಗತಿಕ ಯುದ್ಧ ಎಂದು ಕರೆಯಲಾಗಿದೆ. ಸುಮಾರು 30 ದೇಶಗಳು ಯುದ್ಧಗಳು ಭಾಗವಹಿಸಿದ್ದವು.

## ಕಾರಣಗಳು :

- **ಉಗ್ರ ರಾಷ್ಟ್ರೀಯತೆ :**

ಉಗ್ರ ರಾಷ್ಟ್ರೀಯತೆಯು ಯುದ್ಧ ಪೂರ್ವದಲ್ಲಿ ಅಪಾಯಕಾರಿ ಪ್ರಮಾಣದಲ್ಲಿತ್ತು. ರಾಷ್ಟ್ರೀಯ ಆಶೋತ್ತರಗಳು ರಾಜಕೀಯ ವೈರತ್ವಕ್ಕೆ ಕಾರಣವಾದವು. ಯುರೋಪಿನಲ್ಲಿ ಯುದ್ಧದ ಪೂರ್ವದಲ್ಲಿ ಉಗ್ರ ರಾಷ್ಟ್ರೀಯತೆ ಬೆಳೆಯಿತು. ಅಂದರೆ ತನ್ನ ದೇಶವನ್ನು ಪ್ರೀತಿಸುವುದು ಅನ್ಯ ದೇಶವನ್ನು ದ್ವೇಷಸುವುದಾಗಿತ್ತು. ರಾಷ್ಟ್ರೀಯತೆಯ ಸ್ಫೂರ್ತಿ ಯುರೋಪಿನಲ್ಲಿ 19ನೇ ಶತಮಾನದಲ್ಲಿ ಅನೇಕ ಹೊಸ ರಾಜ್ಯಗಳನ್ನು ಹುಟ್ಟು ಹಾಕಿತು. ಹೀಗೆ ದೇಶಭಕ್ತಿ ಉಗ್ರರೂಪ ತಾಳಿ 'ಸರಿಯುದ್ದರೂ ತಪ್ಪಿದರೂ ನನ್ನ ದೇಶ' ಎಂಬುದು ರಾಷ್ಟ್ರೀಯವಾದಿಗಳ ಮಾರ್ಗದರ್ಶಿ ತತ್ವವಾಗಿತ್ತು. ಈ ರಾಷ್ಟ್ರೀಯತೆಯಿಂದಾಗಿಯೇ ಫ್ರಾನ್ಸ್‌ಗೆ ಅಲ್ಸೇಸ್ & ಲೋರೈನ್ ಪ್ರಾಂತ್ಯಗಳನ್ನೂ, ಸರ್ಬಿಯಾಗೆ ಬೋಸ್ನಿಯಾ & ಹರ್ಜೆಗೋವಿನಾಗಳನ್ನು ಪುನಃ ಪಡೆಯಲು ಸಾಧ್ಯವಾಯಿತು. ರಷ್ಯಾವೂ ಕೂಡ



downloaded from: www.kpscvaani.com

ದಕ್ಷಿಣದ ಕಡೆಗೆ ಸಾಮ್ರಾಜ್ಯವನ್ನು ವಿಸ್ತರಿಸುವ ಉದ್ದೇಶ ಹೊಂದಿತ್ತು. ಈ ಸ್ಪರ್ಧಾತ್ಮಕ ದೇಶಭಕ್ತಿಯು ಬ್ರಿಟನ್ & ಜರ್ಮನಿ ನಡುವೆ ಹಗೆತನವನ್ನು ಉಮಟುಮಾಡಿ ಅವರ ಸೈನಿಕ ಹಾಗೂ ನೌಕಾ ಪೈಪೋಟಿಗೆ ಕಾರಣವಾಯಿತು. ಜರ್ಮನಿಯ ಚಕ್ರವರ್ತಿ 2ನೇ ಕೈಸರ್ ವಿಲಿಯಂನು (1888–1918) ಜರ್ಮನ್ ಜನಾಂಗವೇ ಶ್ರೇಷ್ಠ ಎಂದು ನಂಬಿದ್ದನು. ಅವನು ಜರ್ಮನಿಯನ್ನು ವಿಶ್ವದಲ್ಲೇ ಅಗ್ರ ರಾಷ್ಟ್ರವನ್ನಾಗಿಸುವ ಬಯಕೆ ಹೊಂದಿದ್ದನು. ಅವನು 'ವಿಶ್ವ ಶಕ್ತಿ ಅಥವಾ ಪತನ' ಎಂಬ ತತ್ವದಲ್ಲಿ ನಂಬಿಕೆಯಿರಿಸಿದ್ದನು. ಅವನ ವಸಾಹತು ವಿಸ್ತರಣಾನೀತಿ ಯುರೋಪಿನ ಬೇರೆ ವಸಾಹತು ಸಾಮ್ರಾಜ್ಯಕ್ಕೆ ಬೆದರಿಕೆವನ್ನುಂಟು ಮಾಡಿತ್ತು. ಈ ಉಗ್ರ ರಾಷ್ಟ್ರೀಯತೆ ಮೊದಲನೇ ಜಾಗತಿಕ ಯುದ್ಧಕ್ಕೆ ಪ್ರಮುಖ ಕಾರಣವಾಯಿತು.

- **ಸೇನಾ ಮೈತ್ರಿಕೂಟಗಳು :**

1871ರಲ್ಲಿ ಜರ್ಮನಿಯ ಏಕೀಕರಣದ ನಂತರ, ಇದರ ಛಾನ್ಸಲರನಾದ ಒಟ್ಟೋವನ್ ಬಿಸ್ಮಾರ್ಕ್‌ನು ಶಾಂತಿಯನ್ನು ಬಯಸಿದನು. ಜರ್ಮನಿಯು ಫ್ರಾನ್ಸನ್ನು ತನ್ನ ಪರಮ ಶತ್ರು ಎಂದು ಪರಿಗಣಿಸಿತ್ತು & ಬಿಸ್ಮಾರ್ಕ್‌ನು ತನ್ನ ರಾಜತಾಂತ್ರಿಕ ನೀತಿಯಿಂದ ಫ್ರಾನ್ಸನ್ನು ಪ್ರತ್ಯೇಕಿಸಲು ಪ್ರಯತ್ನಿಸಿದನು. ಹೀಗಾಗಿ ಬಿಸ್ಮಾರ್ಕ್‌ನು ಜರ್ಮನಿಯನ್ನು ಸಶಕ್ತಗೊಳಿಸಲು ಹಾಗು ಫ್ರಾನ್ಸ್ ಅನ್ನು ಪ್ರತ್ಯೇಕಿಸಲು ಮೈತ್ರಿಕೂಟದ ರಚನೆಯಲ್ಲಿ ತೊಡಗಿದನು. ಇವನು ಪ್ರಾರಂಭದಲ್ಲಿ ಆಸ್ಟ್ರಿಯಾದೊಂದಿಗೆ ಮೈತ್ರಿ ಮಾಡಿಕೊಂಡಿದ್ದರ ಪರಿಣಾಮವಾಗಿ ಎರಡು ಶತ್ರುಕೂಟಗಳ ರಚನೆಗೆ ಕಾರಣವಾಯಿತು. ಟ್ರಿಪಲ್ ಅಲೈಯನ್ಸ್ & ಟ್ರಿಪಲ್ ಎಂಟೆಂಟೆ, ಜರ್ಮನಿ, ಆಸ್ಟ್ರೀಯಾ & ಇಟಲಿಗಳು ಸೇರಿ ಟ್ರಿಪಲ್ ಅಲೈಯನ್ಸ್ ರಚಿತವಾಯಿತು.ಈ ಶಕ್ತಿಕೂಟವನ್ನು ಕೇಂದ್ರೀಯ ಬಣವೆಂದೂ ಕರೆಯಲಾಗಿದೆ. ಫ್ರಾನ್ಸ್, ರಷ್ಯಾ & ಇಂಗ್ಲೆಂಡ್‌ಗಳು ಸೇರಿ 1907ರಲ್ಲಿ ಟ್ರಿಪಲ್ ಎಂಟೆಂಟ್ ರಚಿಸಿಕೊಂಡವು. ಅವುಗಳನ್ನು ಮಿತ್ರರಾಷ್ಟ್ರಗಳೆಂದು ಕರೆಯಲಾಯಿತು. ಎರಡೂ ಕೂಟಗಳು ಪರಸ್ಪರ ದ್ವೇಷ, ಅಸೂಯೆಗಳಿಂದ ನೋಡಲಾರಂಭಿಸಿದವು. ಈ ಮೈತ್ರಿಕೂಟಗಳ ರಚನೆ ಆತಂಕದ ವಾತಾವರಣವನ್ನು ಸೃಷ್ಟಿಸಿತು.

- **ಶಸ್ತ್ರಾಸ್ತ್ರಗಳ ಪೈಪೋಟಿ :**

ಶಸ್ತ್ರಾಸ್ತ್ರಗಳ ಪೈಪೋಟಿಯು ಮತ್ತೊಂದು ಪ್ರಮುಖ ಕಾರಣವಾಗಿದೆ. ಎರಡು ಶತ್ರು ಬಣಗಳ ರಚನೆ – ಟ್ರಿಪಲ್ ಅಲೈಯನ್ಸ್ & ಟ್ರಿಪಲ್ ಎಂಟೆಂಟೆ – ಯುರೋಪಿಯನ್ ರಾಷ್ಟ್ರಗಳ ಮಧ್ಯೆ ಯುದ್ಧ ಸಲಕರಣೆಗಳ ಉತ್ಪಾದನೆಯ ಪೈಪೋಟಿಗೆ ಕಾರಣವಾಯಿತು. ಪ್ರತಿಯೊಂದು ರಾಷ್ಟ್ರವೂ ತನ್ನ ಸೈನಿಕ & ನೌಕಾ ಅಸ್ತ್ರಗಳನ್ನು ಹೆಚ್ಚಿಸಲು ಅಆರಂಭಿಸಿದವು. ಜರ್ಮನಿ ಯುದ್ಧೋಪಕರಣಗಳಾದ ಟ್ಯಾಂಕರ್‌ಗಳು, ಜಲಾಂತರ್ಗಾಮಿಗಳು ಮುಂತಾದವುಗಳ ತಯಾರಿಕೆಯಲ್ಲಿ ಅದ್ಭುತ ಬೆಳವಣಿಗೆಯನ್ನು ಮಾಡಿತು. ಜರ್ಮನಿಯ ಎರಡನೇ ಕೈಸರ್ ವಿಲಿಯಂನ ಯುದ್ಧ ರೀತಿಯ ಧೋರಣೆ ಇಂಗ್ಲೆಂಡ್‌ನ್ನು ಗಾಬರಿಪಡಿಸಿತು. ಆದ್ದರಿಂದ ಇಂಗ್ಲೆಂಡ್ ತನ್ನ



downloaded from: www.kpscvaani.com

ನೌಕಾಬಲವನ್ನು ಹೆಚ್ಚಿಸಿಕೊಳ್ಳತೊಡಗಿತು, ಫ್ರಾನ್ಸ್, ರಷ್ಯಾ & ಇತರ ರಾಷ್ಟ್ರಗಳು ಜರ್ಮನಿ ಭಯದಿಂದ ತನ್ನ ಸೈನಿಕ ಶಕ್ತಿಯನ್ನು ಬಲಗೊಳಿಸಿಕೊಳ್ಳಲಾರಂಭಿಸಿದವು. ಫ್ರಾನ್ಸ್‌ನಲ್ಲಿ ಕಡ್ಡಾಯ ಸೈನಿಕ ತರಬೇತಿಯನ್ನು ಜಾರಿಗೊಳಿಸಲಾಯಿತು. ರಷ್ಯಾ ತನ್ನ ಸೈನಿಕ ವೆಚ್ಚವನ್ನು ದ್ವಿಗುಣಗೊಳಿಸಿತು. ಈ ಶಸ್ತ್ರಾಸ್ತ್ರಗಳ ಪೈಪೋಟಿ ಪರಸ್ಪರ ಭಯ, ಅನುಮಾನ, ಆತಂಕ & ಅಪನಂಬಿಕೆಗಳನ್ನು ಸೃಷ್ಟಿಸಿತು.

- **ಸಾಮ್ರಾಜ್ಯಶಾಹಿ & ಆರ್ಥಿಕ ಪೈಪೋಟಿ :**

ಯುರೋಪಿನ ರಾಷ್ಟ್ರಗಳ ಮಧ್ಯೆ ಅಂರತಾಷ್ಟ್ರೀಯ ಸಂಘರ್ಷಕ್ಕೆ ಪ್ರಮುಖ ಕಾರಣವೆಂದರೆ ಸಾಮ್ರಾಜ್ಯಶಾಹಿನೀತಿ & ಆರ್ಥಿಕ ಪೈಪೋಟಿ. ಕೈಗಾರಿಕಾ ಕ್ರಾಂತಿಯಿಂದ ಸಾಮ್ರಾಜ್ಯಶಾಹಿ ಬೆಳೆಯಿತು. ಈ ನೀತಿಯು ವಸಾಹತುಗಳನ್ನು ಸ್ಥಾಪಿಸುವ ಮೂಲಕ ದೇಶದ ಪ್ರಾಬಲ್ಯವನ್ನು ವಿಸ್ತರಿಸುವುದೇ ಆಗಿದೆ. ಯುರೋಪಿನ ರಾಷ್ಟ್ರಗಳ ವಸಾಹತುಗಳ ಮಹತ್ವಾಕಾಂಕ್ಷೆಯೂ ಯುದ್ಧಕ್ಕೆ ಎಡೆಮಾಡಿಕೊಟ್ಟಿತ್ತು. ವಸಾಹತುಗಳು ಕಚ್ಚಾವಸ್ತುಗಳ ಪೂರೈಕೆಗೆ & ಸಿದ್ಧವಸ್ತುಗಳ ಮಾರುಕಟ್ಟೆಯನ್ನು ಒದಗಿಸುವ ಮೂಲವಾಗಿತ್ತು. ಜರ್ಮನಿ & ಇಂಗ್ಲೆಂಡ್ ನಡುವೆ ವಾಣಿಜ್ಯ & ಕೈಗಾರಿಕಾ ಪೈಪೋಟಿ ಏರ್ಪಟ್ಟಿತ್ತು. ಇಂಗ್ಲೆಂಡ್ ಹೆಚ್ಚಿನ ವಸಾಹತುಗಳನ್ನು ಹೊಂದಿತ್ತು. ಜರ್ಮನಿಯು ಇಂಗ್ಲೆಂಡಿನ ವಶದಲ್ಲಿದ್ದ ಮಾರುಕಟ್ಟೆಗಳನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಯತ್ನಿಸುತ್ತಿದ್ದರಿಂದ ಇಂಗ್ಲೆಂಡ್ & ಜರ್ಮನಿ ನಡುವೆ ಹಗೆತನ ಹೆಚ್ಚಾಯಿತು. ಜರ್ಮನ್ ವಸ್ತುಗಳಿಗೆ ಅನೇಕ ರಾಷ್ಟ್ರಗಳಲ್ಲಿ ಹೆಚ್ಚಿನ ಬೇಡಿಕೆ ಇತ್ತು. ಇಂಗ್ಲೆಂಡ್ ತನ್ನ ಮಾರುಕಟ್ಟೆ ಕಳೆದುಕೊಳ್ಳುವ ಭಯವನ್ನು ಹೊಂದಿತ್ತು, ಇಂಗ್ಲೆಂಡ್ ಯಾವುದೇ ಕಾರಣಕ್ಕೂ ತನ್ನ ವಸಾಹತುಗಳನ್ನು ಕಳೆದುಕೊಳ್ಳಲು ಸಿದ್ಧವಿರಲಿಲ್ಲ. ಆದರೆ ಜರ್ಮನಿ ಎಷ್ಟೇ ಕಷ್ಟವಾದರೂ ಅವುಗಳನ್ನು ಪಡೆದೇ ತೀರಬೇಕೆದು ಬಯಸಿತು. ಇದು ಆಫ್ರಿಕಾದಲ್ಲಿ ಪ್ರಮುಖವಾಗಿ ಕಂಡುಬಂದಿತು. ಆಫ್ರಿಕಾದಲ್ಲಿ ಜರ್ಮನಿಯು ತನ್ನ ವೈರಿ ಇಂಗ್ಲೆಂಡ್ ಹಾಗೂ ಇತರ ಯುರೋಪಿನ ರಾಷ್ಟ್ರಗಳನ್ನು ಎದುರಿಸಿ ವಸಾಹತುಗಳನ್ನು ಪಡೆದುಕೊಳ್ಳಲು ಸೈನ್ಯವನ್ನು ಉಪಯೋಗಿಸಲು ಹಿಂಜರಿಯಲಿಲ್ಲ. ಹೀಗೆ ಯುರೋಪಿನ ರಾಷ್ಟ್ರಗಳ ಮಧ್ಯೆ ಸಾಮ್ರಾಜ್ಯಶಾಹಿ & ಆರ್ಥಿಕ ಪೈಪೋಟಿಯೂ ಸಹ ಮೊದಲನೇ ಜಾಗತಿಕ ಯುದ್ಧಕ್ಕೆ ಬಹು ಮುಖ್ಯ ಕಾರಣಗಳಲ್ಲಿ ಒಂದಾಯಿತು.

ಸಾಮಾನ್ಯವಾಗಿ ಸಾಮ್ರಾಜ್ಯಶಾಹಿ ಎಂದರೆ ತನ್ನ ವಿಸ್ತರಣೆಗೆ ಮತ್ತೊಂದು ಸಾಮ್ರಾಜ್ಯದ ಭೂಭಾಗವನ್ನು ಆಕ್ರಮಿಸಿಕೊಳ್ಳುವುದಾಗಿದೆ.

ವಸಾಹತುಶಾಹಿ ಎಂದರೆ ಸೈನ್ಯ ಅಥವಾ ಇನ್ಯಾವುದೇ ವಿಧಾನದಿಂದ ವಿದೇಶಗಳ ಮೇಲೆ ರಾಜಕೀಯ ಹಿಡಿತ ಸ್ಥಾಪಿಸಿ ರಾಜಕೀಯ, ಆರ್ಥಿಕ & ಮಾರುಕಟ್ಟೆ ಅನುಕೂಲಗಳನ್ನು ಪಡೆಯುವುದಾಗಿದೆ.



downloaded from: www.kpscvaani.com

- **ಬಾಲ್ಕನ್ ಸಮಸ್ಯೆ :**

ಟರ್ಕಿಯು ದುರ್ಬಲ & ಅದಕ್ಷ ಸುಲ್ತಾನನನ್ನು 'ಯುರೋಪಿನ ರೋಗಿ' ಎಂದು ಕರೆಯಲಾಗುತ್ತಿತ್ತು. ಬಾಲ್ಕನ್ ಪ್ರದೇಶದ ಕ್ರಿಶ್ಚಿಯನ್ ರಾಜ್ಯಗಳಾದ ಬಲ್ಗೇರಿಯಾ, ಬೋಸ್ನಿಯಾ, ರುಮೇನಿಯಾ ಇತ್ಯಾದಿಗಳ ಮೇಲೆ ಟರ್ಕಿ ಸುಲ್ತಾನನ ಹಿಡಿತವು ದುರ್ಬಲವಾಗುತ್ತಾ ಹೋಯಿತು. ಸುಲ್ತಾನನ ದೌರ್ಬಲ್ಯದ ಲಾಭ ಪಡೆದ ಆಸ್ಟ್ರಿಯಾ & ರಷ್ಯಾಗಳು ಬಾಲ್ಕನ್ ಪರ್ಯಾಯ ದ್ವೀಪದ ಮೇಲೆ ತಮ್ಮ ಪ್ರಭಾವವನ್ನು ಪಸರಿಸಲು ಪ್ರಯತ್ನಿಸಿದವು. 1908ರಲ್ಲಿ ಆಸ್ಟ್ರೀಯಾವು ಬೋಸ್ನಿಯಾ & ಹರ್ಜೆಗೋವಿನಾಗಳನ್ನು 1878ರ ಬರ್ಲಿನ್ ಒಪ್ಪಂದದ ತೀರ್ಮಾನಕ್ಕೆ ವಿರುದ್ಧವಾಗಿ ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡಿತು. ಬರ್ಲಿನ್ ಒಪ್ಪಂದ ಆಸ್ಟ್ರೀಯಾಕ್ಕೆ ಮೇಲ್ವಿಚಾರಣೆಯ ಅಧಿಕಾರವನ್ನು ನೀಡಿತ್ತೇ ಹೊರತು ಆಕ್ರಮಣಕ್ಕಲ್ಲ. ಆಸ್ಟ್ರೀಯಾದ ಕ್ರಮವು ರಷ್ಯಾವನ್ನು ಕೆರಳಿಸಿದ್ದರಿಂದ ಅದು ಆಸ್ಟ್ರೀಯಾದ ವಿರುದ್ದ ಸರ್ಬಿಯಾವನ್ನು ಬೆಂಬಲಿಸಿತು. ಇದರಿಂದ ಸರ್ಬಿಯಾ ಹಾಗೂ ಅದರ ಮಿತ್ರ ರಾಷ್ಟ್ರವಾದ ರಷ್ಯಾಕ್ಕೆ ಕೋಪವುಂಟಾಯಿತು. ಹೀಗೆ ಎರಡು ವೈರಿ ಬಣಗಳ ಮಧ್ಯೆ ವೈರತ್ವ ಹೆಚ್ಚಾದಂತೆ 1914ರ ಜಾಗತಿಕ ಯುದ್ಧಕ್ಕೆ ದಾರಿ ಮಾಡಿಕೊಟ್ಟಿತು.

- **ವೃತ್ತ ಪತ್ರಿಕೆಗಳ ಪಾತ್ರ :**

ವೃತ್ತಪತ್ರಿಕೆಗಳು ಎರಡು ಬಣಗಳ ನಡುವೆ ಅಂತರ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವವಹಿಸಿದವು. ಎಲ್ಲ ರಾಷ್ಟ್ರಗಳಲ್ಲೂ ವೃತ್ತಪತ್ರಿಕೆಗಳು ಯಾವುದೋ ಒಂದು ವಿವಾದವನ್ನು ತೆಗೆದುಕೊಂಡು ರಾಷ್ಟ್ರೀಯ ಭಾವನೆಯನ್ನು ಉದ್ದೀಪಸಲು ಪ್ರಯತ್ನಿಸಿದವು. ಯುರೋಪಿನ ಜನರಲ್ಲಿ ಅಪನಂಬಿಕೆಯನ್ನು ಉಂಟುಮಾಡುವಲ್ಲಿ ವೃತ್ತಪತ್ರಿಕೆಗಳು ಕಾರಣವಾದವು.

- **ತತ್‌ಕ್ಷಣದ ಕಾರಣ :**

ಮೊದಲನೇ ಜಾಗತಿಕ ಯುದ್ಧಕ್ಕೆ ತತ್‌ಕ್ಷಣದ ಕಾರಣವೆಂದರೆ ಬೋಸ್ನಿಯಾದ ರಾಜಧಾನಿ ಸರಜೇವೋದಲ್ಲಿ 1914ರ ಜೂನ್ 28ರಂದು ಆಸ್ಟ್ರೀಯಾದ ರಾಜಕುಮಾರ ಆರ್ಷ್‌ಡ್ಯೂಕ್ ಫರ್ಡಿನಾಂಡ್ & ಅವನ ಪತ್ನಿಯ ಕೊಲೆ. ಕೊಲೆಗೈದವ ಸರ್ಬಿಯಾದ ಪ್ರಜೆ ಗವ್ರಿಲ್ಲೋ ಪ್ರಿನ್ಸೆಪ್ ಎಂಬ ವಿದ್ಯಾರ್ಥಿ. ಆಸ್ಟ್ರೀಯಾ ಸರ್ಬಿಯಾಕ್ಕೆ ಅಪರಾಧಿಗಳನ್ನು ಬಂಧಿಸಿ, ತಮಗೆ ಒಪ್ಪಿಸಲು ಅಂತಿಮ ಗಡುವು ನೀಡಿತು. ಸರ್ಬಿಯಾ ಗಡುವನ್ನು ತಿರಸ್ಕರಿಸಿತು. ಹೀಗೆ ಆಸ್ಟ್ರೀಯಾ ಜರ್ಮನಿಯ ಬೆಂಬಲದೊಂದಿಗೆ ಸರ್ಬಿಯಾದ ಮೇಲೆ ಜುಲೈ 28, 1914ರಂದು ಯುದ್ಧ ಘೋಷಿಸಿತು, ಆಗ ರಷ್ಯಾವು ಸರ್ಬಿಯಾದ ನೆರವಿಗೆ ಬಂದಿತು. ಹೀಗಾಗಿ ಮೊದಲನೇ ಜಾಗತಿಕ ಯುದ್ಧ ಪ್ರಾರಂಭವಾಯಿತು.



downloaded from: www.kpscvaani.com

## ಯುದ್ಧದ ಗತಿ :

ಆಸ್ಟ್ರೀಯಾ ಸರ್ಬಿಯಾದ ಮೇಲೆ ಯುದ್ಧ ಸಾರಿದಾಗ, ರಷ್ಯಾ ಸರ್ಬಿಯಾದ ನೆರವಿಗೆ ಬಂದಿತು. ಜರ್ಮನಿಯು ಆಸ್ಟ್ರೀಯಾದ ಸಹಾಯಕ್ಕೆ ಬಂದಿತು. ಇದು ಇತರ ದೇಶಗಳನ್ನು ಯುದ್ದಕ್ಕೆ ಎಳೆದು ತಂದಿತು.

ಯುದ್ದದಲ್ಲಿ ಜರ್ಮನಿ, ಆಸ್ಟ್ರೀಯಾ, ಟರ್ಕಿ & ಬಲ್ಗೇರಿಯಾ ಒಂದು ಕಡೆಯಾದರೆ, ಇದಕ್ಕೆ ವಿರುದ್ದವಾಗಿ ಸರ್ಬಿಯಾ, ರಷ್ಯಾ, ಫ್ರಾನ್ಸ್, ಇಂಗ್ಲೆಂಡ್, ಬೆಲ್ಜಿಯಂ, ಪೋರ್ಚುಗಲ್ ಇತ್ಯಾದಿ ಇನ್ನೊಂದು ಕಡೆಯಿದ್ದವು. 1915ರಲ್ಲಿ ಇಟಲಿಯು ಟ್ರಿಪಲ್ ಅಲೈಯನ್ಸ್ ತೊರೆದು ಟ್ರಿಪಲ್ ಎಂಟೆಂಟೆಯ ರಾಷ್ಟ್ರಗಳಿಗೆ ಬೆಂಬಲ ನೀಡಿತು. 1915ರಲ್ಲಿ ರಷ್ಯಾವು ವಿಪರೀತ ನಷ್ಟ ಅನುಭವಿಸಿತು. ಆದರೆ, ಇಂಗ್ಲೆಂಡ್ ಯುದ್ಧದಲ್ಲಿ ನೌಕಾ ಬಲದಿಂದ ತನ್ನ ಪ್ರಭಾವವನ್ನು ಮುಂದುವರೆಸಿತು. ಜರ್ಮನಿಯು ಸಹ ನೌಕಾ ಪ್ರಾಬಲ್ಯ ಹೊಂದಿತ್ತು. ಇದು ಸಾಕಷ್ಟು ಸಂಖ್ಯೆಯಲ್ಲಿ ಜಲಾಂತಾರ್ಗಾಮಿ ಅಥವಾ ಯು–ಬೋಟ್‌ಗಳನ್ನು ಹೊಂದಿದ್ದು ಶತ್ರುಗಳಿಗೆ ಅಪಾರ ನಷ್ಟವುಂಟು ಮಾಡಿತು. ಜರ್ಮನಿಯು ಅನೇಕ ಅಮೆರಿಕನ್ನರು ಪ್ರಯಾಣಿಸುತ್ತಿದ್ದ ಇಂಗ್ಲೆಂಡಿನ ಲುಸೇಟೇನಿಯನ್ ಹಡಗನ್ನು ನಾಶ ಮಾಡಿದ್ದರಿಂದ 1917ರಲ್ಲಿ ಅಮೇರಿಕಾ ಕೂಡ ಮಿತ್ರಕೂಟವನ್ನು ಸೇರಿಕೊಂಡಿತು. ಹೀಗಾಗಿ ಈ ಕದನವು ಜಾಗತಿಕ ಯುದ್ಧವಾಗಿ ಪರಿವರ್ತನೆಯಾಯಿತು. ಪರಿಸ್ಥಿತಿ ಬದಲಾದಂತೆ ಮಿತ್ರ ರಾಷ್ಟ್ರಗಳು ಜಯ ಗಳಿಸುತ್ತಾ ಹೋದವು.

ಇದೇ ಸಮಯದಲ್ಲಿ ರಷ್ಯಾದಲ್ಲಿ 1917ರಲ್ಲಿ ಆಂತರಿಕ ಕ್ರಾಂತಿಯುಂಟಾಯಿತು. ಲೆನಿನ್ ನಾಯಕತ್ವದ ಕಮ್ಯೂನಿಸ್ಟ ಸರ್ಕಾರವು ಅಧಿಕಾರಕ್ಕೆ ಬಂದು ರಷ್ಯಾವನ್ನು ಯುದ್ಧದಿಂದ ಹೊರತಂದಿತು. ಯುದ್ದವು ಭೂ, ಜಲ ಹಾಗೂ ಮೊಟ್ಟ ಮೊದಲನೇ ಬಾರಿಗೆ ಆಕಾಶದಲ್ಲಿ ನಡೆಯಿತು. ಟ್ಯಾಂಕರ್‌ಗಳು, ಬಾಂಬುಗಳು & ಜಲಾಂತರ್ಗಾಮಿಗಳಂತಹ ಆಧುನಿಕ ಶಸ್ತ್ರಾಸ್ತ್ರಗಳನ್ನು ಈ ಯುದ್ದದಲ್ಲಿ ಉಪಯೋಗಿಸಲಾಯಿತು. ಇಟಲಿಯಲ್ಲಿ ಅಸ್ಟ್ರೀಯಾ ಸೈನ್ಯವು ನಾಶವಾಯಿತು. ತದನಂತರ ಟರ್ಕಿ, ಬಲ್ಗೇರಿಯಾಗಳೂ ಸಹ ಸೋತು ಹೋದವು & ಮಿತ್ರ ಕೂಟದ ಮುಂದೆ ಶರಣಾದವು. ಅಂತಿಮವಾಗಿ ಜರ್ಮನಿ & ಅದರ ಮಿತ್ರ ಕೂಟಗಳು ನವೆಂಬರ್ 11, 1918ರಂದು ಸೋತವು. ಜರ್ಮನಿಯ ದೊರೆ ಎರಡನೇ ಕೈಸರ್ ವಿಲಿಯಂ ಸಿಂಹಾಸನ ತ್ಯಜಿಸಿ ಹಾಲೆಂಡಿಗೆ ಪಲಾಯನಗೈದನು. ಹೀಗೆ ಪ್ರಥಮ ಜಾಗತಿಕ ಯುದ್ಧ ಕೊನೆಗೊಂಡಿತು.

## ಪರಿಣಾಮಗಳು :

- ಯುದ್ಧದ ಭೀತಿ ಹಾಗೂ ನೋವುಗಳು ಅಪಾರವಾಗಿದ್ದವು. ಮಿಲಿಯನ್‌ಗಟ್ಟಲೇ ಸದೃಢ ಜನ ನಾಶವಾದವು. ಇನ್ನೂ ಅನೇಕರು ಶಾಶ್ವತವಾಗಿ ಅಂಗವಿಕಲದಾದದ್ದು ಈ ಯುದ್ಧದ ಶಾಶ್ವತ ಪರಿಣಾಮವಾಗಿತ್ತು. ಒಂದು ಅಂದಾಜಿನ ಪ್ರಕಾರ ಸುಮಾರು 60 ಮಿಲಿಯನ್ ಸೈನಿಕರು ಯುದ್ಧದಲ್ಲಿ ಭಾಗವಹಿಸಿದ್ದರು. ಅವರಲ್ಲಿ ಸುಮಾರು 10 ಮಿಲಿಯನ್ ಸೈನಿಕರು ಕೊಲ್ಲಲ್ಪಟ್ಟರು & ಸುಮಾರು 20 ಮಿಲಿಯನ್ ಸೈನಿಕರು ಗಾಯಾಳುಗಳಾದರು. ಅವರಲ್ಲಿ ಬಹಳಷ್ಟು ಸೈನಿಕರು 40 ವರ್ಷಗಳಿಗಿಂತಲೂ ಕೆಳಗಿನವರು. ಅಲ್ಲದೇ ಮಿಲಿಯನ್‌ಗಟ್ಟಲೇ ನಾಗರೀಕರು ಹಸಿವು, ಕಾಯಿಲೆ & ಹಿಂಸೆಗಳಿಂದ ಮರಣ



downloaded from: www.kpscvaani.com

ಹೊಂದಿದರು. ಪರಿಣಾಮವಾಗಿ ಮಹಿಳೆಯರು ಕಾರ್ಖಾನೆಗಳಲ್ಲಿ, ಅಂಗಡಿಗಳಲ್ಲಿ, ದವಾಖಾನೆಗಳಲ್ಲಿ, ಕಛೇರಿಗಳಲ್ಲಿ, ಶಾಲೆ ಮುಂತಾದ ಕಡೆಗಳಲ್ಲಿ ಅನಿವಾರ್ಯವಾಗಿ ಕೆಲಸ ಮಾಡುವಂತಾಯಿತು. ಅವರು ಪುರುಷರ ಸ್ಥಳಗಳಲ್ಲಿ ಕೆಲಸ ಮಾಡಬೇಕಾಗಿದ್ದರಿಂದ ಪುರುಷ & ಮಹಿಳೆ ಮದ್ಯಮ ಸಾಂಪ್ರಾದಾಯಿಕ ತಡೆಗೋಡೆ ಮುರಿದುಬಿದ್ದಿತು.

- ಯುದ್ದದ ಪರಿಣಾಮವಾಗಿ 4 ಹಳೆಯ ಸಾಮ್ರಾಜ್ಯಗಳು ಅಂತ್ಯಗೊಂಡವು. ಅವುಗಳೆಂದರೆ ಆಸ್ಟ್ರೀಯಾದ ಹ್ಯಾಪ್ಸ್‌ಬರ್ಗ್, ಜರ್ಮನಿಯ ಹೋಹೆಂಜೋಲಿರಿನ್, ರಷ್ಯಾದ ರೋಮೊನೊವ್ & ಟರ್ಕಿಯ ಸುಲ್ತಾನ ಸಾಮ್ರಾಜ್ಯಗಳು (ಆಟೋಮನ್ ಸಾಮ್ರಾಜ್ಯ), ಫಿನ್‌ಲ್ಯಾಂಡ್, ಲಿಥುವೇನಿಯಾ, ಎಸ್ಟೋನಿಯಾ, ಪೋಲೆಂಡ್ ಜೆಕೋಸ್ಲೋವೇಕಿಯಾ, ಯುಗೋಸ್ಲೇವಿಯಾ ಮುಂತಾದ ಹೊಸ ರಾಷ್ಟ್ರಗಳು ಈ ಹಳೆಯ ಅವಶೇಷಗಳ ಮೇಲೆ ಅಸ್ತಿತ್ವಕ್ಕೆ ಬಂದವು.
- ಯುದ್ಧದ ಪರಿಣಾಮವಾಗಿ ವರ್ಸೇಲ್ಸ್ ಒಪ್ಪಂದ ಏರ್ಪಟ್ಟಿತ್ತು. ಇ ಒಪ್ಪಂದದಿಂಆದಾಗಿ ಜರ್ಮನಿಯು ಅನೇಕ ಪ್ರದೇಶಗಳನ್ನು & ವಸಾಹತುಗಳನ್ನು ಬಿಟ್ಟುಕೊಡಬೇಕಾಯಿತು. ಅಪಾರ ಪ್ರಮಾನದ ಪರಿಹಾರವನ್ನು ಹೇರಲಾಯಿತು & ಅದರ ಸೈನಿಕ ಶಕ್ತಿಯನ್ನು ಮಿತಿಗೊಳಿಸಲಾಯಿತು.
- ಯುದ್ಧದ ನಂತರ ಜನರು ಆರ್ಥಿಕ, ಸಾಮಾಜಿಕ & ಇತರೆ ಸಮಸ್ಯೆಗಳ ಪರಿಹಾರದ ಮಾರ್ಗದರ್ಶನಕ್ಕಾಗಿ ಸರ್ಕಾರದ ಕಡೆಗೆ ನೋಡುವುದು ಸಾಮಾನ್ಯವಾಯಿತು. ಜೀವನದ ಅನೇಕ ಕ್ಷೇತ್ರಗಳ ಮೇಲೆ ಸರ್ಕಾರದ ಹಿಡಿತ ಹೆಚ್ಚಾಯಿತು. ಅಗತ್ಯ ಸರಕುಗಳ ಸೇವೆಗಳ ಕೊರತೆಯೂ ಹಣದುಬ್ಬರಕ್ಕೆ ಕಾರಣವಾಯಿತು. ಯುದ್ಧದಲ್ಲಿ ಭಾಗಿಯಾದ ಪ್ರತಿಯೊಂದು ರಾಷ್ಟ್ರವು ಯುದ್ಧ ಖರ್ಚುಗಳನ್ನು ನೀಗಿಸಲು ಹೆಚ್ಚು ತೆರಿಗೆ ವಿಧಿಸಿದವು. ಜಗತ್ತಿನ ಉತ್ಪಾದನೆಯು ಇಳಿಮುಖವಾಯಿತು & ಎಲ್ಲ ಕಡೆ ಬದುಕಿನ ವೆಚ್ಚ ಏರುತ್ತಾ ಹೋಯಿತು. ಯುರೋಪಿನ ಸಾಲ ನೀಡುವ ಬೃಹತ್ ರಾಷ್ಟ್ರಗಳೇ ಸಾಲದಲ್ಲಿ ಸಿಕ್ಕಿಕೊಂಡವು.
- ಪ್ರಥಮ ಜಾಗತಿಕ ಯುದ್ಧದ ಪ್ರಮುಖ ರಚನಾತ್ಮಕ ಫಲಿತಾಂಶವೆಂದರೆ ವಿಶ್ವಶಾಂತಿಯ ರಕ್ಷಣೆಗಾಗಿ & ಭವಿಷ್ಯತ್ತಿನ ಯುದ್ಧಗಳನ್ನು ತಡೆಯಲು ರಾಷ್ಟ್ರಗಳ ಸಂಘದ ಸ್ಥಾಪನೆ. ಪ್ಯಾರಿಸ್ ಶಾಂತಿಸಮ್ಮೇಳನವು ವುಡ್ರೋ ವಿಲ್ಸನ್‌ನ ಪ್ರಸ್ತಾವನೆಯನ್ನು ಸ್ವೀಕರಿಸಿತು. ರಾಷ್ಟ್ರಸಂಘವು 1920ರಲ್ಲಿ ಅಸ್ತಿತ್ವಕ್ಕೆ ಬಂದಿತು, ಇದರ ಕೇಂದ್ರ ಕಛೇರಿಯು ಸ್ವಿಡ್ಜ್‌ಲ್ಯಾಂಡಿನ ಜಿನೀವಾದಲ್ಲಿದೆ.
- ಯುದ್ಧದ ನಂತರ ಪೋಲೆಂಡ್, ಬೆಲ್ಜಿಯಮ್ & ಜೆಕೋಸ್ಲೋವಿಕಿಯಾ ಸ್ವತಂತ್ರವಾದವು.
- 1919ರ ಪ್ಯಾರಿಸ್ ಶಾಂತಿಸಮ್ಮೇಳನವು ಅಧಿಕೃತವಾಗಿ ಮೊದಲನೇ ಜಾಗತಿಕ ಯುದ್ಧವನ್ನು ಕೊನೆಗೊಳಿಸಿತು.



downloaded from: www.kpscvaani.com

## ವರ್ಸೇಲ್ಸ್ ಒಪ್ಪಂದ – 1919 :

- ಮೊದಲನೇ ಜಾಗತಿಕ ಯುದ್ಧ ಮುಗಿದ ಕೂಡಲೇ ಶಾಂತಿ ಸ್ಥಾಪನೆಯ ಷರತ್ತುಗಳನ್ನು ವ್ಯವಸ್ಥೆಗೊಳಿಸಲು ಮಿತ್ರರಾಷ್ಟ್ರಗಳು ಪ್ಯಾರೀಸ್‌ನಲ್ಲಿ ಸಭೆ ಸೇರಿದವು. ಈ ಸಮ್ಮೇಳನದಲ್ಲಿ ಗೆದ್ದ ರಾಷ್ಟ್ರಗಳು ಶಾಂತಿ ಸಂಧಾನಗಳನ್ನು ಹೇಳಿ ಬರೆಸಿದವು.
- ಸಮ್ಮೇಳನದಲ್ಲಿ ಭಾಗವಹಿಸಿದ ಪ್ರಮುಖ ನಾಯಕರುಗಳೆಂದರೆ ಅಮೇರಿಕಾದ ಅಧ್ಯಕ್ಷ ವುಡ್ರೋವಿಲ್ಸನ್, ಇಂಗ್ಲೆಂಡಿನ ಪ್ರಧಾನಿ ಲಾಯ್ಡ್ ಜಾರ್ಜ್, ಫ್ರಾನ್ಸಿನ ಪ್ರಧಾನಿ ಕ್ಲೆಮನ್ ಷ್ಯೂ & ಇಟಲಿಯ ಪ್ರಧಾನಿ ಅರ್ಲಾಂಡೋ. ಜರ್ಮನಿ, ಆಸ್ಟ್ರೀಯಾ, ಹಂಗೇರಿ, ಟರ್ಕಿ & ಬಲ್ಗೇರಿಯಾಗಳೊಂದಿಗೆ ಐದು ಪ್ರತ್ಯೇಕ ಒಪ್ಪಂದಗಳನ್ನು ಮಿತ್ರರಾಷ್ಟ್ರಗಳು ಮಾಡಿಕೊಂಡವು. ಅವುಗಳಲ್ಲಿ ಮಿತ್ರಕೂಟ & ಜರ್ಮನಿ ಮಧ್ಯೆ 28ನೇ ಜೂನ್ 1919ರಂದು ನಡೆದ ವರ್ಸೇಲ್ಸ್ ಒಪ್ಪಂದವವು ಬಹಳ ಪ್ರಮುಖವಾದುದಾಗಿತ್ತು. ಈ ದಿನವು ಆರ್ಚ್‌ಡ್ಯೈಕ್ ಫ್ರಾನ್ಸಿನ ಫರ್ಡಿನಾಂಡಿನ ಕೊಲೆಯಾದ 5ನೇ ವರ್ಷದ ದಿನವಾಗಿತ್ತು. ಯುದ್ಧದಲ್ಲಾದ ಅಪಾರ ಹಾನಿ, ಸಾವು ನೋವುಗಳಿಗೆ ಮಿತ್ರ ರಾಷ್ಟ್ರಗಳು ಪ್ರಬಲವಾಗಿ ಜರ್ಮನಿಯನ್ನೇ ಕಾರಣೀಭೂತವನ್ನಾಗಿಸಿದವು. ಜರ್ಮನಿಯು ಬಲವಂತದಿಂದಲೇ ವರ್ಸೇಲ್ಸ್ ಒಪ್ಪಂದಕ್ಕೆ ಸಹಿ ಹಾಕಿತು. ಈ ಒಪ್ಪಂದದಿಂದ ಜರ್ಮನಿಗೆ ನೋವು & ಅವಮಾನವಾಯಿತು.

## ವರ್ಸೇಲ್ಸ್ ಒಪ್ಪಂದದ ಮುಖ್ಯಾಂಶಗಳು :

1. ಜರ್ಮನಿಯು ಆಲ್ಸೇಸ್ & ಲೊರೈನ್‌ಗಳನ್ನು ಫ್ರಾನ್ಸಿಗೆ ಮರಳಿ ಕೊಡಬೇಕಾಯಿತು. ಇದಲ್ಲದೇ ಜರ್ಮನಿ ಸಂಪದ್ಭರಿತವಾದ ಸಾರ್ ಕಣಿವೆಯ ಕಲ್ಲಿದ್ದಲು ಗಣಿಗಳನ್ನು ಯುದ್ಧದ ವೇಳೆಯಲ್ಲಿ ಫ್ರಾನ್ಸ್‌ನ ಉತ್ತರ ಭಾಗದಲ್ಲಿ ಕಲ್ಲಿದ್ದಲು ಗಣಿಗಳಿಗಾದ ಹಾನಿಗೆ ಪರಿಹಾರವಾಗಿ ಫ್ರಾನ್ಸ್‌ನ ವಶಕ್ಕೆ ಕೊಡಬೇಕಾಯಿತು.
2. ಷೇಲ್ಸ್‌ವಿಗ್ & ಹೋಲ್‌ಸ್ಟೇನ್ ಪ್ರದೇಶಗಳನ್ನು ಜರ್ಮನಿಯು ಡೆನ್ಮಾರ್ಕ್‌ಗೆ ಮರಳಿ ಕೊಟ್ಟಿತು. ಜರ್ಮನಿಯ ಡ್ಯಾನ್‌ಜಿಗ್ ಬಂದರನ್ನು ಮುಕ್ತಗೊಳಿಸಲಾಯಿತು.
3. ರೈನ್‌ಲ್ಯಾಂಡ್ ಪ್ರದೇಶದಲ್ಲಿ ಸೈನಿಕ ಚಟುವಟಿಕೆಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಯಿತು. ಈ ಪ್ರದೇಶದಲ್ಲಿ ಎಲ್ಲಾ ಕೋಟೆಗಳನ್ನು ನಿರ್ನಾಮಗೊಳಿಸಲಾಯಿತು & ಪುನಃ ಕೋಟೆಗಳನ್ನು ಕಟ್ಟದಂತೆ ಸೂಚನೆ ನೀಡಲಾಯಿತು.
4. ಪೋಲೆಂಡ್, ಬೆಲ್ಜಿಯಂ & ಜೆಕೋಸ್ಲೋವೇಕಿಯಾಗಳ ಸ್ವಾತಂತ್ರ್ಯವನ್ನು ಜರ್ಮನಿಯು ಮಾನ್ಯ ಮಾಡಿತು.
5. ಮಿತ್ರಕೂಟಕ್ಕೆ ಜರ್ಮನಿಯು ತನ್ನ ಎಲ್ಲಾ ವಸಾಹತುಗಳನ್ನು ಬಿಟ್ಟುಕೊಟ್ಟಿತು. ಇವುಗಳನ್ನು ಇಂಗ್ಲೆಂಡ್, ಫ್ರಾನ್ಸ್, ಜಪಾನ್ & ಇತರ ರಾಷ್ಟ್ರಗಳು ಹಂಚಿಕೊಂಡವು.



downloaded from: www.kpscvaani.com

6. ಮೊದಲನೇ ಜಾಗತಿಕ ಯುದ್ಧಕ್ಕೆ ತಾನೇ ಕಾರಣ ಅಥವಾ ನೇರ ಹೊಣೆ ಎಂದು ಜರ್ಮನಿ ಒಪ್ಪಿಕೊಳ್ಳಬೇಕಾಯಿತು. ಆದ್ದರಿಂದ ಯುದ್ಧದ ನಷ್ಟ ಪರಿಹಾರವಾಗಿ ಜರ್ಮನಿ 6,600 ಮಿಲಿಯನ್ ಪೌಂಡ್ ನೀಡಬೇಕಾಯಿತು.
7. ಜರ್ಮನಿಯನ್ನು ನಿಶಸ್ತ್ರೀಕರಣಗೊಳಿಸಲಾಯಿತು ಹಾಗೂ ಅದರ ನೌಕಾಪಡೆಯ ಗಾತ್ರವನ್ನು ಮಿತಿಗೊಳಿಸಲಾಯಿತು & ಜರ್ಮನಿ ಸೈನ್ಯವನ್ನು 1 ಲಕ್ಷಕ್ಕೆ ಮಿತಿಗೊಳಿಸಲಾಯಿತು. ಶಸ್ತ್ರಾಸ್ತ್ರಗಳ ಆಮದು & ರಫ್ತುವನ್ನು ನಿಷೇಧಿಸಲಾಯಿತು. ಅಲ್ಲದೇ ಮಿಷಿನ್‌ಗನ್ ಹಾಗೂ ರೈಫಲ್‌ಗಳ ತಯಾರಿಕೆಯ ಮೇಲೆ ನಿರ್ಬಂಧವನ್ನು ಹೇರಲಾಯಿತು. ಜರ್ಮನಿ ಯುದ್ಧನೌಕೆಗಳನ್ನು ವಾಣಿಜ್ಯ ಹಡಗುಗಳಾಗಿ ಪರಿವರ್ತಿಸಲಾಯಿತು. ಟ್ಯಾಂಕುಗಳು, ಸಬ್‌ಮೆರಿನ್‌ಗಳು ಹಾಗೂ ಯುದ್ಧವಿಮಾನಗಳನ್ನು ಹೊಂದಲು ಅನುಮತಿ ನೀಡಲಿಲ್ಲ.

## ಸರ್ವಾಧಿಕಾರತ್ವಗಳ ಏಳಿಗೆ :-

ಎರಡು ಜಾಗತಿಕ ಯುದ್ಧಗಳ ನಡುವಿನ 20 ವರ್ಷಗಳು ಯುರೋಪಿನಲ್ಲಿ ಅರಾಜಕತೆ ಹಾಗೂ ಗೊಂದಲಗಳ ಅವಧಿಯಾಗಿತ್ತು. ಮೊದಲನೇ ಜಾಗತಿಕ ಯುದ್ದವು ರಾಜಕೀಯ & ಆರ್ಥಿಕ ಸಂಧಿಗ್ದಗಳನ್ನು ಸೃಷ್ಟಿಸಿತು. ಮೇಲಿನ ಶೋಚನೀಯ ಸ್ಥಿತಿಯು ಇಟಲಿ, ರಷ್ಯಾ & ಇತರ ರಾಷ್ಟ್ರಗಳಲ್ಲಿ ಸರ್ವಾಧಿಕಾರತ್ವದ ಏಳಿಗೆಗೆ ಕಾರಣವಾಯಿತು. ಪ್ರಜಾಪ್ರಭುತ್ವವು ಇಟಲಿಯ ಫ್ಯಾಸಿಸಿಂ & ಜರ್ಮನಿಯ ನಾಜಿ ರಾಜಕೀಯ ಸಿದ್ಧಾಂತಗಳಿಂದ ಅಪಾಯವನ್ನು ಎದುರಿಸಿತು.

## ಇಟಲಿಯಲ್ಲಿ ಫ್ಯಾಸಿಸಿಂ :

ಇಟಲಿಯು ಮೊದಲನೇ ಜಾಗತಿಕ ಯುದ್ಧದಲ್ಲಿ ಅತೃಪ್ತ ವಿಜಯಿ ರಾಷ್ಟ್ರವಾಗಿ ಹೊರಬಂದಿತು. ಏಕೆಂದರೆ 1919ರ ಪ್ಯಾರಿಸ್ ಶಾಂತಿ ಒಪ್ಪಂದದಲ್ಲಿ ಅದು ನಿರೀಕ್ಷಿಸಿದ್ದನು ಪಡೆಯಲಿಲ್ಲ. ಇದರಿಂದ ಇಟಲಿಯ ದೇಶಭಕ್ತರು ತಾವು ಯುದ್ಧದಲ್ಲಿ ವಿಜಯಿಯಾದರರೂ ಶಾಂತಿಯಲ್ಲಿ ಸೋತೆವು ಎಂದು ದೂರಿದವು. ಯುದ್ಧದ ನಂತರ ಇಟಲಿಯು ಸಾಮಾಜಿಕ, ಆರ್ಥಿಕ, ರಾಜಕೀಯ ಸಮಸ್ಯೆಗಳನ್ನು ಎದುರಿಸಿತು. ದೇಶವು ದಿವಾಳಿತನ, ಹಸಿವು, ನಿರುದ್ಯೋಗ, ಸಾರ್ವತ್ರಿಕ ಆರಾಜಕತೆಗಳನ್ನು ಎದುರಿಸಿತು. ಕೈಗಾರಿಕಾ ಕಾರ್ಮಿಕರ ಮುಷ್ಕರ & ಬೀಗಮುದ್ರೆ ಹಾಗೂ ಹಸಿದ ಜನರ ದಂಗೆ ದಿನನಿತ್ಯದ ಘಟನೆಗಳಾಗಿದ್ದವು. ಸಾಮಾನ್ಯ ಸನ್ನಿವೇಶದಲ್ಲಿ ಜನ ಶಾಂತಿ & ಆಹಾರಕ್ಕಾಗಿ ಫ್ಯಾಸಿಸ್ಟ್ ಪಕ್ಷವನ್ನು ಸ್ಥಾಪಿಸಿದನು.

"ಫ್ಯಾಸಿಸಂ" ಎಂಬ ಪದವು 'ಫೇಸಸ್' ಎಂಬ ಪದದಿಂದ ಬಂದಿದೆ. ಇದರ ಅರ್ಥ ಕೊಡಲಿ & ದಂಡಗಳಕಟ್ಟು. ಇದು ಪ್ರಾಚೀನ ರೋಮಿನ ಶಕ್ತಿಯ ಸಂಕೇತವಾಗಿತ್ತು.



downloaded from: www.kpscvaani.com

## ಆರಂಭಿಕ ಜೀವನ :

ಬೆನಿಟೋ ಮುಸಲೋನಿ 1883ರಲ್ಲಿ ಇಟಲಿಯಲ್ಲಿ ಜನಿಸಿದನು. ಈತನ ತಂದೆ ಅಲೆಕ್ಸಾಂಡ್ರೋ ಮುಸಲೋನಿ ಕಮ್ಮಾರನಾಗಿದ್ದನು ಹಾಗೂ ತಾಯಿ ರೋಸಾ ಶಾಲಾ ಶಿಕ್ಷಕಿಯಾಗಿದ್ದಳು. ಮುಸಲೋನಿ ಶಿಕ್ಷಕನಾಗಿ & ಪತ್ರಕರ್ತನಾಗಿ ಕಾರ್ಯನಿರ್ವಹಿಸಿದನು. ನಂತರ ಇವನು 'ಅವಂತಿ' ಎಂಬ ಸಮಾಜವಾದಿ ಪತ್ರಿಕೆಯ ಸಂಪಾದಕನಾದನು. ಮೊದಲನೇ ಜಾಗತಿಕ ಯುದ್ಧದ ನಂತರ 1919ರಲ್ಲಿ ಇವನು ಫ್ಯಾಸಿಸ್ಟ್ ಪಕ್ಷವನ್ನು ಮಿಲಾನ್ ನಗರದಲ್ಲಿ ಸ್ಥಾಪಿಸಿದನು. ಈ ಪಕ್ಷದ ಸದಸ್ಯರು ಕಪ್ಪು ಅಂಗಿ ಧರಿಸುತ್ತಿದ್ದರು. ಆದ್ದರಿಂದ ಅವರನ್ನು 'ಕಪ್ಪಂಗಿ'ಗಳು ಎಂದು ಕರೆಯಲಾಗುತ್ತಿತ್ತು. ಇವರು ದೇಶಭಕ್ತರು, ಕಮ್ಯೂನಿಸ್ಟ್, ವಿರೋಧಿಗಳು ಆಗಿದ್ದು ರಾಷ್ಟ್ರೀಯತೆಗೆ ಬದ್ಧರಾಗಿದ್ದರು. ನಂಬಿಕೆ, ವಿಧೇಯತರ & ಹೋರಾಟ ಅವನ ಪಕ್ಷದ ಘೋಷಣೆಗಳಾಗಿದ್ದವು. ಬಂದೂಕು & ಕೋಲುಗಳಿಂದ ಫ್ಯಾಸಿಸ್ಟ್‌ರು ಕಮ್ಯೂನಿಸ್ಟ್ & ಸಮಾಜವಾದಿ ಸಭೆಗಳನ್ನು ಸದೆಬಡಿದರು. ಹಾಗೂ ವ್ಯಾಪಾರ ಒಕ್ಕೂಟ & ರೈತರ ಸಂಘಟನೆಗಳನ್ನು ಸದೆಬಡಿಯಲಾಯಿತು. 1922ರಲ್ಲಿ ಮುಸಲೋನಿ & ಅವನ ಹಿಂಬಾಲಕರು ರೋಮ್ ನಗರಕ್ಕೆ ತೆರಳಿ ಸರ್ಕಾರಿ ಕಛೇರಿಗಳು, ರೈಲ್ವೆ, ಅಂಚೆ & ತಂತಿ ಮೊದಲಾದವುಗಳನ್ನು ವಶಪಡಿಸಿಕೊಂಡತು. ಇಟಲಿಯ ರಾಜನಾದ ಮೂರನೇ ವಿಕ್ಟರ್ ಇಮ್ಯಾನುಯಲ್ ಆಂತರಿಕ ಯುದ್ಧಕ್ಕೆ ಹೆದರಿ ಮುಸಲೋನಿಯನ್ನು ಸರ್ಕಾರ ರಚಿಸಲು ಕೇಳಿಕೊಂಡನು. ತಕ್ಷಣವೇ ಮುಸಲೋನಿ ಇಟಲಿಯಲ್ಲಿ ಫ್ಯಾಸಿಸ್ಟ್ ಆಳ್ವಿಕೆ ಆರಂಭಿಸಿದನು. ಇವನು ತನ್ನೆಲ್ಲಾ ವಿರೋಧಿಗಳನ್ನು ಸದೆಬಡೆದು ಸರ್ವಾಧಿಕಾರಿಯಾದನು.

## ಫ್ಯಾಸಿಸಂ ಈ ಕೆಳಕಂಡ ತತ್ವಗಳ ಆಧಾರದ ಮೇಲೆ ನಿಂತಿತ್ತು :

1. ಯುದ್ಧದ ವೈಭವೀಕರಣ
2. ರಾಜ್ಯಕ್ಕೆ ಪ್ರಾಮುಖ್ಯತೆ
3. ಏಕಪಕ್ಷದಲ್ಲಿ ನಂಬಿಕೆ
4. ಪ್ರಜಾಪ್ರಭುತ್ವ & ಸಮಾಜವಾದಕ್ಕೆ ವಿರೋಧ
5. ಪ್ರಶ್ನಾತೀತ ಪರಮಾಧಿಕಾರ.

## ಮುಸಲೋನಿಯ ಸಾಧನೆಗಳು :

- ಮುಸಲೋನಿಯು ಸುವ್ಯವಸ್ಥೆಯನ್ನು ಸ್ಥಾಪಿಸಿ ಕೈಗಾರಿಕಾ ಮುಷ್ಕರಗಳನ್ನು ಸಂಪೂರ್ಣವಾಗಿ ನಿಷೇಧಿಸಿದನು.
- ಕಮ್ಯೂಸಿಸ್ಟ್‌ರನ್ನು ನಿರ್ದಯವಾಗಿ ಹತ್ಯೆಗೈದನು. ಫ್ಯಾಸಿಸ್ಟ್ ತತ್ವಗಳನ್ನು ಹರಡಲು ಶಿಕ್ಷಣವನ್ನು ರಾಜ್ಯದ ನಿಯಂತ್ರಣಕ್ಕೆ ತಂದನು.



downloaded from: www.kpscvaani.com

- ಮುಸಲೋನಿ ತಾನು ಅಧಿಕಾರದಲ್ಲಿ ಮುಂದುವರೆಯಲು ಚರ್ಚ್‌ನ ಬೆಂಬಲದ ಪ್ರಾಮುಖ್ಯತೆಯನ್ನು ಅರಿತುಕೊಂಡನು. ಹಾಗಾಗಿ ಅವನು ಪೋಪ್ 11ನೇ ಪಯಸ್‌ನೊಂದಿಗೆ 'ಲ್ಯಾಟರನ್ ಒಪ್ಪಂದ'ವನ್ನು 1929ರಲ್ಲಿ ಮಾಡಿಕೊಂಡನು. ಇದರ ಪ್ರಕಾರ ಪೋಪನು ಇಟಲಿಯ ರಾಜ್ಯಕ್ಕೆ ಮನ್ನಣೆ ನೀಡಿದನು. ಪ್ರತಿಯಾಗಿ ಮುಸಲೋನಿಯು ವ್ಯಾಟಿಕನ್ ನಗರದ ಸ್ವಾತಂತ್ರ್ಯಕ್ಕೆ ಮಾನ್ಯತೆ ನೀಡಿದನು.
- ಫ್ಯಾಸಿಸಂ ಮೂಲಕ ಮುಸಲೋನಿ ಸುವ್ಯವಸ್ಥೆ & ಶಿಸ್ತನ್ನು ಜಾರಿಗೊಳಿಸಿದನು. ವಿದೇಶಿ ವ್ಯಾಪಾರವನ್ನು ಹೆಚ್ಚಿಸಲು ವಿದ್ಯುತ್ ಉತ್ಪಾದನೆಯನ್ನು ನೈಸರ್ಗಿಕ ಸಂಪತ್ತಿನ ಉಪಯೋಗವನ್ನು ಪ್ರೋತ್ಸಾಹಿಸಿದನು.
- ಇವನು ಕೃಷಿ ಕ್ಷೇತ್ರವನ್ನು ಸುಧಾರಿಸಿದನು & ಇಟಲಿಯಲ್ಲಿ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಿದನು. ವ್ಯಾಪಾರ & ವಾಣಿಜ್ಯವನ್ನು ಪುನಃಶ್ಚೇತನಗೊಳಿಸಿದನು. ರೈಲ್ವೆ ಹಾಗೂ ಹಡಗು ನಿರ್ಮಾಣಕ್ಕೆ ಆದ್ಯತೆ ನೀಡಲಾಯಿತು.
- ಯುದ್ಧವು ಫ್ಯಾಸಿಸ್ಟ್ ಪಕ್ಷದ ಪ್ರಮುಖ ಲಕ್ಷಣವಾಗಿತ್ತು. ಆದುದರಿಂದ ಕಡ್ಡಾಯ ಸೈನಿಕ ಚಟುವಟಿಕೆ ತರಬೇತಿಯನ್ನು ಜಾರಿಗೆ ತರಲಾಯಿತು. ಭೂಸೇನೆ, ನೌಕಾಪಡೆ & ವಾಯುಪಡೆಯನ್ನು ಬಲಿಷ್ಠಗೊಳಿಸಿದನು.
- ಇದಲ್ಲದೆ ಜನಸಂಖ್ಯೆ ಹೆಚ್ಚಿಸಲು ಇಟಲಿಯಲ್ಲಿ ಹೆಚ್ಚು ಮಕ್ಕಳು ಹೊಂದಿದ ಕುಟುಂಬಕ್ಕೆ ತೆರಿಗೆ ವಿನಾಯ್ತಿ & ಉದ್ಯೋಗ ಮೊದಲಾದ ಸೌಲಭ್ಯಗಳನ್ನು ನೀಡಲಾಯಿತು.

## ವಿದೇಶಾಂಗ ನೀತಿ :

ಮುಸಲೋನಿ ತನ್ನ ಅಧಿಕಾರವನ್ನು ಇಟಲಿಯಲ್ಲಿ ಭದ್ರಗೊಳಿಸಿಕೊಂಡ ಬಳಿಕ ಇಟಲಿ ದೇಶದ ವಿಸ್ತರಣೆಗೆ ಗಮನಹರಿಸಿದನು. ಇದನ್ನು ಸಾಧಿಸಲು, ಇವನು ತೀವ್ರತರ & ಆಕ್ರಮಣಶೀಲ ವಿದೇಶಾಂಗ ನೀತಿ ಅನುಸರಿಸಿದನು. ಮುಸಲೋನಿ ಮಹಾತ್ವಾಕಾಂಕ್ಷೆ ಉಳ್ಳವನ್ನಾಗಿದ್ದನು. 'ಇಟಲಿ ವಿಸ್ತರಿಸಲೇಬೇಕು ಇಲ್ಲವೇ ನಾಶ' ಎಂದು ಸಾರ್ವಜನಿಕವಾಗಿ ಘೋಷಿಸಿದ್ದನು. ತನ್ನ ಉದ್ದೇಶ ಈಡೇರಿಕೆಗಾಗಿ ಅಬಿಸೀನಿಯಾ, (ಇಥಿಯೋಪಿಯೋ)ವನ್ನು 1935ರಲ್ಲಿ ರಾಷ್ಟ್ರಸಂಘದ ವಿರೋಧದ ನಡುವೆಯೂ ಆಕ್ರಮಿಸಿಕೊಂಡನು, ಇಂತಹ ಸನ್ನೀವೇಶದಲ್ಲಿ ಬ್ರಿಟನ್ & ಫ್ರಾನ್ಸ್ ದೇಶಗಳು ಯುದ್ಧಕ್ಕೆ ಬರಬಹುದು ಎಂಬ ಭಯದಿಂದ ಮುಸಲೋನಿ ಜರ್ಮನಿಯ ಹಿಟ್ಲರ್ ಕಡೆ ಸೇರಿಕೊಂಡನು. 1936ರ ಅಕ್ಟೋಬರ್‌ನಲ್ಲಿ ಇಟಲಿ & ಜರ್ಮನಿ ಸೇರಿಕೊಂಡು ಮಾಡಿಕೊಂಡ ಒಪ್ಪಂದವನ್ನು 'ರೋಮ್-ಬರ್ಲಿನ್ ಆಕ್ಸಿಸ್' ಎಂದು ಕರೆಯಲಾಗಿದೆ. 1936 ನವೆಂಬರ್‌ನಲ್ಲಿ ಜರ್ಮನಿ ಜಪಾನ್‌ನೊಂದಿಗೆ ರಷ್ಯಾದ ವಿರುದ್ಧವಾಗಿ ಮಾಡಿಕೊಂಡ ಒಪ್ಪಂದವನ್ನು ಆ್ಯಂಟಿ ಕೊಮಿಂಟರ್ನ್ ಒಪ್ಪಂದ ಎಂದು ಕರೆಯಲಾಗಿದೆ. 1937ರಲ್ಲಿ ಜಪಾನ್ ಆಕ್ಸಿಸ್‌ರೊಂದಿಗೆ ಸೇರಿಕೊಂಡಾಗ 'ರೋಮ್-ಬರ್ಲಿನ್-ಟೋಕಿಯಾ ಆಕ್ಸಿಸ್' ಆಗಿ ಪರಿವರ್ತನೆಗೊಂಡಿತು.



downloaded from: www.kpscvaani.com

ಎರಡನೇ ಜಾಗರಿಕ ಯುದ್ಧ ಆರಂಭವಾದ ಮೇಲೆ ಮುಸಲೋನಿ ಜರ್ಮನಿಯೊಂದಿಗೆ ಸೇರಿ ಮಿತ್ರ ರಾಷ್ಟ್ರಗಳ ವಿರೋಧವಾಗಿ ಹೋರಾಡಿದನು. ಮಿತ್ರ ರಾಷ್ಟ್ರಗಳು ಉತ್ತರ ಆಫ್ರಿಕಾದಲ್ಲಿದ್ದ ಇಟಲಿಯ ವಸಾಹತುಗಳನ್ನು ವಶಪಡಿಸಿಕೊಂಡವು. ನಂತರ ಮಿತ್ರ ರಾಷ್ಟ್ರಪಡೆಗಳು 1943ರಲ್ಲಿ ಇಟಲಿಯ ಪ್ರಮುಖ ಪ್ರದೇಶದ ಮೇಲೆ ದಾಳಿ ಮಾಡಿದವು. ಅಂತಿಮವಾಗಿ ಬೆನಿಟೋ ಮುಸಲೋನಿ 1945ರಲ್ಲಿ ಸೆರೆ ಸಿಕ್ಕಿ ಇಟಲಿ ಪ್ರಜೆಗಳಿಂದಲೇ ಕೊಲೆಯಾದನು. ಇದರೊಂದಿಗೆ ಫ್ಯಾಸಿಸಂ ಅಂತ್ಯವಾಯಿತು.

## ಜರ್ಮನಿಯಲ್ಲಿ ನಾಜಿಸಂ :

ಮೊದಲನೇ ಜಾಗತಿಕ ಯುದ್ಧದಲ್ಲಿ ಜರ್ಮನಿಯು ಸೋಲನ್ನು ಅನುಭವಿಸಿತು. ನಂತರ ಮಿತ್ರ ರಾಷ್ಟ್ರಗಳು ಜರ್ಮನಿಯ ಮೇಲೆ ವರ್ಸೇಲ್ಸ್ ಒಪ್ಪಂದ ಹೇರಿದವು. ಈ ಒಪ್ಪಂದದ ಪ್ರಕಾರ ಜರ್ಮನಿಯು ತನ್ನ ವಸಾಹತುಗಳನ್ನು ಕಳೆದುಕೊಂಡಿತು. ಮಿತ್ರರಾಷ್ಟ್ರಗಳಿಗೆ ಜರ್ಮನಿಯು ಅಪಾರ ಯುದ್ಧವೆಚ್ಚಗಳನ್ನು ನೀಡಬೇಕಾಯಿತು. ಜರ್ಮನಿಯ ನೆಲ & ಕೈಗಾರಿಕೆಗಳು ನಾಶವಾದವು. ಇದಾದ ನಂತರ ಜರ್ಮನಿಯಲ್ಲಿ ಹತಾಶೆ, ಅತೃಪ್ತ ಪ್ರತೀಕಾರದ ಮನೋಭಾವಗಳು ಹತ್ತಿ ಉರಿಯುತ್ತಿದ್ದವು. ಇದೇ ಸಮಯದಲ್ಲಿ ಜರ್ಮನಿ ಆರ್ಥಿಕವಾಗಿ ದಿವಾಳಿಯಾಯಿತು. ನಿರುದ್ಯೋಗ, ಹಸಿವು, ಆಹಾರದ ಅಭಾವ, ಹಣದುಬ್ಬರ ಹಾಗೂ ಹತಾಶೆ ಆ ದಿನಗಳಲ್ಲಿ ಸಾಮಾನ್ಯವಾಗಿದ್ದವು. ಆ ಸಂದರ್ಭದಲ್ಲಿ ಅಡಾಲ್ಫ್ ಹಿಟ್ಲರ್‌ನು ನಾಜಿ ಪಕ್ಷವನ್ನು 1919ರಲ್ಲಿ ಸ್ಥಾಪಿಸಿದನು.

## ಆರಂಭಿಕ ಜೀವನ :

ಅಡಾಲ್ಫ್ ಹಿಟ್ಲರ್‌ನು ಆಸ್ಟ್ರೀಯಾದಲ್ಲಿ 1889ರಲ್ಲಿ ಜನಿಸಿದನು. ಇವನ ತಂದೆ ಅಲಾಯಿಸ್ ಹಿಟ್ಲರ್ & ತಾಯಿ ಕ್ಲಾರಾ. ಅವನೊಬ್ಬ ಸ್ವಶಿಕ್ಷಿತ ವ್ಯಕ್ತಿ ಹಾಗೂ ಮಹಾವಾಗ್ಮಿಯಾಗಿದ್ದನು. ಮೊದಲನೇ ಜಾಗತಿಕ ಯುದ್ಧದ ಸಂದರ್ಭದಲ್ಲಿ ಹಿಟ್ಲರನು ಜರ್ಮನಿ ಸೇನೆಯನ್ನು ಸೇರಿಕೊಂಡು ತನ್ನ ಪರಾಕ್ರಮಕ್ಕಾಗಿ ಕಬ್ಬಿಣದ ಶಿಲುಬೆ (ಐರನ್‌ಕ್ರಾಸ್) ಪ್ರಶಸ್ತಿಯನ್ನು ಪಡೆದುಕೊಂಡನು. ಯುದ್ಧದ ನಂತರ ಅವನು ರಾಜಕೀಯಕ್ಕೆ ಪ್ರವೇಶಿಸಿ 'ರಾಷ್ಟ್ರೀಯ ಸಮಾಜವಾದಿ ಪಕ್ಷ' ಅಂದರೆ ನಾಜಿ ಪಕ್ಷ ಸಂಘಟಿಸಿದನು ಹಾಗೂ ಕಂದು ಅಂಗಿಗಳು ಎಂಬ ಸೈನ್ಯವನ್ನು ಸ್ಥಾಪಿಸಿದನು. ಇದರ ಚಿಹ್ನೆ 'ಸ್ವಸ್ತಿಕ್' ಆಗಿತ್ತು. 1923ರಲ್ಲಿ ಸರ್ಕಾರ ಉರುಳಿಸಲು ಯತ್ನಿಸಿ ವಿಫಲನಾದನು. ನಂತರ 9 ತಿಂಗಳ ಕಾಲ ಸೆರೆಮನೆ ಶಿಕ್ಷೆ ಅನುಭವಿಸಿ ಬಿಡುಗಡೆ ಹೊಂದಿದನು. ಹಿಟ್ಲರನು ಜೈಲಿನಲ್ಲಿದ್ದಾಗ ಅವನ ಸುಪ್ರಸಿದ್ಧ ಪುಸ್ತಕವಾದ ಮೈನ್‌ಕ್ಯಾಂಫ್ (ನನ್ನ ಹೋರಾಟ) ಪುಸ್ತಕ ಬರೆದನು. ಈ ಪುಸ್ತಕವು ನಾಜಿತತ್ವಗಳನ್ನು ಒಳಗೊಂಡಿತ್ತು. ಜೈಲಿನಿಂದ ಬಿಡುಗಡೆಯಾದ ನಂತರ ನಾಜಿ ಪಕ್ಷವನ್ನು ಪುನರ್ ಸಂಘಟಿಸಿ ಪ್ರಬಲಗೊಳಿಸಿದನು.



downloaded from: www.kpscvaani.com

ನಾಜೀ ಪಕ್ಷ ರೈಖ್‌ಸ್ಟ್ಯಾಗ್‌ಗೆ (ಸಂಸತ್ತು) ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿತ್ತು. 1933ರಲ್ಲಿ ಜರ್ಮನಿ ಅಧ್ಯಕ್ಷ ಹಿಂಡನ್‌ಬರ್ಗ್ ಹಿಟ್ಲರ್‌ನನ್ನು ಛಾನ್ಸಲರ್ ಆಗಿ ನೇಮಕ ಮಾಡಿದನು. 1934ರಲ್ಲಿ ಹಿಂಡನ್‌ಬರ್ಗ್ ಮರಣದ ನಂತರ ಅವನು ಛಾನ್ಸಲರ್ & ಅಧ್ಯಕ್ಷ ಪದವಿಗಳನ್ನು ಒಟ್ಟುಗೂಡಿಸಿ ತಾನೇ ಸರ್ವಾಧಿಕಾರಿಯಾದನು.

## ನಾಜಿಸಂ ಪ್ರಮುಖ ಲಕ್ಷಣಗಳೆಂದರೆ :

1. ಏಕ ಪಕ್ಷ ಆಡಳಿತ
2. ನಾಜೀಕರಣ
3. ಜನಾಂಗೀಯ ಶ್ರೇಷ್ಠತೆ
4. ಯಹೂದಿ ವಿರೋಧಿ & ಧರ್ಮ ವಿರೋಧಿ
5. ರಾಜ್ಯಕ್ಕೆ ಪ್ರಾಮುಖ್ಯತೆ
6. ಯುದ್ಧದ ವೈಭವೀಕರಣ

ನಾಜೀಪಕ್ಷವನ್ನು ಏಕ ಮಾತ್ರ ರಾಜಕೀಯ ಪಕ್ಷವನ್ನಾಗಿ ಮಾಡಿದನು. ಹಿಟ್ಲರನು ಪತ್ರಿಕಾ & ವಾಕ್ ಸ್ವಾತಂತ್ರ್ಯವನ್ನು ನಿಷೇಧಿಸಿದನು. ಕೇಂದ್ರ ಹಾಗೂ ಸ್ಥಳೀಯ ಸರ್ಕಾರಗಳನ್ನು ಕೇಂದ್ರಿಕರಿಸಿ ಎಲ್ಲಾ ಕಾರ್ಮಿಕರನ್ನು ಹಾಗೂ ಯುವಕರನ್ನು ಸಂಘಟಿಸಿದನು. ಮುದ್ರಣ ಮಾಧ್ಯಮಗಳು ಎಲ್ಲಾ ಆರ್ಥಿಕ ಸಂಸ್ಥೆಗಳು, ರಂಗಭೂಮಿ & ಸಿನಿಮಾ ಸೇರಿದಂತೆ ಎಲ್ಲಾ ಆಯಾಮಗಳನ್ನು ನಿಯಂತ್ರಿಸಿದನು. ದೇಶದೊಳಗಿನ ಪ್ರತಿಯೊಬ್ಬನು & ಪ್ರತಿಯೊಂದನ್ನು ನಾಜೀಕರಣಗೊಳಿಸಿದನು.

ಹಿಟ್ಲರನು ಒಬ್ಬ ಅವಕಾಶವಾದಿಯಾಗಿದ್ದನು & ಜರ್ಮನಿಯ ಜನಾಂಗೀಯ ಶ್ರೇಷ್ಠತೆಯನ್ನು ಎತ್ತಿ ಹಿಡಿದನು. ಹಿಟ್ಲರನ ಪ್ರಕಾರ ಜರ್ಮನರು ಮಾತ್ರ ಯುರೋಪನ್ನು ಆಳಲು ಸಮರ್ಥರು ಎಂದು ಹೇಳಿದ್ದನು. ಇತರ ಜನಾಂಗದವರಾದ ಯಹೂದಿಗಳು ಹಾಗೂ ಇತರರನ್ನು ದೇಶದಿಂದ ಹೊರಹಾಕಿದನು. ದೇಶಕ್ಕೆ ಆದ ನಷ್ಟಗಳಿಗೆಲ್ಲಾ ಯಹೂದಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಯಿತು. ಅವರಿಗೆ ಚಿತ್ರ ಹಿಂಸೆ ನೀಡಿ ಕೊಲ್ಲಲಾಯಿತು. ಹಿಟ್ಲರನು ತನ್ನೆಲ್ಲಾ ವಿರೋಧಿಗಳನ್ನು ದಮನ ಮಾಡಲು 'ಗೆಸ್ಟೆಪೋ' ಎಂಬ ಗುಪ್ತ ಪೋಲಿಸ್ ದಳವನ್ನು ಸಂಘಟಿಸಿದನು. ಯಹೂದಿಗಳನ್ನು ಸಂಪೂರ್ಣವಾಗಿ ನಾಶಮಾಡಲು ಯಾತನಾ ಶಿಬಿರಗಳನ್ನು ನಿರ್ಮಿಸಿದನು. ವಿದ್ಯುತ್ ಸ್ಪರ್ಶ, ವಿಷ ಅನಿಲ ಕೋಣೆಗಳಲ್ಲಿ ಕೂಡಿಹಾಕುವುದು, ಹಸಿವಿನಿಂದ ನರಳಿಸುವುದು, ಮೊದಲಾದ ಮಾರ್ಗಗಳ ಮೂಲಕ ಸುಮಾರು 6 ಮಿಲಿಯನ್ ಯಹೂದಿಗಳನ್ನು ನಿರ್ದಯವಾಗಿ ನಾಜಿ ಜರ್ಮನಿ ಕೊಂದುಹಾಕಿತು. ಎಲ್ಲಾ ಜನಾಂಗಗಳಲ್ಲಿ ಆರ್ಯ ಜನಾಂಗವೇ ಶ್ರೇಷ್ಠವೆಂದು ಪ್ರತಿಪಾದಿಸಿದನು. ಯಹೂದಿಗಳ ಹಕ್ಕುಗಳನ್ನು ದಮನ ಮಾಡಲು ಸರ್ಕಾರದ ಎಲ್ಲಾ ಆಯಕಟ್ಟಿನ ಹುದ್ದೆಗಳಿಗೆ ನಾಜೀಗಳನ್ನು ನೇಮಕ ಮಾಡಲು ಉಗ್ರ ಕ್ರಮ ಕೈಗೊಂಡನು. ಅದೇ ರೀತಿಯಾಗಿ ಕಮ್ಯೂನಿಸ್ಟರನ್ನು ಕೊಂದು



downloaded from: www.kpscvaani.com

ನಿರ್ಮೂಲ ಮಾಡಿದನು. ನಾಜಿಗಳು ಧರ್ಮದ ವಿರೋಧಿಗಳಾಗಿದ್ದರಿಂದ ಅವರು ಕ್ರೈಸ್ತ ಧರ್ಮವನ್ನು ಗೌರವಿಸಲಿಲ್ಲ.

ಹಿಟ್ಲರ್ ಹೇಳಿದಂತೆ ಇರುವುದು ದೇಶಕ್ಕಾಗಿಯೇ ಹೊರತು ದೇಶವಿರುವುದು ವ್ಯಕ್ತಿಗಾಗಿ ಅಲ್ಲ. ವ್ಯಕ್ತಿಯು ರಾಜ್ಯವನ್ನು ವಿರೋಧಿಸಲೇಬಾರದು & ದೇಶಕ್ಕಾಗಿ ಎಲ್ಲಾ ರೀತಿಯ ತ್ಯಾಗಕ್ಕೂ ಸಿದ್ಧನಿರಬೇಕು. ಸುಧಾರಣೆರಗಳ ಮೂಲಕ ಹಿಟ್ಲರನು ಆಡಳಿತವನ್ನು ಪುನರ್ ಸಂಘಟಿಸಿ ಸೇನೆಯನ್ನು ಬಲಗೊಳಿಸಿ, ದೇಶದ ಸರ್ವಾಂಗೀಣ ಅಭಿವೃದ್ದಿ ಸಾಧಿಸಿದನು. ದೇಶದ ಆರ್ಥಿಕ ಪ್ರಗತಿ ಸಾಧಿಸುವುದಕ್ಕಾಗಿ ಚತುರ್ವಾರ್ಷಿಕ ಯೋಜನೆಯನ್ನು ಆರಂಭಿಸಿದನು. ಎಲ್ಲಾ ಆರ್ಥಿಕ ಕ್ಷೇತ್ರವನ್ನು ರಾಜ್ಯದ ಅಧೀನಕ್ಕೆ ಒಳಪಡಿಸಿದನು. ಕೃಷಿ & ಕೈಗಾರಿಕೆಗಳನ್ನು ಅಭಿವೃದ್ದಿಪಡಿಸಿದನು. ನಿರುದ್ಯೋಗ ಸಮಸ್ಯೆಗಳನ್ನು ನಿವಾರಿಸಲು ಬೃಹತ್ ಯೋಜನೆಯ ಕಾರ್ಯಕ್ರಮಗಳನ್ನು ಆರಂಭಿಸಿದನು. ಕಡ್ಡಾಯ ಸೈನಿಕ ತರಬೇತಿಗಳನ್ನು ಜಾರಿಗೆ ತಂದನು.

ಹಿಟ್ಲರ್‌ನ ಮುಖ್ಯ ಗುರಿ ವರ್ಸೇಲ್ಸ್ ಒಪ್ಪಂದವನ್ನು ಉಲ್ಲಂಘಿಸುವುದಾಗಿತ್ತು. ಈ ಒಪ್ಪಂದ ಜರ್ಮನಿಗೆ ವಿರೋಧವಾಗಿತ್ತು & ಅವರ ಸೈನ್ಯವನ್ನು ಬಲಹೀನಗೊಳಿಸಿತ್ತು. ಅಲ್ಲದೇ ಜರ್ಮನಿಯು ಅಪಾರವಾದ ಯುದ್ಧದ ನಷ್ಟ ತುಂಬಿಕೊಡಬೇಕಾಯಿತು. ಇವಲ್ಲಾ ಜರ್ಮನರಲ್ಲಿ ಹತಾಶೆ & ಅತೃಪ್ತಿ ಮೂಡಿಸಿತು. ಇಂಥ ಸನ್ನಿವೇಶಗಳನ್ನು ಹಿಟ್ಲರನು ತನ್ನ ಹಿತಕ್ಕಾಗಿ ಬಳಸಿಕೊಂಡನು. ವರ್ಸೇಲ್ಸ್ ಒಪ್ಪಂದವನ್ನು ಹರಿದುಹಾಕಲು ಹಿಟ್ಲರನು ಅವಕಾಶಕ್ಕಾಗಿ ಕಾಯುತ್ತಿದ್ದನು. ಮೇಲಿನ ಎಲ್ಲಾ ನೀತಿಗಳನ್ನು ಜಾರಿಗೊಳಿಸಲು ಅವನ ಬೆಂಬಲಕ್ಕಾಗಿ ನಿಂತವರೆಂದರೆ ಗೋಬೆಲ್ಸ್, ಗೋಯೆರಿಂಗ್, ರೋಸೆನ್‌ಬರ್ಗ್ ಮತ್ತಿತರರು.

## ವಿದೇಶಾಂಗ ನೀತಿ :

ಹಿಟ್ಲರನ ಮುಖ್ಯ ಉದ್ದೇಶ ಹೆಚ್ಚು ಹೆಚ್ಚು ಪ್ರದೇಶಗಳನ್ನು ಆಕ್ರಮಿಸಿಕೊಂಡು ತನ್ನ ಎಲ್ಲಾ ಶಕ್ತಿಯನ್ನು ವೃದ್ದಿಸಿಕೊಂಡು ಜರ್ಮನಿಯನ್ನು ಜಾಗತಿಕ ಶಕ್ತಿಯಾಗಿ ಪರಿವರ್ತಿಸುವುದಾಗಿತ್ತು. ಮುಸಲೋನಿಯಂತೆ ಹಿಟ್ಲರನು ಸಹ ಯುದ್ಧವನ್ನು ವೈಭವೀಕರಿಸಿದನು. ಹಿಟ್ಲರನು ಜರ್ಮನಿಯ ಗಡಿಗಳನ್ನು ವಿಸ್ತರಿಸಲು ಆಜ್ಞಾಪಿಸಿ ಆಕ್ರಮಣಶೀಲ ನೀತಿಯನ್ನು ಅನುಸರಿಸಿದನು.

ಹಿಟ್ಲರ್‌ನು ನಿಶಸ್ತ್ರೀಕರಣ ಸಮ್ಮೇಳನದಿಂದ ಹೊರಬಂದು 1933ರಲ್ಲಿ ರಾಷ್ಟ್ರ ಸಂಘವನ್ನು ತ್ಯಜಿಸಿದನು. ನಾಜಿ ಪಕ್ಷದ ಪ್ರಮುಖ ಗುರಿ ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಎಲ್ಲಾ ಜರ್ಮನರನ್ನು ಒಗ್ಗೂಡಿಸುವುದು & ಹೆಚ್ಚು ಹೆಚ್ಚು ಪ್ರದೇಶಗಳನ್ನು ಆಕ್ರಮಿಸಿಕೊಳ್ಳುವುದಾಗಿತ್ತು. ಜರ್ಮನಿಯ ಪುನರ್ ಶಸ್ತ್ರೀಕರಣ ಕಾರ್ಯಕ್ರಮ 1935ರಲ್ಲಿ ಆರಂಭವಾಯಿತು. 1936ರಲ್ಲಿ ಜರ್ಮನಿಯ ಸೈನ್ಯ ರೈನ್‌ಲ್ಯಾಂಡ್ ಪ್ರವೇಶಿಸಿ ಅದನ್ನು ವಶಪಡಿಸಿಕೊಂಡಿತು. ನಂತರ ಆಸ್ಟ್ರೀಯಾವನ್ನು ತನ್ನಾದಾಗಿಸಿಕೊಂಡಿತು. ಅಡಾಲ್ಫ್ ಹಿಟ್ಲರನು 1937ರಲ್ಲಿ 'ರೋಮ್-ಬರ್ಲಿನ್-ಟೊಕಿಯಾ ಆಕ್ಸಿಸ್' ಬಣವನ್ನು ರಚಿಸಿಕೊಂಡು ನಂತರ ಜಕೋಸ್ಲೋವಾಕಿಯ & ಪೋಲೆಂಡ್‌ನ ಮೇಲೆ ದಾಳಿ ಮಾಡಿದನು. ಇದರೊದಿಗೆ ಎರಡನೇ ಜಾಗತಿಕ ಯುದ್ಧ ಆರಂಭವಾಯಿತು. ಇವನು ಯುರೋಪಿನಲ್ಲಿ ಒಂದರ ನಂತರ ಮತ್ತೊಂದು ದೇಶಗಳನ್ನು ಗೆಲ್ಲುತ್ತಾ ಹೋದನು. ಆದರೂ



downloaded from: www.kpscvaani.com

ಜರ್ಮನ್ನರು ಯುದ್ದದಲ್ಲಿ ಸೋತು ಮಿತ್ರ ರಾಷ್ಟ್ರ ಪಡೆಗಳಿಗೆ 1945ರಲ್ಲಿ ಶರಣಾಗತರಾದರು ಹಾಗೂ ಹಿಟ್ಲರ್ ಆತ್ಮಹತ್ಯೆ ಮಾಡಿಕೊಂಡನು. ಇದರೊಂದಿಗೆ ನಾಜಿ ಸರ್ವಾಧಿಕಾರ ಕೊನೆಗೊಂಡಿತು.

## ➢ಎರಡನೇ ಜಾಗತಿಕ ಯುದ್ಧ (1939–1945) :–

ಮೊದಲನೇ ಜಾಗತಿಕ ಯುದ್ಧದ ನಂತರ ಅಂತರಾಷ್ಟ್ರೀಯ ಶಾಂತಿ & ಸಹಕಾರ ಬೆಳೆಸಲು ರಾಷ್ಟ್ರಸಂಘ ಸ್ಥಾಪನೆಯಾಯಿತು. ಆದರೆ ರಾಷ್ಟ್ರಗಳ ಸಂಘ ತನ್ನ ಎಲ್ಲ ಧ್ಯೇಯ & ಉದ್ದೇಶಗಳಿದ್ದಾಗಿಯೂ ಜಗತ್ತಿನಲ್ಲಿ ಯುದ್ಧ ತಡೆಗಟ್ಟುವಲ್ಲಿ ವಿಫಲವಾಯಿತು. 1929ರಲ್ಲಿ ಆರ್ಥಿಕ ಮಹಾಕುಸಿತದಿಂದಾಗಿ ಅಂತಾರಾಷ್ಟ್ರೀಯ ಪರಿಸ್ಥಿತಿ ಹದಗೆಟ್ಟು ವಿಶ್ವಯುದ್ಧದ ಕಡೆ ವಾಲಿತು. ಜಗತ್ತಿನ ಮತ್ತೊಂದು ಯುದ್ಧ ಅನಿವಾರ್ಯವಾಯಿತು & 1939ರಲ್ಲಿ ಯುದ್ಧ ಆರಂಭವಾಯಿತು. 1939–1945ರವರೆಗೆ 6 ವರ್ಷಗಳ ಕಾಲ 2ನೇ ಜಾಗತಿಕ ಯುದ್ಧ ನಡೆಯಿತು. ಆಕ್ಸಿಸ್ ಶಕ್ತಿಗಳಾದ ಜರ್ಮನಿ, ಇಟಲಿ & ಜಪಾನ್ ಹಾಗೂ ಆಲೈಡ್ ಶಕ್ತಿಗಳಾದ ಇಂಗ್ಲೆಂಡ್, ಫ್ರಾನ್ಸ್, ಯು.ಎಸ್.ಎಸ್.ಆರ್ ಹಾಗೂ ಯು.ಎಸ್.ಎ.ಗಳ ಮಧ್ಯೆ ನಡೆಯಿತು. ಈ ಯುದ್ಧ ಮೊದಲನೇ ಜಾಗತಿಕ ಯುದ್ಧಕ್ಕಿಂತ ಹೆಚ್ಚು ಭಯಾನಕವಾಗಿತ್ತು. ಮಾನವನ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಅಣು ಬಾಂಬುಗಳನ್ನು ಪ್ರಯೋಗಿಸಲಾಯಿತು. ಈ ಯುದ್ಧವು ಶತ್ರು ರಾಷ್ಟ್ರಗಳ ಹೀನಾಯ ಸೋಲಿನೊಂದಿಗೆ ಕೊನೆಗೊಂಡಿತು.

### ಕಾರಣಗಳು :

#### 1. ವರ್ಸೇಲ್ಸ್ ಒಪ್ಪಂದ :

1919ರ ವರ್ಸೇಲ್ಸ್ ಒಪ್ಪಂದವು ಜರ್ಮನಿಯನ್ನು ತೀವ್ರವಾಗಿ ಅವಮಾನಗೊಳಿಸಿತು. ಮಿತ್ರ ರಾಷ್ಟ್ರಗಳೂ ತಮಗೆ ಇಷ್ಟಬಂದಂತೆ ನಡೆಸಿಕೊಂಡಿದ್ದರಿಂದಾಗಿ ಜರ್ಮನ್ನರಿಗೆ ಸಹಿಸಲಾಗಲಿಲ್ಲ. ಮೊದಲನೇ ಜಾಗತಿಕ ಯುದ್ಧದ ಎಲ್ಲ ನಷ್ಟಗಳಿಗೆ ಜರ್ಮನಿಯನ್ನು ಹೊಣೆಗಾರರನ್ನಾಗಿ ಮಾಡಲಾಯಿತು. ಈ ಒಪ್ಪಂದವೇ ಸೇಡಿನಿಂದ ಕೂಡಿದ್ದಾಗಿತ್ತು. ಜರ್ಮನಿಯು ತನ್ನ ವಸಾಹತುಗಳನ್ನು & ಕಲ್ಲಿದ್ದಲು ಗಣಿಗಳನ್ನು ಕಳೆದುಕೊಂಡಿತು. ಜೊತೆಗೆ ಇದರ ಸೈನಿಕಶಕ್ತಿಯನ್ನು ದುರ್ಬಲಗೊಳಿಸಲಾಯಿತು & ಯುದ್ಧ ನಷ್ಟ ತುಂಬಿಕೊಡುವುದು ಸಾಧ್ಯವಾಗಲಿಲ್ಲ. ಜರ್ಮನಿ ಯುದ್ಧ ನಷ್ಟ ಪರಿಹಾರ ತುಂಬಲು ಸಾಧ್ಯವಾಗದಿದ್ದಾಗ ಫ್ರಾನ್ಸ್ ಜರ್ಮನಿಗೆ ಉಳಿದಿದ್ದ ಏಕೈಕ ರ್‍ಹೂರ್ ಕಣಿವೆಯನ್ನು ವಶಪಡಿಸಿಕೊಳ್ಳಲು ತನ್ನ ಸೈನ್ಯವನ್ನು ಕಳುಹಿಸಿಕೊಟ್ಟಿತು. ಯುದ್ದದ ನಂತರದ ಆರ್ಥಿಕ ಸಂಕಷ್ಟಗಳು ಹೆಚ್ಚಿನ ಅಸಮಾಧಾನಕ್ಕೆ ಕಾರಣವಾಯಿತು. ಹಾಗಾಗಿ ಜರ್ಮನಿ ವರ್ಸೇಲ್ಸ್ ಒಪ್ಪಂದವನ್ನು ಮುರಿಯುವ ಅವಕಾಶಕ್ಕಾಗಿ ಕಾಯುತ್ತಿತ್ತು. ಹೀಗೆ ವರ್ಸೇಲ್ಸ್ ಒಪ್ಪಂದವು 2ನೇ ಜಾಗತಿಕ ಯುದ್ಧದ ಬೀಜಗಳನ್ನು ಬಿತ್ತಿತು.



downloaded from: www.kpscvaani.com

### 2. ಜಪಾನ್ & ಇಟಲಿಯ ವಿಸ್ತರಣಾ ನೀತಿ :

ಜಪಾನ್ & ಇಟಲಿ ದೇಶಗಳು ಶಾಂತಿ ಒಪ್ಪಂದದಿಂದ ತೃಪ್ತಿಗೊಂಡಿರಲಿಲ್ಲ. ಸರಿಯಾದ ಯುದ್ಧದ ಲಾಭದ ಅಂಶವನ್ನು ಇವುಗಳು ಪಡೆದುಕೊಂಡಿರಲಿಲ್ಲ. ಈ ಎರಡು ರಾಷ್ಟ್ರಗಳು ತನ್ನ ಮಿತವಾದ ಸಂಪನ್ಮೂಲಗಳಿಂದ ಬಲವಾದ ಹೊಡೆತವನ್ನು ಅನುಭವಿಸಿದವು. ಹೀಗೆ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸುವ ದೃಷಿಯಿಂದ ಆಕ್ರಮಣಕಾರಿ ಹಾಗೂ ವಿಸ್ತರಣಾ ನೀತಿಗೆ ವಾಲಿದವು. ಜಪಾನ್ ಮಿತ್ರ ರಾಷ್ಟ್ರಗಳಿಂದ ಹೊರಬಂದು ಜರ್ಮನಿಯೊಂದಿಗೆ ಸೇರಿತು. ಇದರ ಘೋಷಣೆ ಎಂದರೆ "ಏಷ್ಯಾ ಏಷ್ಯನ್ನರಿಗೆ'. ಪಾಶ್ಚಿಮಾತ್ಯರ ಹಿಡಿತದಿಂದ ಏಷ್ಯಾವನ್ನು ಮುಕ್ತಗೊಳಿಸಲು ನಿರ್ಧರಿಸಿತು. ಜಪಾನ್ ಸಾಮ್ರಾಜ್ಯಶಾಹಿ ನೀತಿಯನ್ನು ಅನುಸರಿಸಿ ಮಂಚೂರಿಯಾ & ಚೀನಾವನ್ನು ಗುರಿಯಾಗಿ ಇಟ್ಟುಕೊಂಡು ಬಲಿಷ್ಠ ನೌಕಾಪಡೆಯನ್ನು ಅಭಿವೃದ್ಧಿಗೊಳಿಸಿತು.

### 3. ಸರ್ವಾಧಿಕಾರಿಗಳ ಏಳಿಗೆ :

ಇಟಲಿಯಲ್ಲಿ ಮುಸಲೋನಿ, ಜರ್ಮನಿಯಲ್ಲಿ ಆಡಾಲ್ಫ್ ಹಿಟ್ಲರ್ & ಜಪಾನಿನಲ್ಲಿ ಟೋಜೋ ಅವರ ನೇತೃತ್ವದಲ್ಲಿಯ ಸರ್ವಾಧಿಕಾರದ ಬೆಳವಣಿಗೆಯು ಯುದ್ಧಕ್ಕೆ ಮತ್ತೊಂದು ಕಾರಣವಾಯಿತು. ಅವರೆಲ್ಲರೂ ಯುದ್ಧವನ್ನು ವೈಭವೀಕರಿಸಿದರು. ಮುಸಲೋನಿ ಪ್ರಾಚೀನ ರೋಮಿನ ವೈಭವವನ್ನು ಮರುಸ್ಥಾಪಿಸುವ ಸಲುವಾಗಿ ಇಟಲಿಯಲ್ಲಿ ಸೈನಿಕ ಸಿದ್ಧಾಂತವನ್ನು ಪ್ರತಿಪಾದಿಸಿದನು. ಹಿಟ್ಲರನು ಜರ್ಮನಿಯ ಪ್ರಭುತ್ವಕ್ಕಾಗಿ & ಸೇಡು ತೀರಿಸಿಕೊಳ್ಳಲು ಸೇನಾ ಪುನರ್‌ನಿರ್ಮಾಣಕ್ಕೆ ಬದ್ಧನಾದನು. ಯುದ್ಧ & ಆಕ್ರಮಣದ ಮೂಲಕ ಜರ್ಮನ್ ಜನಾಂಗದ ಶ್ರೇಷ್ಠತೆ & ಸಂಸ್ಕೃತಿಯನ್ನು ಪ್ರಚಾರ ಮಾಡುವ ಮಾತುಗಳನ್ನು ಆಡಿದನು. ಜಪಾನ್ ತನ್ನದೇ ಆದ ಸಾಮ್ರಾಜ್ಯವನ್ನು ಬಯಸಿತು. ಮುಂದೆ ಇಟಲಿ, ಜರ್ಮನಿ, ಜಪಾನ್ ಸೇರಿಕೊಂಡು 1937ರಲ್ಲಿ 'ರೋಮ್–ಬರ್ಲಿನ್–ಟೋಕಿಯೋ ಆಕ್ಸಿಸ್' ಒಪ್ಪಂದ ಮಾಡಿಕೊಂಡವು. ಇದು ಜಗತ್ತಿನ ಶಾಂತಿಗೆ ಅಪಾಯ ತಂದೊಡ್ಡಿತು. ನಂತರ ಸೋವಿಯತ್ ಒಕ್ಕೂಟದಲ್ಲಿ ಸರ್ವಾಧಿಕಾರವನ್ನು ಹೋಲುತ್ತಿತ್ತು. ಹಿಟ್ಲರನಂತೆಯೇ ಸ್ಟಾಲಿನ್ ಸಹ ತನ್ನ ವಿರೋಧಿಗಳನ್ನು ನಿರ್ದಯವಾಗಿ ಕೊಲೆಗೈದನು.

### 4. ವಸಾಹತು & ವಾಣಿಜ್ಯ ಪೈಪೋಟಿ :

ವಸಾಹತು & ವಾಣಿಜ್ಯ ಪೈಪೋಟಿಯು ಎರಡನೇ ಯುದ್ಧಕ್ಕೆ ಮತ್ತೊಂದು ಕಾರಣವಾಯಿತು. ಇದೊಂದು ರೀತಿಯಲ್ಲಿ ಆರ್ಥಿಕ ರಾಷ್ಟ್ರೀಯತೆಯಾಗಿತ್ತು. ಇದು ಕಚ್ಚಾವಸ್ತುಗಳಿಗಾಗಿ, ಸಿದ್ಧವಸ್ತುಗಳ ಮಾರುಕಟ್ಟೆಗಾಗಿ & ಹೆಚ್ಚಿನ ಜನಸಂಖ್ಯೆಗೆ ವಸಾಹತುಗಳಿಗಾಗಿ ನಡೆದ ಹೋರಾಟವಾಗಿತ್ತು. ಮೊದಲನೇ ಜಾಗತಿಕ ಯುದ್ಧದ ನಂತರ ಇಟಲಿ, ಜರ್ಮನಿ & ಜಪಾನ್ ರಾಷ್ಟ್ರಗಳು ಅತೃಪ್ತಗೊಂಡಿದ್ದವು. ಈ ರಾಷ್ಟ್ರಗಳಲ್ಲಿ ಸಂಪನ್ಮೂಲಗಳ ಕೊರತೆ ಇತ್ತು. ಇದರ ಜೊತೆಗೆ ಆರ್ಥಿಕ ಮಹಾ ಮುಗ್ಗಟ್ಟು ಈ ರಾಷ್ಟ್ರಗಳ ಆರ್ಥಿಕ ಪರಿಸ್ಥಿತಿಯ ಮೇಲೆ ದುಷ್ಪರಿಣಾಮ



downloaded from: www.kpscvaani.com

ಉಂಟುಮಾಡಿತ್ತು. ಕಚ್ಚಾ ಪದಾರ್ಥಗಳ ಕೊರತೆ & ಸಿದ್ಧವಸ್ತುಗಳಿಗೆ ಮಾರುಕಟ್ಟೆಗಳ ಅಭಾವ ಉಂಟಾಗಿ ಆರ್ಥಿಕ ದುಸ್ಥಿತಿ ಉಂಟಾಯಿತು. ಇಂತಹ ಪರಿಸ್ಥಿತಿಯಲ್ಲಿ ಇಟಲಿ, ಜರ್ಮನಿ, ಜಪಾನ್‌ಗಳು ಒಂದಾಗಿ ಅತಿ ಉಗ್ರ ಆಕ್ರಮಣಕಾರಿ ನೀತಿ ಅನುಸರಿಸಿದವು.

## 5. ರಾಷ್ಟ್ರಗಳ ಸಂಘದ ವಿಫಲತೆ :

ರಾಷ್ಟ್ರಗಳ ಸಂಘವು ಬಹಳ ದುರ್ಬಲಗೊಂಡು ಅಸಮರ್ಥವಾಗಿತ್ತು. ರಾಷ್ಟ್ರಗಳ ಸಂಘ ತನ್ನದೇ ಆದ ಯಾವುದೇ ಸೇನೆ ಹೊಂದಿರಲಿಲ್ಲ. ಇದು ಕೆಲವೇ ರಾಷ್ಟ್ರಗಳಾದ ಇಂಗ್ಲೆಂಡ್ & ಫ್ರಾನ್ಸ್‌ಗಳ ಹಿಡಿತದಲ್ಲಿತ್ತು. ಅಮೇರಿಕಾ ರಾಷ್ಟ್ರಸಂಘದಿಂದ ಹೊರ ಉಳಿದ ಪರಿಣಾಮವಾಗಿ ರಾಷ್ಟ್ರಗಳ ಸಂಘ ಯುರೋಪಿನಲ್ಲಿ ಶಾಂತಿ ಕಾಪಾಡುವಲ್ಲಿ ವಿಫಲಗೊಂಡಿತು. ಎರಡು ಬಣಗಳ ಮಧ್ಯೆ ವೈರತ್ವ ಹೆಚ್ಚಾದಾಗ ರಾಷ್ಟ್ರಸಂಘ ತಟಸ್ಥವಾಯಿತು. ಈ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಜಪಾನ್ ಚೀನಾದ ಮಂಚೂರಿಯಾದ ಮೇಲೆ ದಾಳಿ ಮಾಡಿತು. ಇಟಲಿ, ಅಬಿಸೀನಿಯಾದ ಮೇಲೆ & ಜರ್ಮನಿಯು ರೈನ್‌ಲ್ಯಾಂಡ್ & ಆಸ್ಟ್ರೀಯಾದ ಮೇಲೆ ದಾಳಿ ಮಾಡಿದವು. ಈ ದಾಳಿಗಳನ್ನು ತಡೆಗಟ್ಟುವಲ್ಲಿ ರಾಷ್ಟ್ರಗಳ ಸಂಘ ವಿಫಲವಾಯಿತು. ಹಾಗೂ ಶಸ್ತ್ರಾಸ್ತ್ರಗಳ ಪೈಪೋಟಿ ತಡೆಗಟ್ಟಲಾಗಲಿಲ್ಲ. ಇದರಿಂದ ರಾಷ್ಟ್ರಗಳ ಸಂಘ ತನ್ನ ವಿಶ್ವಾಸಾರ್ಹತೆ & ತನ್ನ ಗೌರವವನ್ನು ಕಳೆದುಕೊಂಡಿದ್ದು ದುರದೃಷ್ಟಕರವಾಗಿತ್ತು. ದುಃಖಕರ ಸಂಗತಿ ಎಂದರೆ ಈ ಪರಿಸ್ಥಿತಿಯನ್ನು ಸರಿಪಡಿಸಲು ಸಾಧ್ಯವಿದ್ದ ನಾಯಕರು ಪ್ರಾಮಾಣಿಕ ಪ್ರತಯತ್ನ ಮಾಡಲಿಲ್ಲ.

## 6. ಮರು ಶಸ್ತ್ರೀಕರಣ :

1919ರ ಶಾಂತಿ ಒಪ್ಪಂದವು ಸಂಪೂರ್ಣವಾಗಿ ನಿಶಸ್ತ್ರೀಕರಣಗೊಳಿಸಿತು. ಆದರೆ ಹಿಟ್ಲರ್ ರಾಷ್ಟ್ರದ ಶಕ್ತಿ & ಸಾಧನೆಗೆ ಮರುಶಸ್ತ್ರೀಕರಣವೇ ಏಕೈಕ ಮಾರ್ಗ ಎಂದು ಘೋಷಿಸಿದನು. ಹಿಟ್ಲರನು ನಿಶಸ್ತ್ರೀಕರಣ ಸಮ್ಮೇಳನದಿಂದ ಜರ್ಮನಿಯನ್ನು ಹೊರತಂದು ಮರುಶಸ್ತ್ರೀಕರಣ ಕೈಗೊಂಡನು. ಆಡಾಲ್ಫ್ ಹಿಟ್ಲರನು ತೀವ್ರವಾಗಿ ಸೈನಿಕ ಶಕ್ತಿ ಹೆಚ್ಚಿಸಲು ಆಧುನಿಕ ಶಸ್ತ್ರಾಸ್ತ್ರಗಳು ಯುದ್ಧದ ನೌಕೆಗಳು, ಯುದ್ಧವಿಮಾನಗಳು ಜಲಾಂತರ್ಗಾಮಿಗಳ ಸಂಖ್ಯೆಯನ್ನು ಹೆಚ್ಚಿಸಿದನು. ಇಟಲಿ & ಜಪಾನ್ ಹಾಗೂ ಇತರರು ಮರುಶಸ್ತ್ರೀಕರಣ ಕೈಗೊಂಡಿದ್ದರಿಂದ ಎರಡನೇ ಜಾಗತಿಕ ಯುದ್ಧಕ್ಕೆ ಎಡೆ ಮಾಡಿತು.

## 7. ತತ್‌ಕ್ಷಣದ ಕಾರಣ :


1939ರ ಸೆಪ್ಟೆಂಬರ್ 1ರಂದು ಹಿಟ್ಲರನು ಪೋಲೆಂಡಿನ ಮೇಲೆ ಮಾಡಿದ ಆಕ್ರಮಣವು ಎರಡನೇ ಜಾಗತಿಕ ಯುದ್ಧದ ತತ್‌ಕ್ಷಣದ ಕಾರಣವಾಯಿತು. ಪೋಲೆಂಡ್, ಇಂಗ್ಲೆಂಡ್ & ಫ್ರಾನ್ಸ್‌ನ ಮಿತ್ರರಾಷ್ಟ್ರವಾಗಿತ್ತು. ಆದ್ದರಿಂದ ಇಂಗ್ಲೆಂಡ್ & ಫ್ರಾನ್ಸ್ ಜರ್ಮನಿಯ ಮೇಲೆ ಯುದ್ಧ ಘೋಷಣೆ ಮಾಡಿದವು.




downloaded from: www.kpscvaani.com

## ಯುದ್ಧದ ಗತಿ :

ಯುದ್ಧ ಆರಂಭವಾದ ಕೆಲವೇ ತಿಂಗಳುಗಳಲ್ಲಿ ಹಿಟ್ಲರನು ಡೆನ್ಮಾರ್ಕ್, ನಾರ್ವೆ, ಹಾಲೆಂಡ್ ಬೆಲ್ಜಿಯಂ & ಫ್ರಾನ್ಸ್‌ಗಳನ್ನು ವಶಪಡಿಸಿಕೊಂಡನು. ನಂತರ ಹಿಟ್ಲರನು ಇಂಗ್ಲೆಂಡಿನ ಮೇಲೆ ಭಾರಿ ಸ್ಫೋಟಕಗಳನ್ನು ಹಾಗೂ ಸಬ್‌ಮೆರಿನ್ ಮೂಲಕ ದಾಳಿ ನಡೆಸಿ ಭಯಭೀತಗೊಳಿಸಿದನು. ಭಾರಿ ಪ್ರಮಾಣದ ಬಾಂಬುಗಳನ್ನು ಲಂಡನ್ & ಇತರ ನಗರಗಳ ಮೇಲೆ ಹಾಕಿದನು. ಇದನ್ನು ಇಂಗ್ಲೆಂಡ್ ಯಶಸ್ವಿಯಾಗಿ ತಡೆಯಿತು. 1941ರ ಜೂನ್‌ನಲ್ಲಿ ಹಿಟ್ಲರ್ ರಷ್ಯಾದ ಮೇಲೆ ಆಕ್ರಮಣ ಮಾಡಿದನು. ಜರ್ಮನಿ ಸೇನೆ ಮಾಸ್ಕೋ & ಲೆನಿನ್‌ಗ್ರಾಡ್‌ಗಳವರೆಗೆ ಮುನ್ನುಗ್ಗಿತು. ಈ ದಾಳಿಯಿಂದ ರಷ್ಯಾವು ಅಪಾರವಾದ ಹಾನಿ ಅನುಭವಿಸಿತು. ಬ್ರಿಟನ್ ರಷ್ಯಾದ ಸಹಾಯಕ್ಕೆ ಧಾವಿಸಿತು. ರಷ್ಯಾವು ಮಿತ್ರರಾಷ್ಟ್ರಗಳ ಜೊತೆಗೆ ಸೇರಿಕೊಂಡಿತು. 1941ರ ಕೊನೆಯಲ್ಲಿ ಜಪಾನ್ ಹಿಟ್ಲರೊಂದಿಗೆ ಕೈಜೋಡಿಸಿತು. ಡಿಸೆಂಬರ್ 1941ರಲ್ಲಿ ಜಪಾನ್ ದೇಶವು ಅಮೇರಿಕಾ ಸಂಯುಕ್ತ ಸಂಸ್ಥಾನದ ಶಾಂತಸಾಗರದ ಪರ್ಲ್‌ಹಾರ್ಬರ್ ನೌಕಾನೆಲೆಯ ಮೇಲೆ ದಾಳಿಮಾಡಿತು. ಅಮೇರಿಕನ್ನರ ಅನೇಕ ಹಡಗುಗಳನ್ನು ಮುಳುಗಿಸಲಾಯಿತು. ಇದು ಅಮೇರಿಕಾ ಮಿತ್ರರಾಷ್ಟ್ರಗಳೊಂದಿಗೆ ಸೇರಲು ಕಾರಣವಾಯಿತು. ಜಪಾನ್, ಹಾಂಕಾಂಗ್, ಫಿಲಿಫೈನ್ಸ್, ಮಲಯ, ಬರ್ಮಾ ಇತ್ಯಾದಿಗಳನ್ನು ವಶಪಡಿಸಿಕೊಂಡಿತು.


Hiroshima
August 6, 1945


Nagasaki
August 9, 1945

ಬ್ರಿಟನ್ & ಇಟಲಿ ಸೈನ್ಯಗಳ ಮಧ್ಯೆ 1941–43ರಲ್ಲಿ ಉತ್ತರ ಆಫ್ರಿಕಾದಲ್ಲಿ ಭಾರೀ ಸೆಣೆಸಾಟ ನಡೆಯಿತು. ಅಂತಿಮವಾಗಿ ಇಟಲಿಯನ್ನರನ್ನು ಲಿಬಿಯಾದಿಂದ ಹೊರಹಾಕಲಾಯಿತು. 1942ರಲ್ಲಿ ಆಂಗ್ಲೋ–ಅಮೇರಿಕನ್ ಸೇನೆ ಆಲ್ಜಿರಿಯಾ & ಟ್ಯೂನಿಸ್‌ಗಳನ್ನು ವಶಪಡಿಸಿಕೊಂಡಿತು. ವೈರಿಗಳನ್ನು ಆಫ್ರಿಕಾದಿಂದ ಹೊರಹಾಕಿತು. ನಂತರ ಮಿತ್ರಪಡೆ 1943ರಲ್ಲಿ ಇಟಲಿಯನ್ನು ವಶಪಡಿಸಿಕೊಂಡಿತು. ಮುಸಲೋನಿ ಜರ್ಮನಿಯಲ್ಲಿ ಆಶ್ರಯ ಪಡೆದನು. 1943ರ ಸೆಪ್ಟೆಂಬರ್ ಇಟಲಿ ಷರತ್ತುರಹಿತವಾಗಿ ಮಿತ್ರ ಕೂಟಕ್ಕೆ ಶರಣಾಯಿತು. ಏಪ್ರಿಲ್ 1945ರ ಹೊತ್ತಿಗೆ ಮಿತ್ರ ಪಕ್ಷಗಳು ಜರ್ಮನಿಯ ರಾಜಧಾನಿಯಾದ ಬರ್ಲಿನ್ ವಶಪಡಿಸಿಕೊಂಡವು. ಇದೇ ವೇಳೆಗೆ ಮುಸಲೋನಿಯನ್ನು ಹತ್ಯೆಗೈಯಲಾಯಿತು. ಹಾಗೂ ಹಿಟ್ಲರನು ಆತ್ಮಹತ್ಯೆ ಮಾಡಿಕೊಂಡನು.



downloaded from: www.kpscvaani.com

ಇಟಲಿ & ಜರ್ಮನಿಗಳು ಶರಣಾದರೂ ಜಪಾನ್ ಯುದ್ಧ ಮುಂದುವರೆಸಿತು. ಇದೇ ವೇಳೆಗೆ ಅಮೇರಿಕಾದ ಅಧ್ಯಕ್ಷ ಎಫ್.ಡಿ. ರೂಸ್‌ವೆಲ್ಟ್ ಮರಣ ಹೊಂದಿದನು. ಹ್ಯಾರಿ ಎಸ್.ಟ್ರೂಮನ್ ಅಮೇರಿಕಾದ ಅಧ್ಯಕ್ಷನಾದನು. ಇವನು ಜಪಾನ್ ಮೇಲೆ ಅಣುಬಾಂಬ್ ದಾಳಿ ಮಾಡಲು ಅಮೇರಿಕಾ ವಾಯುಪಡೆಗೆ ಆದೇಶ ನೀಡಿದನು. ಅದರಂತೆ 'ಲಿಟಲ್ ಬಾಯ್' ಎಂಬ ಹೆಸರಿನ ಅಣುಬಾಂಬನ್ನು ಜಪಾನಿನ ಕೈಗಾರಿಕಾ ನಗರಗಳಲ್ಲಿ ಒಂದಾದ ಹಿರೋಶಿಮಾದ ಮೇಲೆ ಆಗಸ್ಟ್ 6, 1945ರಂದು & ಇನ್ನೊಂದು 'ಫ್ಯಾಟ್‌ಮ್ಯಾನ್' ಎಂಬ ಹೆಸರಿನ ಬಾಂಬನ್ನು ನಾಗಸಾಕಿ ಮೇಲೆ ಆಗಸ್ಟ್ 9, 1945ರಂದು ಹಾಕಲಾಯಿತು. ಇದರಿಂದಾದ ತೀವ್ರ ವಿನಾಶದ ಪರಿಣಾಮವಾಗಿ ಜಪಾನ್ ಯಾವುದೇ ಷರತ್ತುಗಳಿಲ್ಲದೆ ಅಮೆರಿಕಾ ಪಡೆಗಳಿಗೆ ಶರಣಾಯಿತು. ಹೀಗೆ ಅತ್ಯಂತ ಭಯಾನಕವಾದ 6 ವರ್ಷಗಳ ರಕ್ತಸಿಕ್ತ ಯುದ್ಧ ಕೊನೆಗೊಂಡಿತು.

## ಪರಿಣಾಮಗಳು :

1. ಅದುವರೆಗೂ ನಡೆದಿದ್ದ ಎಲ್ಲಾ ಯುದ್ಧಗಳಿಗಿಂತ ಎರಡನೇ ಜಾಗತಿಕ ಯುದ್ಧವು ಅತ್ಯಂತ ವಿನಾಶಕಾರಕವಾಗಿತ್ತು. ಈ ಯುದ್ಧದಲ್ಲಿ ಸುಮಾರು 25 ಮಿಲಿಯನ್ ಜನರು ಪ್ರಾಣ ಕಳೆದುಕೊಂಡರು & 50 ಮಿಲಿಯನ್ ಜನರು ಅಂಗವಿಕಲರಾದರು. ಮಿಲಿಯನ್‌ಗಟ್ಟಲೇ ಜನರು ಯುದ್ಧದ ನಂತರ ಹಸಿವು & ರೋಗಗಳಿಂದ ಮರಣ ಹೊಂದಿದ್ದರು. ಅಪಾರ ಸಂಖ್ಯೆಯಲ್ಲಿ ಮನೆ, ಕೈಗಾರಿಕೆಗಳು, ಸಾರಿಗೆ & ಸಂಪರ್ಕಗಳು ಹಾನಿಗೊಂಡವು. ಹೀಗೆ ಕೃಷಿ ಭೂಮಿ ನಾಶ ಹೊಂದಿದ್ದರಿಂದ ಆಹಾರದ ಕೊರತೆ ಆಯಿತು. ಯುದ್ಧದ ನಂತರ ಅನೇಕ ರಾಷ್ಟ್ರಗಳು ಪುನರ್ ನಿರ್ಮಾಣದ ಸಮಸ್ಯೆಗಳನ್ನು ಎದುರಿಸಿದವು.
2. ಇಟಲಿ & ಜರ್ಮನಿಯಲ್ಲಿ ಎರಡನೇ ಜಾಗರತಿಕ ಯುದ್ಧದ ನಂತರ ಸರ್ವಾಧಿಕಾರ ಅಂತ್ಯವಾಯಿತು. ಬಡ್ಲೋಗಿ ನೇತೃತ್ವದಲ್ಲಿ ಇಟಲಿಯನ್ನು ಗಣರಾಜ್ಯ ಎಂದು ಘೋಷಿಸಲಾಯಿತು. ಫ್ರಾನ್ಸ್, ಬ್ರಿಟನ್, ರಷ್ಯಾ & ಅಮೆರಿಕಾ ಅಧೀನದಲ್ಲಿ ಜರ್ಮನಿಯನ್ನು 4 ವಲಯಗಳಾಗಿ ವಿಭಜಿಸಲಾಯಿತು. ನಾಜಿ ಪಕ್ಷದ ನಾಯಕರುಗಳನ್ನು ನ್ಯೂರಂಬರ್ಗ್‌ನಲ್ಲಿ ವಿಚಾರಣೆಗೆ ಒಳಪಡಿಸಲು ನ್ಯಾಯಾಲಯವನ್ನು ಸ್ಥಾಪಿಸಲಾಯಿತು. ಜಪಾನ್ ದೇಶವು ತನ್ನ ಎಲ್ಲಾ ಹಕ್ಕುಗಳನ್ನು ಚೀನಾಕ್ಕೆ ಬಿಟ್ಟುಕೊಟ್ಟಿತು, ಜಪಾನನ್ನು ಮಿತ್ರ ರಾಷ್ಟ್ರಗಳು ವಶಪಡಿಸಿಕೊಂಡವು (ಯು.ಎಸ್.ಎ).
3. ಈ ಯುದ್ಧದ ನಂತರ ಜಗತ್ತಿನಲ್ಲಿ ಯುರೋಪಿನ ಪ್ರಭುತ್ವ ಕೊನೆಗೊಂಡಿತು. ಎರಡನೇ ಜಾಗತಿಕ ಯುದ್ಧದ ನಂತರ ಯು.ಎಸ್.ಎ & ಯು.ಎಸ್.ಎಸ್.ಆರ್ ಶಕ್ತಿಶಾಲಿ ರಾಷ್ಟ್ರಗಳಾಗಿ ಹೊರಹೊಮ್ಮಿದವು.
4. ಎರಡನೇ ಜಾಗತಿಕ ಯುದ್ಧದ ನಂತರ ಅಮೆರಿಕಾ & ರಷ್ಯಾ ಮಧ್ಯೆ ಅಪನಂಬಿಕೆ ಹೆಚ್ಚಾಯಿತು. ಇದು ಶೀತಲ ಸಮರಕ್ಕೆ ನಾಂದಿಯಾಯಿತು. ಈ ಎರಡು ಶಕ್ತಿಗಳ ಸಂಘರ್ಷ 1945ರಿಂದ ಅಂತರಾಷ್ಟ್ರೀಯ ಸಂಬಂಧದ ಪ್ರಮುಖ ಲಕ್ಷಣವಾಗಿತ್ತು. ಇದರ ಪರಿಣಾಮವಾಗಿ ವಿಶ್ವಶಾಂತಿಗೆ ನಿತಂತರವಾಗಿ ಧಕ್ಕೆಯುಂಟಾಯಿತು.



downloaded from: www.kpscvaani.com

5. ಜಾಗತಿಕ ಯುದ್ಧದ ಪರಿಣಾಮವಾಗಿ ರಾಷ್ಟ್ರೀಯತೆಯ ತತ್ವದ ವಿಜಯ & ವಸಾಹತುಶಾಹಿಯ ಅಂತ್ಯವಾಯಿತು. ಏಷ್ಯಾ, ಆಫ್ರಿಕಾ & ಲ್ಯಾಟಿನ್ ಅಮೇರಿಕಾಗಳಲ್ಲಿ ಯುರೋಪಿನ ವಸಾಹತು ಸಾಮ್ರಾಜ್ಯವು ಕೊನೆಗೊಂಡಿತು. ಯುದ್ಧದ ನಂತರ ಭಾರತ, ಶ್ರೀಲಂಕಾ, ಇಂಡೋನೇಷಿಯಾ ಮುಂತಾದ ರಾಷ್ಟ್ರಗಳು ಸ್ವತಂತ್ರಗೊಂಡವು.
6. ಜರ್ಮನಿ ಆಳ್ವಿಕೆ ಸಮಯದಲ್ಲಿ ಯಹೂದಿಗಳು ನಿರ್ಗತಿಕರಾದರು. ಯಾತನಾ ಶಿಬಿರದಲ್ಲಿ ಸುಮಾರು 6 ಮಿಲಿಯನ್ ಯಹೂದಿಗಳು ನಾಶವಾದರು. ಯುದ್ಧದ ನಂತರ ಅಮೆರಿಕಾ ಸಹಾಯದಿಂದ ಯಹೂದಿಗಳಿಗಾಗಿ ಒಂದು ಹೊಸ ಮೂಲ ನೆಲೆಯನ್ನು (ಇಸ್ರೇಲ್) 1948ರಲ್ಲಿ ಸ್ಥಾಪಿಸಲಾಯಿತು.
7. ಅಣುಬಾಂಬುಗಳಿಂದ ಜಪಾನ್ ವಿನಾಶಕಾರಿ ಪರಿಣಾಮಗಳನ್ನು ಅನುಭವಿಸಿತು. ಇಡೀ ವಾತಾವರಣ ವಿಷಾವೃತವಾಯಿತು. ಅನೇಕ ನವಜಾತ ಶಿಶುಗಳು ರೋಗರುಜಿನಗಳಿಗೆ ಒಳಗಾಗಿ ಅಂಗವಿಕಲರಾದರು.
8. ಎರಡನೇ ಜಾಗತಿಕ ಯುದ್ಧದ ಅತ್ಯಂತ ಪ್ರಮುಖ ಪರಿಣಾಮವೆಂದರೆ ವಿಶ್ವಸಂಸ್ಥೆ ಸ್ಥಾಪನೆ. ಭವಿಷ್ಯತ್ತಿನಲ್ಲಿ ಯುದ್ಧ ತಡೆಗಟ್ಟಿ, ಶಾಂತಿ ಸ್ಥಾಪಿಸುವ ಉದ್ದೇಶದಿಂದ ಈ ಸಂಸ್ಥೆ ಸ್ಥಾಪನೆಯಾಯಿತು.

## ➢ ವಿಶ್ವಸಂಸ್ಥೆ :–

ರಾಷ್ಟ್ರಗಳ ಸಂಘದ ಚಿತಾಭಸ್ಮದಿಂದ ವಿಶ್ವಸಂಸ್ಥೆಯು ಹುಟ್ಟಿಕೊಂಡಿತು. ರಾಷ್ಟ್ರಗಳ ಸಂಘವು ಯಶಸ್ಸು ಕಾಣದಿದ್ದರೂ ಇದು ಜಗತ್ತಿನ ರಾಜನೀತಿಜ್ಞರಿಗೆ ಮೂರನೇ ಜಾಗತಿಕ ಯುದ್ಧ ತಡೆಯಲು ಸಂಘಟನೆಯೊಂದರ ವಿಚಾರವನ್ನು ನೀಡಿತು. ಅಂತರಾಷ್ಟ್ರೀಯ ಶಾಂತಿ & ಭದ್ರತೆಯನ್ನು ಕಾಪಾಡುವುದು ಜಗತ್ತಿನ ರಾಜನೀತಿಜ್ಞರ ಬಹಳ ಪ್ರಮುಖವಾದ ಆಶಯವಾಗಿತ್ತು.

ಎರಡನೇ ಜಾಗತಿಕ ಯುದ್ಧದಂತಹ ಘೋರ ದುಷ್ಕೃತ್ಯದ ನಂತರ ಅಮೇರಿಕಾದ ಅಧ್ಯಕ್ಷ ಎಫ್.ಡಿ.ರೂಸ್‌ವೆಲ್ಟ್ & ಬ್ರಿಟನ್ ಪ್ರಧಾನಿ ಸರ್.ವಿನ್‌ಸ್ಟನ್ ಚರ್ಚಿಲ್ ಇವರು ಯುದ್ಧ ತಡೆದು ಶಾಂತಿ ಸ್ಥಾಪನೆ ಮಾಡುವಂತಹ ಸಂಘ ಸ್ಥಾಪಿಸಲು ತವಕದಿಂದ ಮುಂದಾದರು. ಇವರು ತಮ್ಮ ಉದ್ದೇಶವನ್ನು ಆಗಸ್ಟ್ 1941ರಲ್ಲಿ ಅಟ್ಲಾಂಟಿಕ್ ಚಾರ್ಟರ್‌ನಲ್ಲಿ ಘೋಷಿಸಿದರು.

ಅಟ್ಲಾಂಟಿಕ್ ಚಾರ್ಟರ್‌ನ ನಂತರ ಜಗತ್ತಿನ ನಾಯಕರ ಸಭೆಗಳ ಸರಮಾಲೆಗಳೇ ಜರುಗಿದವು. ಯು.ಎಸ್.ಎಸ್.ಆರ್. ಅಧ್ಯಕ್ಷ ಸ್ಟಾಲಿನ್ ನಂತರದ ಅವಧಿಯಲ್ಲಿ ಮಾತುಕತೆಗೆ ಸೇರಿಕೊಂಡನು. ಈ ಎಲ್ಲಾ ಪ್ರಯತ್ನಗಳ ಫಲವಾಗಿ 1945 ಅಕ್ಟೋಬರ್ 24ರಂದು ವಿಶ್ವಸಂಸ್ಥೆ ಸ್ಥಾಪನೆಯಾಯಿತು. ಅಕ್ಟೋಬರ್ 24ನ್ನು ಯು.ಎನ್. ದಿನವಾಗಿ ಆಚರಿಸಲಾಗುತ್ತದೆ. ನ್ಯೂಯಾರ್ಕ್ (ಯು.ಎಸ್.ಎ) ಯು.ಎನ್.ಒ. ದ ಕೇಂದ್ರ ಸ್ಥಾನವಾಗಿದೆ. ಆರಂಭದಲ್ಲಿ ಭಾರತವೂ ಸೇರಿ 51 ಸದಸ್ಯ ರಾಷ್ಟ್ರಗಳಿದ್ದವು. 2012ಕ್ಕೆ 193 ಸದಸ್ಯ ರಾಷ್ಟ್ರಗಳಿವೆ.



downloaded from: www.kpscvaani.com

ಇದು ಇಂಗ್ಲೀಷ್, ಅರೇಬಿಕ್, ರಷ್ಯನ್ ಸ್ಪಾನಿಷ್, ಫ್ರೆಂಚ್ & ಚೈನೀಸ್ ಭಾಷೆಗಳನ್ನು ತನ್ನ ಆಡಳಿತ ಭಾಷೆಯನ್ನಾಗಿ ಮಾನ್ಯತೆ ಮಾಡಿದೆ. (EARSFC)

## ವಿಶ್ವಸಂಸ್ಥೆ ಗುರಿ ಮತ್ತು ಉದ್ದೇಶಗಳು :

1. ಅಂತರಾಷ್ಟ್ರೀಯ ಶಾಂತಿ & ಭದ್ರತೆಯನ್ನು ಕಾಪಾಡುವುದು.
2. ಜಗತ್ತಿನ ರಾಷ್ಟ್ರ–ರಾಷ್ಟ್ರಗಳ ನಡುವೆ ಸ್ನೇಹಯುತ ಸಂಬಂಧವನ್ನು ಬೆಳೆಸುವುದು.
3. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ & ವೈದ್ಯಕೀಯ ಕ್ಷೇತ್ರಗಳಲ್ಲಿ ಅಂತರಾಷ್ಟ್ರೀಯ ಸಹಕಾರ ಏರ್ಪಡಿಸುವುದು.
4. ಅಂತರಾಷ್ಟ್ರೀಯ ಮಾನವನ ಮೂಲಭೂತ ಹಕ್ಕುಗಳನ್ನು ರಕ್ಷಿಸುವುದು.
5. ಜನರ ಜೀವನ ಮಟ್ಟವನ್ನು ಸುಧಾರಿಸುವುದು.
6. ಅಂತರಾಷ್ಟ್ರೀಯ ಕಾನೂನು & ಒಪ್ಪಂದಗಳನ್ನು ಎತ್ತಿ ಹಿಡಿಯುವುದು.

## ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳು :

ವಿಶ್ವ ಸಂಸ್ಥೆಯು 6 ಪ್ರಧಾನ ಅಂಗಗಳ ಮೂಲಕ ಕಾರ್ಯ ನಿರ್ವಹಿಸುತ್ತದೆ. ಅವುಗಳೆಂದರೆ :

1. ಸಾಮಾನ್ಯ ಸಭೆ
2. ಭದ್ರತಾ ಮಂಡಳಿ
3. ಆರ್ಥಿಕ & ಸಾಮಾಜಿಕ ಮಂಡಳಿ
4. ಧರ್ಮದರ್ಶಿ ಮಂಡಳಿ
5. ಅಂತರಾಷ್ಟ್ರೀಯ ನ್ಯಾಯಾಲಯ
6. ಸಚಿವಾಲಯ

## ಸಾಮಾನ್ಯ ಸಭೆ :



ಸಾಮಾನ್ಯ ಸ

ರಾಷ್ಟ್ರಕ್ಕೆ ಒಂದೇ ಮತವಿದೆ. ಇದು ಅಂತರಾಷ್ಟ್ರೀಯ ಮಟ್ಟದಲ್ಲಿ ಶಾಂತಿ & ಭದ್ರತೆಯನ್ನು ಕಾಪಾಡುವ ವಿಷಯವನ್ನು ಚರ್ಚಿಸುವ ಅಧಿಕಾರವನ್ನು ಹೊಂದಿದೆ. ಸಾಮಾನ್ಯ ಸಭೆಯು ವರ್ಷದಲ್ಲಿ ಒಂದು ಬಾರಿ ಸೆಪ್ಟೆಂಬರ್‌ನಲ್ಲಿ ಸಭೆ ಸೇರುತ್ತದೆ. ಭದ್ರತಾ ಮಂಡಳಿಯ ಬಹುಸಂಖ್ಯಾತ ಸದಸ್ಯರ ವಿನಂತಿ ಮೇರೆಗೆ ವಿಶೇಷ ಅಧಿವೇಶನ



downloaded from: www.kpscvaani.com

ಕರೆಯಬಹುದಾಗಿದೆ. ಇದರ ನಿರ್ಣಯಗಳಿಗೆ 2/3 ಬಹುಮತ ಬೇಕಾಗುತ್ತದೆ. ಇದು ಪ್ರಧಾನ ಕಾರ್ಯದರ್ಶಿ, ಭದ್ರತಾ ಮಂಡಳಿಯ ತಾತ್ಕಾಲಿಕ ಸದಸ್ಯರು, ಸಾಮಾಜಿಕ & ಆರ್ಥಿಕ ಸಮಿತಿಯ ಸದಸ್ಯರನ್ನು & ಅಂತರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರನ್ನು ಆಯ್ಕೆಮಾಡುತ್ತದೆ & ಆಯವ್ಯಯದ ಪ್ರಶ್ನೆಗಳನ್ನು ಚರ್ಚಿಸುತ್ತದೆ. ಇದು ತನ್ನದೇ ಆದ ಅಧ್ಯಕ್ಷ & ಉಪಾಧ್ಯಕ್ಷನನ್ನು ಪ್ರತಿ ವರ್ಷ ಆಯ್ಕೆ ಮಾಡುತ್ತದೆ. ಹೊಸ ಸದಸ್ಯ ರಾಷ್ಟ್ರದ ಪ್ರವೇಶಕ್ಕೆ ಸಾಮಾನ್ಯ ಸಭೆಯ 2/3 ಬಹುಮತ ಬೇಕಾಗುತ್ತದೆ.

## ಭದ್ರತಾ ಮಂಡಳಿ :

ಭದ್ರತಾಮಂಡಳಿಯು ಕಾರ್ಯನಿರ್ವಾಹಕ ಮಂಡಳಿಯಾಗಿದೆ. ಇದರಲ್ಲಿ 15 ಸದಸ್ಯ ರಾಷ್ಟ್ರಗಳಿರುತ್ತದೆ. ಖಾಯಂ ಸದಸ್ಯರು & 10 ತಾತ್ಕಾಲಿಕ ಸದಸ್ಯರು. ಖಾಯಂ ಸದಸ್ಯ ರಾಷ್ಟ್ರಗಳೆಂದರೆ ಅಮೇರಿಕಾ, ಇಂಗ್ಲೆಂಡ್, ಫ್ರಾನ್ಸ್, ರಷ್ಯಾ & ಚೀನಾ. 10 ತಾತ್ಕಾಲಿಕ ಸದಸ್ಯ ರಾಷ್ಟ್ರಗಳನ್ನು 2 ವರ್ಷದ ಅವಧಿಗೆ ಆಯ್ಕೆ ಮಾಡಲಾಗುತ್ತದೆ. ಯಾವುದೇ ನಿರ್ಣಯ ತೆಗೆದುಕೊಳ್ಳಲು ಎಲ್ಲಾ ಖಾಯಂ ಸದಸ್ಯ ರಾಷ್ಟ್ರಗಳನ್ನೊಳಗೊಂಡಂತೆ 9 ಮತಗಳು ಬೇಕಾಗುತ್ತದೆ. ಭದ್ರತಾ ಮಂಡಳಿಯ ಯಾವುದೇ ನಿರ್ಧಾರದ ವಿರುದ್ಧ ಯಾವುದಾದರೂ ಖಾಯಂ ಸದಸ್ಯ ರಾಷ್ಟ್ರ ವಿಟೋ ಅಧಿಕಾರವನ್ನು ಚಲಾಯಿಸಬಹುದು. 'ವಿಟೋ' 5 ಖಾಯಂ ಸದಸ್ಯ ರಾಷ್ಟ್ರಗಳು ಹೊಂದಿರುವ ವಿಶೇಷ ಅಧಿಕಾರ. ಇದರಂತೆ ವಿಶ್ವಸಂಸ್ಥೆಯ ಯಾವುದೇ ನಿರ್ಣಯವನ್ನು ನಿರಾಕರಿಸುವ ಅಧಿಕಾರ ಖಾಯಂ ಸದಸ್ಯ ರಾಷ್ಟ್ರಗಳು ಪಡೆದುಕೊಂಡಿವೆ. ಅತಿಕ್ರಮಣವನ್ನು ತಡೆದು ಅಂತರಾಷ್ಟ್ರೀಯ ಮಟ್ಟದಲ್ಲಿ ಶಾಂತಿ & ಭದ್ರತೆಯನ್ನು ಒದಗಿಸುವ ಜವಾಬ್ದಾರಿಯನ್ನು ಭದ್ರತಾ ಮಂಡಳಿ ಹೊಂದಿದೆ.



## ಆರ್ಥಿಕ & ಸಾಮಾಜಿಕ ಮಂಡಳಿ :

ಆರ್ಥಿಕ & ಸಾಮಾಜಿಕ ಮಂಡಳಿಯ ಸದಸ್ಯ ಸಂಖ್ಯೆ 54. ಇವರು ಸಾಮಾನ್ಯ ಸಭೆಯಿಂದ ಚುನಾಯಿತರಾಗಿರುತ್ತಾರೆ. ಇವರ ಅಧಿಕಾರವಧಿ 3 ವರ್ಷ. ಮೂರು ವರ್ಷಕ್ಕೊಮ್ಮೆ 1/3ರಷ್ಟು ಸದಸ್ಯರು ನಿವೃತ್ತರಾಗುತ್ತಾರೆ. ಮಂಡಳಿ ವರ್ಷದಲ್ಲಿ ಕನಿಷ್ಠ ಎರಡು ಬಾರಿ ಸಭೆ ಸೇರುತ್ತದೆ. ಜಗತ್ತಿನ ಕ್ಷೇಮಾಭಿವೃದ್ಧಿ ಇದರ ಪ್ರಮುಖ ಕಾರ್ಯವಾಗಿದೆ. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ,





downloaded from: www.kpscvaani.com

ಆರೋಗ್ಯ ಮತ್ತಿತ್ತರ ಕ್ಷೇತ್ರಗಳ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದಾಗಿದೆ.

## ಧರ್ಮದರ್ಶಿ ಮಂಡಳಿ :

ಧರ್ಮದರ್ಶಿ ಮಂಡಳಿಯು 14 ಸದಸ್ಯರನ್ನೊಳಗೊಂಡಿರುತ್ತದೆ. ಭದ್ರತಾ ಮಂಡಳಿಯ ಎಲ್ಲಾ ಖಾಯಂ ಸದಸ್ಯರು ಧರ್ಮದರ್ಶಿ ಮಂಡಳಿಯ ಸದಸ್ಯರಿರುತ್ತಾರೆ. ಉಸ್ತುವಾರಿ ಪ್ರಾಂತ್ಯಗಳ ಸ್ಥಿತಿಗತಿಗಳನ್ನು ಪರಿಶೀಲಿಸುವುದು & ಸಾಮಾನ್ಯ ಸಭೆಗೆ ಸಲಹೆ ನೀಡುವುದು ಇದರ ಕರ್ತವ್ಯವಾಗಿದೆ. ವಾಸ್ತವವಾಗಿ ಜಪಾನ್ & ಇಟಲಿಯಿಂದ ಬೇರ್ಪಟ್ಟ ಎಲ್ಲ 11 ಉಸ್ತುವಾರಿ ಪ್ರಾಂತ್ಯಗಳು 1994ರಲ್ಲಿ ಸ್ವತಂತ್ರ ವಾದವು. ಇದರ ಫಲವಾಗಿ 1994ರಲ್ಲಿ ಭದ್ರತಾ ಮಂಡಳಿಯು ಇದರ ಎಲ್ಲಾ ಕಾರ್ಯಚರಣೆಗಳನ್ನು ಅಮಾನತ್ತುಗೊಳಿಸಿ ಅವಶ್ಯಕತೆಗನುಗುಣವಾಗಿ ಸಭೆ ಸೇರಲು ನಿರ್ಧರಿಸಿತು.

## ಅಂತರಾಷ್ಟ್ರೀಯ ನ್ಯಾಯಾಲಯ :

ಅಂತರಾಷ್ಟ್ರೀಯ ನ್ಯಾಯಾಲಯವು ನೆದರ್‌ಲ್ಯಾಂಡಿನ ಹೇಗ್ ನಗರದಲ್ಲಿದೆ. ಸಾಮಾನ್ಯ ಸಭೆಯಿಂದ ಆಯ್ಕೆಯಾದ 15 ಜನ ನ್ಯಾಯಾಧೀಶರನ್ನು ಒಳಗೊಂಡಿರುತ್ತದೆ. ಅಂತರಾಷ್ಟ್ರೀಯ ವಿವಾದಗಳನ್ನು ಬಗೆಹರಿಸುವುದು ಇದರ ಮುಖ್ಯ ಕರ್ತವ್ಯವಾಗಿದೆ. ಇದು ಸಲಹಾ ಸಮಿತಿಯಾಗಿಯೂ ಕಾರ್ಯ ನಿರ್ವಹಿಸುತ್ತದೆ. ಅಂತರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ಸೇವಾವಧಿ 9 ವರ್ಷಗಳು. ಮರುನೇಮಕಾತಿಗೂ ಅವಕಾಶವಿದೆ. ಆದರೆ ಯಾವುದೇ ದೇಶವು ಏಕಕಾಲಕ್ಕೆ ಒಬ್ಬರಿಗಿಂತ ಹೆಚ್ಚು ನ್ಯಾಯಾಧೀಶರನ್ನು ಪ್ರತಿನಿಧಿಸುವಂತಿಲ್ಲ.

## ಸಚಿವಾಲಯ :

ಸಚಿವಾಲಯದ ಕೇಂದ್ರ ಕಛೇರಿ ನ್ಯೂಯಾರ್ಕ್‌ನಲ್ಲಿದೆ. ಪ್ರಧಾನ ಕಾರ್ಯದರ್ಶಿ ಸಚಿವಾಲಯದ ಮುಖ್ಯಸ್ಥನಾಗಿರುತ್ತಾನೆ. ಅವನ ಕಾರ್ಯಾವಧಿ 5 ವರ್ಷಗಳು. ವಿಶ್ವಸಂಸ್ಥೆಯ ಕಾರ್ಯ ಚಟುವಟಿಕೆಗಳು ಸರಿಯಾಗಿ ನಡೆಯುವಂತೆ ನೋಡಿಕೊಳ್ಳುವುದು, ಸಾಮಾನ್ಯ ಸಭೆಗೆ ವಾರ್ಷಿಕ ವರದಿ ಒಪ್ಪಿಸುವುದು ಪ್ರಧಾನ ಕಾರ್ಯದರ್ಶಿಯ ಕರ್ತವ್ಯವಾಗಿದೆ. ಸಾಮಾನ್ಯ ಸಭೆಯ, ಭದ್ರತಾ ಸಮಿತಿಯ & ಆರ್ಥಿಕ & ಸಾಮಾಜಿಕ ಸಮಿತಿಯ ಎಲ್ಲಾ ಸಭೆಗಳಲ್ಲಿಯೂ ಈತನು ಕಾರ್ಯದರ್ಶಿಯಂತೆ ಕೆಲಸ ನಿರ್ವಹಿಸುತ್ತಾನೆ. ನಾರ್ವೆಯ ಟಿಗ್ವಿಲೀಯ ಪ್ರಥಮ ಪ್ರಧಾನ ಕಾರ್ಯದರ್ಶಿಯಾಗಿ 1946ರಲ್ಲಿ ನೇಮಕವಾಗಿದ್ದನು.



downloaded from: www.kpscvaani.com

| ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳ ಪಟ್ಟಿ | | | |
|---|---|---|---|
| **ಕ್ರ.ಸಂ** | **ಹೆಸರು** | **ದೇಶ** | **ಅವಧಿ** |
| 1 | ಟ್ರಗ್ವಿಲ್ಲೈ | ನಾರ್ವೆ | 1946–1953 |
| 2 | ಡಾಗ್ ಹ್ಯಾಮರ್‌ಜೋಲ್ಡ್ | ಸ್ವೀಡನ್ | 1953–1961 |
| 3 | ಯು ಥಾಂಟ್ | ಮ್ಯೆಯನ್ಮಾರ್ (ಬರ್ಮಾ) | 1961–1971 |
| 4 | ಕುರ್ಟ್‌ವಾಲ್ಡ್ ಹೀಂ | ಆಸ್ಟ್ರೀಯಾ | 1972–1981 |
| 5 | ಜೇವಿಯರ್ ಪೆರೆಜ್ ಡಿ. ಕ್ಯೂಲರ್ | ಪೆರು | 1982–1991 |
| 6 | ಬುತ್ರೋಸ್ ಘಾಲಿ | ಈಜಿಪ್ಟ್ | 1992–1997 |
| 7 | ಕೋಫಿ ಅನ್ನಾನ್ | ಘಾನ | 1997–2006 |
| 8 | ಬಾನ್–ಕಿ–ಮೂನ್ | ದಕ್ಷಿಣ ಕೊರಿಯಾ | 2007– |

ಇವುಗಳಲ್ಲದೇ ನಿರ್ದಿಷ್ಟವಾದ ಅಂತರಾಷ್ಟ್ರೀಯ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಅನೇಕ ವಿಷಯ ಅಂಗಸಂಸ್ಥೆಗಳಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ :

| ಕ್ರ.ಸಂ | ಅಂಗಸಂಸ್ಥೆಗಳು | | ಕೇಂದ್ರ ಕಛೇರಿ |
|---|---|---|---|
| 1 | ILO | ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆ | ಸ್ವಿಡ್ಜರ್‌ಲ್ಯಾಂಡಿನ ಜಿನೀವಾ |
| 2 | FAO | ಆಹಾರ & ಕೃಷಿ ಸಂಸ್ಥೆ | ಇಟಲಿಯ ರೋಮ್ |
| 3 | UNESCO | ವಿಶ್ವ ಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ & ಸಾಂಸ್ಕೃತಿಕ ಸಂಸ್ಥೆ | ಫ್ರಾನ್ಸ್‌ನ ಪ್ಯಾರಿಸ್ |
| 4 | IBRD | ಅಂತರಾಷ್ಟ್ರೀಯ ಪುನರ್‌ನಿರ್ಮಾಣ & ಅಭಿವೃದ್ಧಿ ಬ್ಯಾಂಕ್ | ಅಮೆರಿಕಾದ ವಾಷಿಂಗ್‌ಟನ್ ಡಿಸಿ |
| 5 | IMF | ಅಂತಾರಾಷ್ಟ್ರೀಯ ಹಣಕಾಸು ನಿಧಿ | ಅಮೆರಿಕಾದ ವಾಷಿಂಗ್‌ಟನ್ ಡಿಸಿ |
| 6 | WHO | ವಿಶ್ವ ಆರೋಗ್ಯ ಸಂಸ್ಥೆ | ಸ್ವಿಡ್ಜರ್‌ಲ್ಯಾಂಡಿನ ಜಿನೀವಾ |
| 7 | WTO | ವಿಶ್ವ ವಾಣಿಜ್ಯ ಸಂಸ್ಥೆ | ಸ್ವಿಡ್ಜರ್‌ಲ್ಯಾಂಡಿನ ಜಿನೀವಾ |
| 8 | IAEA | ಅಂತರಾಷ್ಟ್ರೀಯ ಅಣುಶಕ್ತಿ ಸಂಸ್ಥೆ | ಆಸ್ಟ್ರೀಯಾದ ವಿಯೆನ್ನಾ |
| 9 | UNICEF | ಅಂತರಾಷ್ಟ್ರೀಯ ಮಕ್ಕಳ ತುರ್ತು ನಿಧಿ | ಅಮೇರಿಕಾದ ನ್ಯೂಯಾರ್ಕ್ |
| 10 | WMO | ವಿಶ್ವ ಹವಾಮಾನ ಸಂಸ್ಥೆ | ಸ್ವಿಡ್ಜರ್‌ಲ್ಯಾಂಡಿನ ಜಿನೀವಾ |
| 11 | ICAO | ಇಂಟರ್‌ನ್ಯಾಷನಲ್ ಸಿವಿಲ್ ಏವಿಯೇಷನ್ ಆರ್ಗನೈಝೇಷನ್ | ಕೆನಡಾದ ಮಾಂಟ್ರಿಯಲ್ |



downloaded from: www.kpscvaani.com

## ವಿಶ್ವಸಂಸ್ಥೆಯ ಸಾಧನೆಗಳು :

ವಿಶ್ವಸಂಸ್ಥೆ ಅನೇಕ ಯಶಸ್ವಿ ಕಾರ್ಯಕ್ರಮಗಳು & ಕಾರ್ಯಾಚರಣೆಗಳನ್ನು ಸಾಧಿಸಿವೆ. ವಿಶ್ವಸಂಸ್ಥೆಯ ಸಾಧನೆಗಳನ್ನು ರಾಜಕೀಯ ಹಾಗೂ ರಾಜಕೀಯೇತರ ಎಂಬ ಎರಡು ವಿಭಾಗಗಳನ್ನಾಗಿ ಮಾಡಬಹುದು.

### ✓ ರಾಜಕೀಯ ಸಾಧನೆಗಳು :

ವಿಶ್ವಸಂಸ್ಥೆಯು ರಾಜಕೀಯ ಕ್ಷೇತ್ರದಲ್ಲಿ ಗಣನೀಯವಾದ ಸಾಧನೆಯನ್ನು ಮಾಡಿದೆ. 1945ರಿಂದ ಯಾವುದೇ ಜಾಗತಿಕ ಯುದ್ಧವೂ ನಡೆದಿಲ್ಲದಿರುವುದು & ಅಣುಬಾಂಬಿನಂತಹ ಮಾರಾಕಾಸ್ತ್ರಗಳನ್ನು ಉಪಯೋಗಿಸಿಲ್ಲ ಎಂಬುದೇ ಅದರ ಅತ್ಯಂತ ಪ್ರಮುಖ ಸಾಧನೆಯಾಗಿದೆ.

1. ಇರಾನಿನ ಸಮಸ್ಯೆಯನ್ನು ಬಗೆಹರಿಸಿದ್ದು ವಿಶ್ವಸಂಸ್ಥೆಯ ಮೊದಲನೇಯ ಸಾಧನೆಯಾಗಿದೆ. ಎರಡನೇ ಜಾಗತಿಕ ಯುದ್ಧ ಕಾಲಕ್ಕೆ ರಷ್ಯಾದ ಸೇನಾ ತುಕಡಿಗಳು ಇರಾನಿನ ಉತ್ತರದ ಗಡಿರೇಖೆಯಲ್ಲಿ ಉಳಿದಿದ್ದವು. ಯುದ್ಧ ನಂತರ ಇರಾನ್ ವಿಶ್ವಸಂಸ್ಥೆಗೆ ದೂರು ಸಲ್ಲಿಸಿತು. ಆದ್ದರಿಂದ ವಿಶ್ವಸಂಸ್ಥೆಯು ಮಧ್ಯೆ ಪ್ರವೇಶಿಸಿ ರಷ್ಯಾದ ಸೇನಾ ತುಕಡಿಗಳನ್ನು 1946ರಲ್ಲಿ ಇರಾನ್‌ನಿಂದ ಹಿಂಪಡೆಯುವಂತೆ ಮಾಡಿತು.
2. 1947ರಲ್ಲಿ ಹಾಲೆಂಡ್ & ಇಂಡೋನೇಷ್ಯಾಗಳ ಮಧ್ಯೆ ಇಂಡೋನೇಷ್ಯಾದಲ್ಲಿ ಗಲಭೆ ಆರಂಭವಾಯಿತು. ಇದನ್ನು ವಿಶ್ವಸಂಸ್ಥೆ 1948ರಲ್ಲಿ ಬಗೆಹರಿಸಿರತು.
3. 1948ರ ಸೆಪ್ಟೆಂಬರ್ ತಿಂಗಳಲ್ಲಿ ಫ್ರಾನ್ಸ್, ಇಂಗ್ಲೆಂಡ್ & ಯು.ಎಸ್.ಎ ಗಳು ಬರ್ಲಿನ್ ಪ್ರದೇಶದಲ್ಲಿ ಯು.ಎಸ್.ಎಸ್.ಆರ್.ನ ಬರ್ಲಿನ್ ದಿಗ್ಬಂಧನದ ವಿರುದ್ಧ ವಿಶ್ವಸಂಸ್ಥೆಗೆ ಮನವಿ ಸಲ್ಲಿಸಿದರು. ಮುಂದೆ ವಿಶ್ವಸಂಸ್ಥೆಯ ಪರಿಶ್ರಮದಿಂದ ಒಪ್ಪಂದ ಏರ್ಪಟ್ಟಿತ್ತು.
4. 1948ರಲ್ಲಿ ಪ್ಯಾಲೆಸ್ಟೈನ್‌ನಲ್ಲಿ ಇಸ್ರೇಲಿ ಯಹೂದಿಗಳು ಹಾಗೂ ಅರಬ್ಬರ ಮಧ್ಯದ ಹೋರಾಟವನ್ನು ತಡೆಯಿತು.
5. 1948ರಲ್ಲಿ ಕಾಶ್ಮೀರದಲ್ಲಿ ವಿಶ್ವಸಂಸ್ಥೆಯು ಯುದ್ಧ ವಿರಾಮವನ್ನು ಘೋಷಿಸಿತು.
6. ಕೊರಿಯಾ ಬಿಕ್ಕಟ್ಟಿನಲ್ಲಿ ಉತ್ತರ & ದಕ್ಷಿಣ ಕೊರಿಯಾಗಳ ಮಧ್ಯೆ ಯುದ್ಧ ಪ್ರಾರಂಭವಾದಾಗ ವಿಶ್ವಸಂಸ್ಥೆಯು ವಿವಾದವನ್ನು ಬಗೆಹರಿಸಲು ಬಲಪ್ರಯೋಗ ಮಾಡಿತು.
7. ಸೂಯೆಜ್ ಕಾಲುವೆಯ ಹಾಗೂ ವಿಯೆಟ್ನಾಂ ಸಮಸ್ಯೆಗಳನ್ನು ವಿಶ್ವಸಂಸ್ಥೆಯ ಮಧ್ಯಸ್ಥಿಕೆಯಲ್ಲಿ ಬಗೆಹರಿಸಲಾಯಿತು.
8. 1989ರಲ್ಲಿ ಇರಾನ್ & ಇರಾಕ್ ನಡುವಿನ ಯುದ್ಧವನ್ನು ಕೊನೆಗಾಣಿಸಿತು.
9. 1990ರಲ್ಲಿ ಇರಾಕ್ ಕುವೈತ್‌ನ್ನು ಆಕ್ರಮಿಸಿಕೊಂಡಿತು. ತಕ್ಷಣವೇ ಕುವೈತ್ ಅಗತ್ಯ ಕ್ರಮಕ್ಕಾಗಿ ವಿಶ್ವಸಂಸ್ಥೆ ಮೊರೆಹೊಕ್ಕಿತು. ಇದರಿಂದ 1991ರಲ್ಲಿ ಇರಾಕ್ ಕುವೈತ್‌ನಿಂದ ಹೊರಬರುವಂತೆ ವಿಶ್ವಸಂಸ್ಥೆ ಮಾಡಿತು.



downloaded from: www.kpscvaani.com

10. ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಶಾಂತಿ ಸ್ಥಾಪಿಸುವಲ್ಲಿ ವಿಶ್ವಸಂಸ್ಥೆ ಕಾರ್ಯನಿರ್ವಹಿಸಿದೆ. ಗ್ರೀಸ್, ಲೆಬನಾನ್, ಸೈಪ್ರಸ್, ಕಾಮಗೋ, ಕಾಂಬೋಡಿಯಾ, ಕೊರಿಯಾ, ಕೊಸೊಬವೋ ಮುಂತಾದ ರಾಷ್ಟ್ರಗಳಲ್ಲಿ ಶಾಂತಿಪಾಲನಾ ಕಾರ್ಯಚಾರಣೆ ನಡೆಸಿದೆ.
11. ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿಯಿತ್ತು. ಇದನ್ನು ಅರಿತುಕೊಂಡ ವಿಶ್ವಸಂಸ್ಥೆಯು ಇದರ ವಿರುದ್ಧ ಒಂದು ವಿಶೇಷ ಸಮಿತಿ ನೇಮಕ ಮಾಡಿ 1954ರಲ್ಲಿ ನಿಷೇಧವನ್ನು ಹೇರಿತು.

## ✓ ರಾಜಕೀಯೇತರ ಸಾಧನೆಗಳು :

1. 1948ಎ ಡಿಸೆಂಬರ್ 10ರಂದು ಮಾನವ ಹಕ್ಕುಗಳ ಘೋಷಣೆಯನ್ನು ಹೊರಡಿಸಿದ್ದು ವಿಶ್ವಸಂಸ್ಥೆಯ ಮಹತ್ತರ ಸಾಧನೆಯಾಗಿದೆ. ಈ ಘೋಷಣೆಯು
    1) ಜೀವಿಸುವ ಹಕ್ಕು
    2) ವ್ಯಕ್ತಿ ಸ್ವಾತಂತ್ರ & ಭದ್ರತೆ ಹಕ್ಕು
    3) ಗುಲಾಮಗಿರಿಯಿಂದ ಮುಕ್ತಿ
    4) ಆಲೋಚನಾ ಸ್ವಾತಂತ್ರ್ಯ
    5) ಮತದಾನದ ಹಕ್ಕು
    6) ದುಡಿಯುವ ಹಕ್ಕು ಇತ್ಯಾದಿಗಳನ್ನು ಒಳಗೊಂಡಿದೆ.
2. ವಿಶ್ವಸಂಸ್ಥೆಯು ತನ್ನ ವಿಶೇಷ ಸಂಸ್ಥೆಗಳ ಮೂಲಕ ಮಹತ್ತರ ಕೆಲಸಗಳನ್ನು ಮಾಡಿದೆ. ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಮುಖಾಂತರ ವಿಶ್ವಕಾರ್ಮಿಕರ ಸ್ಥಿತಿಯನ್ನು ಸುಧಾರಿಸಿವೆ.
3. ಆಹಾರ ಉತ್ಪಾದನೆಯನ್ನು ಹೆಚ್ಚಿಸಲು, ಅರಣ್ಯ, ಮೀನುಗಾರಿಕೆ & ಪೌಷ್ಠಿಕಾಂಶಗಳ ಹೆಚ್ಚಿಸುವಿಕೆಗೆ ವಿವಿಧ ದೇಶಗಳಿಗೆ ಸಹಾಯ ಮಾಡಿದೆ. ಅಲ್ಲದೇ ಮಿಲಿಯನ್‌ಗಟ್ಟಲೇ ಹಸಿದ ಮಕ್ಕಳಿಗೆ ಆಹಾರವನ್ನು ಒದಗಿಸಲು ಸಹಾಯ ಮಾಡಿದೆ.
4. ಅಂತರಾಷ್ಟ್ರೀಯ ಹಣಕಾಸು ನಿಧಿ ಅಂತರಾಷ್ಟ್ರೀಯ ಪುನರ್ ನಿರ್ಮಾಣ & ಅಭಿವೃದ್ಧಿ ಬ್ಯಾಂಕ್ ವಿವಿಧ ಹಿಂದುಳಿದ ರಾಷ್ಟ್ರಗಳಿಗೆ ಆರ್ಥಿಕ ಸಹಾಯ ನೀಡುತ್ತಿವೆ.
5. ಹಿಂದುಳಿದ ದೇಶಗಳಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ತಾಂತ್ರಿಕ ಮತ್ತಿತರ ಕ್ಷೇತ್ರಗಳಲ್ಲಿ ಅನೇಕ ಕೆಲಸಗಳಲ್ಲಿ ಮಾಡಿದೆ. ವಿಶ್ವಸಂಸ್ಥೆಯು ಯುದ್ಧ, ಭೂಕಂಪ, ಸುನಾಮಿ ನಿರಾಶ್ರಿತರಿಗೆ ಸಹಾಯ ಮಾಡಿದೆ. ಪ್ರಪಂಚದಾದ್ಯಂತ ಯುದ್ಧಗಳಲ್ಲಿ ತೊಂದರೆಗೊಳಗಾದವರಿಗೆ ಆಹಾರ, ವಸತಿ & ಪುನರ್ ನಿರ್ಮಾಣಕ್ಕೆ ವ್ಯವಸ್ಥೆ ಮಾಡಿದೆ. ವಿಶ್ವದ ಅನೇಕ ಪಾರಂಪರಿಕ ಕೇಂದ್ರಗಳ ಸಂರಕ್ಷಣೆ ಮಾಡಿದೆ.
   ಉದಾ : ಹಂಪಿ, ಪಟ್ಟದಕಲ್ಲು, ಕೊನಾರ್ಕ್ ಇತ್ಯಾದಿ.



downloaded from: www.kpscvaani.com

6. ಮಕ್ಕಳ ಹಸಿವು & ಅಪೌಷ್ಠಿಕತೆಯ ನಿವಾರಣೆಗೆ ಶ್ರಮಿಸುತ್ತಿದೆ. 1959ರಲ್ಲಿ ಸಾಮಾನ್ಯ ಸಭೆಯು ಶಿಶುವಿನ ಹಕ್ಕು ಘೋಷಣೆಯನ್ನು ಮಾಡಿತು. ಇದು ಎಲ್ಲಾ ಸಂದರ್ಭಗಳಲ್ಲೂ ರಕ್ಷಣೆ, ಸಾಮಾಜಿಕ, ಭದ್ರತೆ, ಆರೋಗ್ಯ, ಶಿಕ್ಷಣ ಮುಂತಾದವುಗಳ ಬೆಳವಣಿಗೆಗೆ ನಿಗಾವಹಿಸಿ ಪರಿಹಾರ ದೊರಕಿಸಿಕೊಡುತ್ತದೆ.
7. ಜನರ ಆರೋಗ್ಯ ಸ್ಥಿತಿಯನ್ನು ಸುಧಾರಿಸಲು ಪ್ರಯತ್ನಿಸಿದೆ. ಮಲೇರಿಯಾ, ಕಾಲರಾ, ಸಿಡುಬು, ಕ್ಷಯರೋಗ, ಕುಷ್ಠರೋಗ, ಪೋಲಿಯೋ ಮುಂತಾದ ರೋಗ–ರುಜಿನಗಳನ್ನು ತಡೆಗಟ್ಟಲು ನಿರಂತರ ಹೋರಾಟ ನಡೆಸುತ್ತಿವೆ. ಕೆಲವು ರೋಗಗಳನ್ನು ಸಂಪೂರ್ಣವಾಗಿ ತೊಲಗಿಸಿವೆ. ಅದು ಮಕ್ಕಳು & ದುರ್ಬಲ ಸಾಮಾಜಿಕ ವರ್ಗಗಳ ವಿಶೇಷ ಅಗತ್ಯಗಳನ್ನು ಪೂರೈಸಲು ಸಹಾಯ ಮಾಡಿದೆ.

## ವಿಶ್ವಸಂಸ್ಥೆ ಆಚರಿಸುವ ಪ್ರಮುಖ ದಿನಗಳು :

27 ಜನವರಿ – ವಿನಾಶಕ್ಕೆ ಬಲಿಯಾದವರ ನೆನಪಿನ ಅಂತರಾಷ್ಟ್ರೀಯ ದಿನಾಚರಣೆ
4 ಫೆಬ್ರವರಿ – ವಿಶ್ವ ಕ್ಯಾನ್ಸರ್ ದಿನಾಚರಣೆ
20 ಫೆಬ್ರವರಿ – ವಿಶ್ವ ಸಾಮಾಜಿಕ ನ್ಯಾಯ ದಿನಾಚರಣೆ
8 ಮಾರ್ಚ್ – ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ
22 ಮಾರ್ಚ್ – ವಿಶ್ವ ಜಲ ದಿನಾಚರಣೆ
7 ಏಪ್ರಿಲ್ – ವಿಶ್ವ ಆರೋಗ್ಯ ದಿನಾಚರಣೆ
25 ಏಪ್ರಿಲ್ – ವಿಶ್ವ ಮಲೇರಿಯಾ ದಿನಾಚರಣೆ
1 ಮೇ – ವಿಶ್ವ ಕಾರ್ಮಿಕರ ದಿನಾಚರಣೆ
3 ಮೇ – ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನಾಚರಣೆ
15 ಮೇ – ಅಂತರಾಷ್ಟ್ರೀಯಾ ಕುಟುಂಬ ದಿನಾಚರಣೆ
31 ಮೇ – ವಿಶ್ವ ತಂಬಾಕು ರಹಿತ ದಿನಾಚರಣೆ
1 ಜೂನ್ – ವಿಶ್ವ ತಂದೆ ತಾಯಿಗಳ ದಿನಾಚರಣೆ
5 ಜೂನ್ – ವಿಶ್ವ ಪರಿಸರ ದಿನಾಚರಣೆ
14 ಜೂನ್ – ವಿಶ್ವ ರಕ್ತ ದಾನಿಗಳ ದಿನಾಚರಣೆ
11 ಜುಲೈ – ವಿಶ್ವ ಜನಸಂಖ್ಯಾ ದಿನಾಚರಣೆ
19 ಆಗಸ್ಟ್ – ವಿಶ್ವ ಮಾನವತಾ ದಿನಾಚರಣೆ
15 ಸೆಪ್ಟೆಂಬರ್ – ವಿಶ್ವ ಪ್ರಜಾ ಪ್ರಭುತ್ವ ದಿನಾಚರಣೆ
21 ಸೆಪ್ಟೆಂಬರ್ – ಅಂತರಾಷ್ಟ್ರೀಯ ಶಾಂತಿ ದಿನಾಚರಣೆ



downloaded from: www.kpscvaani.com

27 ಸೆಪ್ಟೆಂಬರ್ – ವಿಶ್ವ ಪ್ರವಾಸ ದಿನಾಚರಣೆ
2 ಅಕ್ಟೋಬರ್ – ಅಂತರಾಷ್ಟ್ರೀಯ ಅಹಿಂಸಾ ದಿನಾಚರಣೆ
9 ಅಕ್ಟೋಬರ್ – ವಿಶ್ವ ಅಂಚೆ ದಿನಾಚರಣೆ
24 ಅಕ್ಟೋಬರ್ – ವಿಶ್ವ ಸಂಸ್ಥೆ ದಿನಾಚರಣೆ
14 ನವೆಂಬರ್ – ವಿಶ್ವ ಮಧುಮೇಹ ದಿನಾಚರಣೆ
1 ಡಿಸೆಂಬರ್ – ವಿಶ್ವ ಏಡ್ಸ್ ದಿನಾಚರಣೆ
10 ಅಕ್ಟೋಬರ್ – ವಿಶ್ವ ಮಾನವ ಹಕ್ಕುಗಳ ದಿನಾಚರಣೆ

GNANADHARE IAS ACADEMY



downloaded from: www.kpscvaani.com